# ಅಶ್ವಿನಿ ಬೆಸುಗೆ



894.814 3
ASH N 96
ಗ್ರಂಥ ಸ್ವಾಮ್ಯ ವಿಭಾಗ

# ಬೆಸುಗೆ

DEPARTMENT OF PUBLIC LIBRARIES

ಅಶ್ವಿನಿ

ಸುರಭಿ ಪ್ರಕಾಶನ
53, ಮೊದಲ ಮಹಡಿ
ನವೀನ್ ನಿಲಯ, 25ನೇ ಅಡ್ಡರಸ್ತೆ,
6ನೇ ಬ್ಲಾಕ್, ಜಯನಗರ, ಬೆಂಗಳೂರು - 560 082

META ENTERED

BESUGE – A Novel by Ashwini & Published by Surabhi Prakashana, 53, 1st Floor, Naveen Nilaya, 25th Cross,6th Block, Jayanagar, Bangalore - 560 082.

ಹಕ್ಕುಗಳು : ಅಶ್ವಿನಿ

ಮುದ್ರಣ : 1996

ಪುಟಗಳು : 216

ಬೆಲೆ : ರೂ.52-00

ಅಕ್ಷರ ಜೋಡಣೆ
ಇಂಪ್ರೆಸಿವ್ ಗ್ರಾಫಿಕ್ಸ್ ಅಂಡ್ ಡಿಸೈನ್ಸ್
ಬೆಂಗಳೂರು - 560 085. Ph. 6602129

ಮುದ್ರಣ
ಲೇಸರ್ ವ್ಯೂ
ಬೆಂಗಳೂರು - 560 085. Ph. 6602129

DEPARTMENT OF PUBLIC LIBRARIES
COPYRIGHT
STATE CENTRAL LIBRARY, BANGALORE

ಸಮರ್ಪಣೆ

ತೀರ್ಥರೂಪು

ದಿ|| ವೆಂಕಟರಾಘವಾಚಾರ್ಯರ

ಚರಣಗಳಲ್ಲಿ

# ನನ್ನ ನುಡಿ

ನನ್ನ ಈ `ಬೆಸುಗೆ' ಕಾದಂಬರಿ ಈ ವೇಳೆಗಾಗಲೇ ಅನೇಕ ಓದುಗರ ಮನ ಮುಟ್ಟಿದೆ, ಮೆಚ್ಚುಗೆ ಗಳಿಸಿದೆ ನನ್ನನ್ನು ಸಾಹಿತ್ಯ ಲೋಕದಲ್ಲಿ ಒಬ್ಬ ಒಳ್ಳೆಯ ಲೇಖಕಿಯನ್ನಾಗಿ ಸಿದ್ಧಪಡಿಸಿದ್ದು ನನ್ನ ಈ `ಬೆಸುಗೆ' ಸುಧಾ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದಂದಿನಿಂದಲೂ, ಓದುಗ ವೃಂದಕ್ಕೆ ನನ್ನನ್ನು ಬೆಸುಗೆ ಹಾಕಿದ್ದು ಈ ನನ್ನ ಕಾದಂಬರಿ `ಬೆಸುಗೆ'. ಇದು ಅದೇ ಹೆಸರಿನಲ್ಲಿ, ಚಲನಚಿತ್ರವೂ ಆಗಿ ಜನರ ಮೆಚ್ಚುಗೆ ಗಳಿಸಿದೆ

ಇತ್ತೀಚಿನ ಓದುಗರಿಗೆ, -ನನ್ನ ಹೊಸ ಕಾದಂಬರಿಗಳನ್ನು ಆಸ್ವಾದಿಸುವ ಅಭಿಮಾನಿಗಳಿಗೆ, `ಬೆಸುಗೆ'ಯ ಪ್ರತಿ ಸಿಗದೆ, ಅವರು ನನ್ನನ್ನೇ ಪ್ರತಿಗಾಗಿ ಕೇಳಿ ಬರೆಯಲು ತೊಡಗಿರುವುದರಿಂದ, ಇದೋ ಇದೀಗ ಈ ಕಾದಂಬರಿ ಮತ್ತೆ ಎಲ್ಲರಿಗೂ ಎಟುಕುವಂತೆ ನಿಮ್ಮ ಮುಂದೆ ಇಡುತ್ತಿದ್ದೇನೆ.

ಈ ಕಾದಂಬರಿ ಈ ಮಟ್ಟಿಗೆ ಎಲ್ಲರ ಗಮನ ಸೆಳೆಯುವಂತಾದದ್ದು, ಅದರ ಕಥಾವಸ್ತುವಿಗಿಂತ, ಅದರಲ್ಲಿ ಬರುವ ಪಾತ್ರಗಳು, ಸನ್ನಿವೇಶಗಳು, ಜೀವನ ಮೌಲ್ಯಗಳು, ನಿರೂಪಿಸಿರುವ ತಂತ್ರ, ಬಳಸಿರುವ ಭಾಷಾ ಸೊಬಗು ಕಾರಣ ಎನಿಸುತ್ತದೆ ನನ್ನ ಅಭಿಪ್ರಾಯದಲ್ಲಿ, ಯಾವ ರಚನೆಯಲ್ಲೇ ಆಗಲಿ ವ್ಯಕ್ತಿತ್ವಕ್ಕೆ, ಮಾನವತೆಗಾಗಿ ಎದ್ದು ನಿಲ್ಲುವ ಪಾತ್ರ ಪೋಷಣೆಯಾಗಬೇಕು. ನನ್ನ ಎಲ್ಲಾ ಕಾದಂಬರಿಗಳಲ್ಲೂ ಈ ಅಂಶ ಉಳಿಸಿಕೊಂಡಿದ್ದೇನೆ ಎಂದು ಕೊಂಡಿದ್ದೇನೆ

ಪೀಳಿಗೆಯಿಂದ ಪೀಳಿಗೆಗೆ ಜೀವನ ಮೌಲ್ಯಗಳು ಬದಲಾಗುತ್ತಿರುವ ಈ ಸಂಧಿ ಸಮಯದಲ್ಲಿ, ಧೀರ ಉದಾತ್ತ ವ್ಯಕ್ತಿಗಳು ನಮ್ಮ ತಲೆಮಾರಿನಲ್ಲಿ ಇದ್ದರು, ಎಂದು ಪ್ರತಿಪಾದಿಸುವ ಪ್ರಯಾಸ ನನ್ನದು ನಮ್ಮ ಹಳೆಯದಾದ ಸಂಪ್ರದಾಯಗಳನ್ನು ತುಚ್ಛೀಕರಿಸಿ, ಪಾಶ್ಚಾತ್ಯ ಪದ್ಧತಿಗಳಿಗೆ ಶರಣು ಹೋಗುತ್ತಾ ಯಾವುದರಲ್ಲೂ ಸಲ್ಲದಂತಾಗುತ್ತಿರುವ ಇಂದಿನ ಯುವ ಪೀಳಿಗೆಗೆ ಮಾದರಿಯಾಗಿ ನಿಲ್ಲಬಲ್ಲಂತವನು ಈ ಕಾದಂಬರಿಯ ನಾಯಕ ವೇಣುಮಾಧವ.

ಶ್ರೀಮಂತ ಮನೆತನದ ಏಕೈಕ ಪುತ್ರನಾಗಿ, ಉನ್ನತ ವಿದ್ಯಾವಂತನಾಗಿ, ವಿದೇಶಕ್ಕೆ ತೆರಳಿ ಬಂದರೂ, ಪೂರ್ಣ ಸಂಪ್ರದಾಯಸ್ಥನಾಗಿ, ತನ್ನ ಬಾಳನ್ನು ವಿಲಾಸದಲ್ಲೇ ಮುಳುಗಿಸಿ ತೇಲಿಸುವಂತಹ ಐಶ್ವರ್ಯ, ಸೌಲಭ್ಯಗಳನ್ನು ಪಡೆದಿದ್ದರೂ, ಸಂಯಮಪೂರ್ಣವಾಗಿ ನಡೆದುಕೊಳ್ಳುವವನು ಈ ವೇಣುಮಾಧವ. ಅತುಲ ಸಿರಿವಂತರಾಗಿಯೂ, ದೀನದಲಿತರಿಗಾಗಿ ಮಿಡಿಯುವ ಹೃದಯದ ಅನಂತರಾಯರು, ಅನುಕೂಲವಾತಾವರಣಕ್ಕೆ ಬಂದು ಬಿದ್ದರೂ, ತನ್ನ ಸ್ಥಾನಮಾನ ಅರಿತು ವರ್ತಿಸುವ ಬಡಹುಡುಗಿ ಸುಮ ಮುಂತಾದ ಪಾತ್ರಗಳು ಓದುಗರ ಮನವನ್ನು ತಟ್ಟುತ್ತವೆ

ಈ ಕಾದಂಬರಿ ಹೊಸ ಓದುಗರಿಗೂ ಸ್ವೀಕೃತವಾಗುತ್ತದೆಂದು ನಂಬಿದ್ದೇನೆ

ಈ ಪುಸ್ತಕದ ಮುದ್ರಣ, ಕಲೆ, ರಕ್ಷಾಪುಟ ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವ ತಂತ್ರಜ್ಞ, ಕಲಾವಿದರಿಗೂ ಪ್ರಕಾಶನದ ಹೊಣೆಹೊತ್ತ ಶ್ರೀ ಯತಿರಾಜ್ ವೀರಾಂಬುಧಿಯವರಿಗೂ ನನ್ನ ಧನ್ಯವಾದಗಳು

— ಅಶ್ವಿನಿ

ನಂ.93, ಪೋಸ್ಟಲ್ ಕಾಲೋನಿ
ಸಂಜಯನಗರ, ಬೆಂಗಳೂರು - 560 094
ದೂರವಾಣಿ 341 1634

# ಬೆಸುಗೆ

ಗಡಿಯಾರ ಹತ್ತು ಹೊಡೆಯಿತು.

ಅದು ಹೊಡೆಯುವುದನ್ನೇ ಕಾಯುತ್ತಿದ್ದಂತಿದ್ದ ಅನಂತರಾಯರು ಮಗ್ಗುಲು ಬದಲಿಸಿ ದೃಷ್ಟಿಯನ್ನು ಹೊರಳಿಸಿದರು. ಅವರು ಮಲಗಿದ್ದ ಕಡೆಗೆ ಹಾಲನ್ನು ದಾಟಿ ಊಟದ ಮನೆಯನ್ನು ಹಾಸಿಕೊಂಡು ಅಡುಗೆ ಮನೆಯ ಒಂದು ಪಾರ್ಶ್ವ ಕಾಣಿಸುತ್ತಿತ್ತು. ಅಲ್ಲಿ ಗಡಿಬಿಡಿಯಿಂದ ಓಡಾಡುತ್ತಿದ್ದ ಅವರ ಪತ್ನಿಯೂ ಆಗೊಮ್ಮೆ ಈಗೊಮ್ಮೆ ಕಾಣಿಸುತ್ತಿದ್ದರು

ಗಡಿಬಿಡಿ ಬೇಡವೆ? ಮೂರು ವರ್ಷಗಳ ಹಿಂದೆ ವಿದೇಶಕ್ಕೆ ಹೋಗಿದ್ದ ಮಗ ಇಂದು ಹಿಂದಿರುಗುತ್ತಾನೆಂದ ಮೇಲೆ ಹೆತ್ತ ತಾಯಿಗೆ ಸಂಭ್ರಮವಿರದೆ ? ಹಾಗೆ ನೋಡಿದಲ್ಲಿ ನಾಗುವಿನಲ್ಲಿ ಆ ಉದ್ವೇಗವಿಲ್ಲ. ಎಲ್ಲ ತಾಯಂದಿರಂತಲ್ಲ ನಾಗು. ತಾಳ್ಮೆಗೆಡದೆ ಸಾವಧಾನವಾಗಿ ಸಮಾಧಾನದಿಂದಿರುವ ಮನೋಭಾವ ನಾಗುವಿನದು. ಈಗಲೂ ಅಷ್ಟೆ. ವೇಣು ಬರುತ್ತಾನೆಂಬ ಹೆಚ್ಚು ಸಂಭ್ರಮವೇನೂ ಕಾಣುತ್ತಿಲ್ಲ. ಹಬ್ಬ ಹರಿದಿನಗಳಲ್ಲಿ ಎಷ್ಟರಮಟ್ಟಿಗೆ ಸಡಗರಪಟ್ಟು ಓಡಾಡುತ್ತಾಳೋ ಇಂದೂ ಅಷ್ಟೆ.

ವಿಮಾನ ಬರುವುದು ೧೦-೪೦ ಗಂಟೆಗೆ. ಹತ್ತು ಗಂಟೆ ಆಗಿಹೋಗಿದ್ದರೂ ಇನ್ನೂ ಅವಳ ಅಡುಗೆ ಮನೆ ಕೆಲಸವೇ ಮುಗಿದಿಲ್ಲ. ತಾವು ಎದ್ದು ಏನೂ ಸಹಾಯ ಮಾಡುವಂತಿಲ್ಲ. ಮಲಗಿದ್ದಲ್ಲಿಂದಲೇ "ನಾಗೂ"ಎಂದು ಕೂಗಿದರು.

ಅವರ ಕೂಗು ಅಡುಗೆಮನೆಯವರೆಗೆ ತಾಕದಿದ್ದರೂ ಅದು ಹಜಾರವನ್ನು ದಾಟ, ಹಿಂದಿನ ವರಾಂಡವನ್ನು ಹಾದು ನಾಲಕ್ಕು ಮೆಟ್ಟಿಲಿಳಿದು ಎಡಕ್ಕಿದ್ದ ಆ ಸಣ್ಣ ಕೋಣೆಯನ್ನು ಮಾತ್ರ ಖಂಡಿತ ಮುಟ್ಟಿತು. ಅಲ್ಲಿ ಗೋಡೆಗೆ ಹಾಕಿದ್ದ ಒಂದು ಕನ್ನಡಿಯ ಮುಂದೆ ನಿಂತು ತಲೆ ಬಾಚಿಕೊಳ್ಳುತ್ತಿದ್ದ ಸುಮಳ

ಕಿವಿಯನ್ನು ತಟ್ಟಿ ಎಚ್ಚರಿಸಿತು.

ಸರ್ರನೆ ಓಡಿ ಬರುತ್ತಾ "ಕರೆದ್ರಾ ಅಣ್ಣಾ?" ಎಂದಳು.

"ನಾಗೂನ್ನ" ಎಂದರು, ಮಿತಭಾಷಿ ರಾಯರು. ಬಾಚಣಿಗೆಯನ್ನು ಕೈಯಲ್ಲೇ ಹಿಡಿದು ಬಂದಿದ್ದ ಸುಮ ಅಡಿಗೆಮನೆಯ ಬಾಗಿಲಿಗೆ ಬಂದು "ಅಮ್ಮ, ಅಣ್ಣ ಕರೀತಾರೆ" ಎಂದು ಹೇಳಿ ತನ್ನ ಕೋಣೆ ಸೇರಿಬಿಟ್ಟಳು.

ರಾಯರ ಕೋಣೆಯ ಬಾಗಿಲಿಗೆ ಬಂದು ನಿಂತ ನಾಗಮ್ಮ "ಏನು ಕರೆದ್ರಿ?" ಎಂದು ಕೇಳಿದಾಗ, ರಾಯರು ನಗುತ್ತಾ "ಇನ್ನೂ ನಿನ್ನ ಕೆಲಸ ಮುಗೀಲಿಲ್ವ? ಬೇರೆ ಸೀರೆ ಗೀರೆ ಉಟ್ಕೊಂಡು ಮಗನ್ನ ಸ್ವಾಗತಿಸೋಲ್ವೇನು?" ಎಂದರು.

ಆಕೆಯೂ ಮೆಲುನಗುತ್ತಾ "ಈ ಸೀರೆಗೇನಾಗಿದೆ? ಅಥವಾ ಮಾಧು ಇಂಥಾ ಸೀರೇಲಿ ನನ್ನ ನೋಡೇ ಇಲ್ವೋ" ಎಂದು ತಮ್ಮ ಸೀರೆಯ ಕಡೆಗೆ ನೋಡಿಕೊಂಡರು. ಅಲ್ಲಲ್ಲಿ ಹಿಟ್ಟು ಎಣ್ಣೆ ಮೆತ್ತಿಕೊಂಡಿತ್ತು. ಆಕೆಗೆ ನಾಚಿಕೆಯಾಯ್ತು. ತಮ್ಮ ಪತಿ ಯಾವಾಗಲೂ ಪರಿಶುಭ್ರ. ಅವರ ಧೋತರ ಶರಟುಗಳು ಹಂಸದಷ್ಟು ಬಿಳುಪು. ಮತ್ತೊಬ್ಬರೂ ಹಾಗೆಯೇ ಇರಬೇಕೆಂದು ಬಯಸುತ್ತಿದ್ದವರು. ಅವರೆದುರಿಗೆ ತಮ್ಮ ಈಗಿನ ಅವತಾರದಿಂದ ನಾಚಿಕೊಂಡರು. "ಇನ್ನು ಸ್ವಲ್ಪ ಕೆಲಸ ಇದೆ. ಮುಗಿಸ್ಬಿಟ್ಟು ಆಮೇಲೆ......"

"ಸರಿ ಸರಿ. ಬೇಗ ಹೋಗು. ಆಗ್ಲೇ ಹತ್ತಾಯ್ತು. ಇನ್ನು ಒಂದು ಗಂಟೇಲಿ ವೇಣು ಬಂದ್ಬಿಡ್ತಾನೆ".

ರಾಯರ ಕಣ್ಣು ಗಡಿಯಾರದ ಕಡೆಗೆ ಹೋಯಿತು. ಗಡಿಯಾರ ೧೦-೧೦ ತೋರಿಸುತ್ತಿತ್ತು. ಇನ್ನು ಮೂವತ್ತೇ ನಿಮಿಷ. ಎಲ್ಲಾ ತಾವು ನೆನೆಸಿದ್ದಂತೆ ನಡೆದಿದ್ದರೆ, ವೇಣುವನ್ನು ಎದುರುಗೊಳ್ಳಲು ತಾವು ಬೊಂಬಾಯಿಗೆ ಹೋಗಬೇಕಿತ್ತು. ಆದರೆ ತಮಗೆ ನಿರಾಶೆಯಾಗುವಂತೆ ಈ ರಕ್ತದ ಒತ್ತಡದ ಕಾಯಿಲೆ ಮೂರು ತಿಂಗಳ ಹಿಂದೆ ತಮಗೆ ಬಡಿಯಬೇಕೆ? ವೇಣು ಆರು ತಿಂಗಳ ಹಿಂದೆಯೇ ಬರೆದಿದ್ದ-

ಸೆಪ್ಟೆಂಬರ್ ೧೮ರ ವೇಳೆಗೆ ತಾನು ಹಿಂತಿರುಗುವುದಾಗಿಯೂ ಬೊಂಬಾಯಿಯ ಮೂಲಕ ಬರುವುದಾಗಿಯೂ ತಿಳಿಸಿದ್ದ. ತಾವು ನಾಗುವಿನೊಂದಿಗೆ ಬೊಂಬಾಯಿಯ ತನಕ ಹೋಗಿ ಅವನೊಂದಿಗೆ ಹಿಂತಿರುಗುವ ಹಂಚಿಕೆ ನಡೆಸಿದ್ದರು. ಆದರೆ .. .......

ಮೂರು ತಿಂಗಳ ಹಿಂದೆ ರಾಯರು ತಾವೇ ಮಲಗಿಬಿಟ್ಟರು. ಹಾಸಿಗೆಯಿಂದ ಅಲ್ಲಾಡಬಾರದೆಂದು ಡಾಕ್ಟರರ ಆಣತಿಯಾಗಿತ್ತು. ಈಗೆಷ್ಟೋ ಉತ್ತಮವಾಗಿದ್ದರೂ ಧಾರಾಳವಾಗಿ ಓಡಾಡಲಾರರು, ಓಡಾಡಬಾರದು ಕೂಡ. ತಮ್ಮ ಅನಾರೋಗ್ಯದ ವಿಷಯವನ್ನು ರಾಯರು ವೇಣುವಿಗೆ ತಿಳಿಸಲಿಷ್ಟಪಡಲಿಲ್ಲ. ಹೇಗಿದ್ದರೂ ಮೂರು ತಿಂಗಳಲ್ಲಿ ಹಿಂತಿರುಗಿ ಬರುವ ಅವನ ಮನಸ್ಸಿಗೇಕೆ ಈಗ ಚಿಂತೆ ಹತ್ತಿಸಬೇಕು ಎಂದು ಸುಮ್ಮನಾಗಿದ್ದರು. ಅದಕ್ಕೆ ಸರಿಯಾಗಿ ಈಗ ಒಂದು ತಿಂಗಳ ಹಿಂದೆ ತನ್ನ ಕಾರ್ಯಕ್ರಮ

ಬದಲಾಗಿದೆಯೆಂದೂ, ಡೆಲ್ಲಿಯ ಮಾರ್ಗವಾಗಿ ಬಂದು ನೇರ ಬೆಂಗಳೂರಿಗೆ ಹಾರುವುದಾಗಿಯೂ ವೇಣು ಬರೆದಿದ್ದ ಕಾರಣ ಬೊಂಬಾಯಿಗೆ ಯಾರೂ ಹೋಗುವ ಪ್ರಮೇಯವೇ ಬರಲಿಲ್ಲ. ಗಡಿಯಾರ ೧೦-೩೦ ತೋರಿಸುತ್ತಿತ್ತು. ರಾಯರ ಚಡಪಡಿಕೆ ಹೆಚ್ಚುತ್ತಿತ್ತು. ಆ ಸಮಯದಲ್ಲಿ ಟೆಲಿಫೋನ್ ಬಾರಿಸಿತು. ತನ್ನ ಜಡೆ ಪೂರ್ತಿಯಾಗಿದ್ದ ಸುಮ ಬಂದು ರಿಸೀವರ್ ಎತ್ತಿದಳು- "ಹಲೋ"ಎಂದಳು.

"ನಾನು ಬಾಲು. ಪ್ಲೇನ್ ನಲವತ್ತು ನಿಮಿಷ ಲೇಟಂತೆ. ಮಾವಂಗೆ ಹೇಳ್ಬಿಡು" ಎಂದು ಟಪ್ಪನೆ ರಿಸೀವರನ್ನು ಕೆಳಗಿಟ್ಟ ಶಬ್ದ.

ಆ ಬಾಲುವನ್ನು ಕಂಡರೆ ಸುಮಳಿಗೆ ಅಸಹ್ಯ. ಅವನ ಅಹಂಕಾರ, ದರ್ಪ ಅವಳಿಗೆ ಇಷ್ಟವಿಲ್ಲ. ಅಮ್ಮ, ಅಣ್ಣ ಎಲ್ಲರೊಂದಿಗೆ ನವಿರಾಗಿ, ನಾಜೂಕಾಗಿ ಮಾತಾಡುವ ಈ ಬಾಲಚಂದ್ರನಿಗೆ ತಾನೆಂದರೆ ತಾತ್ಸಾರ. ಅವನು ಮಾತನಾಡದಿದ್ದರೆ ತನಗೆ ನಷ್ಟವೇನು ಎಂದುಕೊಳ್ಳುತ್ತ ಬಂದು, "ಅಣ್ಣ, ಬಾಲು ಫೋನ್ ಮಾಡಿದ್ದ. ಪ್ಲೇನ್ ನಲವತ್ತು ನಿಮಿಷ ಲೇಟಂತೆ"ಎಂದಳು.

"ಅಂದ್ರೆ ಇನ್ನೂ ಒಂದೂ ಘಂಟೆ ಕಾಯಬೇಕು"ಎಂದು ಸ್ವಗತ ಹೇಳಿಕೊಂಡರು ರಾಯರು. ಅವರ ದೃಷ್ಟಿ ಸುಮಳ ಕಡೆಗೆ ಹರಿಯಿತು. ತಲೆ ಮಾತ್ರ ಬಾಚಿದ್ದಳು. ಅವಳಿನ್ನೂ ಸಿದ್ಧವಾದಂತಿರಲಿಲ್ಲ. "ಏನಮ್ಮ ಬೇಗ ಸಿದ್ಧವಾಗಬಾರದೇ?ಅವನು ಬರೋ ವೇಳೆಗೆ ಹೀಗೇ ಇರ್ತೀಯೇನು?"ಎಂದು ಎಚ್ಚರಿಸಿದರು. ತಮ್ಮನ್ನು ಬಿಟ್ಟು ಎಲ್ಲರೂ ಬಹಳ ನಿಧಾನವಾಗಿದ್ದಂತೆ ಅನಿಸಿತು. ಪುನಃ ತಾವೇ ಮನಸ್ಸಿನೊಳಗೆ ನಕ್ಕರು. ಮಲಗಿ ನಿಮಿಷ ನಿಮಿಷವನ್ನೂ ಎಣಿಸುವ ಅವರಿಗೆ ಎಲ್ಲವೂ ಅಲಸ್ಯವಾಗಲ್ಲದೆ ಮತ್ತೆ ಹೇಗೆ ಕಾಣಲು ಸಾಧ್ಯ?

ಸುಮ ಅವರ ಮಾತಿಗೆ ಉತ್ತರ ಕೊಡಲಿಲ್ಲ. ಅವರೇ ಮುಂದುವರಿಸಿದರು.

"ಪ್ಲೇನ್ ಲೇಟೂಂತ ಅವಳಿಗೂ ಹೇಳ್ಬಿಡು. ಹಾಗೇ ಸ್ವಲ್ಪ ಬಾ ಇಲ್ಲಿ. ನನ್ನನ್ನು ಹಾಲಿನಲ್ಲಿ ಕೂರಿಸ್ಬಿಡು."

ಸುಮ ಅವರಿಗೆ ಆಶ್ರಯ ಕೊಟ್ಟು ಎಬ್ಬಿಸಿದಳು. ನಿಂತುಕೊಂಡ ಅವರು ಅಲ್ಲಿಯೇ ಸ್ಟ್ಯಾಂಡಿನ ಮೇಲಿದ್ದ ಉತ್ತರೀಯ ತೆಗೆಸಿಕೊಂಡು ಹೆಗಲ ಮೇಲೆ ಹಾಕಿಕೊಂಡು, ಬೆಳಗ್ಗೆ ತಲೆತುಂಬ ಇದ್ದ ಕೂದಲನ್ನು ಒಮ್ಮೆ ತಡವಿಕೊಂಡರು. ಹಾಗೆಯೇ ಮೆಲ್ಲಗೆ ಟೇಬಲ್ಲಿನ ಬಳಿ ನಡೆದು, ಅದರ ಮೇಲಿದ್ದ ದೊಡ್ಡ ಕನ್ನಡಿಯಲ್ಲಿ ಮುಖ ನೋಡಿಕೊಂಡು, ತಲೆ ಬಾಚಿಕೊಂಡರು. ಸುಮಳ ಕೈ ಹಿಡಿದು ನಡೆದು ಬಂದು ಹಾಲಿನ ಸೋಫಾದಲ್ಲಿ ಕುಳಿತರು. ತನ್ನ ಕೆಲಸ ಮುಗಿಯಿತೆಂದು ಸುಮ ತನ್ನ ಕೋಣೆಗೆ ನಡೆದುಬಿಟ್ಟಳು.

ರಾಯರ ಗಮನವೆಲ್ಲ ಗಡಿಯಾರದ ಕಡೆ, ಕಿವಿಯೆಲ್ಲ ಬೀದಿಯ ಕಡೆ ಕಾರಿನ ಶಬ್ದಕ್ಕಾಗಿ ಕಾದಿತ್ತು. ಆದರೆ ಮನಸ್ಸು ಮಾತ್ರ ವೇಣುಮಾಧವನನ್ನು ನೆನೆಯುತ್ತಿತ್ತು.

ವೇಣುಮಾಧವ್ ತಮ್ಮ ಅಚ್ಚುಮೆಚ್ಚಿನ ಏಕೈಕ ಪುತ್ರ. ಯಾವ ವಿಷಯದಲ್ಲೂ ಅವನು ತಮ್ಮನ್ನು ಹೋಲುವಂತಿರಲಿಲ್ಲ. ಈಗ ಹೇಗಿರಬಹುದು ಅವನು?ಅವನು ಎಲ್ಲಾ ತಮ್ಮ ತಂದೆ ವರದರಾಯರಂತೆ ಎತ್ತರದ ಕೆಂಪಗಿನ ಆಳು. ಬಹುಶಃ ಆರಡಿಗೂ ಮಿಕ್ಕು ಇರುವನೋ ಏನೋ! ಆದರೆ ತಮ್ಮ ತಂದೆ ಕಪ್ಪು. ವೇಣುವಾದರೋ ಪರಂಗಿಯಂತೆ ಕೆಂಪು ಬಣ್ಣದವನು. ಗುಣದಲ್ಲಿ ಅವನು ನಾಗುವಿನಂತೆ. ಮೆಲುದನಿಯ ಮಾತು, ನಿಧಾನಿ, ಹತ್ತು ಮಾತಿಗೆ ಒಂದು ಉತ್ತರ ಕೊಡುವವನು. ಈಗ ಈ ಮೂರು ವರ್ಷದ ಒಂಟಿ ಬದುಕಿನಲ್ಲಿ ಬದಲಾಗಿರಬಹುದೇನೋ. ಒಂದು ದಿನವೂ ಅವನು ಹೀಗೆ ತಮ್ಮನ್ನು ಬಿಟ್ಟು ಇದ್ದವನಲ್ಲ. ಇಷ್ಟು ದೊಡ್ಡವನಾಗಿದ್ದರೂ ಹಸುಮಗುವಿನಂತೆ ತಾಯ ಸೆರಗು ಹಿಡಿದು ಓಡಾಡುತ್ತಿದ್ದವನು ಈಗ ಹೇಗಿರಬಹುದು?

ಅವರ ಚಿಂತನೆ ಕಡಿಯುವಂತೆ ಮನೆಯ ಮುಂದೆ ಕಾರು ಬಂದು ನಿಂತ ಶಬ್ದವಾಯಿತು. ಗಡಬಡಿಸಿ ಎದ್ದು ನಿಂತರು. ಆದೇ ತಾನೇ ಬೇರೆ ಸೀರೆ ಉಟ್ಟು ಮುಖ ಒರೆಸಿ ದೊಡ್ಡ ಕುಂಕುಮ ಇಟ್ಟುಕೊಂಡ ನಾಗಮ್ಮನವರೂ ಸರಸರ ತಲೆ ಬಾಗಿಲಿಗೆ ಬಂದರು. ರಾಯರ ದೃಷ್ಟಿ ಗಡಿಯಾರದ ಕಡೆಗೆ ಹೋಯಿತು ಇನ್ನೂ ಹನ್ನೊಂದು ಗಂಟೆ ವೇಣು ಹೇಗೆ ಬಂದಾನು ಎಂದು ಮತ್ತೆ ಕುಳಿತರು.

ಅವರ ಊಹೆ ನಿಜವಿತ್ತು. ಬಂದವನು ಹಾಸ್ಟಲಿನ ವಾಸು. ಬಾಗಿಲಲ್ಲೇ ಇದ್ದ ನಾಗಮ್ಮನವರು ಸ್ವಲ್ಪ ನಿರಾಶರಾದರೂ 'ಏನು'ಎಂಬಂತೆ ಅವರ ಕಡೆ ನೋಡಿದರು.

"ಪ್ಲೇನು ಲೇಟೂಂತ ತಿಳೀತು. ನಾವೊಂದು ನಾಲಕ್ಕು ಜನ ಹೋಗ್ತಿದೀವಿ ಈಗ. ಮಿಕ್ಕವರೆಲ್ಲಾ ಆಗ್ಲೇ ಹೋದ್ರು. ಅಣ್ಣ ಬಂದ್ರೆ ಕರ್‍ಕೊಂಡು ಹೋಗೋಣಾಂತ ಬಂದೆ"ಎಂದ ವಾಸು ಒಳಕ್ಕೆ ಬರುತ್ತಾ.

"ನಾನೆಲ್ಲಪ್ಪ ಬರೋದು? ನೀವೆಲ್ಲಾ ಹೋಗ್ಬನ್ನಿ. ನಮ್ಮ ಬಾಲು ಹೋಗಿದ್ದಾನೆ."

"ಅಮ್ಮ ನೀವು? "

"ನಾನಾ?ಮಧೂನ್ನ ಇಲ್ಲೇ ಎದುರ್‍ಗೊಳ್ಬೇಕು ನಾನು. ನಾಲಕ್ಕು ಜನದ ಮುಂದೆ ಅಲ್ಲ" ಎಂದರಾಕೆ

ಸುಮಳನ್ನು ಕರೆಯುವ ಮನಸ್ಸಾದರೂ ವಾಸುವಿಗೆ ಧೈರ್ಯ ಬರಲಿಲ್ಲ. ಹೊರಟುಹೋದ ಸುಮಳ ಮನಸ್ಸಿಗೆ ಪಿಚ್ಚೆನಿಸಿತು. ತನ್ನನ್ನು ಒಬ್ಬರೂ ಕರೆಯಲಿಲ್ಲ. ಕಡೆಗೆ ಅಣ್ಣನಾದರೂ 'ಸುಮನ್ನ ಕರ್‍ಕೊಂಡ್ಹೋಗು' ಅನ್ನಬಾರದಿತ್ತೆ ಎಂದು ನಿಟ್ಟುಸಿರು ಬಿಡುತ್ತಾ, ತನ್ನ ಬಳಿಯಿದ್ದ ಒಂದೇ ಒಂದು ಒಳ್ಳೆಯದಾದ ನೇರಳೆ ಬಣ್ಣದ ಸೀರೆಯನ್ನು ಸುತ್ತಿಕೊಂಡಳು.

ರಾಯರ ಗಮನ ಮಗನಿಂದ ವಾಸುವಿನೆಡೆಗೆ ಹಾರಿತು. ಎಷ್ಟು ಒಳ್ಳೆಯ ಹುಡುಗ ವಾಸು. ಈ ವರ್ಷ ಕಳೆದರೆ ಅವನ ಎಂ. ಬಿ. ಬಿ. ಎಸ್. ಮುಗಿಯಿತು. ತಾನು ಡಾಕ್ಟರಾಗುವವನು ಎಂಬ ಗರ್ವ ಎಳ್ಳೆನಿತೂ ಅವನಲ್ಲಿ ಇಲ್ಲ. ತಮ್ಮ ವಿದ್ಯಾರ್ಥಿ ನಿಲಯದ ಹುಡುಗರೆಲ್ಲ ಅವನಂತೆಯೇ ತಯಾರಾಗು

ತ್ತಿದ್ದರು. ಎಲ್ಲರೂ ಸುಗುಣದ ಆಗರಗಳು ಅನಂತರಾಯರು-ನಾಗಮ್ಮನವರೇ ತಮ್ಮ ತಂದೆತಾಯಿಗಳು ಎಂಬ ವಿಶ್ವಾಸದಿಂದ ಅಮ್ಮ, ಅಣ್ಣ ಎಂದೇ ಕರೆಯುತ್ತಿದ್ದರು.

ಕೆಲಸವೆಲ್ಲಾ ಮುಗಿದಿತ್ತಾದ್ದರಿಂದ ನಾಗಮ್ಮನವರೂ ಬಂದು ರಾಯರ ಎದುರಿಗಿದ್ದ ಸೋಫಾದಲ್ಲಿ ಕುಳಿತರು. ಅವರ ಅಲಂಕಾರ ರಾಯರಿಗೆ ತೃಪ್ತಿ ತಂದು ಶಹಭಾಸ್‌ಗಿರಿ ಕೊಟ್ಟಂತೆ ಮೆಲ್ಲಗೆ ನಕ್ಕರು ನಾಗಮ್ಮನವರು ನಾಚಿ ನಿಮಗೆ ತೃಪ್ತಿಯಾದರೆ ಸರಿ ಎನ್ನುವಂತೆ ಮೆಲುನಕ್ಕರು

"ಸುಮಾ,ಬಂದು ಒಂದಿಷ್ಟು ಆರತಿ ನೀರು ಮಾಡಿಡು" ಎಂದು ಕೂಗಿ ಹೇಳಿದರು ನಾಗಮ್ಮ. ಸುಮ ಅವರ ಬೆನ್ನ ಹಿಂದುಗಡೆಯಿಂದ ದೇವರ ಕೋಣೆಗೆ ನಡೆಯುವಾಗ, "ಹಾಗೇ ದೇವರ ದೀಪಗಳಿಗೆ ಬತ್ತಿ ಹಾಕಿದ್ದೀನೋ ಇಲ್ಲವೋ ನೋಡು, ಮರೆತ್ಬಿಟ್ಟಿದ್ದೀನಿ ಹಾಕ್ದೇ ಇದ್ರೆ ಹಾಕ್ಬಿಟ್ಟು, ದೇವರ ದೀಪ ಹಚ್ಚಿಬಿಡು. ಇನ್ನೇನು ಅವನೂ ಬರೋ ಹೊತ್ತಾಯಿತಲ್ಲ' ಎಂದರು

ಯಾವ ಮಾತಿಗೂ ಉತ್ತರ ಕೊಡದೆಯೇ ನಡೆದಳು ಸುಮ. ಹೋಗುತ್ತಿದ್ದ ಅವಳನ್ನೇ ನೋಡಿದರು ರಾಯರು ಹುಡುಗಿ ಸುಗುಣವಂತೆ ಜೊತೆಗೆ ಸೌಂದರ್ಯವೂ ಸೇರಿದೆ ನೇರಳೆ ಬಣ್ಣದ ರೇಷ್ಮೆಯ ನೆರಿಗೆಗಳ ಅಡಿಯಿಂದ ಬಿಳುಪಾಗಿ ಕಂಡ ಅವಳ ಹಿಮ್ಮಡಿ, ಪಾದಗಳನ್ನು ನೋಡಿ 'ಅಬ್ಬಾ, ಏನು ಬಣ್ಣ ಈ ಮಗುವಿನದು' ಎಂದು ಕೊಂಡರು. ಸುಮ ಸುಮದಷ್ಟೇ ಕೋಮಲ ಹುಡುಗಿ

ರಾಯರಿಗಿಂದೇಕೋ ಏನೇನೋ ನೆನಪುಗಳು. ಸುಮಳ ಬಣ್ಣ ನೆನೆಸಿಕೊಳ್ಳುತ್ತಿದ್ದಂತೆ ಅವರಿಗೆ ಅಷ್ಟೇ ಸುಕೋಮಲವಾದ ಇನ್ನೊಂದು ಹುಡುಗಿಯ ಬಣ್ಣದ ನೆನಪಾಗಿ, ಅವರ ಮನ ಗತದೊಳಕ್ಕೆ ನೋಡಿತು ಅವರ ದೃಷ್ಟಿ ಅಪ್ರಯತ್ನವಾಗಿ ಗೋಡೆಯ ಮೇಲಿದ್ದ ಆ ಹುಡುಗಿಯ ಪಟದೆಡೆಗೆ ಹರಿಯಿತು.

ವಾಣಿ!

ವೇಣು ಅನೇಕ ಸಲ ಕೇಳಿದ್ದುಂಟು- 'ಯಾರದಣ್ಣ ಆ ಫೋಟೋ?"

"ವಾಣೀದು "

"ವಾಣಿ ಅಂದ್ರೆ? ನಂಗೊಬ್ಬ ಅಕ್ಕ ಇದ್ಲಾ?"

"ಊಂ? ಊಹುಂ"ಎಂದು ಎಲ್ಲೋ ನೋಡುತ್ತಿದ್ದರು ಒಂದೆರಡು ನಿಮಿಷ ಕಾದು ವೇಣು ಇನ್ನು ಉತ್ತರ ಸಿಗಲಾರದೆಂದು ಹೊರಟುಹೋಗುತ್ತಿದ್ದ.

ಅವರು ಏನು ಉತ್ತರ ಕೊಟ್ಟಾರು?ತಾವು ಕೊಂದ ಒಂದು ಶಿಶು ಅಂದಾರೆ? ತಮ್ಮ ಬಾಳಿನ ಪರಿವರ್ತನೆಗೆ ತೆತ್ತ ನರಬಲಿ ಎಂದಾರೆ?

ಸುಮಳಿಗೆ ಆರತಿಗಾಗಿ ನೀರು ಅರಿಶಿನ ಕುಂಕುಮ ಸುಣ್ಣಗಳನ್ನು ಕದಡುತ್ತಿದ್ದಾಗ ಕೈ ನಡುಗುತ್ತಿತ್ತು, ಎದೆ ಹೊಡೆದುಕೊಳ್ಳುತ್ತಿತ್ತು ಇನ್ನು ಅರ್ಧ ಗಂಟೆಯೊಳಗಾಗಿ ತಾನು ಎದುರಿಸಬೇಕಾಗಿರುವ ಸಂದರ್ಭ

ಕುರಿತು ಚಿಂತಿಸುತ್ತಿತ್ತು ಅವಳ ಮಿದುಳು. ಅಮ್ಮ ಅಣ್ಣ ತನ್ನನ್ನು ಕುರಿತು ಯೋಚಿಸಿದಂತೆ ಕಾಣಲಿಲ್ಲ. ಆದದ್ದಾಗಲಿ ಎಂದು ಧೈರ್ಯ ತಂದುಕೊಂಡರೂ ಕೈ ನಡುಕ, ಎದೆಯ ಡಂಗುರ ನಿಲ್ಲಲಿಲ್ಲ. ದೇವರ ದೀಪಗಳಲ್ಲಿ ಅಮ್ಮ ಹೇಳಿದಂತೆಯೇ ಎಣ್ಣೆ ಬತ್ತಿ ಹಾಕಿರಲಿಲ್ಲ. ಎಲ್ಲಾ ಅಣಿ ಮಾಡಿದಳು. ಎಣ್ಣೆ ಹಾಕುವಾಗ ಸಾಕಷ್ಟು ಚೆಲ್ಲಿ ಒರೆಸಿದ್ದೂ ಆಯಿತು. ದೀಪ ಹಚ್ಚಿಟ್ಟು ದೇವರ ಮುಂದೆ ತನ್ನ ಭವಿಷ್ಯ ಸುಖವಾಗಿ ನಡೆಯುವಂತೆ ಮೊರೆಯಿಟ್ಟಳು. ದೀಪದ ಬೆಳಕಿನಲ್ಲಿ ಕಂಗೊಳಿಸುತ್ತಿದ್ದ ದೇವರ ವಿಗ್ರಹವನ್ನು ನೋಡುತ್ತಾ ಅಲ್ಲಿಯೇ ಕುಳಿತುಬಿಟ್ಟಳು. ವೇಣುಮಾಧವ ಬಂದಾಗ ತಾನೇನು ಮಾಡಬೇಕು, ಎಲ್ಲಿ ನಿಲ್ಲಬೇಕು, ಎದುರಾಗಿ ಹೋಗಬಹುದೋ ಬಾರದೋ ಅಥವಾ ತಾನು ತನ್ನ ಕೋಣೆಯಲ್ಲೇ ಕುಳಿತರೆ?ಧು, ಒಬ್ಬರೂ ತಾನೇನು ಮಾಡಬೇಕೆಂದು ಹೇಳಲಿಲ್ಲ.

ಈ ಬಾಲು, ಅವನಾದ್ರೂ ತನಗೆ ಸೂಚನೆ ಕೊಡಬಾರದೆ. ಅವನು ಅಷ್ಟು ಒಳ್ಳೆ ಕೆಲಸ ಮಾಡಿ ಪುಣ್ಯ ಕಟ್ಕೋತಾನಾ? ಅವನ್ನ ಕಂಡ್ರೇನೇ ರೇಗುತ್ತೆ ಯಾಕೋ ಮೂರು ತಿಂಗಳಿಂದ ನೋಡುತ್ತಿದ್ದಾಳೆ. ಅಣ್ಣ ಮಲಗಿದಾಗ ಬಂದ, ಈ ಮಹಾನು ಭಾವ. ಪ್ರತಿಯೊಂದಕ್ಕೂ ತನ್ನ ಮೇಲೆ ರೇಗುವುದೊಂದೇ ಗೊತ್ತು ಅವನಿಗೆ. ಇರಬಹುದು ಅವನು ರಾಯರ ಅಕ್ಕನ ಮಗನೇ ಇರಬಹುದು. ಮಗನಿಲ್ಲದ ಸಮಯ ದಲ್ಲಿ ರಾಯರ ನೆರವಿಗೆ ನಿಂತಿರಲೂಬಹುದು. ಹಾಗೆಂದ ಮಾತ್ರಕ್ಕೆ ಮನೆಯಲ್ಲಿರುವ ವ್ಯಕ್ತಿಗಳಲ್ಲಿ ಗೌರವಾಭಿಮಾನಗಳು ಬೇಡವೆ?ತಾನು ಅನೇಕ ಸಲ ಅವನ ಬಗೆಗೆ ಅಮ್ಮನ ಬಳಿ ಹೇಳಿಬಿಡಬೇಕೆಂದು ಬಯಸಿದಳು. ಆದರೆ ಅವರೆದುರಿಗೆ, ತನ್ನೊಂದಿಗೆ ವಿನಯವಾಗೇ ವರ್ತಿಸುವ ಅವನ ಬಗ್ಗೆ ಚಾಡಿ ಹೇಳುವುದು ಸಾಹಸವಾಗಲಿಲ್ಲ

ಮತ್ತೊಮ್ಮೆ ಫೋನ್ ಬಾರಿಸಿತು. ಹತ್ತಿರದಲ್ಲೇ ಇದ್ದರೂ ರಾಯರು ತಮ್ಮ ಗತನೆನಪಿನೊಳಕ್ಕೆ ಇಣುಕಿ ನೋಡುತ್ತಿದ್ದವರು ಗಮನಿಸಲೇ ಇಲ್ಲ ನಾಗಮ್ಮನವರು ಸಾಧಾರಣವಾಗಿ ಫೋನಿನಲ್ಲಿ ಮಾತನಾಡು ತ್ತಿರಲಿಲ್ಲ ವಿಧಿಯಿಲ್ಲದಿದ್ದರೆ ಮಾತ್ರ ಮುಟ್ಟುತ್ತಿದ್ದವರು. ಬಾಲುವೇ ಇರಬಹುದೆಂದು ಸುಮಳಿಗೆ ಮಾತನಾಡಲು ಇಷ್ಟವಿಲ್ಲ ಅವಳು ದೇವರ ಮುಂದಿನಿಂದ ಅಲುಗಾಡಲಿಲ್ಲ. ಫೋನ್ ಹೊಡೆದು ಕೊಳ್ಳುತ್ತಲೇ ಇತ್ತು

"ಸುಮಾ, ಇನ್ನೂ ಆಗಲಿಲ್ವೇನು?ಬಂದು ಸ್ವಲ್ಪ ಫೋನ್ ನೋಡು"ಎಂದರು ನಾಗಮ್ಮ.

ಗತ್ಯಂತರವಿಲ್ಲ. ಎದ್ದು ಬಂದಳು. ರಿಸೀವರ್ ಎತ್ತಿ "ಹಲೋ, ಯಾರು?" ಎಂದಳು.

"ನಾನು"

"ನಾನು ಅಂದ್ರೆ?"

"ಗೆಸ್. ನನ್ನ ಧ್ವನಿ ಗುರುತು ಸಿಗಲಿಲ್ವಾ?ನಾನು ವಾಸು."

"ಓ ಏನು ವಿಶೇಷ?"

"ಏನು ಮಾಡ್ತಿದ್ರಿ? ಸಾರಿ ಸುಮ. ನಿಮ್ಮನ್ನ ಕರಿಬೇಕೂಂತಲೇ ನಾನು ಬಂದಿದ್ದು. ಆದರೆ ಎದುರ್ಗೇ ಅಮ್ಮನ್ನ ಅಣ್ಣನ್ನ ನೋಡ್ಬಿಟ್ಟು ಯಾಕೋ ಧೈರ್ಯ ಬರ್ಲಿಲ್ಲ ಬಕಪ್ ಏನೂ ಪರವಾಗಿಲ್ಲ, ಬೈ ದಿ ಬೈ ಪ್ಲೇನ್ ಏನೋ ಬಹಳ ಲೇಟಂತೆ."

"ಹಾದು, ಬಾಲು ಆಗಲೇ ತಿಳಿಸಿದ್ರು. ೪೦ ನಿಮಿಷ ಲೇಟಂತೆ "

"ನಲವತ್ತಲ್ಲ, ನಾನ್ನೂರು ನಿಮಿಷ ಲೇಟು."

"ಮೈ ಗಾಡ್, ನಿಜಾನಾ ?"

"ನಿಜಾಂದ್ರೆ ನಿಜ. ಸ್ವಲ್ಪ ವಿಶೇಷ ಮಾಡಿ ಹೇಳ್ದೆ ಅಷ್ಟೆ. ಹೈದ್ರಾಬಾದಲ್ಲಿ ಏನೋ ಪ್ಲೇನ್ ಹೋಲ್ಡಪ್ ಆಗಿದ್ಯಂತೆ, ಇನ್ನೂ ಮುಕ್ಕಾಲು ಗಂಟೆ ಆಗುತ್ತಂತೆ."

"ಈಗ ೧೦-೩೦ ಸರಿ. ಅಣ್ಣಂಗೆ ಹೇಳ್ತೀನಿ"

"ನಿಮ್ಮ ಫ್ರೆಂಡ್ ಊರ್ಮಿಳಾ, ದೇವದಾಸ್ ಎಲ್ಲಾ ಬಂದಿದ್ದಾರೆ, ನೀವೂ ಬಂದಿದ್ರೆ ಚೆನ್ನಾಗಿತ್ತು "

"ನಾ ಹೇಗಪ್ಪಾ ಬರೋದು?ನಿಮಗೆ ಗೊತ್ತಿದ್ಯಲ್ಲಾ ನನ್ನ ಪೊಸಿಷನ್. ಅಂದಹಾಗೆ ಊರ್ಮಿ ಯಾಕ್ಬಂದಿದ್ದಾಳೆ, ಯಾರು ಬರ್ತಾರಂತೆ?"

"ಡೋಂಟ್ ಬಿ ಸಿಲ್ಲಿ. ಈಗ ಬರ್ತಿರೋದು ಡಾ|| ವೇಣುಮಾಧವ್, ಪ್ರೊಫೆಸರ್ ಆಫ್ ಕೆಮಿಸ್ಟ್ರಿ ಕೆಮಿಸ್ಟ್ರಿ ಡಿಪಾರ್ಟ್‌ಮೆಂಟ್‌ನ ಸ್ಟಾಫೂ ಸ್ಟೂಡೆಂಟ್ಸ್ ಎಲ್ಲಾ ಬಂದಿದ್ದಾರೆ ಒಬ್ರೇ ಒಬ್ರು ಮೈನಸ್ ಅಂದ್ರೆ ಅದು ಮಿಸ್ ಸುಮ."

"ಇರ್ಲಿ ಬಿಡಿ. ಮಿಸ್ ಸುಮ ತನ್ನ ಪ್ರೊಫೆಸರನ್ನ ಒಬ್ಳೇ ಬೇರೆಯಾಗಿ ಭೇಟಿ ಮಾಡ್ತಾಳೆ "

"ಐ ಸೀ ಹೀಗಾ ವಿಷಯ?" ವಾಸು ಚೇಷ್ಟೆಯ ಅರ್ಥ ಮಾಡಿದ

"ಅಯ್ಯಯ್ಯೋ. ಮಿಸ್ಟೇಕ್ ಮಾಡ್ಕೋತಾ ಇದೀರ. ನಾನಂದಿದ್ದು .........."

"ಇರಲಿ ಇರಲಿ, ನಾನೂ ಸ್ವಲ್ಪ ಚೇಷ್ಟೆ ಮಾಡ್ದೆ ಅಷ್ಟೆ. ಇಲ್ಲಿ ಯಾರೋ ಫೋನ್ ಮಾಡಬೇಕಂತೆ ಇಟ್ಟುಬಿಡಲಾ. ಆ?" ರಿಸೀವರ್ ಕೆಳಗಿಟ್ಟ ಶಬ್ದ.

ಸಂಭಾಷಣೆಯೆಲ್ಲಾ ಸ್ವಲ್ಪ ಇಂಗ್ಲೀಷಿನಲ್ಲೇ ಹೆಚ್ಚಾದುದರಿಂದ ನಾಗಮ್ಮನವರೇನೂ ಹೆಚ್ಚು ಕುತೂಹಲ ತೋರಲಿಲ್ಲ. ಸುಮಳೇ - "ಅಮ್ಮ, ವಿಮಾನ ಬರೋಕ್ಕೆ ಇನ್ನೂ ಮುಕ್ಕಾಲು ಗಂಟೆ ಆಗುತ್ತಂತೆ. ವಾಸು ಫೋನ್ ಮಾಡಿದ್ದಾರೆ" ಎಂದಳು.

ಸದ್ಯದಲ್ಲಿ ವಾಣಿಯ ಹಿಂದೆ ಮುಂದೆ ಸುತ್ತುತ್ತಲಿದ್ದ ರಾಯರ ಮನಸ್ಸು ಪ್ಲೇನ್ ಬರುವುದು

ತಡ ಎಂಬುದನ್ನು ಮಾತ್ರ ಆಲಿಸಿ, ಸುಮಳ ಆಸರೆಯೊಂದಿಗೆ ಮಂಚಕ್ಕೆ ನಡೆದುಬಿಟ್ಟರು.

ನಾಗಮ್ಮನವರು ಮಾಡದೆ ಉಳಿದಿದ್ದ ಒಂದು ಕೆಲಸ ನೆನೆಸಿಕೊಂಡರು ಬಿಡಿಸಿದ್ದ ಹೂ ಕಟ್ಟಿರಲಿಲ್ಲ. ಒಮ್ಮೊಮ್ಮೆ ಸುಮ ಆ ಕೆಲಸಕ್ಕೆ ಕೈ ಹಾಕುತ್ತಿದ್ದರೂ ಅವಳ ಓದು, ಟೈಪಿಂಗ್, ಮನೆಗೆಲಸಗಳ ನಡುವೆ ಬಿಡುವಾಗುತ್ತಿರಲಿಲ್ಲವಾದುದರಿಂದ ಅದು ನಾಗಮ್ಮನವರದೇ ಕೆಲಸವಾಗಿತ್ತು

ಈಗ ಸುಮ ಮತ್ತು ನಾಗಮ್ಮ ಇಬ್ಬರೂ ಹೂವಿನ ತಟ್ಟೆ ಮುಂದೆ ಇಟ್ಟುಕೊಂಡು ದಾರದೊಂದಿಗೆ ಕೈ ಆಡಿಸತೊಡಗಿದರು

* * *

ಆ ದಿನಗಳನ್ನು ಹೇಗೆ ಮರೆಯಬಲ್ಲರು ರಾಯರು!

ತಮ್ಮ ವಂಶದಲ್ಲಿ ಒಬ್ಬೊಬ್ಬನೇ ಮಗ. ಹೆಣ್ಣು ಮಕ್ಕಳಿದ್ದರೂ ಗಂಡುಸಂತಾನ ಮಾತ್ರ ಒಂದೇ ತಾವೂ ಸಹ ಒಬ್ಬರೇ, ಅಕ್ಕ ಯಶೋದೆ

ಗಂಡುಮಕ್ಕಳಿಗೇ ಪ್ರಾಧಾನ್ಯ ಕೊಡುತ್ತಿದ್ದ ದಿನಗಳವು. ತಮ್ಮನ್ನು ಎಲ್ಲೂ ಇಟ್ಟಿರಲಾರದೆ ಬೆಳೆಸಿದರು ತಂದೆ-ತಾಯಿ ಎಲ್ಲದರಲ್ಲೂ ಯಶೋದೆಗಿಂತ ಸಿಂಹ ಪಾಲು ತಮ್ಮದಾಗಿತ್ತು ಪ್ರೀತಿ ವಿಶ್ವಾಸ ಸಹ ತಮಗೆ ಸಿಕ್ಕಷ್ಟು ಅವಳಿಗೆ ಸಿಗುತ್ತಿರಲಿಲ್ಲ.

ತಂದೆಯ ಲೆಕ್ಕದಲ್ಲಿ ತಾನು ಅಯೋಗ್ಯ ಇದಕ್ಕೆ ಕಾರಣ ಅಮ್ಮ ಅತಿ ಮುಚ್ಚಟೆ ಮಾಡಿ ಕೆಡಿಸಿದ್ದಾಳೆ. ವಿದ್ಯೆ ಹತ್ತಲಿಲ್ಲ ಇಂಟರ್‌ಮೀಡಿಯಟ್ಟನ್ನೂ ದಾಟಲು ಯೋಗ್ಯತೆಯಿಲ್ಲ, ಪ್ರಸಿದ್ಧ ವಕೀಲ ವರದರಾಯರ ಮಗ ವಿದ್ಯಾವಿಹೀನ. ಅಷ್ಟೈಶ್ವರ್ಯ ಸಂಪನ್ನ ವರದರಾಯರ ಪುತ್ರ ದುಂದುಗಾರ ಪೋಕರಿ-ಇದು ತಂದೆಯ ದೃಷ್ಟಿ.

ಏನೋ ಹುಡುಗು, ತಾಯಿ ತಂದೆಯರ ಅಕ್ಕರೆ ಅಬ್ಬರ. ಸ್ವಲ್ಪ ವಯಸ್ಸು ಬಂದರೆ, ಜವಾಬ್ದಾರಿ ತಲೆಯ ಮೇಲೆ ಬಿದ್ದರೆ ಅವನೇ ಸರಿಹೋಗ್ತಾನೆ ಎಂಬುದು ತಾಯಿಯ ದೃಷ್ಟಿ.

ಇವರಿಬ್ಬರ ದೃಷ್ಟಿಕೋನ ಎಂದೂ ಒಂದಾಗುತ್ತಿರಲಿಲ್ಲ ಅನಂತನ ಕುರಿತಾಗಿ ಯಾವಾಗಲೂ ಮನೆಯಲ್ಲಿ ಘರ್ಷಣೆಯೇ ಮಹಡಿಯ ಕೋಣೆಯಲ್ಲಿ ಕುಳಿತು ಅವರಿಬ್ಬರ ವಾಗ್ವಾದ ಕೇಳುತ್ತಿದ್ದ ಅನಂತನಿಗೆ ಒಳ್ಳೆಯ ಮೋಜು. ಬೇಡಬೇಡವೆಂದರೂ ತಂದೆಯ ಇಚ್ಛೆಗೆ ವಿರುದ್ಧವಾಗಿ ಬೆಳೆಸಿದ್ದ ದೊಡ್ಡ ಮೀಸೆಯೊಳಕ್ಕೆ ಕೈ ತೂರಿಸಿ ಕನ್ನಡಿಯೊಳಕ್ಕೆ ನೋಡುತ್ತಾ- "ನೋಡಿದ್ಯಾ ಅನಂತೂ, ಅಪ್ಪ ಅಮ್ಮ ನಿನ್ನಿಂದಾಗಿ ಹೇಗೆ ಕಚ್ಚಾಡ್ತಾರೆ!" ಅಂತ ಕಣ್ಣು ಹೊಡೆಯುತ್ತಿದ್ದ. ಅವರು ಚರ್ಚೆ ಮುಗಿಸಿ ಯಾವ ನಿರ್ದಿಷ್ಟ ನಿರ್ಧಾರಕ್ಕೂ ಬರದಿದ್ದರೂ ಜಗಳ ಮುಗಿದ ನಂತರ ಅಮ್ಮ ಆಪ್ಯಾಯಮಾನವಾಗಿ ತನ್ನನ್ನು ಆದರಿಸುತ್ತಿದ್ದರು. ತನ್ನಲ್ಲಿ ಅಮ್ಮನಿಗೆ ಅಸಹ್ಯವಿದ್ದುದು ಈ ಮೀಸೆ ಒಂದು ವಿಷಯದಲ್ಲೇ.

"ಅನಂತೂ, ಅವರಿಗಿಷ್ಟವಿಲ್ಲದ್ದು ಯಾಕೋ ಮಾಡ್ತಿ? ಮೀಸೆಯಿಂದಾಗಿ ಅವರಿಗೇಕೆ ಬೇಜಾರು ಮಾಡ್ತಿ? " ಅಮ್ಮ ನೊಂದು ಕೇಳುತ್ತಿದ್ದರು.

"ಅಪ್ಪಂಗೆ ಬೇಜಾರಿಲ್ಲದ್ದು ಯಾವ್ದಮ್ಮ? ನಾನು ಏನು ಮಾಡಿದ್ರೂ ಅವರಿಗೆ ಸಹಿಸೋಲ್ಲ "

"ಅದು ನಂಗೂ ಇಷ್ಟವಿಲ್ಲ. ಬೋಳಿಸ್ತೀಯೋ ಇಲ್ವೋ?" - ಬೆದರಿಸಿ ಹೇಳುತ್ತಿದ್ದರು.

"ಅದರ ಖುಷಿ ನಿಂಗೇನು ಗೊತ್ತಮ್ಮ? ಅಪ್ಪ ಮೀಸೆ ಬಿಟ್ಟಿದ್ರೆ ಗೊತ್ತಾಗ್ತಾ ಇತ್ತು"ಎಂದು ತುಟಿ ಕೊಂಕಿಸಿ, ಕಣ್ಣು ಹೊಡೆದು ತಾಯಿಯನ್ನು ಕುಚೇಷ್ಟೆ ಮಾಡುವ ದುಷ್ಟ ಮಗನಾಗಿದ್ದ ಅನಂತ.

"ಥತ್ ಹಾಳಾದವ್ನೇ ದಿನದಿನಕ್ಕೂ ಪೋಲಿ ಆಗ್ತಿದೀಯಲ್ಲೋ"ಎಂದು ನಾಚುತ್ತಾ ಒಳಗೊಳಗೇ ನಗುತ್ತಾ ಹೊರಟುಹೋಗಿದ್ದರು ತಾಯಿ ಮುಂದು ಮಾತನಾಡಲಾರದೆ.

* * *

ಅಂದು

ವರದರಾಯರು ಕೋರ್ಟಿನಿಂದ ಬರುತ್ತಿದ್ದಂತೆಯೇ ಕೂಗಿದ್ದರು- `ಎಲ್ಲಿ ಆ ನಿನ್ನ ಮಗ?` ಅವರ ಧ್ವನಿ ಅದೆಷ್ಟು ಕರ್ಕಶವಾಗಿತ್ತು! ಮಹಡಿಯಲ್ಲಿ ತನ್ನ ಕೋಣೆಯಲ್ಲಿ ಕುಳಿತಿದ್ದ ಅನಂತನಿಗೆ ಕೇಳಿಸಿತ್ತು ತುಟಿಪಿಟಕ್ಕೆನ್ನದೆ ಮುಂದಿನ ಚರ್ಚೆ ಕೇಳಲು ಅನುವಾಗಿ ಕಿವಿ ಅಗಲಿಸಿ ಕುಳಿತ

ತಾಯಿ ಮೃದುವಾಗಿ- "ಯಾಕೆ, ಏನಾಯ್ತು?"ಎಂದರು.

"ಆಗೋದೇನು ಈ ಸಲವೂ ಇಂಟರ್ ಫೇಲು ಹೇಳ್ಬಿಡು ಅವ್ನಿಗೆ. ಇನ್ನು ಓದೋದು ಸಾಕೂಂತ "

ತಂದೆ ಗುಡುಗುತ್ತಿದ್ದರೂ ತಾಯಿಯ ಧ್ವನಿಯಲ್ಲಿ ತೃಪ್ತಿಯಿತ್ತು. ಅವರೆಂದರು-"ಅಷ್ಟೇನಾ? ನಾನೇನೋ ಅಂತಿದ್ದೆ. ಹೋಗ್ಲಿ ಬಿಡಿ ಹೇಗಿದ್ರೂ ಜಮೀನು ನೋಡ್ಕೊಳ್ಳೋಕ್ಕೆ ಯಾರೂ ಇಲ್ಲ ಅಂತಿದ್ರಿ. ಅವ್ನು ನೋಡ್ಕೋತಾನೆ ಇನ್ಮೇಲೆ."

"ಉದ್ಧಾರ ಇನ್ನು ಅದೊಂದು ಬಾಕಿ"ಎಂದು ತಮ್ಮ ಕೋಣೆಗೆ ಹೊರಟುಹೋದರು

ತಂದೆಯ ನಿರಾಶೆ ಅನಂತನಿಗೆ ಅರ್ಥವಾಗಿತ್ತು. ಪ್ರತಿ ತರಗತಿಯಲ್ಲೂ ಜಯಭೇರಿ ಹೊಡೆದಿದ್ದ ಆತ, ಉದ್ಯೋಗದಲ್ಲೂ ನಿಸ್ಸೀಮರಾಗಿದ್ದ ಆತ, ತಮ್ಮ ಒಬ್ಬನೇ ಮಗ ಒಂದು ಡಿಗ್ರಿಗೆ ಸಹ ಅರ್ಹನಾಗಲಿಲ್ಲ ಎನಿಸಿದಾಗ ಎಷ್ಟು ನೊಂದುಕೊಳ್ಳಬಹುದೆಂದು ತಿಳಿಯಲಾರದಷ್ಟು ದಡ್ಡನಾಗಿರಲಿಲ್ಲ ಅನಂತ. ಆದರೆ ಏನು ಮಾಡಿಯಾನು? ತನಗೆ ವಿದ್ಯೆ ಹತ್ತಲಿಲ್ಲ. ಅಷ್ಟೇ ಅಲ್ಲ, ಯಾವ ವಿಧದಲ್ಲೂ ತನ್ನ ತಂದೆಯ ಮಟ್ಟಕ್ಕೆ ಏರಲಾರ. ರೂಪದಲ್ಲಿ ಆಜಾನುಬಾಹುವಾದ ತಂದೆಯೆಲ್ಲಿ! ಐದಡಿ ನಾಲ್ಕು ಇಂಚಿನ ಕುಳ್ಳನಾದ ತಾನೆಲ್ಲಿ! ಹೌದು, ತಾನು ತಾಯಿಯಂತೆ ಕುಳ್ಳ, ತಂದೆ ಗಂಭೀರ ವ್ಯಕ್ತಿತ್ವ ಪಡೆದವರು. ಒಳ್ಳೆಯ ವಾಗ್ಮಿ. ಆದರೆ ತಾನು ಅದಕ್ಕೆ ತದ್ವಿರುದ್ಧ. ಏತರಲ್ಲೂ ತಂದೆಯಂತೆ ತಾನಾಗಲಾರೆನಲ್ಲಾ ಎಂಬ ಕೊರತೆ

ಅನಂತನಲ್ಲಿ ಇಲ್ಲದಿಲ್ಲ.

ತಾಯಿಯ ಆಶ್ವಾಸನೆಯಂತೆ ಇನ್ನು ಮೇಲೆ ತಾನು ಜಮೀನು ನೋಡಿಕೊಂಡು ತಂದೆಯ ಕೈಯಲ್ಲಿ ಸೈ ಎನ್ನಿಸಿಕೊಳ್ಳಬೇಕೆಂದು ಹಂಬಲ ಒಮ್ಮೆಲೇ ಮೂಡಿತು. ಮೆಲ್ಲಗೆ ಕೆಳಗಿಳಿದು ಬಂದಾಗ ತಾಯಿ ಆಶ್ಚರ್ಯ ವ್ಯಕ್ತಪಡಿಸಿ-

"ಮನೆಯಲ್ಲೇ ಇದ್ದೀಯೇನೋ, ಕೇಳಿದ್ಯಾ ಅವರಂದದ್ದು. ಅಂತೂ ಹೊಟ್ಟೆ ಉರಿಸ್ತೀಯಪ್ಪ" ಎಂದರು. ಅವರ ದನಿಯಲ್ಲಿ ನೋವಿತ್ತು. ಅನಂತನಿಗೂ ಹೇಗೆ ಹೇಗೊ ಆಯಿತು. ತಾಯಿಯ ಮನಸ್ಸು ಹಗುರ ಮಾಡುವಂತೆ-"ಇರಲಿ ಬಿಡಮ್ಮ, ಗ್ರಾಜ್ಯುಯೇಟ್ ಆಗದಿದ್ರೆ ಏನಂತೆ, ನೀನೊಂದು ಕೆಲ್ಸಕ್ಕೆ ಶಿಫಾರ್ಸು ಮಾಡ್ಬಿಟ್ಟೆ. ಅಪ್ಪ ಒಪ್ಪಿಬಿಟ್ರು, ಇನ್ನೇನಂತೆ"ಎಂದ.

ತಾಯಿಗೆ ಮನ ನಿಜಕ್ಕೂ ಹಗುರವಾಯಿತು. ಪತಿಯ ಭರ್ತ್ಸನೆ ಮಗನನ್ನು ನೋಯಿಸಿಲ್ಲವೆಂಬುದೇ ಸಾಕಾಗಿತ್ತು ಆಕೆಗೆ.

"ನಿಂಗಿಷ್ಟ ಆದ್ರೆ ಸರಿ ಚೆನ್ನಾಗಿ ಹಳ್ಳಿ ಕಡೆ ನೋಡ್ಕೋ. ಹಾಗೇ ಒಂದು ಮದ್ವೆ ಮಾಡ್ಕೊಂಡು ನೀನು ಒಂದು ಮನೇವ್ನ ಅಂತ ಆದ್ರೆ . "

"ಹೋ, ಹೋ ಹೋ .. .... ಈಗ ತಾನೆ ಅಪಾಯಿಂಟ್‌ಮೆಂಟ್ ಸಿಗ್ತಾ ಇದೆ. ಆಗ್ಲೇ ಬಡ್ತಿ ಕೊಡಿಸ್ಬೇಡ. ಸ್ವಲ್ಪ ಸರ್ವೀಸಾಗ್ಲಿ"ಎಂದು ನಗುತ್ತಾ ತಟ್ಟೆ ಹಾಕಿಕೊಂಡ.

ಹಳ್ಳಿಯ ಜಮೀನಿನ ಕೆಲಸ ಅವನು ನೆನೆದಷ್ಟು ಸುಲಭವೂ ಅಲ್ಲ, ಮೋಜಿನದೂ ಆಗಿರಲಿಲ್ಲ. ಅನಂತನಿಗೆ ಬೇಸರ ಬರತೊಡಗಿತು. ವಾರದಲ್ಲಿ ಐದು ದಿನ ಊರಿನಲ್ಲೇ ಇರತೊಡಗಿದ.

ಮಾಡಲೀಗ ಕೆಲಸವಿಲ್ಲ, ತಂದೆಗೆ ಅವನೆಡೆಗೆ ಅಗತ್ಯ ಅಕ್ಕರೆಗಳಿಲ್ಲ. ಅವರಿಗಿದ್ದ ಒಂದೇ ಭಾವನೆಯೆಂದರೆ ತಿರಸ್ಕಾರ, ತಾತ್ಸಾರ.

ಯಶೋದಳೂ ಮದುವೆಯಾಗಿ ಹೊರಟುಹೋಗಿದ್ದಳು.

ಹವ್ಯಾಸ ಉದ್ಯೋಗಗಳಿಲ್ಲದೆ ಎಂಥವನಿಗೂ ಬದುಕು ಕಷ್ಟ. ಈಗ ಅನಂತನ ಪ್ರಬಲ ಉದ್ಯೋಗವೆಂದರೆ ವೇಗವಾಗಿ ಕಾರು ಓಡಿಸುವುದು. ಬೆಂಗಳೂರಿನ ಬೀದಿಗಳಲ್ಲಿ ಶೀಘ್ರವಾಗಿ ಓಡುವ ಕಾರು ಎಂದರೆ ವಕೀಲ ವರದರಾಯರದೆಂದು ಜನಜನಿತವಾಗತೊಡಗಿತು. ದೊಡ್ಡ ಮೀಸೆಯ ಕುಳ್ಳ ತರುಣನೆಂದರೆ ವೇಗದ ಕಾರಿಗೆ ಇನ್ನೊಂದು ಹೆಸರು ಎಂದು ಸ್ಥಿರವಾಯಿತು. ಅನಂತನ ಈ ಹವ್ಯಾಸ ತಂದೆಗೆ ತಿಳಿಯುವುದು ತಡವಾಗಲಿಲ್ಲ. ಪದೇಪದೇ ಹೆಚ್ಚು ವೇಗಕ್ಕಾಗಿ ಅವನು ಪೋಲೀಸ್ ಸ್ಟೇಷನ್ ನೋಡಬೇಕಾಯಿತು. ವಕೀಲ ವರದರಾಯರ ಮಗನೆಂಬ ಒಂದೇ ಹೆಚ್ಚುಗಾರಿಕೆಯಿಂದ ಅವನಿಗೆ ಪೋಲೀಸರಿಂದ ವಿಮೋಚನೆ ಸಿಗುತ್ತಿತ್ತು.

ಇದು ತಾಯಿಗೆ ತಿಳಿಯದಿದ್ದರೂ ತಂದೆಗೆ ಗೊತ್ತಾದ ವಿಷಯವೇ ತಾಯಿಗೂ ತಿಳಿಯುವ ಸಂದರ್ಭ ಬಂತು, ಅದೊಂದು ದಿನ.

"ನೋಡಿಲ್ಲಿ, ನಿನ್ನ ಮಗನಿಗೆ ಹೇಳು, ಈವತ್ತಿನಿಂದ ಅವ್ನು ಕಾರು ಮುಟ್ಟಕೂಡದೂಂತ."

ಇದ್ದಕ್ಕಿದ್ದಂತೆ ಮೇಲೆ ಬಿದ್ದ ಸಿಡಿಲಿನಂಥ ಈ ಮಾತು ಕೇಳಿ ತಾಯಿಗೆ ಸ್ವಲ್ಪ ಹೆದರಿಕೆಯಾಯಿತು. ಎಲ್ಲಿಯಾದರೂ ಅಪಘಾತ ಮಾಡಿರಬಹುದೇ ಎಂದು ಅಂಜಿದರು ಆದರೆ ಪತಿಯೇ ಮಗನ ಶೌರ್ಯವನ್ನು ವಿವರಿಸಿದಾಗ ತಾವು ಮಗನಿಗೆ ಬುದ್ಧಿ ಹೇಳುತ್ತೇನೆಂದರು. ಪತಿಯ ಆಜ್ಞೆಯನ್ನು ಅನಂತನಿಗೆ ತಿಳಿಸಿದರು ಕೂಡ.

ಮಾರನೆಯ ದಿನವೇ, ಗ್ಯಾರೇಜಿನಿಂದ ಕಾರನ್ನು ಹೊರಗೆ ತಂದು ನಿಲ್ಲಿಸಿ ಒಳ ಬಂದು ಮಗನನ್ನು ಬಾಗಿಲಲ್ಲೇ ತಡೆದು"ಕಾರು ಮುಟ್ಟಕೂಡದೂಂತ ನಿಮ್ಮಮ್ಮ ನಿಂಗೆ ಹೇಳ್ಳಿಲ್ವೇನು?" ಎಂದರು.

"ಹೇಳಿದ್ಲು. ನಾನೀಗೆಲ್ಲಿ ಮುಟ್ತಿದೀನಪ್ಪ. ಸುಮ್ನೆ ಅದರ ಒಳಗೆ ಕೂತ್ಕೊಂಡು ಡ್ರೈವ್ ಮಾಡ್ಕೊಂಡು ಹೋಗ್ತೀನಿ ಅಷ್ಟೆ. ಅದನ್ನ ನಾನು ಯಾಕೆ ಮುಟ್ಬೇಕೆ ಹೋಗ್ಲಿ?"ಎಂದು ವ್ಯಂಗಮಿಶ್ರಿತ ಹಾಸ್ಯದ ಧಾಟಿಯಲ್ಲಿ ಮೀಸೆಯ ಮೇಲೆ ಕೈಯಾಡಿಸುತ್ತಾ-

"ಅಮ್ಮಾ, ನಾನೀಗ ಹೊರಟೆ"ಎಂದು ಹೊರಟೇಹೋಗಿದ್ದ.

ರಾಯರು ಹಲ್ಲು ಕಡಿದರು. ಇಂತಹ ಉದ್ಧಟ ಮಗನನ್ನು ಮತ್ತೇನು ಮಾಡಿಯಾರು?

ತೋಚಿದ ಉಪಾಯ ಒಂದೇ ಒಂದು. ಕಾರಿನ ಬೀಗದ ಕೈ ಅವನಿಗೆ ಸಿಗದಂತೆ ಮಾಡುವುದು.

ರಾಯರು ವೃತ್ತಿ ಪ್ರತಿಷ್ಠೆಗಾಗಿ ಕಾರನ್ನು ಇಟ್ಟದ್ದರೇ ವಿನಾ, ಅದರಲ್ಲಿ ಅವರು ಓಡಾಡುವುದು ಕಡಿಮೆ. ಅವರಿಗೆ ನಡೆಸಲು ಬರುವುದಿಲ್ಲವೆಂದು ಬೇಕಾದರೂ ಹೇಳಬಹುದು. ಮೊದಲು ಕೆಲವು ದಿವಸ ಒಬ್ಬ ಡ್ರೈವರನನ್ನು ಗೊತ್ತುಮಾಡಿದ್ದರು ಯಾವಾಗ ತಾವು ಅದನ್ನು ಸದಾಕಾಲವೂ ಉಪಯೋಗಿಸುವುದಿಲ್ಲವೆಂದು ಮನವರಿಕೆಯಾಯಿತೋ ಆಗ ಚಾಲಕನಿಗೆ ಸಂಬಳ ದಂಡವೆಂದು ತರ್ಕಿಸಿ ತೆಗೆದು ಬಿಟ್ಟರು. ಮಕ್ಕಳನ್ನು ಕಾರಿನಲ್ಲಿ ಓಡಾಡಿಸಿ, ಸಲ್ಲದ ಜೀವನ ಮೌಲ್ಯಗಳನ್ನು ಅವರಲ್ಲಿ ಬೆಳೆಸಬಾರದೆಂದು ಸಾಧಾರಣ ಮಕ್ಕಳಂತೆಯೇ ಇರಿಸಿಕೊಂಡರು. ಹೀಗಾಗಿ ಕಾರು ರಾಯರ ಮನೆಗೆ ಭೂಷಣವಾಗಿತ್ತು

ಅನಂತ ದೊಡ್ಡವನಾದ ಅದುವರೆಗೆ ಮನೆಗೆ ಶೋಭಾಯಮಾನವಾಗಿದ್ದ ಆ ವಾಹನ, ಊರಿನ ಬೀದಿ ಬೀದಿಗಳಲ್ಲಿ ಶೋಭಿಸತೊಡಗಿತು. ಅತಿಯಾಗಿ ಮೆರೆದಾಡ ತೊಡಗಿತು. ರಾಯರಿಗೆ ಅದರ ಖರ್ಚಿನ ಕಡೆಗೆ ಗಮನವಿಲ್ಲ. ಆದರೆ ತಮ್ಮ ಸುಪುತ್ರ ಅದರ ಸಲುವಾಗಿ ತರುತ್ತಿದ್ದ ಖ್ಯಾತಿಯಿಂದ ನಿರ್ವಿಣ್ಣರಾಗಿದ್ದರು.

ಈಗ ಅದಕ್ಕೆ ಕಡಿವಾಣ ಹಾಕುವ ಹಂಚಿಕೆ ಅವರದು. ಕಾರನ್ನು ಮಾರಿಯೇಬಿಡ ಬಹುದಿತ್ತು.

ಆದರೆ ಮಹಾನ್ ಅಡ್ವೊಕೇಟರ ಲಾಂಛನಗಳಲ್ಲೊಂದಾದ ಆ ಕಾರನ್ನು ವರ್ಜಿಸಲು ಅವರ ಕೀರ್ತಿ ಪ್ರತಿಷ್ಠೆಗಳು ಒಪ್ಪಲಿಲ್ಲ. ಅದರಿಂದಾಗಿ ಕೀಲಿ ಕೈ ಅವರ ಪೆಟ್ಟಿಗೆ ಸೇರಿತು.

ಎಂದಾದರೂ ಒಂದೊಂದು ಸಲ ತಾವೇ ಡ್ರೈವ್ ಮಾಡಿಕೊಂಡು ಕೋರ್ಟಿಗೆ ಹೋಗುತ್ತಿದ್ದರು. ಮಿಕ್ಕೆಲ್ಲ ಸಮಯದಲ್ಲಿ ಅವರಿಗೆ ಕಕ್ಷಿಗಾರರ ವಾಹನಸೌಲಭ್ಯ ಇದ್ದೇ ಇತ್ತು.

ಹಾಗೊಂದು ದಿನ ರಾಯರು ಕಾರನ್ನು ಕೋರ್ಟಿನ ಆವರಣದಲ್ಲಿ ನಿಲ್ಲಿಸಿದ್ದರು. ಮಧ್ಯಾಹ್ನ ಊಟಕ್ಕಾಗಿ ಮನೆಗೆ ಹೋಗಲು ಬಂದಾಗ ಕಾರು ಕಾಣೆಯಾಗಿತ್ತು. ಕಾರು ಕಳುವಾಗಿರುವ ಗುಲ್ಲು ಹರಡಿತು. ರಾಯರ ಕಾರೆಂದ ಮೇಲೆ ಪೋಲೀಸರು ಒಂದು ನಿಮಿಷವೂ ತಡಮಾಡದೆ ಶೋಧನೆಗೆ ತೊಡಗಿದರು. ಬಹಳ ಬೇಗನೆ, ಡ್ರೈವರನ ಸಮೇತ ಕಾರು ಸಿಕ್ಕಿಬಿದ್ದಿತು ನೆಲಮಂಗಲದ ಪೆಟ್ರೋಲ್ ಬಂಕಿನ ಬಳಿ ಅಲ್ಲಿಯ ಪೋಲೀಸ್ ಸ್ಟೇಷನ್ನಿನಲ್ಲಿ ಕುಳಿತಿದ್ದ ಆ ಕಾರಿನ ಡ್ರೈವರ್.

ರಾಯರಿಗೆ ಫೋನಿನಲ್ಲಿ ಸುದ್ದಿ ಬಂತು-

"ಕಾರು ಸಿಕ್ಕಿದೆ ಸಾರ್ ಡ್ರೈವರ್ ಅದು ತನ್ನದೇ ಕಾರು ಅಂತಾನೆ ಅದಕ್ಕೂ ಆಶ್ಚರ್ಯ ಎಂದರೆ, ಅವನು ನಿಮ್ಮ ಮಗ ಅಂತಾನೆ ನಮಗೆ ಅನುಮಾನ. ಅನಾನುಕೂಲವಾಗದೆ ಇದ್ರೆ ಒಂದು ನಿಮಿಷ ಬಂದು ಹೋಗ್ತೀರಾ ಸಾರ್' ಮಾತನಾಡಿದ್ದವನು ನೆಲಮಂಗಲದ ಪೋಲೀಸ್ ಇನ್‌ಸ್ಪೆಕ್ಟರ್. ಅನಂತನನ್ನು ಕಂಡರಿಯದವನು.

ರಾಯರು ಕಕ್ಷಿಗಾರನೊಬ್ಬನ ಕಾರಿನಲ್ಲಿ ಕೂಡಲೆ ಅಲ್ಲಿಗೆ ಬಂದರು. ಅವರಿಗೆ ಬಹಳ ನಾಚಿಕೆಯಾಯಿತು. ಎದುರಿಗೇ ಇದ್ದಾನೆ ತಮ್ಮ ಸುಪುತ್ರ. ಸುಳ್ಳು ದೂರು ಕೊಟ್ಟಂತಾಗಿತ್ತು. ಅಷ್ಟು ಜನರೆದುರಿಗೆ ಮನಃಸ್ಥೈರ್ಯ ಕಳೆದುಕೊಳ್ಳದೆ- "ಓ ವಯಸ್ಸಾಯ್ತು ನೋಡಿ, ಮರೆವು ಜಾಸ್ತಿ. ಅವನಿಗೆ ತಗೊಂಡು ಹೋಗು ಅಂತ ಹೇಳಿ ಮರೆತೇಬಿಟ್ಟಿದ್ದೀನಿ. ಐ ಆಮ್ ರಿಯಲಿ ಸಾರಿ"ಎಂದು ಮಗನ ದೃಷ್ಟಿಯನ್ನು ತಪ್ಪಿಸಿ ನುಡಿದು ಕಂಪ್ಲೈಂಟನ್ನು ಹಿಂದಕ್ಕೆ ತೆಗೆದುಕೊಂಡರು

ಅಂತಹ ಪ್ರತಿಭಾನ್ವಿತರ ಮಗನನ್ನು ಹಿಡಿದುದಕ್ಕಾಗಿ ಪಶ್ಚಾತ್ತಾಪ ಪಡುತ್ತಾ ಇನ್‌ಸ್ಪೆಕ್ಟರ್ ಅನಂತನ ಬಳಿಗೆ ಬಂದು "ಎಕ್ಸ್‌ಕ್ಯೂಸ್ ಮಾಡ್ಬೇಕು, ನಮ್ಮಿಂದ ನಿಮಗೆ ತೊಂದರೆ ಆಯ್ತು. ಆದ್ರೂ ನಮ್ಮ ಕರ್ತವ್ಯ ನೋಡಿ, ಕಂಪ್ಲೈಂಟ್ ಬಂದ್ಮೇಲೆ ಮಾಡದೆ ವಿಧಿಯಿಲ್ಲ"ಎಂದು ಕೈ ಕುಲುಕಿದರು. ಅನಂತ ಮಾತಾಡದೆ ತಂದೆಯ ಕಡೆಗೆ ನೋಡಿದಾಗ ಅವರ ಕಣ್ಣುಗಳು ಅವನ ಕಣ್ಣಿನೊಂದಿಗೆ ಬೆರೆತವು. ಅಲ್ಲೂ ಅವನು ಕಣ್ಣು ಹೊಡೆಯದೆ ಬಿಡಲಿಲ್ಲ. "ನೋಡಿದಿರಾ, ನೀವು ಬೇಗದ ಕೈ ಮುಚ್ಚಿಟ್ರೆ. ನನ್ನನ್ನು ಏನೂಂತ ತಿಳ್ಕೊಂಡ್ರಿ" ಎನ್ನುವಂತಿತ್ತು ಅವನ ಕಣ್ಣ ಭಾವ. ಆದರೆ ತಂದೆಯ ಕಣ್ಣಲ್ಲಿ ಯಾವ ಭಾವನೆಯಿತ್ತೋ ಅನಂತನಿಗೆ ಓದಲಾಗಲಿಲ್ಲ.

ತಂದೆ ಮಗ ಮನೆಗೆ ಒಟ್ಟಾಗಿ ಹಿಂತಿರುಗಿದರು. ತಾಯಿ ಸಂತೋಷಿಸಿದಳು. ಆದರೆ ಒಂದೇ ಘಳಿಗೆ, ಒಳಗೆ ಬಂದವರೇ ರಾಯರು ತಮ್ಮ ಕೋಣೆಯಿಂದ ಬಲವಾದ ವಾಕಿಂಗ್ ಸ್ಟಿಕ್ ತಂದು, ಅನಂತನ ಬೆನ್ನಮೇಲೆ ಬಾರಿಸತೊಡಗಿದರು, ಕದ್ದದ್ದಕಾಗಿ, ತಮಗೆ ಅವಮಾನ ಮಾಡಿದಕ್ಕಾಗಿ. ಎಲ್ಲಾ ದುರ್ಮಾರ್ಗಗಳಿಗೂ ಶಿಕ್ಷೆ ಇಂದೇ ಮುಗಿಯುವಂತೆ ಮುಖಮೂತಿ ನೋಡದೆ ಬಡಿಯುತ್ತಿದ್ದರು. ತಾಯಿಗೆ ಈ ಆಕ್ರಮಣದ ಕಾರಣವೇ ತಿಳಿಯದೆ ಬೆಪ್ಪಾಗಿ ನಡುಗುತ್ತಿದ್ದರು. ನಡುವೆ ಹೋಗಿ ಒದೆ ತಿಂದರಷ್ಟೆ. ತಮ್ಮ ನೆನಪಿನಲ್ಲಿ, ಒಂದು ದಿನವೂ ಯಾರ ಮೇಲೂ ಕೈ ಮಾಡದ ಗಂಡನ ರೋಷ ನೋಡಿ ಸುಸ್ತಾದರು ಆಕೆ.

ತೃಪ್ತಿ ಎನಿಸುವಷ್ಟು ಹೊಡೆದು, ಕೋಲನ್ನು ಎಸೆದು ತಮ್ಮ ಕೋಣೆಯೊಳಗೆ ನಡೆದ ರಾಯರು ಮೂರು ದಿನ ಊಟ, ನಿದ್ದೆ ಮಾಡಲಿಲ್ಲ.

ಕೋರ್ಟಿಗೂ ಹೋಗಲಿಲ್ಲ.

ತಾಯಿ ಮಗನಿಗೆ ಉಪಚಾರ ಮಾಡಿದಳು. ಬಾಸುಂಡೆಗಳಿಗೆ ಶಾಖ ಕೊಟ್ಟಳು. ತಮಾಷೆಗಾಗಿ ಮಾಡಿದ ಕೃತ್ಯ ದುರಂತವಾಗಿತ್ತು ಆಕೆಯ ಪಾಲಿಗೆ ಮಗನಿಗೆ ಬುದ್ಧಿ ಹೇಳಿ ತಿದ್ದುವ ಶಕ್ತಿಯಿಲ್ಲ ಅವನ ದುಷ್ಟತನಕ್ಕೆ ರಾಜಿಯಾಗುವಂತೆ ಗಂಡನನ್ನು ಬೇಡಿಕೊಳ್ಳಲು ಧೈರ್ಯವಿಲ್ಲದೆ ನಲುಗಿದಳು ಆ ಸಾಧ್ವಿ.

ಬೀಗದ ಕೈ ಕದ್ದು ತಂದೆಯನ್ನು ಮೂರ್ಖನನ್ನಾಗಿಸಿದ ಅನಂತನಿಗೆ, ನಡೆದ ಘಟನೆಯಿಂದ ರೋಷ ಇನ್ನೂ ಹೆಚ್ಚಾಯಿತು ಪೋಲೀಸ್ ಸ್ಟೇಷನ್ನಿನಲ್ಲಿ ಹಗುರವಾಗಿ ವಿಷಯ ತೇಲಿಸಿದ ತಂದೆ ಈ ರೀತಿ ನಡೆದುಕೊಂಡದ್ದು ತನಗೆ ಅವಮಾನವೆಂದು ಕೊಂಡ ಇಪ್ಪತ್ತೆರಡು ವರ್ಷ ತುಂಬಿದ ತನ್ನನ್ನು ಪಶು ಬಡಿದಂತೆ ಸಾಯಬಡಿದ ಈತ ಮನುಷ್ಯನೇ ಎನ್ನಿಸಿತು ಅವನಿಗೆ.

ತಂದೆ-ಮಗ ಕ್ರಮೇಣ ಪೂರ್ಣವಾಗಿ ದೂರವಾದರು. ಶತ್ರುಗಳಂತಾದರು. ಅನಂತ ದ್ವಿಗುಣಿತ ರೋಷದಲ್ಲಿ ಕಾರು ನಡೆಸತೊಡಗಿದ. ತಂದೆ ಚಕಾರವೆತ್ತಲಿಲ್ಲ. ಅವನು ಯಾರೋ ಅನ್ಯ ಹುಡುಗನೆಂಬಂತೆ ಕಾಣುತ್ತಿದ್ದರು ಆದರೆ ದೈವೇಚ್ಛೆ, ಅನಂತನ ಬಾಳಿನ ತಿರುವಿನ ಸಮಯ ಸನ್ನಿಹಿತವಾಗುತ್ತಿತ್ತು

* * *

ಅನಂತನ ಕಾರು ಊರಾಚೆ ತುಮಕೂರು ರಸ್ತೆಯಲ್ಲಿ ನೂರುಮೈಲಿ ವೇಗದಲ್ಲಿ ಓಡುತ್ತಿತ್ತು. ಅನಂತ ಖುಷಿಯಿಂದ ಸಿಳ್ಳು ಹೊಡೆಯುತ್ತಾ ಚಕ್ರ ಹಿಡಿದು ಕುಳಿತಿದ್ದ ಒಂದೇ ಕ್ಷಣ, ಅದೇನಾಯಿತೋ ಅವನು ಎಲ್ಲಾ ಬ್ರೇಕುಗಳನ್ನೂ ಒಟ್ಟಿಗೆ ಒತ್ತಿದ. ಕ್ರೀಂಚ್ ಎಂದು ನಿಂತಿತು ಕಾರು.

ನಡೆದಿತ್ತು ಅನಾಹುತ. ಸರಿಪಡಿಸಲಾಗದ ದುರಂತ ನಡೆದುಹೋಗಿತ್ತು. ಕಾರಿನ ಅಡಿ ಎಂಟು ವರ್ಷದ ಹುಡುಗಿ ಬಿದ್ದಿದ್ದಳು. ಸ್ಕೂಲಿನ ಯೂನಿಫಾರಂನಲ್ಲಿದ್ದ ಪುಟ್ಟ ಹುಡುಗಿ.

ಮೈಯೆಲ್ಲಾ ಬೆವರುತ್ತಿದ್ದ ಅನಂತ ಕೆಳಗಿಳಿದು ಬಂದ ರಕ್ತದ ಮಡುವಿನಲ್ಲಿ ಮಲಗಿತ್ತು ಆ ಬೆಣ್ಣೆಯಂಥ ಬಿಳುಪಿನ ಬಾಲಕಿ ಅದರ ತಲೆಯ ಬಳಿ ಕುಕ್ಕುರಗಾಲಲ್ಲಿ ಕುಳಿತ ಬೆದರು ಕಣ್ಣುಗಳಿಂದ ಒಮ್ಮೆ ಸುತ್ತಲೂ ನೋಡಿದ. ಜನ ಘೇರಾಯಿಸುವಂತಹ ಸ್ಥಳವಲ್ಲದ್ದರಿಂದ ಒಬ್ಬಿಬ್ಬರು ಮಾತ್ರ ಓಡಿಬಂದಿದ್ದರು ಆ ಹುಡುಗಿಯ ಜೊತೆಯ ಮತ್ತಿಬ್ಬರು ಬಾಲಕಿಯರು ದಿಗ್ಭ್ರಮೆಯಿಂದ ಬೆಪ್ಪಾಗಿದ್ದರು.

ಅನಂತನ ಮಿದುಳು ಜಾಗ್ರತೆಯಾಗಿ ಕೆಲಸಮಾಡಿತು. ಕಾರಿನ ಡಿಕ್ಕಿಯನ್ನು ತೆರೆದು ಹಳ್ಳಿಗೆ ಹೋಗಬೇಕಾದಾಗಲೆಲ್ಲ ಬೇಕಾಗಬಹುದೆಂದು ಇಟ್ಟಿದ್ದ ಸಣ್ಣ ಸೂಟ್‌ಕೇಸ್ ತೆಗೆದು ಅದರೊಳಗಿಂದ ಒಂದು ಪಂಚೆ, ಒಂದು ಬೆಡ್‌ಷೀಟ್ ತಂದು, ಪಂಚೆಯಿಂದ ಆ ಹುಡುಗಿಯನ್ನು ಸ್ವಲ್ಪವಾಗಿ ಒರೆಸಿ ಬೆಡ್‌ಷೀಟನಲ್ಲಿ ಸುತ್ತಿದ ಆ ಮಿಕ್ಕ ಇಬ್ಬರು ಹುಡುಗಿಯನ್ನು ಹತ್ತಿರ ಕರೆದು ಪಿಸು ಮಾತಿನಲ್ಲಿ ಏದುತ್ತಾ- ಮಗೂ, ಈ ಮಗುವಿನ ಮನೆ ಗೊತ್ತಾ?"ಎಂದ ಮಾತನಾಡಲೂ ಸಹ ಸಾಧ್ಯವಾಗದಷ್ಟು ಬೆದರಿದ್ದ ಆ ಬಾಲಕಿಯರಲ್ಲಿ ಒಬ್ಬಳು'ಹುಂ'ಎನ್ನುವಂತೆ ತಲೆಯಲ್ಲಾಡಿಸಿದಳು ಅವರಿಬ್ಬರನ್ನೂ ಕೈಹಿಡಿದು ಕಾರಿಗೆ ಕರೆದೊಯ್ದು ಹಿಂದಿನ ಸೀಟಿನಲ್ಲಿ ಕುಳ್ಳಿರಿಸಿದ ಗಾಯಗೊಂಡ ಹುಡುಗಿಯನ್ನು ಎತ್ತಿ ಮುಂದಿನ ಸೀಟಿನ ತನ್ನ ಪಕ್ಕದಲ್ಲಿ ಮಲಗಿಸಿಕೊಂಡು ನೇರವಾಗಿ ಹಳ್ಳಿಯಲ್ಲಿ ಆ ಹುಡುಗಿಯ ಮನೆಗೆ ಬಂದ

ಇಬ್ಬರು ಹುಡುಗಿಯರೂ ಸ್ವಲ್ಪ ಚೇತರಿಸಿಕೊಂಡರು ಒಬ್ಬಳು ಕಾರು ಬಾಗಿಲು ತೆಗೆದೊಡನೆ ಧುಮುಕಿ ಓಡಿ ಬಾಗಿಲು ಬಡಿದಳು. ಹೊರಬಂದ ವ್ಯಕ್ತಿಗೆ "ರೀ, ರೀ, ನಾವು ಬಸ್ ಸಿಕ್ಕಿಲ್ಲ ಅಂತ, ಕಾನ್ವೆಂಟಿನಿಂದ ನಡಕೊಂಡೇ ಬರ್‍ತಿದ್ವು. ಕೈಯಲ್ಲಿದ್ದ ಒಂದು ಪೇಪರ್ ಹಾರಿಹೋಯ್ತೂಂತ ಹಿಂದೆ ಮುಂದೆ ನೋಡ್ದೆ ವಾಣಿ ರೋಡೊಳಕ್ಕೆ ಓಡಿಬಿಟ್ಳು. ಈ ಕಾರು ಅವಳ ಮೇಲೆ ಹೋಗ್ಬಿಡ್ತು"ಎಂದು ಹೆದರುತ್ತಾ, ಗಾಬರಿಯಿಂದ ಬಡಬಡಿಸಿ ಅಳಲಾರಂಭಿಸಿದಳು

ಬಾಗಿಲು ತೆರೆದು ಹೊರಗೆ ಬಂದು, ಆ ಹುಡುಗಿಯ ಮಾತು ಕೇಳಿಸಿಕೊಂಡ ಆ ವ್ಯಕ್ತಿಗೆ ತಲೆ ಬುಡ ತಿಳಿಯಲಿಲ್ಲ ಆ ವೇಳೆಗೆ ಬೆಡ್‌ಷೀಟನಲ್ಲಿ ಸುತ್ತಿಹಿಡಿದ ಆ ಮಗುವನ್ನು ತಂದು ಆತನ ಪಾದದ ಬಳಿಯಿಟ್ಟು ಅನಂತ-"ನಿಮ್ಮ ಮಗೂನ್ನ ಕೊಂದ್ಬಿಟ್ಟಿದ್ದೀನಿ ಸಾರ್ ಏನು ಶಿಕ್ಷೆ ಕೊಟ್ರೂ ಸಿದ್ಧವಾಗಿದ್ದೀನಿ" ಎಂದು ತಲೆ ತಗ್ಗಿಸಿದ

ಕಣ್ಣು ಕೆಂಪಗಾಗಿ ತಲೆ ಕೆದರಿ ಹುಚ್ಚನಂತಿದ್ದ ಈ ವ್ಯಕ್ತಿ ಆದರೂ ಈಗ ತರ್ಕಕ್ಕೆ ಸಮಯ ವಲ್ಲವೆಂದು ಆ ಹುಡುಗಿಯ ತಂದೆ, ಅವಳನ್ನು ಮುಟ್ಟಿನೋಡಿದರು ಮೈಯಲ್ಲಿ ಇನ್ನೂ ಶಾಖವಿತ್ತು ವಾಣಿ ಸತ್ತಳೆಂದು ಆತನಿಗೆ ನಂಬಿಕೆಯಾಗಲಿಲ್ಲ ಮತ್ತೆ ಅವಳನ್ನು ಎತ್ತಿಕೊಂಡ, ಹುಚ್ಚನಂತೆ ನಿಂತಿದ್ದ ಅನಂತನನ್ನು "ಬನ್ನಿ, ಆಸ್ಪತ್ರೆಗೆ ಹೋಗೋಣ" ಎಂದು ಕಾರಿನ ಬಳಿ ಕರೆತಂದ ಆತನಿಗಿದ್ದಷ್ಟು ಮೈಮೇಲಿನ ಪ್ರಜ್ಞೆ ಅನಂತನಿಗಿದ್ದಿರಲಿಲ್ಲ.

ಹೆಂಡತಿ ಬಾಣಂತನಕ್ಕಾಗಿ ಊರಿಗೆ ಹೋಗಿದ್ದಳಾದ್ದರಿಂದ, ಮನೆಯಲ್ಲಿ ಮತ್ತಾರೂ ಇರದ ಕಾರಣ, ಆತ ಮನೆಗೆ ಬೀಗ ಹಾಕಿ, ಹೃದಯದ ಆಸೆ ನಿರಾಸೆಗಳ ದುಗುಡದಿಂದ ಕಾರು ಹತ್ತಿದರು

ಅನಂತ ಅದು ಹೇಗೆ ಆಸ್ಪತ್ರೆ ತಲುಪಿದನೋ!

ಅಲ್ಲಿಯೂ ವಾಣಿಯ ತಂದೆ ತುಂಬ ಧೈರ್ಯದಿಂದಲೇ ವೈದ್ಯರ ಮುಂದೆ ಮಗಳನ್ನು ಮಲಗಿಸಿದರು. ಆದರೆ ಅನಂತ ಡಾಕ್ಟರರ ರಟ್ಟೆ ಹಿಡಿದೆಳೆದು ಪಿಸುದನಿಯಲ್ಲಿ-"ಆತನ ಮಾತು ಕೇಳ್ಬೇಡಿ ಡಾಕ್ಟರ್ ನಾನು . .. ನಾನೇ ಈ ಮಗೂನ್ನ ಕೊಂದ್ಬಿಟ್ಟಿದೀನಿ. ನೀವು ಪೋಲೀಸ್‌ಗೆ ರಿಪೋರ್ಟ್‌ಮಾಡಿ. ಆದರೆ ನಾನು ವರದರಾಯನ ಮಗ ಅಂತ ಮಾತ್ರ ತಿಳಿಸೋದು ಬೇಡ. ಹಾಗೆ ಹಾಗೇ ನನಗೇನಾದ್ರೂ ಕೊಟ್ಟು ನನ್ನನ್ನು ಮುಗಿಸ್ಬಿಡಿ ಡಾಕ್ಟರ್"ಎಂದು ಬಡಬಡಿಸಿದ

ಡಾಕ್ಟರ್ ತದೇಕಚಿತ್ತರಾಗಿ ಅವನನ್ನೇ ನೋಡಿದರು ನಡೆದ ಘಟನೆಯಿಂದ ಮತಿಭ್ರಾಂತನಾಗಿದ್ದಾನೆಂದು ತಕ್ಷಣವೇ ಗ್ರಹಿಸಿದರು ತಮ್ಮ ಗೆಳೆಯ ವರದನ ಮಗ. ಪೋಲೀಸಿಗೆ ಮಾತ್ರವಲ್ಲ, ವರದನಿಗೂ ತಿಳಿಯಬಾರದೆಂದು ಸಂಕಲ್ಪ ಮಾಡಿಕೊಂಡವರು, ನಂತರ ವಾಣಿಯ ತಂದೆಯ ಕಡೆಗೆ ತಿರುಗಿದರು ಆತ ಹಲ್ಲುಕಚ್ಚಿ ದುಃಖ ತಡೆದುಕೊಳ್ಳುತ್ತಿದ್ದಾರೆಂದು ಅವರ ದವಡೆಯ ಬಿಗಿದ ನರಗಳು ಹೇಳುತ್ತಿದ್ದುವು

ಮಗುವನ್ನು ಪರೀಕ್ಷೆ ಮಾಡುವ ಅವಶ್ಯಕತೆಯೇ ಇರಲಿಲ್ಲ. ವಾಣಿ ಯಾವಾಗಲೋ ಈ ಲೋಕ ಬಿಟ್ಟಿದ್ದಳು ಆದರೆ ಹೆತ್ತ ತಂದೆಯ ಸಮಾಧಾನಕ್ಕಾಗಿ ಡಾಕ್ಟರ್ ಪರೀಕ್ಷೆ ನಡೆಸಿ, ಮೃತದೇಹಕ್ಕೆ ಒಂದು ಇಂಜಕ್ಷನ್ ಚುಚ್ಚಿ'ಕಾದು ನೋಡೋಣ ಎಂದರು ನಂತರ ನಿದ್ದೆಯ ಮದ್ದಿನ ಒಂದು ಇಂಜಕ್ಷನ್ ಅನಂತನಿಗೆ ಚುಚ್ಚಿ ಮಲಗಿಸಿದರು

ಈಗ ನಾನು ಸಾಯ್ತೀನಾ ಡಾಕ್ಟರ್? ಪಾಪಕ್ಕೆ ಪ್ರಾಯಶ್ಚಿತ್ತ ಆಗುತ್ತಲ್ವಾ ಡಾಕ್ಟರ್"ಎಂದು ಗೊಣಗುತ್ತ ರೆಪ್ಪೆ ಮುಚ್ಚಿಕೊಂಡ ಅನಂತ.

ಕಾದು ನೋಡಿದರೂ ಕಣ್ಣು ತೆರೆಯಲಿಲ್ಲ ವಾಣಿ ತಮ್ಮ ಮುದ್ದಿನ ಚೊಚ್ಚಲ ಕಂದ. ಒಂದು ಬದಿಗೆ ನಿಂತು ಮುಸ ಮುಸ ಅಳುತ್ತಿದ್ದರು ವಾಣಿಯ ತಂದೆ, ಪೋಲೀಸಿಗೆ ಸುದ್ದಿ ಕಳುಹಿಸಬೇಕೆಂದು ಇಚ್ಛೆ ಆತನಿಗೂ ಬರಲಿಲ್ಲ ಅನಂತನು ಬೇಕೆಂದೇನೂ ವಾಣಿಯನ್ನು ಕೊಂದಿಲ್ಲ. ಮೊದಲೇ ನೊಂದಿದ್ದಾನೆ. ತಾನು ಮಾಡಿದ ಅಪರಾಧಕ್ಕಾಗಿ ಹುಚ್ಚನಾಗಿದ್ದಾನೆ. ಅವನನ್ನು ಪೋಲೀಸಿಗೆ ಕೊಟ್ಟು ತಾವು ಸಾಧಿಸುವುದೇನು?ವಾಣಿಯಂತೂ ಹಿಂದಿರುಗಿ ಬರುವುದಿಲ್ಲ ಮುಂದೆ ನಡೆಯಬೇಕಾದುದನ್ನೆಲ್ಲ ಭಾರವಾದ ಹೃದಯದಿಂದ ನಡೆಸಿದರು

ಅನಂತನಿಗೆ ಎಚ್ಚರವಾದಾಗ ಏನೋ ವಿಚಿತ್ರ ಅನುಭವವಾಗುತ್ತಿತ್ತು. ಡಾಕ್ಟರ್ ಅವನಿಗಾಗಿಯೇ

ಕಾದು ಕುಳಿತಿದ್ದು- "ನೋಡಿ ಅನಂತ್, ತಿಳಿದೋ ತಿಳೀದೇನೋ ಇಂಥವು ಆಗಿಹೋಗುತ್ತೆ. ಇದು ನಮ್ಮ ದುರದೃಷ್ಟ. ಇದನ್ನೇ ಮನಸ್ಸಿಗೆ ಹಚ್ಚಿಕೊಳ್ಳಬೇಡಿ ಹುಡುಗಿ ಮನೆಯವ್ರೇ ಉದಾರ ಮನಸ್ಸಿನಿಂದ ಕ್ಷಮಿಸಿಬಿಟ್ಟಿದ್ದಾರೆ. ಪೋಲೀಸ್‌ಗೆ ಹೇಳೋದು ಬೇಡ ಅಂತ ಎಲ್ಲಾ ಮುಗಿಸ್ಬಿಟ್ಟಿದ್ದಾರೆ. ನೀವೂ ಪಶ್ಚಾತ್ತಾಪ ಪಟ್ಟಿದ್ದೀರಿ. ದೇವ್ರು ಕ್ಷಮಿಸ್ತಾನೆ, ಹೋಗ್ಬನ್ನಿ" ಎಂದು ಉಪದೇಶ ನೀಡಿ, ಬೆನ್ನು ತಟ್ಟಿ ಕಳುಹಿಸಿಕೊಟ್ಟರು.

"ಸರಿ. ಸರಿ. ಕ್ಷಮಿಸ್ತಾನೆ. ದೇವ್ರು ಕ್ಷಮಿಸ್ತಾನೆ" ಎಂದು ಒತ್ತಿ ಹೇಳುತ್ತ ಹೊರ ನಡೆದ ಅನಂತ. ಡಾಕ್ಟರಿಗೆ ವಾಣಿಯ ತಂದೆಗಿಂತ, ಅನಂತನನ್ನು ಕುರಿತೇ ಚಿಂತೆ ಯಾಯಿತು.

ಹೊರಗೆ ಬಂದ ಅನಂತನಿಗೆ, ತಾನು ಸಾಯಬೇಕೆಂದಿದ್ದ ವಿಷಯ ಮರೆ ಯಾಯಿತು. ಅವನ ಕಣ್ಣ ಮುಂದೆ ಈಗ ಕಾಣುತ್ತಿರುವುದು ಒಂದೇ ದೃಶ್ಯ ವೇಗದ ಕಾರು, ಕಾರಿನ ಅಡಿ ಅಗಲ ಕಣ್ಣಿನ ಬಿಳುಪಿನ ಹುಡುಗಿ-ಕಾರಿನ ಕ್ರೀಂಚ್ ಶಬ್ದ 'ಅಬ್ಬಾ!' ಎಂದು ಕಿವಿ ಮುಚ್ಚಿಕೊಳ್ಳುತ್ತಾನೆ ಕಣ್ಣು ತೆರೆದರೆ ಮತ್ತೆ ಅದೇ ದೃಶ್ಯ-ಪುನಃ ಅದೇ ವರ್ತನೆ

ಹೇಗೋ ಕಾರನ್ನು ತಂದು ಮನೆಯಲ್ಲಿ ಬಿಟ್ಟು, ಯಾರೂ ಗಮನಿಸದಂತೆ ಹೊರಕ್ಕೆ ನಡೆದುಬಿಟ್ಟ. ಅನಂತ ಮನೆಗೆ ಬರದೆ ನಾಲ್ಕಾರು ದಿನಗಳಾದವು ತಾಯಿಗೆ ಚಿಂತೆ ಹತ್ತಿತ್ತು ಪತಿಯ ಬಳಿ ಹೇಳಲಾರದಾದಳು. ಏನೆಂದು ಹೇಳಬೇಕು? ಹೇಳಿದರೂ ಸಿಗುವ ಉತ್ತರ- "ಎಲ್ಲಿ ಸತ್ತಿದ್ದಾನೋ, ತೆವಲು ತೀರಿದರೆ ಬರ್‍ತಾನೆ. ಕಳೆದುಹೋಗೋಕೆ ಅವನೇನು ಪ್ರಶಸ್ತ ಒಡವೇನೇ?" ಎನ್ನುತ್ತಾರೆ ಎಂಬುದು ನಿಶ್ಚಯ ದೇವರಿಗೆ ತುಪ್ಪದ ದೀಪ ಹಚ್ಚಿ ಬೇಡುತ್ತಾ, ಅಳುತ್ತಾ ಕುಳಿತುಬಿಡುತ್ತಿದ್ದಳು.

ವಾಣಿಯ ತಂದೆ ಧೀರವ್ಯಕ್ತಿಯೇ ಅಲ್ಲದೆ ಉದಾರಮನೋಭಾವದವರೂ ಇದ್ದಂತಿತ್ತು. ಹುಷಾರಾಗಿ, ಎಚ್ಚರವಾಗಿ ಪತ್ನಿಗೆ ವಿಷಯ ತಿಳಿಸಿ ಅವಳನ್ನು ಸಮಾಧಾನ ಮಾಡಿ ಮನೆಗೆ ಕರೆತಂದು ಬಿಟ್ಟಿದ್ದರು. ತಮ್ಮ ಬಳಿಯೇ ಇದ್ದರೆ ಅವಳಿಗೆ ಸಾಂತ್ವನ ನೀಡುವ ಕೆಲಸ ಯಶಸ್ವಿಯಾಗಬಹುದೆಂಬ ಅವರ ಎಣಿಕೆ ಫಲಕೊಟ್ಟಿತ್ತು. ಅನಂತನ ಸ್ಥಿತಿ ತಿಳಿದ ಆತನಿಗೆ, ವಾಣಿಯ ಮರಣದ ನೋವು ಕಡಿಮೆಯಾದಂತಿತ್ತು.

ಏನು ಮಾಡಲು ಸಾಧ್ಯ? ನಿಮಗೆ ಉಳಿದ ಎರಡು ಮಕ್ಕಳೇ ಲಭ್ಯ ಎಂದುಕೊಳ್ಳ ಬೇಕೆಂದು ಹೆಂಡತಿಗೂ ಸಮಾಧಾನ ಹೇಳುತ್ತಿದ್ದರು ಆದರೆ ಮನೆಯ ಮುಂದೆ ಜಗಲಿಯ ಮೇಲೆ ಹಗಲೂ ರಾತ್ರಿ ಕುಳಿತಿರುತ್ತಿದ್ದ ಅನಂತನಿಗೆ ಮಾತ್ರ ಸಮಾಧಾನ ಹೇಳಲು ಅವರಿಗೆ ತಿಳಿಯುತ್ತಿರಲಿಲ್ಲ. ನೆರೆಹೊರೆಯ ಜನರಿಗೆ ಈ ವಿಷಯವನ್ನು ಅಷ್ಟೇನೂ ಅಬ್ಬರ ಮಾಡಿ ಹೇಳಿರದ ಕಾರಣ, ದಾರಿಯಲ್ಲಿ ಅಕಸ್ಮಾತ್ ಸತ್ತುಬಿದ್ದಿದ್ದ ವಾಣಿಯನ್ನು ಒಬ್ಬ ಕಾರಿನಾತ ತಂದು ಕೊಟ್ಟನೆಂದು ವದಂತಿ ಹಬ್ಬಿಸಿದ ಕಾರಣ ಈ ಅನಂತ ವಾಣಿಯ ಮನೆಯವರಿಗೆ ಸಮಸ್ಯೆಯಾದ. ಒಳಗೆ ಬಾ ಅಂದರೆ ಬರಲೊಲ್ಲ. ಊಟ ತಿಂಡಿ

ಮುಟ್ಟಲೊಲ್ಲ. ಜಗಲಿಯ ಮೇಲೆ ಕುಳಿತಿರುತ್ತಾನೆ. ಆ ದೊಡ್ಡ ಮೀಸೆಯ ಜೊತೆಗೆ ಈಗ ಗಡ್ಡವೂ ಬೆಳೆದಿದೆ. ಊಟ ತಿಂಡಿ ನಿದ್ದೆಯಿಲ್ಲದೆ ಕಣ್ಣುಗಳು ಕೆಂಡವಾಗಿವೆ.

ಮಾತಿಲ್ಲ, ಕತೆಯಿಲ್ಲ. ಕೈಗಳಿಂದ ಕಿವಿ ಮುಚ್ಚುವುದು, ಕಣ್ಣು ಮುಚ್ಚುವುದು ಅವಿರತವಾಗಿ ನಡೆಯುತ್ತಿದ್ದುವು.

ವಾಣಿಯ ತಂದೆ ಕಡೆಗೆ ಸಾಹಸಮಾಡಿ ತಮ್ಮ ಎರಡನೆಯ ಮಗಳು ರಾಣಿಯನ್ನು ಅನಂತನ ಮುಂದೆ ಹಿಡಿದು "ವಾಣಿ ಸಾಯಲಿಲ್ಲ. ನೋಡಿ, ಬದುಕೇ ಇದ್ದಾಳೆ" ಎಂದು ಹೇಳತೊಡಗಿದರು. ರಾಣಿ ವಾಣಿಯನ್ನು ಹೋಲುತ್ತಿದ್ದುದು ಬಹಳ ಸ್ವಲ್ಪವೇ. ಅವಳು ಅನಂತನ ಆಕಾರ ಅವತಾರ ಕಂಡೇ ಹೆದರಿಕೊಳ್ಳುತ್ತಿದ್ದಳು. ಆದರೂ ತಂದೆಯ ಬಲವಂತಕ್ಕೆ ಆ ಆರು ವರ್ಷದ ಹುಡುಗಿ ಅನಂತನ ಮಡಿಲಿನಲ್ಲಿ ಕುಳಿತು ಮಾತನಾಡಿ ಸುತ್ತಿದ್ದಳು. ಕಾಫಿ ತಂದು ಕುಡಿಸುತ್ತಿದ್ದಳು.

ಉಪಾಯ ಫಲಿಸಿತು. ಮೂಕನಾಗಿದ್ದ ಅನಂತ ಮಾತನಾಡಿದ. ಅವನ ಮನಸ್ಸು ಸ್ಥಿಮಿತವಾಗ 'ತೊಡಗಿತು. ಒಂದು ದಿನ ಜಗುಲಿಯ ಮೇಲೆ ಅನಂತ ಕಾಣಲಿಲ್ಲ. ಏನಾದನೋ ಎಂದು ವಾಣಿಯ ತಾಯಿ ಹೆದರಿದರೂ, ವಾಣಿಯ ತಂದೆಗೆ ಮಾತ್ರ ಏನೋ ನಂಬಿಕೆ ಅವನು ಸರಿಹೋಗಿರಬೇಕೆಂದು.

* * *

ಹದಿನೈದು ಇಪ್ಪತ್ತು ದಿನಗಳ ಮೇಲೆ ಗಡ್ಡ, ಮೀಸೆ, ತಲೆ ಎಲ್ಲವನ್ನೂ ಬೋಳಿಸಿಕೊಂಡು ಶುಭ್ರವಾದ ಪಂಚೆ ಉಟ್ಟು, ಒಂದು ಟವಲು ಮಾತ್ರ ಹೊದೆದ ಅನಂತ ಮನೆಗೆ ಬಂದು-'ಅಮ್ಮ' ಎಂದು ಕರೆದಾಗ, ನಿಜಕ್ಕೂ ಆತನ ತಾಯಿ ಯಾರೋ ಬಡಬ್ರಾಹ್ಮಣ ಭಿಕ್ಷಕ್ಕೆ ಬಂದಿದ್ದಾನೆ ಎಂದುಕೊಂಡರು. ಆದರೆ ಎರಡೂ ಕೈ ಮುಂದೆ ಚಾಚಿ ಓಡಿ ಬಂದು-"ಅಮ್ಮಾ, ನಾನ್ಮ ಅನಂತು" ಎಂದು ಕಾಲಿಗೆ ನಮಸ್ಕಾರ ಮಾಡಿದಾಗ ತಬ್ಬಿಬ್ಬಾದರು ಆಕೆ.

ಮುಂದೆ ಏನೂ ಮಾತನಾಡದೆ ನೇರಾಗಿ ತನ್ನ ಕೋಣೆ ಸೇರಿದ ಅನಂತ. ಅಂದಿನಿಂದ ಅನಂತನ ದಿನಚರಿ ಬದಲಾಯಿತು. ಅವನ ಮೌನ ಜಾಸ್ತಿಯಾಯಿತು.

ಶಾಸ್ತ್ರಕ್ಕೆ ಊಟ ತಿಂಡಿ. ಯಾವಾಗಲೂ ಓದು, ಏನು ಓದುತ್ತಾನೋ ತಾಯಿಗೆ ತಿಳಿಯದು, ತಂದೆಗೆ ಬೇಕಿಲ್ಲ, ಇಬ್ಬರಿಗೂ ತಿಳಿದದ್ದು ಮಾತ್ರ ಕಾರು ಈಗ ಮನೆಗೆ ಮತ್ತೆ ಭೂಷಣವಾಗಿದೆ ಎಂದು.

ಈಗ ಲಕ್ಷಣವಾಗಿದ್ದಾನೆ ಅನಂತ. ಧೀರ ಗಂಭೀರ ವ್ಯಕ್ತಿಯಾಗಿದ್ದಾನೆ. ಒಂದು ಬೆಳಗ್ಗೆ ಎದ್ದು-"ಅಮ್ಮಾ, ಹಳ್ಳಿಗೆ ಹೋಗಿ ಬರ್ತೀನಿ" ಎಂದು ಹೊರಟುಹೋದವನು ಒಂದು ವಾರ ಹಿಂತಿರುಗಿ ಬರಲಿಲ್ಲ. ಹಿಂತಿರುಗಿ ಬಂದಾಗ ಅವನ ಮುಖದಲ್ಲಿ ಒಂದು ತೃಪ್ತಿ, ಸಾತ್ವಿಕತೆ ಎದ್ದು ಕಾಣುತ್ತಿತ್ತು. ಆದರೆ ಒಂದೆರಡು ಬಾರಿ ಅವನು ಹೋಗಿ ಬಂದಮೇಲೆ ವರದರಾಯರಿಗೆ ತಿಳಿದು ಬಂತು, ಈಗ ಅನಂತ ಹಳ್ಳಿಯ ರೈತರಿಗೆ

ಆತ್ಮೀಯನಾಗಿದ್ದಾನೆ ಎಂದು.

ವರದರಾಯರು ತಮ್ಮ ರೀತಿಯಿಂದ ಗೌರವಾದರಗಳನ್ನು ಪಡೆದಿದ್ದರೆ ಅನಂತ ತನ್ನ ಸಾತ್ವಿಕತೆಯಿಂದ ಪ್ರೀತಿ ಗೌರವಗಳನ್ನು ಗಳಿಸಿದ. ಬಡವರ ನೋವಿಗೆ ಸ್ಪಂದಿಸತೊಡಗಿತು ಅವನ ಪರಿವರ್ತಿತ ಹೃದಯ ತಾಯಿ ಸಂತೋಷಪಟ್ಟಳು. ತಂದೆ ಹೆಮ್ಮೆ ಪಟ್ಟರು. ತಮ್ಮ ಮಗ ಅಯೋಗ್ಯನಲ್ಲ ಎಂದು ತಿಳಿದಾಗ ಅವರಿಗಾದ ಸಂತೋಷ, ತೃಪ್ತಿ ವರ್ಣಿಸಲಸದಳ. ಈ ಪರಿವರ್ತನೆಗೆ ಕಾರಣ ಮಾತ್ರ ತಂದೆ ತಾಯಿಗಳಿಗೆ ತಿಳಿಯಲಿಲ್ಲ.

ಈಗ ಜಮೀನಿನ ಆಗುಹೋಗು, ಹಣಕಾಸು ಎಲ್ಲಾ ಅನಂತನ ಕೈಗೆ ಬಂದಿದೆ ವೃಥಾ ಒಂದು ಕಾಸೂ ಖರ್ಚು ಮಾಡುವವನಲ್ಲ. ಆದರೆ ದೇಹಿ ಎಂದವರಿಗೆ ಎರಡೂ ಕೈಯೆತ್ತಿಕೊಟ್ಟುಬಿಡುತ್ತಾನೆ ಇದೆಲ್ಲದರ ವಿಷಯ ತಂದೆಗೆ ಗೊತ್ತು ಆದರೂ ಅನಂತನ ಸದ್ವ್ಯತ್ತಿಯ ಬಗೆಯಲ್ಲಿ ತಲೆ ತೂರಿಸಿದವರಲ್ಲ

ವಯಸ್ಸು ಕಳೆದಂತೆ ವಕೀಲ ವೃತ್ತಿಯಲ್ಲಿ ಕಡಿಮೆ ಆಸಕ್ತಿ ವಹಿಸುತ್ತಿರುವ ವರದರಾಯರಿಗೆ ಈಗ ನಿರ್ಯೋಚನೆ ಅನಂತ ಮುಟ್ಟಿದ್ದು ಚಿನ್ನವಾಗುತ್ತಿದೆ

ಒಂದು ದಿನ ಅನಂತ - "ಅಪ್ಪ ಇವತ್ತು ಸಾವಿರ ರೂ ನನ್ನ ಸ್ವಂತಕ್ಕಾಗಿ ಬೇಕಿತ್ತು" ಎಂದ, ಮೆಲುವಾಗಿ ಸಂಕೋಚದಿಂದ.

"ತೆಗೆದುಕೊ" ಎಂದರು ಕ್ಲುಪ್ತವಾಗಿ ಏಕೆ ಎನ್ನಲಿಲ್ಲ ಆತ

"ಯಾಕೇಂತ ಕೇಳೋಲ್ವೇನಪ್ಪ?"

ಆಶ್ಚರ್ಯದಿಂದ ತಲೆಯೆತ್ತಿ ನೋಡಿದರು ತಂದೆ ಮಗನ ಗುಣದಿಂದ ಪುಳಕಿತ ರಾಗುತ್ತಿದ್ದರು "ನೀನು ವೃಥಾ ಹಾಳು ಮಾಡೋಲ್ಲ ಅಂತ ನನಗೆ ಗೊತ್ತು ಅನಂತು ಸದ್ವಿನಿಯೋಗ ಮಾಡೋಕೆ ಅಪ್ಪಣೆ ಯಾಕೆ ? ನನ್ನನ್ನ ಕೇಳ್ದೇನೇ ನೀನು ತೊಗೋ ಬಹುದಿತ್ತು ಅದು ನಿನ್ನ ಸ್ವಂತಕ್ಕೆ ಅಲ್ಲ ಅಂತಾನೂ ನನಗೆ ತಿಳಿದಿದೆ"ಎಂದರು

"ನನ್ನಲ್ಲಿ ಅಷ್ಟು ನಂಬಿಕೆ ಬಂತೇನಪ್ಪ? " ಎಂದು ಸಾಧುವಾಗಿ

ಎದ್ದು ಬಂದು ಎದುರಿಗೆ ನಿಂತ ಅನಂತನನ್ನು ಹಗುರವಾಗಿ ತಬ್ಬಿ ಹಿಡಿದು "ಅನಂತೂ, ಚಿಕ್ಕಂದಿನ ಅನಂತನೇ ಬೇರೆ, ಈಗಿನ ನೀನೇ ಬೇರೆ ನೀನು ನನಗಿಂತ ಯೋಗ್ಯನಾಗಿ, ಕೀರ್ತಿವಂತನಾಗಿ ಬಾಳ್ತಿ, ಬಾಳ್ಬೇಕೂಂತ ನನ್ನ ಆಶೀರ್ವಾದ "ಎಂದು ಕಬ್ಬಿಣದ ಪೆಟ್ಟಿಗೆಯ ಬೀಗದ ಕೈ ಅವನಿಗೆ ಕೊಟ್ಟು -"ಇನ್ನು ಮೇಲೆ ನೀನು ನನ್ನನ್ನು ಏನೂ ಕೇಳೋದು ಬೇಡ ಸಮಸ್ತ ವಹಿವಾಟೂ ನಿನ್ನದೇ ಆಗಲಿ"ಎಂದು ಬೆನ್ನು ತಟ್ಟಿದರು.

"ಅಪ್ಪ, ಆದರೂ ಇಪ್ಪತ್ತು ಸಾವಿರ...."ಎಂದು ತನ್ನ ಬದುಕಿನ ಅಧ್ಯಾಯವನ್ನು ತಿರುವಿಹಾಕಿದ,

ವಾಣಿಯ, ಅವಳ ತಂದೆಯ ಬಗ್ಗೆ ಎಲ್ಲಾ ಹೇಳಿದ.

"ಅವರಿಗೆ ಇದು ನನ್ನ ಋಣದ ಕಾಣಿಕೆಯಾಗಿ.. "ಎಂದು ನಿಲ್ಲಿಸಿಬಿಟ್ಟ

ವರದರಾಯರು ಅವಾಕ್ಕಾದರು. ಹೀಗೂ ಸಾಧ್ಯವೆ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡರು ಒಂದು ಕ್ಷಣದ ನಂತರ ತಮ್ಮ ಅಚ್ಚರಿಯಿಂದ ಚೇತರಿಸಿ ಕೊಂಡು, ಏನೂ ಮಾತನಾಡದೆ ತಮ್ಮ ಪರಮ ಯೋಗ್ಯ ಮಗನ ಬೆನ್ನನ್ನು ತೃಪ್ತಿಯಿಂದ ನೇವರಿಸಿ - "ನಡೆಸು ಅನಂತು ನಿನ್ನಿಂದ ಅವಿರತವಾಗಿ ಸತ್ಕರ್ಮಗಳು ನೆರವೇರಲಿ" ಎಂದು ತುಂಬಿ ಬಂದ ಕಣ್ಣನ್ನು ಒರೆಸಿಕೊಂಡರು

* * *

ಅನಂತ ಅನಂತರಾವ್ ಆಗಿದ್ದಾನೆ ಈಗ ವರದರಾಯರ ಮಗನೆಂದು ಅವನನ್ನು ಗುರುತಿಸಬೇಕಿಲ್ಲ ಊರಿನ ಯಾವ ಸೇವಾ ಕಾರ್ಯದಲ್ಲೂ ಯುವಕ ಅನಂತನ ಬೆಂಬಲವಿದೆ ಸಂಘ ಸಂಸ್ಥೆಗಳಲ್ಲಿ ಗಣ್ಯ ಅನಂತರಾಯರ ಸದಸ್ಯತ್ವವಿದೆ ಬೇಜವಾಬ್ದಾರಿಯ ಹುಡುಗು ಅನಂತ, ಬಾಧ್ಯತೆಗಳ ಅರಿವುಳ್ಳ ಯುವಕನಾಗಿದ್ದಾನೆ

ಅವನನ್ನು ಸಂಸಾರವಂದಿಗನನ್ನಾಗಿ ಮಾಡಬೇಕೆಂದು ತಾಯಿ ತಂದೆಯರ ಹಂಬಲ ಅವನ ಸುಖಕ್ಕಾಗಿ ಎಂಬುದು ಒಂದು ಅಭಿಪ್ರಾಯವಾದರೆ, ವಂಶವೃದ್ಧಿಯಾಗಬೇಕೆಂಬ ಪ್ರಬಲ ಆಸೆ ಮತ್ತೊಂದು ವಿಷಯವನ್ನು ಮಡದಿಗೇ ಬಿಟ್ಟು ನಿಶ್ಚಿಂತೆಯಾಗಿದ್ದರು ವರದರಾಯರು

ಒಂದು ದಿನ ಅದೇತಾನೆ ಹಳ್ಳಿಯಿಂದ ಹಿಂತಿರುಗಿದ್ದ ಅನಂತನನ್ನು ತಾಯಿ - "ಅನಂತೂ ಎಷ್ಟು ದಿನ ಹೀಗೆ ಒಂಟಿಯಾಗಿ ಅಲೆದಾಡ್ತಿ?" ಎಂದರು ಸೂಚ್ಯವಾಗಿ

ಸೂಕ್ಷ್ಮ ತಿಳಿದ ಅನಂತ ಮೆಲುವಾಗಿ ನಕ್ಕು -"ನೀ ಏನು ಹೇಳೋಕೆ ಪೀಠಿಕೆ ಹಾಕ್ತಿದ್ದೀ ಅಂತ ಗೊತ್ತಮ್ಮ ನೀ ಹೇಳಿದ ಹುಡುಗೀನ ಮದ್ವೆ ಆಗ್ತೀನಿ" ಅಂದು ಬಿಟ್ಟ. ಮಗನ ಸೂಕ್ಷ್ಮ ಬುದ್ಧಿಗೆ ಆಕೆ ಆನಂದಪಟ್ಟರು ಮತ್ತೆ ನಮ್ಮಿಷ್ಟ ಮಾತ್ರ ಮುಖ್ಯ ಅಲ್ಲಪ್ಪ, ನೀನು ಮುಖ್ಯವಾಗಿ"-ಎಂದು ಅವರಿನ್ನೂ ಹೇಳುತ್ತಿದ್ದಾಗಲೇ "ನನ್ನ ಇಷ್ಟವೂ ಮುಖ್ಯ ಅಲ್ಲಮ್ಮ. ಈ ಮನೆಯ ಮನೋಭಾವಗಳಿಗೆ ಸರಿಯಾಗಿ ಮನೆತನದ ಕರ್ತವ್ಯ ನೆರವೇರಿಸೋ ಮನಸ್ತತ್ವ ಇರೋ ಹುಡುಗಿ ಆದ್ರೆ ಸಾಕು ಅಂಥಾ ಹುಡುಗಿ ದೃಷ್ಟೀಲಿದ್ರೆ ನೋಡು" ಎಂದು ವಿಷಯ ಮುಗಿಸಿದ್ದ.

ಮಗನ ದೃಷ್ಟಿಕೋನಕ್ಕೆ ತಲೆದೂಗಿದರು ರಾಯರು. ಅವರಿಗೆ, ಅರಕೆರೆ ಸುಬ್ಬರಾಯರ ಮಗಳು ನಾಗಮಣಿಯಾದರೆ ಸರಿಹೋಗಬಹುದೆನಿಸಿತು. ಅಷ್ಟೇನೂ ಎತ್ತರವಿಲ್ಲದ ಅನಂತನಿಗೆ ಅವಳೇ ಸರಿ ಅಲ್ಲದೆ ತಮ್ಮ ಮನೆತನಕ್ಕೆ ಸರಿಯಾಗಿ ನಿಲ್ಲಬಲ್ಲುದು ಅರಕೆರೆಯವರದು. ಇದಕ್ಕೂ ಮಿಗಿಲಾಗಿ ಅವಳೊಬ್ಬಳೇ ಸಂತಾನ ಸುಬ್ಬರಾಯರಿಗೆ ಎಂಬ ವಿಷಯದಿಂದ ಇನ್ನೂ ಹೆಚ್ಚು ಆಕರ್ಷಿತರಾಗಿದ್ದಾರೆಂಬ

ವಿಷಯವನ್ನು ತಳ್ಳಿ ಹಾಕುವಂತಿರಲಿಲ್ಲ.

"ಅನಂತೂ, ನಿನಗೆ ಅರಕೆರೆ ಸುಬ್ಬರಾಯರು ಗೊತ್ತಲ್ಲ?"

"ಗೊತ್ತಪ್ಪ"

"ಅವರ ಮನೆಗೆ ಯಾವಾಗ್ಲಾದ್ರೂ ಹೋಗಿದ್ದೀಯ?"

"ಇಲ್ಲ, ನಮ್ಮ ಹಳ್ಳೀಲೇ ಅವರ ಭೇಟಿ ಆಗಿತ್ತು ಅಷ್ಟೆ. ಯಾಕಪ್ಪ?"

"ಅವರಿಗೆ ಮೈ ಹುಷಾರಿಲ್ಲವಂತೆ. ನಮಗೆ ತುಂಬಾ ಬೇಕಾದವರು ಅವರು. ಹೋಗಿ ನೋಡಿ ಬರೋಣ ಅಂದ್ರೆ ನನಗೆ ಸಾಧ್ಯವಿಲ್ಲ ಈ ಸಲ ಹಳ್ಳಿಗೆ ಹೋದಾಗ, ಹಾಗೇ ಅಲ್ಲಿಗೂ ಹೋಗಿ ಅವರನ್ನು ನೊಡ್ಕೊಂಡು ಬಾ ಅಂತ ಅಷ್ಟೆ."

"ಹಾಗೇ ಆಗಲಿ"ಎಂದು ಸಿದ್ಧ ಉತ್ತರಕೊಟ್ಟ, ವಿಧೇಯ ಅನಂತು.

ತಂದೆಯ ಇಷ್ಟದ ಮೇರೆಗೆ ಅನಂತು ಅರಕೆರೆಗೆ ಹೋದಾಗ, ಸುಬ್ಬರಾಯರಿಗೆ ಅಂತಹ ಅನಾರೋಗ್ಯವೇನೂ ಆಗಿರಲಿಲ್ಲ ಆದರೆ ತಂದೆಗಿಂತ ಚಿಕ್ಕವರಾದರೂ ಬಹಳ ವೃದ್ಧರಂತೆ ಕಾಣುತ್ತಿದ್ದರು. ಅವರ ಪತ್ನಿ ಸುಬ್ಬಮ್ಮ ಮತ್ತು ಮಗಳು ನಾಗಮಣಿ ಬಹಳ ಆದರದಿಂದ ಉಪಚಾರ ಮಾಡಿದರು.

ಅನಂತನಿಗೆ ತಂದೆಯ ಈ ಯೋಚನೆಯ ಅರ್ಥವಾಯಿತು ಮನೆಗೆ ಬಂದ ಕೂಡಲೆ ತಾಯಿಯ ಬಳಿ "ಸುಬ್ಬರಾಯರಿಗೆ ಏನೂ ಕಾಯಿಲೆ ಇಲ್ಲಮ್ಮ. ನಾನು ನಾಗಮಣೀನ್ನ ಒಪ್ಪಿದ್ದೀನಿಂತ ಅಪ್ಪಂಗೆ ಹೇಳಿಬಿಡಮ್ಮ"ಎಂದು ಗಟ್ಟಿಯಾಗೇ ನಕ್ಕು ಬಿಟ್ಟ. ತಾಯಿಯೂ ಪತಿಯ ಮನದಲ್ಲಿದ್ದುದನ್ನು ತಿಳಿದವರಾದ ಕಾರಣ ಮಗನೊಂದಿಗೇ ನಗುತ್ತಾ

"ನಿಂಗೆ ಹೇಗೆ ಗೊತ್ತಾಯಿತೋ?"ಎಂದರು.

"ನಾನು ವಕೀಲ ವರದರಾಯರ ಮಗನಲ್ವೇನಮ್ಮ?"ಎಂದು ಸಂತುಷ್ಟಿಯಿಂದ ನಕ್ಕ ಮತ್ತೊಮ್ಮೆ

ಅನಂತ-ನಾಗಮಣಿಯವರ ವಿವಾಹ ವಿಜೃಂಭಣೆಯಿಂದ ನಡೆಯಿತು.

ನಾಗಮಣಿ ಅನಂತನ ವಿಶ್ವಾಸಪಾತ್ರ ಗೃಹಿಣಿಯಾದಳು. ನಾಗಮ್ಮ ವರದ ರಾಯರ ಅಚ್ಚುಮೆಚ್ಚಿನ ಸೊಸೆಯಾದಳು. ನಾಗು ಅತ್ತೆಗೆ ಮಗಳಾದಳು.

ವರದರಾಯರ ತೃಪ್ತಿಯ ಬಟ್ಟಲು ತುಂಬಿತ್ತು. ತುಂಬುಜೀವನ ನಡೆಸಿದ ರಾಯರು ಮಗನ ಅಭ್ಯುದಯ ಕೋರುತ್ತಲೇ ಸಂತೃಪ್ತಿಯಿಂದ ಕಣ್ಣು ಮುಚ್ಚಿದರು.

ಅತ್ತೆ ಸೊಸೆಯರು ಬಹಳ ಹೊಂದಾಣಿಕೆಯಿಂದ ಅನಂತುವಿಗೆ ಎರಡು ಭುಜಗಳಂತೆ ನಿಂತರು. ಮನೆ ಅನ್ನಛತ್ರವಾಯಿತು. ವಿದ್ಯಾರ್ಥಿನಿಲಯವಾಯಿತು. ಬೆಂಗಳೂರಿನ ಅನಂತರಾಯರು ಮನೆಮಾತಾದರು. ಬಡಬಗ್ಗರ ನಿರಂತರ ಗಣಿಯಾದರು.

ಎರಡು ಹೇರಳ ಆಸ್ತಿಗಳ ವಾರಸುದಾರರಾದ ಅನಂತರಾಯರಿಗೆ ಅದರ ಬಗೆಗೆ ಹೆಮ್ಮೆಯಿಲ್ಲ. ಆದರೆ ಪರೋಪಕಾರ ಮಾಡುವ ಅವಕಾಶಕ್ಕಾಗಿಯೇ ತಮ್ಮಲ್ಲಿಷ್ಟು ಸಂಪತ್ತು ಸೇರಿದೆ ಎಂಬ ತೃಪ್ತಿ ಮಾತ್ರ ಲಭಿಸಿತು. ಬಿಚ್ಚುಗೈಯಿನ ಅನಂತರಾಯರಿಗೆ ದೇವರು ಸಮೃದ್ಧಿಯನ್ನು ದಯಪಾಲಿಸಿದ.

ನಾಲ್ಕು ವರ್ಷಗಳ ನಂತರ ನಾಗಮಣಿ ವಂಶೋದ್ಧಾರಕನ ಬರವಿಗೆ ಎದುರು ನೋಡುವಂತಾಯಿತು ಈಗ ಅವಳು ಕೆಲಸ ಮಾಡಲು ಶಕ್ತಳಲ್ಲ. ತಾಯಿ ಮುದುಕರಾದರು. ಮನೆಗೆ ಅಡಿಗೆಭಟ್ಟನ ಪ್ರವೇಶ ವಾಯಿತು. ಆದರೂ ನಿಭಾಯಿಸ ಲಾರದ ಅವರ ಅನ್ನಛತ್ರ ಮನೆಯಿಂದ ಬೇರ್ಪಡೆಯಾಯಿತು. ಪರವೂರುಗಳಿಂದ ಬಂದು ಅನ್ನಕ್ಕೆ ಒದ್ದಾಡುತ್ತಿದ್ದ ಬಡವ ಬಂಧುಗಳಿಗಾಗಿ ಬೇರೆ ಮನೆಯೇ ಮಾಡಿದರು ಅಡಿಗೆ ಏರ್ಪಾಟುಗಳನ್ನೂ ಮಾಡಿಸಿದರು. ಹಾಗೆಯೇ ಮನೆಯಲ್ಲಿ ಊಟಮಾಡಿ ಓದಿಕೊಳ್ಳುತ್ತಿದ್ದ ವಿದ್ಯಾರ್ಥಿಗಳಿಗಾಗಿ "ವಾಣಿ ವಿದ್ಯಾರ್ಥಿನಿಲಯ" ರೂಪ ತಳೆಯಿತು.

ರಾಯರು ಏನೇ ಮಾಡಲಿ, ಅದರ ಹಿಂದಿನ ಹೆಸರು ವಾಣಿ ಅಂದು ಇಪ್ಪತ್ತು ಸಾವಿರ ಕಾಣಿಕೆಕೊಟ್ಟ ರಾಯರು, ಈಗ ವಾಣಿಯ ತಂದೆಗೆ ಬೆಂಗಳೂರಿನಲ್ಲೇ ಮನೆ ಕಟ್ಟಿಸಿಕೊಟ್ಟರು ರಾಣಿಯ ಮದುವೆಗೆ ಹಿರಿಯರಾಗಿ ನಿಂತು ನಡೆಸಿಕೊಟ್ಟರು ಆದರೂ ಋಣ ಉಳಿದುಬಿಟ್ಟದೆಯೆಂಬ ಭಾವನೆ ಮಾತ್ರ ಅವರಿಂದ ಅಳಿಸಿಹೋಗಲಿಲ್ಲ.

ಸುಮಾರು ೪೦ ವಿದ್ಯಾರ್ಥಿಗಳಿಂದ ತುಂಬಿದ್ದ 'ವಾಣಿ ವಿದ್ಯಾರ್ಥಿನಿಲಯ' ಊರಿನ ಆದರ್ಶ ಮಂದಿರ. ಸಣ್ಣ ತರಗತಿಯಿಂದ ಹಿಡಿದು ಡಿಗ್ರಿ ತರಗತಿಗಳವರೆಗಿರುವ ಹುಡುಗರು ಉಚಿತ ಊಟ, ನೆಲೆ, ಫೀಜುಗಳನ್ನು ರಾಯರಿಂದ ಪಡೆದು ವಿದ್ಯೆ ಪಡೆಯುತ್ತಿದ್ದರು. ಅಲ್ಲಿನ ವಿದ್ಯಾರ್ಥಿಗಳು ಎಂದರೆ ಯೋಗ್ಯರು, ಸಾಹಸಿಗಳೆಂಬ ಹೆಸರು ಬಂದಿತ್ತು. ಅದು ರಾಯರ ಪವಿತ್ರ ಆದರ್ಶ ಜೀವನದ ಕನ್ನಡಿ, ರಾಯರ ತೃಪ್ತಿಯ ಕಳಶವೆಂದರೆ ತಮ್ಮ ಹುಡುಗರು ಎಲ್ಲೆಲ್ಲೂ ಹೆಸರು ಗಳಿಸುತ್ತಿದ್ದುದು, ಹುದ್ದೆಗಳಲ್ಲಿ ಉನ್ನತಿಗೇರುತ್ತಿದ್ದುದು.

ಮನೆಯಲ್ಲಿ ಜನ ಕಡಿಮೆ, ತಾವು, ತಮ್ಮ ತಾಯಿ, ಪತ್ನಿ ಮತ್ತು ಆಗಲೇ ಕಣ್ಣು ಬಿಟ್ಟಿದ್ದ ಅಚ್ಚೆಯ ಶಿಶು ವೇಣುಮಾಧವ್.

ವೇಣುಮಾಧವ್'ಆ ಹೆಸರು ನೆನೆಸಿಯೇ ರಾಯರಿಗೆ ಮೈನವಿರೆದ್ದಿತು. ಅವನು ಇಂದಿನಷ್ಟು ಮನುಷ್ಯನಾಗಬೇಕಾದರೆ ತಾವು ಪಟ್ಟ ಪಾಡೆಷ್ಟು. ಅದನ್ನು ನೆನೆಸಿಕೊಳ್ಳಲೂ ಇಷ್ಟವಿಲ್ಲ ಅವರಿಗೆ. ಇಂದು ಅವನನ್ನು ಕಂಡವರು ಅವನ ಅನಾರೋಗ್ಯ ಏನು ಬಲ್ಲರು. ಅಂತಹ ಆಕರ್ಷಣೀಯ ಕಾಯ ಇಂದಿನ ವೇಣುಮಾಧವನದು.

ತಾವು ಇಂಟರ್ ಸಹ ಪಾಸುಮಾಡಲಿಲ್ಲವಾದರೂ ತಮ್ಮ ಮಗ ಡಾಕ್ಟರೇಟ್ ಪಡೆದಿದ್ದಾನೆ.

ಇದು ಎಷ್ಟು ತೃಪ್ತಿಯ ಸಂಗತಿ! ವೇಣು ತಮ್ಮ ವೇಣು, ತಮಗಿಂತಲೂ ಯೋಗ್ಯನಾಗಬೇಕು ತಮ್ಮ ತಂದೆ ತಮ್ಮನ್ನು ಹಾಗೇ ಹರಸಿದ್ದರು. ಅದೇ ಹರಕೆಯೇ ತಮ್ಮದೂ ಸಹ

ಇದ್ದಕ್ಕಿದ್ದಂತೆ ನಕ್ಕರು ರಾಯರು ತಾವು 'ವೇಣು'ಎಂದಾಗಲೆಲ್ಲ ನಾಗು 'ಮಾಧೂ' ಎನ್ನುತ್ತಾಳೆ ಎಂಬ ವಿಷಯ ನೆನಪಾಗಿ ನಕ್ಕದ್ದು ಅವನಿಗೆ ಹೆಸರಿಡುವಾಗ

ನೋಡು ನಾಗು, ಹುಡುಗಿ ಆಗಿದ್ದರೆ 'ವಾಣಿ' ಅಂತಲೇ ಇಡ್ತಿದ್ವೆ, ಅದರ ಹಾಗೇ ವೇಣು`ಇರಲಿ"ಎಂದು ನಿರ್ಧಾರವಾಗಿ ಹೇಳಿದ್ದರು ರಾಯರು

'ನಂಗೇನೋ 'ಮಾಧವ' ಅಂತ ಇಡ್ಬೇಕು ಮುದ್ದಾಗಿ'ಮಾಧೂ'ಅಂತ ಕೂಗ್ಬೇಕೂಂತ ಆಸೆ ಸರಿ ನಿಮ್ಮಿಷ್ಟ"ಎಂದು ನಿರಾಸೆಯಿಂದ ನುಡಿದಿದ್ದಳು ನಾಗು ಹಾಗೆಂದು ಅವಳೇನೂ ಮಗುವನ್ನು ವೇಣು ಎಂದು ಕರೆಯಲಿಲ್ಲ ಮಗು ಧ್ವನಿ ಗುರುತಿಸುವಷ್ಟು ಆಗುವ ವೇಳೆಗೆ ತಾವು'ವೇಣು'ಎಂದೇ ಕರೆದರೂ, ನಾಗೂ ಮಾತ್ರ 'ಮಾಧೂ'ಎಂದೇ ಕರೆಯತೊಡಗಿದಳು

ಒಮ್ಮೆ ಅಕ್ಕ ಯಶೋದಾ ಬಂದಾಗ- ' ಏನೋ ಇದು ಅನಂತೂ ತಮಾಷೆ?ಮಗೂಗೆ ಒಂದು ಹೆಸರೂ ಸಾಲದೇನೋ ಹೋಗಲಿ ಒಳ್ಳೇದಾಯ್ತು ಬಿಡು ಎರಡೂ ಸೇರಿ'ವೇಣುಮಾಧವ' ಅಂತ ಕರೆದುಬಿಡ್ರಿ, ಸರಿಹೋಗುತ್ತೆ"ಎಂದುಬಿಟ್ಟಳು

ಅಂದಿನಿಂದ ಮಗು 'ವೇಣುಮಾಧವ್ ಆದ

* * *

ರಾಯರ ದೃಷ್ಟಿ ಮತ್ತೆ ಗಡಿಯಾರದ ಕಡೆಗೆ ಹೋಯಿತು ಗಂಟೆ ಹನ್ನೆರಡೂ ಕಾಲು, ಇನ್ನೇನು ಬರಬಹುದೇನೋ ವೇಣು ಎಂದು ಸುಮಳ ಆಸರೆಗೆ ಕಾಯದೆ ತಾವೇ ನಿಧಾನವಾಗಿ ನಡೆದು ಹಾಲಿನೊಳಕ್ಕೆ ಬಂದರು

ನಾಗಮ್ಮ, ಸುಮ ಹೂಕಟ್ಟಿ ಮುಗಿಸಿದ್ದರು ಸುಮ ತನ್ನ ಕೋಣೆ ಸೇರಿದ್ದಳು ನಾಗಮ್ಮ ದೇವರ ದೀಪಗಳಿಗೆ ಇನ್ನೂ ಸ್ವಲ್ಪ ಎಣ್ಣೆ ಹಾಕಿ, ದೇವರಿಗೆ ತಾವು ಕಟ್ಟಿದ್ದ ಮಾಲೆ ಏರಿಸುತ್ತಿದ್ದರು

ರಾಯರು ಬಾಗಿಲ ಕಡೆಗೆ ಕಾಣುವಂತಿದ್ದ ಕುರ್ಚಿಯಲ್ಲಿ ಕುಳಿತು ಅತ್ತಲೇ ದೃಷ್ಟಿ ತೇಲಿಸಿದರು ಸ್ವಲ್ಪ ತಲೆಯೆತ್ತಿ ನೋಡಿದಾಗ, ವಾಣಿ ಭಾವಚಿತ್ರದಿಂದ ನಗುತ್ತಿದ್ದಳು. ಇಷ್ಟು ದಿನವಾದರೂ ವಾಣಿಯ ಕುರಿತಾಗಿ ವೇಣುವಿಗೆ ತಿಳಿಯದು ನಾಗುವೂ ಅದನ್ನೇನೂ ಅವನಿಗೆ ಬಿಡಿಸಿ ಹೇಳಬಾರದೆಂದು ಆಣತಿ ಮಾಡಿದ್ದರು. ಎಂದಾದರೂ ಹೇಳುವುದು, ಆದರೆ ಈಗಲ್ಲ. ಅಂತಹ ಸಮಯ ಸಂದರ್ಭ ಬಂದಾಗ ಹೇಳಿದರಾಯಿತು ಅವನು ಬಹುಶಃ ಊಹಿಸಿರಬೇಕು ಅದು ತನ್ನ ತಾಯಿತಂದೆಯರ ಮೊದಲ ಕೂಸಿರಬೇಕೆಂದು, ಅದರ ನೆನಪನ್ನು ಅವರು ಕೆದಕಲು ಇಷ್ಟಪಡುವುದಿಲ್ಲವೆಂಬ ಭಾವನೆಯೇ ಅವನಲ್ಲಿರಲಿ

ಆದರಿಂದ ತಪ್ಪೇನು ಎಂದುಕೊಂಡರು

ಪಕ್ಕಕ್ಕೆ ನೋಡಿದಾಗ, ನಾಗು ನೆರಿಗೆ ಚಿಮ್ಮುತ್ತಾ ಅಡುಗೆಮನೆಯಿಂದ ಹೊರಬರುತ್ತಿದ್ದಳು

ಕಾರು ಬಂದು ನಿಂತ ಶಬ್ದವಾಯಿತು ರಾಯರು ಸಂಭ್ರಮದಿಂದ ಎದ್ದು ನಿಂತರು

೨

ವಿಮಾನ ಬಂದು ಏರ್‌ಪೋರ್ಟಿನಲ್ಲಿ ನಿಂತಾಗ ವೇಣುವಿಗೆ ಕಾತರ ಸಹಿಸ ದಾಯಿತು ಆದಷ್ಟು ಬೇಗ ಇಳಿದು ತಾಯಿ ತಂದೆಯರನ್ನು ಕಾಣಬೇಕೆಂಬ ಉತ್ಕಟ ಹಂಬಲ ಸರಸರ ಮೆಟ್ಟಿಲಿಳಿದು ನಡೆದು ಬಂದ ಅವನನ್ನು ಇದಿರುಗೊಳ್ಳಲು ದೊಡ್ಡ ಗುಂಪೇ ಸೇರಿತ್ತು ಆದರೆ-

ಅವನು ಬಯಸಿದ ಎರಡೂ ಮುಖಗಳು ಕಾಣಲಿಲ್ಲ ಮನಸ್ಸು ಮುದುರಿತು ಅಣ್ಣ ಅಮ್ಮ ಯಾಕೆ ಬರಲಿಲ್ಲ’ಕಡೆಯ ಪಕ್ಷ ಅಣ್ಣ ಒಬ್ಬರಾದರೂ ಬರಬೇಕಿತ್ತಲ್ಲ ಏನಾಯ್ತೊ’ಹುಷಾರಿಲ್ವೋ ಏನೋ ಅಥವಾ ಒಂದು ವೇಳೆ ದಾರೀಲಿ ಕಾರೇನಾದ್ರೂ ಮೊದಲೇ ಅಣ್ಣ ಕಾರು ಹತ್ತೋಕ್ಕೆ ಇಷ್ಟಪಡೋಲ್ಲ, ವಿಧಿಯಿಲ್ಲದ ಹೊರತು ತಾವಂತೂ ಡ್ರೈವ್ ಮಾಡೋಲ್ಲ ನಂಗೆ ಬರೋಲ್ಲ, ಅಂತಾರೆ ಕಲಿತ್ಕೊಳ್ಳಿ ಅಣ್ಣ ಅಂದ್ರೆ ಈಗ್ಯಾಕೆ ಹೋಗೋ, ನೀನಿದ್ದೀಯಲ್ಲ ನನಗೆ ಡ್ರೈವರ್`ಅಂತಾರೆ ತನಗೂ ವೇಗವಾಗಿ ಮಾತ್ರ ಹೋಗ್ಬಾರ್ದೂಂತ ಪದೇ ಪದೇ ಹೇಳ್ತಾರೆ ಛೀ, ಕಾರಿಗೇನೂ ಆಗಿರಲಾರದು, ಏನೋ ಬಂದಿಲ್ಲ ಎಂದು ಸಮಾಧಾನ ಹೇಳಿಕೊಂಡ

ವಿಮಾನದ ಹತ್ತಿರದಿಂದ ತನ್ನ ಗುಂಪಿನ ಬಳಿಗೆ ಬರುವ ಒಳಗಾಗಿ ಇಷ್ಟೆಲ್ಲಾ ಪೇಚಾಟ, ಸಮಾಧಾನ ನಡೆದಿತ್ತು ಅವನ ಮನದಲ್ಲಿ ನಗುವಿನ ಮುಖವಾಡ ಹಾಕಿ, ಎಲ್ಲರೂ ಹಾಕಿದ ಹೂವಿನ ಹಾರಗಳಿಗೆ ಕುತ್ತಿಗೆ ಬಗ್ಗಿಸಿದ ತನಗಾಗಿ ಮನೆಯಿಂದ ಯಾರೂ ಬಂದಿಲ್ಲವೆ’ಎಂದು ಕಣ್ಣು ಹಾಯಿಸಿದಾಗ, ಅವನ ಎತ್ತರದ ನಿಲುವಿನ ಸಹಾಯದಿಂದ ಗುಂಪಿಗೆ ದೂರದಲ್ಲಿ ನಿಂತಿದ್ದ ಬಾಲು ಕಾಣಿಸಿ ಕೈ ಬೀಸಿದ ನಗುತ್ತಾ ಮನಕ್ಕೆಷ್ಟೋ ಉಲ್ಲಾಸವಾಯಿತು.

ವಾಸುವಿನ ನಾಯಕತ್ವದಲ್ಲಿ ಬಂದಿದ್ದ ಹಾಸ್ಟೆಲಿನ ಹುಡುಗರಿಗೆಲ್ಲಾ ವಂದಿಸಿದ ವೇಣು ಕಾಲೇಜಿನ ಅವನ ಗೆಳೆಯ ವೃಂದ , ತನ್ನ ಡಿಪಾರ್ಟ್‌ಮೆಂಟಿನ ಅಧ್ಯಾಪಕರು, ವಿದ್ಯಾರ್ಥಿಗಳು ಇವರೆಲ್ಲರನ್ನೂ ನೋಡಿ , ತಾನು ಎಲ್ಲರಿಗೂ ಅಷ್ಟು ಬೇಕಾದವನೆಂದು ಅವನ ಎದೆ ಉಬ್ಬಿತು.

ಮಾಧುರಿ ಈ ಎತ್ತರದ ಶುಭಗಾತ್ರನನ್ನು ಕಂಡು ಪುಳಕಿತಳಾದಳು ತೆಳ್ಳಗಿದ್ದ ವೇಣುಮಾಧವ್, ಮೈತುಂಬಿಕೊಂಡು ಕಂಗೊಳಿಸುತ್ತಿದ್ದಾನೆಂದೆನಿಸಿತು ಮಾಧುರಿಗೆ. ನಗುತ್ತಾ ಅವಳ ಬಳಿ ಅವನು ಬಂದಾಗ ಎಚ್ಚರ ತಪ್ಪುವುದರಲ್ಲಿದ್ದಳು ಅವಳ ಕಣ್ಣುಗಳನ್ನು ಬಲವಂತವಾಗಿ ಹಿಡಿದು ನಿಲ್ಲಿಸಿದುವು. ಅವಳು

ಬಯಸಿದಷ್ಟು ಅನುರಾಗ, ಮೂರು ವರ್ಷಗಳ ನಂತರ ಭೇಟಿಯಾದ ಅಪರೂಪದ ಭಾವನೆ, ಅವನ ಕಣ್ಣುಗಳಲ್ಲಿ ಕಾಣಲಿಲ್ಲ. ತನಗಾದ ನಿರಾಸೆಯನ್ನು ತಡೆದುಕೊಂಡು "ವೆಲ್ ಕಮ್ ಟು ಪ್ರೊಫೆಸರ್" ಎಂದಳು ಸುಮ್ಮನೆ ನಕ್ಕು ಮುಂದೆ ಸರಿದ.

ಮುಂದೆ ಸತ್ಯನ್, ದೇವದಾಸ್, ರಾಮರಾವ್ ಎಲ್ಲರಿಗೂ ಕೈ ಜೋಡಿಸಿ ವಂದಿಸಿದ. ದೇವದಾಸ್ ಪಕ್ಕದಲ್ಲೇ ಅಂಟದಂತೆ ನಿಂತಿದ್ದ ಊರ್ಮಿಳೆಯನ್ನು ನೋಡಿ-'ಯಾರು?'ಎನ್ನುವಂತೆ ಕಣ್ಣಿನಲ್ಲೇ ಪ್ರಶ್ನಿಸಿದ. "ಒಬ್ಬ ಸ್ಟೂಡೆಂಟ್. ಫೈನಲ್ ಬಿ ಎಸ್ಸಿ ಮಿಸ್ ಊರ್ಮಿಳಾ." ಊರ್ಮಿಳಾ ಕೈ ಜೋಡಿಸಿದಳು.

ಎಷ್ಟೆಷ್ಟು ಬೇಗ ಎಲ್ಲರ ಶುಭಾಶಯ ಸ್ವೀಕರಿಸಿದರೂ, ಎಷ್ಟು ಶೀಘ್ರ ವಂದನೆ, ಕರಚಾಲನೆ ಮುಗಿಸಿದರೂ, ಬಾಲುವಿನ ಬಳಿಗೆ ಬರುವ ವೇಳೆಗೆ ಸುಮಾರು ಸಮಯವಾಯ್ತು

"ಬಾಲು, ನೀ ಯಾವಾಗ ಊರಿಗೆ ಬಂದೆ? ಅಣ್ಣ ಯಾಕ್ಬರ್ಲಿಲ್ಲ ಏರ್ ಪೋರ್ಟ್‌ಗೆ" ಎಂದು ಒಂದೇ ಉಸುರಿಗೆ ಕೇಳುತ್ತ ಬಾಲುವನ್ನು ತಬ್ಬಿಕೊಂಡ ವೇಣು

"ದಾರೀಲಿ ಮಾತಾಡೋಣ ಬಾ ತುಂಬಾ ಸಾಮಾನಿದ್ಯಾ?"

"ಇದೆ, ಸುಮಾರಾಗಿ "

ಒಬ್ಬೊಬ್ಬರೇ ಎಲ್ಲರೂ ಹೊರಟುಹೋದರು. ವೇಣುವೂ ತನ್ನ ಸಾಮಾನನ್ನು ಪಡೆದು ಏರ್ ಪೋರ್ಟ್ ಬಿಟ್ಟು ಹೊರಗಡೆ ಬಂದಾಗ ತನಗೆ ಚಿರಪರಿಚಿತವಾದ 'ಫಿಯಟ್' ನಿಂತಿತ್ತು. ಹತ್ತಿ ಕುಳಿತು ಹೊರಟಾಗ -"ಹುಂ ಹೇಳು ಮತ್ತೆ"ಎಂದು ಅವಸರಿಸಿದ ವೇಣು

"ಅಬ್ಬ, ಒಂದು ನಿಮಿಷ ಉಸಿರು ತೊಗೊಳ್ಳೋಕೆ ಬಿಡು ಮಹರಾಯ ಅಷ್ಟು ಜನರ ಮಧ್ಯೆ ಇದ್ದಾಗ ನಾನು ಕಣ್ಣಿಗೇ ಬೀಳಲಿಲ್ಲ, ಈ ವಿಷಯ ಜ್ಞಾಪಕ ಬರ್ಲಿಲ್ಲ ಈಗ ಮಾತ್ರ ಅವಸರ."

"ನಾ ಕಾತರದಲ್ಲಿ ಸಾಯ್ತಿದೀನಿ ಹೇಳು ಬಾಲು "

"ಮಾವಂಗೆ ಈಗ ಮೂರು ತಿಂಗಳ ಹಿಂದೆ ಹೈ ಬ್ಲಡ್ ಪ್ರೆಶರ್ ಆಗಿ ಅಟ್ಯಾಕ್ ಬಂತು ಮನೇಲಿ ಯಾರ್ದೂ ಸಹಾಯ ಇಲ್ಲಾಂತ ನನ್ನ ಕರೆಸಿದ್ರು. ಆಗ್ಲಿಂದ ನಾನು ಮಾವಂಗೆ ಡ್ರೈವರ್, ಮ್ಯಾನೇಜರ್, ಇತ್ಯಾದಿ, ಇತ್ಯಾದಿ ಈಗ ಹುಷಾರಾಗಿದ್ದಾರೆ ಆದ್ರೂ ಹೆಚ್ಚು ಓಡಾಡೋ ಹಾಗಿಲ್ಲ ಅಷ್ಟೆ."

"ನಂಗೆ ಬರೀಲೆ ಇಲ್ಲ"-ಇದು ಅನ್ಯಾಯ ಎನ್ನುತ್ತಿತ್ತು ಅವನ ದನಿ

"ಮಾವ ಬೇಡಾಂದ್ರು, ಇನ್ನೊಂದು ಮೂರು ತಿಂಗಳಿಗೆ ಬಂದೇಬಿಡ್ತಾನೆ. ಮಗೂಗೆ ಆ ವಿಷಯ ತಿಳಿಸೋದು ಬೇಡ...."

ಅವನ ಮಾತನ್ನು ತಡೆದು ವೇಣು, ಹಾಸ್ಯವಾಗಿ, ಚಕ್ರ ಹಿಡಿದು ನಡೆಸುತ್ತಿದ್ದ ಬಾಲುವಿನ ಎಡಭುಜದ ಮೇಲೆ ಹೊಡೆದ.

ಮಾತು ಬದಲಿಸಿ ಬಾಲು "ಈ ಬೀದಿಗಳೆಲ್ಲ ಜ್ಞಾಪಕ ಇದ್ಯಾ ಮಾಧೂ?"ಎಂದ.

"ನಾನೇನು ನೀನೇ ಬೀದಿ ಬೀದಿ ತಿರುಗಿ, ರಸ್ತೆ, ಗಲ್ಲಿ ಎಲ್ಲಾ ಜ್ಞಾಪಕ ಇಟ್ಕೊಳ್ಳೋಕೆ?"

"ಓ ಹೌದಲ್ವಾ? ನೀನು ಪ್ರೊಫೆಸರ್ ದಿ ಆಬ್‌ಸೆಂಟ್ ಮೈಂಡೆಡ್ ಇನ್ಮೇಲೆ.. ಅಂದ ಹಾಗೆ ನಾನು ನಿಮಗೇನಾಗ್ಬೇಕು ಪ್ರೊಫೆಸರ್?"ಎಂದ ಕುಚೋದ್ಯವಾಗಿ

"ನೀನಾ? ನೀನು ಹಾದೀಲಿ ಎದುರ್ಗೆ ಬಂದ್ರೆ ಅಡ್ಡ ಆಗ್ಬೇಕು "

ಸಮವಯಸ್ಸಿನ ಇಬ್ಬರು ತರುಣರೂ ಒಬ್ಬರನ್ನೊಬ್ಬರು ಛೇಡಿಸಿಕೊಳ್ಳುತ್ತಿದ್ದರು. ಪ್ರತಿ ಬೀದಿ, ಪ್ರತಿ ಕಟ್ಟಡವೂ ವೇಣುವನ್ನು ಆಹ್ವಾನಿಸುವಂತಿದ್ದುವು. ತಾನು ತಾಯ್ನಾಡನ್ನೂ ಹೆತ್ತೂರನ್ನೂ ಬಿಟ್ಟು ಯುಗಗಳು ಕಳೆದಂತಿತ್ತು ವೇಣುವಿಗೆ ಮನೆ ಹತ್ತಿರ ಬಂದಂತೆ ಸಂತೋಷದಿಂದ ಅವನ ತನುಮನ ಉದ್ರಿಕ್ತವಾಗುತ್ತಿತ್ತು

ಕಾರು ತಮ್ಮ ಬೀದಿಗೆ ತಿರುಗಿದ ಕೂಡಲೆ ತಮ್ಮ ಕಾಂಪೌಂಡು ಚೆನ್ನಾಗಿ ಕಾಣುತ್ತಿತ್ತು ಹಿಂದೆ ಇದ್ದುದಕ್ಕಿಂತಲೂ ಹೆಚ್ಚು ಹೂಗಿಡಗಳು, ದೊಡ್ಡ ತೋಟ ಕಂಡುಬಂತು ತಮ್ಮ ಕಾಂಪೌಂಡಿನಲ್ಲಿ ಮನೆಯ ಗಾಳಿಯ ಉಸಿರೇ ಪ್ರತ್ಯೇಕ ತರಹದ್ದು ಎನ್ನುವಂತೆ ಅವನ ಉಚ್ಛ್ವಾಸ ನಿಶ್ವಾಸ ಜೋರಾಯಿತು

'ಇಷ್ಟೆಲ್ಲಾ ತೋಟ ಮಾಡ್ತಾ ದೇಹ ಶ್ರಮಿಸಿದ್ದಾರೆ ಅದಕ್ಕೇ ಹೈಪರ್ ಟೆನ್ಷನ್'-ಸ್ವಗತವಾಗಿ ಹೇಳಿಕೊಂಡ ಅದು ಬಾಲುವಿಗೆ ಹೇಳಿದ ಮಾತಲ್ಲ ಆದರೂ ಬಾಲು-

"ಅವರು ಒಬ್ರೇ ಮಾಡಿದ್ದಲ್ಲ ರಂಗ ಇದ್ದಾನೆ ಬೇರೆ ಇನ್ನೂ ಸಹಾಯ ಕ್ಕಿದ್ದಾರೆ ಆದ್ರೂ ವಯಸ್ಸಾಯ್ತು ನೋಡು"ಎಂದು ಅನ್ನುತ್ತಿದ್ದಂತೆ ಕಾರು ಗೇಟನ್ನು ತೂರಿ ಮನೆಯ ಮುಂದೆ ಬಂದು ನಿಂತಿತು

ಒಂದೇ ನೆಗೆತಕ್ಕೆ ಕಾರಿನ ಬಾಗಿಲಿನಿಂದ ಹಾರಿ, ಮನೆಯ ಮುಂದಿನ ನಾಲ್ಕು ಮೆಟ್ಟಿಲುಗಳನ್ನೂ ಎರಡೇ ಹೆಜ್ಜೆಯಲ್ಲಿ ಮುಗಿಸಿ ಬಾಗಿಲಿನಲ್ಲಿ ಪಕ್ಕ ಪಕ್ಕ ನಿಂತಿದ್ದ ತಾಯಿ ತಂದೆಯರ ಮುಂದೆ ಬಾಗಿ ಅವರ ಕಾಲು ಮುಟ್ಟಿ, ತನ್ನ ದೀರ್ಘ ಬಾಹು ಗಳಿಂದ, ಅವರನ್ನು ಅಕ್ಕರೆಯಿಂದ ತಬ್ಬಿ ಕಣ್ಣು ಮುಚ್ಚಿಕೊಂಡ. ತನ್ನ ತಾಯಿ ತಂದೆ ತನ್ನ ಎದೆಯ ಮಟ್ಟಕ್ಕೆ ಕೂಡಾ ಇಲ್ಲ ಆ ಘಳಿಗೆಯಲ್ಲಿ ಸಮಯವೇ ತಟಸ್ಥವಾಯಿತೇನೋ ಎಂಬಂತಿತ್ತು

ಹಿಂದಿನಿಂದ ಇಳಿದು ಬಂದ ಬಾಲುವಿನ ಹೆಜ್ಜೆಯ ಸಪ್ಪಳ ವೇಣುವನ್ನು ಎಚ್ಚರಿಸಿತು ಮೆಲ್ಲಗೆ ಕಣ್ಣು ಬಿಟ್ಟಾಗ ಚಕಿತನಾಗಿ ತಟಸ್ಥನಾಗಿ ನಿಂತುಬಿಟ್ಟ. ಎದುರಿಗೆ ಒಳಗಡೆ ಹಾಲಿನ ಗೋಡೆಗೆ ಒರಗಿನಿಂತ ಆ ಚಂದನದ ಗೊಂಬೆಯನ್ನು ಗರಬಡಿದವನಂತೆ ನೋಡುತ್ತಾ ನಿಂತ. ಒಂದು ಘಳಿಗೆ ಅವಳ ವಿಶಾಲ ನೇತ್ರಗಳು ಅವನ ಕಣ್ಣಿನೊಂದಿಗೆ ಮಿಳಿತವಾಗಿ ನೆಲ ನೋಡಿದುವು

ಯಾರೀ ಹುಡುಗಿ" ದಂತದ ಬಣ್ಣ ಒಳ್ಳೆಯ ಎತ್ತರ ಪ್ರಮಾಣ ಪೂರ್ಣ ದೇಹ ಮನೆಗೆ ಸೇರದಂತೆ ದೂರನಿಂತಿದ್ದಾಳೆ ಅವನ ಹೃದಯದ ಬಡಿತದ ಆಯ ತಪ್ಪಿತು. ತನ್ನ ಎದೆಗೆ ಒರಗಿ ನಿಂತ ತಾಯಿ ತಂದೆಯರಿಗೆ ತನ್ನ ಎದೆ ಸುಳಿವು ಕೊಟ್ಟೀತೆಂದು ಸ್ವಲ್ಪ ದೂರ ಸರಿದ

ಬಾಲು-' ಏನು ಒಳಗಡೆ ಹೋಗೋಣವ್ರೋ ಅಥವಾ ಇಲ್ಲೇ ಹೀಗೇ. "

ನಾಗಮ್ಮನೂ ಎಚ್ಚೆತ್ತರು "ಸುಮಾ, ಆರತಿ ತೊಗೊಂಡ್ಬಾ" ಎಂದರು

ನಿಧಾನವಾಗಿ ಒಳನಡೆದು ಆರತಿ ಹಿಡಿದು ತಂದಳು ಸುಮ ಅವಳ ಕೈ, ದೇಹ, ಮನ ಎಲ್ಲವೂ ನಡುಗುತ್ತಿದ್ದವು ಜೀವ ಬೊಬ್ಬಿಡುತ್ತಿತ್ತು ಆ ಜೋಡಿ ಕಂಗಳಲ್ಲಿ ಒಂದೇ ಗಳಿಗೆಯಾದರೂ ತಾನು ಸಂಪೂರ್ಣವಾಗಿ ಕರಗಿ ಹೋಗಿದ್ದಳು ತನಗೆ ಆ ಅಧಿಕಾರವಿಲ್ಲ ಅದು ನಡೆಯಕೂಡದು ಸ್ಥೈರ್ಯದಿಂದ ಬರಬೇಕೆಂದಿದ್ದರೂ ಅಂಗಾಲು ಬೆವತು ತೇವವಾಗಿ ನೆಲಕ್ಕೆ ಅಂಟಿಕೊಳ್ಳುತ್ತಿತ್ತು ಅವಳು ಹತ್ತಿರ ಬಂದು ತಟ್ಟೆಯನ್ನು ನಾಗಮ್ಮನ ಕೈಯಲ್ಲಿ ಕೊಟ್ಟು ತೋರಿಕೆಯ ಧೈರ್ಯದ ಮುಖವನ್ನು ಮೇಲೆತ್ತಿದಾಗ ಮತ್ತೆ ವೇಣುವಿನ ದೃಷ್ಟಿ ಅವಳ ದೃಷ್ಟಿಯೊಡನೆ ಬೆರೆಯಿತು ಕೂಡಲೇ ದೃಷ್ಟಿ ತಗ್ಗಿಸಿ ಅಮ್ಮನ ಜೊತೆಗೆ ಆರತಿ ಹಿಡಿದಳು

ಸುಮಳನ್ನೇ ನೋಡುತ್ತಿದ್ದ ವೇಣು ಬೆಪ್ಪಾಗಿ ನಿಂತಂತೆ ಕಂಡು, ಬಾಲು ಛೇಡಿಸುತ್ತಾ ಆರತಿಗೆ ಕಾಸು ಎಂದ ಹೌದಲ್ಲ, ತನಗೆ ತೋಚಲೇ ಇಲ್ಲ ಪರ್ಸ್ ತೆಗೆದು ಹಾಕಹೋದದ್ದು ಹತ್ತು ರೂಪಾಯಿ ನೋಟು ಎದುರಿಗಿದ್ದ ಚೆಲುವೆಯ ಕೈಯ ಆರತಿಗೆ ಅದೂ ಕಡಿಮೆಯೇ ಎನಿಸಿತು ಅವನಿಗೆ ತಾಯಿ- "ಮಾಧೂ, ಏನಿದು ಹುಚ್ಚು, ಕಾಗ್ದ ನೆನೆಯುತ್ತೆ, ತೆಗಿ ತೆಗಿ 'ಎಂದರು ಆ ನೋಟನ್ನು ತಕ್ಷಣ ಎತ್ತಿ ತಟ್ಟೆ ಹಿಡಿದಿದ್ದ ಸುಮಳ ಕೈ ಬೆರಳುಗಳೊಳಗೆ ಸಿಗಿಸಿದ ಅವನ ಸ್ಪರ್ಶದಿಂದ ಸುಮಳಿಗೆ ಮೈಯಲ್ಲಿ ವಿದ್ಯುತ್ ಹರಿದಂತಾಯಿತು ಎಲ್ಲಿ ಆರತಿ ಮೈಮೇಲೆ ಚೆಲ್ಲಿಕೊಳ್ಳುತ್ತೇನೋ ಎಂದು ಹೆದರಿ, ಭದ್ರವಾಗಿ ತಟ್ಟೆ ಹಿಡಿದು ಗೇಟಿನಾಚೆ ನಡೆದುಬಿಟ್ಟಳು

ಅವಳು ಹಿಂದಿರುಗಿದಾಗ ಯಾರೂ ಅವಳನ್ನು ಗಮನಿಸಲಿಲ್ಲ

ವೇಣು ತಂದೆಯನ್ನು ಹಿಡಿದು ಕರೆತಂದು ಸೋಫಾದಲ್ಲಿ ಕೂರಿಸಿದ. ತಾಯಿ ತಂದೆಯರ ನಡುವೆ ಕುಳಿತು ಎಲ್ಲ ವಿದ್ಯಮಾನಗಳನ್ನೂ ಮಾತನಾಡಿದ. ಮಧ್ಯೆ ಮಧ್ಯೆ ಮಿಂಚಿನಂತೆ ಮಾಯವಾದ ಆ ಹುಡುಗಿಗಾಗಿ ಸುತ್ತಲೂ ಕಣ್ಣು ಹಾಯಿಸುತ್ತಿದ್ದ

ಬಾಲು- ' ಏಯ್ ಸುಮಾ ಬೇಗ ಒಂದಿಷ್ಟು ಕಾಫಿ ತಂದ್ಕೊಡಬಾರ್ದೇನು ' ಎಂದು ಕೂಗಿದ.

"ಷರಬತ್ತು ಮಾಡಿದ್ಕಲ್ಲಾ ತಗೊಂಬಾಮ್ಮ" -ಸವಿನಯವಾಗಿ ಹೇಳಿದರು ನಾಗಮ್ಮ.

ಒಂದು ಬೆಳ್ಳಿಯ ತಟ್ಟೆಯಲ್ಲಿ ನಾಲ್ಕು ಲೋಟಗಳಲ್ಲಿ ನಿಂಬೆಹಣ್ಣಿನ ಪಾನಕ ತಂದು ಅಲ್ಲಿಟ್ಟಳು.

ಎಲ್ಲರಿಗೂ ಎತ್ತಿ ಕೊಟ್ಟರೂ ವೇಣುವಿಗೆ ಕೊಡುವಾಗ ಅವಳ ಎದೆ ನಡುಗಿತು. ಆದರೆ ವಿವೇಕ ಬುದ್ಧಿ ಹೇಳಿತು. "ಆತ ಇನ್ನು ಈ ನಿಮಿಷದಿಂದ ಪ್ರತಿ ಘಳಿಗೆಯೂ ಇಲ್ಲಿರೋವ್ನ. ನೀನು ಅಂಜಬೇಕಾದದ್ದೇಕೆ? ನಿಜ ಪ್ರಥಮ ದೃಷ್ಟಿಯಲ್ಲೇ ನಿನಗೆ ಆತನಲ್ಲಿ ಅನುರಾಗವುಂಟಾಗಿದೆ. ಆದರೆ ನೀನು ಎಚ್ಚೆತ್ತುಕೊಂಡು ಸಾಧಾರಣವಾಗಿ ನಡೆದುಕೋ. ತುಟಿಗಳ ಮೇಲೆ ಮಂದಹಾಸ ತಂದುಕೊಂಡು ಪಾನಕ ಎಟುಕಿಸಿದಳು. ವೇಣುವಿನ ತುಟಿಗಳೂ ಕಿರುನಗೆ ನಗುತ್ತಾ, ಅವಳ ಕಡೆಗೇ ಅವನ ಕಣ್ಣುಗಳು ನೋಡುತ್ತಾ, ಅವನ ಕೈ ಲೋಟಕ್ಕೆ ಚಾಚಿತು. ಈ ಮೂಕ ಮನಗಳ ಅನುರಾಗವಿನಿಮಯದ ಅರಿವೇ ಇಲ್ಲದ ನಾಗಮ್ಮನವರು ಸಂತೋಷದಿಂದ ಬೀಗುತ್ತಿದ್ದರು. ರಾಯರು-

"ಆಗ್ಲೇ ಬಹಳ ಲೇಟಾಗಿದೆ ವೇಣು. ಎದ್ದು ಸ್ನಾನ ಮಾಡಿ ಊಟ ಮಾಡು. ನಿಮ್ಮಮ್ಮ ಏಂಗೇಂತ ಹಬ್ಬ ಮಾಡಿದ್ದಾಳೆ. ಪ್ಲೇನ್ ಲೇಟಾದ್ರಿಂದ ಎಲ್ಲಾ ಆರಿ ತಂಗಳಾಯ್ತು. ಸ್ವಲ್ಪ ವಿಶ್ರಾಂತಿ ತೊಗೊಳ್ಳುವೆಯಂತೆ. ಎಂದರು.

'ಏನಮ್ಮ, ಏನ್ಮಾಡಿದ್ದಿ? ನಂಗೆ ಅಸಾಧ್ಯ ಹಸಿವು. ನಿನ್ನ ಕೈ ಊಟ ಮಾಡಿ ಮೂರು ವರ್ಷ ಮೂರು ತಿಂಗಳು ಹದಿನೆಂಟು ದಿನ ಆಯ್ತು ನೋಡು' ಎನ್ನುತ್ತಾ ಕಾಲು ಜಾರಿದಂತೆ ಕುಳಿತಿದ್ದ ವೇಣು ಸರಿಯಾಗಿ ಕುಳಿತ.

ಅವರ ಮಾತು ಕೇಳು ನೀನು. ನೀನೇನೂ ಸಿಹಿ ತಿನ್ನಲ್ಲಾಂತ ಗೊತ್ತಲ್ಲ. ಒಂದು ಪಾಯಸ, ಅಂಬೊಡೆ, ವಾಂಗಿಬಾತ್ ಮಾಡಿದೀನಿ. ಏಳು ಸ್ನಾನಮಾಡು-ಸುಮ, ಸ್ನಾನಕ್ಕೆ ನೀರಿಟ್ಟೀಯಾ? ಎಂದರು ತಾಯಿ.

ಹುಂ' ಎನ್ನುವಂತೆ ತಲೆಯಾಡಿಸಿದಳು ಸುಮ, ಒಳಗಿಂದ ಒಂದು ಸೆಕೆಂಡು ಕಾಣಿಸಿಕೊಂಡು-

ಒಂದು ವೇಳೆ ಮೂಕ ಹುಡುಗಿಯೆ? ತಾಯಿಯ ಸಹಾಯಕ್ಕೆ ತಂದಿರಿಸಿಕೊಂಡಿರ ಬಹುದೆ? ಅಮ್ಮ ಯಾಕೆ ಅವಳು ಯಾರೂಂತ ಹೇಳಲಿಲ್ಲ? ಇರಲಿ. ಇಲ್ಲೇ ಇರುವಾಗ ತಿಳಿಯದೇ ಹೋಗುತ್ತದೆಯೇ' ಎಂದು ತರ್ಕಿಸುತ್ತಾ ಎದ್ದ. ಏಳುತ್ತಾ 'ಅಮ್ಮ ನನ್ನ ಕೋಣೆ ಯಾವುದು? ಎಂದ ವೇಣುವಿನ ಮಾತಿಗೆ ತಾಯಿ ನಕ್ಕರು. 'ಏನು ಪ್ರಶ್ನೆಯೋ ಮಾಧೂ. ನಿನ್ನ ಕೋಣೆ ಎಲ್ಲಿ ಹೋಗುತ್ತೆ?'

'ಏನೋ ಹೊಸ ಹೊಸ ನೆಂಟರಿದ್ದಾರೆ. ಅದಕ್ಕೆ ಕೇಳ್ದೆ. ಎಂದು ಸುಮಳ ವಿಷಯ ತಿಳಿಯಬಹುದೆಂದು.

"ಬಾಲು ಏನು ಹೊಸಬನೇನೋ ನಿನಗೆ.' ಎಂದು ಅಡಿಗೆಮನೆ ಹೊಕ್ಕರು ತಾಯಿ.

ನಿಧಾನವಾಗಿ ಮೆಟ್ಟಿಲು ಏರಿ ತನ್ನ ಕೋಣೆಗೆ ಹೊರಟ ವೇಣು ಸ್ವಲ್ಪ ನಿಂತು ಹಾಲಿನಲ್ಲಿದ್ದ ಪ್ರತಿ ವಸ್ತುವಿನ ಕಡೆಗೂ ಕಣ್ಣೋಡಿಸಿದ. ಎಲ್ಲವೂ ಇದ್ದ ಕಡೆಯಲ್ಲೇ ಇವೆ. ಆದರೆ ಮಾತ್ರ ಎಲ್ಲವೂ ಸ್ವಚ್ಛವಾಗಿ

ಕಂಗೊಳಿಸುತ್ತಿವೆ. ವಸ್ತುಗಳಲ್ಲ ಕಂಗೊಳಿಸುತ್ತಿರುವುದು, ನಿನ್ನ ಮನಸ್ಸು" ಎಂದಿತು ಅವನ ಅಂತರಂಗ

ಕೋಣೆಯೊಳಗೆ ನಿನ್ನೆಯಷ್ಟೇ ತಾನಲ್ಲಿದ್ದಂತೆ ಪ್ರತಿ ವಸ್ತುವೂ ತನ್ನ ಸ್ಥಳದಲ್ಲಿ ಅಚ್ಚುಕಟ್ಟಾಗಿ ಕುಳಿತಿದೆ. ತನ್ನ ಹಾಸಿಗೆಯೂ ಬೆಳಿಗ್ಗೆ ತಾನೇ ಸರಿಮಾಡಿದಂತಿದೆ. ಮೇಜಿನ ಮೇಲಿದ್ದ ರೋಜಾ ಹೂವಿನ ಹೂಕುಂಡ ಮಾತ್ರ ಹೊಸದು. ಇದನ್ನು ಅಮ್ಮನಂತೂ ತಂದಿಟ್ಟಿಲ್ಲ ಆ ಹುಡುಗಿಯೇ ಇಟ್ಟಿರಬೇಕು. ಅದರಲ್ಲಿದ್ದ ಎರಡು ಗುಲಾಬಿಗಳು ಅವಳ ಕೆನ್ನೆಗಳನ್ನೇ ನೆನಪು ಮಾಡುವಷ್ಟು ಚೆಳ್ಳಗಿದ್ದುವು. ಮೃದುವಾಗಿ ಅವುಗಳನ್ನೊಮ್ಮೆ ಮುಟ್ಟಿದ.

ಹಾಕಿಕೊಂಡಿದ್ದ ಸೂಟನ್ನು ಕಳಚಿ, ಬೇರೆ ಬಟ್ಟೆ ಧರಿಸಿ, ಸ್ನಾನಕ್ಕೆಂದು ಕೆಳಗಿಳಿದು ಬಂದಾಗ ಊಟದ ಮನೆಯ ಟೇಬಲಿನ ಬಳಿ ತಟ್ಟೆಗಳನ್ನಿಡುತ್ತಿದ್ದ ಸುಮ ಕಾಣಿಸಿದಳು. ಅಲ್ಲಿಯೇ ನಿಂತು ಬಾಲು ಅವಳಿಗೆ ಏನೋ ಹೇಳುತ್ತಿದ್ದ. ಅವಳೂ ಮಾತನಾಡುತ್ತಿದ್ದಳು. ಅಂದರೆ ಅವಳು ಮೂಕಿಯಲ್ಲ! ವೇಣುವಿಗೆ ತಟ್ಟನೆ ಹೊಳೆಯಿತು -ಛೆ ಇವಳು ಬಾಲುವಿನ ಹೆಂಡತಿ. ತನಗಷ್ಟು ಹೊಳೆಯಬಾರದೆ'ಅದಕ್ಕೇ ಅವನು ಅಷ್ಟು ದರ್ಪದಿಂದ ಅವಳ ಹತ್ತಿರ ಮಾತನಾಡುತ್ತಾನೆ ಬಾಲು ಅದೃಷ್ಟವಂತ, ಒಳ್ಳೆಯ ಸುಂದರಿಯನ್ನೇ ಗಿಟ್ಟಿಸಿದ್ದಾನೆ-ಎಂದುಕೊಂಡ ಆದರೂ ಜೋಡಿ ಏಕೋ ಅಷ್ಟು ಸರಿಯಿಲ್ಲ. ಅವಳು ಅವನಷ್ಟೇ ಎತ್ತರವಿದ್ದಾಳೆ ಬಾಲುವೇನೂ ಕುಳ್ಳಲ್ಲವಾದರೂ, ಸುಮ ಎತ್ತರದ ಹುಡುಗಿ ಹುಡುಗಿಯರಲ್ಲಿ ಇಷ್ಟೆತ್ತರ ಇರುವುದು ಬಹಳ ಅಪರೂಪ .

ಸ್ನಾನ ಮಾಡುವಷ್ಟು ಹೊತ್ತು ಅವರಿಬ್ಬರ ಕುರಿತೇ ಯೋಚಿಸುತ್ತಿದ್ದ ಊಟಕ್ಕೆ ಬಂದು ಕುಳಿತಾಗ ಸುಮ ನುಡಿದಳು-"ಅಮ್ಮ, ನೀವೂ ಕೂತ್ಕೊಂಬಿಡಿ, ನಾನು ಬಡಿಸ್ತೀನಿ " ಅವಳ ದನಿ ವೀಣೆ ಮಿಡಿದಂತೆ ಕೇಳಿಸಿತು ವೇಣುವಿಗೆ

"ನೀನು ಚಿಕ್ಕೋಳು, ಕೂತ್ಕೋ. ನಾನು ಆಮೇಲೆ ಮಾಡಿದ್ರಾಯ್ತು"ಎಂದು ನಾಗಮ್ಮ ಇನ್ನೂ ಏನೋ ಹೇಳುವಷ್ಟರಲ್ಲಿ ಬಾಲು "ನೀವು ಕೂತ್ಕೊಳ್ಳಿ ಅತ್ತೆ. ಅವಳು ಬಡಿಸ್ತಾಳೆ ಏನೀಗ" ಅಂದುಬಿಟ್ಟ.

ಸುಮ ಬಾಲುವನ್ನು ದುರುಗುಟ್ಟಿ ನೋಡಿದಳು ಇದನ್ನು ಗಮನಿಸಿದ ವೇಣುವಿಗೆ ಅನುಮಾನ ಸ್ಪಷ್ಟವಾಯಿತು. ಅವನು ಮನದಲ್ಲೇ ಹೇಳಿದ. 'ಲೋ ಬಾಲು, ಇಷ್ಟೊಂದು ಜಬರದಸ್ತು ಮಾಡಬೇಡ್ವೋ ತಿರುಗಿಬಿದ್ರೆ ತಾಳಿಕೊಳ್ಳಲಾರೆ ನೋಡ್ಕೋ.' ಆದರೆ ಮಾತ್ರ ಮೌನವಾಗಿದ್ದ

ನಾಲ್ಕು ಜನವೂ ನಗುನಗುತ್ತಾ ಮಾತನಾಡುತ್ತಾ ಊಟ ಮುಗಿಸಿದರು ತನ್ನ ಅಮೇರಿಕದ ಜೀವನ ಕುರಿತು ವೇಣು ಹೇಳುತ್ತಿದ್ದ. ತಂದೆ ತಾಯಿಯರು ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದರು. ಆದರೆ ಬಾಲುವಿನ ಗಮನ ಮಾತ್ರ ಬೇರೆಲ್ಲೋ ಇತ್ತು ಎನಿಸಿತು ವೇಣುವಿಗೆ.

"ಏನು ನೋಡ್ತಾ ನಿಂತ್ಕೊಂಡೆ. ಬೇರೆ ಕೆಲಸ ನೋಡಬಾರ್ದೇನು"ಎಂದು ಸುಮಳನ್ನು ಗದರಿಸಿದ

ಬಾಲು. ಸುಮಳೂ ತನ್ನ ಅನುಭವ ಕೇಳಿಸಿಕೊಳ್ಳುತ್ತಿದ್ದಳೆಂದು ತಿಳಿದ ವೇಣುವಿಗೆ ಸಂತೋಷವಾಯಿತು

ಊಟ ಮುಗಿಸಿ ರಾಯರು ತಮ್ಮ ಕೋಣೆಗೆ ಹೋಗಿ ಮಲಗಿದರು. ನಾಗಮ್ಮನವರೂ ಸಹ ರಾಯರ ಮಂಚದ ಬಳಿಯೇ ಚಾಪೆ ಹಾಸಿ ತಲೆಗೆ ಕೈ ಕೊಟ್ಟರು. ಬಾಲು ಆಗಲೇ ದಿಂಬಿನೊಂದಿಗೆ ಗೆಳೆತನ ಬೆಳೆಸಿಯಾಗಿತ್ತು. ವೇಣು ಮಾತ್ರ ಹಾಗೇ ಸೋಫಾದಲ್ಲಿ ಒರಗಿದ್ದವನು, ಟೇಬಲನ್ನೆಲ್ಲಾ ಚೊಕ್ಕಟ ಮಾಡಿ ಒಳಗೆ ಹೋದ ಸುಮ ಎಷ್ಟು ಹೊತ್ತಾದರೂ ಹೊರಬರಲಿಲ್ಲವೆಂದು, ಮೆಲ್ಲನೆದ್ದು ಅಡಿಗೆಮನೆ ಹೊಕ್ಕ. ಸುಮ ನೆಲದ ಮೇಲೆ ಕುಳಿತು ಒಂದು ಸ್ಟೀಲ್ ತಟ್ಟೆಗೆ ಏನೋ ಬಡಿಸಿಕೊಂಡು ಊಟ ಮಾಡುತ್ತಿದ್ದಳು ವೇಣುವಿಗೆ ಕನಿಕರವೆನಿಸಿತು. ಮೆಲ್ಲಗೆ ಒಳಗೆ ಬಂದು ಒಂದು ಮಣೆ ಎಳೆದುಕೊಂಡು ಎದುರಿಗೆ ಕುಳಿತ. ಸುಮ ತಬ್ಬಿಬ್ಬಾದಳು

"ಏನಾದ್ರೂ ಬೇಕಿದ್ರೆ ಹೇಳಿ ನಾನು ಬಡಿಸ್ತೀನಿ"ಎಂದು ಉಪಚಾರ ಹೇಳಿದ

ಸುಮ ತಲೆಯೆತ್ತಿ ನೋಡಿದಳು ಆ ದೊಡ್ಡ ಕಣ್ಣುಗಳಲ್ಲಿ 'ಸದ್ಯ ನೀವಿಲ್ಲಿಂದ ಎದ್ದು ಹೋಗಿ,'ಎಂಬ ಭಾವನೆಯಿತ್ತು ಆದರೂ ಅವಳು "ಥಾಂಕ್ಸ್, ಏನೂ ಬೇಡಿ. ನನ್ನೂಟ ಆಯ್ತು" ಎಂದು ಎದ್ದುಬಿಟ್ಟಳು ತಾನಿಲ್ಲಿ ಕುಳಿತದ್ದರಿಂದ ಅವಳು ಸರಿಯಾಗಿ ಊಟ ಮಾಡಲಿಲ್ಲವೆಂದು ಅವನಿಗೆ ಕಸಿವಿಸಿಯಾಯಿತು ಜೊತೆಗೆ ಬಾಲುವಿನ ಮೇಲೆ ಅಸಹ್ಯವೂ ಮೂಡಿಬಂತು ಎಂತಹ ಗಂಡಸು ಇವನು ಹೆಂಡತಿಯ ಊಟವಾಯಿತೇ ಇಲ್ಲವೇ ಎಂದೂ ವಿಚಾರಿಸದೆ ಎಮ್ಮೆಯಂತೆ ಮಲಗಿದ್ದಾನೆ ಎಂದುಕೊಂಡ

ಅಲ್ಲಿಂದ ಎದ್ದು ತಾಯಿತಂದೆಯರ ಕೋಣೆ ಹೊಕ್ಕ ತಂದೆ ಕಣ್ಣುಮುಚ್ಚಿ ಮಲಗಿದ್ದರು ತಾಯಿ ಮಗನನ್ನ ಕಂಡು ಎದ್ದು ಕುಳಿತರು. ಸರ್ರನೆ ಮಲಗಿ ತಾಯಿಯ ಮಡಿಲಲ್ಲಿ ಮುಖವಿಟ್ಟು. ಅವರ ಮುದ್ದು ಮಾಧು.

"ಮಲಗಲಿಲ್ವೇ ಮಾಧೂ?"-ಎಂದರು ತಾಯಿ

"ಮಲಗಿದ್ದೀನಲ್ಲಮ್ಮ"ಎಂದ, ಮುಖವನ್ನು ಅವರ ಮಡಿಲಲ್ಲಿ ಇಟ್ಟಂತೇ. ಊಟದ ಭಾರದಿಂದ ಕಣ್ಣವೆ ಎಳೆಯುತ್ತಿದ್ದ ನಾಗಮ್ಮ. ಕುಳಿತಂತೆಯೇ ಪತಿಯ ಮಂಚಕ್ಕೆ ಒರಗಿ, ಮಾಧುವಿನ ತಲೆಯನ್ನು ಮಡಿಲಲ್ಲಿ ಸರಿಯಾಗಿ ಆಸರೆಕೊಟ್ಟು ಹಿಡಿದರು ಅವರ ಕೈ ವಾತ್ಸಲ್ಯದಿಂದ ಅವನ ತಲೆಗೂದಲಲ್ಲಿ ಆಡುತ್ತಿದ್ದುದು ಹಾಗೇ ನಿಂತಿತು. ಕುಳಿತಂತೆಯೇ ನಿದ್ರಿಸಿದರು.

ಮಾಧು ತಾಯಿಯ ಕಡೆಗೊಮ್ಮೆ ನೋಡಿದ. ತಾಯಿಯಂತಹ ವ್ಯಕ್ತಿ ಮತ್ತೊಂದಿಲ್ಲ ಎನಿಸಿತು ಅದರಲ್ಲೂ ತನ್ನ ತಾಯಿ ತನಗಾಗಿ ಬಹಳ ನೊಂದಿದ್ದಾರೆ. ತನ್ನ ಅನಾರೋಗ್ಯದ ದಿನಗಳಲ್ಲಿ ತನ್ನಷ್ಟೇ ನರಳಿದ್ದಾರೆ. ಏನೇ ಆಗಲಿ ಆ ತಾಯಿಗೆ ನೋವು ಕೊಡುವ ಕೆಲಸ ತಾನು ಮಾಡಬಾರದು ಅಬ್ಬ!ಈ ಮೂರು ವರ್ಷ ತಾನು ಈ ಸಾನ್ನಿಧ್ಯದಿಂದ ದೂರ ಹೇಗಾದರೂ ಉಳಿದೆನೊ!

ಕೆಲಸ ಎಲ್ಲಾ ಮುಗಿಸಿದ ಸುಮ ಏನೋ ಹೇಳಲೆಂದು ಕೋಣೆಯ ಬಾಗಿಲಿಗೆ ಬಂದು ನಿಂತಳು. ತಾಯಿಯ ಮಡಿಲಲ್ಲಿ ಹಸುಗೂಸಿನಂತೆ ಮಲಗಿರುವ ಆ ದೀರ್ಘದೇಹದ ವ್ಯಕ್ತಿಯನ್ನು ನೋಡಿ ಥಟ್ಟೆಂದು ನಿಂತುಬಿಟ್ಟಳು. ತಾಯಿ-ಮಗ-ತಂದೆ ಮೂವರೂ ತೃಪ್ತಿಯಿಂದ ಕಣ್ಣುಮುಚ್ಚಿ ಮುಲಗಿದ್ದರು. ಎಂತಹ ತುಂಬು ಕುಟುಂಬ ಇವರದು! ದೈವ ಎಲ್ಲ ವಿಷಯದಲ್ಲೂ ಪೂರ್ಣ ಮಾಡಿರುವ ಸಂಸಾರ. ಸಂಪತ್ತು, ಸಂಸ್ಕೃತಿ, ಗುಣ, ತೃಪ್ತಿ ತುಂಬಿ ತುಳುಕುವ ಮನೆ. ತನಗೇಕೆ ಇಂತಹ ಭಾಗ್ಯ ಇರಬಾರದಾಗಿತ್ತು? ಈ ಯೋಚನೆ ಬಂದ ಕೂಡಲೆ ಮನ ಮುದುಡುತ್ತದೆ.

ಇನ್ನೂ ನಿದ್ದೆ ಮಾಡದಿದ್ದ ವೇಣು ಕಣ್ಣು ತೆರೆದು ತನ್ನನ್ನೇ ನೋಡುತ್ತಿದ್ದನೆಂಬ ಗಮನ ಅವಳಿಗಿಲ್ಲ. ಅವಳ ಮನಸ್ಸು ಎಲ್ಲೋ ಶೂನ್ಯದತ್ತ ನೋಡುತ್ತಿತ್ತು. ಅವಳ ದೃಷ್ಟಿ ಅವನ ಕಡೆಗೆ ತಿರುಗಿದಾಗ ಅವನು ಮೆಲುನಕ್ಕ. ಸಿಕ್ಕಿಬಿದ್ದೆನೆನ್ನುವ ನಾಚಿಕೆಯಿಂದ ಓಡಿಬಿಟ್ಟಳು ಸುಮ. ತಾಯಿಯೂ ಕುಳಿತಲ್ಲೇ ನಿದ್ರಿಸಿದ್ದಾರೆಂದು ತಿಳಿದು ಮಾಧೂ ಮೆಲ್ಲಗೆ ಎದ್ದು ಆಕೆಯನ್ನು ಮಲಗಿಸಿ ತಾನು ತನ್ನ ಕೋಣೆಗೆ ಬಂದ ಅಲ್ಲಿ ಅವನಿಗೆ ಆಶ್ಚರ್ಯ ಕಾದಿತ್ತು. ತಾನು ಎಸೆದು ಹೋಗಿದ್ದ ಪ್ಯಾಂಟು ಷರಟುಗಳು ನೀಟಾಗಿ ಹ್ಯಾಂಗರಿನಲ್ಲಿ ತೂಗಾಡುತ್ತಿದ್ದವು. ಟೈ ಸ್ಟ್ಯಾಂಡಿನ ಮೇಲೆ ಕುಳಿತಿತ್ತು. ಎಳೆದು ಮಧ್ಯದಲ್ಲಿ ಬಿಟ್ಟಿದ್ದ ಸೂಟ್ ಕೇಸು ಗೋಡೆಗೆ ಓರೆಯಾಗಿ ಕುಳಿತಿತ್ತು. ಮಿಕ್ಕ ಒಂದೆರಡು ಪೆಟ್ಟಿಗೆಗಳ ಮೇಲೆ ಒಂದು ಚೌಕ ಇಳಿಬಿಟ್ಟಿತ್ತು. ಇದೆಲ್ಲಾ ಸುಮಳ ಕೆಲಸವೇ ಎಂದು ಬೇರೆ ಹೇಳಬೇಕಿರಲಿಲ್ಲ.

ದೇಹ ಆಯಾಸದಿಂದ ಮಲಗಬೇಕೆನಿಸಿದರೂ, ತನ್ನ ಮನೆಯನ್ನೆಲ್ಲಾ ಒಮ್ಮೆ ಸುತ್ತಾಡಿ ನೋಡಬೇಕೆಂಬ ಬಯಕೆ ಅವನಿಗೆ. ಮನೆಯ ಕಣಕಣವೂ ಅವನಿಗೆ ಆಹ್ಲಾದ ತರುತ್ತಿತ್ತು. ಇದುವರೆಗೂ ತಾನೇನೋ ಕಳೆದುಕೊಂಡಿದ್ದು ಇಂದು ಅಯಾಚಿತವಾಗಿ ಅದು ಸಿಕ್ಕಿಬಿಟ್ಟ ಭಾವನೆ ಅವನಿಗೆ. ಬಾಲ್ಕನಿಗೆ ಬಂದು ನಿಂತ. ದೂರದಲ್ಲಿ ಸ್ವಲ್ಪ ಸ್ವಲ್ಪವಾಗಿ ಊರೆಲ್ಲಾ ಕಾಣುತ್ತಿತ್ತು. ಮನೆಯ ಮುಂದಿನ ತೋಟ ಬಹಳ ರಮ್ಯವಾಗಿತ್ತು. ಬಾಲ್ಕನಿಯ ಬಲದಲ್ಲಿದ್ದ ಕೋಣೆ ತಂದೆಯ ಮತ್ತು ತನ್ನ ಲೈಬ್ರರಿ. ತಂದೆ ಹೆಚ್ಚು ಓದಿದವರಲ್ಲವಾದರೂ ಹಲಕೆಲವು ವೇದಾಂತದ ಪುಸ್ತಕಗಳನ್ನು ಎರಡು ಬೀರುಗಳ ತುಂಬಾ ಶೇಖರಿಸಿದ್ದರು. ಮಿಕ್ಕೆಲ್ಲಾ ತನ್ನ ಪುಸ್ತಕಗಳೇ. ತಾನು ಹೋಗುವ ಮುನ್ನ ಇದ್ದಂತೆಯೇ ಇದೆ. ಬಾಲ್ಕನಿಯ ಎಡಗಡೆಯ ಕೋಣೆ ಖಾಲಿಯೇ ಇಟ್ಟಿತ್ತು. ಅದು ಸಾಧಾರಣವಾಗಿ ಅಮ್ಮನ ಪ್ರತ್ಯೇಕ ಕೋಣೆ. ಅಮ್ಮನ ವಿಶೇಷ ವಸ್ತುಗಳೆಲ್ಲಾ ಅಲ್ಲಿವೆ. ಅದನ್ನು ಯಾರೂ ಬಳಸುತ್ತಿದ್ದುದು ಕಡಿಮೆ.

ಮೇಲಿನ ಎರಡು ಕೋಣೆಗಳೂ ಬಾಲ್ಕನಿಗೆ ಅಂಟಿದಂತಿದ್ದುವು. ಅವನ್ನು ಬಿಟ್ಟರೆ ಒಳಗಡೆ ದೊಡ್ಡ ಹಜಾರ. ಹಜಾರದ ಎಡಗಡೆಗೆ ಮಾತ್ರ ಇದ್ದ ದೊಡ್ಡ ಕೋಣೆಯೇ ತನ್ನದು. ಮೆಟ್ಟಿಲು ಹತ್ತಿದ ಕೂಡಲೇ ಸಿಗುತ್ತಿದ್ದುದು ತನ್ನ ಕೊಠಡಿ ಮತ್ತು ಹಜಾರ.

ಮೆಟ್ಟಿಲಿಳಿದು ಬಂದು ಅಡಿಗೆ ಮನೆ, ದೇವರ ಮನೆ, ಊಟದ ಮನೆ, ಉಗ್ರಾಣ, ಅದಕ್ಕಂಟಿಕೊಂಡಿದ್ದ ಕಣಜ, ಅದರ ಈ ಬದಿಯ ಪುಟ್ಟಕೋಣೆ, ಅಮ್ಮ ವಿಶೇಷ ಸಮಯದಲ್ಲಿ ಉಪಯೋಗಿಸುತ್ತಿದ್ದುದು-ಎಲ್ಲಕ್ಕೂ ಒಂದು ಸುತ್ತು ಹಾಕಿದ ಅಮ್ಮ ಅಣ್ಣನ ಮಲಗುವ ಕೋಣೆ ದಾಟಿ ಮುಂದಿನ ವೆರಾಂಡಕ್ಕೆ ಬಂದು ನಿಂತ ಬಲದ ರೂಮಿನಿಂದ ಸಣ್ಣ ಗೊರಕೆ ಕೇಳಿಸಿದಾಗಲೇ ಅದರ ಒಡೆಯ ಬಾಲಚಂದ್ರ ಎಂದು ತಿಳಿಯಿತು ಮುಂದಕ್ಕೆ ಮುಚ್ಚಿದ್ದ ಬಾಗಿಲು ತಳ್ಳಿ ನೋಡಿದ. ಎಲ್ಲಾ ಅಸ್ತವ್ಯಸ್ತ ಬಿಚ್ಚಿದ್ದ ಬಟ್ಟೆಗಳು ಅಲ್ಲಲ್ಲೇ ಕುರ್ಚಿಯ ಮೇಲೆ ಬಿದ್ದಿದ್ದುವು. ಮಂಚದ ಮೇಲೂ ಇದ್ದ ಬಟ್ಟೆಗಳ ಪರಿವೆಯೇ ಇಲ್ಲದೆ ಅದರ ಮೇಲೆಯೇ ಮಲಗಿಬಿಟ್ಟಿದ್ದಾನೆ ಬಾಲು.

ತನ್ನ ಕೋಣೆಯನ್ನೇ ಅಚ್ಚುಕಟ್ಟು ಮಾಡಿದ ಸುಮ ತಮ್ಮ ರೂಮನ್ನೇಕೆ ಇಷ್ಟು ಗಲೀಜಾಗಿ ಇಟ್ಟಿದ್ದಾಳೆ ಎಂದು ವಿಸ್ಮಿತನಾದ. ಈ ಗಂಡನೆನ್ನುವ ಪ್ರಾಣಿ ಯಾವುದಕ್ಕೂ ಬಿಡುವುದಿಲ್ಲವೇನೋ ಪಾಪ, ಅವಳೇನು ಮಾಡುತ್ತಾಳೆ-ಎಂದು ಕೊಳ್ಳುತ್ತಾ ತಳ್ಳಿದ್ದ ಬಾಗಿಲನ್ನು ಪುನಃ ಎಳೆದುಕೊಂಡು, ವೆರಾಂಡದ ಮತ್ತೊಂದು ಬದಿಯ ಕೋಣೆಗೆ ಬಂದ ಅವನಿಗಿಲ್ಲಿ ಇನ್ನೂ ದೊಡ್ಡ ಅಚ್ಚರಿ ಕೋಣೆಯ ತುಂಬಾ ನವನವೀನ ವಸ್ತುಗಳು ಅವುಗಳಿಗಾಗಿಯೇ ಸುತ್ತಲೂ ಗಾಜಿನ ಬೀರುಗಳು, ಗೋಡೆಯ ಮೇಲೆ ತೈಲಚಿತ್ರಗಳು, ವಾಟರ್‌ಕಲರ್ ಪೆಯಿಂಟಿಂಗ್ಸ್. ಮೂಲೆಗಳಲ್ಲಿ ಮೂಲೆ ಮೇಜಿನ ಅಂತಸ್ತುಗಳಲ್ಲಿ ವಿವಿಧ ಹೂದಾನಿಗಳು ತಂದೆಗೆ ಇಂತಹ ರಸಿಕತೆ, ಅಭಿಲಾಷೆ, ಆಸಕ್ತಿಗಳಿದ್ದ ವಿಷಯವೇ ಹೊಸದು ವೇಣುವಿಗೆ! ಇವನ್ನೆಲ್ಲಾ ಬಿಡಿಬಿಡಿಯಾಗಿ ನಿಧಾನವಾಗಿ ನೋಡಬೇಕು ಎಂದುಕೊಂಡು ಮನೆಯ ಮೆಟ್ಟಿಲಿಳಿದು ತೋಟದೊಳಕ್ಕೆ ಬಂದ

ತಂಪಾಗಿ ಗಾಳಿ ಬೀಸುತ್ತಿತ್ತು ಒಂದೆರಡು ಮಲ್ಲಿಗೆ ಬಳ್ಳಿ, ಸಂಪಿಗೆ ಬಿಟ್ಟರೆ ಆವರಣದ ತುಂಬಾ ಇದ್ದುದ್ದು ಬರಿಯ ಗುಲಾಬಿಗಳೇ ರಂಗು ರಂಗಿನ ಗುಲಾಬಿ ಗಿಡಗಳು, ಗೊಂಚಲುಗೊಂಚಲು ಹೂ ಹೊತ್ತು ನಿಂತಿದ್ದುವು ಉಲ್ಲಾಸವಾಗಿದ್ದ ಹೃದಯದಿಂದ ಮೃದುಮಧುರ ಭಾವನೆ ಒಂದು ಸಿಳ್ಳಿನ ಮೂಲಕ ಹೊರಹೊಮ್ಮಿತು ಸಿಳ್ಳು ಹಾಕುತ್ತಲೇ ಗಿಡಗಳ ನಡುವೆ ತೂರಿ ಮುಳ್ಳುಗಳಿಂದ ತರಚಿಸಿಕೊಳ್ಳುತ್ತಾ ಮುಂದೆ ನಡೆದಾಗ,ಸಂಪಿಗೆ ಮರದ ಕೆಳಗಡೆ ನೆರಳಿನಲ್ಲಿ ಒಂದು ಗೋಣಿತಾಟು ಹಾಸಿ ಅದರ ಮೇಲೆ ಅಂಗತ್ತ ಮಲಗಿ ಓದಿಕೊಳ್ಳುತ್ತಿದ್ದಳು ಸುಮ.

ಅವಳ ಓದಿನ ತಲ್ಲೀನತೆಯಲ್ಲಿ, ವೇಣುವಿನ ಸಿಳ್ಳಿನ ದನಿಯಾಗಲಿ, ಅವನ ಹೆಜ್ಜೆಯ ಸಪ್ಪಳವಾಗಲಿ, ಅವಳಿಗೆ ತಿಳಿಯಲಿಲ್ಲ ಅವನು ತೀರಾ ಹತ್ತಿರ ಬಂದು ನಿಂತಾಗಲೂ ಅವಳು ಅಲುಗಾಡಲಿಲ್ಲ "ಅಬ್ಬ, ಏನು ಕಾನ್ಸಂಟ್ರೇಷನ್? ಅಷ್ಟೊಂದು ಚೆನ್ನಾಗಿದ್ಯೇನು ಕಾದಂಬರಿ?"ಎಂದ ವೇಣು.

ಮಧ್ಯಾಹ್ನದ ನಿಶ್ಶಬ್ದದಲ್ಲಿ ಆಕಸ್ಮಿಕ ದನಿಗೆ ಬೆಚ್ಚಿ, ಪುಸ್ತಕ ಸರಿಸಿ ನೋಡಿದಳು ಎದುರಿಗೆ

ವೇಣುಮಾಧವ್! ಒಂದು ಘಳಿಗೆ ಏನು ಮಾಡಬೇಕೆಂದೇ ತೋಚಲಿಲ್ಲ ಅವಳಿಗೆ. ಕೈಲಿ ಹಿಡಿದಿದ್ದ ಪುಸ್ತಕ ಮುಚ್ಚಿ, ಸರಸರ ಗೋಣಿತಾಟನ್ನು ನಾಲ್ಕು ಮಡಿಕೆ ಹಾಕಿ, ಕಂಕುಳಿಗೆ ಸೇರಿಸಿ, ಹಿಂದಿರುಗಿ ಸಹ ನೋಡದೆ, ಹಿಂಬದಿಯಿಂದ ಮನೆಯೊಳಕ್ಕೆ ನಡೆದುಬಿಟ್ಟಳು ಅವಳು ಹಾಗೆ ಓಡಿಹೋಗಲು ತಾನೇನು ತಪ್ಪು ಮಾಡಿದೆ ಎಂದು ದಿಗ್ಭ್ರಾಂತನಾಗಿ ವೇಣು ತರಚಿದ್ದ ಕೈ ಸವರಿಕೊಳ್ಳುತ್ತಾ ನಿಂತ. ಅವಳು ಮಲಗಿದ್ದ ಕಡೆ ಮತ್ತೊಂದು ಸಣ್ಣ ಪುಸ್ತಕ ಬಿದ್ದಿತ್ತು ಗಾಬರಿಯ ಹುಡುಗಿ. ಇದನ್ನೇ ಬಿಟ್ಟು ಹೋಗಿದ್ದಾಳೆ ಎಂದು ಬಾಗಿ ಎತ್ತಿಕೊಂಡ ಅದು ಕೆಮಿಸ್ಟ್ರಿಯ ಪಠ್ಯಪುಸ್ತಕ. ಆಶ್ಚರ್ಯದಿಂದ ಅವನ ಕಣ್ಣರಳಿತು ಇದನ್ನು ಅವಳು ಓದುತ್ತಿದ್ದಳೆ? ಬಹುಶಃ ಓದಿದ ಹುಡುಗಿಯಿರಬಹುದು. ಆದರೂ ಎಷ್ಟು ಜನ ಓದಿದ ಹುಡುಗಿಯರು ಮದುವೆ ಆದ ಮೇಲೆ ಪಠ್ಯಪುಸ್ತಕ ಪುನಃ ಪಠಣ ಮಾಡುತ್ತಾರೆ? ಇಲ್ಲ, ಅವಳು ಕಾಗದ ಬರೆಯಲು ಇಲ್ಲಿಗೆ ಬಂದಿದ್ದಿರಬೇಕು. ಒತ್ತಾಗಿ ಒಳಗಿನಿಂದ ಎಲ್ಲೋ ತಂದಿದ್ದಾಳೆ ಎಂದು ಪುಸ್ತಕ ಹಿಡಿದು ತನ್ನ ಕೋಣೆಗೆ ಹಿಂತಿರುಗಿದ

ಪುಸ್ತಕವನ್ನು ಮೇಜಿನ ಮೇಲಿಡುವಾಗ ಆಕಸ್ಮಾತ್ತಾಗಿ ಪುಟತಿರುವಿದಾಗ ಅದರಲ್ಲೊಂದು ಸಣ್ಣ ಹರಿದ ಚೀಟಿಯಿತ್ತು

"ಊರ್ಮಿ, ನನ್ನನ್ನೇನು ಮಾಡೂಂತೀಯೆ? ಭಯವಾಗುತ್ತೆ"

"ಭಯಯಾಕೆ, ಅವನೂ ಮನುಷ್ಯಾನೇ. ನಾಲ್ಕು ದಿನ ನೋಡು,"

ಕಷ್ಟ ಆಯ್ತು ಅಂದ್ರೆ ನೋಡೋಣ."

"ಹಾಗಂತೀಯಾ? ಸರಿ, ಥ್ಯಾಂಕ್ಸ್"

ಈ ಸಂಭಾಷಣೆ ಚೀಟಿಯಲ್ಲಿ ಬರೆದಿತ್ತು. ಕ್ಲಾಸಿನಲ್ಲಿ ಪಾಠ ಕೇಳುತ್ತ ಕೇಳುತ್ತ, ಒಬ್ಬರಿಗೊಬ್ಬರು ಬರೆದು ಮಾತನಾಡಿಕೊಳ್ಳುವ ರೀತಿಯಿದು ಎಂಬುದು ಸ್ವತಃ ಅಧ್ಯಾಪಕನಾದ ವೇಣುವಿಗೆ ಚೆನ್ನಾಗಿ ತಿಳಿದ ವಿಷಯ. ಆದರೆ ಇದು ಯಾರಿಬ್ಬರ ಸಂಭಾಷಣೆಯೋ. ಈ ಪುಸ್ತಕದಲ್ಲಿ ಹೇಗೆ ಬಂತು? ಅಷ್ಟಕ್ಕೂ ಈ ಪುಸ್ತಕ ಯಾರದು? ಎಂದು ಯೋಚಿಸುತ್ತಾ ಮಂಚದ ಮೇಲೆ ಅಡ್ಡಾದ.

ಮಧ್ಯಾಹ್ನ ಮಲಗುವ ಅಭ್ಯಾಸವಿಲ್ಲದೆ ವೇಣುವಿಗೆ ನಿದ್ದೆ ಬರಲಿಲ್ಲ. ಅವನ ಆಲೋಚನೆ ಕಾಲೇಜಿನ ಕಡೆಗೆ ಹರಿಯಿತು ಯಾರು ಯಾರು ಹೊಸಬರು ಬಂದಿದ್ದಾರೋ. ಹಳಬರಂತೂ ಇದ್ದಾರೆ. ತಾನು ಪ್ರೊಫೆಸರನಾಗಿ ನೇಮಕವಾದ ನಂತರ, ತನ್ನ ರೀಡರ್ ಜಾಗಕ್ಕೆ ಯಾರೋ? ಸತ್ಯನ್‌ಗೆ ನ್ಯಾಯವಾಗಿ ಆ ಸ್ಥಾನ ಸಿಗಬೇಕು. ಆದರೆ ಅವನಿಗೂ ಪ್ರಿನ್ಸಿಪಾಲರಿಗೂ ಸರಿಯಿಲ್ಲ. ಅವನಿಗೆ ಕೊಕ್ಕೆಯಾಗಿ ಬಿಟ್ಟಿದ್ದರೂ ಅಚ್ಚರಿಯಿಲ್ಲ. ದೇವದಾಸ್ ಏನೋ ಹೊಸತಾಗಿ ಕಾಣುತ್ತಿದ್ದ ಅವನ ಕಪ್ಪು ಬಣ್ಣದಲ್ಲಿ ಏನೋ ಹೊಸ ಕಳೆಯಿದೆ. ಜೊತೆಗೊಂದು ಹುಡುಗಿ. ಸ್ವಭಾವತಃ ಒಳ್ಳೆಯವನು ದೇವದಾಸ್. ಈ ಹುಡುಗಿ ಯಾರೊ?

ಮಾಧುರಿ! ಈಗ ಅವಳಿಗೆ ಅದೇನು ಮೈ ಬಂದುಬಿಟ್ಟಿದೆ ಮೊದಲು ಚೆನ್ನಾಗಿದ್ದಳು, ತಾನು ಅವಳ ಜೊತೆ ಸ್ವಲ್ಪ ಸಲಿಗೆಯಿಂದಿದ್ದ. ಇನ್ಮೇಲೆ ಹಾಗೆಲ್ಲಾ ಇರಬಾರದು. ಜನ ಹೆಸರು ಕಟ್ಟಿಬಿಟ್ಟಾರು. ಹುಷಾರಾಗಿರಬೇಕು. ಎಂಥ ಸಂದರ್ಭವೇ ಬರಲಿ ಅಮ್ಮನಿಗೆ, ಅಣ್ಣನಿಗೆ ಮನಸ್ಸು ನೋಯಿಸುವಂತಹ ಕೆಲಸ ಮಾತ್ರ ತಾನು ಮಾಡಬಾರದು.

ಬಾಲು ಯಾಕೆ ಹೀಗೆ ವಿಚಿತ್ರವಾಗಿಬಿಟ್ಟಿದ್ದಾನೆ? ಹಳ್ಳೀಲಿದ್ದವನು ಬಹಳ ಸಿಂಪಲ್ ಆಗಿದ್ದ. ಯಶೋದತ್ತೇಗೆ -ಮಾವನಿಗೆ ಇತ್ತೀಚೆಗೆ ದುಡ್ಡು ಚೆನ್ನಾಗಿ ಆಗ್ಬೇಕು. ಅದಕ್ಕೇ ಇವನ ಷೋಕಿ ಜಾಸ್ತಿಆಗಿದೆ ಆದರೂ ಹೆಂಡತಿಯನ್ನು, ಅದೂ ಅಷ್ಟು ಒಳ್ಳೆಯ ಹೆಂಡತಿಯನ್ನ, ನೋಯಿಸ್ತಾನೆ. ಅವನಿಗೊಂದು ಮಾತು ಹೇಳ್ಬೇಕು ತನಗಿಂತ ಒಂದೆರಡು ವರ್ಷ ದೊಡ್ಡವನು ಅಷ್ಟೆ. ತಾನು ಹೇಳಬಹುದು, ಅಥವಾ ಗಂಡಹೆಂಡಿರ ಒಳಗುಟ್ಟು ಏನಿದೆಯೊ! ನಾನ್ಯಾಕೆ ಮಧ್ಯೆ ಹೋಗ್ಬೇಕು?

ಅವನ ವಿಚಾರಸರಣಿ ಕಡಿಯುವ ಹಾಗೆ ಕೆಳಗೆ ಮಾತು ಕೇಳಿಸಿತು. ಹಾಗೇ ಗಮನವಿಟ್ಟು ಕೇಳಿದ ನಿದ್ದೆ ಮಾಡುವವರನ್ನು ಎಚ್ಚರಿಸದಂಥ ಮೆಲುದನಿ

ಮೇಲೆ ಮಲಗಿದ್ದಾರೆ ವಾಸು ಇನ್ನೂ ಸ್ವಲ್ಪ ಹೊತ್ತಾದ್ಮೇಲೆ ಬರಬಾರ್ದಾ?" -ಸುಮಳದು.

"ನಾನೀ ಕಡೆ ಹೋಗ್ತಾ ಇದ್ದೆ ಅದೂ ಅಲ್ದೆ ನಾವೆಲ್ಲಾ ಅರೇಂಜ್ ಮಾಡ್ಕೋಬೇಕೋ ಬೇಡ್ವೋ?" ಇದು ವಾಸುವಿನದಿರಬೇಕು.

"ನಿಮಗಿಷ್ಟು ತಲೆಯಿಲ್ಲ ಅಂತ ನಾನು ಅಂದ್ಕೊಳ್ಳಿಲ್ಲ ಎಷ್ಟು ದೂರ ಪ್ರಯಾಣಮಾಡಿ ಬಂದಿದ್ದಾರೆ ರೆಸ್ಟು ತೊಗೋತಿರ್ತಾರೆ ಅಂತ ಹೊಳೀಬೇಡ್ವ?"

"ನಿಮಗೆ ಮಹಾ ತಿಳಿಯುತ್ತೆ ಅವರು ಮಧ್ಯಾಹ್ನ ನಿದ್ದೆ ಮಾಡೋದೇ ಇಲ್ಲಾಂತ ನನಗ್ಗೊತ್ತು, ನಿಮಗೇನು ಗೊತ್ತು? ನೀವು ಕರೆದು ಬನ್ನಿ, ಇಲ್ಲ ನಾನೇ ಮೇಲೆ ಹೋಗ್ತೀನಿ "

ಧು, ಜಗಮೊಂಡ್ರು ನೀವು ನಾನು ಹೋಗಿ ಕರೆಯೋಲ್ಲ ನೀವೇ ಹೋಗಿ ಹೂಂ, ಬೇಗ ಆಮೇಲೆ ಅವರೇನಾದರೂ ಬೈದರೆ... "

' ಬೈಯೋಕೆ, ಅವರು ನಮ್ಮ ಮಾಧಣ್ಣ, ನಿಮ್ಮ ಬಾಲು ಅಲ್ಲ '

"ಬಾಲು ವಿಷಯ ಯಾಕ್ರಿ ಈಗ? ಯಾವುದಕ್ಕೆ ಯಾವ್ದು ಹೋಲಿಕೆ?"

"ಮಾತಾಡ್ತಾನೇ ಇರ್ತೀರೋ, ದಾರಿ ಬಿಡ್ತೀರೋ?"

"ತೂರ್ಕೊಂಡು ಹೋಗಿ, ನಾನೇನೂ ಅಷ್ಟು ದಪ್ಪ ಇಲ್ಲ."

"ದಪ್ಪ ಇಲ್ವಾ? ಬೆಳಿಗ್ಗೆಗೂ ಈಗಿಗೂ ಡಬಲ್ ಆಗಿದೀರಾ. ಯಾಕೆ ಹೇಳಿ, ಪ್ರೊಫೆಸರನ್ನ ಬೇರೆಯಾಗಿ ಒಬ್ರೇ ಭೇಟಿ ಮಾಡ್ಲಿಲ್ವಾ, ಅದಕ್ಕೆ."

"ಹೋಗೀಪ್ಪ ನೀವು, ಏನೋ ಬಾಯಿ ಜಾರಿ ಅಂದ್ಬಿಟ್ಟೆ, ಅಷ್ಟಕ್ಕೂ ವಾಸು, ನಂಗೆ ಯಾಕೋ ಅವರ ಹತ್ರ ಮಾತಾಡೋಕೇ ಆಗೋಲ್ಲ "

"ಹೌದು, ಅದು ಹಾಗೇನೇ ಹೊಸ ಹೊಸದರಲ್ಲಿ. ಆಮೇಲೆ ಪಾಪ ಈ ಬಡಪಾಯಿ ವಾಸು . ."

ಇಬ್ಬರೂ ನಕ್ಕ ಶಬ್ದ. ವೇಣುವಿಗೆ ಆಶ್ಚರ್ಯವೋ ಆಶ್ಚರ್ಯ. ನನ್ನನ್ನು ಒಂಟಿಯಾಗಿ ಭೇಟಿ ಮಾಡಿದಳೆ? ಏನೀ ಮಾತಿನ ಅರ್ಥ? ಈ ಮೂರು ತಿಂಗಳಲ್ಲಿ ಈ ಹುಡುಗಿ ಹಾಸ್ಟಲಿನ ವಾಸುವನ್ನೇ ಹೇಗೆ ಆಕರ್ಷಿಸಿಬಿಟ್ಟಿದ್ದಾಳೆ ಎಮ್ಮೆಯ ಹಾಗೆ ಮಲಗಿರೊ ಈ ದಡ್ಡ ಬಾಲಚಂದ್ರನಿಗೆ ಇದರ ಅರಿವಾದರೂ ಇದೆಯೇ?

ಮೇಲೆ ಹತ್ತಿ ಬಂದ ವಾಸು "ಬರ್ಲಾ ಒಳಗೆ ಮಾಧಣ್ಣ?" ಎಂದ

"ಬಾ ವಾಸು, ಇದೇನು ಇಷ್ಟು ಹೊತ್ತಲ್ಲಿ ಬಂದೆ?"

"ಎದ್ದೇ ಇದೀರಾ? ನೋಡಿ ಆ ಸುಮ 'ಬಿಲ್‌ಕುಲ್ ನೀ ಒಳಗೆ ಹೋಗ್ಬೇಡ, ಅವರು ಮಲಗಿರ್‍ತಾರೆ ಅಂತ ದಬಾಯಿಸಿಬಿಟ್ಳು

' ಇರ್‍ಲಿ, ಏನು ಸಮಾಚಾರ?

"ಅಣ್ಣ ಹೇಳಿಲ್ವಾ? ಈ ಸಾಯಂಕಾಲ ಹಾಸ್ಟೆಲ್‌ನಲ್ಲಿ ನಿಮಗೆ ಡಿನ್ನರ್ ಇಟ್ಕೊಂಡಿದೀವಿ, ನೀವು ಬರ್‍ಬೇಕು"

"ಏನು?ನನಗೆ ಡಿನ್ನರ್ರಾ? ಅಣ್ಣ ಇದಕ್ಕೆ ಒಪ್ಕೊಂಡ್ರಾ?"

'ಮೊದ್ಲು ಬೈದುಬಿಟ್ರು ಆಮೇಲೆ 'ಯಾವ ಅದ್ದೂರಿನೂ ಮಾಡೋಲ್ಲಾಣ್ಣ. ಸುಮ್ನೆ ನಾವು ನಾವೇ ಊಟಮಾಡೋ ಹಾಗೇನೆ-ಮಾಧಣ್ಣಾನೂ ನಂಜೊತೆ ಇರ್‍ಲಿ'ಅಂದೆ ಒಪ್ಕೊಂಡ್ರು?'

"ಅಣ್ಣನ್ನ ಒಪ್ಪಿಸ್ಬಿಟ್ಟು ನನ್ನನ್ನು ಸಿಗಿಸಿಬಿಟ್ರಿ. ನಾನೀಗ ಬರೋಲ್ಲಾಂದ್ರೆ?"

"ಅಣ್ಣಂಗೆ ಹೇಳ್ತೀನಿ" ಎಂದು ನಕ್ಕ ವಾಸು

ಹಾಗೇ ಒಂದು ದೊಣ್ಣೇನೂ ಕೊಡು ಅಣ್ಣಂಗೆ"-ಎಂದು ವೇಣುವೂ ನಕ್ಕ 'ಇದೆಲ್ಲಾ ಸರಿ, ಎಲ್ಲಾ ಹೇಗೆ ಓದ್ತಾ ಇದೀರಿ ಎಂದು ವಿಚಾರಿಸಿದ

ಅದನ್ನ ಕೇಳೋದೇ ಬೇಡ ನಮ್ಮ ಹಾಸ್ಟಲ್‌ಗೆ ಯಾವಾಗ್ಲೂ ಸೆಂಟ್ ಪರ್‍ಸೆಂಟ್ ಫಸ್ಟ್‌ಕ್ಲಾಸ್ ರಿಸಲ್ಟೇ ಯಾಕೆ ಹೇಳಿ ನೋಡೋಣ?' ಹೆಮ್ಮೆಯಿಂದ ಕೇಳಿದ ವಾಸು

' ಇನ್ನು ಶುರುಮಾಡು ಅಣ್ಣ ನಮಗೆ ಗಾಡು, ಗುಡಾಣ, ಮಾಧಣ್ಣ ಇಷ್ಟು ದಪ್ಪ ಅಷ್ಟು ಉದ್ದ

"ನೋ ನೋ, ಹಾಗೆಲ್ಲಾ ಹೇಳೋಲ್ಲಪ್ಪ ಒಂದು ಮಾತ್ರ ಹೇಳ್ತೀವಿ ನಾವೆಲ್ಲ ಯಾರು ಹೇಳಿ... ನಾವು ಅನಂತರಾಯರ ಮಕ್ಕಳು. ವೇಣು ಮಾಧವ್‌ಗೆ ತಮ್ಮಂದಿರು, ಅದಕ್ಕೆ ನಮಗೆ ಒಳ್ಳೆ

ರಿಸಲ್ಲೊಂತ"

"ಸಾಕು ನಿಲ್ಸು ನಿನ್ನ ಹರಟೆ. ಪೇಷೆಂಟ್ಸಿಗೆ ನೀನು ನಾಳೆ ಔಷಧೀನೇ ಕೊಡ್ತೀಯೋ ಹರಟೇಲಿ ಕೊಲ್ತೀಯೋ. ದೇವ್ರೇ ಕಾಪಾಡ್ಬೇಕು ಅವರನ್ನು. ಇರಲಿ, ನಾನು ಎಷ್ಟು ಹೊತ್ತಿಗೆ ಬರ್ಬೇಕು?"

"ನಿಮಗನುಕೂಲ ಆದಾಗ"

"ರಾತ್ರಿ ಹನ್ನೊಂದು ಗಂಟೇಗೆ"- ತುಟಿ ಕಚ್ಚಿಕೊಳ್ಳುತ್ತಾ ಕೊಂಕಿನಿಂದ ಹೇಳಿದ

"ನೋಡಿದ್ರಾ . "

"ನಂಗಾಗ಼್ೇ ಅನುಕೂಲ ಆಗೋದು, ನಾನೇನ್ಮಾಡ್ಲಿ?" ಮತ್ತೆ ಛೇಡಿಸಿದ

"ಸರಿ ಹಾಗಾದ್ರೆ, ಸ್ವಲ್ಪ ಏಳಿ, ನಿಮ್ಮ ಹಾಸಿಗೇನೂ ತೊಗೊಂಡ್ಬರ್ತೀನಿ ಅಲ್ಲಿಗೆ"

'ಅಲ್ಲಿ ಹಾಸಿಗೆ ಇಲ್ಲೇನು?"

ಇದೆ ಆದ್ರೆ ನಿಮ್ಮ ಉದ್ದಕ್ಕೆ ಸರಿಹೋಗೋದು ಇದ್ದ ಹಾಗೆ ಕಾಣಲಿಲ್ಲ"

'ಹಾಗೇ ಹಾಸಿಗೇಲಿ ಮಲಗೋಕೆ ಜೊತೇನೂ' ಕಣ್ಣು ಮಿಟುಕಿಸಿ ಕೇಳಿದ ವೇಣು

'ನೀವು ಅಸಾಧ್ಯ ಮಾಧಣ್ಣ ಅಮೆರಿಕಾಗೆ ಹೋಗಿ ಏನೇನೋ ಕಲಿತಿದ್ದೀರಾ, ಅಣ್ಣಂಗೆ ಖಂಡಿತ ಹೇಳಿಬಿಡಬೇಕು ಇದೆಲ್ಲಾ" ಗಾಬರಿ ಪಟ್ಟಂತೆ ನಟಿಸಿದ ವಾಸು

'ಕೋಲು ಅಣ್ಣಂಗೆ' ಮರಿಬೇಡ ವಾಸು" ಎನ್ನುತ್ತಾ ಚೇಷ್ಟೆಯಿಂದ ನಗುತ್ತಾ ಎದ್ದು, ವಾಸುವಿನ ಹೆಗಲ ಮೇಲೆ ಕೈಹಾಕಿ, ಜೊತೆಯಲ್ಲೇ ಇಳಿದು ಬರುತ್ತಾ -

ಎಂಟು ಗಂಟೇಗೆ ಬಂದ್ರೆ, ವಿಲ್ ಇಟ್ ಬಿ ಆಲ್‌ರೈಟ್?" ಎಂದ ಗಂಭೀರವಾಗಿ

"ಓಕೇ ಎನ್ನುತ್ತ ಹೊರಬರುತ್ತಿದ್ದ ವಾಸು ಬಾಗಿಲಲ್ಲಿ ಸುಮಳನ್ನು ನೋಡಿ-

"ರಾತ್ರಿ ಎಂಟು ಗಂಟೇಗೆ' ಎಂದು ಕೈಯಾಡಿಸಿ ಹೊರನಡೆದ

ವೇಣು ವಾಸುವನ್ನು ಕಳುಹಿಸಿಕೊಟ್ಟು ತಂದೆಯ ಕೋಣೆಗೆ ಬಂದಾಗ ತಂದೆ ಎದ್ದು ಕುಳಿತಿದ್ದರು. ಸುಮ ಬೆಳ್ಳಿಯ ಚೆಂಬಿನಲ್ಲಿ ನೀರು ತಂದು, ಅವರ ಮುಂದೆ ಒಂದು ಬೇಸಿನ್ ಹಿಡಿದು ಮುಖ ತೊಳೆಯಲು ಸಹಾಯ ಮಾಡುತ್ತಿದ್ದಳು ತಾಯಿ ಎದ್ದು ಹೋಗಿದ್ದವರು ಮತ್ತೆ ಬಂದು ಕುಳಿತರು ಬಾಲುವೂ ಆಕಳಿಸುತ್ತಾ ಬಂದು ಕೊಠಡಿಯ ಬಾಗಿಲಲ್ಲಿ ನಿಂತ.

ಸುಮ, ಬೇಸಿನ್ ಚೆಂಬುಗಳನ್ನು ತೆಗೆದುಕೊಂಡು ಹೊರಗಡೆ ಹೋಗುತ್ತಿದ್ದಂತೆ ಬಾಲು- "ಮಾವ, ನಾನೂ ವೇಣು ಹಾಗೇ ಹೊರಗಡೆ ಒಂದು ಸುತ್ತು ಹಾಕಿ ಬರ್ತೀವೆ" ಎಂದ ತನ್ನ ಕಾರ್ಯಕ್ರಮವನ್ನು ಬಾಲುವೇ ತೀರ್ಮಾನಿಸಿದ್ದನ್ನು ಕಂಡು ವೇಣು ಪ್ರತಿ ಹೇಳಲಿಲ್ಲ ರಾಯರು ಅವರ ಮಾತನ್ನೇ ಗಮನಿಸದಂತೆ "ನೀನು ಕಾಲೇಜಿಗೆ ಯಾವತ್ತು ಸೇರಬೇಕು ವೇಣು?" ಎಂದರು, ಏನೋ ಮನದಲ್ಲೇ ಗುಣಾಕಾರ ಹಾಕಿ.

"ಸೋಮವಾರ ಅಣ್ಣ "

"ಇವತ್ತಿನ್ನೂ ಗುರುವಾರ"ಎಂದುಕೊಂಡರು ರಾಯರು.

"ಹೌದಣ್ಣಾ, ನಾಳೆ ನಾಡಿದ್ದು, ಆಚೆ ನಾಡಿದ್ದು ಮೂರು , ದಿನಾನೂ ಕಂಪ್ಲೀಟ್ ರೆಸ್ಟ್"ಎಂದ ವೇಣು.

ಸುಮ ಎಲ್ಲರಿಗೂ ಕಾಫಿ ತಂದುಕೊಟ್ಟಳು. ತಾನು ಮಾತ್ರ ಅಲ್ಲಿ ನಿಲ್ಲುವಂತಿಲ್ಲ ಎಂದುಕೊಂಡರೂ ಅವರು ಕುಡಿದಾದ ಮೇಲೆ ಲೋಟಗಳನ್ನು ತೆಗೆದುಕೊಂಡು ಹೋಗುವ ನೆವದಲ್ಲಿ, ದೂರವಾಗಿ ನಿಂತಳು.

"ಯಾವ ಕಡೆ ಹೋಗ್ತೀರಾ ಮಾಧೂ?"ತಾಯಿ ದನಿ ತೆಗೆದರು.

"ಯಾವ ಕಡೆ ಅಂತ ಇಲ್ಲ ಅತ್ತೆ. ಬೆಂಗಳೂರಿನ ರಸ್ತೆಗಳು ಇದ್ದಲ್ಲೇ ಇವೆಯೋ ಅಥವಾ ಎಲ್ಲಾದ್ರೂ ಹೊರಟುಹೋಗಿವೆಯೋ ನೋಡ್ಬೇಕಂತೆ ನಿಮ್ಮ ಮಗ"ಎಂದು ಕೀಟಲೆಯಾಗಿ ನುಡಿದ, ಬಾಲುವಿನ ಬಳಿ ಬಂದು ಅವನ ಬೆನ್ನ ಮೇಲೆ ಹೊಡೆಯುತ್ತಾ "ಯಾಕಮ್ಮಾ"ಎಂದ ಮಾಧು

"ಹಾಗೇ ಚಂಪಕ ಮನೆತನಕ ಹೋಗಿಬರ್ತೀಯೇನೋ ಅಂತ" ಎಂದು ಮಾಧು ಮರೆತಿದ್ದ ಚಂಪಕಳನ್ನು ಜ್ಞಾಪಿಸಿದರು ನಾಗಮ್ಮ

ಹೌದು, ವೇಣುವಿಗೆ ಮರೆತೇಹೋಗಿತ್ತು ಚಂಪ ಅವನ ನೆನಪಿನಿಂದ ಅದೇಕೆ ಜಾರಿದಳು ಎಂದು ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ ಹಾಗೆಂದು ಅವಳನ್ನು ಈಗ ಹುಡುಕಿಕೊಂಡು ಹೋಗುವ ಅಗತ್ಯವೂ ಕಾಣಲಿಲ್ಲ ಅವನಿಗೆ

"ಈಗ ಎಲ್ಲೂ ಹೋಗಲ್ಲಮ್ಮ, ಆಗ್ಲೇ ಹೇಳಿದ ಹಾಗೆ ಈ ಮೂರು ದಿನ ಮನೆ ಅಷ್ಟೆ, ಇಲ್ಲೇ ಇರ್ತೀನಲ್ಲ ಇನ್ಮೇಲೆ ಆಮೇಲೊಂದು ದಿನ ಹೋದರಾಯ್ತು" ಎಂದುಬಿಟ್ಟ.

ಅವನ ಮಾತಿನಿಂದ ತಾಯಿಗೆ ಸಮಾಧಾನವಾಯಿತೋ ಇಲ್ಲವೋ ತಿಳಿಯಲಿಲ್ಲ ತಾಯಿಯದು ಎಂದೂ ಗಂಭೀರ ಮುಖ ಆಕೆ ಮಾತನಾಡಿದ ಹೊರತು ಆಕೆಯ ಭಾವನೆಗಳು ಮತ್ತೊಬ್ಬರಿಗೆ ತಿಳಿಯುವುದಿಲ್ಲ. ಈಗ ಯಾವ ಬದಲಾವಣೆಯೂ ಇಲ್ಲದೆ ಇದ್ದುದರಿಂದ ಅವರಿಗೆ ಅಸಮಾಧಾನವಾಗಿದೆಯೆನಿಸಲಿಲ್ಲ ಮಾಧುವಿಗೆ

ಎಲ್ಲ ಲೋಟಗಳನ್ನೂ ತೆಗೆದುಕೊಂಡು ಸುಮ ಹೊರಟುಹೋದಳು ವಿದೇಶದಿಂದ ಬಂದ ಕೂಡಲೆ ವೇಣು ಚಂಪಳ ಮನೆಗೆ ಓಡುತ್ತಾನೆಂಬ ಕಲ್ಪನೆಯನ್ನು ನಾಗಮ್ಮನವರು ಸುಮಳಿಗೆ ಮಾಡಿಸಿದ್ದರು ಈಗ ಅವನು ನುಡಿದ ಮಾತಿನಿಂದ ಸುಮಳಿಗೆ ಆಶ್ಚರ್ಯವಾಯಿತು. ಚಂಪ ಸುಮಳಿಗೆ ತಿಳಿಯದ ವ್ಯಕ್ತಿಯಲ್ಲ. ವೇಣುವನ್ನು ಕಾಣುವ ಮೊದಲು, ನಾಜೂಕಿನ, ನವನಾಗರಿಕ ಚಂಪಳನ್ನು ವೇಣುವಿನ ಪಕ್ಕದಲ್ಲಿ ನಿಲ್ಲಿಸಿ ಕಲ್ಪಿಸಿದ ದೃಶ್ಯ ಅಷ್ಟು ಸ್ಪಷ್ಟವಾಗಿರಲಿಲ್ಲ ಈಗೇಕೋ ಸುಮಳಿಗೆ, ಚಂಪ ಯಾವುದರಲ್ಲೂ

ವೇಣುವಿಗೆ ಸರಿಯಾದ ಜೋಡಿ ಎನಿಸಲಿಲ್ಲ. ಆದರೆ ನಾಗಮ್ಮನವರ ಕಣ್ಣಿಗೆ ಅದು ಅದ್ವಿತೀಯವಾಗಿ ಕಂಡಿತ್ತು.

ಬಾಲುವಿನೊಂದಿಗೆ ಸಿದ್ಧವಾಗಿ ಹೊರಟು ನಿಂತಾಗ, ಕಾರಿನ ಬಳಿ ಒಂದು ಘಳಿಗೆ ನಿಂತು ಮನೆಯ ಕಡೆ ದೃಷ್ಟಿ ಹರಿಸಿದ ವೇಣು, ಮನೆಯನ್ನು ಅಖಂಡವಾಗಿ ನೋಡುವ ತೃಪ್ತಿಯಿಂದ ಸಂಜೆಯ ಬೆಳಕು, ನವಿರಾಗಿ ಬೀಸುತ್ತಿದ್ದ ಗಾಳಿಯ ತಂಪಿನಲ್ಲಿ ಪೂರ್ಣ ಆವರಣಕ್ಕೆ ಒಂದು ಶೋಭೆ ತಂದಿತ್ತು. ಗುಲಾಬಿ ಗುಚ್ಛಗಳು ಮೆಲುಮೆಲುವಾಗಿ ಅಲುಗಾಡುತ್ತಿದ್ದುವು. ಅಷ್ಟಗಲಕ್ಕೂ ಕಣ್ಣು ಹಾಯಿಸಿದ ವೇಣುವಿನ ದೃಷ್ಟಿ ಕಟ್ಟಡದ ಬಲಭಾಗದ ಒಂದು ಕೋಣೆಯ ಕಿಟಕಿಗೆ ಕೀಲಿಸಿ ನಿಂತಿತು. ಕಿಟಕಿಯೊಳಗಿಂದ ಬಿಳಿಯ ಹಣೆ, ಅಲ್ಲಿನ ಕಾಡಿಗೆಯ ತಿಲಕ, ಅಗಲ ಕಪ್ಪು ಕಣ್ಣುಗಳು ಕಾರಿನ ಕಡೆಗೇ ನೋಡುತ್ತಿದ್ದುವು. ಆ ಕೋಣೆ ಯಾವುದು? ತನ್ನ ಮಧ್ಯಾಹ್ನದ ಟೂರಿನಲ್ಲಿ ಅದು ಹೇಗೆ ತಪ್ಪಿಸಿಕೊಂಡಿತು? ಓ, ಅದು ಮನೆಯ ಲಂಬರ್. ಬೇಡದ ವಸ್ತುಗಳಿರುವ ಕೊರಡಿ ಹಿಂದಿನ ವೆರಾಂಡದಿಂದ ನಾಲ್ಕು ಮೆಟ್ಟಲಿಳಿದು ಎಡಗಡೆಗೆ ಕಟ್ಟಡದಿಂದ ಸ್ವಲ್ಪ ದೂರಕ್ಕೆ ಚಾಚಿದ್ದ ಕೋಣೆ ಸುಮ ಅದರಲ್ಲಿ ಹೋಗಿದ್ದಾಳೇಕೆ?

ಯೋಚಿಸುತ್ತಾ ಕಾರು ಹತ್ತಿ ಬಾಲುವಿನ ಪಕ್ಕ ಕುಳಿತ ಅವನಿಗೆ ಸುಮಳನ್ನು ಮೊದಲ ಬಾರಿಗೆ ಬೆಳಿಗ್ಗೆ ಕಂಡಾಗ ಅಚಾನಕವಾಗಿ ಪ್ರೇಮ ಉದಿಸಿತ್ತು. ಕ್ರಮೇಣ ಬಾಲುವಿನಂಥವನ ಮುಷ್ಟಿಯಲ್ಲಿ ಸಿಕ್ಕು ಒದ್ದಾಡುವ ಹೆಣ್ಣೆಂದು ಕನಿಕರವಾಗ ತೊಡಗಿತು ಅವಳಿಗೂ ಬಾಲುವಿನೊಂದಿಗೆ ಎಲ್ಲಾದರೂ ತಿರುಗಾಡುವ ಆಸೆಯಿಲ್ಲವೆ? ಈ ಪುಣ್ಯಾತ್ಮ ಎಲ್ಲಿಗೂ ಕರೆದೊಯ್ಯುವನೋ ಇಲ್ಲವೋ!

ಕಾರು ಹೊರಟಿತು. ತನ್ನ ಆಲೋಚನೆಗಳನ್ನು ಒಳಗೇ ತಡೆದಿಡಲಾರದೆ ವೇಣು-"ಸುಮಾನ್ನೂ ಕರೆದಿದ್ರೆ ಚೆನ್ನಾಗಿತ್ತಲ್ವಾ ಬಾಲು?" ಎಂದ

ಬಾಲುವಿನ ಮುಖ ಗಂಟಾಯಿತು "ಅವಳ್ಯಾಕೆ ಸದ್ಯ!"ಎಂದ

"ನೀನವಳನ್ನ ತುಂಬಾ ತಾತ್ಸಾರ ಮಾಡ್ತೀಯ ಬಾಲು. ನಾನು ಈ ಸ್ವಲ್ಪ ಹೊತ್ತಲ್ಲೇ ಪತ್ತೇ ಹಚ್ಚಿಬಿಟ್ಟೆ."

"ಏನು ಹಾಗಂದ್ರೆ? ಇನ್ನೇನ್ಮಾಡಬೇಕಿತ್ತು? ತಲೆ ಮೇಲೆ ಕೂರಿಸ್ಕೋ ಬೇಕಿತ್ತಾ?" -ಅಸಹನೆಯ ಪ್ರಶ್ನೆ. ಅವನ ಪ್ರಶ್ನಾವಳಿಯಿಂದ ಬೇಸರಿಸಿಕೊಳ್ಳದೆ ವೇಣು "ತಲೆ ಮೇಲಲ್ಲದೆ ಇದ್ರೆ ತೊಡೇ ಮೇಲೆ ಕೂರಿಸ್ಕೋ. ಇಷ್ಟು ಅಲಕ್ಷ್ಯ ಮಾಡಬಾರ್ದು" ಸುಮಳ ಪರವಾಗಿ ವಕಾಲತ್ತು ವಹಿಸಿದ

"ನಾನ್‌ಸೆನ್ಸ್, ಏನು ನೀವು ಹೇಳ್ತೀರೋದು ಡಾ||ವೇಣುಮಾಧವ್?"ಎಂದ ವೇಣುವಿನ, ಸುಮಳ ಮೇಲಿನ ಕೋಪವನ್ನು ಗೇರಿನ ಮೇಲೂ ಆಕ್ಸಿಲರೇಟರಿನ ಮೇಲೂ ಹಾಕುವಂತೆ ಕಾರಿನ ವೇಗ ಹೆಚ್ಚು ಮಾಡಿದ. ವೇಣು ನಗುತ್ತಾ ಬಾಲುವಿನ ಬೆನ್ನು ತಟ್ಟಿ-

"ಎಕ್ಸೈಟ್ ಆಗ್ಬೇಡಿ ಮಿ||ಬಾಲಚಂದ್ರರ್. ನಿಮ್ಮ ಹೆಂಡತಿಯನ್ನು ಸ್ವಲ್ಪ ಚೆನ್ನಾಗಿ ನಡೆಸ್ಕೊಳ್ಳಿ ಎಂದೆ ಅಷ್ಟೆ" ಎಂದ

"ವೇಣು!" ಬಾಲು ಅರಚಿದ. "ಸುಮ ನನ್ನ ಹೆಂಡ್ತೀನ? ಆ ಪರದೇಶಿ ನನ್ನ ಹೆಂಡ್ತೀನಾ? ನೀನು ಡಾಕ್ಟರೇಟ್ ಪಡೆದಿರೋದು ಸಾರ್ಥಕವಾಯ್ತು. ವ್ಯವಹಾರ ಜ್ಞಾನ ಇಲ್ಲದ ನೀನು-"

"ಕ್ಷಮಿಸು ಬಾಲು ಯಾಕೋ ನಾನು ಹಾಗಂದ್ಕೊಂಡ್ಬಿಟ್ಟೆ. ಐ ಆಮ್ ರಿಯಲಿ ವೆರಿ ಸಾರಿ" ಎಂದ ವೇಣು ಅವನಿಗೆ ತಾನಾಡಿದ ಮಾತಿಗೆ ನಿಜಕ್ಕೂ ನಾಚಿಕೆಯಾಗಿತ್ತು.

ಆದರೆ ಒಳಗೊಳಗೇ ಹೃದಯ ಹಗುರವಾದಂತಾಯ್ತು ಸುಮ ಬಾಲುವಿನ ಹೆಂಡತಿಯಲ್ಲ ಎಂಬ ಸತ್ಯ ವಿನಾಕಾರಣ ಸಂತೋಷದ ತೆರೆಯನ್ನು ಎಬ್ಬಿಸಿತು

ಬಾಲುವೇ ಮುಂದುವರಿಸಿ-"ಹೋಗ್ಲಿ ಬಿಡು ಸದ್ಯ, ನಾವಿಬ್ರೇ ಇದ್ದಾಗ ಬಾಯಿ ಬಿಟ್ಟೆಲ್ಲಾ! ಹಿಂದೂ ಮುಂದೂ ಇಲ್ಲದ ಪರದೇಶಿ ಅವಳು ಸ್ವಲ್ಪ ನಿಮ್ಮ ವಾಸು ಜಾತೀಗೆ ಸೇರಿಸ್ಬಹ್ದು ಅಂತಿಟ್ಕೋ ಅವನಿಗಾದರೆ ಒಂದು ಭಾವನೋ, ಮಾವನೋ, ಚಿಕ್ಕಪ್ಪನೋ ಇದಾರೆ ಇದಕ್ಕೊಂದೂ ಇಲ್ಲ" ಎಂದ ನೇರವಾಗಿ ರಸ್ತೆ ನೋಡುತ್ತಾ ಚಕ್ರ ತಿರುಗಿಸುತ್ತಿದ್ದ ಬಾಲುವನ್ನು ನೋಡಿ ವೇಣುವಿಗೆ ಜಿಗುಪ್ಸೆಯಾಯಿತು ಒಂದು ಬಡ ಹೆಣ್ಣನ್ನು ಇವನು ಕಾಣುತ್ತಿದ್ದ ರೀತಿ ಕಂಡು ಹೇಸಿಗೆಯಾಯಿತು ಆದರೂ ಚಕಾರವೆತ್ತದೆ ಮೌನವಾಗಿ ಅವನನ್ನು ಪ್ರಚೋದಿಸಿದ.

ನೀನು ಹೋದ ಮೂರು ತಿಂಗಳಿಗೆ ಬಂದಳಂತೆ. ಏನೋ ಕತೆ ಹೇಳಿದ್ಲು. ಸರಿ ನಿಮ್ಮ ತಂದೆ ಕೇಳ್ಬೇಕಾ! ನಂಬಿಯೇಬಿಟ್ರು, ಹೆಣ್ಣು ಹುಡುಗಿ, ಹಾಸ್ಟಲ್ಲಿಗೆ ಕಳಿಸೋಕಾಗೋಲ್ವಲ್ಲ ಅಂತ ಚಡಪಡಿಸಿದ್ರು. ನಿಮ್ಮಮ್ಮ ಮಾವನಿಗೆ ತಕ್ಕ ಹೆಂಡತಿ 'ಮನೇಲಿ ಇರ್ಲಿ ಬಿಡಿ, ನಂಗೂ ಮಾಧುನೂ ಇಲ್ದೆ ಹೇಗೋ ಇದೆ ಸ್ವಲ್ಪ ಸಹಾಯಾನೂ ಮಾಡ್ತಾಳೆ' ಅಂದರಂತೆ ಅವಳು ತಳ ಊರಿಬಿಟ್ಟಳು "

ಅಣ್ಣ ಎಲ್ಲಾ ನನಗೆ ಬರೀತಿದ್ರು, ಈ ವಿಷಯ ಬರೆದ ಜ್ಞಾಪಕಾನೇ ಇಲ್ಲ ಅಥವಾ ಬರೆದಿದ್ರೇನೋ ಅಮ್ಮಂಗೆ ಸಹಾಯಕ್ಕೆ ಯಾರೋ ಬಂದಿದಾರೇಂತ ನಾನು ಲಕ್ಷ್ಯಕೊಟ್ಟು ಗಮನಿಸಿಲ್ಲ"ಎಂದು ಸ್ವಗತ ಹೇಳಿಕೊಂಡ ವೇಣು

ಏನು ಮಹಾ ದೊಡ್ಡ ವಿಷಯ ಅಂತ ಬರೆದಿರ್ತಾರೆ ಬಿಡು" ಎಂದ ಬಾಲು ಎದುರಿಗೆ ಕೆಂಪುದೀಪ ಅಡ್ಡ ಬಂದು ಹಲವಾರು ವಾಹನಗಳು ನಿಂತಿದ್ದುದರಿಂದ ಕಾರಿಗೆ ಬ್ರೇಕ್ ಹಾಕಿದಂತೆಯೇ ತನ್ನ ಮಾತಿಗೂ ಬ್ರೇಕ್ ಹಾಕಿದ ಮತ್ತೆ ಹಳದಿ ದೀಪ ಬಂದು ಹಸಿರು ಬಂದಾಗ-"ಥತ್! ಈಗಂತೂ ಹೆಜ್ಜೆ ಹೆಜ್ಜೇಗೆ ಈ ದೀಪ ಬಂದು ಹತ್ತು ನಿಮಿಷದ ಪ್ರಯಾಣಕ್ಕೆ ಒಂದು ಗಂಟೆ ಆದ್ರೂ ಸಾಲದು"ಎಂದು ಮತ್ತೆ ಕಾರು ಹೊರಡಿಸಿದ

ಅವನ ದೀಪದ ವ್ಯಾಖ್ಯಾನ ವೇಣುವಿಗೆ ಕಿವಿಗೆ ಹೋಗಲಿಲ್ಲ

"ಅದು ಸರಿ ಬಾಲು ಅವಳೆಂದರೆ ನಿನಗೆ ಯಾಕಿಷ್ಟು ಬೇಸರ, ತಿರಸ್ಕಾರ?"

"ಅವಳ ನಡವಳಿಕೆ ಅವಳನ್ನು ಅತ್ತೆ ಮಾವ ಬಹಳ ಏರಿಸಿ ಕೂರಿಸಿದ್ದಾರೆ ಅವಳಿಗೆ ಅವರಿಬ್ಬರನ್ನು ಬಿಟ್ಟರೆ ಇನ್ಯಾರಲ್ಲೂ ಗೌರವ ಇಲ್ಲ. ಈಗ ಮೂರು ತಿಂಗಳಿಂದಾನೂ ನೋಡ್ತೀದೀನಲ್ಲ. ನಾನು ಅಂದ್ರೆ ಅದೆಷ್ಟು ನಿರ್ಲಕ್ಷ್ಯ ಅವಳಿಗೆ 'ಬಾಲು ಹಲ್ಲು ಕಚ್ಚಿದ "ಏನು ಮಾಡಿದ್ಲು?"

'ಮಾಡೋದೇನು. ಅವಳೇನೇ ಮಾಡಲಿ, ಅತ್ತೆ ಮಾವ ಅವಳಿಗೆ ಅಷ್ಟೊಂದು ಸದರ ಕೊಡಬಾರ್ದು ಏನೋ ತುಂಬಾ ಬುದ್ಧಿವಂತಳಂತೆ. ಮಾವಂಗೆ ಆಫೀಸ್ ಕೆಲ್ಸ ಎಲ್ಲಾ ಮಾಡಿಕೊಡ್ತಾಳಂತೆ ಹಾಸ್ಟೆಲ್ ಅಕೌಂಟ್ಸ್ ಎಲ್ಲಾ ನೋಡ್ತಾಳಂತೆ ಆ ತೋಟ, ಮುಂದಿನ ಕೋಣೆ ಎಕ್ಸಿಬಿಷನ್ ಎಲ್ಲ ಅವಳದೇ ಕೈವಾಡ, ಅತ್ತೇಗಂತೂ ಅವಳಿರೋದು ಎರಡು ಎಕ್ಸ್‌ಟ್ರಾ ಭುಜ ಇದ್ದ ಹಾಗಂತೆ ಇರಲಿ ಅವರ ಕುರುಡು ಅಭಿಮಾನ ಅವರಿಗೇ ಚೆನ್ನ

ವೇಣು ಕೇಳುತ್ತಿದ್ದಾನೋ ಇಲ್ಲವೋ ನೋಡುವಂತೆ ಮಾತು ನಿಲ್ಲಿಸಿ, ಬಾಲು ಎಡಕ್ಕೆ ನೋಡಿದ ಪ್ರತಿ ಅಕ್ಷರವೂ ಬಿಡದೆ ವೇಣು ಕೇಳುತ್ತಿದ್ದ ಎಂಬ ವಿಷಯ ಅವನೇನು ಬಲ್ಲ!

'ಹೇಳು ಬಾಲು

ನಿಮ್ಮಪ್ಪ ಅಮ್ಮನ್ನ ಅಂತಾ ಇದೀನೀಂತ ಅಂದ್ಕೋಬೇಡ ಅವರು ನಂಗೂ ಪ್ರೀತಿಯ ಅತ್ತೆ ಮಾವ ಆದ್ರೂ ನನ್ನ ಮುಂದೆ ನನಗಿಂತ ಅವಳೇ ಶ್ರೇಷ್ಠ ಅನ್ನೋ ಹಾಗೆ ಮಾಡೋದು ನಂಗೇನೋ ಸರಿಕಾಣೋಲ್ಲ ಯಾರ್‍ಯಾರನ್ನ ಎಲ್ಲೆಲ್ಲಿಟ್ಟಿರಬೇಕೋ ಅಲ್ಲಿಟ್ರೆ ಚೆನ್ನ ನಾನೇ ಬುದ್ಧಿ ಕಲಿಸ್ತಿದ್ದೆ ಆದ್ರೆ ಮೂರು ತಿಂಗಳಿಗಾಗಿ ಬಂದವ್ನು, ನನಗೇಕೆ ಇಲ್ಲದ ಉಸಾಬರಿ? ಅಲ್ಲದೆ ಅವರಿಬ್ಬರಿಗೂ ಬೇಕಾದವಳು ನಾನು ಯಾಕೆ ಅವರ ಮನಸ್ಸು ನೋಯಿಸ್ಲಿ ಅಂತ ಬಾಯ್ಮುಚ್ಕೊಂಡೆ ಇನ್ನು ನೀನೀವಾಗ ಬಂದಿದ್ದೀಯಲ್ಲಾ '

ಅಷ್ಟಕ್ಕೂ ಅವಳೇನು ಮಾಡಿದಳೂಂತ ನೀನು ಹೇಳಿಲ್ಲ - ಮಧ್ಯೆ ತಡೆದು ಕೇಳಿದ ವೇಣು.

'ಇಂಥಾದ್ದು ಅಂತಿಲ್ಲ ವೇಣು ನಾ ಹೇಳಿದ ಒಂದು ಚಿಕ್ಕ ಕೆಲಸಾನೂ ಮಾಡೋಲ್ಲ ಒಂದು ದಿನವಂತೂ ನನ್ನ ಒಂದೆರಡು ಬಟ್ಟೆ ಒಗೆದ್ಕೊಡು ಅಂದೆ, ರಂಗ ಎಲ್ಲೋ ಹೋಗಿದ್ದಾಂತ. ಉಹುಂ ಮಾಡ್ಲಿಲ್ವಲ್ಲಾ ಅತ್ತೇಗೆ ಹೇಳಿದ್ರೆ, 'ಖಂಡಿತ ಮಾಡಿರೋವ್ಳು ಕಣೋ, ಪಾಪ ನಾಳೆ ಅವಳಿಗೆ ಏನೋ ಟೆಸ್ಟಿದೆಯಂತೆ, ಓದ್ಕೋ ಬೇಡ್ವ? ನಿಂಗೇನು ಬೇರೆ ಬಟ್ಟೇನೇ ಇಲ್ವಾ' ನಾಳೆ ರಂಗ ಬಂದ್ಬಿಡ್ತಾನೆ, ಒಗೆದ್ಕೊಡ್ತಾನೆ ಇಟ್ಟಿರು" ಅಂತ ವಹಿಸ್ಕೊಂಡು ಬಂದ್ಬಿಟ್ರು. ಅವಳೆದುರಿಗೇ ಹಾಗೆ ಮಾಡಿದ್ರೆ ಇನ್ನೂ ತಲೆ ತಿರುಗುತ್ತೋ ಇಲ್ವೋ ಹೇಳು. ಒಟ್ನಲ್ಲಿ ನೋಡು ವೇಣು, ಅವಳಿಗೆ ತಾನು ಸುಂದರಿ, ಬುದ್ಧಿವಂತೆ

ಅನ್ನೋ ಸೊಕ್ಕು ತಲೆಗೇರಿದೆ ಜೊತೇಗೆ ದೊಡ್ಡವರ ಬೆಂಬಲವಿದೆ. ನಮ್ಮ ಲಕ್ಷ್ಯವಿಲ್ಲ ಅಷ್ಟೆ. ಇನ್ನು ನೀನುಂಟು ಅವಳುಂಟು. ಮೆದುವಾ ಗಿದ್ದರೆ ನಿನ್ನನ್ನು ಹುಲ್ಲು ಕಡ್ಡಿ ನೋಡಿದ ಹಾಗೆ ನೋಡ್ತಾಳೆ ಅಷ್ಟೆ" ಎಂದು ತುಟಿ ಬಿಗಿ ಹಿಡಿದ.

ವೇಣುವಿಗೆ ಈಗ ಎಲ್ಲಾ ಅರ್ಥವಾಯಿತು. ಬಿಎಸ್ಸಿ ಏಳು ಸಲ ಕಟ್ಟಿದರೂ ಪಾಸಾಗದ ಬಾಲು ತೋಟ ನೋಡಿಕೊಳ್ಳುವಂತಾಯಿತು. ಬುದ್ಧಿವಂತಳಾಗಿ ಓದುತ್ತಿರುವ ಸುಮಳ ಬಗೆಗೆ ಅದೂ ಅನಾಥಳಾಗಿ ಬಂದು ಅಷ್ಟೈಶ್ವರ್ಯಸಂಪನ್ನ ದಂಪತಿಗಳ ಆದರ ಪಡೆದು ಮುಂದೆ ಬರುತ್ತಿರುವ ಈ ಹೆಣ್ಣಿನ ಬಗೆಗೆ ಅವನಲ್ಲಿ ಈರ್ಷ್ಯೆ ತುಂಬಿದೆ ಎನ್ನುವುದು ಸ್ಪಷ್ಟವಾಯಿತು ಈ ಅಸೂಯೆಯಿಂದ ಅವನು ಅವಳನ್ನು ತಿರಸ್ಕಾರವಾಗಿ ಕಂಡು ತನ್ನ ಶ್ರೇಷ್ಠತೆ ತೋರಿಸಿದಾಗಲೆಲ್ಲಾ ಅವಳು ಇನ್ನೂ ಸೆಟೆದು ಅವನ ಬಗೆಗೆ ನಿರ್ಲಕ್ಷ್ಯಳಾಗಿದ್ದಾಳೆಂದು ಯಾರಾದರೂ ಊಹಿಸಬಹುದು. ಮುಂದೆ ಹತ್ತು ನಿಮಿಷ ಇಬ್ಬರೂ ಮಾತನಾಡಲಿಲ್ಲ

ಏನೋ ಹೇಳಿಬಿಟ್ಟೆ ವೇಣು ಇದು ನಿಮ್ಮ ಮನೆಗೆ ಸಂಬಂಧಪಟ್ಟದ್ದು ಏನೂ ಮನಸ್ಸಲ್ಲಿ ಇಟ್ಕೋಬೇಡ ಬಾಲು ಎಷ್ಟು ಒಡ್ಡ ಎಂದ್ಕೋಬೇಡ "

ಅಷ್ಟಕ್ಕೂ ಅವಳು ಓದುತ್ತಿರೋದೇನು?"

"ಬಿ ಎಸ್ಸಿ ಫೈನಲ್ ಕೆಮೆಸ್ಟ್ರಿ, ಮೇಜರಂತೆ ನಿನ್ನ ಸ್ಟೂಡೆಂಟೇ ಆಗ್ತಾಳೆ '

'ಇವಳು ಮಿಸ್ ಊರ್ಮಿಳಾ, ಬಿ.ಎಸ್ಸಿ, ಫೈನಲ್'-ಎಂದು ದೇವದಾಸನಾಡಿದ ಮಾತು, ಸುಮ ಮರದಡಿ ಬಿಟ್ಟು ಹೋದ ಪುಸ್ತಕ 'ಊರ್ಮಿ, ಏನ್ಮಾಡ್ಲೆ? ಭಯವಾಗುತ್ತೆ' ಚೀಟಿಯಲ್ಲಿದ್ದ ವಾಕ್ಯಗಳು ನೆನಪಿಗೆ ಬಂದು ಅದು ಸುಮ ತನ್ನ ಕುರಿತು ಗೆಳತಿ ಊರ್ಮಿಳೆಯನ್ನು ಕೇಳಿರುವ ಪ್ರಶ್ನೆಯೇ ಎಂದು ಹೊಳೆಯಿತು ತನ್ನನ್ನು ಕಾಣುವ ಮೊದಲೆ ಸುಮಳಿಗೆ ತನ್ನಲ್ಲಿ ಭಯವೆ? ಹುಚ್ಚು ಹುಡುಗಿ, ವೇಣುಮಾಧವ ಎಂದರೆ ಏನೆಂದುಕೊಂಡಿದ್ದಿ ಭಯಪಡಲು'ಎಂದು ತುಟಿಯಂಚಿನಲ್ಲೇ ನಕ್ಕ

ಯಾಕೆ ಸುಮ್ಮನಾಗಿಬಿಟ್ಟೆ ವೇಣು?"- ಬಾಲು ಎಚ್ಚರಿಸಿದ.

'ನೀ ಹೇಳಿದ್ದೆಲ್ಲಾ ಕೇಳಿ ಏನೋ ಯೋಚಿಸ್ತಿದ್ದೆ. ನೀ ಹೇಳಿದ್ದು ಸರಿ ಅಮ್ಮ, ಅಣ್ಣ ಅವಳನ್ನ ಅಷ್ಟು ಅಟ್ಟಕ್ಕೇರಿಸಬಾರದು ನೀನೆಂದ ಹಾಗೇ ನಾನು ಬಂದಿದ್ದೀನಲ್ಲ ಐ ವಿಲ್ ಟೇಕ್ ಕೇರ್"ಎಂದ ಬಾಲುವಿನ ಮನ ಗೆದ್ದುಕೊಳ್ಳಲು ಮಾತ್ರ ನುಡಿದ ಮಾತದು

ಅಲ್ಲಿಂದ ಮುಂದೆ ಬಾಲುವಿನ ಮನದಿಂದ ಸುಮ ದೂರಹೋದಳು. ಆದರೆ ವೇಣುವಿನ ಮನಸ್ಸಿನಲ್ಲಿ ಪ್ರತಿಷ್ಠಿತಳಾದಳು.

ರಸ್ತೆ ಕಟ್ಟಡಗಳನ್ನೆಲ್ಲಾ ನೋಡುತ್ತಾ ಅವರು ಊರೆಲ್ಲಾ ಸುತ್ತಿ ಮುಗಿದಾಗ "ಇನ್ನು ಹೋಗೋಣ

ಬಾಲು. ಇನ್ನೂ ಹಾಸ್ಟೆಲ್ಲಿಗೆ ಊಟಕ್ಕೆ ಬೇರೆ ಹೋಗ್ಬೇಗು" ಎಂದ ವೇಣು

"ಎಲ್ಲರನ್ನೂ ಕರೆದಿದ್ದಾರೇನು?"

"ವಾಸು ಹಾಗೆಂದ."

"ಅವನೊಬ್ಬ. ಬಹಳ ಬುದ್ಧಿವಂತ ಅಂತ ಮಾವ ಉಬ್ಬಿಸಿ ಕೂರಿಸಿದ್ದಾರೆ ಸುಮಾಗೂ ಅವನಿಗೂ ಅತೀ ಸ್ನೇಹ. ಮಾವ ನೋಡಿದ್ರೂ ಸುಮ್ನಿರ್ತಾರೆ. ಒಂದುವೇಳೆ ಅವರಿಬ್ರಿಗೂ ಗಂಟುಹಾಕೋಣ ಅಂತ್ಲೇ ಇದಾರೋ ಏನೋ ಅಂತ ನನ್ನ ಭಾವನೆ" ಎನ್ನುತ್ತಾ ಬಾಲು ಮನೆಯತ್ತ ಕಾರು ತಿರುಗಿಸಿದ

ಆ ಮಾತು ಕೇಳುತ್ತಿದ್ದಂತೆ ವೇಣುವಿನ ಹೃದಯದ ಹರ್ಷದ ಚಿಲುಮೆ ಬತ್ತತೊಡಗಿತು ಸುಮ ಬಾಲುವಿನ ಹೆಂಡತಿಯಲ್ಲ ಅವಳೊಬ್ಬ ಅನಾಥ ಹುಡುಗಿ ಅವಳಿಗೂ ವಾಸುವಿಗೂ ಅತಿ ಸ್ನೇಹ ಅವರಿಬ್ಬರಿಗೂ ತಂದೆ ಗಂಟು ಹಾಕ ಬಹುದೇನೋ ಎಂಬ ಮಾತು ಅವನ ಮನಸ್ಸನ್ನು ಅಲ್ಲೋಲ ಕಲ್ಲೋಲ ಮಾಡಿತು

* * *

ವೇಣು, ಬಾಲು ಮನೆಗೆ ಹಿಂತಿರುಗಿದಾಗ ಸಂಜೆಯೂ ಮುಳುಗಿ ಕತ್ತಲಾವರಿಸುತ್ತಿತ್ತು ಕಾರನ್ನು ಮನೆಯ ಮುಂದೆಯೇ ಬಿಟ್ಟು ಇಬ್ಬರೂ ಒಳಬಂದರು. ಬಾಲು, ಅಲ್ಲಿಯೇ ಹೊರ ವರಾಂಡದ ಮೆಟ್ಟಿಲು ಮೇಲೆ ಕುಳಿತ ಅತ್ತೆಯೊಂದಿಗೆ ಮಾತನಾಡುತ್ತ ನಿಂತ. ವೇಣು ಪ್ಯಾಂಟಿನ ಜೇಬುಗಳಲ್ಲಿ ಎರಡೂ ಕೈ ತೂರಿಸಿ ತೋಟದ ಕಡೆಗೆ ಹೆಜ್ಜೆ ಹಾಕಿದ.

ಗುಲಾಬಿ ಗಿಡಗಳಿಗೆ ಹತ್ತಿರವಾಗಿ ಕುರ್ಚಿ ಹಾಕಿಕೊಂಡು ರಾಯರು ಕುಳಿತಿದ್ದರು. ಸುಮ ಅವರಿಗೆದುರಿಗೆ ನಿಂತು ಏನೋ ಹೇಳುತ್ತಿದ್ದಳು, ನಗುತ್ತಿದ್ದಳೆಂದು ಅವಳ ಮೈಯ ಕುಲುಕುವಿಕೆಯಿಂದಲೇ ತಿಳಿಯಬಹುದಿತ್ತು

ನಿಧಾನವಾಗಿ ಹೆಜ್ಜೆ ಹಾಕಿ ಬಂದು ವೇಣು ಸುಮಳ ಹಿಂದೆ ನಿಲ್ಲುವವರೆಗೂ ಅವರಿಬ್ಬರಿಗೂ ಕಾಣಲಿಲ್ಲ ತಂದೆ ಈ ಕಡೆಗೆ ತಿರುಗಿ ಕುಳಿತಿದ್ದರು ಎದುರಿಗೆ ಅಡ್ಡ ವಾಗಿದ್ದ ಸುಮಳಿಂದ ಮರೆಯಾಗಿದ್ದರು ಸುಮಳ ಹಿಂದುಗಡೆ ಒಂದಡಿ ಎತ್ತರದಲ್ಲಿ ಮುಖ ಕಂಡು ರಾಯರು-

"ಆಗ್ಹೋಯ್ತೇ ಊರು ಪ್ರದಕ್ಷಿಣೆ?" ಎಂದರು.

"ಸದ್ಯಕ್ಕಾಯ್ತು. ಅಷ್ಟು ಬೇಗ ಮುಗಿಯುತ್ತಾ!" ಎಂಬ ಧ್ವನಿ ಕೇಳಿ ಸುಮ ಸರ್ರನೆ ಹಿಂತಿರುಗಿದಳು. ಅವಳು ಬಹಳ ಸಮೀಪದಲ್ಲಿದ್ದುದರಿಂದ, ಅವಳ ಜಡೆ, ಭುಜ ಅವನ ಎದೆಗೆ ಸವರಿಹೋಗಿ ನಾಚಿಕೆಯಿಂದ ಮುಖ ಕೆಂಪೇರಿದರೂ ಸಾವರಿಸಿ ಕೊಂಡು ಸರಸರ ಮನೆಯೊಳಕ್ಕೆ ಹೊರಟುಹೋದಳು ತಂದೆ ಮಕ್ಕಳಿಬ್ಬರೂ ಹಸನ್ಮುಖರಾಗಿ ಅವಳನ್ನೇ ನೋಡುತ್ತಿದ್ದರೆಂದು ಅವಳ ಒಳಮನ ಹೇಳುತ್ತಿತ್ತು.

"ಮುತ್ತಿನಂಥ ಹುಡುಗಿ, ದೈವದ ಇಚ್ಛೆ ಏನಿದೆಯೋ" ಎಂದರು ರಾಯರು ವೇಣು ಸುಮ್ಮನೆ ಮೆಲುನಕ್ಕು ಏಳುತ್ತಿದ್ದ ರಾಯರಿಗೆ ತೋಳ ಆಸರೆ ಕೊಟ್ಟು, ನಡೆದು ಕೊಂಡು ಮನೆಗೆ ಬಂದ

"ರಂಗಾ, ಕುರ್ಚಿ ಒಳಗೆ ಹಾಕು"ಎಂದು ರಾಯರು ಹೇಳಲು ಮರೆಯಲಿಲ್ಲ.

ಮನೆಯೆಲ್ಲಾ ದೀಪಗಳಿಂದ ಝಗಝಗಿಸುತ್ತಿತ್ತು ವೇಣುವಿನ ಮನಸ್ಸಿಗೇನೋ ಆಹ್ಲಾದವಾಗುತ್ತಿತ್ತು. ಮನೆಯ ವಿದ್ಯುದ್ದೀಪಗಳ ಬೆಳಕಿನಷ್ಟೇ ಅವನ ಹೃದಯದಲ್ಲೂ ಬೆಳಕು ತುಂಬಿತ್ತು

ತಾಯಿ ಆರಾಮವಾಗಿ ಕುಳಿತು ಬಾಲುವಿನೊಂದಿಗೆ ಮಾತನಾಡುತ್ತಿದ್ದರು, ಅಥವಾ ಬಾಲು ಹೇಳಿದುದನ್ನುಅವರು ಕೇಳಿಕೊಳ್ಳುತ್ತಿದ್ದರು ಎಂದರೆ ಹೆಚ್ಚು ಸಮಂಜಸ ಬಹಳ ಹೊತ್ತು ಹೊರಗಡೆ ಕುಳಿತಿದ್ದ ಕಾರಣ ರಾಯರು ಮಲಗಲಪೇಕ್ಷಿಸಿದರು ವೇಣು ಅವರನ್ನು ಮಂಚದವರೆಗೂ ತಲುಪಿಸಿ ಮಲಗಿಸಿದ ಕೋಣೆಯೆಲ್ಲಾ ಘಂ ಎಂದು ವಾಸನೆ ಬರುತ್ತಿತ್ತಾಗಿ ಸುತ್ತಾ ಕಣ್ಣು ಹಾಯಿಸಿ ನೋಡಿದ ಏನೂ ಕಾಣಲಿಲ್ಲ

ಬಟ್ಟೆ ಬದಲಾಯಿಸಲು ರೂಮಿಗೆ ಬಂದಾಗ, ಅಲ್ಲಿ ಸುಮಳನ್ನು ಕಂಡು ಹಾಗೆಯೇ ನಿಂತುಬಿಟ್ಟ. ಅವಳು ಹಚ್ಚಿದ್ದ ಊದುಕಡ್ಡಿಗಳನ್ನು ಸ್ಟ್ಯಾಂಡಿಗೆ ಸಿಗಿಸುವ ಪ್ರಯತ್ನದಲ್ಲಿದ್ದಳು ತಂದೆಯ ಕೋಣೆಯ ಸುವಾಸನೆ ಏನೆಂದು ಈಗ ಅರ್ಥ ವಾಯಿತು

ದೀಪದ ಬೆಳಕಿನಲ್ಲಿ ಆ ಕಡೆ ತಿರುಗಿ ನಿಂತ ಅವಳ ಒಂದು ಕೆನ್ನೆ, ಕಿವಿಯ ಉಂಗುರಗಳು ಮಾತ್ರ ಕಾಣುತ್ತಿದ್ದವು. ಬೆನ್ನ ಮೇಲೆ ಒಂದು ಮೊಳದಷ್ಟೇ ಇದ್ದರೂ ದಪ್ಪನಾಗಿದ್ದ ಜಡೆ, ಮತ್ತೇರಿದ ಹಾವಿನಂತೆ ಕುಳಿತಿತ್ತು ಅವಳ ಎತ್ತರಕ್ಕೆ ಆ ಜಡೆ ಸಾಲದು ಎನಿಸಿತು

ತನ್ನ ಕೆಲಸ ಮುಗಿಸಿ ಸುಮ ಹೊರಡಲು ಹಿಂತಿರುಗಿದಾಗ ಬಾಗಿಲಲ್ಲಿ ಅಡ್ಡ ನಿಂತಿದ್ದ ವೇಣು ಕಾಣಿಸಿದ ಈಗ ತಾನೇನು ಮಾಡಬೇಕು ತಾನೇ ಏನಾದರೂ ಮಾತನಾಡಿಸಿದರೆ? ಯಾಕೋ ಧೈರ್ಯವೇ ಆಗದು ಆ ಕಣ್ಣುಗಳನ್ನು ಎದುರಿಸಲು ತನ್ನಿಂದಾಗದು ತಲೆ ತಗ್ಗಿಸಿ ಸುಮ್ಮನೆ ನಿಂತಳು

"ಇದೆಲ್ಲಾ ಯಾಕೆ?"ಅವನೇ ಮಾತನಾಡಿದ

'ಅಮ್ಮ ಹೇಳಿದಾರೆ "

'ಎಲ್ಲರ ಕೋಣೆಯಲ್ಲೂ ಹಚ್ಚಿರಾ?"

ಹೌದು-ಎನ್ನುವಂತೆ ತಲೆ ಆಡಿಸಿದಳು ಅವನಿಗೆ ಮುಖ ತೋರಿಸಲಿಲ್ಲ

"ನಂಗಿಷ್ಟವಿಲ್ಲ, ಬೇಡ ಅಂದರೆ?"

"ಹಾಗೇಂತ ಅಮ್ಮನ ಹತ್ತಿರ ಹೇಳ್ತೀನಿ. ನಿಮಗೆ ತುಂಬಾ ಇಷ್ಟಾಂತ ಅಮ್ಮ ಹೇಳಿದಾರೆ`ಎಂದು ತಲೆಯೆತ್ತಿ ಅವನ ಪ್ರತಿಕ್ರಿಯೆಗಾಗಿ ನೋಡಿದಳು.

ದೃಷ್ಟಿಗಳು ಬೆರೆತವು ಒಂದು ಘಳಿಗೆ. ವೇಣು ಬಾಗಿಲು ಬಿಟ್ಟು ಒಂದು ಹೆಜ್ಜೆ ಒಳಬಂದ ಸಿಕ್ಕ ಅವಕಾಶದಲ್ಲಿ ಚಟ್ಟನೆ ನುಣುಚಿ ಹೊರಗೋಡಿದಳು ಸುಮ

ಛೆ! ತಾನು ಹೆಜ್ಜೆಯಿಡಲೇಬಾರದಿತ್ತು. ಬಾಗಿಲಿಗೆ ಅಡ್ಡವಾಗೇ ನಿಂತಿದ್ದರೆ ಏನು ಮಾಡುತ್ತಿದ್ದಳು? ಕಡೆಗೆ ಇನ್ನೂ ಸ್ವಲ್ಪ ಹೊತ್ತಾದರೂ ನಿಲ್ಲುತ್ತಿದ್ದಳು ಎಂದುಕೊಂಡು ಬಾಗಿಲ ಹೊರಗೆ ಬಗ್ಗಿ ನೋಡಿದ ಅವಳಾಗಲೇ ಕೆಳಗಿದ್ದಳು. ಆ ಜಡೆ ಹಿಡಿದು ಜಗ್ಗಿ ಹತ್ತಿರಕ್ಕೆಳೆದುಕೊಳ್ಳಬೇಕಿತ್ತು ಎಂದಿತು ಅವನ ಎದೆಯ ಬಯಕೆ.

ಬಟ್ಟೆ ಬದಲಿಸಿ ಕೆಳಗಿಳಿದು ಬಂದಾಗ ವಾಸು ಮತ್ತೆ ಹಾಜರಾಗಿದ್ದ. ಅವನು ಅಮ್ಮ, ಅಣ್ಣ, ಬಾಲು ಎಲ್ಲರನ್ನೂ ಕರೆಯುತ್ತಿದ್ದ ವೇಣು ಕೆಳಗಿಳಿದು ಬಂದಾಗ ಅವನನ್ನು ನೋಡಿ ಬಾಲು-

"ಹೀಗೇ ಬರ್ತೀಯಾ ಅಲ್ಲೀಗೆ?" ಎಂದ ಅವನ ಪಂಚೆ, ಷರಟು ನೋಡಿ.

"ಹೂಂ, ಏನಾಗಿದೆ ಈ ಡ್ರೆಸ್ಸಿಗೆ?" ಎಂದು ವೇಣು ಅಂದಾಗ, ತಂದೆ ಮೆಚ್ಚುಗೆಯಿಂದ ನೋಡಿದರು

"ಏನೋಪ್ಪ, ಡಿನ್ನರ್ ಪಾರ್ಟೀಗೆ ಅಂತೀಯ. ಪಂಚೆ ಉಟ್ಟಿದ್ದೀಯ"

'ನೋಡು ಬಾಲು, ನಾನ್ಯಾವ ಡಿನ್ನರ್ ಪಾರ್ಟೀಗೂ ಹೋಗ್ತಾ ಇಲ್ಲ ನನ್ನ ತಮ್ಮಂದಿರ ಜೊತೆ ಕೂತ್ಕೊಂಡು ಊಟ ಮಾಡೋಕೆ ಹೋಗ್ತೀದೀನಿ'

"ಅಮೆರಿಕಾದಲ್ಲೂ ಹೀಗೇ ಮಾಡ್ತಿದ್ಯಾ?"

"ಓ, ಮನೇಲಿ ನಾನ್ಯಾವಾಗ್ಲೂ ಇಷ್ಟೇ. ಹೊರಗಡೆ ಹೋದಾಗಲೆಲ್ಲಾ ಸೂಟು ಹಾಕಿ ನಂಗೆ ಶತಬೇಜಾರು ಪರ್ಮಿಟ್ ಮಾಡಿದ್ರೆ ಹೀಗೇ ಕಾಲೇಜಿಗೂ ಹೋಗೋಕೆ ನಾನು ರೆಡಿ

"ಭೇಷ್, ಪರ್ಮಿಷನ್ ಯಾಕೆ ಬೇಕೋ? ಸೋಮವಾರದಿಂದ ಹೀಗೇ ಹೊರಡು, ಎಲ್ಲರೂ ನಿನ್ನನ್ನೇ ಅನುಸರಿಸ್ತಾರೆ. "

"ನೋಡು ಬಾಲು, ಪರದೇಶಕ್ಕೆ ಹೋಗಿ ಅಲ್ಲಿದ್ದು ಬಂದ್ರೇನೇ ನಮ್ಮ ದೇಶದ ಮೌಲ್ಯಗಳ ಮಹತ್ವ ತಿಳಿಯೋದು ಅವರೇನೋ ದೊಡ್ಡ ಮನುಷ್ಯರು ಅಂತ, ಅವರು ಕುಣಿದ ಹಾಗೆ ನಾವು ಕುಣೀತೀವೆಯೇ ಹೊರತು, ನಮ್ಮಲ್ಲಿರೋ ಮಹತ್ವಗಳನ್ನ ಮರೆತೇಬಿಡ್ತೀವಿ "

ರಾಯರಿಗೆ ಮಗನ ಅಭಿಪ್ರಾಯಗಳಿಂದ ಹೃದಯ ತುಂಬಿ ಬರುತ್ತಿತ್ತು 'ಓ ವೇಣು' ನನ್ನ ವೇಣು ಎಷ್ಟು ಉನ್ನತಭಾವನೆಗಳನ್ನು ಪಡೆದ ವ್ಯಕ್ತಿ' ಎಂದು ಮನದಲ್ಲೇ ಶ್ಲಾಘಿಸಿದರು

ವಾಸು ಮಧ್ಯದಲ್ಲಿ ಮಾಧಣ್ಣ, "ಇದು ಕಾಲೇಜಲ್ಲ ಲೆಕ್ಚರ್ ಕೊಡೋಕ್ಕೆ ಮನೆ, ಮನೆ' ಎಂದು ತಮಾಷೆ ಮಾಡಿದ

* * *

ವಾಸು ಎಂದರೆ ವೇಣುವಿಗೆ ಇಷ್ಟ. ಆದರೂ ಈಗೀಗ ಬಹಳ ಹೆಚ್ಚಿಕೊಂಡಿದ್ದಾನೆ ಎನಿಸಿತು,

ಅಥವಾ ಬಾಲುವಿನ ಮಾತಿನ ಪ್ರಭಾವದಿಂದ ತನಗೆ ಹಾಗನ್ನಿಸುತ್ತಿದೆಯೋ ಎಂದು ತಲೆ ಕೊಡವಿಕೊಂಡು ನಕ್ಕುಬಿಟ್ಟ.

"ಅಮ್ಮ, ಸುಮ ಎಲ್ಲಿ?" ಎಂದು ವಾಸು ಪ್ರಶ್ನಿಸಿದಾಗ ವೇಣುವಿನ ಆ ನಗೆ ತಡೆಯಿತು

"ಇನ್ನೆಲ್ಲಿರ್ತಾಳೆ, ಅವಳ ಕೋಟೆ ಇದೆಯಲ್ಲ"ಎಂದರು ತಾಯಿ. ಹಾಸ್ಯದ ವಾತಾವರಣದಲ್ಲಿ ಹಾಸ್ಯವಾಗೇ ನುಡಿದರು

ವಾಸು ದಾಪುಗಾಲು ಹಾಕಿ ಹಿಂದುಗಡೆ ನಡೆದ. ವೇಣು ನೋಡುತ್ತಲೇ ನಿಂತಿದ್ದಂತೆ ವಾಸು ಸುಮಳ ಕೋಣೆಯ ಬಳಿ ನಿಂತ. ತನಗೂ ಏನೋ ಹಿತ್ತಲ ಕಡೆ ಕೆಲಸವಿರುವಂತೆ ನಡೆದ ವೇಣು ಅರ್ಧದಲ್ಲಿ ನಿಂತ ಸುಮ, ವಾಸು ಇವರ ಸಂಭಾಷಣೆ ಕೇಳಿಸುವಷ್ಟು ಹತ್ತಿರದಲ್ಲೇ ಇದ್ದ.

"ಪ್ಲೀಸ್, ಬನ್ನಿ ಸುಮ."

"ಬರೋಲ್ಲ ಅಂದ್ರೆ ನಾ ಬರೋಲ್ಲ ನನ್ನ್ಯಾರೂ ಕರೆದಿಲ್ಲ"

ನಾ ಕರೀತಿದೀನಲ್ಲ, ಇನ್ಯಾರಪ್ಪಾ ಕರೀಬೇಕು?"

"ಹಾಗಾದ್ರೆ ಮಧ್ಯಾಹ್ನ ಯಾಕೆ ಕರೀಲಿಲ್ಲ?"

ಅವಾಗ ನಾನು ಯಾರನ್ನೂ ಕರೀಲಿಲ್ಲ ಮಾಧಣ್ಣನ ಅನುಕೂಲ ಕೇಳ್ಕೊಂಡು ಹೋಗೋಣಾಂತ ಬಂದಿದ್ದೆ ಅಷ್ಟೆ. ಪ್ಲೀಸ್ ಸುಮ, ಬಿ ಎ ಗುಡ್ ಗರ್ಲ್"

"ನಾನು ಬ್ಯಾಡ್ ಆಗೇ ಇರ್ತೀನಿ ನೀವು ಹೋಗಿ ನಾ ಬರೋಲ್ಲ"

"ನಾನು ಇಷ್ಟು ಕೇಳಿಕೊಂಡರೂ ನನಗಾಗಿಯೂ ಬರೋಲ್ವೆ?"

ಸುಮಳ ಮಾತಿಲ್ಲ. ದೀಪವನ್ನೂ ಹಾಕದೆ ಸುಮ ಕೋಣೆಯ ಒಳಗೆ ಬಾಗಿಲಲ್ಲಿ. ವಾಸು ಹೊರಗಡೆ, ಕತ್ತಲಲ್ಲೇಕೆ ಸರಸ ಎಂದು ವೇಣುವಿಗೆ ಅಸಮಾಧಾನ, ಕೋಪ ಊರಿಯುತ್ತಿತ್ತು

ಒಂದು ಘಳಿಗೆಯ ನಂತರ ವಾಸು ಹೊರಡಲನುವಾದ.

"ವಾಸು, ಸ್ವಲ್ಪ ಈ ಬಲ್ಬು ಹಾಕಿಕೊಟ್ಟು ಹೋಗಿ ಬಲ್ಬು ಕೆಟ್ಟು ಹೋಗಿದೆ"

"ನಾನು ಹಾಕಿಕೊಡೋಲ್ಲ."

"ಪ್ಲೀಸ್."

"ಏನು ಪ್ಲೀಸ್. ನಾನೆಷ್ಟು ಕೇಳ್ಕೊಂಡ್ರೂ ದೇವಿಯವರು ಅನುಗ್ರಹ ಮಾಡ್ಲಿಲ್ಲ ಈಗ ಮಾತ್ರ."

"ಅದಕ್ಕೂ ಇದಕ್ಕೂ ಏನ್ಸಂಬಂಧ?"

"ಯಾಕಿಲ್ಲ? ಬಲ್ಬು ಹಾಕ್ಬಿದ್ರೆ ನಿಮಗೆ ಲೈಟಿಲ್ಲ. ಲೈಟಿಲ್ಲ ಅಂದ್ರೆ ನಾಳೆ ಟೆಸ್ಟಿಗೆ ಓದೋಕಾಗೊಲ್ಲ ಅಂದ್ಮೇಲೆ ಸುಮ ಹಾಸ್ಟೆಲಿಗೆ ಈಗ ಬರ್ತಾರೆ"

ಸುಮ ಕಿಲಕಿಲನೆ ನಕ್ಕಳು. "ಡಾಕ್ಟರುಗಳಿಗೆ ವ್ಯವಹಾರಜ್ಞಾನ ಕಡಿಮೆ ಅಂತ ಎಲ್ಲೋ ಓದಿದ ನೆನಪು. ಅದು ನಿಜಾಂತ ಕಾಣುತ್ತೆ. ಅಲ್ರೀ ಡಾಕ್ಟ್ರೇ ನನ್ನ ಕೋಣೆಯಲ್ಲಿ ಬಲ್ಬು ಹೋಯ್ತೂಂತ ಮನೆಯೆಲ್ಲಾ ಕತ್ತಲೆ ತುಂಬಿಕೊಂಡಿದೆಯೇ?"

"ಅಂತೂ ನನಗಾಗಿಯೂ ನೀವು ಬರೋಲ್ಲಾಂತ ಆಯ್ತು. ಎಷ್ಟೇ ನಿಮಗೆ ನನ್ಮೇಲೆ ಇದು ಇರೋದು"ಎಂದು ಮುನಿಯುತ್ತ ವಾಸು ಹಿಂದಿರುಗಿದ

ಇದೆಲ್ಲಾ ಕೇಳಿಸಿಕೊಂಡ ವೇಣುವಿಗೆ ತನ್ನ ಭಾವನೆ ಏನೆಂಬುದೇ ತಿಳಿಯಲಿಲ್ಲ. ತಾಯಿ ತಂದೆ ವಾಸುವನ್ನು ಏನೂ ಪ್ರಶ್ನಿಸಲಿಲ್ಲ. 'ಅತೀ ಸ್ನೇಹ ನೋಡಿಯೂ ಸುಮ್ನಿರ್ತಾರೆ. ಗಂಟು ಹಾಕ್ತಾರೆ ಅಂತ ನನ್ನ ಭಾವನೆ' ಬಾಲುವಿನ ಮಾತು ಚುಚ್ಚಿದಂತೆ ನೆನಪಾಯಿತು. ಏಕೋ ವೇಣುವಿಗೆ ಇದನ್ನು ಸಹಿಸುವುದಾಗಲಿಲ್ಲ. ಈಗ ವಾಸುವಿನ ಆಹ್ವಾನದಂತೆ ಹೋಗಲೂ ಸಹ ಇಷ್ಟವಾಗಲಿಲ್ಲ ಆದರೂ ವೇಣು ಮಾಧವನ ವಿವೇಕ 'ಅವರಿಬ್ಬರ ಗೆಳೆತನಕ್ಕೂ ನನಗೂ ಏನೂ ಸಂಬಂಧವಿಲ್ಲ' ಎಂದು ತರ್ಕಿಸಿತು. ಸಾಧ್ಯವಿದ್ದಲ್ಲಿ ತಂದೆಯಂತೆ ತಾನು ಇದ್ದುಬಿಡಬೇಕೆಂದುಕೊಂಡ.

ತನಗೆ ಮೆಚ್ಚುಗೆಯ ಹುಡುಗ ವಾಸು, ತಾನು ಮೆಚ್ಚಿದ ಹುಡುಗಿ ಸುಮ ಅವರಿಬ್ಬರೂ ಚೆನ್ನಾಗಿರಲಿ, ಅವರಿಬ್ಬರ ಪ್ರೇಮದಲ್ಲಿ ತನ್ನದೇನು?-ಎಂದು ಸಮಾಧಾನ ತಂದುಕೊಂಡ.

ವಾಸು ಹೊರಟುಹೋದದ್ದು ತಿಳಿದ ಕೂಡಲೆ, ಸುಮ, ರಾಯರ ಬಳಿಗೆ ಹೋಗಿ "ಅಣ್ಣ, ನನ್ನ ರೂಮಿನ ಬಲ್ಬು ಕೆಟ್ಟು ಹೋಗಿದೆ. ಸ್ವಲ್ಪ ಬೇರೆ ಹಾಕಬೇಕಿತ್ತು" ಎಂದಳು.

"ರಂಗನ ಕೈಲಿ ತರ್ಸ್ತೀನಿ ಇರಮ್ಮ."

"ಬಲ್ಬಿದೆ, ಆದ್ರೆ ಹಾಕೋಕ್ಕೆ ಆಗ್ತಾ ಇಲ್ಲ. ತುಂಬ ಎತ್ತರದಲ್ಲಿದೆ, ನನಗೆ ಎಟುಕಲಿಲ್ಲ."

ರಾಯರು ನಕ್ಕರು- "ನಿನಗೆ ಆಗ್ಲಿಲ್ಲ ಅಂದ್ರೆ ನನಗಾಗುತ್ತೇನು? ನೀನೇ ನನಗಿಂತ ಎತ್ತರ ಇದ್ದೀಯಮ್ಮ" ಎಂದವರು ಮತ್ತೆ "ಓ, ವೇಣೂಗೆ ಹೇಳೂಂತ ತಾನೆ?" ಎಂದರು.

ವೇಣು ಅಲ್ಲೇ ನಿಂತಿದ್ದವನು, ಏನೂ ಉತ್ತರ ಹೇಳದೆ ನಸುನಗುತ್ತಾ ಮಹಡಿ ಹತ್ತಿ ಹೋದ. ಸುಮಳಿಗೆ ನಿರಾಶೆಯಾಯಿತು. ಇಷ್ಟು ಸಣ್ಣ ವಿಷಯಕ್ಕೂ ತಾನು ಆತನನ್ನು ಆಶ್ರಯಿಸಬೇಕು, ಅದೂ ಆತನ ತಂದೆಯ ಮೂಲಕ. ಈತನೋ, ಮಹಾ ದೊಡ್ಡ ಉಪಕಾರವನ್ನುವಂತೆ ಸಟೆದುಹೋದ. ತಾನವರನ್ನು ಬೇಡಬೇಕೇನೋ!

ಆದರೆ ಕೈಯಲ್ಲಿ ಟಾರ್ಚ್ ಹಿಡಿದು ಇಳಿದು ಬಂದ ವೇಣು "ಬನ್ನಿ ಸುಮ" ಎಂದಾಗ ತನ್ನ ಹೀನ ತರ್ಕಕ್ಕೆ ತಾನೇ ನಾಚಿಕೊಂಡಳು. ಒಳಿತು ಮಾಡುವ ವ್ಯಕ್ತಿಯನ್ನು ಎಷ್ಟು ಅಲ್ಪವಾಗಿ ತೀರ್ಮಾನಿಸಿದಳು. ಅರೆ, ಅವರ ಕೈಲಿರುವ ಪುಸ್ತಕ ತನ್ನದು. ಅದು ಹೇಗೆ ಇವರ ಕೈ ಸೇರಿತು ಎಂದು ಅಚ್ಚರಿಯಿಂದ ಆದರ

ಕಡೆಗೆ ನೋಡಿದಾಗ.

"ಇದು ನಿಮ್ಮದೇ. ನಾನೇನು ನಿಮ್ಮ ಕೋಣೆಯಿಂದ ಕದೀಲಿಲ್ಲ, ಅದ್ಯಾಕಷ್ಟು ಗಾಬರಿ ಸುಮ? ಮಧ್ಯಾಹ್ನ ಇದನ್ನ ಅಲ್ಲಿ ಬೀಳಿಸಿ ದಡಬಡ ಎದ್ದು ಓಡಿಬಿಟ್ರಿ. ನಾನು ಎತ್ತಿಕೊಂಡು ಬಂದೆ" ಎಂದು ಪುಸ್ತಕವನ್ನು ಅವಳ ಕೈಗೆ ಎಟುಕಿಸಿದ.

ಟಾರ್ಚನ್ನು ಅವಳ ಕೈಗೆ ಕೊಟ್ಟು, ಬೆಳಗಿಸುವಂತೆ ಹೇಳಿ ಹಳೆಯ ಬಲ್ಬು ತೆಗೆದು, ಹೊಸ ಬಲ್ಬು ಜೋಡಿಸಿದ. ದೀಪ ಬೆಳಗಿತು, ಕೋಣೆಯ ಕತ್ತಲು ಕಳೆದು ಬೆಳಕು ನೀಡಿದ ವೇಣುಮಾಧವ್! ಹಾಗೆಯೇ ತನ್ನ ಬದುಕಿನ ಕತ್ತಲನ್ನೂ ಕಳೆದು ಬೆಳಕು ತುಂಬಲಾರನೆ ಆತ?

ಎಂತಹ ದುರಾಶೆ ! ತಾನು ಯಾರು, ಆತ ಯಾರು ಎಂಬ ಪರಿಜ್ಞಾನ ತನಗೆ ಬೇಡವೆ? ತಾನು ದಿಕ್ಕಿಲ್ಲದ ಪರದೇಶಿ, ಅನಾಮಿಕಳು. ಆತ ಶ್ರೀಮಂತರ ಏಕಮಾತ್ರ ಪುತ್ರ. ಅಷ್ಟಕ್ಕೂ ... ಅಷ್ಟಕ್ಕೂ ತನಗೆ ಯಾರನ್ನೇ ಆಗಲಿ ಪಡೆಯುವ ಅಧಿಕಾರ ಏದೆಯೆ? - ಈ ಯೋಚನೆಯಿಂದ ಮೈ ಕಂಪಿಸಿತು.

ದೀಪದ ಬೆಳಕಿನಲ್ಲಿ ಅವಳ ರೂಮನ್ನೆಲ್ಲ ಕೂಲಂಕಷವಾಗಿ ನೋಡುತ್ತಿದ್ದ ವೇಣು. ಮೂಲೆಯಲ್ಲಿ ಒಂದು ಪೆಟ್ಟಿಗೆ ಅದರ ಮೇಲೊಂದು ಹಾಸಿಗೆಯ ಸುರುಳಿ ಪಕ್ಕದಲ್ಲೇ ಸುತ್ತಿ ನಿಲ್ಲಿಸಿದ್ದ ಒಂದು ಚಾಪೆ ಮತ್ತೊಂದು ಮೂಲೆಯಲ್ಲಿ ಎರಡು ದೊಡ್ಡ ಜಾಯಿಕಾಯಿ ಪೆಟ್ಟಿಗೆ. ಅವುಗಳ ಮೇಲೆ ಓರಣವಾಗಿ ಜೋಡಿಸಿದ್ದ ಪುಸ್ತಕ ಗಳು. ತಮ್ಮ ಮನೆಯ ಗೇಟಿನ ಕಡೆಗೆ ಇರುವ ಗೋಡೆಯಲ್ಲಿ ಎತ್ತರದಲ್ಲೊಂದು ಕಿಟಕಿ, ಅದು ಸುಮಳ ಎತ್ತರದಲ್ಲಿದೆ. ಅವಳು ಮಧ್ಯಾಹ್ನ ಹೊರ ನೋಡಿದ್ದು ಈ ಕಿಟಕಿಯಿಂದಲೇ ಹಿತ್ತಲ ಕಡೆಗಿರುವ ಕಿಟಕಿ ದೊಡ್ಡದು. ಅದಕ್ಕೊಂದು ಪರದೆಯನ್ನೂ ಹಾಕಿದ್ದಾಳೆ. ಆ ಕಿಟಕಿಯಲ್ಲಿ ಅವಳ ಪೌಡರ್, ಬಾಚಣಿಗೆ, ಕಾಡಿಗೆ ಮೊದಲಾದ ಪ್ರಸಾಧನ ಸಾಮಗ್ರಿಗಳಿದ್ದುವು. ಎದುರು ಗೋಡೆಯಲ್ಲಿ ಮೋಹಕ ಭಂಗಿಯಲ್ಲಿರುವ ರಾಧಾಕೃಷ್ಣರ ಕ್ಯಾಲೆಂಡರ್. ಅದರ ಎದುರಿಗೆ ಸರಿಯಾಗಿ ಗೋಡೆಯಲ್ಲಿ ಒಂದು ಮುಖದಗಲ ಕನ್ನಡಿ, ಎಲ್ಲವನ್ನೂ ಒಂದೇ ನಿಮಿಷದಲ್ಲಿ ನೋಡಿದ ಅವನಿಗೆ 'ನಿಮ್ಮ ತಾಯಿ ತಂದೆ ಅವಳನ್ನು ಅಟ್ಟಕ್ಕೇರಿಸಿ ಕೂರಿಸಿದ್ದಾರೆ' ಎಂಬ ಬಾಲುವಿನ ಮಾತು ಎಷ್ಟು ಅನ್ಯಾಯದ ಟೀಕೆ ಎನಿಸಿತು. ಅವರು ಅವಳಿಗೆ ಅರ್ಹತೆ ಕೊಟ್ಟದ್ದಿದ್ದರೆ, ಅವಳು ಈ ಕೋಣೆಯಲ್ಲಿರಬೇಕಿರಲಿಲ್ಲ. ಹಾಗಿದ್ದರೆ ಈ ಕೋಣೆ ಇಷ್ಟು ನಿರಾಡಂಬರವಾಗಿ ಭಣ ಭಣ ಎನ್ನುತ್ತಿತ್ತೆ?

ಅವನು ಅವಳ ಕಡೆಗೆ ತಿರುಗಿದಾಗ, ಸುಮ ಹಿಂದಿನ ಕಿಟಕಿಯ ಪರದೆ ಸರಿಸಿ ಹೊರಗಣ ಕತ್ತಲಿನೊಳಕ್ಕೆ ನೋಡುತ್ತ ನಿಂತಿದ್ದಳು. ಇಷ್ಟೇನೇ ನಿನ್ನ ಕೊಠಡಿಯ ಸಂಪತ್ತು ಎಂದು ಅವನು ಹೀನಾಯವಾಗಿ ಕಾಣಬಹುದೆಂಬ ಭಾವನೆ ಬಂದು, ಅವನ ಮುಖ ಎದುರಿಸಲಾರದೆ, ಕಿಟಕಿಯ ಸರಳುಗಳನ್ನು ಎರಡು ಮುಷ್ಟಿಯಲ್ಲೂ ಹಿಡಿದು ನಿಂತಿದ್ದಳು.

ಸಂಜೆ ಊದುಗಡ್ಡಿ ಹಚ್ಚುವಾಗ ಹಿಂದಿನಿಂದ ಕಂಡಂತೆಯೇ ಈಗಲೂ ಕಾಣಿಸಿ ದಳು. ಎಡಪಾರ್ಶ್ವದ ಕೆನ್ನೆ, ಕಿವಿಯುಂಗುರ, ಬಲವಾಗಿ ಸರಳನ್ನು ಹಿಡಿದು ಕೆಂಪಗಾದ ಬಿಳಿಯ ಮುಷ್ಟಿಗಳು, ಬೆನ್ನ ಮೇಲೆ ದಪ್ಪ ಜಡೆ, ಸದ್ದು ಮಾಡದೆ ಅವಳ ಹಿಂದೆ ಹೋಗಿ ನಿಂತ ಅವನಿಗೆ, ಆಗ ತನಗಾದ ಬಯಕೆಯನ್ನು ಈಗೇಕೆ ನೆರವೇರಿಸಿಕೊಳ್ಳ ಬಾರದೆಂದೆನಿಸಿ, ಅವಳ ಜಡೆ ಜಗ್ಗಿ ಎಳೆದು ಅವಳನ್ನು ಹತ್ತಿರಕ್ಕೆಳೆದುಕೊಳ್ಳಲು ಕೈ ಚಾಚಿದ ಕೈ ಅಲ್ಲಿಯೇ ನಿಂತಿತು. ಅವನ ಅಂತರಾತ್ಮ 'ಇದು ವಿವೇಕವಲ್ಲ ಮಾಧು' ಎಂದು ಪಿಸುಗುಟ್ಟಿತು. ನಿಶ್ಶಬ್ದವಾಗಿ ಹಿಂದೆ ತಿರುಗಿ ಕೋಣೆಯಿಂದ ಹೊರನಡೆದು ಬಿಟ್ಟ.

ಸುಮಳ ಮನ ಅಲ್ಲೋಲಕಲ್ಲೋಲವಾಗಿತ್ತು. ಅವನ ಸಮೀಪದಲ್ಲಿ ತನ್ನ ಹೃದಯವೇಕೆ ಹುಚ್ಚೆದ್ದು ಕುಣಿಯುತ್ತದೆ ಎಂದೇ ಅರ್ಥವಾಗುವುದಿಲ್ಲ ಅವನು ಬಂದು ಇನ್ನೂ ಅರ್ಧ ದಿನ ಕಳೆದಿತ್ತು ಈಗಲೇ ಹೀಗಾದರೆ ಈ ಆರು ತಿಂಗಳು ತಾನೀ ಮನೆಯಲ್ಲಿ ಉಳಿಯುವುದಾದರೂ ಹೇಗೆ? ತನ್ನ ಮನಸ್ಸು ಅವನ ಧ್ವನಿಗೆ, ಅವನ ಹೆಜ್ಜೆಗೆ ಕಾತರಿಸುತ್ತದೆ ಸದಾಕಾಲವೂ ಅವನ ದೃಷ್ಟಿಯಲ್ಲಿ ಲೀನವಾಗಬೇಕೆಂದು ತನ್ನ ದೃಷ್ಟಿ ಬಯಸುತ್ತದೆ ಅವನ ಬಾಹುಗಳಲ್ಲಿ ಕರಗಿ ಹೋಗಬಾಕೆಂದು ಬಯಕೆ.. ದೇವರೇ ನನ್ನನ್ನು ಇಷ್ಟು ದುರ್ಬಲಳನ್ನಾಗಿ ಮಾಡಬೇಡ ಈ ಆರು ತಿಂಗಳು ನನಗೆ ಸ್ಥೈರ್ಯ ಕೊಡು ಅವನೆದುರಿನಿಂದ ತಪ್ಪಿಸಿ ಓಡಾಡಲು ಈ ಮನೆಯಲ್ಲಿ ಆಗದು. ನಿರ್ಮಲಚಿತ್ತರಾದ ಅಮ್ಮ ಅಣ್ಣ ಸಣ್ಣಪುಟ್ಟದಕ್ಕೆಲ್ಲಾ ನನ್ನನ್ನೇ ಅವನ ಬಳಿ ಕಳಿಸಿಯಾರು ಅವರ ನಂಬಿಕೆಗೆ ದ್ರೋಹ ಮಾಡುವ ಕೆಲಸ ನನ್ನಿಂದಾಗಬಾರದು. ಅವರ ಮುದ್ದು ಕುಮಾರ ಈ ಅನಾಥಳಿಂದ ಆಕರ್ಷಿತನಾಗುವುದು ಬೇಡ ಇದನ್ನು ತಪ್ಪಿಸು ಭಗವಂತಾ, ನನ್ನ ವರ್ತನೆಯಲ್ಲಿ ಸ್ವಲ್ಪ ಅನುಮಾನ ಬಂದರೂ ನಾನೀ ಮನೆಯಲ್ಲಿರುವಂತಿಲ್ಲ. ನನ್ನ ಭವಿಷ್ಯದ ಪಾಡೇನು?-ಎಂದು ಚಿಂತಿಸುತ್ತಾ ನಿಂತಿದ್ದ ಸುಮಳಿಗೆ ವೇಣು ತನ್ನ ಹಿಂದೆ ಬಂದು ನಿಂತದ್ದು, ನಂತರ ಹೊರಟುಹೋದದ್ದು ಒಂದೂ ತಿಳಿಯಲಿಲ್ಲ. ಕಣ್ಣು ತುಂಬಿ ಬಂದಿತ್ತು. ಹೃದಯ ವೇದನೆಯಿಂದ ನರಳುತ್ತಿತ್ತು. ಸರಳು ಹಿಡಿದು ನಿಂತೇ ಇದ್ದಳು

ಹಾಲಿನಲ್ಲಿ ನಡೆದ ಮಾತುಕತೆ ಕೇಳಿಸಿತು.

'ಅವಳು ಬರೋಲ್ವೇನು?" ಬಾಲು ಕೇಳುತ್ತಿದ್ದ.

"ನಾಳೆಗೇನೋ ಓದಿಕೊಳ್ಳಬೇಕಂತೆ. ವಾಸೂಗೆ ಬರೋಲ್ಲಾಂತ ಹೇಳಿದಾಳಂತೆ" ಅಮ್ಮ ಉತ್ತರಿಸಿದರು

"ಬರೋಕ್ಕೆ ಆಗೋಲ್ಲ ಅನ್ನೋವ್ರನ್ನ ಬಲವಂತ ಮಾಡಬಾರದು" ಅಣ್ಣ ನುಡಿದರು.

"ರಂಗ, ಮನೆ ಕಡೆ ಜೋಪಾನ, ಒಳಗೆ ಸುಮ ಇರ್ತಾಳೆ"ಎಂದು ಅಮ್ಮ ರಂಗನಿಗೆ ಎಚ್ಚರಿಸುತ್ತಿದ್ದು ಕೇಳಿಸಿತು. ಆದರೆ ತನ್ನ ನೆಚ್ಚಿನ ದನಿ ಕೇಳಿಸಲಿಲ್ಲ.

ಕಾರು ಹೊರಟುಹೋದ ಸದ್ದು ಕೇಳಿದ ನಂತರ, ಬಾಗಿಲು ಮುಂದೆ ಮಾಡಿ, ಹಾಸಿಗೆ ಉರುಳಿಸಿ ಬಿದ್ದುಕೊಂಡಳು. ದುಃಖ ಕಟ್ಟೆಯೊಡೆಯಿತು. ತೃಪ್ತಿಯಾಗಿ ಅತ್ತುಬಿಟ್ಟಳು. ಆ ದುಃಖದಲ್ಲೂ ಸಿಹಿ ಯೋಚನೆಯೊಂದು ಒಂದು ಮುದವಾಯಿತು. ಹೇಗಿದ್ದರೂ ಹಾಸಿಗೆ ಸರಿಪಡಿಸುವ ಕೆಲಸ ತನ್ನದೇ. ಈಗಲೇ ಮಾಡಿಬಿಟ್ಟರೆ, ನಂತರ ಹಾಯಾಗಿ ಮಲಗಿ ಬೇಕಾದಷ್ಟು ಅಳಬಹುದು ಎಂದು ಧುಡುಧುಡು ಮಹಡಿ ಹತ್ತಿ ವೇಣುವಿನ ಹಾಸಿಗೆ ಸರಿಪಡಿಸಿ, ಸೊಳ್ಳೆಯ ಪರದೆ ಇಳಿಬಿಟ್ಟು ಹೊರಬರುವಾಗ ಆಗಷ್ಟೇ ತನ್ನ ಮನದಲ್ಲಿ ನಡೆದ ಗೊಂದಲವೆಲ್ಲಾ ಮರೆಯಾಯಿತು. ಮಧುರವಾದ ಭಾವನೆಯೊಂದು ಅವಳ ಮನವನ್ನೆಲ್ಲ ಆಕ್ರಮಿಸಿತು. ಮತ್ತೆ ಒಳಗೆ ಹೋಗಿ ಹೂದಾನಿಯಲ್ಲಿದ್ದ ಎರಡು ಬಿಳಿಯ ಗುಲಾಬಿಗಳನ್ನು ತೆಗೆದು ದಿಂಬಿನ ಮಧ್ಯದಲ್ಲಿಟ್ಟು ಬಾಗಿಲಲ್ಲಿ ನಿಂತು, ತೃಪ್ತಿಯಿಂದ ಹಾಸಿಗೆಯಲ್ಲಿಲ್ಲದ ವೇಣುವನ್ನು ಸೃಷ್ಟಿಸಿ ಸುಖಿಸಿದಳು.

ಅವಳ ಆತ್ಮ ತಿವಿದು ಕೇಳಿತು, 'ಏನಿದು ಸುಮ, ಇಷ್ಟು ಹೊತ್ತೂ ಹೀಗಾಗಬಾರ ದೆಂದು ಬಿಕ್ಕಿಬಿಕ್ಕಿ ಅಳುತ್ತಿದ್ದೆ. ಈಗ ನೋಡಿದರೆ ಪ್ರೇಮದ ಕಾಣಿಕೆ?'

'ಅವರು ನನ್ನನ್ನು ಪ್ರೇಮಿಸಬಾರದು ಎಂದೆನೇ ವಿನಾ ನಾನು ಅವರನ್ನು ಪ್ರೇಮಿಸ ಬಾರದು ಎಂದು ನಾನೇನು ಅನ್ನಲಿಲ್ಲವಲ್ಲಾ?' ಹೃದಯ ಸವಾಲು ಹಾಕಿತು.

'ಹಾಗಾದರೆ ನೀನು ಕದ್ದುಪ್ರೇಮಿಸ್ಬೇಕು ಅನ್ನು.'

'ಊಹುಂ, ಹಾಗಲ್ಲ. ನಾನು ಅವರನ್ನು ಹೃದಯದಲ್ಲೇ ಇಟ್ಟು ಪೂಜೆ ಮಾಡ್ತೀನಿ. ಅದು ಬೇರಾರಿಗೂ ತಿಳಿಯಬಾರದು. ಅದು ಅಮ್ಮ ಅಣ್ಣ ವೇಣುವಿನ ವಿಷಯದಲ್ಲಿಟ್ಟುಕೊಂಡಿರೋ ಯಾವ ಆಸೆಗೂ ಅಡ್ಡಿ ಬರೋಲ್ಲ. ವೇಣು ನನ್ನನ್ನು ಅತಿಯಾಗಿ ಹಚ್ಚಿಕೊಳ್ಳಬಾರದು....'

ಯೋಚನೆ ಮುಂದುವರಿದಂತೆ ಒಂದೊಂದೇ ಮೆಟ್ಟಿಲಾಗಿ ಕಾಲೆಳೆದು ಇಳಿಯುತ್ತಾ ತನ್ನ ಕೋಣೆಗೆ ಹಿಂತಿರುಗಿದಳು ಸುಮ

* * *

ಹಾಸ್ಟೆಲಿನ ಮುಂದೆ ಕಾರು ನಿಂತು ಇಳಿದವರು ನಾಲ್ಕೇ ಜನರಾದಾಗ ವಾಸುವಿನ ಮುಖ ಚಿಕ್ಕದಾಯಿತು. ಬರುವುದಿಲ್ಲವೆಂದು ಸುಮ ಹಟ ಹಿಡಿದಿದ್ದರೂ, ಅದು ಸುಮ್ಮನೆ ತನ್ನನ್ನು ಛೇಡಿಸಲು ಮಾತ್ರ ಎಂದುಕೊಂಡಿದ್ದ ಅವನಿಗೆ ಅವಳು ನಿಜಕ್ಕೂ ಬರದಿದ್ದಾಗ ಬೇಸರವಾಯಿತು. ಬಾಗಿಲಿಗೆ ಬಂದ ರಾಯರನ್ನು ಸ್ವಾಗತಿಸಿದವನು ತಡೆಯಲಾರದೆ ಕೇಳಿಯೇಬಿಟ್ಟ-

"ಅಮ್ಮ, ಸುಮ ಬರ್ಲಿಲ್ವಾ?"

ಅವನ ಧ್ವನಿಯಲ್ಲಿದ್ದ ನಿರಾಶೆ ಗುರುತಿಸಿದವನು ವೇಣುವೊಬ್ಬನೇ.

'ಇಲ್ಲ' ಎನ್ನುವಂತೆ ತಲೆ ಆಡಿಸಿದರು ನಾಗಮ್ಮ. ವಾಸು ಬಹಳ ಸಾಹಸ ಮಾಡಿ ಕೇಳಿದ-"ಅಣ್ಣ, ನಾನು ಹೋಗಿ ಸುಮನ್ನ ಕರ್ಕೊಂಡು ಬರ್ಲಾ?"

"ಬಂದ್ರೆ ಕರ್ಕೊಂಡು ಬಾ"ಎಂದರು ರಾಯರು ನಸುನಕ್ಕು.

ವಾಸು ಸರಾಗವಾಗಿ ಉಸಿರಾಡುತ್ತಾ ಮುಂದಕ್ಕೆ ಜಿಗಿದ. ವೇಣು ತನ್ನೆರಡು ಕೈಗಳನ್ನೂ ಅಡ್ಡವಾಗಿ ಚಾಚಿ ಅವನನ್ನು ಅಡ್ಡಗಟ್ಟಿ-"ನೀನಿರು ವಾಸು, ನಾನು ಕರ್ಕೊಂಡ್ಬರ್ತೀನಿ"ಎಂದ.

"ಇಲ್ಲ ಮಾಧಣ್ಣ, ನೀವು ಈಗತಾನೆ ಬಂದಿದೀರಿ, ಮತ್ತ್ಯಾಕೆ ಹೋಗೋದು?" ಎನ್ನುತ್ತಾ ಮುಂದೆ ಹೆಜ್ಜೆ ಹಾಕಿದ ವಾಸುವನ್ನು ಹಿಂದಕ್ಕೆಳೆದು-"ನೀನೆಲ್ಲಾ ಅರೇಂಜ್ ಮಾಡು. ಒಂದೇ ಸೆಕೆಂಡಿನಲ್ಲಿ ನಾನುಬರ್ತೀನಿ"-ಎಂದು ಹೇಳಿ ಬಾಲುವಿನಿಂದ ಕಾರಿನ ಬೀಗದ ಕೈ ಪಡೆದು ಕತ್ತಲಲ್ಲಿ ಕರಗಿಹೋದ ವೇಣು.

ಹಾಸ್ಟೆಲಿನ ಮನೆಯಲ್ಲಿ ಸಾಲುಸಾಲಾಗಿ ಹಾಕಿದ್ದ ಎಲೆಗಳನ್ನು ನೋಡಿ ಬಾಲುವಿನ ಎದೆ ಧಸಕ್ಕೆಂದಿತು. ವೇಣು ಎಷ್ಟು ಜಾಣ, ತಾನೆಷ್ಟು ಮಂದಮತಿ. ಈ ಉಲ್ಲನ್ ಸೂಟನಲ್ಲಿ ಹೀಗೆ ನೆಲದ ಮೇಲೆ ಕೂರುವುದಾದರೂ ಹೇಗೆ ಪಂಚೆಗಾಗಿ ವಾಸುವನ್ನು ಶರಣುಹೋಗದೆ ಗತಿಯಿಲ್ಲವಾಯಿತು

ವೇಣು ಮನೆಯ ವರಾಂಡ ತುಳಿದಾಗ ಕಂಬಕ್ಕೊರಗಿ ಬೀಡಿ ಎಳೆಯುತ್ತಿದ್ದ ರಂಗ., ಅದನ್ನು ಕೆಳಗೆ ಹಾಕಿ ಎದ್ದು ನಿಂತ ಹಾಲಿನಲ್ಲಿದ್ದ ಟ್ಯೂಬ್‌ಲೈಟ್ ಆರಿಸಿತ್ತು. ಮಧ್ಯದಲ್ಲಿ ಹಾಕಿದ್ದ ದೀಪ ಮಾತ್ರ ಉರಿಯುತ್ತಿತ್ತು. ಹಾಗಾಗಿ ಹಾಲಿನಲ್ಲಿ ಬೆಳಕು ಮಸುಕುಮಸುಕಾಗಿತ್ತು.

ವೇಣು ಹಾಲನ್ನು ದಾಟಿ, ಹಿಂದಿನ ವರಾಂಡಕ್ಕೆ ಬಂದು ಮೆಟ್ಟಿಲಿಳಿದು ಮತ್ತೆ ಎಡಕ್ಕೆ ತಿರುಗಿ ಸುಮಳ ರೂಮಿನ ಬಾಗಿಲ ಮುಂದೆ ನಿಂತಾಗ ಕೋಣೆಯ ಕದ ಮುಂದಕ್ಕೆ ಮುಚ್ಚಿತ್ತು. ಬಾಗಿಲನ್ನುಹೊಂದಿಕೊಳ್ಳದಂತೆ ಮುಂದೂಡಿದ್ದರಿಂದ, ಅವುಗಳ ನಡುವೆ ಬೆರಳು ಗಾತ್ರದ ಸೀಳು ಬಿಟ್ಟಿತ್ತು. ಅವನು ನಿಂತ ಜಾಗ ಕತ್ತಲಾಗಿ, ಸುಮಳ ಕೋಣೆಯ ಒಳಗೆ ಬೆಳಕಿದ್ದು ಒಳಗಿನ ದೃಶ್ಯ ಆ ಸೀಳಿನಿಂದ ಸ್ಪಷ್ಟವಾಗಿ ಕಾಣುತ್ತಿತ್ತು.

ಗೋಡೆಯ ಓರೆಗೆ ಹಾಸಿಗೆ ಹಾಸಿ, ದಿಂಬಿನ ಮೇಲೆ ಕೈನಲ್ಲಿ ಹೊರಲಾಗದಷ್ಟು ದಪ್ಪದ ಪುಸ್ತಕ ಬಿಚ್ಚಿಟ್ಟು, ಮೊಳಕೈಗಳನ್ನು ಆಧಾರ ಮಾಡಿಕೊಂಡು ಬೋರಲು ಮಲಗಿ ಮೊಣಕಾಲುಗಳನ್ನು ಮೆಲ್ಲಗೆ ಆಡಿಸುತ್ತಾ ಸುಮ ಓದುತ್ತಿದ್ದಳು ಕಾಲುಗಳು ಅಲುಗಾಡುತ್ತಿದ್ದುದರಿಂದ ಸೀರೆ ತುಸು ಸರಿದುಹೋಗಿ ಬಾಳೆಯ ದಿಂಡಿನಂತಹ ಕಾಲುಗಳು ನಿಚ್ಚಳವಾಗಿ ಕಾಣುತ್ತಿದ್ದವು. ಕೊರಳಲ್ಲಿದ್ದ ಮುತ್ತಿನಸರ, ಅವಳ ಉಬ್ಬಿದ ವಕ್ಷಸ್ಥಳದ ನಡುವೆ ಉಯ್ಯಾಲೆಯಂತೆ ನಿಂತಿತ್ತು.

ಉಸಿರು ಕಟ್ಟಿ ಈ ರೂಪಸಿಯ ಭಂಗಿಯನ್ನು ಮನಃಪಟಲದ ಮೇಲೆ ಚಿತ್ರಿಸಿಕೊಳ್ಳುತ್ತಿದ್ದ, ವೇಣು.

ಕ್ಯಾಮರಾದಲ್ಲಿ ಹಿಡಿಯಬಹುದೇನೋ ಎಂಬ ಯೋಚನೆಯೂ ಬಂತು. ಆದರೆ ಬಾಗಿಲ ಸೀಳಿನೊಳಗಿಂದ ಫೋಟೋ ತೆಗೆಯುವು ದಸಾಧ್ಯ ಎದುರಿಗೆ ಹೋದರೆ ದೃಶ್ಯವೇ ಮಾಯವಾದೀತು ಆದ್ದರಿಂದ ತನ್ನ ಹೃದಯದ ಕ್ಯಾಮರವೆ ಸಾಕೆಂದುಕೊಂಡ. ಎಷ್ಟು ನೋಡಿದರೂ ಮನ ತಣಿಯದು. ಹೀಗೇ ನಿಂತುಬಿಟ್ಟರೆ ಅಲ್ಲಿ ಮತ್ತೊಂದು ಪಕ್ಷಿ ವಿಲವಿಲ ಒದ್ದಾಡುತ್ತಲ್ಲ ಎಂದು ಒಳಗೆ ಬರಬಹುದೆ ಎನ್ನುವಂತೆ ಬಾಗಿಲ ಮೇಲೆ ಬಡಿದ

ಈ ಮನೆಯಲ್ಲಿ ಅಪ್ಪಣೆ ಪಡೆದು ಒಳಗೆ ಬರುವಂತಹ ಸೌಜನ್ಯ ತೋರಬೇಕಾದವರು ಯಾರೂ ಇಲ್ಲ ಅಮ್ಮ, ಅಣ್ಣ ಆತ್ಮೀಯವಾಗಿ 'ಸುಮ' ಎನ್ನುತ್ತಾರೆ ಬಾಲು ಒರಟೊರಟಾಗಿ 'ಏಯ್' ಎನ್ನುತ್ತಾನೆ ಇನ್ನಾರು, ವಾಸುವೇ ಮತ್ತೆ ಬಂದಿರಬೇಕು. "ಬನ್ನೀಪ್ಪಾ ಮಹಾರಾಯರೇ, ಒಂದು ಘಳಿಗೆ ಓದೋಕ್ಕೆ ಬಿಡೋಲ್ಲವಲ್ಲಪ್ಪಾ ಈ ಡಾಕ್ಟರು ಎಂದು ಕುಚೇಷ್ಟೆಯಿಂದ ಅನ್ನುತ್ತಲೇ ಹಾಸಿಗೆಯ ಮೇಲೆ ಕುಳಿತಳು

ಒಳಗೆ ಬಂದವನು ಡಾಕ್ಟರೇ ಆದರೆ ಅವಳು ನೆನೆಸಿದ ಡಾಕ್ಟರಲ್ಲ ವೇಣುವನ್ನು ಅನಿರೀಕ್ಷಿತವಾಗಿ ಕಂಡುದರಿಂದ ಮಾತ್ರವಲ್ಲದೆ, ಮಾತನಾಡಿದ ಮಾತಿನಿಂದಲೂ ನಾಚಿಕೆ ಸಂಕೋಚಗಳಿಂದಲೂ ಮುದುರಿ ಹಿಡಿಯಾದಳು ಕಾಲ ಮೇಲೆ ಸರಿದಿದ್ದ ಸೀರೆ ಪೂರಾ ಎಳೆದುಕೊಂಡು, ಸೆರಗು ಸರಿಮಾಡಿಕೊಂಡು ಗಾಬರಿಯಾಗಿ ಎದ್ದು ನಿಂತಳು

ನಸುನಗುತ್ತಾ ನಿಂತ ವೇಣು ಅವಳ ಮಾತಿನಿಂದ ಕೋಪಿಸಿಕೊಳ್ಳಲಿಲ್ಲ

ದನಿ ತಗ್ಗಿಸಿ, ಸುಮ, "ನೀವೂಂತ ಅಂದ್ಕೊಳ್ಳಿಲ್ಲ. ವಾಸು ಬಂದಿರ್ಬೇಕೂಂತ. "

'ಪರ್ವಾಗಿಲ್ಲ, ಏನಾಯ್ತೀಗ. ಏಳಿ, ನಿಮ್ಮನ್ನ ಕರ್ಕೊಂಡು ಹೋಗೋಕೆ ಅಂತ ನಾನೀಗ ಬಂದದ್ದು."

"ಇಲ್ಲ, ನಾನು ಬರೋಲ್ಲ ನಾಳೆ ನಂಗೆ ಟೆಸ್ಟಿದೆ. ಅಲ್ದೆ ಈವತ್ತೆಲ್ಲಾ ಓದಲೇ ಇಲ್ಲ" ಎಂದು ನಾಲಿಗೆ ಕಚ್ಚಿಕೊಂಡಳು. ನೀವು ಬಂದ್ರೀಂತ ರಜಾ ಹಾಕಿದ್ದೂ ಅಲ್ಲದೆ, ಓದೂ ಹೋಯ್ತು ಎಂದಂತಾಯ್ತು ವೇಣುವಿಗೆ! ಆಡಿಯೂ ತೋರಿಸಿಬಿಟ್ಟ.

'ನಾನು ಬಂದದ್ರಿಂದ ತಾನೇ ನಿಮಗೀವತ್ತು ಓದಿಗೆ ಸೊನ್ನೆ?

"ಛೆ, ಛೆ. ಹಾಗಲ್ಲ. . ' ಮುಂದೆ ಏನು ಹೇಳಬೇಕೋ ತಿಳಿಯಲಿಲ್ಲ ಅವಳಿಗೆ

"ಮತ್ತೆ ಹೇಗೆ?" ನಕ್ಕುಬಿಟ್ಟ ವೇಣು. "ಇರಲಿ. . ನಾಳೆ ಯಾರು ನಿಮಗೆ ಟೆಸ್ಟ್ ಕೊಡೋವ್ರು?ಸತ್ಯಾನಾ?ದೇವದಾಸಾ?ರಾವಾ?"

"ಅವರು ಯಾರೂ ಅಲ್ಲ. ಮಿಸ್ ಮಾಧುರಿ."

"ಮಾಧುರೀನಾ? ಹಾಗಾದರೆ ಸರಿ ಬಿಡಿ. ನಾನವಳಿಗೆ ಹೇಳ್ತೀನಿ. ಈಗ ನೀವು ಎದ್ದು ರೆಡಿ ಆಗಿ. ಕಾರಿನಲ್ಲಿ ಕೂತಿರ್ತೀನಿ. ಐದು ನಿಮಿಷದಲ್ಲಿ ಬರ್ಬೇಕು"-ಎನ್ನುತ್ತ ಹೊರಟೇಹೋದ.

ಸುಮಳಿಗೆ ಹೋಗದೆ ಗತ್ಯಂತರವಿಲ್ಲ. ಸರಸರ ಸಿದ್ಧವಾಗಿ ಐದೇ ನಿಮಿಷದಲ್ಲಿ ಹೊರಗೆ ಬಂದು, "ರಂಗಾ, ನಾನೂ ಹೋಗ್ತಾ ಇದೀನಿ. ಬಾಗಿಲೆಲ್ಲಾ ಸರಿಯಾಗಿ ಹಾಕು"ಎಂದು ಮೆದುವಾಗಿ ಹೇಳಿ ಕಾರಿನ ಬಳಿ ಬಂದಳು.

ಹಿಂದಿನ ಬಾಗಿಲು ತೆರೆದು ಹಿಡಿದು ನಿಂತಿದ್ದ ವೇಣು ಅವಳು ಕುಳಿತ ಕೂಡಲೆ ಬಾಗಿಲು ಹಾಕಿ ಕಾರು ಏರಿದ. ಹಿಂದಿನ ಸೀಟೇಕೆ? ಮುಂದೆ ಆತನ ಪಕ್ಕದಲ್ಲಿ ಕುಳಿತುಕೊಳ್ಳಬಾರದೇನೋ ತಾನು ಎಂದು ಸುಮ ನಿರಾಸೆಪಟ್ಟುಕೊಂಡಳು. ಪುನಃ ತನ್ನ ಹೆಣ್ಣು ಬುದ್ಧಿಯ ತರ್ಕಕ್ಕಾಗಿ ತಾನೇ ನಕ್ಕಳು. ಅವನು ಮುಂದಿನ ಬಾಗಿಲು ತೆರೆದಿದ್ದು ಆಹ್ವಾನಿಸಿದ್ದರೆ 'ಧೂರ್ತ, ಪಕ್ಕದಲ್ಲಿ ಕೂತ್ಕೋ ಅಂತಾನಲ್ಲ' ಅಂದುಕೊಳ್ಳುತ್ತಿರಲಿಲ್ಲವೇ ತಾನು?

81655CR

ಮಾಧುರಿಯನ್ನು ಅವಳು ಇವಳು ಅಂತಾನಲ್ಲ ಈತ! ತುಂಬಾ ಸ್ನೇಹಿತಳೇ ಇರ್ಬೇಕು ಊರ್ಮಿ ಹೇಳಿದ್ಲು 'ಬರೋ ಪ್ರೊಫೆಸರಿಗೂ, ಮಾಧುರಿಗೂ ಅಂತೆ'ಅಂತ ಹಿಂದೆ ಈತ ನೋಡಿದಾಗ ಹೇಗಿದ್ಲೋ ಏನೋ. ಆಕೆ ಈಗಂತೂ ಉದ್ದಿನ ಮೂಟೆ ಈಗ ಈತ ನೋಡಿದ್ರೆ ಖಂಡಿತ ಬೆಚ್ಚಿಬೀಳ್ತಾರೆ ಥೂ, ಈ ವಾಸೂಗೆ ತಾನು ಬರಲೇಬೇಕೂಂತ ಯಾಕಿಷ್ಟು ಹಟ ಅಷ್ಟು ಅಕ್ಕರೆಯಿದ್ರೆ, ಬಂದು ಕರಕೊಂಡು ಹೋಗ್ಬೇಕಾಗಿತ್ತು ಈತನ್ನ ಯಾಕೆ ಛೂಬಿಟ್ಟಿದ್ದು? ಅಮ್ಮ ಅಣ್ಣ ಏನಂದ್ಕೊತಾರೋ ಹೋಗಿ ವಾಸು ಜೊತೆ ಜಗಳ ಆಡ್ಬೇಕು, ಪಾಪ ಅವನು ಬಂದಿದ್ರೆ ತಾನು ಹೋಗುತ್ತಿದ್ದಳೆ? ಊಹುಂ, ಅವನನ್ನ ಕಾಡ್ಸಿ ಪೀಡ್ಸೋದು ಅಂದ್ರೆ ತನಗಿಷ್ಟ. ವಾಸು ಒಳ್ಳೆಯವ, ತಾನೆಷ್ಟೇ ಚೇಷ್ಟೆ ಮಾಡಲಿ, ಕೋಪಿಸ್ಕೊಳ್ಳೊಲ್ಲ. ಒಂದ್ವೇಳೆ ತನ್ನನ್ನ ಅವನು ಪ್ರೀತಿಸಿಬಿಟ್ಟಿಲ್ಲವಲ್ಲ ಸಧ್ಯ! ಮೊದಲೇ ತನ್ನ ಬದುಕು ಗೊಂದಲ. ಈ ಮಧ್ಯೆ ಈತ ಬೇರೆ ಬಂದಿಳಿದಿದ್ದಾನೆ. ಅಷ್ಟೇ ಅಲ್ಲ, ತನ್ನ ಹೃದಯ ಕದಿಯುತ್ತಿದ್ದಾನೆ ಇನ್ನು ವಾಸು ಬೇರೆ ಒಂದು ಕಡೆ ಎಳೆಯಲಿ. ಗೋವಿಂದ! ಈ ಆರು ತಿಂಗಳು ಕಳೆದು, ಒಂದು ಕೆಲಸ ಹಿಡಿದುಬಿಟ್ರೆ, ಬೇರೆ ಎಲ್ಲಾದ್ರೂ ಹೋಗಿ ಎಲ್ಲರಿಂದಲೂ ತಪ್ಪಿಸ್ಕೊಳ್ಳಬಹುದು

ಅವಳ ಯೋಚನೆಗಳ ಮಧ್ಯದಲ್ಲಿ ವೇಣುವಿನ ದನಿ ಗುಡುಗಿದಂತೆ ಕೇಳಿಸಿತು-

"ಒಂದು ಟೆಸ್ಟು ಅಂದ್ರೆ ಅಷ್ಟೊಂದು ಓದಬೇಕೇನು?" ಅವಳೇ ಮಾತಾಡ ಬಹುದೆಂದು ಕಾದು ನೋಡಿದ ವೇಣು ಕಡೆಗೆ ಮೌನ ಅಸಹನೀಯವಾಗಿ ತಾನೇ ಕೇಳಿದ.

"ಹಾಂ? ಹಾಂ? ಏನಂದ್ರಿ? ಇಲ್ಲ, ಬಹಳ ಏನೂ ಓದಬೇಕಿಲ್ಲ. ಆದರೆ . " ನಿಲ್ಲಿಸಿದಳು.

"ಏನು ಆದರೆ?"

"ನಾನು ಫಸ್ಟ್ ಪ್ಲೇಸ್ ಯಾವಾಗ್ಲೂ ಯಾರಿಗೂ ಬಿಟ್ಕೊಟ್ಟಿಲ್ಲ. ಅದು ಹೋಗ ಬಾರದು ಅಂತ ಅಷ್ಟೆ."

"ಐ ಸೀ"

"ಮೊದಲೇ ಮಿಸ್ ಮಾಧುರಿ ಒಂದು ಥರ...."ವೇಣುವಿನ ಪ್ರತಿಕ್ರಿಯೆ ಏನೆಂಬುದನ್ನ ನೋಡುವ ಇಚ್ಛೆಯಿಂದ ಸಂಬಂಧವಿಲ್ಲದ ಮಾತನ್ನೆತ್ತಿದಳು. ಆದರೆ ವೇಣು ಮಾತನಾಡಲಿಲ್ಲ.

ಒಂದು ಘಳಿಗೆ ತಡೆದು ಅವಳೇ "ನನ್ನ ಕಂಡ್ರೆ ಯಾಕೋ ಆಕೇಗೆ ಹೊಟ್ಟೆಯುರಿ ಅನ್ನಿಸುತ್ತೆ. ಚೆನ್ನಾಗೂ ಮಾಡದೆಹೋದ್ರೆ ಇದೇ ಸಂದರ್ಭ ಅಂತ ಕೆಳಗೆ ತಳ್ಳಬಹುದು."

"ದಪ್ಪವಾಗಿರೋವ್ರಿಗೆ ತೆಳ್ಳಗಿರೋವ್ರನ್ನ ಕಂಡ್ರೆ ಅಸೂಯೆ, ಕುಳ್ಳಗಿರೋವ್ರಿಗೆ ಎತ್ತರವಾಗಿರೋವ್ರನ್ನ ನೋಡಿದ್ರೆ ಈರ್ಷ್ಯೆ. ಅದು ಸಹಜಾನೇ!"

"ಅದೆಲ್ಲಾ ಸುಳ್ಳು, ಈಗ ಅಣ್ಣ ಕುಳ್ಳ, ದಪ್ಪ. ನಾನು ಎತ್ತರ, ತೆಳುವು. ನೀವೂ ಅಷ್ಟೆ. ಹಾಗಾದ್ರೆ ಅಣ್ಣಂಗೆ ಹೊಟ್ಟೆಕಿಚ್ಚೆ?" ಗಂಭೀರವಾಗಿ ಕೇಳಿದಳು

ಫಕ್ಕನೆ ನಕ್ಕ ವೇಣು-"ನೀವಿನ್ನೂ ಶುದ್ಧ ಮಗು ಸುಮ ನಾ ಹೇಳಿದ್ದು ಸಮ ವಯಸ್ಕರಲ್ಲಿ, ಅದ್ರಲ್ಲೂ ಹೆಂಗಸರಲ್ಲಿ "

ಸುತ್ತು ಬಳಸು ಪ್ರಯೋಜನವಿಲ್ಲವೆಂದು ಸುಮ ನೇರವಾಗಿ ಕೇಳಿದಳು-

"ಮಾಧುರಿ ನಿಮಗೆ ಚೆನ್ನಾಗಿ ಗೊತ್ತಾ?"

"ಓ, ಯಾಕೆ?"

"ನಾನವರ ವಿಷಯ ಮಾತನಾಡುತ್ತಾ ಇದೀನಲ್ಲ ಅಂತ"-ಎಂದು ನಕ್ಕಳು ಸುಮ.

"ನಗಲು ಏನಿದೇಂತ"

"ಹೇಳಲಾ? ಕೋಪಿಸ್ಕೋಬಾರ್ದು"

' ಇಲ್ಲ ಹೇಳಿ"

'ಮಾಧುರಿ....ಮತ್ತೆ.. ಆಕೆ . " ಅವನ ಮುಖ ನೋಡಿ ಹೇಳಬೇಕೆಂದು ಆಸೆಯಾಯಿತು ಅವಳಿಗೆ ಆದರೆ ಸಾಧ್ಯವಿಲ್ಲ. ಕತ್ತಲು ಅಲ್ಲದೆ ಅವನು ಮುಂದೆ, ತಾನು ಹಿಂದೆ.

"ಹಾಸ್ಟೆಲ್ ಹತ್ರ ಬರ್‍ತಿದೆ. ಬೇಗ ಹೇಳಿ."

"ಆಕೆ ನಿಮ್ಮನ್ನ ಲವ್ ಮಾಡ್ತಾರಂತೆ ನೀವು ಕಾಲೇಜಿಗೆ ಬರೋದೇ ಕಾಯ್ತಿದಾಳಂತೆ, ನಿಮಗೆ ಮಾಲೆ ಹಾಕೋಕೆ"

"ಅಂತೆ ಕಂತೆ, ಯಾಕೆ, ನಿಮಗ್ಯಾರು ಹೇಳಿದ್ರು? ಅದು ನೂರಕ್ಕೆ ನೂರು ಸತ್ಯ. ಅವಳು ನನ್ನ ಗರ್ಲ್ ಫ್ರೆಂಡ್" ಎಂದು ಕಾರನ್ನು ನಿಧಾನ ಮಾಡಿದ. ಅವನ ಕಣ್ಣಿನ ಚೇಷ್ಟೆಯ ಮಿಂಚು, ಪಾಪ! ಸುಮಳಿಗೆ ಹೇಗೆ ಕಾಣಬೇಕು.

ಸುಮಳಿಗೆ ಉಸಿರು ನಿಂತಿತು. ಮುಂದೆ ಮಾತನಾಡಲಾಗಲಿಲ್ಲ. ತಾನು ಏನು ಅಂದುಕೊಂಡಳು

ಹಾಸ್ಯವೆಂದು ಪ್ರಾರಂಭಿಸಿದ ವಿಷಯ, ನಗ್ನ ಸತ್ಯ ಹೊರಗೆಡವಿತ್ತು. ಅಮ್ಮ ಅಣ್ಣ ಒಪ್ಪಿಕೊಳ್ಳಬಹುದೆ? ಯಾಕಿಲ್ಲ? ಓದಿದವಳು, ದೊಡ್ಡ ಮನೆಯ ವಳಂತೆಯೇ ಕಾಣುತ್ತಾಳೆ, ಆದರೆ ಚಂಪ? ಅಮ್ಮನ ಇಷ್ಟವೆಲ್ಲಾ ಚಂಪಳನ್ನು ಸೊಸೆಯಾಗಿ ತರುವುದು. ಈತನ ಒಲವು ಮಾಧುರಿಯೆಡೆಗೆ. ಯಾರೋ, ಪಾಪ, ಸುಮ! ಎಂದಂತಾಯಿತು.

"ಯಾಕೆ ಮಾತು ನಿಲ್ಲಿಸಿಬಿಟ್ರಿ?" ಒಳ್ಳೆಯ ಷಾಕ್ ಕೊಟ್ಟಿದ್ದ ತಾನು. ತಾನೇ ಎಚ್ಚರಿಸಬೇಕೀಗ, "ಸುಮ, ನಿಮ್ಮ ಕ್ಲಾಸಿನಲ್ಲಿ ಎಷ್ಟು ಜನ ಇದೀರಿ?"

"ನಲವತ್ತೆಂಟು" ಪಾತಾಳದಿಂದ ದನಿ ಬಂದಂತಿತ್ತು.

"ಅದರಲ್ಲಿ...."

"ಹುಡುಗೀರು ಎಂಟು "

"ಇತ್ತೀಚೆಗೆ ಹುಡುಗೀರು ಸಮ ಸಮ ಅಂದ್ರು."

"ಹೌದು. ಆದರೆ ನಮ್ಮ ಬ್ಯಾಚಲ್ಲಿ ಮಾತ್ರ ಹುಡುಗೀರು ಕಡಿಮೆ "

"ನಿಮಗೆ ಪೆಟ್ ಫ್ರೆಂಡ್ ಊರ್ಮಿಳಾ ಅಲ್ವಾ?"

"ಹೌದು. ನಿಮಗೆ... ಹೇಗೆ. "

"ಪಕ್ಕಪಕ್ಕ ಕೂತ್ಕೊಂಡು ನೋಟ್ಬುಕ್ಕಲ್ಲಿ ರಹಸ್ಯ ಬರೆದು ಮಾತನಾಡುವಷ್ಟು."

"ನಿಮಗೆ ಹೇಗೆ ಗೊತ್ತು?" ಸುಮ ನಾಚಿ ಕೇಳಿದಳು.

"ಮಾಧುರಿ ಹೇಳಿದ್ಲು" ಎಂದುಮತ್ತೆ ಅವಳ ಹೆಸರು ತಂದು ಸುಳ್ಳಾಡಿದ. ನಿಜ ಹೇಳಿಬಿಡಲೇ ಎಂದು ಒಮ್ಮೆ ಅಂದುಕೊಂಡನಾದರೂ 'ಬೇಡ'ಅವಳು ಕಲ್ಪನೆಯಲ್ಲೇ ಇರಲಿ, ಎಂದು ಸುಮ್ಮನಾದ. ಆ ವೇಳೆಗೆ ಹಾಸ್ಟಲ್ ತಲುಪಿದ್ದರು

ಊಟ ಮುಗಿಸಿ ಮನೆಗೆ ಹಿಂತಿರುಗಿದಾಗ ಹತ್ತು ಗಂಟೆ ದಾಟಿತ್ತು, ಸುಮಳಿಗೆ ಊಟವೇ ಹಿಡಿಸಲಿಲ್ಲ. ಇಡೀ ವಾತಾವರಣವೇ ಕಲಕಿದಂತಾಗಿತ್ತು ವಾಸುವಿ ನೊಂದಿಗೂ ಸರಿಯಾಗಿ ಮಾತನಾಡಲಾಗಲಿಲ್ಲ. ಅವಳಿಗೆ ಎಲ್ಲೆಲ್ಲೂ ಮಾಧುರಿ ನಿಂತು ದಪ್ಪ ಮೈ ಕುಲುಕಿಸಿ ನಕ್ಕಂತಾಯಿತು.

ಮೌನವಾಗಿ ಹಿಂತಿರುಗಿದ್ದ ಸುಮ ಜಾಗ್ರತೆಯಾಗಿ ಹೋಗಿ ಅಣ್ಣನ ಹಾಸಿಗೆ ಸರಿಪಡಿಸಿ ಪರದೆ ಇಳಿಸಿದಳು. ಪಕ್ಕದಲ್ಲಿದ್ದ ಮಂಚದ ಮೇಲೆ ಅಮ್ಮನ ಹಾಸಿಗೆ ಬಿಡಿಸಿದಳು. ಇದು ಮುಗಿಸಿ ತನ್ನ ಕೋಣೆಗೆ ಹೊರಟಾಗ, ಹಾಲಿನ ಸೋಫಾದಲ್ಲಿ, ಕಾಲು ನೀಡಿ, ಕೈಗಳನ್ನ ಹೆಣೆದು ತಲೆಯ ಹಿಂದಕ್ಕೆ ಒರಗಿಸಿ ಕಣ್ಣು ಮುಚ್ಚಿ ಕುಳಿತ ವೇಣು ಕಾಣಿಸಿದ. ಹಾಗೆ ಕುಳಿತುಕೊಳ್ಳುವುದು ಆತನಿಗೆ ಅತ್ಯಂತ ಪ್ರಿಯವಿದ್ದಂತಿತ್ತು. ಅವನನ್ನು ದಾಟಿಮುಂದೆ ಹೋಗುವಾಗ 'ಸುಮ' ಎಂಬ ಅವನ ಕರೆಗೆ ಹಾಗೇ ನಿಂತಳು. ಹಿಂತಿರುಗಿ

ನೋಡಲಿಲ್ಲ.

"ಇಲ್ಲಿ ಬನ್ನಿ ನಿದ್ದೆ ಬರ್‍ತ್ತಿದೆಯೆ?"ಎಂದು ಪ್ರಶ್ನಿಸಿದ ಈ ಪ್ರಶ್ನೆಗೆ ಅರ್ಥ ತಿಳಿಯಲಿಲ್ಲ ಅವಳಿಗೆ ಅಲುಗಾಡದೆ ನಿಂತಲ್ಲೇ ನಿಂತಿದ್ದಳು.

ಬೆಳ್ಳಿ ತಂಬಿಗೆಯಲ್ಲಿ ನೀರು, ಲೋಟದಲ್ಲಿ ಕೇಸರಿ ಹಾಕಿದ ಹಾಲು ಹಿಡಿದು ಅಲ್ಲಿಗೆ ಬಂದ ಅಮ್ಮ- "ಇದು ತೊಗೋ"ಎಂದು ಹಾಲಿನ ಲೋಟವನ್ನು ಅವನ ಕೈಗೆ ಕೊಟ್ಟು,

"ಒಂದು ಮಾತು ಮಾಧು ಸುಮ ಇನ್ನೂ ಚಿಕ್ಕವ್ಳು, ನೀನು ಅವಳನ್ನು ಬನ್ನಿ, ಹೋಗಿ ಅಂದ್ರೆ ಏನೋ ವಿಚಿತ್ರವಾಗಿ ಕೇಳಿಸುತ್ತೆ, ಬಾ, ಹೋಗು ಅನ್ನು ಸಾಕು" ಎಂದರು.

"ಅಲ್ಲಮ್ಮ, ಸುಮಾ. "

"ಅವಳೇನೂ ಅಂದ್ಕೊಳ್ಳೋಲ್ಲ ನಾನೇ ಹೇಳ್ತೀದೀನಿ" ಎಂದು ಸುಮಳ ಕಡೆ ನೋಡಿ, ಅವಳ ಪ್ರತಿಕ್ರಿಯೆಗಾಗಿ ಕಾಯದೆ ಹೊರಟರು

ಆಗ ತನ್ನ ಕೈಯಲ್ಲಿದ್ದ ಹಾಲನ್ನು ಗಮನಿಸಿದ ವೇಣು "ಇದೇನಮ್ಮ ಇದು? ಈಗ್ಲೂ ಬಿಡಲಿಲ್ಲ ಇದನ್ನ" ಎಂದ

"ಈಗಲ್ಲ ಯಾವತ್ತಿಗೂ ಬಿಡೋಲ್ಲ, ಬಿಡೋ ಹಾಗಿಲ್ಲ" ಎಂದು ಆಗಲೇ ಕೋಣೆಯ ಬಾಗಿಲು ಸೇರಿದ್ದ ಅಮ್ಮ, ಒಳಸರಿದರು. ಎದ್ದು ಸರಿಯಾಗಿ ಕುಳಿತು, ಹಾಲು ಕುಡಿದು ಲೋಟವನ್ನು ಟೇಬಲ್ ಮೇಲಿಟ್ಟ ವೇಣು ತನ್ನ ತಾಯಿಯ ಪ್ರೀತಿಯ ಆಳದಿಂದ ಪುಳಕಿತನಾದ

ಅಲ್ಲೇ ನಿಂತಿದ್ದ ಸುಮಳನ್ನುದ್ದೇಶಿಸಿ "ನೀವು ಓದುತ್ತಾ ಇದ್ದ ಪುಸ್ತಕ ನೋಟು ಬುಕ್ಕು ತೊಗೊಂಡ್ಬನ್ನಿ ನಿದ್ದೆ ಬರದೆ ಇದ್ರೆ ಮಾತ್ರ" ಎಂದ. ಅಲುಗಾಡದೆ ನಿಂತಳು ಸುಮ.

'ಬೇಡದಿದ್ರೆ ಬೇಡ"ಎಂದು ಮತ್ತೆ ಕಾಲು ನೀಡಿ ಕುಳಿತ

"ಅಮ್ಮ ಈಗತಾನೇ ಏನು ಹೇಳಿದ್ರು? ನಾನು ಬಹುವಚನ ಅಲ್ಲ ಬರೀ ಏಕವಚನ"ಎಂದು ನಕ್ಕಳು ಹತ್ತು ಗಂಟೆಯ ರಾತ್ರಿಯಲ್ಲಿ ಭಾರವಾದ ಭೋಜನದಿಂದ ಮತ್ತವಾಗಿದ್ದ, ತೂಕವಾದ ರೆಪ್ಪೆಗಳಡಿಯಲ್ಲಿ ನಿಂತ, ಆ ಮಾದಕ ನಗೆ! ಎಲೆಯಡಿಕೆ ಯಿಂದ ರಂಗೇರಿದ ತುಟಿ ಬಿರಿದು, ಹೊರಹೊಮ್ಮಿದ ಆ ನಗೆಯಿಂದ ಅಧೀರನಾದ ವೇಣು, ಚೇತನಗೊಳ್ಳಲೋಸುಗ ಕಣ್ಣು ಮುಚ್ಚಿಕೊಂಡ. ಮತ್ತೆ ಕೆಲ ನಿಮಿಷ ಕಳೆದು ಕಣ್ಣು ತೆರೆಯುವ ವೇಳೆಗೆ, ವಿಧೇಯ ವಿದ್ಯಾರ್ಥಿನಿಯಂತೆ ಸುಮ ಎದುರಿಗೆ ಪುಸ್ತಕ ಹಿಡಿದು ಕುಳಿತಿದ್ದಳು.

ಅವಳಿಗೆ ನಾಳೆ ಇರುವ ಟೆಸ್ಟ್ ಭಾಗವನ್ನು ಕೇಳಿ ತಿಳಿದು, ದೀರ್ಘವಾಗಿ ವಿವರವಾಗಿ ಹೇಳಿಕೊಡಲಾರಂಭಿಸಿದ ಪುಸ್ತಕದಲ್ಲೂ ಆಗೊಮ್ಮೆ ಈಗೊಮ್ಮೆ ಫಾರ್ಮುಲಾಗಳನ್ನು ಬರೆದು

ಅರ್ಥವತ್ತಾಗಿ ಹೇಳಿದ. ಸುಮ ತಲ್ಲೀನತೆಯಿಂದ ಕೇಳ ತೊಡಗಿದಳು. ಮಧ್ಯೆ ಮಧ್ಯೆ ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಹೇಳುತ್ತಿದ್ದಳು.

ಎದುರಿಗಿದ್ದವನು ವೇಣುವೆನಿಸಲಿಲ್ಲ. ಪರಿಣತ ಪ್ರೊಫೆಸರ್ ಮಾತ್ರ, ತಾನು ಒಬ್ಬ ವಿದ್ಯಾರ್ಥಿನಿ ವೇಣುವಿಗೂ ರೂಪಸಿ ಸುಮ ಎದುರಿನಿಂದ ಹೊರಟು ಹೋಗಿದ್ದಳು, ಒಬ್ಬ ಮೇಧಾವಿ ವಿದ್ಯಾರ್ಥಿನಿ ಪಾಠ ಹೇಳಿಸಿಕೊಳ್ಳುತ್ತಿದ್ದಳಷ್ಟೆ. ಅವಳ ಗ್ರಹಣಶಕ್ತಿಗೆ, ತಲ್ಲೀನತೆಗೆ ಅವನು ಮೆಚ್ಚಿದ ಈಗಲೂ ಇಂತಹ ವಿದ್ಯಾರ್ಥಿ ಗಳು ಇದ್ದಾರೆಯೆ? ಎನಿಸಿತು

ಪರದೇಶದಿಂದ ಹಿಂತಿರುಗಿರುವ ಪ್ರೊಫೆಸರ್ ಸಾಧಾರಣನಲ್ಲ ಎಂಬುದು ವಿದಿತ ವಾಯಿತು ಸುಮಳಿಗೆ ಹತ್ತು ಬಾರಿ ಓದಿದರೂ ಅರ್ಥವಾಗದ ವಿಷಯ ಈ ಅರ್ಧಗಂಟೆಯಲ್ಲಿ ಮಿದುಳಿನಲ್ಲಿ ಉರಿಹೋಯಿತು ಅವಳಿಗೆ ತೃಪ್ತಿ, ಖುಷಿ ಒಮ್ಮೆಲೇ ಆಯಿತು ಅವಳ ನೆನಪಿನಿಂದ ಮಾಧುರಿ ಯಾವಾಗಲೋ ಜಾರಿ ಹೋಗಿದ್ದಳು ಈಗ ಮೈ ಮನಗಳ ತುಂಬೆಲ್ಲಾ ಕೆಮಿಸ್ಟ್ರಿ, ವೇಣು ತುಂಬಿದ್ದರು

"ನನ್ನ ಕೆಲಸ ನಾ ಮಾಡಿದ್ದೀನಿ ನಾಳೆ ಟೆಸ್ಟ್‌ನಲ್ಲಿ ನಿಂಗೆ ಕಡಿಮೆ ಮಾರ್ಕ್ಸ್ ಬಂದ್ರೆ ಅದು ನಿಂದೇ ಹೊಣೆ, ನನ್ನದಲ್ಲ' ಎಂದ ವೇಣು ಚೇಷ್ಟೆಯಿಂದ

'ಇಂಪಾಸಿಬಲ್ ಇನ್ನು ನನಗೆ ಕಡಿಮೆ ಮಾರ್ಕ್ಸ್ ಬರೋದು ಸಾಧ್ಯಾನೇ ಇಲ್ಲ' ಎಂದು ತುಂಬು ವಿಶ್ವಾಸದಿಂದ ನುಡಿದ ಅವಳು-"ತುಂಬಾ ತುಂಬಾ ಥ್ಯಾಂಕ್ಸ್ ಸರ್' ಎಂದಳು

"ಏನಂದೆ? ಸರ್ ಅಂದ್ಯಾ" ಎಂದು ಅವನೆಂದಾಗ ಅವಳಿಗೇಕೋ ನಾಚಿಕೆ ಯಾಯಿತು ಪುಸ್ತಕ ಜೋಡಿಸಿ ಎದ್ದು ನಿಂತಳು. ವೇಣುವೂ ಎದ್ದು ಅವಳ ಪಕ್ಕಕ್ಕೆ ಬಂದು ಹತ್ತಿರವಾಗಿ ಬಾಗಿ "ಟ್ಯೂಷನ್ ಹೇಳಿದ್ದಕ್ಕೆ ಏನು ಫೀಸು?" ಎಂದು ಪಿಸುದನಿಯಲ್ಲಿ ಕೇಳಿದ.

ಅವಳೂ ಅಷ್ಟೇ ಮೆಲ್ಲಗೆ "ಮೇಲೆ ಕೋಣೆಯಲ್ಲಿದೆ"ಎಂದು ಪಿಸುಗುಟ್ಟಿ ಓಡಿಬಿಟ್ಟಳು.

ರೂಮಿಗೆ ಬಂದಾಗ, ಹಾಸಿಗೆಯೆಲ್ಲಾ ಸರಿಪಡಿಸಿತ್ತು ದಿಂಬಿನ ಮೇಲೆ ಕುಳಿತ ಎರಡು ಗುಲಾಬಿಗಳು ಕೈಬಾಚಿ ಆಹ್ವಾನಿಸುತ್ತಿದ್ದುವು ಆ ಬಿಳಿಯ ಗುಲಾಬಿಗಳು ಸುಮಳ ಎರಡು ಕೆನ್ನೆಗಳಂತೆ ಭಾಸವಾಯಿತು ಮೃದುವಾಗಿ ಅವನ್ನ ಕೈಲಿ ಹಿಡಿದು-ಆ ಕೆನ್ನೆಗೊಂದು ಈ ಕೆನ್ನೆಗೊಂದು ಎನ್ನುವಂತೆ ಬಿಡಿಬಿಡಿಯಾಗಿ ಮುದ್ದಿಸಿ ಮತ್ತೆ ದಿಂಬಿನ ಮೇಲೇ ಇಟ್ಟ. ಬಟ್ಟೆ ಬದಲಿಸಿ ಹಾಸಿಗೆಯ ಮೇಲೆ, ಆ ಗುಲಾಬಿಗಳಿಗೆ ಕೆನ್ನೆ ತಾಗಿಸಿ ಮಲಗಿದ ಅವನಿಗೆ ಜೀವನವೇ ಉಲ್ಲಾಸಮಯವೆನಿಸಿತು.

ಸುಮ!ಆ ಗುಲಾಬಿಯೂ ಸುಮವೇ.

"ಮೇಲೆ ಕೋಣೆಯಲ್ಲಿದೆ" ಎಂದ ಫೀಸು ನಿಜಕ್ಕೂ ಅಮೂಲ್ಯವಾದದ್ದು. ಆ ಹೂಗಳ ಮೂಲಕ ಅವನಿಗೆ ಸುಮಳ ಹೃದಯ ಸ್ಪಂದನದ ಅರಿವಾಗಿತ್ತು. ಸುಖವಾಗಿ ನಿದ್ರಿಸಿದ ವೇಣುಮಾಧವ್.

ಅದೇ ನಿದ್ರೆ ಹರಿದು ಬಂದು, ವೇಣುವನ್ನು ಆವರಿಸಿ, ಹತ್ತಿರ ಹತ್ತಿರ ಬಂದು ಸುಮಳನ್ನು ಸುತ್ತುವರಿದು ಗಂಟು ಹಾಕಿತು.

೩

ವೇಣು ಬೆಳಿಗ್ಗೆ ಕಣ್ಣು ಬಿಡುವ ವೇಳೆಗೆ ಚೆನ್ನಾಗಿ ಬೆಳಕಾಗಿತ್ತು. ರೂಮಿನಲ್ಲಿ ಸಣ್ಣ ಪುಟ್ಟ ಬದಲಾವಣೆಯಾದಂತಿತ್ತು ಟೇಬಲ್ ಮೇಲಿದ್ದ ಹೂದಾನಿ ಚಿಕ್ಕ ಗೋದ್ರೇಜ್ ಬೀರುವಿನ ಮೇಲೆ ಕುಳಿತಿತ್ತು. ಅದರಲ್ಲಿ ಆಗತಾನೇ ಕುಯ್ದ ನಳನಳಿಸುವ ಗುಲಾಬಿಗಳಿದ್ದುವು. ಟೇಬಲ್ ಮೇಲೆ ಅಮ್ಮ ಅಣ್ಣ ಇದ್ದ ಒಂದು ಫೋಟೋ, ತನ್ನದೊಂದು ಫೋಟೋ ತ್ರಿಕೋಣದ ಎರಡು ರೇಖೆಗಳಂತೆ ಜೋಡಿಸಿ ಕುಳಿತಿದ್ದವು. ನಿನ್ನೆಯ ಬಟ್ಟೆಬರೆಯೆಲ್ಲಾ ಮಡಿಸಿಟ್ಟಿತ್ತು

ಎಲ್ಲಾ ಸುಮಳ ಕೆಲಸವೇ ಇರಬೇಕು. ಎಲ್ಲವೂ ಅಚ್ಚುಕಟ್ಟು.

ಅವನಿಗೆ ಚಟ್ಟನೆ ಲಿಸ್‌ಳ ನೆನಪಾಯಿತು. ಅವಳಿಗೂ ಅಷ್ಟೆ, ಎಲ್ಲವೂ ಇದ್ದಲ್ಲಿ ಇರಬೇಕು ಒಪ್ಪವಾಗಿ ಓರಣವಾಗಿ ಪದಾರ್ಥಗಳನ್ನಿಡುವುದರಲ್ಲೇ ಅವರ ವ್ಯಕ್ತಿತ್ವ ಗುರುತಿಸಬಹುದು ಎನ್ನುತ್ತಿದ್ದಳು ಲಿಸ್ ಹೇಗಿದ್ದಾಳೋ ತಾನಾಗಲೇ ಅವಳಿಂದ ದೂರವಾಗಿ ಒಂದೂವರೆ ತಿಂಗಳಾಯಿತು. ಅವಳಿಂದ ಬೀಳ್ಕೊಂಡ ಮೇಲೆ ಇನ್ನೂ ಅನೇಕ ಊರು ಸುತ್ತಿ ಭಾರತಕ್ಕೆ ಹಿಂತಿರುಗಿದ್ದ.

ಲಿಸ್‌ಳ ನೆನಪಿನಿಂದ ಮನ ಜಡ್ಡಾಯಿತು. ಆದರೂ ಮೈ ಮುರಿದು ಆಕಳಿಸಿ ಎದ್ದು ಕೆಳಗೆ ಬಂದ. ಬಾಲು ಇನ್ನೂ ಎದ್ದಿರಲಿಲ್ಲ. ಅಮ್ಮ ಅಡಿಗೆ ಕೋಣೆಯಲ್ಲಿದ್ದಳು. ಅಣ್ಣ ಮತ್ತು ಸುಮ ತೋಟದಲ್ಲಿರಬಹುದು ಎಂದುಕೊಳ್ಳುತ್ತಾ ಮುಖ ತೊಳೆದು ಕಾಫಿ ಕುಡಿದು ಹೊರಗೆ ಬಂದ.

ಅವನು ಊಹಿಸಿದಂತೆಯೇ ದೂರದಲ್ಲಿ ಅಣ್ಣ ಕುರ್ಚಿಯಲ್ಲಿ ಕುಳಿತಿದ್ದರು ಸುಮ ನೆರಿಗೆಗಳನ್ನು ಮೇಲಕ್ಕೆ ಸಿಗಿಸಿ ಗಿಡದ ಪಾತಿಗಳನ್ನು ಅಗಲ ಮಾಡುವ ಕೆಲಸದಲ್ಲಿ ತೊಡಗಿದ್ದಳು ರಂಗ ತಂದುಕೊಡುತ್ತಿದ್ದ ನೀರಿನ ಬಿಂದಿಗೆ ತೆಗೆದುಕೊಂಡು ವೈಯಾರದಿಂದ ಬಾಗಿ ಗಿಡಗಳಿಗೆ ನೀರು ಹಾಕುತ್ತಿದ್ದಳು. ಶುಕ್ರವಾರವೆಂದಿರಬಹುದು, ತಲೆಗೆ ಎರೆದುಕೊಂಡಂತಿತ್ತು. ಬಿರಿಹೊಯ್ದ ಕೂದಲು ಬೆನ್ನಮೇಲೆ ಕುಳಿತಿದ್ದು ಅವಳು ಅಲುಗಾಡಿದಂತೆ ಅವೂ ಓಡಾಡುತ್ತಿದ್ದುವು. ಆಗಾಗ ಕೈ ಚಾಚಿ ತೋರಿಸಿ ಏನೋ ಹೇಳುತ್ತಿದ್ದಳು. ರಾಯರು ತಲೆದೂಗುತ್ತಿದ್ದರು

ಹಿಂದಿನ ದಿನದ ಲವಲವಿಕೆ ವೇಣುವಿನಲ್ಲಿ ಬತ್ತಿ ಹೋಗಿತ್ತು. ಸುಮಳನ್ನು ಕಂಡ ಕೂಡಲೆ ಅರಳಬೇಕಿದ್ದ ಹೃದಯ ಅರಳಲಿಲ್ಲ. ಮಧುರ ಭಾವನೆ ಅಳಿದು ಹೋಗಿ ಅಂತರಾಳದಲ್ಲಿ ನೋವು ತುಂಬಿ ನಿಂತಿತ್ತು. ಅದೊಂದು ಘಟನೆ ತನ್ನ ಬದುಕಿನಲ್ಲಿ ನಡೆಯದೆ ಇದ್ದಿದ್ದರೆ! ಈಗ ತಾನು ಯಾವ

ಹುಡುಗಿಯನ್ನೂ ಪ್ರೇಮಿಸಲಾರ ಪ್ರೇಮಿಸಿದರೂ ತನ್ನ ತುಂಬು ಒಲವನ್ನು ಕೊಟ್ಟು ತೃಪ್ತಿ ಪಡಿಸಲಾರ. ತಾನೇಕೆ ಸುಮಳನ್ನು ಪ್ರೋತ್ಸಾಹಿಸಬೇಕು? ಚಿಟ್ಟೆಯಂತೆ ಸ್ವತಂತ್ರವಾಗಿ ಹಾರಾಡಬಲ್ಲ ಆ ಹುಡುಗಿ ತನ್ನ ಬಲೆಯಲ್ಲೇಕೆ? ಈ ವಯಸ್ಸಿನಲ್ಲೇ ತಾನು ಸಾವು-ಬದುಕುಗಳಲ್ಲಿ ಹೆಣಗಾಡಿದ್ದು ಸುಃಖದಿಂದ ಬಾಳುವ ವಯಸ್ಸಿನಲ್ಲಿ ತಾನು ಹಾಸಿಗೆಯಲ್ಲಿ!ಆ ವಯಸ್ಸಿನ ಸುಖ-ದುಮ್ಮಾನಗಳೇನೆಂದೇ ತನಗೆ ತಿಳಿಯದು. ಅಬ್ಬ, ಇಷ್ಟು ಭಯಂಕರ ದಿನಗಳವು!ಆ ಘಟನೆಯೇ ಇಲ್ಲದಿದ್ದಲ್ಲಿ ತಾನು ಎಲ್ಲರಂತಿರಬಹುದಿತ್ತು ಕಳೆದುದಕ್ಕೇಕೆ ಚಿಂತಿಸಬೇಕು ಎಂದು ನಿಟ್ಟುಸಿರುಬಿಟ್ಟು ಕೈಕಟ್ಟಿ ಶೂನ್ಯದೊಳಕ್ಕೆ ನೋಡುತ್ತಾ ಅಲ್ಲೇ ಮೆಟ್ಟಿಲ ಮೇಲೆ ನಿಂತುಬಿಟ್ಟ.

ತನ್ನೆದುರಿಗೇ ರಂಗ, ಕುರ್ಚಿ ಹಿಡಿದು ಅಣ್ಣನ ಬಳಿ ಹೋದುದನ್ನೂ, ಸುಮ ಏನೋ ಅವನಿಗೆ ಹೇಳಿದುದನ್ನೂ ಕಣ್ಣು ನೋಡಿದರೂ ಮನ ತಿಳಿದುಕೊಳ್ಳಲಿಲ್ಲ ರಂಗ ಓಡಿ ಬಂದು "ಅಯ್ಯಾವ್ರು ಕರೀತಾರೆ"ಎಂದಾಗ ಬಾಹ್ಯಕ್ಕಿಳಿದು ಬಂದ. ಹೋಗಿ ತಂದೆಯ ಎದುರಿನ ಕುರ್ಚಿಯಲ್ಲಿ ಕುಳಿತಾಗ ಮಣ್ಣಾಗಿದ್ದ ಕೈಗಳನ್ನು ತೊಳೆದುಕೊಂಡು, ಸೆರಗಿಗೆ ಒರೆಸಿಕೊಳ್ಳುತ್ತಾ ಹತ್ತಿರ ಬಂದು ಸುಮ ತುಂಟತನದಿಂದ "ಗುಡ್ ಮಾರ್ನಿಂಗ್ ಸರ್" ಎಂದಳು

ಪರಧ್ಯಾನವಾಗಿಯೇ ಇದ್ದ ವೇಣು ಯಾವುದೋ ಒಬ್ಬ ವಿದ್ಯಾರ್ಥಿ ವಂದಿಸಿದರೆ ಪ್ರತಿವಂದಿಸುವಂತೆ ಯಾಂತ್ರಿಕವಾಗಿ "ಗುಡ್ ಮಾರ್ನಿಂಗ್" ಎಂದ ನೀರಸತೆಯಿಂದ.

ಸುಮಳಿಗೆ ಅವನ ವರ್ತನೆಯಿಂದ ಪಿಚ್ಚೆನಿಸಿದರೂ, ಸಿಗಿಸಿದ್ದ ನೆರಿಗೆಗಳನ್ನು ಕೆಳಗೆ ಮಾಡಿ ನಸುನಗುತ್ತಾ ಮನೆಯೊಳಕ್ಕೆ ಬಂದಳು.

ತಂದೆ ಮಗ ಗಹನವಾಗಿ ಏನೆಲ್ಲಾ ಮಾತನಾಡಿದರೂ ವೇಣುವಿನ ಚೇತನ ಹಿಗ್ಗಲಿಲ್ಲ. ಅವನ ಮನವೇ ಪಾತಾಳಕ್ಕೂ ಇಳಿಯಬಲ್ಲುದು. ಇದು ರಾಯರು ಅರಿಯದ ವಿಷಯವಲ್ಲ. ಕಾರಣವು ತಿಳಿಯದುದಲ್ಲ. ಹಾಗಾಗಿ ಅವನು ಗೆಲುವಾಗಿ ದ್ದರೆ ತೃಪ್ತಿಪಡುತ್ತಿದ್ದರು. ಅಂತರ್ಮುಖಿಯಾದರೆ ನೊಂದುಕೊಳ್ಳುತ್ತಿದ್ದರು. ಅವನ ನೋವಿಗೆ ತಾವೂ ಅರ್ಧ ಕಾರಣರೆಂದು ಗೊತ್ತಿದ್ದುದರಿಂದ ಆ ನೋವೂ ಅಧಿಕವಾಗುತ್ತಿತ್ತು.

ವೇಣು ರಾಯರನ್ನು ಸ್ವಲ್ಪ ತೋಟದಲ್ಲಿ ತಿರುಗಾಡಿಸಿ ಒಳಗೆ ಕರೆತಂದು ಅವರನ್ನು ಹಾಗೆ ಬೆಳಿಗ್ಗೆ ಓಡಾಡಿಸುವ ಕೆಲಸ ರಂಗನದು. ಸಂಜೆ ಸುಮಳದು. ಇಂದು ರಂಗನ ಬದಲು ವೇಣುವೇ ನಿಂತಿದ್ದ.

ಒಳಗೆ ಬಂದಾಗ ಬಾಲು ಪೇಪರು ಓದುತ್ತಾ ಹಾಲಿನ ಸೋಫಾದಲ್ಲಿ ಕುಳಿತಿದ್ದ. "ಏನು ಡಾಕ್ಟರು, ನಿದ್ರೆ ಚೆನ್ನಾಗಿ ಮಾಡಿದ್ರಾ? ಇನ್ನೂ ಅಮೆರಿಕಾದಲ್ಲೇ ಇದ್ದೀರೋ ಅಥವಾ ಭಾರತಕ್ಕೆ ಹಿಂದಿರುಗಿದೀರೋ?" ಎಂದ ಹಾಸ್ಯವಾಗಿ. ವೇಣು ಉತ್ತರ ಕೊಡದೆ ಮೆಲುವಾಗಿ ನಕ್ಕು ಅಲ್ಲೇ ಯಥಾಪ್ರಕಾರ ಕಾಲು ಚಾಚಿ

ತಲೆಯ ಹಿಂದೆ ಕೈಕಟ್ಟಿ ಕುಳಿತ.

ಯಾರೂ ಮಾತನಾಡಲಿಲ್ಲ. ಬಾಲು ಪೇಪರಿನಲ್ಲಿ ತಲೆ ತೂರಿಸಿದ್ದವನು ಕೆಲ ಸಮಯದ ನಂತರ ಪೇಪರ್ ಪಕ್ಕಕ್ಕಿಟ್ಟು -"ಅಲ್ಲಾ ಮಾಧು, ಫಾರಿನ್ನಿನಿಂದ ಏನೇನು ತಂದೆ? ನಮಗೇನೂ ತೋರಿಸೋಲ್ವ?" ಎಂದ. ವೇಣು ಏನೂ ಉತ್ಸಾಹ ತೋರದೆ, ಬಾಲು ಪಕ್ಕಕ್ಕಿಟ್ಟ ಪೇಪರನ್ನು ಎಟುಕಿಸಿಕೊಳ್ಳುತ್ತಾ - "ತರೋಂಥಾದ್ದು ಏನಿರುತ್ತೆ? ಇಲ್ಲಿ ಸಿಗದೆ ಇರೋದು ಅಲ್ಲಿ ಏನಿದೇಂತ? ತಂದ್ರೂ ಒಂದ್ವೇಳೆ ಕೆಟ್ಟು ಕೂತ್ರೆ ಸ್ಪೇರ್ ಸಿಗೋಲ್ಲ. ಮೂಲೇಗೆ ಎಸಿಯೋದು ತಾನೇ....ಆದ್ರೂ ನಿನ್ನಂಥಾವ್ರು ಇಂಥ ಪ್ರಶ್ನೆ ಕೇಳೇ ಕೇಳ್ತೀರಿ ಅಂತ ಒಂದಿಷ್ಟು ಕಸ ಹೊತ್ಕೊಂಡು ಬಂದಿದೀನಿ" ಅಂದ.

ಆ ಮಾತಿನಲ್ಲಿ ಹಾಸ್ಯ ತುಂಬಿದೆಯೋ, ವ್ಯಂಗ್ಯ ತುಂಬಿದೆಯೋ ಎಂದು ರಾಯರೂ, ಬಾಲುವೂ ಒಟ್ಟಿಗೇ ಅವನ ಮುಖ ನೋಡಿದರು ಅವನು ನಗು ನಗುತ್ತಾ ಸರಿಯಾಗಿ ಕುಳಿತು-'ಅಣ್ಣಂಗೊಂದು ಟೈಪ್‌ರೈಟರ್, ಅಮ್ಮಂಗೊಂದು ಮಂಟಪ, ನಮ್ಮ ಸೋದರತ್ತೆ ಮಗನಿಗೊಂದು ಕ್ಯಾಮೆರಾ, ಒಂದೆರಡು ಸೀರೆ ..."

"ನಿಮ್ಮ ಸೋದರತ್ತೆ ಮಗನಿಗೆ ಸೀರೆ?" ಕುಚೋದ್ಯ ಮಾಡಿದ ಬಾಲು.

"ಹಾಗೇಂತ್ಲೇ ಇಟ್ಕೋ ಆ ಮಗ ತಾನೇ ಈಗ ಸೀರೆ ತೊಗೊಂಡು ಹೋಗಿ ತಂಗಿಯರಿಗೆ ಕೊಡ್ಬೇಕು?"

"ಯಾಕೆ, ತಂದವರೇ ಹೋಗಿ ಕೊಡ್ಬಾರ್ದೂಂತ ಇದ್ಯೇನು?"

"ಕೊಡಬಹುದು. ಆದ್ರೆ ತಡವಾಗಿ ಬಿಡುತ್ತೇಂತ...."

ಅಷ್ಟರಲ್ಲಿ ತಾಯಿ ಅಲ್ಲಿ ಬಂದವ್ರು-"ಚಂಪಂಗೆ ಏನೂ ತರ್ಲಿಲ್ವಾ ಮಧೂ?" ಎಂದರು. ಸ್ವಲ್ಪವೂ ಚಲಿಸದೆ ವೇಣು-"ತಂದಿರೋ ಸೀರೆಗಳಲ್ಲಿ ಒಂದು ಅವಳಿಗೂ ಕೊಡಮ್ಮ"ಎಂದ.

"ಎಲ್ಲಾ ಬರೀ ಬಾಯಲ್ಲೇ ಲಿಸ್ಟ್ ಕೊಡ್ತೀಯೋ, ಏನಾದ್ರೂ ತೋರಿ ಸ್ತೀಯೋ?" ಎಂದ ಬಾಲು.

"ತೋರಿಸೋಣ ಇರು ಇವತ್ತೇ ಊರಿಗೆ ಹೋಗುವ ಅವಸರವೆ?"

"ಹೊರಟುಹೋಗು ಅಂದ್ರೆ ಅದಕ್ಕೂ ಸಿದ್ಧ."

ತಂದೆ ನಡುವೆ ಅಂದರು-"ಏನಿದು ಬಾಲು ನಿನ್ನ ಮಾತು? ಅದೇನೋ ಬೊಂಬಾಯಿಂದ ಪಾರ್ಸೆಲ್ ಬರುತ್ತೆ, ಅಲ್ಲೀತನಕ ಇರ್ತೀನಿ ಅಂದ್ಯಲ್ಲಪ್ಪ?"

"ಇರ್ತೀನಿ ಮಾವ, ಆದ್ರೆ ಈ ಮಾಧು ನೋಡು."

"ನಾನು ಹೋಗು ಅಂದ್ನಾ ಅಣ್ಣ ಈಗ? ಹೋಗೋಕೆ ತುದಿಗಾಲಲ್ಲಿ ನಿಂತಿದ್ದಾನೆ, ಅಲ್ಲಿ ಏನೋ

ಇದೆ ಆಕರ್ಷಣೆ" ಗಂಭೀರವಾಗುತ್ತಿದ್ದ ಮಾತು ಮತ್ತೆ ಹಗುರವಾಯಿತು

ತಾನು ತಂದಿರುವ ವಸ್ತುಗಳನ್ನು ಸುಮಳೂ ನೋಡಲಿ ಎನ್ನುವ ಆಸೆ ಮಾಧುವಿಗೆ ಆದರೆ ಅವಳ ಸುಳಿವೇ ಕಾಣಲಿಲ್ಲ ಎದ್ದು ಅಡಿಗೆ ಮನೆಗೆ ಹೋಗಿ ತಾಯಿಯ ಬಳಿ,

"ಎಲ್ಲಾನೂ ನೀನೇ ಮಾಡ್ಬೇಕೇನಮ್ಮ. ಸುಮ ಏನೂ ಅಡಿಗೆಯಲ್ಲಿ ಸಹಾಯ ಮಾಡೋಲ್ವ?" ಎಂದ ಸುಮಳ ಪತ್ತೆಗಾಗಿ

"ಪಾಪ, ಅವಳಿಗೆಲ್ಲಿ ಬಿಡುವು. ಬೆಳಿಗ್ಗೆ ಅಷ್ಟು ಹೊತ್ತಿಗೇ ಒಂದಿಷ್ಟು ತೋಟದ ಕೆಲಸ ಮಾಡ್ತಾಳೆ ಆಮೇಲೆ ಟೈಪಿಂಗ್ ಕ್ಲಾಸಂತೆ. ಮತ್ತೆ ಬಂದು ಒಂದು ತುತ್ತು ಊಟ ಮಾಡಿ ಕಾಲೇಜಿಗೆ ಹೋಗ್ತಾಳೆ. ಬರೋದು ಸಂಜೆ ಐದೋ ಆರೋ ಗಂಟೆಗೆ. ಅವರನ್ನು ಸ್ವಲ್ಪ ಓಡಾಡಿಸಿದ ನಂತರ ಓದು ಇಷ್ಟರ ನಡುವೇನೂ ಏನೇನು ಮಾಡೋಕ್ಕೆ ಸಾಧ್ಯಾನೋ ಎಲ್ಲಾ ಮಾಡ್ತಾಳೆ ಹುಡುಗಿ"

ಅವಳಲ್ಲಿ ತಾಯಿಗಿರುವ ಅನುಕಂಪ ಕೇಳುತ್ತಾ ಅವನಿಗೆ ನಿರಾಳವಾಯಿತು ಬಾಲು ಒಬ್ಬನನ್ನು ಬಿಟ್ಟರೆ ಮತ್ತೆಲ್ಲರಿಗೂ ಅವಳಲ್ಲಿ ವಾತ್ಸಲ್ಯವಿದೆ, ಅವನಿಗಿದ್ದರೆಷ್ಟು ಬಿಟ್ಟರೆಷ್ಟು! ಅಂದರೆ ಈಗ ಅವಳು ಟೈಪಿಂಗ್ ಕ್ಲಾಸಿಗೆ ಹೋಗಿದ್ದಾಳೆ ಇಷ್ಟರಲ್ಲೇ ಬರುತ್ತಾಳೆ ಎಂದ ಹಾಗಾಯಿತು ಎಂದು ಅವನು ತಂದ ವಸ್ತುಗಳನ್ನೆಲ್ಲಾ ಹೊತ್ತು ತಂದು ತಂದೆಯ, ಬಾಲುವಿನ ಎದುರಿಗಿಟ್ಟ. ತಾಯಿಯೂ ಬಂದು ಸೇರಿಕೊಂಡರು. ವೇಣು ಇಚ್ಛಿಸಿದಂತೆಯೇ ಸುಮಳೂ ಹಿಂತಿರುಗಿದಳು

ಅವಳು ಅಲ್ಲಿ ನಿಂತು ಬೆರಗುಕಣ್ಣುಗಳಿಂದ ಎಲ್ಲವನ್ನೂ ನೋಡುತ್ತಿದ್ದಾಗಲೇ ವೇಣುವಿಗೆ ಹೊಳೆದದ್ದು, ಅವಳಿಗಾಗಿ ಕೊಡಲು ತಾನೇನೂ ತಂದಿಲ್ಲವೆಂದು. ಮನಸ್ಸಿಗೆ ಹೇಗೋ ಆಯಿತು. ಅವಳು ಇರುವ ವಿಷಯ ತನಗೆ ತಿಳಿದಿರಲಿಲ್ಲವಲ್ಲ ಎಂದು ಸಮಾಧಾನ ಹೇಳಿಕೊಂಡರೂ, ಏಕೋ ಅವನ ಮನಸ್ಸು ಕೊರತೆಯಿಂದ ತುಂಬಿಹೋಯಿತು. ಕ್ಯಾಮೆರಾ ಮತ್ತು ಸೀರೆಗಳನ್ನು ಬಾಲುವಿಗೆ ಕೊಡುವಾಗ, ಅಮ್ಮನಾದರೂ ಒಂದು ಸೀರೆ ಎತ್ತಿ ಅವಳಿಗೆ ಕೊಡಬಾರದೆ ಎಂದು ಚಡಪಡಿಸಿದ. ತಾನು ಕೊಡಹೋದರೆ ಏನು ಆಭಾಸವೋ ಎಂದುಕೊಳ್ಳುತ್ತಿದ್ದಾಗಲೇ ರಾಯರು ಎಲ್ಲ ಸೀರೆಗಳನ್ನು ಕೈಗೆ ತೆಗೆದುಕೊಂಡು ಅದರಿಂದ ಎರಡು ಸೀರೆ ಬೇರ್ಪಡಿಸಿ ಮಿಕ್ಕ ನಾಲ್ಕನ್ನು ಬಾಲುವಿಗೆ ಕೊಟ್ಟರು. 'ಇವೆರಡು ಇಲ್ಲಿರಲಿ' ಎನ್ನುವಂತೆ ತೊಡೆಯ ಮೇಲಿಟ್ಟುಕೊಂಡು ಅವುಗಳ ಮೇಲೆ ಹಸ್ತ ಊರಿದರು.

ಎಲ್ಲ ನೋಡಿ ಮುಗಿಸಿ ಹೊರಟುಹೋಗುತ್ತಿದ್ದ ಸುಮಳನ್ನು ಹತ್ತಿರ ಕರೆದು ರಾಯರು-"ಕಣ್ಣು ಮುಚ್ಚಿ ಇವೆರಡರಲ್ಲಿ ಒಂದು ತೆಗೆದುಕೋ" ಎಂದು ಎರಡು ಸೀರೆಗಳನ್ನೂ ಮುಂದೆ ಹಿಡಿದರು.

ನಾಗಮ್ಮ "ಏನೂಂದ್ರೆ, ಇದು ಮಕ್ಕಳಾಟಾನ-ಕಣ್ಣು ಮುಚ್ಚಿ ತೊಗೊಳ್ಳೋಕೆ? ಅವಳಿಗೆ ಯಾವುದು ಬೇಕೋ ಅದನ್ನು ತೊಗೊಳ್ಳಲಿ. ಮಿಕ್ಕದ್ದು ಚಂಪಳಿಗಾಯ್ತು" ಎಂದರು.

ವೇಣುವಿಗೆ ತನ್ನ ಕಿವಿ ಸರಿಯಾಗಿ ಕೇಳುತ್ತಿದೆಯೆ ಅನ್ನಿಸಿತು. ಅಂತಹ ತಾಯಿ ತಂದೆಯರನ್ನು ಪಡೆದದ್ದು ತನ್ನ ಸುಕೃತ ಎಂದುಕೊಂಡ. ಬಾಲು ಏನಾದರು ಪಟಾಕಿ ಹೊಡೆದಂತೆ ಅನ್ನಬೇಕಿತ್ತು,ಏಕೆ ಸುಮ್ಮನಿದ್ದನೋ?

ಸುಮ ಸೀರೆ ತೆಗೆದುಕೊಳ್ಳದೆ ಮಾಧುವಿನೆಡೆಗೆ ನೋಡಿದಳು ಅದು ಯಾರಿಗಾಗಿ ತಂದಿದ್ದಾನೋ ಈ ಹಿರಿಯರು ತನಗೆ ಕೊಡುತ್ತಿದ್ದಾರೆ. ಇವನಿಗಿಷ್ಟವಿದೆಯೋ ಇಲ್ಲವೋ ಎಂದು ಅನುಮಾನಿಸಿದಳು, ತಾಯಿ ತಂದೆಯರ ವರ್ತನೆಯಿಂದ ಧೈರ್ಯಗೊಂಡ ಮಾಧು, ಒಂದನ್ನು ತಾನು ಆರಿಸಿ ಅವಳ ಕೈಗೆ ಎಟುಕಿಸಿದ. ಅವಳು ಸಂತೋಷದಿಂದ ಅರಳಬಹುದು.ಪ್ರೇಮದ ದೃಷ್ಟಿಯನ್ನೇ ತನ್ನೆಡೆಗೆ ಬೀರಬಹುದೆಂದು ಆಶಿಸಿದ ವೇಣು ನಿರಾಶೆ ಎದುರಿಸಿದ. ಮೌನವಾಗಿ ಸೀರೆ ಪಡೆದು, ಕೋಣೆ ಸೇರಿದಳು. ಸುಮ. ಆ ಸೀರೆ ಉಡಬೇಕೆಂಬ ಇಚ್ಛೆಯನ್ನು ಮುಂದೆ ತಳ್ಳಿದಳು. ಸಿಕ್ಕಿದ್ದು ಬಾಚಿಕೋ ಎನ್ನುವ ಮನೋಧರ್ಮ ಅವಳಿಗೆ ಹಿಡಿಸದು ಇಂದು ನಾಲ್ಕು ಜನರೂ ಕುಳಿತು ಅದನ್ನು ತನಗೆ ಕೊಡದಿದ್ದರೆ ತಾನು ಅದನ್ನು ಸ್ವೀಕರಿಸುತ್ತಲೇ ಇರಲಿಲ್ಲ. ಎಲ್ಲರೆದುರಿಗೆ ನಿರಾಕರಿಸುವ ಧೈರ್ಯ ತನಗೆಲ್ಲಿ ಬರಬೇಕು.

ರಾಯರು ತನಗೆ ಎಲ್ಲಾ ವಿಧದ ಸೌಲಭ್ಯದೊರಕಿಸಿಕೊಡಬೇಕೆಂದು ಬಯಸಿದ್ದರು. ಅತಿಥಿಗಳಿಗಾಗಿ ಸದಾ ತೆರೆದಿಟ್ಟಿದ್ದ ಮುಂದಿನ ಕೋಣೆಯಲ್ಲೇ ತನ್ನನ್ನು ಇರಹೇಳಿದ್ದರು. ಮಂಚ, ಕುರ್ಚಿ, ಟೇಬಲ್, ಟೇಬಲ್ ದೀಪ,ಪುಸ್ತಕಗಳಿಗಾಗಿ ಬೀರು ಎಲ್ಲವೂ ಸಜ್ಜಿತವಾದ ಆ ಕೊಠಡಿಗೆ ಮಾರುಹೋಗಲಿಲ್ಲ ಸುಮ ತನ್ನ ಆರ್ಥಿಕ, ಸಾಮಾಜಿಕ ಅಂತಸ್ತಿನ ಅರಿವು ಚೆನ್ನಾಗಿದ್ದ ಅವಳಿಗೆ ಇಂದು ಆರಾಮಜೀವನಕ್ಕೆ ಅಳವಡಿಸಿಕೊಂಡು ಭವಿಷ್ಯದಲ್ಲಿ ಅವು ಯಾವುವೂ ಸಿಗದೆ,ಪರಿಸ್ಥಿತಿಗೆ ಅಳವಡಿಸಿ ಕೊಳ್ಳುವ ಮನಸ್ಸತ್ವ ಕಳೆದುಕೊಂಡು ಪಾಡು ಪಡುವುದು ಬೇಕಿರಲಿಲ್ಲ. ಹಾಗೆಯೇ ರಾಯರಿಗೆ ಹೇಳಿ ತನ್ನದೇ ಆದ ಹಾಸಿಗೆ ಪೆಟ್ಟಿಗೆ ಚಾಪೆಗಳನ್ನು ಬಿಟ್ಟು ಮತ್ತೇನನ್ನೂ ಬಳಸಲಿಲ್ಲ ಸುಮ. ಅವಳು ಅವರಿಂದ ಪಡೆದುದೆಲ್ಲಾ ಖಾಲಿಯ ಎರಡು ಮರದ ಪೆಟ್ಟಿಗೆಗಳು, ಪುಸ್ತಕ ಜೋಡಿಸಿಡಲು.

ಅವಳ ದೂರದರ್ಶಿತ್ವ, ಸರಳತೆ ರಾಯರ ಮನಸ್ಸನ್ನು ಸೆರೆ ಹಿಡಿದುವು.'ಒಳ್ಳೆಯ ಸುಗುಣಿ ಹುಡುಗಿ, ಯಾರ ಮುಡಿಗೊ'ಎಂದುಕೊಂಡರು.

ಸುಮ ಊಟ ಮಾಡಿ ಕಾಲೇಜಿಗೆ ಹೊರಡುವ ಹೊತ್ತಿನಲ್ಲಿರಾಯರು ರಂಗನ ಸಹಾಯದಿಂದ ಸ್ನಾನ ಮಾಡುತ್ತಿದ್ದರು. ಬಾಲು ಮನೆಯಲ್ಲಿ ಎಲ್ಲೂ ಕಾಣಲಿಲ್ಲ. ಅವನು ಕಾಣಬೇಕೆದು ಅವಳು ಬಯಸುತ್ತಲೂ ಇರಲಿಲ್ಲ. ಆದರೆ ಅವಳು ಬಯಸಿದ ವ್ಯಕ್ತಿ ಬಹುಶಃ ಕೋಣೆಯಲ್ಲಿ ಕುಳಿತಿರ ಬಹುದು.'ಟೆಸ್ಟ್‌ನಲ್ಲಿ ಚೆನ್ನಾಗಿ ಬರೆದು ಬರುತ್ತೇನೆ,ನೋಡಿ ಬೇಕಾದರೆ'ಎಂದು ಹೆಮ್ಮೆಯಿಂದ ಆತನಿಗೆ ತಿಳಿಸಿ ಹೋಗಬೇಕೆಂದು ಮನಸ್ಸಾಯಿತು. ಆದರೆ ವಿನಾ ಕಾರಣ ನಹಡಿ ಹತ್ತಿ ಹೋದರೆ

ಏನೆಂದುಕೊಂಡಾರೆಂದು ಒಂದು ಘಳಿಗೆ ಹಾಲಿನಲ್ಲಿ ನಿಂತಳು. ಟೈಪ್‌ರೈಟರ್ ಮತ್ತು ಮಂಟಪ ಇನ್ನೂ ಅಲ್ಲೇ ಸೋಫಾದ ಮೇಲೆ ಕುಳಿತಿದ್ದವು. ಮಂಟಪ ಬಹಳ ಅಂದವಾಗಿತ್ತು. ಮೈಸೂರಿನ ಅರಮನೆಯಂತೆ ದೀಪೋತ್ಸವ ನಡೆಸಲು ಸಣ್ಣ ಸಣ್ಣ ಬಲ್ಬುಗಳಿಂದ ಪೂರಾ ಮಂಟಪ ಮುಚ್ಚಿಹೋಗಿತ್ತು. ಪ್ಲಗ್ಗಿಗೆ ಸಿಗಿಸಿ ಸ್ವಿಚ್ ಒತ್ತಿದ ಕೂಡಲೆ ಜಗಜಗಿಸುತ್ತಿದ್ದ ಆ ಮಂಟಪವನ್ನು ಬೆಳಿಗ್ಗೆಯೇ ನೋಡಿ ಆನಂದಪಟ್ಟಿದ್ದಳು. ಅಮ್ಮನಿಗಂತೂ ಇಂದ್ರ ಲೋಕದಿಂದ ಐರಾವತ ತಂದ ಭೀಮನ ಬಗೆಗೆ ಆದ ಹೆಮ್ಮೆಯೇ ತಮ್ಮ ಮಗನ ಬಗೆಗೂ ಆಗಿತ್ತು.

ಈಗೊಮ್ಮೆ ಹಚ್ಚಿ ನೋಡಲೆ? ಬೇಡ. ಅದು ಹಚ್ಚಿದ್ದರೆ ಮಾತ್ರ, ಅದರ ಒಡೆಯನಿಗೆ ತಾನಿಲ್ಲಿ ಕಾದು ನಿಂತಿರುವುದು ತಿಳಿದೀತೆ? ಕೂಡಲೆ ಏನೋ ಹೊಳೆದಂತೆ ಟೈಪ್‌ರೈಟರಿನ ಮುಚ್ಚಳ ಬಿಚ್ಚಿ, ಅದರ ಕೀಗಳ ಮೇಲೆ ಬೆರಳಾಡಿಸಿ ಟಪಟಪ ಶಬ್ದ ಮಾಡಿದಳು. ಆಶಬ್ದಕ್ಕೆ ಹೊರಗೆ ಬಂದವನು ವೇಣುವಲ್ಲ. ಅಮ್ಮ ಅಡಿಗೆಮನೆಯಿಂದ ಇಣುಕಿ, "ಇನ್ನೂ ಹೊತ್ತಾಗಲಿಲ್ವೆ ಸುಮಾ?" ಎಂದರು.

"ಇಗೋ ಹೊರಟೇಮ್ಮ, ಈ ಪುಟ್ಟ ಮೆಷಿನ್ ಎಷ್ಟು ಚೆನ್ನಾಗಿದೆ" ಎನ್ನುತ್ತಾ ಮುಚ್ಚಳ ಮುಚ್ಚಿಟ್ಟಳು.

"ಈಗೇನು, ಅದನ್ನ ಉಪಯೋಗಿಸೋವ್ಳು ನೀನೇ ತಾನೇ. ನೀನು ಅವ್ರಿಗೆ ಒಳ್ಳೆಯ ಸೆಕ್ರೆಟರಿ ಆಗಿದ್ದೀಯಲ್ಲ.. ಈಗ್ಲೂ ಅವರೇ ಟೈಪ್ ಮಾಡ್ತಾರೇಂತ ಮಾಧೂ ಅದನ್ನ ತಂದ್ಕೊಟ್ಟಿದ್ದಾನೆ. ಅದು ನಿಜವಾಗಿ ನಿನಗೆ ಪ್ರೆಸೆಂಟ್" ಎಂದು ನಕ್ಕು ಮತ್ತೆ ಒಳಸರಿದರು

ಅವರ ಮಾತು ಕೇಳುತ್ತಾ ಕೇಳುತ್ತಾ ನಿರಾಸೆಯ ದೃಷ್ಟಿಯಿಂದ ಮಹಡಿಯ ಕಡೆಗೊಮ್ಮೆ ನೋಡಿ ಹೊರಹೊರಟಳು. ಅವಸರದಿಂದ ಹೊರಗೆ ಹೋದಮೇಲೂ ಒಂದು ಸಲ ಬಾಲ್ಕನಿಯ ಕಡೆಗೆ ತಲೆಯೆತ್ತಿ ನೋಡಿದಳು. ಆದರೆ ನಿರಾಸೆಯೇ ಖಂಡಿತವಾಯಿತು. ತನ್ನ ಹಿಂದೆ ಮುಂದೆ ತಿರುಗಲು ತಾನೇನು ಅವರಿಗೆ ಬಂಧುವೇ, ಆತ್ಮೀಯಳೇ, ಸ್ನೇಹಿತಳೇ? ಓರ್ವ ಅನಾಥ ಹೆಣ್ಣು. ಎರಡು ಹೊತ್ತಿನ ಕೂಳಿಗೆ ಬಿದ್ದಿರುವ ಒಂದು ಜೀವಿಯ ಕಡೆಗೆ, ಲಕ್ಷಾಧೀಶ್ವರ ರಾಜಕುಮಾರನಿಗೆ ಆಸಕ್ತಿ ಯಾದರೂ ಹೇಗೆ ಇದ್ದೀತು. ಅಲ್ಲ, ಏಕೆ ಇರಬೇಕು? ತನಗೇಕೆ ಈ ಹುಚ್ಚು ಹಿಡಿಯಿತು ಎಂದು ಪೆಚ್ಚು ನಗೆ ನಗುತ್ತಾ ಬಸ್ ಸ್ಟಾಪ್ ಸೇರಿದಳು.

ಕಾಲೇಜು ಹತ್ತಿರವಾದಂತೆ, ಅವಳಿಗೆ ಮನೆ, ಮನೆಯ ಪರಿಸರ ಮರೆ ಯಾಯಿತು.ಮಾಧುರಿ ಕೊಡುವ ಟೆಸ್ಟ್‌ನಲ್ಲಿ, ವಾಹ್!ಹೇಗೆ ಬರೀತೀನಿ!ಹಾಗೇ ಆಕೆ ದಂಗಾಗಿಬಿಡಬೇಕು. ಮಾಧು,ಅದೆಷ್ಟು ಚೆನ್ನಾಗಿ ಪಾಠ ಹೇಳ್ತಾರೆ. ತಮ್ಮ ಕ್ಲಾಸು ತೆಗೆದುಕೊಳ್ತಾರೋ ಇಲ್ವೋ. ಊರ್ಮಿಗೆ ಇದೆಲ್ಲ ಹೇಳೋದಾ? ಅವಳು ಕುಚೇಷ್ಟೆ ಮಾಡ್ತಾಳೆ. ಏನೂ ಹೇಳ್ಬಾರ್ದು. ತನ್ನ ಹೃದಯ ಗಹ್ವರದ ಒಳಗಡೆ ಗೋಪ್ಯವಾಗಿ ಅತಿ ಗೋಪ್ಯವಾಗಿ ಮಾಧುವಿನ ಮೂರ್ತಿಯನ್ನು ನಿಲ್ಲಿಸಬೇಕು.

ಊರ್ಮಿಳಾ ಇವಳಿಗಾಗಿಯೇ ಕಾಯುತ್ತಿದ್ದಂತೆ ಓಡಿ ಬಂದಳು.

"ಹೇಗಿದ್ದಾರೆ ನಮ್ಮ ಫಾರಿನ್ ರಿಟರ್ನ್ಡ್ ಪ್ರೊಫೆಸರ್? ನಾನು ಕುತೂಹಲ ದಿಂದ ಸಾಯ್ತಿದೀನಿ, ನಿನ್ನ ಅನುಭವ ಎಲ್ಲಾ ಹೇಳ್ಬಾರ್ದೇನೇ?"ಎಂದು ಒಂದೇ ಸಮ ಬಡಬಡಿಸಿದಳು.

"ಅನುಭವ ಏನಿದೆ, ಏನೋ ಪರವಾಗಿಲ್ಲ, ತಾಯಿ ತಂದೆಯರ ಥರಾನೇ ಒಳ್ಳೇ ಮನುಷ್ಯ ಇದ್ದ ಹಾಗೇ ಇದಾರೆ., ಬಹಳ ವಿಶ್ವಾಸದಿಂದ ಮಾತಾಡ್ಸಿದ್ರು ನನ್ನನ್ನು."

"ಹೂಂ,ಫಸ್ಟ್ ಸೈಟ್‌ನಲ್ಲೇ ಹುಕ್ ಮಾಡ್ಬಿಟ್ಟ ಅನ್ನು"-ಎಂಬ ಊರ್ಮಿಳಾ ಹಾಸ್ಯಕ್ಕೆ ಅಂದರೂ ಸುಮಳ ಕೆನ್ನೆ ರಂಗೇರಿತು.

"ನಿನ್ನ ತಲೆ...ಚೆನ್ನಾಗಿ ಮಾತಾಡ್ಸಿದ್ರು ಅಂದ್ರೇ..."

"ಅಷ್ಟೇ ಆದ್ರೆ ಈ ಕೆನ್ನೆ ನೋಡು ಹೇಗೆ ಗುಲಾಬಿಯಾಯಿತು"ಎಂದು ಸಿನಿಮಾ ಹಾಡು ಗುನುಗಿದಳು.

"ಅದೆಲ್ಲಾ ನಿನಗೆ ಕಣೆ, ನನಗಲ್ಲ"ಸುಮಾ ಇನ್ನೂ ಹೆಚ್ಚು ಕೆಂಪಾದಳು "ಅರೆರೆ, ಈ ನನ್ನ ಮುಖದಲ್ಲಿ ಕೆನ್ನೆ ಕೆಂಪಾಗೋದು ಬೇರೆ ಕಾಣುತ್ತೇನು?"ಎಂದು ತನ್ನ ಬಣ್ಣವನ್ನೇ ಗೇಲಿ ಮಾಡಿಕೊಂಡಳು ಊರ್ಮಿಳಾ

"ಏನು ಅತಿ ಆಡ್ತೀಯೋ. ನನ್ನಷ್ಟು ಬಿಳುಪಲ್ಲದಿದ್ದರೂ ಕಪ್ಪೇನೂ ಅಲ್ಲ ನೀನು."

"ಹೌದು ಹೌದು ದೇವದಾಸ್ ಪಕ್ಕದಲ್ಲಿ ನಾನೂ ಬಿಳುಪೇ"

"ಅಬ್ಬಬ್ಬ, ಇಷ್ಟಕ್ಕೆ ಬಂದ್ಬಿಟ್ಟಿದೀಯಾ? ನಾನು ದೇವದಾಸ್‌ಗೆ ಹೇಳಿಬಿಡ್ತೀನಿ ನೋಡು"-ಬೆದರಿಸಿದಳು ಸುಮ.

"ಹೇಳು, ಏನೂ ಭಯವಿಲ್ಲ. ನಾನು ಏಕಾಂತದಲ್ಲಿ ಅವರನ್ನು ಕರೆಯೋದು ಏನೂಂತ ಗೊತ್ತೇನು ನಿಂಗೆ? ಎಲ್ಲರೂ ಪ್ರಿಯತಮನ್ನ ಡಾರ್ಲಿಂಗ್ ಅಂದ್ರೆ ನಾನು ಡಾರ್ಕ್‌ಕಿಂಗ್ ಅಂತೀನಿ" ಎಂದಳು ಊರ್ಮಿಳಾ.

ಅವಳ ಬೆನ್ನ ಮೇಲೆ ಹೊಡೆಯುತ್ತ ಸುಮ-"ಕಿಲಾಡಿ ನೀನು....ಊರ್ಮಿ ನಿನ್ನ ಸಮಾಚಾರ ಏನು, ಅದು ಹೇಳು"ಎಂದಳು. ಊರ್ಮಿಳಾಳ ನಗುಮುಖ ಒಮ್ಮೆಲೇ ಕಪ್ಪಿಟ್ಟಿತು.

"ಬೇಕಾದಷ್ಟಿದೆ ಹೇಳೋದು" ಎಂದು ನಿಟ್ಟುಸಿರಿಟ್ಟು, "ಆದ್ರೆ ಈಗ ಬೇಡ. ಅದು ಬೇಗ ಮುಗಿಯೋಲ್ಲ ಆಮೇಲೆ ಹೇಳ್ತೀನಿ. ಮೊದಲು ಈ ಮೇಡಂದು ಹಾಳಾದ ಟೆಸ್ಟ್ ಆಗ್ಹೋಗ್ಲಿ"ಎಂದು ಗಡಿಯಾರ ನೋಡಿಕೊಂಡು "ಟೈಂ ಆಯ್ತು"ಎಂದಳು. ಇಬ್ಬರೂ ಸರಸರ ಕ್ಲಾಸಿನೊಳಗೆ ಹೋಗಿ ಕೂತರು.

ಒಂದುಗಂಟೆಯ ಕಾಲ ಮಾಧುರಿಯ ಕ್ಲಾಸು ಟೆಸ್ಟು. ಅದು ಮುಗಿದ ನಂತರದ ಪೀರಿಯಡ್ನು

ಸತ್ಯನ್ ಲೆಕ್ಚರ್ರು. ನಂತರವೇ ಹರಟೆ ಹೊಡೆಯಲು ಬಿಡುವು.

ಕ್ಲಾಸಿನಿಂದ ಹೊರಗೆ ಬರುತ್ತಾ ಊರ್ಮಿಳಾ "ಮಿಸ್ ಎಷ್ಟು ಸಪ್ಪಗಿದ್ಲು ಗಮನಿಸಿದ್ಯಾ?"

"ಹೌದು, ಯಾಕಿರಬಹುದು?" ಸುಮಳ ಪ್ರಶ್ನೆ.

"ವೇಣುಮಾಧವ್ ಬಂದ್ರಲ್ಲಾ. ಇವಳೇನೋ ಆತ ತನ್ನನ್ನು ಬಹಳ ಪ್ರೀತಿಸ್ತಾನೆ ಅಂದ್ಕೊಂಡಿದ್ಲೂಂತ ಕಾಣುತ್ತೆ, ಹಾಗೆ ಢಂಗೂರಾನೂ ಹೊಡೆಕೊಂಡಿದ್ಲಲ್ಲ ಆದ್ರೆ ಸುಮ, ಮೊನ್ನೆ ಏರ್‌ಪೋರ್ಟಿನಲ್ಲಿ ತಮಾಷೆ ಆಗ್ಹೋಯ್ತು. ಆತ ಅವಳನ್ನು ಗಮನಿಸಲೇ ಇಲ್ಲ. ಎಲ್ಲರ್ಗೂ ಹೇಳೋ ಹಾಗೆ 'ಹಲೋ'ಅಂದ್ರು. ಅದೇ 'ಹಲೋ' ನನಗೂ ಹೇಳಿದ್ರು. ಪಾಪ ಅವಳ ಮುಖ ನೋಡಬೇಕಿತ್ತು."

"ಛೆ, ಹಾಗೆನ್ನದೆ, ಇನ್ನೇನು ಹತ್ತಾರು ಜನರ ಎದುರ್ಗೆ ಅವಳನ್ನ ತಬ್ಬ ಬೇಕಿತ್ತಾ?"

"ಅಲ್ಲಮ್ಮ ಸುಮಾದೇವಿ. ತುಂಬ ಬೇಕಾದವ್ರು ಎದುರಿಗೆ ಬಂದ್ರೆ ಮುಖದಲ್ಲಿ ಆಗೋ ಬದಲಾವಣೆ ಗೊತ್ತಾಗ್ದೆ ಇರೋಷ್ಟು ದಡ್ಡಳಲ್ಲ ನಿನ್ನ ಈ ಗೆಳತಿ ಊರ್ಮಿಳಾ "

"ಹೌದು, ನನಗೊತ್ತಿಲ್ವಾ ನೀನೀಗ ಪ್ರೇಮದ ಅಧ್ಯಾಯದಲ್ಲಿ ಪ್ರವೀಣೆ."

"ಯಾಕೋ ನಿನ್ನ ಮುಖ ನೋಡಿದ್ರೆ ನನಗೂ ಅನುಮಾನ ಬರ್ತಿದೆ ನೀನೂ ಸಹ ಆ ಅಧ್ಯಾಯದ ಮೊದಲ ಪುಟ ತಿರುಗಿಸಿದ್ದೀಂತ"

"ಥೂ ಹೋಗೇ, ಯಾಕೆ ಹಾಗೆ ಹೇಳ್ತಿ?"

"ಆಗ್ಳೇ ಯಾಕಮ್ಮ ಅಷ್ಟೊಂದು ಆತನ್ನ ವಹಿಸ್ಕೊಂಡು ಮಾತಾಡೋದು ನೀನು ಹಾಗಾದ್ರೆ?"

"ವಹಿಸ್ಕೊಳ್ಳೋದಲ್ವೇ. ಒಳ್ಳೆ ಮನುಷ್ಯರು ಪಾಪ, ಅದಕ್ಕೆ"

"ತ್ಸು ತ್ಸು ತ್ಸು, ಮೊನ್ನೆ ದಿನ ತಾನೇ ಅವರು ಹಿಂದಿ ಸಿನಿಮಾದ ಖಳನಾಯಕ ಆಗಿಬಿಡ್ತಾನೆ ಅಂತ ಥರಥರ ನಡುಗ್ತಿದ್ಯಲ್ಲೇ."

"ಅಂಥ ಹೆದರಿಕೆಯಲ್ಲ ನನಗಿದ್ದದ್ದು ಒಳ್ಳೇ ಕುಟುಂಬ, ಸಂಸ್ಕಾರದಲ್ಲಿ ಬೆಳೆದವರು, ಆತ. ಬಡವರ ವಿಷಯದಲ್ಲಿ ಹೇಗಿರ್ತಾರೋ? 'ಈ ದರಿದ್ರದ ಹುಡುಗಿ ಮನೇಲ್ಯಾಕೆ, ಬೇಕಾದ್ರೆ ನಾಲಕ್ಕು ಕಾಸು ಕೊಟ್ಟು ಬೇರೆ ಕಡೆ ಏರ್ಪಾಟು ಮಾಡ ಬಹುದಲ್ಲ'ಅಂತ ಅಂದ್ರೆ ಈಗ ಎಲ್ಲಿ ಹೋಗೋದೂಂತ ಯೋಚ್ನೆ ಆಗಿತ್ತು ಅಷ್ಟೆ."

"ಈಗ? ಆ ಯೋಚ್ನೆ, ಮಾಯವಾಯಿತು. ಮುದ್ದಾದ ಸೊಗಸಾದ ಹುಡುಗಿ, ಎಲ್ಲಿಂದ ಬಂದಳು? ಯಾರಿವಳು? ದೇವತೆಯೋ, ಕಿನ್ನರಿಯೋ...."

ಅವಳ ಮಾತು ನಿಲ್ಲುವಂತೆ ರಟ್ಟೆಯ ಮೇಲೆ ಗಿಲ್ಲಿ ಚುರಕ್ ಎನ್ನಿಸಿದಳು ಸುಮ.

"ನೀನು ಏನೇ ಹೇಳು ಸುಮ, ಬಹಳ ಹ್ಯಾಂಡ್‌ಸಮ್ಮಾಗಿದ್ದಾರಮ್ಮ ನಮ್ಮ ಪ್ರೊಫೆಸರ್. ಅವರು

ಮಾಧುರೀಗೆ ಫ್ರೆಂಡು ಅಂದ್ರೆ ನನಗ್ಯಾಕೋ ಹೊಟ್ಟೆಕಿಚ್ಚಾಗುತ್ತೆ. ಅವರಿಗಾಗಿ ಪಾಪ ಅಂತ್ಲೂ ಅನ್ನಿಸುತ್ತೆ."

"ಏನು ಹ್ಯಾಂಡ್‌ಸಂ? ಬೆಳ್ಳಗೆ ಎತ್ತರಕ್ಕಿದ್ದಾರೆ ಅಷ್ಟೆ."

"ನಿನಗೆ ಕಣ್ಣು ಕುರುಡೋ, ಹೃದಯಾನೇ ಶೂನ್ಯಾನೋ ಹೋಗು. ಚೆನ್ನಾಗಿರೋವ್ರನ್ನ ಚೆನ್ನಾಗಿದ್ದಾರೆ ಅಂತ ಒಪ್ಕೊಳ್ಳೆ. ನಾನೇನೂ ತಿಳ್ಕೊಳ್ಳೋಲ್ಲ"

"ಅದೆಲ್ಲಾ ಹರಟೆ ಸಾಕು. ಈಗ ನಿನ್ನ ಸಮಾಚಾರ ಹೇಳು?"

ಊರ್ಮಿಳೆಯ ಬಾಯಿಗೆ ಬೀಗ ಬಿತ್ತು. ತನ್ನ ಸಂಕಟ ಮರೆಯಲು ಎಷ್ಟು ಹೊತ್ತಾದರೂ ಕೀಟಲೆಯಾಗಿ ಮಾತಾಡುತ್ತಿರಬಲ್ಲಳು ಅವಳು. ತನ್ನ ವಿಷಯ ಬಂದಾಗ ನಿಂತೇಹೋಯಿತು ಆ ವಾಗ್ಝರಿ ದೀರ್ಘ ಉಸಿರು ಬಿಟ್ಟು "ದಾಸು ಯೋಚ್ನೆ ಬಿಟ್ಬಿಡ್ತಿದ್ದೀನಿ ಸುಮ"ಎಂದಳು.

"ಯಾಕೆ, ಏನಾಯ್ತು?"

"ಎಲ್ಲಾನೂ ಅಡ್ಡ ಬರ್ತಾ ಇದೆ. ಚಿಕ್ಕಮ್ಮಂಗೆ ಗೊತ್ತಾಗಿಹೋಗಿದೆ, ಒಂದನೇ ಅಬ್ಜೆಕ್ಷನ್-ದಾಸು ಅವರು ಮೊದಲಿಯಾರ್ರು, ನಾವು ಮರಾಠಿಗರು ನಾನು ಸಿಕ್ಕಾಪಟ್ಟೆ ಆತನ ಜೊತೆ ತಿರುಗ್ತೀನಂತೆ! ಅದು ಎರಡನೇದು ಮೊನ್ನೆ ಏರ್‌ಪೋರ್ಟ್‌ಗೆ ಹೋಗಿ ಬಂದಾಗ್ಲಿಂದ ಒಂದೇ ಕೊರೆತ ಮನೇಲಿ ಈವತ್ತಿನಿಂದ ಕಾಲೇಜಿಗೆ ಹೋಗ್ಬೇಡ ಅನ್ನೋಷ್ಟಕ್ಕೆ ಬಂದುಬಿಟ್ರು."

"ನೀನು ದೇವದಾಸ್ ಹತ್ರ ಹೇಳಿ ಒಂದು ತೀರ್ಮಾನಕ್ಕೆ ಬರಬೇಕಿತ್ತು."

"ಹೇಳಿದ್ದಕ್ಕೇ ಬಂದಿರೋದು ದೊಡ್ಡ ಆಪತ್ತು. 'ನಿಂಗೆ ಅವರ ಮಾತಿನ ಮೇಲೆ ಲಕ್ಷ್ಯಾನೇ ಹೊರತು ನನ್ನ ಮೇಲೆ ಸ್ವಲ್ಪವೂ ಪ್ರೀತಿ ಇಲ್ಲ. ಧೈರ್ಯವಾಗಿ ಎದುರಿಸೋದು ಬಿಟ್ಟು ನನ್ನ ಹತ್ತಿರ ಬಂದು ಅಳ್ತೀಯ. ಈವತ್ತೇ ಕಡೆ, ನಾವಿನ್ನು ಭೇಟಿ ಮಾಡೋದು ಬೇಡ'ಅಂತ ಅಂದುಬಿಟ್ರು ನಿನ್ನೆ ಸಂಜೆ" ಎನ್ನುತ್ತಿದ್ದಂತೆ ಅವಳ ಕಣ್ಣು ತುಂಬಿಬಂತು. ಕೆಳತುಟಿಯನ್ನು ಹಲ್ಲಿನಿಂದ ಕಚ್ಚಿ ಹಿಡಿದು ದುಃಖ ತಡೆದುಕೊಳ್ಳುತ್ತಿದ್ದಳು

"ಛೆ, ಹೀಗಾಯ್ತು? ಊರ್ಮಿ, ನಾನು ಮಾತಾಡ್ಲಾ ದಾಸು ಹತ್ರ?"

"ಏನಂತ ಮಾತಾಡ್ತಿ?"

"ನಿನ್ನ ಮನೆ ಸಂದರ್ಭ ಎಲ್ಲಾ ಹೇಳ್ತೀನಿ. ಅವರಿಗೆ ನಂಬಿಕೆ ಬರೋ ಹಾಗೆ ಮಾಡ್ತೀನಿ. ಸಾಧ್ಯ ಆದ್ರೆ ನಿಮ್ಮ ಚಿಕ್ಕಮ್ಮನೂ ನೋಡ್ತೀನಿ."

"ಅಯ್ಯೋ, ಅದು ಮಾತ್ರ ಬೇಡ" ಎಂದು ಕೈಹಿಡಿದುಕೊಂಡಳು. ಅವಳ ಕಣ್ಣ ನೀರು ಮುತ್ತಾಗಿ ಉರುಳಿ, ಕೆನ್ನೆಯಿಂದ ಜಾರಿ ಸುಮಳ ಕೈಮೇಲೆ ಬಿತ್ತು.

"ಕಣ್ಣು ಒರೆಸಿಕೋ ಊರ್ಮಿ. ಯಾರೋ ಬರ್ತಾ ಇದ್ದ ಹಾಗಿದೆ ಈ ಕಡೆಗೆ. ಇದು ಪ್ರಾಮಿಸ್,

ನೀನು ಯೋಚ್ನೆ ಮಾಡ್ಬೇಡ, ನಾನು ದೇವದಾಸ್ ಹತ್ರ ಖಂಡಿತ ಮಾತಾಡ್ತೀನಿ" ಎಂದು ಹೆಜ್ಜೆಯ ಸಪ್ಪಳ ಬಂದ ಎಡಗಡೆಗೆ ನೋಡಿದಳು. ನೋಡಿದ ದೃಶ್ಯದಿಂದ ಸುಮಳ ಎದೆಜೋರಾಗಿ ಬಡಿದುಕೊಳ್ಳತೊಡಗಿತು.

ಬಿಚ್ಚಿದ ಕೋಟನ್ನು ಕೈ ಮೇಲೆ ಹಾಕಿಕೊಂಡು, ಮಾಧುರಿಯ ಪಕ್ಕದಲ್ಲಿ ನಗುತ್ತಾ ಮಾತನಾಡುತ್ತಾ ಬರುತ್ತಿದ್ದ ಮಾಧು ಅವನ ಟೈ ಗಾಳಿಗೆ ಹಾರುತ್ತಿತ್ತು. ಅವರು ತೀರ ಹತ್ತಿರ ಬಂದಾಗ ಕಣ್ಣೀರು ಕಂಡೀತೆಂದು ಊರ್ಮಿಳಾ ಹಿಂದಕ್ಕೆ ತಿರುಗಿ ನಿಂತಳು. ಅವಳೊಂದಿಗೇ ಸುಮಳೂ ಸಹ ಇನ್ನು ಎದುರಿಗೇ ಕಂಡಾಗ ನಗಬೇಕಾಗುತ್ತದೆಂದು ತಲೆ ತಿರುಗಿಸಿದಳು

ಹತ್ತು ಹೆಜ್ಜೆಯ ದೂರದಲ್ಲಿ ಇಬ್ಬರೂ ನಿಂತರು

"ಖಂಡಿತ ಬರ್ಬೇಕು"ಎನ್ನುತ್ತಿದ್ದಳು ಮಾಧುರಿ.

"ಷೂರ್, ಆರು ಗಂಟೆಗೆ ತಾನೆ?' ಎಂದು ಬೀಳ್ಕೊಂಡು'ಬೈ'ಎಂದು ಬಲಗೈ ಎತ್ತಿದ. ಬೈ' 'ಬೈ'ಎಂದಳು ಮಾಧುರಿ

ಓರೆಗಣ್ಣಲ್ಲಿ ಇವರ ಬೈ'ಗಳನ್ನು ಕಂಡ ಸುಮಳಿಗೆ ಹೊಟ್ಟೆಯಲ್ಲಿ ಅಲುಗು ಆಡಿಸಿದಂತಾಯಿತು 'ಈ ಮೂರು ದಿನ ಬರೀ ಮನೆ, ರೆಸ್ಟ್'ಎಂದ ವೇಣುವಿಗೆ ನೆನಪಾಯಿತು. ಹಾಗಾದರೆ ರೆಸ್ಟು ತೆಗೆದುಕೊಳ್ಳುವ ಮನುಷ್ಯ ಇಲ್ಲಿಗೇಕೆ ಬರಬೇಕಿತ್ತು? ಮಾಧುರಿಗೆ ಸಾಧಾರಣವಾಗಿ 'ಹಲೋ' ಅಂದ್ರು ಅಷ್ಟೆ, ಎಂದಿದ್ದಳು ಊರ್ಮಿ ತನಗಲ್ಲ ಕುರುಡು, ಈ ಊರ್ಮಿಗೆ ಎಂದು ಅವಳ ಮೇಲೆ ಸಿಟ್ಟು ಬಂತು ಆದರೆ ಈಗವಳ ಮೇಲೆ ಕೋಪಕ್ಕೆ ಸಮಯವಲ್ಲ ದುಃಖದಲ್ಲಿದ್ದ ಅವಳಿಗೆ ಸಾಂತ್ವನ ನೀಡುತ್ತಾ-"ಒಂದೆರಡು ದಿನ ನೀನೂ ಸಹ ಜಾಣೆ ಹಾಗೆ, ಚಿಕ್ಕಮ್ಮ ಹೇಳಿದ ಹಾಗೆ ಕೇಳ್ತಾ ಇರು ಅಷ್ಟರಲ್ಲಿ ನಾನು ದೇವದಾಸ್‌ನ ವಿಚಾರಿಸ್ಕೋತೀನಿ ಅಲ್ಲಾ ಊರ್ಮಿ, ಇಷ್ಟೊತ್ತು ನಂಗೆ ಪ್ರೇಮಪಾರ ಹೇಳೋಕೆ ಬಂದವ್ಳು ಅಳ್ತೀಯಲ್ಲೇ. ಷೇಮ್ ಆನ್ ಯು. ಚಿಯರ್ ಅಪ್ ಗರ್ಲ್"ಎಂದು ಅವಳಿಗೆ ಹೇಳುತ್ತಾ ತನ್ನ ಹೃದಯ ಕೈಲಿ ಹಿಡಿದುಕೊಂಡಳು

ನಂತರದ ಎರಡು ಕ್ಲಾಸುಗಳಲ್ಲಿ ಹೇಗೆ ಕುಳಿತಿದ್ದಳೋ. ಅಂತೂ ಒಮ್ಮೆ ಮನೆಗೆ ಹೋದರೆ ಸಾಕು ಎನಿಸಿಬಿಟ್ಟಿತು ಸುಮಳಿಗೆ ಆದರೇನು ಪ್ರಯೋಜನ. ತನ್ನ ಹೃದಯ ಅವನನ್ನು ಬಯಸಿ ತನಗೆ ದ್ರೋಹ ಮಾಡುತ್ತಿದೆ ಪರರ ವಸ್ತುವನ್ನು ಬಯಸುವ ಈ ಚೋರ ಹೃದಯವನ್ನು ಇರಿದುಬಿಡಬೇಕು. ಮನೆಗೆ ಬಂದರೂ ಮನದ ಬೇಗುದಿ ಕಡಿಮೆಯಾಗಲಿಲ್ಲ ಏಕೆ ಹೀಗೆ? ಆತ ಎಲ್ಲಿ ಹೋದರೆ ತನಗೇನು?ಇನ್ನು ಮೇಲೆ ಆತನ ಎದುರಿಗೆ ಕಾಣಿಸಿಕೊಂಡರೆ ತಾನೇ ಈ ನೋವು?

ಹೃದಯ ನೋಯುತ್ತಿದ್ದರೂ ದಿನಚರಿ ನಿಲ್ಲಲಾರದು. ರಾಯರನ್ನು ನಡೆಸಿಕೊಂಡು ತೋಟದೊಳಕ್ಕೆ

ಹೋದಳು. ಅವರೊಡನೆ ನಗುನಗುತ್ತಲೇ ಮಾತನಾಡಿದಳು. ಕೆಸರು ಮಿಶ್ರಿತ ನೀರು ಕಲಕಿತ್ತು. ಕೆಸರೆಲ್ಲಾ ಕೆಳಗೆ ಇಳಿಯುತ್ತಾ ಭಾರವಾಗುತ್ತಿತ್ತು. ಆದರೆ ಮೇಲಿನ ನೀರು ತಿಳಿಯಾಗತೊಡಗಿತ್ತು

ಸುಂದರವಾದ ಉಡುಪು ಧರಿಸಿ, ಷೂ ಟಕಟಕ ಎನ್ನಿಸುತ್ತಾ ರಾಯರ ಬಳಿಗೆ ಬಂದ ವೇಣು ಸುಮ ದೂರದ ಹೂ ಗೊಂಚಲಿನಲ್ಲಿ ಏನೋ ಕಂಡಂತೆ ಸರಸರ ಅಲ್ಲಿ ಹೋಗಿ ನಿಂತಳು.

"ಅಣ್ಣಾ, ಒಂದು ಪಾರ್ಟಿ ಇದೆ, ಹೋಗಿ ಬರ್‍ತೀನಿ ಬರೋದು ಲೇಟಾಗ ಬಹುದು. ಊಟಕ್ಕೆ ಕಾಯೋದು ಬೇಡ. ಅಮ್ಮಂಗೂ ಹೇಳಿದೀನಿ" ಎಂದು ಸ್ವಲ್ಪ ಗಟ್ಟಿಯಾಗೇ ಹೇಳಿದ, ಸುಮಳಿಗೂ ಕೇಳಿಸಲಿ ಎಂದು

ಕಾರು ಹೊರಟುಹೋದ ಶಬ್ದ ಕೇಳಿಸುವವರೆಗೆ ಸುಮ ಕದಲಲಿಲ್ಲ. ನಂತರ ನಿಧಾನವಾಗಿ ರಾಯರ ಬಳಿ ಬಂದು ನಿಂತಳು ಅವಳಿಗೆ ತನ್ನ ಸ್ಥಿತಿಗಾಗಿ ದುಃಖಕ್ಕಿಂತ ನಿರಾಸೆಯಾಯಿತು. ನಿರಾಸೆ ಒಂದು ವಿಧವಾಗಿ ತ್ಯಾಗದ ರೂಪ ತಾಳಿತು ನೊಂದುಕೊಳ್ಳುವುದನ್ನು ಕಡಿಮೆ ಮಾಡಿಕೊಳ್ಳಬೇಕೆಂದು ನಿರ್ಧಾರ ಮಾಡಿದಾಗ ಮನ ಸ್ವಲ್ಪ ಚೇತರಿಸಿತು

ದೇಹಕ್ಕೇ ಆಗಲಿ, ಮನಕ್ಕೇ ಆಗಲಿ ಪೆಟ್ಟು ತಗಲಿದರೂ, ತನ್ನ ಓದಿಗೆ ಮಾತ್ರ ಧಕ್ಕೆ ತಗುಲಬಾರದು ತನ್ನ ಭವಿಷ್ಯ ತನ್ನ ಓದಿನ ಮೇಲೆ ನಿಂತಿದೆ ಚೆನ್ನಾಗಿ ಪಾಸುಮಾಡಿ ಉದ್ಯೋಗ ಹಿಡಿದು ತನ್ನ ಕಾಲಮೇಲೆ ತಾನು ನಿಲ್ಲಬೇಕು ಈ ನೋವು ಗಳೆಲ್ಲಾ ತಾತ್ಕಾಲಿಕ ತನಗೂ ಒಂದು ಒಳ್ಳೆಯ ದಿನ ಬಂದೀತು. ಆದರೆ ತನಗೆ ಎಟುಕದುದನ್ನು ಆಶಿಸಿ ಮಾತ್ರ ನಿರಾಶಳಾಗಬಾರದು ತನ್ನ ಸ್ಥಾನವೆಷ್ಟೋ, ಅಂತಸ್ತೆಷ್ಟೋ ಅಷ್ಟಕ್ಕೆ ತೃಪ್ತಿಪಡಬೇಕು ಎಂದು ಸಮಾಧಾನ ಮಾಡಿಕೊಂಡು, ಓದಲು ಕುಳಿತಳು.

ಸುಮ ಒಂದು ವಿಧದಲ್ಲಿ ಅದೃಷ್ಟಶಾಲಿ ಪುಸ್ತಕದಲ್ಲಿ ತಲೆಯಿಟ್ಟಳೆಂದರೆ, ಬೇರೆ ಪ್ರಪಂಚದ ಅರಿವೇ ಇರುತ್ತಿರಲಿಲ್ಲ. ಅವಳಿಗೆ ಆಗ ನೋವು ಇಲ್ಲ, ನಲಿವೂ ಇಲ್ಲ

ವೇಣು ಹಿಂತಿರುಗಿದಾಗ ಒಂಭತ್ತು ಗಂಟೆ ಒಂದೇ ಒಂದು ಕ್ಷಣ ಸುಮಳ ಎದೆ ಡವಡವ ಎಂದರೂ ಹಾಗೇ ಸ್ತಬ್ಧವಾಯಿತು. ಸುಮ್ಮನೆ ಮುಂದೆ ಮುಚ್ಚಿದ್ದ ಬಾಗಿಲಿಗೆ ಅಗಳಿಯನ್ನೂ ಹಾಕಿ ಮತ್ತೆ ಪುಸ್ತಕ ಹಿಡಿದಳು ಆದರ ತನ್ಮಯತೆ ಕಡಿಮೆಯಾಯಿತು, ಮನಸ್ಸು ಚಂಚಲವಾಯಿತು ಆರರಿಂದ ಒಂಭತ್ತರವರೆಗೆ ಎಂತಹ ಪಾರ್ಟಿ? ಮಾಧುರಿಯ ಜತೆ ಎಲ್ಲಿಯೋ ಹೋಗಿದ್ದಿರಬೇಕು, ಮೆಟ್ಟಲು ಹತ್ತಿದ ಶಬ್ದ ಕೂಡಲೆ ಹೆಜ್ಜೆ ನಿಂತ ಸದ್ದು

"ಅಮ್ಮ, ಎಲ್ಲರ ಊಟ ಆಯ್ತಾ?"

"ಆಯ್ತು. ಆದ್ರೆ ಬಾಲು ಸಿನಿಮಾಕ್ಕೆ ಹೋಗಿದ್ದಾನೆ ಇನ್ನೂ ಬಂದಿಲ್ಲ ಅವನಿಗೆ ಬಡಿಸ್ಬೇಕು "

"ನೀನೇ ಬಡಿಸ್ಬೇಕೇನಮ್ಮ, ಅವನನ್ನೇ ಬಡಿಸ್ಕೊ ಅನ್ನು."

"ಅದೇನು ಚೆನ್ನ ಮಾಧೂ? ಇರಲಿ ಬಿಡು, ಅವನೇನು ದಿನಾ ಹೋಗ್ತಾನಾ? ಪಾರ್ಟಿ ಚೆನ್ನಾಗಾಯ್ತಾ?"

"ಥತ್, ಎಂತ ಬೇಜಾರೂಂತಿ ಒಂದು ಹತ್ತು ಜನ ಹೊಗಳಿದ್ದೇ ಹೊಗಳಿದ್ದು ಏನೋ ಯಾರೂ ಮಾಡ್ದೆ ಇದ್ದದ್ದನ್ನು ನಾನು ಸಾಧಿಸಿದ ಹಾಗೆ. ಒಂದೆರಡು ಹೂವಿನ ಹಾರದ ಹೊರೆ ಕುತ್ತಿಗೇಗೆ ಇಷ್ಟೆಲ್ಲಾ ಅವರು ಮಾಡಿದ್ರಲ್ಲಾಂತ ನಾನು ಅವರಿಗೆ ಮೆಚ್ಚುಗೆ ಹೇಳೋದು ಎಂಥಾ ನಾಟಕ ಅಂತಿ."

"ನಾಟಕ ಯಾಕೋ? ಅವರು ನಿನ್ನನ್ನು ಹೊಗಳಿದ್ದು ತಪ್ಪೇನು?"ತಾಯಿಗೆ ಮಗನ ಬಗೆಗಿದ್ದ ಅಭಿಮಾನ, ಅವನನ್ನು ಯಾರು ಹೊಗಳಿದರೂ ಸರಿಯೆನ್ನುವಂತೆ ನುಡಿಸಿತ್ತು.

"ಅಮ್ಮ, ನಿಂಗೆ ಗೊತ್ತಾಗೊಲ್ಲ ಇದೆಲ್ಲಾ ತುಂಬು ಮನಸ್ಸಿನಿಂದ ಹೇಳ್ತಾರೆ ಅಂದ್ಕೊಂಡ್ಯಾ? ಖಂಡಿತ ಇಲ್ಲ. ಒಳಗೊಳಗೆ ಅಸೂಯೆ ಇರುತ್ತೆ ಆದರೆ ನಾಳೆಯಿಂದ ಅವರೆಲ್ಲ ನನ್ನ ಕೈ ಕೆಳಗಿನವರು ಅದಕ್ಕೆ ಸ್ವಲ್ಪ ಈ ರೀತಿ ಪುಸಲಾವಣೆ ನಾನು ಏನೂಂತ ಅವರಿಗೆ ಗೊತ್ತಿಲ್ಲ ಯಾಕಾದ್ರೂ ಹೋದೆಪ್ಪ ಈವತ್ತು ಕಾಲೇಜಿಗೆ ಅನ್ನಿಸಿಬಿಡ್ತು . ಅಂದ ಹಾಗೆ, ಅಮ್ಮ ಹೂವಿನ ಹಾರ ಎಲ್ಲಾ ಕಾರಲ್ಲೇ ಇದೆ"

"ಇರಲಿ ಬಿಡು ಬೆಳಿಗ್ಗೆ ತೆಗೆದಿಡ್ತಾನೆ ರಂಗ ನೀ ಮಲಕ್ಕೋ ಹೋಗು"

ಮತ್ತೆ ಹೆಜ್ಜೆಯ ಶಬ್ದ ಮೆಟ್ಟಿಲ ಮೇಲೆ ಪ್ರತಿ ಮಾತನ್ನೂ ಕೇಳಿಸಿಕೊಂಡ ಸುಮಳಿಗೆ ಪಾರ್ಟಿ ನಿಜವೇ ಇರಬಹುದೇ ಎನಿಸಿತು ಯಾರದಿರಬಹುದು ಪಾರ್ಟಿ? ಕಾಲೇಜಿನವರದೇ ಅಂದಂತಿತ್ತು ಸ್ಟಾಫ್ ಎಲ್ಲಾ ಸೇರಿ ಕೊಟ್ಟಿರಬೇಕು ನಾಳೆ ತಿಳಿಯುತ್ತೆ. ಸ್ಟಾಫೇ ಕೊಟ್ಟಿದ್ರೆ, ದೇವದಾಸ್ ಹೋಗೇ ಇರ್ತಾರೆ ಅವರು ಊರ್ಮಿಗೆ ಹೇಳೇ ಹೇಳ್ತಾರಲ್ಲ ಅರೆ, ಅವರಿಬ್ರೂ ಸಧ್ಯಕ್ಕೆ ಭೇಟಿಯಾಗೋಲ್ಲ. ನಾಳೆಯೇ ದೇವದಾಸನ್ನ ತಾನು ಭೇಟಿಯಾದರೆ? ಹೇಗಿದ್ರೂ ಅವಳಿಗೆ ಪ್ರಾಮಿಸ್ ಮಾಡಿದ್ದೀನಿ ನಾಳೆ ಯಾವ ಯಾವ ಪೀರಿಯಡ್ಡಿದೆ ಅಯ್ಯೋ ದೇವರೇ ನಾಳೆ ಶನಿವಾರ ಕ್ಲಾಸೇ ಇಲ್ಲ ಹೋದ್ರೆ ಲೈಬ್ರರಿಗೆ ಹೋಗ್ಬೇಕು ಅಷ್ಟೆ. ಆತ ಬಂದಿರ್‍ಬೇಕಲ್ಲಾ, ಹೇಗೋ ಒಂದು ಪ್ರಯತ್ನ ಮಾಡಿಬಿಡುವುದು, ನಷ್ಟವಿಲ್ಲವಲ್ಲ

ಈವತ್ತು ಮೇಲೆ ಹಾಸಿಗೆ ಸರಿ ಮಾಡಿದ್ನಾ? ಹಾಂ ಮಾಡಿದ್ದೀನಿ ಆದ್ರೆ ಗುಲಾಬಿ ಇಡಲಿಲ್ಲ ಸಧ್ಯ ಹಾಗೆಲ್ಲಾ ಇಡಬಾರ್‍ದು, ತಪ್ಪು. ಮನೆಯ ಕೆಲಸ, ಸಹಾಯಕ್ಕಾಗಿ ಮಾಡಬೇಕೇ ಹೊರತು ಮಿತಿಮೀರಬಾರದು ಚಂಪಳೋ ಮಾಧುರಿಯೋ ಬಂದರೆ ಅದೆಲ್ಲಾ ಮಾಡ್ಕೊಳ್ತಾರೆ. ಅವರಲ್ಲಿ ಒಬ್ಬರು ಬರುವಷ್ಟರಲ್ಲಿ ತಾನು ಈ ಮನೆ ಬಿಟ್ಟುಬಿಡಬೇಕು. ಅವರಿನ್ನೂ ಮುಂಚೆಯೇ ಬಂದರೆ ಯಾವ್ಯಾವಾಗ ಏನೇನು ಮಾಡ್ಬೇಕು ಅಂತ ತಾನು ಹೇಳಿಬಿಟ್ಟು ಹೋಗಬಹುದು. ಆದರೆ ತನ್ನ ಮಾತು ಕೇಳಿಯಾರೆ? ತಾನಾರು ಅವರಿಗೆ? ದೀಪ ಆರಿಸುವುದನ್ನೂ ಮರೆತು ಸುಮ ಹಾಗೇ ಕಣ್ಣು ಮುಚ್ಚಿದ್ದಳು.

## ೪

ಮಾಧು ಎಷ್ಟು ಹೊತ್ತಾದರೂ ಏಳದೆ ಹೋದಾಗ ನಾಗಮ್ಮನವರಿಗೆ ಆತಂಕವಾಯಿತು. ಮಾಡುತ್ತಿದ್ದ ಕೆಲಸ ಬಿಟ್ಟು ಮಹಡಿ ಹತ್ತಿ ಬಂದರು. ಅವನು ಎಚ್ಚರವಾಗಿಯೇ ಮಲಗಿದ್ದ. ಕೈಗಳನ್ನು ಹೆಣೆದು ತಲೆಯ ಕೆಳಗಿಟ್ಟುಕೊಂಡು ಸೂರಿನೆಡೆಗೆ ನೋಡುತ್ತಿದ್ದ. ತಾಯಿ ಬಂದಾಗ ಮೆಲ್ಲಗೆ "ಏನಮ್ಮಾ ಬಂದೆ?" ಎಂದ

"ಎದ್ದೇ ಇದೀಯಾ? ಯಾಕೆ ಇಷ್ಟು ಹೊತ್ತಾದ್ರೂ ಏಳಲಿಲ್ಲವಲ್ಲಾ ಅಂತ ಬಂದೆ "

"ರಾತ್ರಿ ಯಾಕೋ ಬಹಳ ಹೊತ್ತು ನಿದ್ರೆ ಬರಲಿಲ್ಲಮ್ಮ."

ಕೂಡಲೆ ಗಾಬರಿಯಾಗಿ ತಾಯಿ, "ಹುಷಾರಾಗಿ ಇದೀತಾನೆ?" ಎಂದು ಕೆನ್ನೆ, ಕುತ್ತಿಗೆ, ತಲೆ ಮುಟ್ಟಿ ನೋಡಿದಳು ಅವನು ಅವರ ಕೈ ತನ್ನ ಕೈಯಲ್ಲಿ ಹಿಡಿದು ನಗುತ್ತಾ, ಎದ್ದು ಕುಳಿತುಕೊಂಡು "ಹುಷಾರಾಗಿದೀನಮ್ಮ, ನಂಗೇನೂ ಆಗೋಲ್ಲ ನೀ ಏನೂ ಬೇಜಾರು ಮಾಡ್ಕೋಬೇಡ ಇಗೋ ಎದ್ದೆ" ಎಂದು ಮಂಚದಿಂದ ಇಳಿದು ಕೈ ಬೆರಳುಗಳಿಂದಲೇ ಕ್ರಾಪು ಸರಿ ಮಾಡಿಕೊಂಡ

"ಸದ್ಯ ಹಾಗೇ ಇರಪ್ಪ" ಎಂದು ತಮ್ಮ ಕೆಲಸಕ್ಕೆ ಹೊರಟುಹೋದರು ನಾಗಮ್ಮ.

ಟೈಪಿಂಗ್ ಕ್ಲಾಸಿಗೆ ಹೋಗಲು ಸಿದ್ಧವಾಗಿದ್ದ ಸುಮಳಿಗೆ ಒಂದು ಕೆಲಸ ಮಿಕ್ಕಿತ್ತು. ಈ ಮಹಾನುಭಾವ ಎದ್ದರೆ, ಹಾಸಿಗೆ, ಪರದೆ, ಕೋಣೆ ಓರಣಗೊಳಿಸಿ ಹೊರಡ ಬಹುದಿತ್ತು. ಆಗಲೇ ಏಳುಮುಕ್ಕಾಲು ಗಂಟೆ. ಎಂಟು ಗಂಟೆಗೆ ತಾನು ಕ್ಲಾಸಿ ನಲ್ಲಿರಬೇಕು. ಎಷ್ಟು ಬೇಗ ಬೇಗ ನಡೆದರೂ ಅಲ್ಲಿಗೆ ಹೋಗಲು ತನಗೆ ಕಾಲು ಗಂಟೆ ಬೇಕೇ ಬೇಕು. ಮೇಲೆ ನೋಡುತ್ತಾ ಮೆಟ್ಟಿಲ ಬಳಿ ನಿಂತಿದ್ದಳು ತಾಯಿ ಇಳಿದು ಬಂದಾಗ, ಅವರಿಗೆ ಕಾಣದಂತೆ ಹಿಂದು ಮುಂದಾಗಿ ನಿಂತು ಸೀರೆನೆರಿಗೆ ಸರಿಮಾಡಿಕೊಳ್ಳುತ್ತಿರುವಂತೆ ಬಗ್ಗಿ ನಟಿಸಿದಳು.

"ಸದ್ಯ ಹುಷಾರಾಗಿದ್ದಾನಲ್ಲ, ಇನ್ನು ಎಷ್ಟು ಹೊತ್ತಿಗಾದರೂ ಎದ್ದು ಬರಲಿ" ಎಂದು ಗಟ್ಟಿಯಾಗಿಯೇ ಹೇಳಿಕೊಳ್ಳುತ್ತಾ ಇಳಿದುಬರುತ್ತಿದ್ದರು ಅಮ್ಮ ಅವರು ಅಡಿಗೆಯ ಮನೆ ಹೊಕ್ಕ ಕೂಡಲೇ ಸರಸರ ಮೆಟ್ಟಲು ಹಾರಿ ಮಾಧುವಿನ ಕೊಠಡಿಗೆ ಹೊರಟಳು. ಹಾಸಿಗೆಯಲ್ಲಿ ಅವನಿರಲಿಲ್ಲ. ತನ್ನ ಕೆಲಸ ಸುಲಭವಾಯಿತೆಂದು ಹಾಸಿಗೆ ಸರಿಪಡಿಸಿ ಪರದೆ ಮೇಲಕ್ಕೆ ಕಟ್ಟಿ, ಟೇಬಲ್ ಕುರ್ಚಿಗಳನ್ನು ಒರೆಸಿ ಹೂದಾನಿಯ ಕಡೆ ನೋಡಿದಳು. ನಿನ್ನೆಯ ಹೂಗಳು ಸ್ವಲ್ಪ ಬಾಡಿದ್ದರೂ ಚೆನ್ನಾಗಿಯೇ ಇದ್ದುವು.

ಬದಲಾಯಿಸುವ ಅಗತ್ಯವಿಲ್ಲ ಎಂದುಕೊಳ್ಳುವ ವೇಳೆಗೆ, ಅಲ್ಲೇ ಬಾಲ್ಕನಿಯ ವರೆಗೆ ಹೆಜ್ಜೆ ಹಾಕಿ ಹಿಂತಿರುಗಿ ಬಂದಿದ್ದ ಮಾಧು.

"ಇದೆಲ್ಲಾ ನೀ ಯಾಕೆ ಮಾಡ್ಬೇಕು? ರಂಗನ ಕೆಲಸ" ಎಂದ ಮಾಧು.

"ಸರಿ, ಇನ್ಮೇಲೆ ಮಾಡೋಲ್ಲ."

"ನೀನು ಮಾಡಬಾರ್ದೂಂತಲ್ಲ, ಯಾಕೆ ಮಾಡಬೇಕೂಂತ "

"ಸರಿ, ಮಾಡೋಲ್ಲ ಅಂದೆನೆಲ್ಲಾ" ಅವನ ಕಡೆ ತಿರುಗದೆಯೇ ಮಾತನಾಡುತ್ತಿದ್ದಳು ಸುಮ

ಮಂಚದ ಆ ಕಡೆಗಿದ್ದ ಕಿಟಕಿಯ ಪರದೆಯನ್ನು ಸರಿಪಡಿಸುವ ಸಲುವಾಗಿ ಬಾಗಿದ್ದ ಸುಮಳಿಗೆ, ತನ್ನ ತಲೆಯ ಬಳಿ ಏನೋ ಸುಳಿದಂತಾಗಿ, ಚಟ್ಟೆಂದು ತನ್ನ ಬಲಗೈಯಿಂದ ತಲೆ ಸವರಿಕೊಂಡಳು. ಅವಳ ಕೈ ಮಾಧುವಿನ ಬಲಿಷ್ಠವಾದ ಕೈಯಲ್ಲಿ ಸಿಕ್ಕಿಬಿತ್ತು. ನೆಟ್ಟಗೆ ನಿಂತು ಕೈ ಬಿಡಿಸಿಕೊಳ್ಳಲು ಹಿಂದಿರುಗಿದಳು ಮಾಧು ಕೈ ಬಿಡಲಿಲ್ಲ ಅವನ ಎಡಗೈಯಲ್ಲಿ ಹೂದಾನಿಯಲ್ಲಿದ್ದ ಒಂದು ಗುಲಾಬಿಯಿತ್ತು ಅದನ್ನು ಅವಳಿಗೆ ತಿಳಿಯದಂತೆ ಅವಳ ತಲೆಗೆ ಮುಡಿಸಬೇಕೆಂದು ಮಾಡಿದ ಪ್ರಯತ್ನ ವಿಫಲವಾಗಿ ಕೈ ಹಿಡಿದಿದ್ದ ತನ್ನೆದುರಿಗೆ ಅತಿ ಹತ್ತಿರವಾಗಿ ನಿಂತ ಮಾಧುವಿನಿಂದ ಅವಳ ಎದೆಯ ಬಡಿತ ಆಯ ತಪ್ಪಿತು ದೇಹದ ರಕ್ತವೆಲ್ಲ ಅತಿ ವೇಗವಾಗಿ ಅವಳ ಮುಖವನ್ನು ಆವರಿಸಿತು

ಮಾಧುವಿನ ಉಸಿರು ಅತಿ ಹತ್ತಿರವಾಗಿ ಬರುತ್ತಿತ್ತು. ಒಂದು ಕ್ಷಣದ ನಂತರ ಚೇತರಿಸಿಕೊಂಡ ಸುಮ-"ನನ್ನ ಕೈ ಬಿಡಿ" ಎಂದು ಪಿಸುಗುಟ್ಟಿದಳು.

ಅವಳನ್ನೇ ನೋಡುತ್ತಾ "ಬಿಡೋಲ್ಲ. ಬಿಡೋದಕ್ಕೆ ಹಿಡಕೊಂಡಿಲ್ಲ ಎಂದು ಮೆಲು ನಕ್ಕ

"ಹಾಗಾದ್ರೆ ಹಿಡಕೊಂಡೇ ಇರಿ, ಎಷ್ಟು ಹೊತ್ತು ಹಿಡಕೊಂಡಿರ್ತೀರಿ ನಿಮಗೇ ಸಾಕಾದಾಗ ಬಿಟ್ಟುಬಿಟ್ತೀರಿ" ಅವಳ ಉಸುರಿನ ವೇಗ ಈಗ ಕಡಿಮೆಯಾಗಿತ್ತು ಮನದ ಉದ್ವೇಗ ಇಳಿದಿತ್ತು ಕಾರಣ ಮಾಧುರಿಯ ನೆನಪು

"ನನಗೆ ಸಾಕಾಗೋದೇ ಇಲ್ಲ ಸದಾ ಹಿಡಕೊಂಡೇ ಇರ್ತೀನಿ ಎಂದು ಅವನೆಂದಾಗ ಎಂಟು ಗಂಟೆ ಹೊಡೆಯಿತು. 'ನೋಡಿದ್ಯಾ ನನ್ನ ಮಾತು ಎಷ್ಟು ಸತ್ಯ ಎನ್ನುವಂತೆ, ಅಗೋ' ಎಂದು ಬೆರಳು ತೋರಿದ.

"ನೀವು ಹಿಡಕೊಂಡೇ ಇರ್ತೀನಿಂದ್ರೂ ಬಿಡಿಸಿಬಿಡೋರು ಬರ್ತಾರೆ ಎಂದು ಕೈ ಕೊಸರಿಕೊಂಡಾಗ ಇನ್ನೂ ಬಲವಾಗಿ ಹಿಡಿದು ಆ ಕೈಯನ್ನು ತುಟಿಗೊಯ್ದು ಮೃದು ವಾಗಿ ಚುಂಬಿಸಿ ಕೈ ಬಿಟ್ಟ.

ಕೈಮೇಲೆ ಆದ ಆ ಪ್ರೇಮಚುಂಬನ ಅವಳನ್ನು ಅಲುಗಾಡಿಸಿತು ತಲೆಯೆತ್ತಿ ಅವನೆಡೆಗೆ ನೋಡಿದಳು ಅವನ ಕಣ್ಣುಗಳು ಮೃದುವಾಗಿ ನಗುತ್ತಿದ್ದವು ಪಂಚೆಯ ಮೇಲೆ ಬರಿಯ ನೆಟ್ ಬನಿಯನ್ ಇದ್ದುದರಿಂದ, ಅವನ ಎದೆಯ ಅರ್ಧಭಾಗವೆಲ್ಲಾ ಕಾಣುತ್ತಿತ್ತು. ಬಿಳುಪು ಮಿಶ್ರಿತ ಕೆಂಪು ಬಣ್ಣದ ಎದೆ ಮತ್ತು ತೋಳುಗಳ ಮೇಲೆ ಕಪ್ಪು ಕೂದಲು ಗುಂಗುರು ಗುಂಗುರಾಗಿ ಹರಡಿತ್ತು ಆ ಭವ್ಯ ಮೂರ್ತಿಯನ್ನು

ಒಂದೇ ಕ್ಷಣ ನೋಡಿದರೂ, ಅವಳ ಹೆಣ್ಣುತನ ಹುಚ್ಚೆದ್ದು ಕೂಗಿತು. ಇನ್ನು ಅಲ್ಲಿ ನಿಲ್ಲಬಾರದೆಂದು ಅವಳು ಹೆಜ್ಜೆ ಹಾಕಿದಾಗ ಮಾಧು ಅವಳ ಜಡೆ ಎಳೆಯಬೇಕೆಂಬ ತನ್ನ ಮೂರು ದಿನದ ಆಸೆ ತೀರಿಸಿಕೊಂಡ ಜಡೆಯೊಂದಿಗೆ ಅವಳು ಹತ್ತಿರ ಬಂದಾಗ, ಎಡಗೈಯಿಂದ ಅವಳ ಸೊಂಟ ಬಳಸಿ ಹಿಡಿದು ಬಲಗೈಯಿಂದ ಗುಲಾಬಿಯನ್ನು ಅವಳ ತಲೆಗೆ ಮುಡಿಸಿದ.

"ನನಗೆ ಹೂ ಬೇಡ" ಎಂದಳು ತಗ್ಗಿದ ದನಿಯಲ್ಲಿ. ಅಷ್ಟೇ ಮೇಲುದನಿಯಲ್ಲಿ "ಯಾಕೆ? ಇಲ್ಲೇ ಅವು ಇದೆಯೆಂದ?" ಎಂದು ಅವಳ ನುಣುಪಾದ ಕೆನ್ನೆಯ ಮೇಲೆ ಕೈಯಿಟ್ಟ. ಅವಳು ಅವನ ಕೈಯನ್ನು ಸರಿಸುತ್ತಾ -"ಹೂ ಗಿಡದಲ್ಲಿ ಇರಬೇಕು ಅಥವಾ ದೇವರ ತಲೆಮೇಲೆ ಇರಬೇಕೂಂತ ನನ್ನ ಅಭಿಪ್ರಾಯ"ಎಂದಳು.

'ಜೊತೆಗೆ ಹೆಂಗಸರ ತಲೆಯಲ್ಲೂ ಇರಬೇಕೂಂತ ನನ್ನ ಇಷ್ಟ"ಎಂದು ಅವಳ ಗಲ್ಲ ಹಿಡಿದು ಮೇಲೆತ್ತಿ ಕಣ್ಣೆನೊಳಕ್ಕೆ ನೋಡಿದ. ಅವು ಕಣ್ಣೀರ ಕೊಳಗಳಾಗಿದ್ದುವು ಹಲ್ಲಿನಿಂದ ತುಟಿ ಕಚ್ಚಿ ಒತ್ತರಿಸಿದ ದುಃಖ ತಡೆಹಿಡಿದಳು

ಅವನು ಬೆದರಿದ. ಯಾಕೆ? ಏನಾಯ್ತು? ತನ್ನ ವರ್ತನೆಯಿಂದ ನೊಂದಳೆ? ಅಳುವಂಥ ಕೆಲಸ ತಾನೇನು ಮಾಡಿದೆ? ಪ್ರಶ್ನೆಗಳನ್ನು ಮನದಲ್ಲೇ ಹುದುಗಿಸಿ-"ಕ್ಲಾಸಿಗೆ ಟೈಂ ಆಯ್ತೇನೋ ಅಲ್ವಾ?"ಎಂದ

ಅಷ್ಟೇ ಸಾಕು ಎನ್ನುವಂತೆ ಹೌದೆಂದು ತಲೆಯಾಡಿಸಿ, ಎರಡೆರಡು ಮೆಟ್ಟಲಾಗಿ ಹಾರಿ ಕೆಳಕ್ಕೆ ಬಂದಳು ಅವಳೊಂದಿಗೆ ಅವಳ ತಲೆಯ ಗುಲಾಬಿಯೂ ವೈಯಾರವಾಗಿ ಎಗರುತ್ತಿದ್ದುದನ್ನೇ ಗಮನಿಸುತ್ತಾ ತನ್ನ ಕೊರಡಿಯ ಬಾಗಿಲಲ್ಲಿ ನಿಂತವನಿಗೆ, ಅವಳಿಗೆ ತಾನು ಮುಡಿಸಿದ್ದು ಬಾಡಿದ ಹೂವು ಎನಿಸಿ ಕಸಿವಿಸಿಯಾಯಿತು ಅಷ್ಟಲ್ಲದೆ ತಾನು ಹೊಸ ಹೂವನ್ನು ಹೇಗೆ ಕೊಡಬಲ್ಲ?ಅಧಿಕಾರವನ್ನೇ ಕಳೆದುಕೊಂಡಿದ್ದಾನಲ್ಲ

ಬೆಳಿಗ್ಗೆ ಎದ್ದಾಗ ಇದ್ದ ನೀರಸತೆ, ಬೇಸರ ಈಗ ಮಾಯವಾಗಿದ್ದುವು ಲವಲವಿಕೆಯಿಂದ ಕೆಳಗಿಳಿದು ಬಂದು ತನ್ನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡ ಅವನ ಮನವೆಲ್ಲಾ ಸುಮಳ ಗುಂಗಿನಲ್ಲೇ ಇತ್ತು. ಒಂಬತ್ತೂವರೆಯಾದರೂ ಸುಮ ಹಿಂತಿರುಗಲಿಲ್ಲವೆ?

ಗಂಟೆ ಹತ್ತಾಯಿತು, ಹನ್ನೊಂದಾಯಿತು ಸುಮಳ ಸುಳಿವಿಲ್ಲ. ಮತ್ತೆ ಅವನ ಮನಸ್ಸು ಚಿಪ್ಪಿನೊಳಕ್ಕೆ ಹೋಗಿ ಅವಿತುಕೊಂಡಿತು ಆ ಬೇಸರದಲ್ಲೂ ಬಾಲು ಮನೆಯಲ್ಲಿ ಇಲ್ಲದಿದ್ದುದು ಗಮನಕ್ಕೆ ಬಂತು

"ಬಾಲು ಎಲ್ಲಮ್ಮ ಕಾಣ್ತಾನೇ ಇಲ್ಲ?"

"ಅಯ್ಯೋ ಹೇಳೋದು ಮರೆತ್ಬಿಟ್ಟೆ. ನಿನ್ನೆ ರಾತ್ರಿ ಫೋನ್ ಮಾಡಿದ್ದ. ಅವನ ಸೋದರತ್ತೆ ಮಗ ರಾಮು ಮದ್ರಾಸಿನಿಂದ ಬಂದಿದ್ದಾನಂತೆ ಪಿಕ್ಚರ್‌ನಲ್ಲಿ ಸಿಕ್ಕಿದ್ನಂತೆ ಅವನ ಜೊತೆ ಇದ್ಬಿಟ್ಟು ಈವತ್ತು

ಸಾಯಂಕಾಲ ಬರ್‍ತಾನಂತೆ”- ತಾಯಿ ವಿವರಣೆ ಕೊಟ್ಟರು

“ರಾಮು ಯಥಾಪ್ರಕಾರ ಹೋಟಲಲ್ಲೇ ಇಳಕೊಂಡಿದಾನಂತಾ?”

“ಹೂಂ, ಏನೋಪ್ಪ, ಅವರವರ ಇಷ್ಟ. ಇಲ್ಲಿ ಬಂದು ಇರೂಂತ ನಾನೂ ಇವರೂ ಇಷ್ಟೇ ಹೇಳಿದ್ರೂ ಬರೋಲ್ಲ ಆಸಾಮಿ. ಅದೇನು ಸಂಕೋಚವೋ ಏನು ಕತೆಯೋ?”

“ಹೋಗ್ಲಿ ಬಿಡಮ್ಮ ಬರದೆ ಇದ್ದರೆ ಬೇಡ. ಅಮ್ಮ, ಸುಮ ಎಲ್ಲೀಗಾದ್ರೂ ಹೋಗ್ತೀನೀಂತ ಹೇಳಿದ್ಲಾ?”

“ಯಾಕೆ? ಕಾಲೇಜಿಗೆ ಹೋಗಿದಾಳೆ ”

“ಅಲ್ಲಮ್ಮ, ಟೈಪಿಂಗ್‌ಗೆ ಹೋದವಳು ಇನ್ನೂ ಹಿಂತಿರುಗಿ ಬಂದ ಹಾಗೇ ಕಾಣ್ಲಿಲ್ಲ, ಅದಕ್ಕೆ ಕೇಳ್ದೆ ”

ತಮ್ಮ ಮಗ ಅವಳನ್ನು ತುಂಬಾ ವಿಚಾರಿಸಿಕೊಳ್ಳುವುದರಿಂದ ಸ್ವಲ್ಪ ಅಸಮಾಧಾನವಾದರೂ ಆಕೆ ತೋರ್ವಡಿಸದೆ-“ಹೌದು, ಅಲ್ಲಿಂದಾನೇ ಲೈಬ್ರರಿಗೆ ಹೋಗಿ ಬರ್‍ತೀನಿಂದ್ಲು ಈವತ್ತು ಶನಿವಾರ ಅವಳಿಗೆ ಕ್ಲಾಸಿಲ್ವಲ್ಲ”ಎಂದರು

ಹತ್ತು ನಿಮಿಷಗಳೊಳಗಾಗಿ ಸಿದ್ಧವಾಗಿ ಮಹಡಿ ಇಳಿದು ಬಂದ ಮಾಧು

“ಅಮ್ಮ, ಕಾಲೇಜ್ ಕಡೆ ಹೋಗಿ ಬರ್‍ತೀನಿ ನಿನ್ನೆ ಹಾಗೇ ಒಂದು ಗಂಟೆ ಹೊತ್ತಿಗೆ ಬರ್‍ತೀನಿ' ಎಂದು ತಾಯಿಗೆ ಯಾವ ಮಾತಿಗೂ ಅವಕಾಶ ಕೊಡದೆ ಕಾರಿನ ಕೀ ತಿರುಗಿಸುತ್ತಾ ಹೊರಟುಹೋದ

ತಾಯಿಯ ಮನಸ್ಸು ಸಂಶಯಕ್ಕೊಳಗಾಯಿತು, ಸುಮಳನ್ನರಸಿಯೇ ಹೋಗಿರಬಹುದೇ? ಇವನ ಚಿತ್ತ ಚಂಚಲಿಸಿದರೂ ಸುಮ ಒಳ್ಳೆ ಹುಡುಗಿ ಅವಳು ಯಾವುದಕ್ಕೂ ಅಸ್ಪದ ಕೊಡಲಾರಳು ಆದರೂ ವಯಸ್ಸನ್ನು ನಂಬುವಂತಿಲ್ಲ ತಾವೊಮ್ಮೆ ಅವಳಿಗೆ ಸೂಕ್ಷ್ಮ ಕೊಡಬೇಕು ಅವನಿಗೆ ಹೇಳುವುದಕ್ಕಿಂತ, ಅವಳಿಗೆ ತಿಳಿವು ಮೂಡಿಸುವುದು ಸುಲಭ ಅರ್ಥ ಮಾಡಿಕೊಳ್ಳುತ್ತಾಳೆ ಅವಳಿಗೆ ತಮ್ಮೆಡೆಗಿರುವ ಕೃತಜ್ಞತೆಗಾಗಿ ಪ್ರಾಣವನ್ನೇ ಬೇಕಾದರೆ ಒಪ್ಪಿಸಿಬಿಡುವಂಥ ಹುಡುಗಿ ಅವಳು ಎಂದು ಸಮಾಧಾನ ತಂದುಕೊಂಡರು

* * *

ಮನೆಯಿಂದ ಹೊರಟ ಸುಮಳಿಗೆ ತಲೆ ಕೆಟ್ಟಂತಾಗಿತ್ತು ಹೀಗೆಲ್ಲಾ ಏಕೆ ಆಗುತ್ತಿದೆ? ತನಗಿದು ಪರೀಕ್ಷಾ ಕಾಲವಿರಬೇಕು. ಇಲ್ಲದಿದ್ದಲ್ಲಿ ಬೇಡ ಬೇಡವೆಂದು ಕೊಂಡರೂ ತಾನೇಕೆ ಇಂಥ ಪರಿಸ್ಥಿತಿಯಲ್ಲಿ ಸಿಕ್ಕಿಕೊಳ್ಳಬೇಕು?ಆ ಮನೆಯಲ್ಲಿರುವವರೆಗೂ ಇಂಥ ಸಂದರ್ಭಗಳನ್ನು ಎದುರಿಸಲೇಬೇಕಾಗಬಹುದು ಅಣ್ಣ ತಮ್ಮ ಕೋಣೆಯೊಳಗೆ, ಅಮ್ಮ ಅಡಿಗೆ ಮನೆಯಲ್ಲಿ. ಹೀಗಾಗಿ ತನಗೆ ಅವರ ಶರಣೂ ಸಿಗಲಾರದು.

ಅಂದರೆ ಮಾಧುವಿನ ಸಖ್ಯ ತನಗೆ ಬೇಡವೇ?'ಬೇಕು, ಬೇಕು, ಬೇಕೇ ಬೇಕು' ಎಂದು ಚೀರಿತು ಅವಳ ಅಂತರಾತ್ಮ. ಆದರೆ-ಆದರೆ ಸಖ್ಯ ಪಡೆಯುವ ಅರ್ಹತೆ ತನ್ನಲ್ಲಿಲ್ಲ. ಅತಿ ಸ್ನೇಹ ಆಶಿಸಿ, ಅದು ಸಿಗದೆ ಆತ್ಮವಂಚನೆಯಾಗಿ,ನಗೆಪಾಟಲಿಗೆ ಗುರಿಯಾಗಿ, ಸಹೃದಯಿಗಳಾದ ಆ ದಂಪತಿಗಳಿಂದ ಅರ್ಧಚಂದ್ರ ಪ್ರಯೋಗ ಪಡೆಯು ವಂತಾಗಬೇಕೆ ತನ್ನ ಬದುಕು? ಒಂದು ನೆಲೆಗೆ ಬರುತ್ತಿರುವ ತನ್ನ ಬಾಳು ಮತ್ತೆ ಸುಂಟರಗಾಳಿಗೆ ಸಿಕ್ಕ ತರಗೆಲೆಯಂತೆ ಹಾರಿಹೋಗಬೇಕೆ?

ತಲೆಯಲ್ಲಿ ಮುಟ್ಟಿ ನೋಡಿಕೊಂಡಳು ಗುಲಾಬಿ ಹಾಗೆಯೇ ಕುಳಿತಿತ್ತು ಅದು ನಿನ್ನೆಯ ಹೂ ಎಂದು ಅವಳಿಗೆ ಗೊತ್ತು ತನ್ನ ಸ್ಥಿತಿಯಲ್ಲಿರುವವರಿಗೆ ಸಿಗುವುದು ಬಾಡಿದ ಹೂವಲ್ಲದೆ ಮತ್ತೇನು? ಆ ಹೂವನ್ನು ಕಿತ್ತು ಕೈಗೆ ತೆಗೆದುಕೊಂಡಳು ಹೂವಿ ನೊಳಗಿಂದ ಆತನ ತುಟಿಗಳು ನಕ್ಕಂತಾಯಿತು. ಯಾಕೊ ಒಮ್ಮೆಲೆ ಮಾಧುರಿಯ ನೆನಪಾಗಿ ಮನ ಸೆಟೆಯಿತು ಎಂಥ ಮನುಷ್ಯ ಈತ!ಮಾಧುರಿ ತನಗೆ ಫ್ರೆಂಡ್, ಈಗ ತಾನು? ಹಾಗಾದರೆ? ಹುಚ್ಚಿ, ಎದುರಿಗೆ ಸಿಕ್ಕ ನೀನು ಕೈಗೆಟುಕುವವರೆಗೆ ಆಸೆ ಅಷ್ಟೆ. ಸುಲಭವಾಗಿ ಸಿಗುತ್ತೀ ಬಿಡುತ್ತಾನೇನು?ಎಂದು ವಾದಿಸಿತು ಅವಳ ಅಂತರಂಗ ಆದರೆ ಈ ವಾದದಿಂದ ಜಿಗುಪ್ಸೆಯಾಗಿ ಥತ್, ಈ ಹೂವನ್ನು ಮಾಧುರಿಗೆ ಕೊಡಬೇಕಿತ್ತು ಕಾಂಪೌಂಡು ತುಂಬಾ ಬಿಡೋಷ್ಟು ಗುಲಾಬಿಯನ್ನು ಹೊತ್ತು ಅವಳ ಮೇಲೆ ಹೇರಲಿ ಹೇಗೂ ತಾನೆ ಬೆಳೆಸಿ ಇಟ್ಟಿದ್ದಾಳಲ್ಲಾ, ನನಗ್ಯಾಕೆ ಕೊಡಬೇಕು ಹೂವು ಎಂದು ಆ ಹೂವನ್ನು ರೊಯ್ಯನೆ ಪಕ್ಕಕ್ಕೆ ಇಸೆದು ಬೇಗ ಬೇಗ ನಡೆದಳು.

ತಾನೀಗ ಏನು ಮಾಡಬೇಕು? ಆ ಮನೆಯಿಂದ ಹೊರಟುಹೋದರೆ? ಎಲ್ಲಿಗೆ ಹೋಗುವುದು? ಊರ್ಮಿಳಾ ಮನೆಗೆ ಹೋಗಬಹುದಿತ್ತು ಆದರೆ ಈಗ ಅವಳೇ ದಳ್ಳುರಿಯ ಹೊಂಡದಲ್ಲಿ ಬೇಯುತ್ತಿದ್ದಾಳೆ ಇನ್ನು ತನಗೆಲ್ಲಿ ಸ್ಥಳ? ಹೋಗ ಬೇಕೆಂದರೂ ಅಮ್ಮ ಅಣ್ಣನಿಗೆ ಏನೆಂದು ಹೇಳುವುದು?

"ನಿಜವಾಗಿಯೂ ನಿನಗೆ ಆತನಿಂದ ತಪ್ಪಿಸಿಕ್ಕೊಳ್ಳಬೇಕೆನಿಸುತ್ತದೆಯೆ?" ಎಂದು ಕೇಳಿತು ಕಳ್ಳ ಮನಸ್ಸು. ಅವಳಿಂದ ಉತ್ತರವಿಲ್ಲ ಇಲ್ಲ, ನನಗೆ ಗೊತ್ತು ಖಂಡಿತ ಇಲ್ಲ ಆತ ನಿನಗೆಟುಕಲಾರ ಅಂತ ಈ ಪಲಾಯನ ಮಾರ್ಗ ಹೌದಾ? ಕಾದು ನೋಡು ಸುಮ,ಪ್ರಪಂಚದಲ್ಲಿ ಏನೇನು ಬೇಕಾದರೂ ನಡೆಯಬಹುದು ನಿನಗೆ ಐಶ್ವರ್ಯ ವಿಲ್ಲದೆ ಇರಬಹುದು ಆದರೆ ಬುದ್ಧಿ ಸಂಪತ್ತಿದೆ, ರೂಪ ಸಂಪತ್ತಿದೆ. ಅದೇ ನಿನಗೆ ಆತನನ್ನು ಗಳಿಸಿಕೊಡಬಹುದು' ಎಂದು ಧೈರ್ಯ ನುಡಿಯಿತು ಮನಸ್ಸು

ಒಳಗೊಳಗೇ ನಗುತ್ತಾ ಇನ್‌ಸ್ಟಿಟ್ಯೂಟ್‌ನ ಬಾಗಿಲು ತುಳಿದಾಗ ಯಾರೋ ಕೆನ್ನೆಗೆ ಕೊಟ್ಟಂತಾಯಿತು. 'ರೂಪ ಅಂತೆ, ಬುದ್ಧಿ ಅಂತೆ! ಏನದು ನೀನು ಯಾರು ಅನ್ನೋದನ್ನ ಮರೆತೆಯೇನು?' ಹೀಗೆ ಪ್ರಶ್ನಿಸಿದ್ದು, ಪ್ರಶ್ನಿಸಬಹುದಾದದ್ದು ಸಮಾಜ. ಅವಳಿಗೆ ಕಣ್ಣು ತುಂಬಿ ಬಂತು.

ಹೇಗೋ ತನ್ನ ಕೆಲಸ ಮುಗಿಸಿ ಹೊರಬಂದಳು. ಮನಸ್ಸೇ ಅಲ್ಲೋಲ ಕಲ್ಲೋಲವಾಗಿದೆ. ಈಗ

ಲೈಬ್ರರಿಗೆ ಹೋಗಿ ಮಾಡುವುದಾದರೂ ಏನು?ಎಂದು ನಿರುತ್ಸಾಹಗೊಂಡರೂ, ಕೂಡಲೇ ಊರ್ಮಿಳೆಯ ದುಃಖಿತಪ್ತ ಮುಖ ಎದುರಿಗೆ ತೇಲಿತು. ದೇವದಾಸನೊಡನೆ ಮಾತನಾಡುತ್ತೇನೆಂದು ಅವಳಿಗೆ ಕೊಟ್ಟ ಆಶ್ವಾಸನೆ? ಇಂದು ಲೈಬ್ರರಿಗೆ ಹೋದರೂ ಆತ ಸಿಗುತ್ತಾನೆಂಬ ನಂಬಿಕೆಯೇನು? ಸಿಕ್ಕರೂ ಸಿಗಬಹುದು. ಒಂದೇ ನಿಮಿಷದ ಮಟ್ಟಿಗೆ ಸಿಕ್ಕರೂ, ಮಾತನಾಡಲು ಸಮಯ, ಸ್ಥಳ ನಿರ್ಧರಿಸಿಕೊಳ್ಳಬಹುದಲ್ಲ? ಇನ್ನು ಮತ್ತೆ ನಾಳೆ ಭಾನುವಾರ. ನಂತರ ಕ್ಲಾಸುಗಳ ಗಡಿಬಿಡಿ. ಇಂದೇ ಸರಿ ಆತ ಸಿಕ್ಕೇ ಸಿಗುತ್ತಾನೆ ಅವನಿಗೆ ಎರಡನೇ ಮನೆ ಲೈಬ್ರರಿಯೇ ಎಂದಿದ್ದಳು ಊರ್ಮಿಳಾ

ಥೂ, ಈ ಪ್ರೇಮರೋಗ ಒಂದು ಹಾಳುರೋಗ ಯಾವ ಮೂಲೆಯಲ್ಲಿ ಇಣುಕಿ ನೋಡುತ್ತಿರುತ್ತದೊ ಬಂದು ಜಿಗಣೆಯಂತೆ ಅಂಟಿಕೊಳ್ಳುತ್ತೆ ವಾಸಿಯಾಗುವ ಸೂಚನೆಯೇ ಇಲ್ಲ ಈ ದಿನ ಊರ್ಮಿಗೆ ಸಕತ್. ನಾಳೆ ಬಹುಶಃ ನನಗೆ ಸಕತ್. ಹೀಗಾದರೆ ಓದಿ ಪಾಸಾದಂತೆಯೇ ಇದೆ.

ಹೀಗೆ ಮನದಲ್ಲೇ ವಟಗುಟ್ಟಿಕೊಂಡು ತಲೆ ತಗ್ಗಿಸಿ ನಡೆಯುತ್ತಿದ್ದಾಗ "ನೀನು ಅನಂತರಾಯರ ಮನೆಯಲ್ಲಿರೋ ಹುಡುಗಿ ಅಲ್ವಾ?"ಎಂದಿತು ಒಂದು ಸ್ವರ ನಿಂತು ನೋಡಿದಳು ಅಗಲವಾದ ಹಣೆಯಲ್ಲಿ ಒಂದು ಕೆಂಪು ನಾಮ ಕೈಯಲ್ಲಿ ಒಂದು ಚೀಲ ಹಿಡಿದ ವೃದ್ಧರು

ಹೌದು"ಎಂದಳು "ಅನಂತರಾಯರಿಗೂ ಅವರ ಪತ್ನಿಗೂ ಹೇಳಿಬಿಡಮ್ಮ. ಅಹೋಬಲಯ್ಯಗಾರು ಸಿಕ್ಕಿದ್ರು, ಅವರ ಮಗಳು ಹೆತ್ತಿದ್ದಾಳಂತೆ, ಗಂಡು ಮಗೂಂತೆ, ನಿನ್ನೇಗೆ ಎಂಡು ದಿನ ಆಯ್ತೂಂತ"ಎಂದು ಹೇಳಿ ನಡೆದುಬಿಟ್ಟರು ಅವರ ಮಾತುಗಳನ್ನೇ ಸುಮ ಮತ್ತೊಮ್ಮೆ ಉಚ್ಚರಿಸಿಕೊಂಡು, ಮರೆಯದಿರುವಂತೆ ಮನನ ಮಾಡಿಕೊಂಡಳು ಬೇಗ ಬೇಗ ನಡೆದು ಬಸ್‌ಸ್ಟಾಪ್ ಸೇರಿದಳು

* * *

ಮಾಧು ಮನೆ ಬಿಟ್ಟು ಹೊರಟಾಗ ಹನ್ನೊಂದೂವರೆಯಾಗಿತ್ತು ಅವನ ಒಂದೇ ಗಮ್ಯಸ್ಥಳ ಲೈಬ್ರರಿ ಸುಮಳನ್ನು ನೋಡಬೇಕೆಂದು ಆಸೆಯಾದರೂ ಅವಳು ಬೆಳಿಗ್ಗೆ ಅತ್ತುದೇಕೆಂದು ತಿಳಿದುಕೊಳ್ಳುವ ಹಂಬಲ ತೀವ್ರವಾಗಿತ್ತು. ಕೇವಲ ಎರಡೇ ದಿನದಲ್ಲಿ ತನ್ನನ್ನು ಪೂರ್ಣವಾಗಿ ಆಕ್ರಮಿಸಿರುವ ಈ ಹುಡುಗಿಯ ಬಗೆಗೆ ಅವನಿಗೇ ಸೋಜಿಗ. ತಾನು ಹುಡುಗಿಯರನ್ನು ತಿಳಿಯದವನೇನೂ ಅಲ್ಲ. ಮಾಧುರಿ ತನ್ನ ಸ್ನೇಹಕ್ಕಾಗಿ ಕಾದು ನಿಂತಿರುವ ಸಂಗತಿ ಎಲ್ಲರಿಗೂ ತಿಳಿದದ್ದೇ ಚಂಪಳಂತೂ ತನಗಾಗಿಯೇ ಜನ್ಮವೆತ್ತಿದ್ದಾಳೆಂಬ ಭಾವನೆ ತನ್ನ ತಾಯಿ ತಂದೆಯರಿಗೆ. ತಾನೆಂದೂ ಈ ವಿಷಯವಾಗಿ ಯಾರಿಗೂ ಬೇಕು ಬೇಡಗಳನ್ನು ನಿಷ್ಕರ್ಷೆಯಾಗಿ ತಿಳಿಸಿಲ್ಲ. ಆದರೆ ಈ ಸುಮ ಎಲ್ಲಿಂದ ಬಂದು ಇಲ್ಲಿ ಸೇರಿದಳು? ತನ್ನನ್ನು ಪೀಡಿಸಲೆಂದು ಬಂದಿದ್ದಾಳೆ ಕೆಟ್ಟ ಹುಡುಗಿ. ಅಮ್ಮ, ಅಣ್ಣ, ಸಸೇಮಿರಾ ನಮ್ಮ ಸಖ್ಯ ಒಪ್ಪುವುದಿಲ್ಲ,

ಆದರೂ .. ಆದರೂ... ತನಗೆ ಅವಳೇ ಬೇಕು ಎಂಥ ಹಟ ಇದು! ಅವಳ ಹೃದಯ ಆಗಲೇ ವಾಸುವಿಗೆ ಅರ್ಪಿತವಾಗಿದ್ದರೆ? ಇಲ್ಲ. ನಿನ್ನೆ ಅವರಿಬ್ಬರನ್ನೂ ಒಟ್ಟಿಗೆ ಕಂಡ ಮೇಲೆ ಸಮ ವಯಸ್ಕರ ಸರಸ ಅವರಲ್ಲಿದ್ದಿತೇ ವಿನಾ ಹೃದಯ ತುಯ್ದಾಡುವ ಭಾವನೆ ಕಾಣಲಿಲ್ಲ.

ಹಾಗಾದರೆ ತಾನು ಪ್ರೇಮದ ಆಹ್ವಾನವಿತ್ತರೆ ಅವಳು ಓಗೊಡುವುದಿಲ್ಲವೇಕೆ? ಇಂದು ತಾನವಳನ್ನು ಸ್ಪರ್ಶಿಸಿದ್ದಕ್ಕಾಗಿಯೇ ಅತ್ತಳೆ? ಅದೇ ದೊಡ್ಡ ಪಾಪವೆಂದು ಕೊಂಡಳೆ? ಅಥವಾ. ಅಥವಾ ಅದು ತನ್ನೆಡಗಿನ ಅನುರಾಗದ ಉದ್ರೇಕದ ಪೂರವೆ? ಈ ಭಾವನೆ ಬಂದಾಗ ಅವನ ಮೈ ಲಘುವಾಗಿ ರೋಮಾಂಚನಗೊಂಡಿತು ಸುಮಾ, ಯಾವುದನ್ನೂ ನನಗೆ ತಿಳಿಸು ಸುಮಾ, ಮೌನವಾಗಿ ನನ್ನನ್ನು ಕೊಲ್ಲಬೇಡ ಎಂದು ಕೂಗಿತು ಅವನ ಒಳಮನಸ್ಸು. ಇದಾವುದರ ಅರಿವೇ ಇಲ್ಲದೆ ಕಾರು ಓಡುತ್ತಿತ್ತು ಯಾವ ಅಪಘಾತವೂ ಆಗದೆ ಲೈಬ್ರರಿ ತಲುಪಿದ್ದರೆ ಅದು ಅವನ ಅದೃಷ್ಟ.

ಬಾಗಿಲಲ್ಲೇ ಲೈಬ್ರರಿಯನ್ ನಾಗೇಶ್ ಎದುರಾದರು. ಅವನ ವಿದ್ಯಾರ್ಥಿ ದಿನಗಳಿಂದಲೂ ಅವರಿಗೆ ವೇಣುಮಾಧವ್ ಎಂದರೆ ಆದರ ಮೇಧಾವಿಯೆಂದು ಗೌರವ, ಅಭಿಮಾನ.

'ಮೊನ್ನೆ ಬಂದ್ರಂತಲ್ಲ ಸಾರ್. ನಾನೂ ಅಂದ್ಯೊಂಡೇ ಇದ್ದೆ, ನೀವಿಷ್ಟರಲ್ಲೇ ಇಲ್ಲಿಗೆ ಬಂದೇ ಬರ್ತೀರಿ ಅಂತ."

ಮಾಧು ಹೆಚ್ಚು ಮಾತಿಗೆ ಪ್ರೋತ್ಸಾಹ ಕೊಡದೆ "ಈ ಎರಡು ಪುಸ್ತಕ ತರ್ಸಿದೀರಾ ನೋಡಿ. ತರಿಸ್ದೆ ಇದ್ರೆ ತರಿಸ್ಬಿಡಿ. ಅವು ಬೇಕಾಗುವ ಬುಕ್ಸ್"ಎಂದು ಜೇಬಿನಿಂದ ಒಂದು ಕಾಗದ ಪೆನ್ನು ತೆಗೆದು ಗುರುತು ಹಾಕಿಕೊಟ್ಟು ಒಳನಡೆದ.

' ತರಿಸಿಲ್ಲ ಸಾರ್. ನಾಳೇನೇ ತರಿಸ್ಬಿಡ್ತೀನಿ" ಎಂದು ಚೀಟಿ ನೋಡಿ ಆತ ಹೇಳುತ್ತಿದ್ದ ಮಾತನ್ನು ತಿಳಿಸಿಕೊಳ್ಳಲು ಮಾಧು ಅಲ್ಲಿರಲಿಲ್ಲ. ನಗುನಗುತ್ತಾ ಮಾತ ನಾಡುತ್ತಿದ್ದ ಮಾಧವ್ ಇಂದು ಎಂದಿನಂತಿಲ್ಲದುದನ್ನು ಆತ ತಪ್ಪಾಗಿಯೇ ತಿಳಿದ. ಫಾರಿನ್ನಿನಿಂದ ಬಂದ ಮೇಲೆ ಬದಲಾಗಿದ್ದಾರೆ ಎಷ್ಟಾದರೂ ಅಹಂ ಇಲ್ಲದಿದ್ದೀತೇ ಎಂದು ಭಾವಿಸಿದ ಆತ ವೇಣುವನ್ನು ಹಿಂಬಾಲಿಸಲಿಲ್ಲ.

ಮೊದಲೇ ಕಾತುರನಾಗಿದ್ದ ವೇಣುವಿನ ಮನಸ್ಸು ಒಳಗೆ ಕಂಡ ದೃಶ್ಯದಿಂದ ವ್ಯಗ್ರವಾಯಿತು. ಕೆಮಿಸ್ಟ್ರಿ ಪುಸ್ತಕಗಳಿದ್ದ ವಿಭಾಗದಲ್ಲಿ, ಒಂದು ಟೇಬಲ್ ಬಳಿಹತ್ತಿರ ಹತ್ತಿರವಾಗಿ ಕುರ್ಚಿಗಳನ್ನೆಳೆದುಕೊಂಡು ಸುಮ-ದೇವದಾಸರು ಕುಳಿತಿದ್ದರು. ಅಮಾವಾಸ್ಯೆ-ಹುಣ್ಣಿಮೆ, ಹಗಲು-ರಾತ್ರಿಗಳು ತೆಕ್ಕೆಸಿಕೊಂಡಂತೆ ಕಾಣುತ್ತಿತ್ತು. ಮುಖ ದಪ್ಪಗೆ ಮಾಡಿ ದೇವದಾಸ್ ಏನೋ ಹೇಳುತ್ತಿದ್ದ. ಕೈ ಬೆರಳುಗಳನ್ನು ಹೊಸೆದುಕೊಂಡು ಸುಮ ಕೇಳುತ್ತಿದ್ದಳು. ಅವಳ ಮುಖ ಹೀರಿ ಹೋದಂತಾಗಿತ್ತು.

ಅವಳ ಬೆಳಗಿನ ಅಳುವಿಗೆ ಕಾರಣ ತಿಳಿದಂತಾಯ್ತು. ಒಳಕ್ಕೆ ಹೋಗಲಿಷ್ಟವಾಗದೆ ಹಾಗೆಯೇ

ಹಿಂತಿರುಗಿ ಬಿಡಬೇಕೆಂದು ಒಂದು ಹೆಜ್ಜೆಯಿಟ್ಟ. ಅವನಿಗೆ ಬಂದ ಕೂಡಲೇ ಹಿಂತಿರುಗಿದರೆ ಮಿಕ್ಕವರ ಅಪಾರ್ಥಕ್ಕೆ ಎಡೆಯಾಗಬಹುದೆನಿಸಿತು. ನಿಶ್ಯಬ್ದವಾಗಿ ಒಳಹೊಕ್ಕು ಅವರಿಬ್ಬರ ಹಿಂಬದಿಗೆ ಇದ್ದ ಬೀರುಗಳ ಮರೆಯಲ್ಲಿ ಯಾವುದೋ ಪುಸ್ತಕ ನೋಡುತ್ತಿರುವಂತೆ ನಿಂತುಕೊಂಡ. ಅವರ ಸಂಭಾಷಣೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಅದನ್ನು ಕೇಳಬಾರದೆಂದು ಅವನ ಸೌಜನ್ಯ ಹೇಳಿದರೂ ಕುತೂಹಲ ಹೃದಯ ಕಿವಿ ನಿಮಿರಿಸಿತ್ತು.

"ನಾನು ಹೇಳೋದು ಸ್ವಲ್ಪ ಕೇಳಿ, ಅಪಾರ್ಥ ಮಾಡ್ಕೊಳ್ಬೇಡಿ"-ಸುಮ.

"ನನಗೇನೂ ನೀವು ಹೇಳಬೇಕಿಲ್ಲ. ನಾನು ತೋರಿಸೋ ಪ್ರೀತಿ-ವಿಶ್ವಾಸಕ್ಕೆ ಇಷ್ಟೇ ತಾನೇ ಪ್ರತಿಫಲ?"

"ಹಾಗಂದ್ಕೊಬೇಡಿ ದಾಸು. ಪರಿಸ್ಥಿತಿಗಳನ್ನು ಯೋಚಿಸ್ಬೇಕು"

"ನಾನೆಲ್ಲಾ ಯೋಚಿಸಿ ಆಗಿದೆ. ನನಗೀ ನಾಟಕ ಬೇಡ."

"ನಾನು ಹೇಳಿದ ಹಾಗೆ ಮಾಡೋಣ. ನಾನೆಲ್ಲಾ ವಿವರಿಸೋದಕ್ಕೆ ಒಂದು ಚಾನ್ಸ್ ಕೊಡಿ, ಆತುರಪಡಬೇಡಿ." ಸುಮಳ ದನಿ ಗದ್ಗದವಾದಂತಿತ್ತು.

"ಎಷ್ಟು ವಿವರಿಸಿದ್ರೂ ಅಷ್ಟೆ. ನನಗಿಂಥ ಟ್ರೀಟ್‌ಮೆಂಟ್ ಸಿಗುತ್ತೇಂತ ನಾನು ಕನಸಿನಲ್ಲೂ ಎಣಿಸಿರಲಿಲ್ಲ."

-ಬುಸುಗುಡುತ್ತಿದ್ದ ದೇವದಾಸ್.

"ನನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ"-ಸುಮ ಎಂದಳು.

"ಏನದು?"

"ಎಲ್ಲಾ ವಿವರಿಸೋದಕ್ಕೆ ಅವಕಾಶ ಕೊಡಿ. ನನಗೆ ನಿರಾಸೆ ಮಾಡಬೇಡಿ."

"ಸರಿ ಹೇಳಿ."

"ಈಗಲಾ? ಇಲ್ಲಿಯೇ ಸಾಧ್ಯವಿಲ್ಲ. ಮತ್ತೆಲ್ಲಾದ್ರೂ ಹೋಗೋಣ. ಕಬ್ಬನ್ ಪಾರ್ಕಿಗೆ?"

"ಛೆ! ಅಲ್ಲಿ ಹೋಗಿ ಹೇಗೆ ಮಾತಾಡೋದು?" ಅಡ್ಡಿಯಾದವನು ಗಂಡಸು. ಭಾಪುರೇ ಎಂದುಕೊಂಡ ಮಾಧು.

"ರೆಸ್ಟೋರೆಂಟ್ ಒಳಗೆ ಹೋಗೋಣ. ತಿಂಡಿ ತಿನ್ನುತ್ತಾ ಮಾತಾಡಿದ್ರೆ ಯಾರಿಗೂ ಅನುಮಾನ ಬರೋಲ್ಲ."

-ಗೆಲುವಾದ ದನಿ ಸುಮಳದು. ಪರವಾಗಿಲ್ಲ ಹುಡುಗಿ. ಬಹಳ ಧೈರ್ಯಸ್ಥಳ ಹಾಗಿದ್ದಾಳೆ.

"ಸರಿ, ಬರ್ತೀರಿ ತಾನೆ? ವಿವರವೆಲ್ಲಾ ತಿಳಿದ್ಮೇಲೆ ತೀರ್ಮಾನ ನಿಮ್ಮದೇ."

"ಯಾವಾಗ ಅಂತ ಹೇಳಲಿಲ್ವಲ್ಲಾ?" ಈಗಲೂ ಅಸಮಾಧಾನದ ದನಿಯೇ ದೇವದಾಸನದು.

"ನಾಳೆ ನಾಲ್ಕು ಗಂಟೆಗೆ ಖಂಡಿತ ಬರ್ಬೇಕು. ಕಾಯಿಸಬಾರ್ದು" ಎಂದು ನಲ್ಮೆಯಿಂದ ಪಿಸುಗುಟ್ಟಿದಂತೆ ಕೇಳಿಸಿತು ಮಾಧುವಿಗೆ. ಎದೆಯ ಮೇಲೆ ಸೀಸದ ಗುಂಡು ಹೇರಿದಷ್ಟು ಭಾರವಾಯಿತು. ತನ್ನ ಹೃದಯ ಹಿಮಗಡ್ಡೆಯಾಗಿತ್ತು. ಆದರೆ ಅದು ಸ್ವಲ್ಪ ಕರಗುತ್ತಿರುವಾಗ ಮತ್ತೆ ಹೆಪ್ಪುಗಟ್ಟಬೇಕೇ?

ಕುರ್ಚಿ ಸರಿಸಿ ಎದ್ದ ಶಬ್ದ "ಹಾಗಾದ್ರೆ ನಾನೀಗ ಹೋಗ್ತೀನಿ" ಎಂದು ಸುಮ ಎದ್ದು ಹೊರಟುಹೋದಳು.

ಮಾಧು ಅವಳ ಕಣ್ಣಿಗೆ ಬೀಳದ ಸ್ಥಳದಲ್ಲಿದ್ದುದರಿಂದ ಅವಳಿಗೆ ಕಾಣಲಿಲ್ಲ. ಹೊರಗೆ ಬಂದ ಕೂಡಲೆ ಅವಳ ಎದೆ ಧಸಕ್ಕೆಂದಿತು ಪೋರ್ಟಿಕೋದಲ್ಲೇ ನಿಂತಿದೆ ಮಾಧುವಿನ ಕಾರು. ನಂಬರಿನ ಕಡೆಗೆ ನೋಡಿದಳು ಹೌದು, ಅದೇ ಕಾರು, ಸಂಶಯವೇ ಇಲ್ಲ. ಹಾಗಾದರೆ ಒಳಗೆ ಇರಲೇಬೇಕು. ತನ್ನನ್ನು ನೋಡಿಬಿಟ್ಟಿರಬಹುದೇ? ಇಲ್ಲಿ ಯಾಕೆ ಬಂದನಾತ? ಆತ ಮತ್ತೆ ಹೊರಗೆ ಬರುವಷ್ಟರಲ್ಲಿ ತಾನು ಸುಳಿವು ಕೊಡದೆ ನಡಿದುಬಿಡಬೇಕೆಂದು ಅಡ್ಡ ದಾರಿ ತೂರಿ ಕಟ್ಟಡದ ಹಿಂಭಾಗದಿಂದ ನಡೆದು, ಕಾಂಪೌಂಡ್ ಗೋಡೆ ಒಡೆದು ಕಿಂಡಿ ಮಾಡಿದ್ದ ಕಡೆಯಿಂದ ರೋಡಿಗೆ ಬಂದು 'ಅಯ್ಯಪ್ಪ, ಗೆದ್ದೆ!' ಎಂದು ನಿಟ್ಟುಸಿರು ಬಿಟ್ಟು ನಡಿಗೆ ನಿಧಾನ ಮಾಡಿ ಮುಂದೆ ನಡೆದಳು.

ಹತ್ತು ಗಜ ಹೋಗುವ ಮುನ್ನವೇ ಒಂದು ಫಿಯೆಟ್ ಕಾರು ಸೊಂಯ್ ಎಂದು ಅವಳನ್ನು ದಾಟಿ ಮುಂದೆ ಹೋದದ್ದು, ಕಿಂಯಕ್ ಎಂದು ಬ್ರೇಕ್ ಬೀಳಿಸಿ ನಿಧಾನವಾಗಿ ಹಿಂದುಹಿಂದಕ್ಕೆ ಬಂದು ಅವಳ ಪಕ್ಕದಲ್ಲಿ ನಿಂತಿತು

"ಸುಮ ಇದೇನು ಇಲ್ಲಿ ನಡೆದು ಬರ್ತಿದ್ದಿ ಬಿಸಿಲಲ್ಲಿ, ಅದೂ ಒಬ್ಬಳೇನೇ?"

ನಡೀದೆ ಇನ್ನು ಹೇಗೆ ಬರ್ಲಿ, ನಿಮ್ಮ ಹಾಗೆ ಎಲ್ಲರಿಗೂ ಕಾರಿರುತ್ತಾ' ಎನ್ನಬೇಕೆನಿಸಿತು ಹಾಗೆನ್ನುವ ಮನವಿದ್ದರೂ, ಅನ್ನಲು ನಾಲಿಗೆಯಲ್ಲಿ ದ್ರವವಿರಲಿಲ್ಲ

"ಲೈಬ್ರರೀಗೆ ಬಂದಿದ್ದೆ"- ಚುರುಕಾಗಿ ಹೇಳಿದಳು.

"ಮನೆಗೇ ತಾನೆ ಈಗ? ಬಾ ಹೋಗೋಣ ನಾನು ಹೋಗ್ತಾ ಇದೀನಿ" ಮನೆಗೆ ಹೊರಟಿದ್ದವಳು ಅವನೊಂದಿಗೆ ಹೋಗುವ ಮನಸ್ಸಾಗದೆ-"ನಾನೀಗ್ಲೆ ಮನೆಗೆ ಬರೋಲ್ಲ, ಸ್ವಲ್ಪ ನನ್ನ ಫ್ರೆಂಡ್ ಮನೆಗೆ ಹೋಗಿ ಬರ್ಬೇಕು" ಎಂದಳು.

"ಊರ್ಮಿಳಾ ಮನೇಗಾ? ಆದೇನು?"

"ಅವಳಿಗೆ ನಿನ್ನೆಯಿಂದ ಜ್ವರವಂತೆ, ನೋಡಿ ಬರೋಣಾಂತ"-ಸುಳ್ಳಿನ ಸರ ಪೋಣಿಸತೊಡಗಿದಳು.

"ಸರಿ ಬಾ. ನಿನ್ನನ್ನ ಡ್ರಾಪ್ ಮಾಡ್ಬಿಟ್ಟು ನಾ ಹೋಗ್ತೀನಿ."

"ಬೇಡ, ನಾನು ಬಸ್ಸಲ್ಲಿ ಹೋಗ್ತೀನಿ."

"ಅಣ್ಣನಿಗೆ ತಿಳಿದ್ರೆ ನನ್ನ ಕಟುಕ ಅಂತಾರೆ. ಆಗ್ಲೆ ಹನ್ನೆರಡೂ ಕಾಲಾಯ್ತು. ಊಟ ಬೇಡವೇನು?"

ಅವಳು ಏನು ಮಾತನಾಡದಾಗ- "ಬೇಗ ಬಾ ಮತ್ತೆ, ನಂಗೆ ಬಹಳ ಹಸಿವು. ತಡವಾದ್ರೆ ನಿನ್ನನ್ನೇ ತಿಂದುಬಿಟ್ಟೇನು"ಎಂದು ಹಾಸ್ಯವಾಗಿ ಅನ್ನುತ್ತಾ ಅವಳ ಕಡೆಗೆ ನೋಡಿದ. ಅವಳ ದೃಷ್ಟಿ, ತನ್ನ ದೃಷ್ಟಿಯಲ್ಲಿ ಮಿಳಿತವಾದಾಗ ಅಲ್ಲಿ ಬರಿಯ ನಿರ್ಮಲತೆ ಕಂಡಿತೇ ವಿನಾ ದೇವದಾಸನ ಪ್ರೇಮದಿಂದ ತಿರಸ್ಕೃತಳಾದ ಭಾವನೆ ಇರಲಿಲ್ಲ. ಖೇದಕ್ಕಿಂತ ಮಿಗಿಲಾಗಿ ಗೆಲುವಿನ ಛಾಯೆಯಿತ್ತು.

ಆದರೂ ಅವಳ-ದೇವದಾಸನ ರಹಸ್ಯ ಭೇಟಿಗಳ ಕಾರ್ಮೋಡಗಳು ಅವನ ಹೃದಯವನ್ನ ಮುತ್ತಿದವು. ಅವಳು ವಾಸುವನ್ನೇ ಬಯಸಿದ್ದರೂ ತನಗೆ ಬೇಸರವಿಲ್ಲ. ಆದರೆ ಈ ದೇವದಾಸ್!-

ಮರುಮಾತಿಲ್ಲದೆ ಕಾರು ಹತ್ತಿ ಕುಳಿತಳು. ಕಾರು ಹೊರಡಿಸುತ್ತಾ ಮಾಧು-"ನೀನೇ ದಾರಿ ತೋರಿಸ್ಬೇಕು ನನಗೆ ನಿನ್ನ ಫ್ರೆಂಡಿನ ಮನೆ ಗೊತ್ತಿಲ್ಲ" ಎಂದ

"ಅಲ್ಲಿಗೆ ಬೇಡ, ಈಗ ಮನೆಗೆ ಹೋಗೋಣ. ನಾನು ಮನಸ್ಸು ಬದಲಾಯಿಸಿ ದೀನಿ" ಅಂದಳು.

ಅರೆ ತಿಕ್ಕಲ್ ಹುಡುಗಿ ಇರಲಿ ಈ ತಿಕ್ಕಲೇ ಇರಲಿ. ಒಂದು ದಿನ ಇದೇ ವಾಕ್ಯದಂತೇ-'ಮಾಧು, ನಾನು ಮನಸ್ಸು ಬದಲಾಯಿಸಿದೀನಿ' ಎಂದು ದೇವದಾಸನನ್ನು ಬಿಟ್ಟು ತನ್ನ ಬಳಿಗೆ ಬಂದರೆ! ಬಂದರೆ? ಆಗ ಎರಡು ಕೈಗಳಿಂದಲೂ ಸ್ವೀಕರಿಸುತ್ತಾನೆ, ತಾನು.

"ಅದೇನು? ಅವಳಿಗೆ ಜ್ವರ ವಾಸಿಂತ ಏನಾದ್ರೂ ವೈರ್‌ಲೆಸ್ ಮೆಸೇಜ್ ಬಂತೇನು?"-ಎಂದು ಕಿರುನಕ್ಕ.

"ಅಂದ್ರೆ ನಾನು ಸುಳ್ಳು ಹೇಳಿದ್ದೆ ಅಂತ್ಲಾ"- ಕಳ್ಳನ ಮನಸ್ಸು ಹುಳ್ಳಗಾಗಿತ್ತು.

"ನಿಂಗ್ಯಾಕೆ ಭಯ ಸುಳ್ಳಲ್ದೆ ಇದ್ರೆ....ಹುಂ, ಈವತ್ತು ಲೈಬ್ರರಿಯಲ್ಲಿ ಯಾವ ಯಾವ ಪುಸ್ತಕ ನೋಡಿದೆ?"

ಪ್ರಶ್ನೆ ಸಾಧಾರಣದ್ದು ಸುಲಭದ್ದು. ಆದರೆ ಉತ್ತರ ಕ್ಲಿಷ್ಟ, ಅತಿಕ್ಲಿಷ್ಟ.

ಓರೆನೋಟದಿಂದ ಅವನ ಕಡೆಗೆ ನೋಡಿದಳು. ಅವನ ತುಟಿಗಳು ನಗುತ್ತಲೇ ಇದ್ದುವು. ಆಗ ಅವಳಿಗೆ ನೆನಪಾಯಿತು. ತಾನು ಮುಂದಿನ ಸೀಟಿನಲ್ಲಿದ್ದೇನೆಂದು, ತಾನು ಯಾಕೆ, ಹೇಗೆ ಅಲ್ಲಿ ಕುಳಿತಳು?

"ಏನು ಯೋಚನೆ ಮಾಡ್ತಿದ್ದೀ?"

"ಏನೂ ಇಲ್ಲ" ಎಂದು ನೀರಸವಾಗಿ ಅವಳೆಂದಾಗ, ಮರೆತಿದ್ದ ಅವನ ಈರ್ಷ್ಯೆ ಮತ್ತೆ ಪ್ರಜ್ವಲಿಸಿತು. ಪಕ್ಕದಲ್ಲಿ ಕುಳಿತು ಆತ್ಮೀಯವಾಗಿ ತಾನು ಮಾತನಾಡಿಸುತ್ತಿದ್ದರೆ ಅವಳ ನೆನಪೆಲ್ಲಾ ದೇವದಾಸನಲ್ಲೇ ಇರಬೇಕು. ಮತ್ತೆ ಚಕಾರವಾಡಲಿಲ್ಲ ಮಾಧು. ಸುಮಳೂ ಮೌನಗೌರಿಯಾದಳು,

ಕಾರು ಮಾತ್ರ ಶಬ್ದವಾಗಿ ಓಡಿ ಮನೆ ತಲುಪಿತು.

ಮಾಧು ಸುಮ ಒಟ್ಟಿಗೆ ಬಂದುದರಿಂದ ನಾಗಮ್ಮನವರ ಸಂಶಯ ನಿಜ ವಾಯಿತು. ಇಬ್ಬರಿಗೂ ಊಟಕ್ಕೆ ಬಡಿಸಿದಾಗ ತಡೆಯದೆ ಕೇಳಿಯೇಬಿಟ್ಟರು-"ಸುಮ ನಿಂಗೆಲ್ಲಿ ಸಿಕ್ಕಿದ್ಲು ಮಾಧು?"

ಮಾಧು ಉತ್ತರಿಸುವ ಮುನ್ನವೇ ಸುಮ-"ನಾನು ಲೈಬ್ರರಿಯಿಂದ ನಡಕೊಂಡು ಬರ್‍ತಿದ್ದೆ. ಇವರು ಆ ಕಡೆಯಿಂದಾನೇ ಬರ್‍ತಿದ್ರು. ಒಟ್ಟಿಗೆ ಬಂದ್ವಿ ಅಮ್ಮ" ಎಂದಳು.

ಅವಳ ಮಾತನ್ನು ನಂಬಲು ಇಷ್ಟಪಟ್ಟರೂ, ಸುಮಳ ಕುರಿತು ವಿಚಾರಿಸಿದ ಕೂಡಲೆ ಹೊರಟದ್ದ ಮಾಧು, ಉದ್ದೇಶಪೂರ್ವಕವಾಗಿಯೇ ಇಬ್ಬರೂ ಅಲ್ಲಿಗೆ ಹೋಗಿ ಅವಳನ್ನು ಕರೆತಂದಿದ್ದಾನೆ, ಇವನ ಕೆಲಸ ಸುಮಳಿಗೆ ಗೊತ್ತಿರಲಾರದು ಎಂದು ತರ್ಕಿಸಿದರು. ಒಂದು ವೇಳೆ ಮುಂಚಿತವಾಗಿಯೇ ಇಬ್ಬರೂ ನಿಶ್ಚಯಿಸಿ ಮೇಲೆ ಈ ನಾಟಕವಾಡಿದ್ದರೆ?-ಎಂದು ಅವರ ಹೃದಯದ ಸಂಶಯದ ಹುಳು ಮತ್ತೆ ತಲೆಯೆತ್ತಿತು

ಆಕೆಯ ಮನದಲ್ಲಿ ಆಂದೋಳನದ ಅರಿವಿಲ್ಲದಿದ್ದರೂ, ಊರ್ಮಿಳಾ-ದೇವದಾಸರ ಪ್ರೇಮ ಪ್ರಕರಣ ಕುರಿತು, ಅವರಿಬ್ಬರನ್ನೂ ಹೇಗೆ ಒಂದು ಮಾಡಬೇಕೆಂದು ಸುಮಾ ತನ್ನ ಮನದಲ್ಲಿ ಯೋಚಿಸುತ್ತಿದ್ದಳು

ಮಾಧೂ ಅಪಾರ್ಥದಿಂದ ಬೆಂದು ಹೋಗುತ್ತಿದ್ದ. ದೇವದಾಸ್-ಸುಮಾರ ನಡುವೆ ಇರಬಹುದಾದ ಸಂಬಂಧ ನೆನೆದು ಕುದಿಯುತ್ತಿದ್ದ. ಅವನಿಗೆ ಅನುಮಾನ ವಾಗಿದೆಯೆಂದು ಸುಮಳಿಗೆ ತಿಳಿದಾದರೂ ಇದ್ದರೆ, ಪರಿಹಾರ ಮಾಡುತ್ತಿದ್ದಳೇನೋ. ಆದರೆ ಅತಿಪ್ರೇಮಿಯಾಗಿ ಪರಿವರ್ತಿತನಾದ ಮಾಧು ಕುರುಡಾಗಿದ್ದ.

ಇವರಿಬ್ಬರ ಮೌನ ನಾಗಮ್ಮನವರ ಸಂಶಯವನ್ನು ದೃಢಪಡಿಸುತ್ತಿತ್ತು. ಆಗಲೇ ಅವರ ಗಮನಕ್ಕೆ ಮಾಧೂ ಬಂದು ಮೂರು ದಿನವಾದರೂ ಚಂಪಳನ್ನು ನೋಡಲು ಹೋಗಿಲ್ಲವೆಂದು ತಿಳಿಯಿತು. ಚಂಪಳನ್ನೇ ಇಲ್ಲಿಗೆ ಕರೆಸಿಯಾದರೂ ಮಾಧುವನ್ನು ಸುಮಳಿಂದ ದೂರವಿರಿಸಬೇಕೆಂದುಕೊಂಡರು ಸುಮಳನ್ನು ಎಲ್ಲಿಯಾದರೂ ಕಳುಹಿಸಿ ಬಿಡಬಹುದು. ಆದರೆ ಕಾರಣ ಏನು ಕೊಟ್ಟಾರು?ಅದೂ ಪರೀಕ್ಷೆ ಇನ್ನೊಂದು ಆರು ತಿಂಗಳಿರುವಾಗ ಅವಳ ಓದೇ ಈ ಅವಧಿಯಲ್ಲಿ ಮುಗಿಯುವಾಗ, ಅವಳನ್ನು ಈಗ ಹೊರದೂಡುವಷ್ಟು ಮಾನವೀಯತೆ ಇಲ್ಲದವರಲ್ಲ ನಾಗಮ್ಮ. ಪಾಪ, ಹೊರಟು ಹೋಗೆಂದರೆ, ಹೇಗೆ ಅನಾಥಳಾಗಿ ಬಂದಳೋ ಹಾಗೆಯೇ ಅವಳು ಹೊರಟೂ ಹೋಗಬಹುದು. ಆದರೆ ಇಷ್ಟು ದಿನ ತಾವು ಮಾಡಿದುದು ನಿಷ್ಪ್ರಯೋಜಕ ವಾಗಲಾರದೆ? ಒಂದು ಹೆಣ್ಣಿನ ಬದುಕು ನಿಲ್ಲಿಸಿದ ಪುಣ್ಯ ಸಂಚಯ ಸ್ವಲ್ಪವೇ?

ನಿಶ್ಶಬ್ದವಾಗಿ ಊಟ ಮುಗಿಯಿತು. ಈ ನಿಶ್ಶಬ್ದದಿಂದ ಉಸಿರು ಕಟ್ಟದಂತಾಗಿತ್ತು ಸುಮಳಿಗೆ. ಇವಳ ಊಟ ಮುಗಿಯುವುದನ್ನೇ ಕಾಯುತ್ತಿದ್ದ ರಾಯರು-" ಸುಮಾ, ಇವತ್ತು ಶನಿವಾರ,

ಮರೆತುಬಿಟ್ಟೆಯೇನು. ನಮ್ಮ ಕೆಲಸ?" ಎಂದರು.

ಶನಿವಾರಗಳು ರಾಯರ ವ್ಯವಹಾರದ ಕಾಗದ ಪತ್ರ ನೋಡಲು ಸುಮ ಸಹಾಯ ಮಾಡುತ್ತಿದ್ದಳು. ಹಳ್ಳಿಯ ಜಮೀನಿನ ವಿಷಯಗಳೂ ಈಗ ಸುಮಳಿಗೆ ಚೆನ್ನಾಗಿ ಗೊತ್ತು. ಹಾಸ್ಟೆಲಿನ ಜಮಾ ಖರ್ಚಿನ ಬಾಬತ್ತಂತೂ ಸುಮಳದ್ದೇ ಜವಾಬ್ದಾರಿ. ಮಾಧು ಬರುವವರೆಗೆ ಸರಿ, ಈಗ? "ಮರೆತಿಲ್ಲ ಅಣ್ಣ. ಈಗ ನಿಮ್ಮ ಮಗ ಬಂದಿದ್ದಾರಲ್ಲ. ನಾನು ಮಾಡಬಹುದೋ-ಬಾರದೋಂತ..."

"ಅವ್ನ ಬಂದ್ರೆ ನೀ ಮಾಡಬಾರ್ದೂಂತ್ಲಾ. ಬಾ ಬಾ ಆ ತರ್ಕ ಎಲ್ಲಾ ಬೇಡ"ಎಂದು ವಿಶ್ವಾಸದಿಂದ ಕರೆದರು. ಮಾಧುವೂ ಕೇಳಿಸಿಕೊಂಡ ಈ ವಾದವನ್ನು. ಆದರೆ ತಲೆಹಾಕದೆ ತನ್ನ ಕೋಣೆಗೆ ಹೋದ. ತಲೆ ಸಿಡಿಯುತ್ತಿತ್ತು. ತನ್ನ ಸುತ್ತ ಸುಳಿದಾಡುವ ಈ ಸುಮಳನ್ನು ಹಿಡಿದು ಎರಡು ಚಚ್ಚಬೇಕೆನಿಸಿತು. ಎಂದೂ ಇಲ್ಲದುದು ಅವನ ಕಣ್ಣಲ್ಲಿ ನೀರಾಡಿತು. ಅವ್ಯಕ್ತ ಅಸಹಾಯಕತೆ.

ಸಂಜೆಯಾದರೂ, ಸುಂಳ, ರಾಯರ ಕಾಗದ ಕಡತದ ಹಾವಳಿ ಮುಗಿಯಲಿಲ್ಲ. ಮಾಧುವೂ ಸಂಜೆಯಾದರೂ ತನ್ನ ಕೋಣೆ ಬಿಟ್ಟು ಬರಲಿಲ್ಲ. ಮನೆಯೆಲ್ಲಾ ಸ್ತಬ್ಧವಾಗಿ ಬಿಟ್ಟಂತಿತ್ತು.

ಶನಿವಾರ ಭಜನೆ ಮುಗಿಸಿ ವಾಸುವಿನೊಂದಿಗೆ ಕೆಲವು ಹುಡುಗರು ಮನೆಗೆ ಬಂದು ಪ್ರಸಾದ ಕೊಟ್ಟಾಗ ಸ್ವಲ್ಪ ಗಲಗಲ ಎಂದ ಮನೆ ಮತ್ತೆ ನಿಶ್ಶಬ್ದವಾಯಿತು.

ಊಟ ಮಾಡದ ರಾಯರು ಫಲಹಾರ ಮಾಡಿದರು. ಹಸಿವಿಲ್ಲವೆಂದು ಮಾಧುವೂ ರಾಯರನ್ನೇ ಅನುಸರಿಸಿದ. ಸುಮ ನಾಗಮ್ಮ ಊಟದ ಶಾಸ್ತ್ರ ಮಾಡಿ ಎದ್ದರು. ಬಾಲು ಆ ದಿನವೂ ಬರಲಿಲ್ಲ.

ಮಾಧು ನಿದ್ದೆ ಬರದೆ ಚಡಪಡಿಸುತ್ತಿದ್ದರೆ, ಸುಮ ನಾಳೆ ದೇವದಾಸನೊಂದಿಗೆ ಮಾತನಾಡಬೇಕಾದ ಸಂಭಾಷಣೆ ಜೋಡಿಸುವುದರಲ್ಲಿ ತಲ್ಲೀನಳಾಗಿದ್ದಳು ಕತ್ತಲ ಕೋಣೆಯ ತಳವಾದ ಹಾಸಿಗೆಯಲ್ಲಿ. ಒಟ್ಟಿನಲ್ಲಿ ಇಬ್ಬರೂ ಎಚ್ಚರವಾಗಿದ್ದರು ಒಬ್ಬರಿಗೊಬ್ಬರು ತಿಳಿಯದಂತೆ.

೨೫

ರಾತ್ರಿಯೆಲ್ಲಾ ನಿದ್ದೆ ಬರದೇ ಇದ್ದುದೂ ಒಂದು ಒಳಿತೇ ಆಯಿತು, ಸುಮಳನ್ನು ಕುರಿತಾಗ ಒಂದು ತೀರ್ಮಾನಕ್ಕೆ ಬರಲು ಅವನು ಶಕ್ತನಾಗಿದ್ದ. ಕೇವಲ ಮೂರು ದಿನದ ಹಿಂದೆ, ಪರಿಚಯವೇ ಇಲ್ಲದಿದ್ದ ಒಂದು ಹುಡುಗಿ ಇದ್ದಕ್ಕಿದ್ದಂತೆ ತನ್ನ ಮನಸ್ಸಿನ ಮೇಲೆ ಆಕ್ರಮಣ ಮಾಡಿದರೆ ಅದರಿಂದ ತಪ್ಪಿಸಿಕೊಳ್ಳಲಾರದಷ್ಟು ದುರ್ಬಲ ನೇನಲ್ಲ ತಾನು. ಒಂದೆರಡು ದಿನ ತನಗೆ ನಿರಾಶೆಯೆನಿಸಬಹುದು, ಅಸೂಯೆಯಾಗ ಬಹುದು. ನಂತರ ಎಲ್ಲಾ ಸರಿಹೋಗುತ್ತದೆ.

ನಾಳೆಯಿಂದ ಕಾಲೇಜಿಗೆ ಹೋಗುವುದಾದರೆ, ಪಾಠಪ್ರವಚನಗಳಿವೆ. ಅವು ಗಳಿಗಾಗಿ ಅಭ್ಯಾಸ,

ಲೈಬ್ರರಿ, ಇವುಗಳಲ್ಲಿ ತನಗೆ ಉಸಿರಾಡಲೇ ಪುರಸೊತ್ತಿರು ವುದಿಲ್ಲ. ಇನ್ನು ಪ್ರೇಮಕ್ಕೆಲ್ಲಿ ಜಾಗ? ಕೆಲ ದಿನಗಳು ಪಟ್ಟಾಗಿ ಅವಳನ್ನು ನೋಡದಿದ್ದರೆ, ತನ್ನ ಅನೇಕ ವಿದ್ಯಾರ್ಥಿನಿಯರ ಮಧ್ಯದಲ್ಲಿ ಅವಳು ಒಬ್ಬಳಾಗಿ ಹೋಗುತ್ತಾಳೆ. ಈ ನಿರ್ಧಾರ ಅವನ ಮನದ ಹಂಬಲವನ್ನು ಸ್ಥಿರಗೊಳಿಸಿತ್ತು.

ಅವನು ಬೇಗ ಎದ್ದು, ಅವಳು ಮಾಡುತ್ತಿದ್ದ ಕೆಲಸವನ್ನೂ ತಾನೇ ಮಾಡ ತೊಡಗಿದ. ಈ ಮಹಾ ಕೆಲಸಕ್ಕೆ ರಂಗನನ್ನೇಕೆ ಕಾಯುವುದೆಂದು ಪರದೆ ಮೇಲೆ ಹಾಕಿ ಹೊದಿಕೆಯನ್ನೂ ಓರಣವಾಗಿ ಹಾಸಿ, ಕಿಟಕಿ ಪರದೆಯನ್ನು ಸರಿಯಾಗಿ ಸರಿಸಿದ. ನಿಂತು ತನ್ನ ಕುಶಲತೆಯನ್ನು ನೋಡಿ ತಾನೇ ಮೆಚ್ಚಿಕೊಂಡ. ಹೂದಾನಿಯಲ್ಲಿ ಬಾಡಿ ಮುದುರಿದ್ದ ಹೂಗಳನ್ನು ತೆಗೆದು ಗೋಡೆಗೆ ಓರೆಯಾಗಿ ಎಸೆದು, ರಂಗ ಗುಡಿಸುವಾಗ ತೆಗೆದುಹಾಕಲಿ ಎಂದು. ಹೊಸ ಹೂಗಳನ್ನು ನಂತರ ತಂದಿಟ್ಟರಾಯಿತು ಎಂದುಕೊಂಡ. ತನ್ನ ದಿನಚರಿಯಲ್ಲಿ ಮುಳುಗಿದ್ದ ಅವನಿಗೆ ತಾನು ತಾನೇ ಅಲ್ಲವೆನಿಸಿತು.

ಎಲ್ಲಿಯೂ ಸುಮಳ ಸುಳಿವಿಲ್ಲದಾಗ ಹೃದಯದ ಒಂದು ಮೂಲೆಯಲ್ಲಿ ಚುರಕ್ ಎಂದಿತು ತನ್ನ ನಿರ್ಧಾರದಲ್ಲಿ ಸೋಲುತ್ತಿದ್ದೇನೆಯೇ ಎಂದು ಕಾತರ ಪಟ್ಟವನು, ಸಂಭಾಳಿಸಿಕೊಂಡು, ಅವಳು ಕಾರ್ಯಕ್ರಮಗಳು ಏನೋ ತಾನೇನು ಬಲ್ಲ. ಅಷ್ಟಕ್ಕೂ ತನಗೇಕೆ ಬೇಕು ಎಂದು ನಿಶ್ಚಿಂತೆ ತಂದುಕೊಂಡ ಊಟದ ವೇಳೆಯಲ್ಲೂ ಅವಳ ಪತ್ತೆಯಿಲ್ಲವಾದರೂ, ತಾಯಿಯನ್ನೇನೂ ಕೇಳಲಿಲ್ಲ.

ಸುಮಾರು ಮೂರು ಗಂಟೆಯ ಸಮಯ. ಮಧ್ಯಾಹ್ನ ಮಲಗುವ ಪರಿಪಾಠ ವಿಲ್ಲದ ವೇಣು ಪುಸ್ತಕ ಹಿಡಿದು ಮಂಚದ ಮೇಲೆ ಅಡ್ಡಾಗಿದ್ದ. ಮನಸ್ಸು ಪ್ರಶಾಂತ ವಾಗಿದ್ದು ಪುಸ್ತಕದಲ್ಲಿ ಮಗ್ನನಾಗಿದ್ದ. ಕೆಳಗಡೆ ಸುಮ 'ಅಮ್ಮ' 'ಅಮ್ಮ'ಎಂದು ಕೂಗುತ್ತಾ ಮನೆಯಲ್ಲಿ ಓಡಾಡಿದಾಗ, ಮಾಧುವಿನ ತಲ್ಲೀನತೆ ಕಡಿಯಿತು. ಅಮ್ಮ ಮನೆಯಲ್ಲಿ ಇಲ್ಲವೇ? ಇವಳು ಹೀಗೆ ಹುಡುಕುತ್ತಿದ್ದಾಳೆ, ಎಲ್ಲಿ ಹೋಗಿರಬಹುದು? ಅಣ್ಣನೇನೋ ಹಾಸ್ಪಲ್ಲಿಗೆ ಹೋಗಿದ್ದಾರೆಂದು ಬಲ್ಲ. ಓ ಸುಮಳೂ ಬೆಳಗಿನಿಂದ ಹಾಸ್ಪಲ್ಲಿನಲ್ಲೇ ಇದ್ದಿರಬೇಕೆಂದು ಈಗ ಹೊಳೆಯಿತು ಹಾಗಾದರೆ ಅಮ್ಮ ಎಲ್ಲಿ? ಮೆಟ್ಟಲಮೇಲಿನ ಹೆಜ್ಜೆಯ ಶಬ್ದ ಸುಮ ಇಲ್ಲಿಗೇ ಬರುತ್ತಿದ್ದಾಳೆಂದು ಸಾರಿತು. ಅವಳನ್ನು ಕಾಣದೆ ಇರಬೇಕೆಂದು ಓದುತ್ತಿದ್ದ ಪುಸ್ತಕವನ್ನು ಬಲಗೈಯಲ್ಲಿ ಹಿಡಿದಿದ್ದಂತೆಯೇ ಎದೆಯ ಮೇಲೆ ಆನಿಸಿಕೊಂಡು, ಎಡಗೈಯನ್ನು ಕಣ್ಣಮೇಲೆ ಅಡ್ಡಲಾಗಿ ಮಲಗಿಸಿ, ಉಸಿರನ್ನು ಸಮವಾಗಿ ಬಿಡತೊಡಗಿದ ಕೈಯ ಸಂದಿಯಿಂದ ಅವನಿಗೆ ಬಾಗಿಲ ಬಳಿ ಬರುವ ಸುಮಳನ್ನು ಕಾಣುವುದು ಸಾಧ್ಯವಿತ್ತು.

ಸುಮ ಬಾಗಿಲಿಗೆ ಬಂದು ನಿಂತು, ಬಾಗಿಲ ಚೌಕಟ್ಟನ್ನು ಎರಡೂ ಕೈಗಳಿಂದ ಹಿಡಿದು ಮೆಲ್ಲಗೆ ಬಾಗಿ ನೋಡಿದಳು. ಅವಳ ಆ ಭಂಗಿ, ಮಾಧುವಿನ ಎದೆಯಂತ ರಾಳದಲ್ಲಿ ಹುದುಗಿಹೋಗಿದ್ದ ಯಾವುದೋ ಒಂದು ಮಧುರ ದೃಶ್ಯವನ್ನು ನೆನಪಿಗೆ ತಂದು ಬೆಚ್ಚಿದ.

ಅಮ್ಮ ಅಲ್ಲಿಲ್ಲವೆಂದು ಹಿಂತಿರುಗಿದಳು ಸುಮ. ಎಷ್ಟೇ ಬೇಡವೆಂದುಕೊಂಡರೂ ಅವಳನ್ನು ಮಾತನಾಡಿಸದೆ, ಹತ್ತಿರ ಕರೆಯದೆ ಇರಲಾರದಾದ ಮಾಧು.

"ಏನು ಬೇಕಿತ್ತು ಸುಮ?"ಕೇಳಿಯೇ ಬಿಟ್ಟ ಕಣ್ಣು ತೆರೆದು.

"ಅಮ್ಮ ಬಂದಿದಾರೇನೂಂತ ಬಂದೆ"

"ಇಲ್ಲೇ ಇದಾರೆ. ನೋಡ್ದೇನೆ ಹೋಗ್ತಿದೀಯಲ್ಲ!"

"ಎಲ್ಲೀ?" ಎಂದು ಒಂದು ಹೆಜ್ಜೆ ಒಳಗೆ ಬಂದಳು.

"ಇಲ್ಲಿ ಇಷ್ಟು ದಪ್ಪ ಕುಳಿತಿದ್ದಾರೆ ಕಾಣಿಸಲಿಲ್ಲ"ಎಂದು ಮಂಚದ ಎಡಬದಿಗೆ ಕೈನೀಡಿ ತೋರಿಸಿದ. ಅವಳು ಅವನ ಮಂಚದ ಹತ್ತಿರ ಬಂದು ಬಾಗಿ ನೋಡಿದಳು.

ಅವಳೆಷ್ಟು ಹತ್ತಿರ! ಕೈಚಾಚಿ ಅವಳನ್ನು ಬಂಧಿಸಬೇಕೆಂದು ಒಮ್ಮೆಲೇ ಆಸೆಯಾಯಿತು. ಆದರೆ ಆ ಆಸೆಯನ್ನು ಕಾರ್ಯಗತ ಮಾಡಲಿಲ್ಲ. ಮಂಚದ ಹಿಂದೆ ಕುಳಿತು ಅಮ್ಮ ಅಲ್ಲೇನು ಮಾಡುತ್ತಿರಬಹುದೆಂದು ಅನುಮಾನದಿಂಲೇ ಬಗ್ಗಿ ನೋಡಿ "ಥೂ, ಸುಳ್ಳು ಹೇಳ್ತೀರಾ" ಎಂದು ಹಿಂದೆ ಸರಿದಳು ಸುಮಾ. ಆ ಘಳಿಗೆಯಲ್ಲಿ ಅವಳಿಗೆ ತನ್ನ ಕೈಗಳನ್ನು ಮುಷ್ಟಿಮಾಡಿ ಅವನ ಎದೆಯ ಮೇಲೆ ಗುದ್ದಬೇಕೆನಿಸಿತು.

"ಸುಳ್ಳು ಹೇಳ್ದಿದ್ರೆ ನೀನು ಒಳಗೆ ಬರ್ತಿದ್ಯೇನು? ಅಮ್ಮ ಇಲ್ದಿದ್ರೆ ಮಾತ್ರ ನೀನಿಲ್ಲಿಗೆ ಬರಬಾರ್ದಾ?

ಅವಳು ಉತ್ತರ ಕೊಡದೆ ಹೊರಡುತ್ತಿದ್ದಳು. ಅವಳನ್ನ ನಿಲ್ಲಿಸಿಕೊಳ್ಳಬೇಕೆಂದು,

"ಮೊನ್ನೆ ಟೆಸ್ಟ್‌ನಲ್ಲಿ ಹೇಗೆ ಮಾಡಿದ್ದಲ ಸುಮ?"ಎಂದ

"ಚೆನ್ನಾಗಿ ಮಾಡಿದೀನಿ"

"ನಾಳೆಯಿಂದ ನಾನೂ ಕಾಲೇಜಿಗೆ ಬರ್ತೀನಿ"

"ಗೊತ್ತು"

"ನಾವಿಬ್ರೂ ಒಂದೇ ಮನೆಯಿಂದ ಒರ್ತೀವಿ ಅಂತ ಎಲ್ಲರಿಗೂ ಗೊತ್ತಾಗುತ್ತೆ."

"ಅದು ಎಲ್ಲರಿಗೂ ಗೊತ್ತಿದೆ ನಾನು ಅನಂತರಾಯರ ಕೃಪೆಯಲ್ಲಿರುವವಳು, ನೀವು ಆ ಕರುಣಾಳುಗಳ ಮಗ ಅನ್ನೋ ವಿಷಯ ಯಾರಿಗೆ ತಿಳಿಯದು?"

"ಆದ್ರೆ ಒಂದೇ ಛಾವಣಿ ಕೆಳಗಿದ್ದೀವೀಂತ ತಿಳಿಯುತ್ತೆ."

"ತಿಳಿಯಲಿ, ನಿಮ್ಮ ಉದ್ದೇಶ ಏನೂಂತ ತಿಳೀಲಿಲ್ಲ. ಒಂದ್ವೇಳೆ ನಾನಿಲ್ಲಿರ ಬಾರದೂಂತ .. ?"

ಅವಳ ಧ್ವನಿ ನಡುಗಿತು. ಅನುಮಾನ, ಸಂದೇಹಗಳಿಂದ,

"ಛೇ, ಅದಲ್ಲ ನಾನು ಕಾರಿನಲ್ಲಿ ಓಡಾಡ್ತಿರೋದು, ನೀನು........,,

"ಓ, ಅದಾ ನಿಮ್ಮ ಭಯ! ಏನೂ ಯೋಚನೆಮಾಡ್ಬೇಡಿ. ಯಾರು ಏನೂ ಅಂದ್ಕೊಳ್ಳೊಲ್ಲ."

"ಹಾಗಲ್ಲ, ಇನ್ಮೇಲೆ ನೀನೂ ಕಾರಲ್ಲೇ ನನ್ನ ಜೊತೆ ಬಂದ್ಬಿಡು ಅಂತ "

ಸುಮ ಟೇಬಲ್ಲಿಗೆ ಒರಗಿ ನಿಂತು ಗೋಡೆಯ ಕಡೆಗೆ ತಿರುಗಿ ಮಾತನಾಡು ತ್ತಿದ್ದಳು. ಅವನ ಸಲಹೆಗೆ ಉತ್ತರ ಕೊಡಲಿಲ್ಲ. ನಕಾರವನ್ನೂ ಹೇಳಲಿಲ್ಲ.

"ಸುಮ, ನನ್ನ ಮೇಲೆ ಕೋಪಾನಾ?"

"ಕೋಪಕ್ಕೆ ಕಾರಣವೇನಿದೆ?"ಯಾಕೆ ಹೀಗೆ ಕೇಳುತ್ತಾನೆ?

"ಯಾವ್ದಕ್ಕೆ?"

"ನಿನ್ನೆಯ ನನ್ನ ವರ್ತನೆಗೆ"ಅವಳಿಗೆ ಅವನ ಚುಂಬನದ ನೆನಪಾಗಿ ಮೈ ಲಘುವಾಗಿ ಕಂಪಿಸಿತು.ಅವನ ಈ ಪ್ರಶ್ನೆಗೆ ಏನು ಹೇಳುತ್ತಾಳೆ, ಕೋಪವಿದ್ದರೆ ಅದು ತನ್ನಮೇಲೆಯೇ ಅಥವಾ ಆ ದೈವದ ಮೇಲೆ. ತನ್ನನ್ನು ಅನಾಥಳನ್ನಾಗಿ ಮಾಡಿ, ಇಂತಹ ಉತ್ತಮರ ಮನೆ ಸೇರಿಸಿ, ಅವರ ಒಬ್ಬನೇ ಮಗನಲ್ಲಿ ಅನುರಾಗ ಮೂಡಿಸಿರುವ ವಿಧಿಯ ಒಳಸಂಚಿನ ಮೇಲೆ.'ಇಲ್ಲ' ಎಂದರೆ ಅಂತಹ ಘಟನೆ ಪುನರಾವರ್ತಿಸುವುದಕ್ಕೆ ಪ್ರೋತ್ಸಾಹ ಕೊಟ್ಟಂತೆ. 'ಹೌದು' ಎಂದರೆ ಆತನ ಮನನೋಯಿಸಿ ಆ ಮೂಲಕ ಬೇಡಿದ ಆಪತ್ತನ್ನು ತನ್ನ ಮೇಲೆ ತಾನೇ ಹೊತ್ತು ಹಾಕಿಕೊಂಡಂತೆ. ಆತನ ಅಸಡ್ಡೆಯೆಂಥದೋ ತನಗೆ ತಿಳಿಯದು. ಆದರೆ ಒಂದು ವೇಳೆ ಆತ ತಿರಸ್ಕರಿಸ ತೊಡಗಿದರೆ ತನಗೆ ಮನೆಯಲ್ಲಿ ಬಾಳು ಕಠಿಣವಾಗಬಹುದು. ತನ್ನ ಓದು ಮುಗಿಯು ವವರೆಗೆ ಅಂಥದಕ್ಕೆ ಆಸ್ಪದ ಕೊಡಲೇಬಾರದು.

ಸುಮ ಉತ್ತರ ಕೊಡದಿದ್ದರಿಂದ "ನಿನ್ನ ಮೌನದಿಂದ, ನಿನಗೆ ಕೋಪಾನೇ ಅಂತ ತೀರ್ಮಾನ ಆದ ಹಾಗಾಯಲು"ಎಂದ.

"ಇಲ್ಲ, ಆದರೂ ಹೆಣ್ಣು ಅಂದ್ರೆ ಅಷ್ಟು ಸುಲಭ ಅಂತ ನೀವಂದ್ಕೋಬಾರ್ದು, ಅದು...."

"ಹೇಳು, ಯಾಕೆ ನಿಲ್ಲಿಸ್ದೆ?"

"ನಿಮಗೂ ಒಳ್ಳೇದಲ್ಲ. ಮಾಧುರಿಗೂ ದ್ರೋಹವಾಗುತ್ತೆ."

ಘಕಘಕ ನಕ್ಕುಬಿಟ್ಟ ಮಾಧು-"ನೋಡು ಸುಮ, ನಿನ್ನ ತಲೆಗೆ ಈ ಮಾಧುರಿ ವಿಷಯ ಯಾರು ತುಂಬಿದ್ದಾರೋ ಗೊತ್ತಿಲ್ಲ. ನಿಂಗೊಂದೆರಡು ವಿಷಯ ಹೇಳ್ಬೇಕು. ಹೇಳಿದ್ರೆ ಕೇಳಿಸ್ಕೋತೀಯಾ?"

"ಹೇಳಿ."

"ನೀನು ಕೂತ್ಕೊಂಡ್ರೇನೇ ಹೇಳೋದು."

ಕುರ್ಚಿಯಲ್ಲಿ ಕುಕ್ಕರಿಸಿದಂತೆ ಕುಳಿತುಕೊಂಡಳು ಅಸಹನೆಯಿಂದ ಗೋಡೆಯ ಕಡೆಗೇ ತಿರುಗಿ.

"ಈಕಡೆ ನೋಡಿದ್ರೇನೇ ಹೇಳೋದು. ಈ ಕಡೆ ತಿರುಗು ಸುಮ.

ಗಂಟೆ ಮೂರುವರೆ ಬಡಿಯಿತು. ನಾಲ್ಕಕ್ಕೆ ತಾನು ಕಬ್ಬನ್ ಪಾರ್ಕಿನಲ್ಲಿರ ಬೇಡವೇ! "ಏನು ಹೇಳ್ತೀರೋ ಬೇಗ ಮುಗಿಸೋದಾದ್ರೆ ಮಾತ್ರ"ಎಂದು ಕುರ್ಚಿಯನ್ನು ತಿರುಗಿಸಿಕೊಂಡಳು.

ಆದರೂ ಅವನನ್ನು ನೇರ ನೋಡಲಾರದಾದಳು. ತೋಳಿಲ್ಲದ ನೆಟ್ ಬನಿಯನ್ ತೊಟ್ಟ ಅವನ ವಕ್ಷಸ್ಥಳ, ತೋಳುಗಳನ್ನು ಎದುರಿಸಲು ಅವಳಿನ್ನೂ ಕಲಿಯಬೇಕು, ಅವನ ಮುಖ, ಕಣ್ಣು, ತುಟಿಗಳು ದಾಳಿಗೆ ಸಿಕ್ಕಿ ಚೇತರಿಸಿಕೊಳ್ಳುವುದೇ ಪ್ರಯಾಸವಾಗಿರುವಾಗ ಇದನ್ನು ಹೇಗೆ ಎದುರಿಸಬಲ್ಲಳು!ಅವನ ಕಡೆ ತಿರುಗಿದರೂ ತಲೆಯೆತ್ತದೆ ಕುಳಿತಳು.

"ನಾನು ಯಾವ ಲೆಕ್ಚರೂ ಕೊಡೊಲ್ಲ. ಆ ಮಾಧುರಿಯ ವಿಷಯ ನಿನಗೆ-" ಎಂದು ಅವನು ಪ್ರಾರಂಭಿಸುವ ವೇಳೆಗೆ

"ಮಾಧೂ, ಇಲ್ಲಿ ನೋಡು ಬಾ, ಯಾರು ಬಂದಿದಾರೇಂತ" ಎಂಬ ಅಮ್ಮನ ಕೂಗು ಕೇಳಿಬಂತು.

ಸುಮ ಗಾಬರಿಯಾಗಿ ಎದ್ದು ನಿಂತಳು. ವಿನಾಕಾರಣ ತಾನು ಮಾಧುವಿನ ರೂಮಿನಲ್ಲಿ! ಅಮ್ಮ ಏನೆಂದುಕೊಳ್ಳುತ್ತಾರೋ?

ಹುಬ್ಬು ಗಂಟಿಕ್ಕಿ ಬೇಸರ ವ್ಯಕ್ತಪಡಿಸುತ್ತಾ ಮಾಧು ಎದ್ದು, ಸ್ಟ್ಯಾಂಡ್ ಮೇಲಿದ್ದ ಷರಟಿಗಾಗಿ ಕೈಚಾಚಿದ. ಅದು ಸುಮಳು ಕುಳಿತಿದ್ದ ಕುರ್ಚಿಯ ಬಳಿಯೇ ಇದ್ದುದರಿಂದ, ಅವಳಿಗೆ ತಾಕದಂತೆ ತೆಗೆದುಕೊಳ್ಳಲು ದಾರಿಯೇ ಇರಲಿಲ್ಲ. ಇನ್ನು ಅವಳನ್ನು ದೂರ ಕಳುಹಿಸಿ ತೆಗೆದುಕೊಳ್ಳುವುದೇನೆಂದು ಹಾಗೆಯೇ ಅವಳಿಗೆ ಒರಗಿ ಷರಟು ಎಳೆದು ಕೊಂಡ. ಅವಳು ಅವನೆಡೆಗೆ ನೋಡಿದಳು. ಷರಟು ಹಾಕಿಕೊಳ್ಳುತ್ತಾ ಅವನೂ ಅವಳೆಡೆಗೆ ನೋಡಿದ. ಮೈಗೆ ಮೈ ತಗುಲಿದ್ದುದರಿಂದ ಇಬ್ಬರೂ ಒಂದು ಕ್ಷಣ ಮೈಮರೆತರು. ಅವನ ತುಟಿಗಳು ಮೆಲ್ಲಗೆ ನಕ್ಕುವು. "ಒಂದು ನಿಮಿಷ ಇರು ಸುಮ, ಯಾರೋ ನೋಡಿ ಕಳುಹಿಸಿ ಬಂದ್ಬಿಡ್ತೀನಿ" ಎಂದು ಹೊರಗೆ ನಡೆದ.

ಮೇಲುಗಡೆ ಅವನ ತಲೆ ಕಾಣುವ ವೇಳೆಗೇ "ಹಲೋ ಮಾಧೂ" ಎಂದು ಕೂಗಿದ ಆ ಕೀರಲು ದನಿ ಯಾರದೆಂದು ಒಳಗೆ ಕುಳಿತಿದ್ದ ಸುಮಳಿಗೆ ಸಕ್ಷಣವೇ ತಿಳಿಯಿತು, ಬಂದಿದ್ದವಳು ನಿಸ್ಸಂದೇಹವಾಗಿ ಚಂಪಾ. ಅಮ್ಮನ ಅಚ್ಚುಮೆಚ್ಚಿನ ಸೊಸೆ.

ಮಾಧು ಇನ್ನು ಒಂದು ನಿಮಿಷದಲ್ಲಿ ಬಂದಂತೆಯೇ ಇದೆ ಎಂದು ಶಂಕಿಸಿದ ಸುಮ ಹೇಗಾದರೂ ತಾನೀಗ ಇಲ್ಲಿಂದ ಪಾರಾಗಬೇಕೆಂದು ಚಡಪಡಿಸತೊಡಗಿದಳು. ಮೆಲ್ಲಗೆ ಬಾಗಿಲವರೆಗೆ ಬಂದು ಇಣುಕಿ ನೋಡಿದಾಗ ಅದೃಷ್ಟವಶಾತ್ ಅಮ್ಮನೂ ಚಂಪಳೂ ಮೆಟ್ಟಿಲಿಗೆ ಬೆನ್ನು ಮಾಡಿ ನಿಂತಿದ್ದರು. ಅಭಿಮುಖನಾಗಿದ್ದವನು ಮಾಧು ಮಾತ್ರವೇ. ಚಂಪಳ ಕೈಗಳು ಮಾಧುವಿನ ಕೈಗಳನ್ನು ಹಿಡಿದಿದ್ದುವು. ಅವನು ತಲೆಬಾಗಿಸಿ ಮಾತನಾಡುತ್ತಿದ್ದ.

ಈ ಸಮಯದಲ್ಲೇ ನುಸುಳಿಬಿಡಬೇಕು. ಇಲ್ಲದೆ ಇದ್ದರೆ ಅಮ್ಮ ಇನ್ನೊಂದೆರಡು ನಿಮಿಷಗಳಲ್ಲಿ ಕಾಫಿಯೋ ಪಾನಕವೋ ಮಾಡಲೆಂದು ತನ್ನನ್ನ ಕರೆಯುವುದುನಿಜ. ಆಗ ಇಲ್ಲಿಂದ ಇಳಿದು ಹೋಗುವುದು ಆಭಾಸ. ಉಸಿರು ಬಿಗಿಹಿಡಿದು ಕಾಲು ಸಪ್ಪಳ ಮಾಡದಂತೆ ಮೆಲ್ಲಗೆ ಇಳಿದಳು ಸುಮ. ಇಳಿಯುತ್ತಿದ್ದಂತೆಯೇ ಅವಳ ದೃಷ್ಟಿ ಗಡಿಯಾರದೆಡೆಗೆ ಹೋಯಿತು. ಮೂರೂ ನಲವತ್ತು. ಇನ್ನು ಇಪ್ಪತ್ತೇ ನಿಮಿಷ. ಈ ಯೋಚನೆ ಬಂದ ಕೂಡಲೆ ಮತ್ತೆಲ್ಲಾ ಮರೆತಳು. ಅವಳ ಜಾಗ್ರತೆಯೆಲ್ಲಾ ಗಾಳಿಗೆ ತೂರಿಹೋಯಿತು.

ಅವಳನ್ನು ಮೆಟ್ಟಿಲ ಮೇಲೆ ಕಂಡಿದ್ದು ನಾಗಮ್ಮನವರೇ ಅವರ ಮುಖದಲ್ಲಿ ಬೇಸರ. ಕೋಪ ಒಮ್ಮೆಲೇ ಝಳಪಿಸಿ ಮಾಯವಾದುದನ್ನು ಗಮನಿಸಿದ ಮಾಧು. ನಾಗಮ್ಮ ಸ್ವಲ್ಪ ಗಡುಸಾಗಿಯೇ ಗುಡುಗಿದರು-"ಮೇಲೇನ್ಮಾಡ್ತಿದ್ದೆ ಸುಮ? ನಿಂಗೆ ಅಲ್ಲೇನ್ಲಾ ಏನು ಕೆಲಸಾಂತ."

ಬೆಪ್ಪಾದಳು ಸುಮ. ಅಷ್ಟು ಜಾಗ್ರತೆ ವಹಿಸಿದವಳಿಗೆ, ನಡುವೆ ಯಾವ ದೆವ್ವ ಬಡಿಯಿತು? ಊರ್ಮಿಳೆಯ ದೆವ್ವ. ಥತ್, ಏಕೋ ತನ್ನ ಅದೃಷ್ಟವೇ ಹಾಗೆ. ತಪ್ಪೇ ಮಾಡದಿದ್ದರೂ ತಪ್ಪಿತಸ್ಥಳಾಗುವುದೇ ಹಣೆಯಬರಹ-"ಅಮ್ಮ, ಅಹೋಬಲ ಅಯ್ಯಂಗಾರ ಮಗಳು ಹೆತ್ತಿದ್ದಾಳಂತೆ, ನಿಮಗೆ ಹೇಳೂಂತ ಆತ ಹೇಳಿದ್ರು ನಿನ್ನೆ. ಮರೆತುಬಿಟ್ಟಿದ್ದೆ. ನಿಮಗೆ ಹೇಳೋಣಾಂತ ನಿಮ್ಮನ್ನ ಹುಡುಕ್ದೆ ನೀವು ಎಲ್ಲೂ ಕಾಣಲಿಲ್ಲ ಅದಕ್ಕೆ ನಾನು...."ತಡವರಿಸಿದಳು.

"ನಾನು ಮಾಧು ರೂಮಲ್ಲಿ ಅವಿತುಕೊಂಡಿರ್ತೀನೀಂತ ಅಲ್ಲಿ ಹೋದೆ ನೀನು, ಅಲ್ಲಾ?" ವ್ಯಂಗ್ಯವಾಗಿ ಕೇಳಿದರು. ಸುಮ ಮಾತನಾಡಲಿಲ್ಲ. ಮಾಧುವಿಗೂ ಅಮ್ಮನ ಈ ಆಕಸ್ಮಿಕ ಧೋರಣೆಯಿಂದ ಆಶ್ಚರ್ಯ

"ಅಮ್ಮ, ಅವಳ ಮೇಲೆ ಯಾಕೆ ರೇಗ್ತಿ? ನಾನವಳನ್ನು ಕರೆದಿದ್ದೆ, ಕಾಲೇಜು ವಿಷಯ ಕೇಳೋಣಾಂತ ಅಲ್ಲಿ ಬಂದಿದ್ದು. ಅದೊಂದು ದೊಡ್ಡ ತಪ್ಪಾಯ್ತಾ?" ಮಾಧು ವಹಿಸಿಕೊಂಡು ಬಂದ

"ಏನೋಪ್ಪ, ಇಬ್ರೂ ಸರಿಯಾಗಿದ್ದೀರಿ"-ಅಸಹನೆಯಿಂದ ನುಡಿದರು.

ಈ ವಾಕ್ಯದಿಂದ ಚಂಪಳ ಮನ ಅನುಮಾನಪಟ್ಟಿತು. ಸುಮಳೆಡೆಗೆ ತೀಕ್ಷ್ಣವಾಗಿ ನೋಡಿದಳು.

ಸುಮ ಆ ನೋಟಕ್ಕೆ ಸಿಗದಂತೆ ಅಡಿಗೆ ಮನೆಗೆ ಓಡಿದಳು. ಅವಳ ಚಾಕಚಕ್ಯತೆ ಆಕೆಗೆ ಇಷ್ಟವೇ. ಅವಳು ಕಾಫಿ ಮಾಡಲೆಂದೇ ಹೋಗಿರುತ್ತಾಳೆಂದು ಬಲ್ಲ ನಾಗಮ್ಮನವರು, ಏನೂ ನಡೆದೇ ಇಲ್ಲ ಎನ್ನುವಂತೆ-"ಕಾಫಿ ಬೇಡ ಸುಮ, ಪಾನಕ ಮಾಡಿಬಿಡು. ಅಲಮಾರದಲ್ಲಿ ನಿಂಬೆಹಣ್ಣಿದೆ ನೋಡು, ಹುಡುಕಾಡಬೇಡ"ಎಂದರು.

ವಾತಾವರಣದಲ್ಲಿ ತಂಗಾಳಿ ಬೀಸಿತು. ತಾಯಿಯ ವಿವೇಚನೆಗೆ ಕೃತಜ್ಞನಾದ ಮಾಧು ನಸುನಗುತ್ತಾ "ಕೂತ್ಕೋ ಚಂಪ, ನಿಂತೇ ಇದ್ದೀಯಲ್ಲ"-ಎಂದು ತಾನು ಸೋಫಾದಲ್ಲಿ ಕುಳಿತ. ಚಂಪಳೂ ಅವನಿಗೆ

ಹತ್ತಿರವಾಗಿ ಅದೇ ಸೋಫಾದಲ್ಲಿ ತೊಡೆಗೆ ತೊಡೆ ತಾಕುವಂತೆ ಕುಳಿತವಳು, ಎದುರಿಗೇ ಅತ್ತೆ ಇದ್ದುದರಿಂದ ಸ್ವಲ್ಪ ದೂರ ಸರಿದಳು. ಏರ್‌ಪೋರ್ಟ್‌ಗೆ ಯಾಕೆ ಬರಲಿಲ್ಲ. ನಾನು ಬಂದು ಮೂರು ದಿನವಾದರೂ ನಮ್ಮ ಮನೆ ಕಡೆ ಯಾಕೆ ಬರಲಿಲ್ಲ ಎಂದೆಲ್ಲಾ ಅವನು ಕೇಳಬಹುದೆಂದೂ, ತಾನೂ ಊರಿನಲ್ಲಿಲ್ಲದ ಸಮಾಚಾರ ಹೇಳದೆ ಸುಮ್ಮನೆ ಅವನನ್ನು ಕೀಟಲೆ ಮಾಡಬೇಕೆಂದೂ ಎಣಿಕೆ ಹಾಕಿದ ಚಂಪಳ ಕಲ್ಪನೆಯೆಲ್ಲಾ ಕುಸಿದುಬಿತ್ತು. ಮಾಧು ಏನನ್ನೂ ಕೇಳಲಿಲ್ಲ.

"ಈ ಮೂರು ವರ್ಷ ಏನು ತಿನ್ನುತ್ತಿದ್ದೆ ಚಂಪ, ದಪ್ಪಗೆ ಗುಂಡಗೆ ಆಗಿದ್ದೀ" ಎಂದು ಕೀಟಲೆಯಾಗಿ ಕೇಳಿದ

"ನೀವು ಹೇಗಾಗಿದ್ದೀರೀಂತ ನಿಮಗೆ ಯಾರೂ ಹೇಳಲಿಲ್ವೆ? ಆನೆ, ಬಿಳೀ ಆನೆ ಅಲ್ವಾ ಅತ್ತೆ? ಬಂದ ಕೂಡಲೆ ಒಂದಿಷ್ಟು ನಿವಾಳಿಸಿ ಹಾಕಿದ್ರಾ ಅತ್ತೆ?"

"ಅಮ್ಮ ಏನೂ ಹೇಳ್ಳಿಲ್ಲ ನಮ್ಮ ಕಾಲೇಜಲ್ಲೂ ಯಾರೂ ಏನೂ ಅನ್ಲಿಲ್ಲ 'ಇನ್ನೂ ಬಹಳ ಹ್ಯಾಂಡ್‌ಸಮ್ಮಾಗಿದ್ದೀರಿ ವೇಣುಮಾಧವ್' ಅಂದ್ರು. ಒಬ್ಬ ಹುಡುಗಿ ಅಂತೂ, ಆಗ್ಲೀ ನನಗೆ ಹೃದಯ ಅರ್ಪಿಸ್ಬಿಟ್ಟು ಒದ್ದಾಡ್ತಾ ಇದ್ದಾಳೆ, ನಾನೀನಂತೀನೋ ಅಂತ" ಎಂದು, ಆಗ ತಾನೇ ಪಾನಕ ತೆಗೆದುಕೊಂಡು ಅಲ್ಲಿಗೆ ಬಂದ ಸುಮಳ ಕಡೆಗೆ ನೋಡಿದ. ಸುಮಳ ಬಿಳುಪಿನ ಕೆನ್ನೆಗಳಿಗೆ ರಂಗೇರಿತು. ಆದರೆ ಚಂಪ ಅವನೆಂದ ಮಾತು ತನ್ನನ್ನು ಕುರಿತೇ ಎಂದು ಮುಖ ಉಬ್ಬಿಸಿ

"ಅದೆಲ್ಲಾ ಇರ್ಲಿ ನೀವೇನಂತೀರಿ ಅಂತ ಆ ಹುಡುಗಿಗೆ ಗೊತ್ತು ಅಲ್ಲಿಂದ ನಂಗೇನು ತಂದ್ರಿ?" ಎಂದಳು.

"ಓ, ಆ ಹುಡುಗಿಗೆ ಗೊತ್ತೇನು?"ಎಂದು ಮತ್ತೊಮ್ಮೆ ಸುಮಳ ಕಡೆ ನೋಡಿದಾಗ, ಅವರಿಬ್ಬರ ಕಣ್ಣುಗಳು ಒಂದೇ ಗಳಿಗೆ ಭೇಟಿ ಮಾಡಿ, ಸುಮ ಸರ್ರನೆ ದೃಷ್ಟಿಯನ್ನು ಪಕ್ಕಕ್ಕೆ ತಿರುಗಿಸಿದಳು.

ಇದ್ಯಾವುದರ ಪರಿವೆಯೇ ಇಲ್ಲದ ಚಂಪ ತನ್ನದೇ ಸುಖಲೋಕದಲ್ಲಿ ತೇಲಾಡುತ್ತಿದ್ದಳು.

ಮಾಧುವೇ ಮುಂದುವರಿಸಿದ-"ನೀನು ಬಹಳ ಸ್ವಾರ್ಥಿ ಚಂಪ. 'ನೀವೇನು ತೊಗೊಂಡ್ರಿ, ಅಲ್ಲಿ ಲೈಫ್ ಹೇಗಿತ್ತು, ಏನೇನು ತಂದ್ರಿ?'- ಅಂತೆಲ್ಲಾ ಕೇಳೋದು ಬಿಟ್ಟು ನಂಗೇನು ತಂದ್ರಿ ಅಂತೀಯಲ್ಲ"- ಅವನು ಹಾಸ್ಯವಾಗಿಯೇ ಹೇಳಿದ್ದರೂ ಚಂಪಳ ಮುಖ ಸ್ವಲ್ಪ ಮುದುರಿತು. ಆದರೂ ತೋರಗೊಡದೆ-

"ಹುಂ, ಸರಿಯಪ್ಪ, ಹೋಗ್ಲಿ, ಏನೇನು ತಂದ್ರಿ ಹೇಳಿ?"

"ನನ್ನನ್ನೇ ವಾಪಾಸ್ ತಂದಿದ್ದೀನಲ್ಲಾ ಸಾಲ್ದಾ?"

"ಅದು ಇದ್ದದ್ದೇ ಬಿಡಿ. ಅದಲ್ಲದೆ ಮತ್ತೇನೂಂತ."

ಅಲ್ಲೇ ನಿಂತಿದ್ದ ಸುಮಳ ಕಡೆಗೆ ನೋಡುತ್ತಾ "ಒಂದು ಬಿಳಿಯ ಹೆಂಡತಿ" ಎಂದ. ಸುಮಳಿಗೇಕೋ

ಈ ಹಾಸ್ಯವೆಲ್ಲಾ ಅತಿ ಎನಿಸಿತು. ಅಲ್ಲಿಂದ ಓಡಿಹೋಗಬೇಕು ಅನಿಸಿತು.

"ನೋಡಿದ್ರಾ ಅತ್ತೆ, ಮಾಧು ಚೇಷ್ಟೆ." ನಾಗಮ್ಮನವರೂ ಕಿರುನಗುತ್ತಿದ್ದವರು-

"ಅವನ ಮಾತು ಕೇಳು. ಅವನ ಹೃದಯ ಎಲ್ಲಾ ಚಂಪನ್ನ ಎಷ್ಟು ಹೊತ್ತಿಗೆ ನೋಡ್ತೀನೋಂತ ಇತ್ತು. ನೀನು ಊರಲ್ಲಿಲ್ಲ ಅಂತ ಸುಮ್ಮಿದ್ದ ಈ ಮೂರು ದಿನ" ಎಂದು ಮಗನ ಪರ ಮಾತನಾಡಿದರು.

ಮಾಧುವಿಗೆ ಅಮ್ಮ ಹೇಳಿದ ಸುಳ್ಳಿಗೆ ಕಾರಣವೇ ಹೊಳೆಯಲಿಲ್ಲ. ಪೆಚ್ಚಾಗಿ ತಾಯಿಯನ್ನೇ ನೋಡುತ್ತಾ ನಿಂತ.

ಸುಮಾಳಿಗೆ ಇನ್ನು ತನಗಿಲ್ಲಿ ಕೆಲಸ ಇಲ್ಲವೆನಿಸಿತು. ಅವರ ಕಿವಿಗಳು ಇವರ ಕಡೆಗಿದ್ದರೂ ಕಣ್ಣು ಗಡಿಯಾರದ ಕಡೆಗೇ ಇತ್ತು. ಇನ್ನು ಹತ್ತೇ ನಿಮಿಷವಿದೆ ಈಗ ತಡವಾಗಿ ದೇವದಾಸ್ ಕಾಯಬೇಕಾಗಿ ಬಂದರೆ ಆತನಿಗೆ ಕೋಪ ಬರಬಹುದು. ಅದರಿಂದಾಗಿ ಊರ್ಮಿಳೆಯ ಬದುಕೇ ಬದಲಾಗಿಬಿಡಬಹುದು. ಧೈರ್ಯಮಾಡಿ, ಅಮ್ಮ ಚಂಪಳ ವಿಷಯ ಮಾತನಾಡುತ್ತಿರುವಾಗಲೇ ಕೇಳಿಬಿಡುವುದು ಒಳ್ಳೆಯದೆಂದು.

"ಅಮ್ಮ, ನನ್ನ ಫ್ರೆಂಡಿಗೆ ತುಂಬಾ ಮೈ ಚೆನ್ನಾಗಿಲ್ಲ ಹೋಗಿ ನೋಡ್ಕೊಂಡು ಬರ್ತೀನಿ" ಎಂದು ಅಪ್ಪಣೆ ಕೇಳಿದಳು.

"ನಿನ್ನನ್ನು ನೋಡಿದ್ರೆ, ನಿನಗೆ ಮೈ ಚೆನ್ನಾಗಿಲ್ಲ ಅನ್ನಿಸುತ್ತಲ್ಲಾ ಸುಮ ! ಅಲ್ವಾ ಮಾಧು, ಹೇಗೆ ಬಿಳಿಚಿಕೊಂಡಿದ್ದಾಳಲ್ವಾ, ಹುಷಾರಾಗಿದೀಯ ಸುಮ ? ಅಥ್ವಾ ತುಂಬಾ ಓದ್ತಾ ಇದೀಯೋ?" ಚಂಪ ಕೇಳಿದಳು.

"ಹುಷಾರಾಗೇ ಇದೀನಿ" ಎಂದು ಒಳಗೇ ಗೊಣಗಿಕೊಂಡಳು ಸುಮ. ಚಂಪಳ ವಿರುಧ್ವನಿ ಎದುರಿಗೆ ಸುಮಳಿಗೆ ಸ್ವರವೇ ಇಲ್ಲದಂತಿತ್ತು.

ಮಾಧುವಿಗೆ ಚಂಪ ನುಡಿದಿದ್ದೇನೂ ತಲೆಗೆ ಹತ್ತಲಿಲ್ಲ. 'ಫ್ರೆಂಡಿಗೆ ಮೈ ಚೆನ್ನಾಗಿಲ್ಲ, ಹೋಗ್ತೀನಿ' ಎಂದು ಸುಮ ಹೇಳಿದ ಮಾತು ಛಟ್ಟನೆ ಅವನ ಮರೆವನ್ನು ಚುಚ್ಚಿ ಎಚ್ಚರಿಸಿತ್ತು 'ನಾಲ್ಕು ಗಂಟೆಗೆ ಕಬ್ಬನ್ ಪಾರ್ಕ್ ರೆಸ್ಟೋರೆಂಟಿಗೆ,' ಗಡಿಯಾರದ ಕಡೆ ನೋಡಿದ. ನಾಲ್ಕಕ್ಕೆ ಹತ್ತಿರ ಬಂದಿತ್ತು. ಅಮ್ಮ ಅವಳಿಗೆ ಹೇಳುತ್ತಿದ್ದರು "ಮಹರಾಯಳಾಗಿ ಹೋಗ್ಬಾ. ಬಹಳ ಕತ್ತಲು ಮಾಡಿಕೊಂಡು ಬರಬೇಡ" ಎಂದರು. ಅಮ್ಮನ ಧ್ವನಿಯಲ್ಲಿ ಕಕ್ಕುಲತೆಯಿತ್ತು. ಮುಖದಲ್ಲಿ ಸಂತಸ ಕಾಣುತ್ತಿತ್ತು. ಮಗನ ಮನ ಆಕ್ರಮಿಸದಿದ್ದರೆ ಸುಮ ಆಕೆಗೆ ಅತಿ ಪ್ರಿಯ ವ್ಯಕ್ತಿಯೇ. ಈಗ ಅವಳು ಹೊರಗಡೆ ಹೋಗುವುದರಿಂದ ಯಾವ ನಷ್ಟವೂ ಕಾಣಲಿಲ್ಲ. ಅದರಿಂದಲೇ ಉದಾರವಾಗಿ ಅಪ್ಪಣೆ ಕೊಟ್ಟುಬಿಟ್ಟಿದ್ದರು.

ಸುಮ ತನ್ನ ಕೋಣೆಗೆ ಓಡಿ, ವ್ಯಾನಿಟಿ ಬ್ಯಾಗ್ ಹಿಡಿದು ಬಂದು ಆತುರ ಆತುರವಾಗಿ ಓಡುತ್ತಿದ್ದುದನ್ನೇ ಗಮನಿಸುತ್ತಿದ್ದ ಮಾಧು. ನಂತರ ನಡೆದ ಯಾವ ಮಾತು ಕತೆಯಲ್ಲೂ ಅವನಿಗೆ

ಆಸಕ್ತಿ ಉಳಿಯಲಿಲ್ಲ. ಚಂಪ ಬೇಗ ಹೊರಟುಹೋಗ ಬಾರದೆ ಎನಿಸತೊಡಗಿತು. ಆದರೆ ಅಮ್ಮ ಅವಳನ್ನು ಅಷ್ಟು ಬೇಗ ಎಲ್ಲಿ ಕಳಿಸುತ್ತಾಳೆ. ತಾನು ತಂದ ಸೀರೆಯನ್ನು ಹೊಗಳಿ ಹೊಗಳಿ ಅಮ್ಮ ಚಂಪಳಿಗೆ ಕೊಟ್ಟಳು. ಅವಳು ಸೀರೆಯನ್ನು ತಬ್ಬಿ ಹಿಡಿದು ಆನಂದಪಟ್ಟಿದ್ದೇ ಪಟ್ಟಿದ್ದು. ಅಮ್ಮನ ಆದೇಶದ ಮೇರೆಗೆ ಅದನ್ನು ಉಟ್ಟಿದ್ದೂ ಆಯಿತು. ತನ್ನೆದುರಿಗೆ ವೈಯಾರವಾಗಿ ಮೆರೆದದ್ದೂ ಆಯಿತು. ಯಾಂತ್ರಿಕವಾಗಿ ಹೇಗೋ ನಡೆದುಕೊಂಡು ಮಾಧು. ತಮ್ಮದೇ ಆದ ಲೋಕದಲ್ಲಿದ್ದ ಚಂಪಳಿಗೇ ಆಗಲಿ, ಅಮ್ಮನಿಗೇ ಆಗಲಿ, ಮಾಧುವಿನ ಅನ್ಯಮನಸ್ಕತೆ ತಿಳಿಯಲೇ ಇಲ್ಲ.

ಇದ್ದಕ್ಕಿದ್ದಂತೆ ಮಾಧು ಉಪಾಯಗಾಣದೆ -" ನಾವೂ ಹಾಗೇ ತಿರುಗಾಡಿ ಬರೋಣ" ಎಂದಾಗ ತಾಯಿ ನಿಜಕ್ಕೂ ಬಹಳ ಸಂತೋಷ ಪಟ್ಟರು.

"ನಾನು ರೆಡಿ. ಏನತ್ತೆ, ಹೋಗಿ ಬರೋದಾ?" - ಅತ್ತೆಯ ಅಪ್ಪಣೆ ಕೇಳಿದ ಅವಳ ನಡೆನುಡಿ ನಾಗಮ್ಮನಿಗೆ ಬಹಳ ಮೆಚ್ಚುಗೆಯಾಯಿತು

ಅವರ ಉತ್ತರಕ್ಕೆ ಕಾಯದೆ ಸರಸರ ನಡೆದು, ಬಟ್ಟೆ ಬದಲಿಸಿ ಬಂದ ಮಾಧು. ಮತ್ತೆ ಅಲ್ಲಿ ನಿಂತು, ಇಲ್ಲಿ ನಿಂತು ಚಂಪ ಕಾರಿನ ಬಳಿ ಬರುವ ವೇಳೆಗೆ ಒಂದು ಗಂಟೆಯೇ ಆಯಿತು. ಅವನಿಗೆ ಅಮ್ಮ ಮತ್ತು ಚಂಪಳ ಮೇಲೆ ಕೋಪ ಬರುತ್ತಿತ್ತು. ಅವರಿಬ್ಬರಿಗೂ ಅದರ ಪರಿವೆಯೇ ಇಲ್ಲ.

"ಹಾಗಿಂದ ಹಾಗೇ ಮನೆಗೆ ಹೋಗ್ತೀಯೇನು ? ಅವರು ನಿನ್ನನ್ನು ನೋಡೋಕ್ಕೇ ಆಗ್ಲಿಲ್ಲ."

"ಅದೇನೋ ನಂಗೇನು ಗೊತ್ತು. ನಿಮ್ಮ ಮಗ ಬೇಗ ಕಳ್ಕೊಂಡ್ಬಂದ್ರೆ ಇಲ್ಲಿಗೇ ಬರ್ತೀನಿ. ಇಲ್ಲಾಂದ್ರೆ ಮನೇಗೆ. ಇನ್ನೇನು ಬಿಡಿ ಅತ್ತೆ, ಬರ್‍ತಾನೆ ಇರ್ತೀನಲ್ಲ. ಮಾವನ್ನು ಇನ್ನೊಂದ್ಸಲ ನೋಡ್ತೀನಿ. ಹುಷಾರಾಗಿ ಇದಾರೇ ತಾನೇ."

"ಇನ್ನೆರಡು ನಿಮಿಷ ನೀನು ಹೀಗೆ ನಿಂತರೆ, ಹುಷಾರು ತಪ್ಪುತ್ತೆ ನನಗೆ "- ಸ್ವಲ್ಪ ಗಟ್ಟಿಯಾಗೇ ಗೊಣಗಿದ ಮಾಧು. ಓಡಿಬಂದು ಕಾರು ಹತ್ತಿ ಪಕ್ಕದಲ್ಲಿ ಕುಳಿತು "ಏನಂದ್ರಿ?" ಎಂದಳು.

"ಬರ್ತೀನಿ ಬರ್ತೀನಿಂತ ಹತ್ತು ಮಂಟಪೋತ್ಸವ ಮಾಡ್ತಾರೆ, ಏನು ಹೆಂಗಸರೋ" ಅಂದ.

ಕಾರು ನೇರವಾಗಿ ಹೋಗಿ ಕಬ್ಬನ್‌ಪಾರ್ಕ್ ರೆಸ್ಟೋರೆಂಟಿನ ಮುಂದೆ ನಿಂತಿತು.

"ಒಂದು ಕಪ್ ಕಾಫಿ ಕುಡಿದು ಹೋಗೋಣ" ಎಂದು ಹೇಳುತ್ತಾ ಮಾಧು ಕಾರಿನಿಂದ ಇಳಿದ. ಚಂಪ ಎಡಗಡೆಯಿಂದ ಇಳಿದು ಬರುತ್ತಾ "ಬರೀ ಕಾಫೀನಾ? ಡಾಕ್ಟರೇಟ್ ತಗೊಂಡಿದ್ದಕ್ಕೆ ಸ್ವೀಟ್ಸ್?" ಎಂದಳು.

"ಆಗ್ಲಿ ಬಾ" ಎಂದ ಬಹಳ ಸಾಧಾರಣವಾಗಿ. ಅವನ ಯಾವ ಚರ್ಯೆಯಲ್ಲೂ ಅವಳೆಡೆಗೆ ಉದ್ವೇಗವಿಲ್ಲ.

"ಇಲ್ಲೇ ಹೊರಗಡೆ ಕೂತ್ಕೊಳ್ಳೋಣ. ಇಲ್ಲಿಗೇ ಸರ್ವ್‌ಮಾಡ್ತಾರೆ" ಎಂದಳು ಚಂಪ.

"ಬೇಡ. ಈ ಧೂಳಲ್ಲಿ ಯಾಕೆ? ಒಳಗೇ ಹೋಗೋಣ" ಎನ್ನುತ್ತ. ಚಂಪ ಹಿಂದೆ ಬರುತ್ತಿದ್ದಾಳೆಯೇ ಇಲ್ಲವೆ ಎಂಬುದನ್ನೂ ಗಮನಿಸದೆ, ಒಳಹೊಕ್ಕ ಮಾಧು.

* * *

ಮನೆ ಬಿಟ್ಟು ಹೊರಟ ಸುಮ ಚಿಟ್ಟೆಯಂತೆ ಹಾರಿದಳು. ಬಸ್ಸಿಗೆ ಹೋಗುವಷ್ಟು ವೇಳೆಯಿಲ್ಲ. ರಿಕ್ಷಾದಲ್ಲಿ ಹೋಗುವಷ್ಟು ಶಕ್ತಿ ತನಗಿಲ್ಲ. ಪರ್ಸ್ ತೆಗೆದುನೋಡಿದಳು ಆರೇಳು ರೂಪಾಯಿಗಳಿವೆ, ಅಷ್ಟೇ. ಇನ್ನೂ ಈ ತಿಂಗಳು ಒಂಬತ್ತು ದಿನಗಳು ಕಳೆಯಬೇಕು. ಆದರೂ ಈ ದಿನ ತಡಮಾಡುವಂತಿಲ್ಲ ತಾನು ಮಾಡುವ ಆ ದಿನದ ಕೆಲಸ ದೈವವಶಾತ್ ಸಫಲವಾದರೆ ತಾನು ಯಾವ ಕಷ್ಟಪಡಲೂ ತಯಾರು. ಒಂದು ವೇಳೆ ತನಗೆ ಹಣದ ಇಬ್ಬಂದಿಯಾದರೆ ನಾಳೆ ಊರ್ಮಿಳಾ ಸಹಾಯ ಮಾಡಲಾರಳೆ ಎಂದುಕೊಳ್ಳುತ್ತಾ, ಎದುರಿಗೆ ಬಂದ ಖಾಲಿ ರಿಕ್ಷಾಗೆ ಕೈ ಬೀಸಿ ಹತ್ತಿ ಕುಳಿತು ಹೊರಟಳು. ಅವಳ ಆತುರಕ್ಕೆ ಸರಿಯಾಗಿರುವಂತೆ ಇದ್ದ ರಿಕ್ಷಾದವನು ಹತ್ತು ನಿಮಿಷಗಳೊಳಗೆ ಗಮ್ಯಸ್ಥಾನ ಸೇರಿಸಿದ.

ಆ ಹತ್ತು ನಿಮಿಷದೊಳಗೆ ಅವಳ ಮನ ಹತ್ತು ಅಧ್ಯಾಯಗಳನ್ನೇ ರಚಿಸಿತು.

ತನ್ನ ಹಣದ ಕೊರತೆ ನೀಗಬೇಕಾದರೆ ಇನ್ನು ಆರು ತಿಂಗಳು. ಮೇಲೆ ಇನ್ನೂ ಮೂರು ನಾಲ್ಕು ತಿಂಗಳು, ಕೆಲಸ ಸಿಗಲು, ಕಡೆಯಪಕ್ಷ 250-300ರೂ. ಗಳಿಗೆ ಕಡಿಮೆಯಿಲ್ಲದ ಕೆಲಸ ಸಿಗುತ್ತದೆ. ಓಹ್. ಆಗ ಬದುಕು ಎಷ್ಟು ಸುಂದರ! ಎಂಟೊಂಭತ್ತು ವರ್ಷಗಳಿಂದ, ತನ್ನ ತಾಯಿ ಕಷ್ಟಪಟ್ಟು ಜತನದಿಂದ ಕೂಡಿಟ್ಟು ತನಗೆ ಆಸ್ತಿಯಾಗಿ ಬಿಟ್ಟುಹೋದ ಅಲ್ಪ ಹಣದಿಂದಲೇ ಪರರ ಕರುಣೆಯ ಮೇಲೆ ಆಧಾರಪಟ್ಟು ಬದುಕಿದ್ದಾಗಿದೆ. ಕಾಲೇಜು ಹಂತಕ್ಕೆ ಬರುವ ವೇಳೆಗೆ, ತನ್ನ ಬುದ್ಧಿಮತ್ತೆಯ ಕಾರಣದಿಂದ ಫ್ರೀಷಿಪ್ಪಾಗಿ, ಸ್ಕಾಲರ್‌ಷಿಪ್ಪುಗಳೂ ದೊರಕಿ ಹೇಗೋ ಕಳೆದುಹೋಗುತ್ತಿದೆ ಬಾಳು. ಆ ಕಾರ್ಪಣ್ಯದಿಂದ ಜೀವನಕ್ಕೆ ಇನ್ನೇನು ಅಂತ್ಯ ಕಾಣುತ್ತಿದೆ. ದೈವ ತನಗೆ ಅನ್ಯಾಯ ಮಾಡಿದೆ ಎನ್ನುವುದು ತಪ್ಪು. ತನಗೆ ಸಿಕ್ಕಿದ ಆಧಾರಗಳು ಎಷ್ಟು ಜನಕ್ಕೆ ಸಿಗುತ್ತವೆ?

ತಾನು ರಾಯರ ಮನೆಗೆ ಬಂದಾಗ ಅವರು ಫೀಸಿಗೆಂದು ಹಣ ಕೊಡಬಂದರು. ಫ್ರೀಷಿಪ್ಪಾಗಿತ್ತು, ಬೇಡವೆಂದಳು. ಖರ್ಚಿಗೆ ಇಟ್ಟುಕೋಮ್ಮ ಎಂದು ಮತ್ತೆ ಹೇಳಿದರು. ಎರಡು ಹೊತ್ತಿನ ಊಟ, ಈ ನೆಲೆ ತನಗೆ ಸಾಕೆಂದು ಅದನ್ನೂ ಮೃದುವಾಗಿ ತಿರಸ್ಕರಿಸಿದ್ದಳು. ರಾಯರಿಗೆ ಅವಳ ಸೌಜನ್ಯ ಹಿಡಿಸಿತ್ತು.

"ಎಲ್ಲ ಹುಡುಗಿಯರಂತೆ ನೀನೂ ಇರಬೇಕಮ್ಮ"ಎಂದು ನಾಗಮ್ಮನವರು ಹೋದ ವರ್ಷ ಒಂದು ರೇಷಿಮೆ ಸೀರೆ ತೆಗೆದುಕೊಟ್ಟಿದ್ದರು. ಕಾಲೇಜಿಗೆ ಉಡಲೆಂದು ಎರಡು ವಾಯಿಲ್ ಸೀರೆ ಕೊಡಿಸಿದ್ದರು.

"ಈ ಋಣ ಎಲ್ಲಾ ಜಾಸ್ತಿಯಾಯಿತಮ್ಮ" ಎಂದು ತಾನು ಕಣ್ಣೀರು ಹಾಕಿದಾಗ....

"ನೀನು ಈ ಮನೆಯ ಹೆಣ್ಣು ಮಗಳ ಹಾಗೆ. ಕಣ್ಣೀರು ಹಾಕಬಾರದು. ಯಾವ ಕಾರಣಕ್ಕೇ ಆಗಲಿ"ಎಂದಿದ್ದರು ರಾಯರು. ಅವರಿಗೆ ತಾನಾವ ರೀತಿಯಲ್ಲಿ ಋಣ ತೀರಿಸಲು ಸಮರ್ಥಳು? ಅದನ್ನ ಮನಬಿಚ್ಚಿ ಹೇಳಿದಾಗ ರಾಯರು ನಕ್ಕುಬಿಟ್ಟಿದ್ದರು-

"ನೀನು ಮನೇಲಿ ಮಾಡ್ತಾ ಇರೋ ಕೆಲಸಕ್ಕೆ ಬೆಲೆ ಕಟ್ಟಿ ನಿನಗೆ ಸಂಬಳ ಕೊಡೋ ಶಕ್ತಿ ನನಗಿಲ್ಲಮ್ಮ. ನಮ್ಮ ಮನೇಗೆ ಕುಕ್ ಆಗಿ, ನನಗೆ ಸೆಕ್ರೆಟರಿ ಆಗಿ, ನರ್ಸ್ ಆಗಿ, ತೋಟಕ್ಕೆ ಮಾಲಿಯಾಗಿ, ಹಾಸ್ಟೆಲ್ಲಿಗೆ ಅಕೌಂಟೆಂಟ್ ಆಗಿ..."

"ಹಾಗೆಲ್ಲಾ ಅನ್ಬೇಡಿ ಅಣ್ಣ. ನನಗೆ ನಾಚಿಕೆ ಆಗುತ್ತೆ"ಎಂದಿದ್ದಳು.

"ನಾನು ಬಡ ಹುಡುಗರಿಗೆ ಫೀಸು ಮಿಕ್ಕೆಲ್ಲಾ ಸೌಕರ್ಯ ಕೊಡ್ತೀನಿ ನನ್ನ ಕೈಲಾದ ಮಟ್ಟಿಗೆ. ನಿನಗೆ ಮಾತ್ರ ಯಾಕೆ ಬೇಡ? ಈ ಐವತ್ತು ರೂಪಾಯಿ ಪ್ರತಿ ತಿಂಗಳೂ ನೀನು ತೊಗೋ."

"ಖಂಡಿತ ನನಗೆ ಬೇಡ ಅಣ್ಣ" ಎಂದು ಎರಡು ಕೈಗಳಿಂದ ಮುಖ ಮುಚ್ಚಿಕೊಂಡಿದ್ದಳು.

"ಹೀಗಿದ್ದರೆ, ನೀನು ಸರೀಕರಲ್ಲಿ ಚೆನ್ನಾಗಿ ಕಾಣೋಲ್ಲ. ಅದು ನಂಗೆ ಇಷ್ಟವಿಲ್ಲ. ನಮ್ಮ ಮನೆಯಿಂದ ಹೊರಗಡೆ ಹೋಗುವಾಗ ನಮ್ಮ ಹುಡುಗಿ ಥರ ಇರ್ಬೇಕು ತಿಂಗಳಿಗೆ ಒಂದು ಸೀರೆ ತಗೊ."

"ಅಬ್ಬಾ!ತಿಂಗಳಿಗೊಂದು! ನೀವಷ್ಟು ಬಲವಂತ ಮಾಡೋದಾದ್ರೆ ಅದನ್ನ ಬ್ಯಾಂಕಿನಲ್ಲಿ ಹಾಕ್ಬಿಡಿ, ನನಗೆ ಮುಂದೆ ಕಷ್ಟ ಸುಖಕ್ಕಾಗುತ್ತೆ."

"ಯಾರ ಹೊಟ್ಟೇಲಿ ಹುಟ್ಟಿದೆಯೆ ಮಗು ನೀನು. ಇಷ್ಟು ಜಾಣತನ ಇದೆ ನಿನ್ನಲ್ಲಿ!"ಎಂದು ಬೆನ್ನು ಸವರಿದ್ದರು ನಾಗಮ್ಮ ಮೆಚ್ಚುಗೆಯಿಂದ

ಅಂದಿನಿಂದ ಸುಮಳ ಹೆಸರಲ್ಲಿ ಐವತ್ತು ರೂ ಜಮಾವಣೆಯಾಗುತ್ತಿತ್ತು. ಪ್ರತಿ ವರ್ಷವೂ ಪರೀಕ್ಷೆಗೆ ಕಟ್ಟುವಾಗ ಮಾತ್ರ ಚಕಾರವಾಡದೆ ಹಣ ತೆಗೆದುಕೊಳ್ಳುತ್ತಿದ್ದಳು, ಮಿಕ್ಕೆಲ್ಲದಕ್ಕೂ ತನ್ನ ಚಿಕ್ಕ ಉಳಿತಾಯವೇ ಆಧಾರ.

ಒಮ್ಮೊಮ್ಮೆ ನಾಗಮ್ಮನವರು ಯಾವುದೋ ನೆವ ಹೇಳಿ, ಹಬ್ಬ ವ್ರತವೆಂದು ತಾಂಬೂಲದಲ್ಲಿ ಐದು, ಹತ್ತು ಇಟ್ಟು ಕೊಡುತ್ತಿದ್ದರು. ಅದು ಅಭಿಮಾನಿಯಾದ ತನ್ನ ಅಭಿಮಾನಕ್ಕೆ ಧಕ್ಕೆಯಾಗಬಾರದೆಂದು, ಆಕೆ ಜಾಣಾಕ್ಷರಾಗಿ ಹೀಗೆ ಮಾಡುತ್ತಿದ್ದಾರೆಂಬುದು ತನಗೆ ತಿಳಿದ ವಿಷಯವೇ. ಅವರ ಒಳ್ಳೆಯತನದ ಮುಂದೆ, ಅವರ ಮಮತೆಯ ಮುಂದೆ ತಾನು ಮೂಕಳು.

ಅಂತಹವರ ಮನಸ್ಸು ನೋಯುವಂತೆ ತಾನು ನಡೆದುಕೊಳ್ಳುವುದು ಅಕ್ಷಮ್ಯ ಅಪರಾಧವೇ. ಅವರ ಮುದ್ದಿನ ಮಗನ ಕೋಣೆಗೆ ಒಂಟಿಯಾಗಿ ಹೋಗಲು ತನಗೆಷ್ಟು ಧೈರ್ಯ? ಆಕೆಗೆ ಕೋಪ ಬಂದದ್ದು

ಸಹಜ. ಇನ್ನು ಮೇಲೆ ಹಾಗಾಗಬಾರದು. ಚಿಂತೆಯಿಲ್ಲ. ಚಂಪ ಬಂದಿದ್ದಾಳೆ. ಆತನಿಗೆ ಪ್ರತ್ಯೇಕ ಆಕರ್ಷಣೆ ಇರುತ್ತದೆ. ಮೇಲಾಗಿ ನಾಳೆಯಿಂದ ಆತನಿಗೂ ಕಾಲೇಜಿದೆ. ಎಲ್ಲರೂ ಹೇಳುವಂತೆ ಆತ ಪ್ರತಿಭಾವಂತ. ಈ ಪ್ರತಿಭೆ, ಚಂಪಳ ಸಾಂಗತ್ಯ, ಮಾಧುರಿಯ ಸಹಕಾರಗಳಿಂದ ಆತ ತನ್ನಿಂದ ದೂರವಾಗಬಹುದು. ಆಗುತ್ತಾನೆ, ಆಗಲೇಬೇಕು.

ಕಬ್ಬನ್‌ಪಾರ್ಕ್‌ನ ಹತ್ತಿರ ಬಂದಂತೆ ಅವಳ ಎದೆ ಹೊಡೆದುಕೊಳ್ಳಲಾ ರಂಭಿಸಿತು. ತಾನೇನು ಯೋಚನೆ ಮಾಡುತ್ತಿದ್ದೇನೆ. ದೇವದಾಸನೊಂದಿಗೆ ಮಾತನಾಡ ಬೇಕಾದ ವಿಷಯವೆಲ್ಲಾ ಮರೆತೇಹೋಗಿದೆ. ನಿನ್ನೆಯ ರಾತ್ರಿ ನಾಟಕಕ್ಕೆ ಸಿದ್ಧತೆ ಮಾಡಿದ ಹಾಗೆ, ದಾಸು ಮಾತನಾಡಬೇಕಾದದ್ದನ್ನೂ ತಾನೇ ಆಡಿ, ಅದಕ್ಕೆ ಉತ್ತರ, ಪ್ರತ್ಯುತ್ತರಗಳನ್ನೆಲ್ಲಾ ತಯಾರಿಸಿಕೊಂಡಿದ್ದಳು. ಈಗ ಏನೂ ನೆನಪಿಲ್ಲ. ನೆನಪೆಲ್ಲಾ ರಾಯರದು, ಅಮ್ಮನದು, ಅವರ ಮಗ ವೇಣುವಿನದು. 'ವೇಣು' ಎಂಬುದನ್ನು ಒತ್ತಿ ನುಡಿದು ಹಲ್ಲು ಕಚ್ಚಿದಳು. ಈ ಪುಣ್ಯಾತ್ಮ ಇನ್ನು ಆರು ತಿಂಗಳಾದ ಮೇಲೆ ಬಂದಿದ್ದರೆ ಏನು ಕಳೆಯುತ್ತಿತ್ತು?

ರಿಕ್ಷಾದಿಂದ ಇಳಿದಾಗ ಅವಳ ಬಿಳಿಯ ಕೆನ್ನೆಗಳು ಕೆಂಪಗೆ ಉಬ್ಬಿ ನಿಂತಿದ್ದುವು. ವೇಣುವಿನ ನೆನಪೇ ಸಾಕು ಅವಳನ್ನು ಕೆಂಪು ಮಾಡಲು. ಹಣ ಕೊಟ್ಟು ಒಂದು ಹೆಜ್ಜೆ ಮುಂದಿಟ್ಟು ಸುತ್ತಲೂ ಒಮ್ಮೆ ಕಣ್ಣಾಡಿಸಿದಳು ಅದೇ ತಾನೇ ಬಂದು ತನ್ನ ಸ್ಕೂಟರಿಗೆ ಸ್ಟ್ಯಾಂಡ್ ಹಾಕುತ್ತಿದ್ದ ದಾಸು. ಅವಳನ್ನು ನೋಡಿ ಕೈಬೀಸಿದ. ಹಮ್ಮಯ್ಯ!ಎನ್ನುತ್ತಾ ಅವನ ಬಳಿ ನಡೆದಳು. ಇಬ್ಬರೂ ಒಳಹೊಕ್ಕು ಒಂದು ಮೂಲೆ ಆರಿಸಿ ಕುಳಿತರು

ಮೊದಲು ತನ್ನ ದುಃಖವೆಲ್ಲಾ ಹೊರಗೆ ಹಾಕಿದ ದೇವದಾಸ್. ತಾಯಿ ತಂದೆಯರನ್ನೇ ದೊಡ್ಡದು ಮಾಡಿಕೊಂಡು, ತನ್ನನ್ನು ತೃಣಕ್ಕಿಂತಲೂ ಕಡೆಯಾಗಿ ಊರ್ಮಿಳಾ ಕಾಣುತ್ತಿದ್ದಾಳೆಂದೂ, ಇಂತಹ ನಡತೆಯಿಂದ ಬಹಳ ನೋವಾಗುತ್ತ ದೆಂದೂ ಹೇಳಿದ. ಸುಮ ಊರ್ಮಿಳೆಯ ಕುಟುಂಬದ ಸಮಸ್ಯೆಗಳನ್ನು ಒಂದೊಂದಾಗಿ ಬಿಡಿಸಿ ಹೇಳಿದಾಗ, 'ಅಯ್ಯೋ ನಾನು ಊರ್ಮಿಯನ್ನು ತಪ್ಪು ತಿಳಿದೆನಲ್ಲಾ' ಎಂದು ಪೇಚಾಡಿದ.

ದೇವದಾಸನ ಮನ ಹಗುರವಾಗುವಷ್ಟು ಸಂತೈಸಿದಳು ಸುಮ. ನಗುನಗುತ್ತಾ ಮಾತನಾಡುತ್ತಿದ್ದವನು, ಇದ್ದಕ್ಕಿದ್ದಂತೆ ನಿಂತು ಯಾರಿಗೋ ಒಂದು ಪುಟ್ಟ ಸಲಾಂ ಕೊಟ್ಟು ಮತ್ತೆ ಕುಳಿತ. ಬಾಗಿಲಿಗೆ ಬೆನ್ನು ಮಾಡಿ ಕುಳಿತ ಸುಮ ಹಿಂತಿರುಗಿ ನೋಡದೆಯೇ-

"ಯಾರು, ನಿಮ್ಮ ಫ್ರೆಂಡಾ? ನನ್ನನ್ನು ನಿಮ್ಮ ಜೊತೇಲಿ ನೋಡಿ ಊರ್ಮಿ ಮೇಲೆ ಕಂಪ್ಲೇಟ್ ಮಾಡ್ತೀನಿ ಅಂದ್ಕೊಂಡಾರು"ಎಂದಳು.

'ಯಾರೂಂತ ಹಿಂತಿರುಗಿ ನೋಡಿದ್ರೆ ತಿಳಿಯುತ್ತೆ'ಎಂದ ದಾಸು.

"ಯಾರಾದ್ರೂ ಇರಲಿ ಬಿಡಿ ಸಧ್ಯ. ಈಗ ನಮ್ಮ ಸಂಕಟ ನಮ್ಮದು ನೀವು ಹೀಗೆ ಮಾಡಿ ದಾಸು. ಮುಖ್ಯವಾಗಿ ನೀವು ಈಗ ಅವಳ ತಂದೆಯನ್ನು ಕಂಡು ಬನ್ನಿ. ಆತನಿಗೆ ಇವಳು ಮೊದಲನೇ ಹೆಂಡ್ತಿ ಮಗಳು. ಎರಡನೇ ಹೆಂಡತಿ ಸರಿಯಾಗಿ ನೋಡೋಲ್ಲಾಂತ ಅವರಿಗೆ ಇವಳ ಮೇಲೆ ಅತಿ ವ್ಯಾಮೋಹ. ಅವಳ ಇಷ್ಟಕ್ಕೆ ಖಂಡಿತ ಅಡ್ಡ ಬರೋಲ್ಲ ಆತ. ಅವಳು ಕಂಬ ತೋರಿಸಿ, ನನಗೆ ಅದರ ಮೇಲೆ ಪ್ರೇಮ ಡ್ಯಾಡಿ ಅಂದ್ರೂ ಸರಿಯಮ್ಮ ಅಂತ ಹತ್ತು ಸಾವಿರ ಖರ್ಚು ಮಾಡಿ ಕಂಬಕ್ಕೆ ಕೊಟ್ಟು ಮದುವೆ ಮಾಡುವಂಥ ಕುರುಡು ವ್ಯಾಮೋಹ ಆತನಿಗೆ. ಆದರೆ ನೀವು ಉಪೇಕ್ಷೆ ಮಾಡಿದ್ರೆ ಅವರು ಸಹಿಸೋಲ್ಲ. ನೀವು ಅವರೆದುರಿಗೆ ಹೋಗಿ, ಅವರ ಮಗಳನ್ನು ಚೆನ್ನಾಗಿಟ್ಟುಕೊಳ್ಳಬಲ್ಲಿರಿ ಅಂತ ನಂಬಿಕೆ ಬರೋ ಹಾಗೆ ನಡಕೊಂಡ್ರೆ ನೀವು ಖಂಡಿತ ಪಾಸು."

"ಇದು ಉತ್ಪ್ರೇಕ್ಷೆ ಅಲ್ಲ ತಾನೆ?"

"ಉತ್ಪ್ರೇಕ್ಷೆ ಮಾಡೋ ಸಮಯನಾ ಇದು? ಊರ್ಮಿ, ಅತ್ತೂ ಅತ್ತೂ ಸುಸ್ತಾಗಿದ್ದಾಳೆ" ನಿಜಕ್ಕೂ ಮೊನ್ನೆ ಕಾಲೇಜಿನಲ್ಲಿ ಕಂಡಮೇಲೆ ಅವಳು ಊರ್ಮಿಯನ್ನು ನೋಡಿಯೇ ಇಲ್ಲ. ಆದರೂ ಪ್ರೇಮಿಯ ಮನಸ್ಸನ್ನು ಹಗುರಗೊಳಿಸಲು ಸುಳ್ಳು ಹೇಳಿ ಗೆಲ್ಲುತ್ತಿದ್ದಾಳೆ

ಸುಮ್ಮನೆ ತಲೆ ತಗ್ಗಿಸಿದ ದೇವದಾಸ್ ಅವನ ಒಳಮನ ಅಳುವ ಊರ್ಮಿಯನ್ನು ಚಿತ್ರಿಸಿಕೊಳ್ಳುತ್ತಿತ್ತು

"ಎರಡನೆಯದಾಗಿ ಅವರಮ್ಮ, ಅಂದ್ರೆ ಚಿಕ್ಕಮ್ಮ. ಆಕೆಗೆ ಒಂದೇ ದುಃಖ ಅಂದ್ರೆ ಊರ್ಮಿಳಾ ತಂದೆ ತಮ್ಮ ಆಸ್ತಿಯಲ್ಲಿ ಅರ್ಧವನ್ನು ಆಗಲೇ ಊರ್ಮಿಗೆ ಬರೆದಿದ್ದಾರಂತೆ ಮಿಕ್ಕರ್ಧ, ಆಕೆಯ ಮಕ್ಕಳು ಆರು ಜನಕ್ಕೆ ಸಿಗ್ಬೇಕು. ಹೇಗಾದ್ರೂ ಮಾಡಿ ಅವಳನ್ನು ತನ್ನ ತಮ್ಮನ ಮಗನಿಗೆ ಮಾಡಿಕೊಂಡರೆ, ತಮ್ಮನನ್ನು ಪುಸಲಾಯಿಸಿ ಹಣ ಮಾಡಬಹುದು ಅನ್ನೋ ಒಂದಾಸೆ. ಸಹಜವಾದ ತಾಯಿಯ ಆಸೆ ನೋಡಿ. ನೀವು ಆಕೇನ್ನ ಕಂಡು 'ನಂಗೆ ಬೇಕಾದಷ್ಟು ಆಸ್ತಿಯಿದೆ. ನಿಮ್ಮ ಊರ್ಮಿಳಾ ಆಸ್ತಿಯೆಲ್ಲಾ ನಿಮಗೇ ಕೊಡಿಸ್ಬಿಡ್ತೀನಿ' ಅಂತ ಹೇಳಿದರೇ ನಿಮ್ಮ ಕೆಲಸ ಆದ ಹಾಗೇನೇ."

"ನಂಗಷ್ಟು ಆಸ್ತೀನೇ ಇಲ್ವಲ್ಲಾ? ಒಂದ್ವೇಳೆ ಹಾಗೆ ಹೇಳಿದ್ರೇ ಆಕೆ ನಂಬಿಬಿಡ್ತಾರಾ?"

"ಓ. ಮಿ|| ದೇವದಾಸ್. ನಿಮ್ಮ ಜನರಲ್ಲಿ ಲಕ್ಷಾಧೀಶ್ವರರಿದ್ದಾರೆ ಅವರಲ್ಲಿ ಯಾರನ್ನಾದ್ರೂ ಚಿಕ್ಕಪ್ಪಾನೋ, ದೊಡ್ಡಪ್ಪಾನೋ ಮಾಡಿ. ಆದರೆ ಹುಷಾರಾಗಿರಿ. ತಾಯಿತಂದೆ ಇಬ್ರನ್ನೂ ಒಟ್ಟಿಗೆ ನೋಡ್ಬೇಡಿ. ಅವರಿಬ್ಬರ ದೃಷ್ಟಿಗಳು ಬೇರೆ. ನೀವು ಆಸ್ತಿವಂತರು, ಊರ್ಮಿ ಆಸ್ತಿಯನ್ನು ಹಿಂತಿರುಗಿಸ್ತಾ ಇದೀರಿ ಅಂತ ನೀವು ಹೇಳೋದು ತಿಳಿದ್ರೆ, ಆತ ಅದನ್ನು ಅವಮಾನಾಂತ ಭಾವಿಸಬಹುದು."

"ನೀವು ಹೇಳೋದು ಸರಿ. ಆಕೆ ಹೇಳದೆ ಇರ್ತಾಳೇನ್ರಿ?"

"ಅದೇ ಇರೋದು ಗುಟ್ಟು. ಆಕೇಗೆ ಇದು ಗುಟ್ಟಾಗಿ ಬೇಕು. ಅದ್ರಿಂದ ಖಂಡಿತ ಹೇಳೋಲ್ಲ."

"ಇದೆಲ್ಲಾ ನಿಮ್ಮದೇ ತಲೇನಾ? ಅಥವಾ...."

"ನಂಗೆಲ್ಲಿದೆ ತಲೆ ಸದ್ಯ. ಊರ್ಮಿಳಾ ಹೇಗೆ ಹೇಗೆ ನಿಮ್ಮ ಪಕ್ಕ ಸೇರ್ತೀನೀಂತ ತಪಸ್ಸು ಮಾಡ್ತಿದ್ದಾಳೆ. ಆಸ್ತೀನ ಈಗ್ಲೇ ಬೇಕಾದ್ರೂ ತಾಯಿಗೆ ಕೊಟ್ಬಿಡ್ತೀನಿ. ನನಗೆ ಸಿಗೋ ಈ ದೊಡ್ಡ ಆಸ್ತಿ ಮುಂದೆ ಆ ಹಣ ಒಂದು ದೊಡ್ಡದಾ ಅಂತ ಅತ್ತುಬಿಟ್ಳು."

"ಟ್ರೈ ಮಾಡ್ತೀನಿ ಸುಮ. ನೀವು ನಿಮ್ಮ ಗೆಳತಿಗೋಸ್ಕರ ಇಷ್ಟೊಂದು ಶ್ರಮ ತೂಗೊಳ್ತಿರೋದಕ್ಕೆ ನನ್ನ ವಂದನೆ."

"ಥ್ಯಾಂಕ್ಸ್ ಹೇಳಿದ್ರೆ ಸಾಲದು ದಾಸ್. ಮುನ್ನುಗ್ಗಿ ನನ್ನ ಫ್ರೆಂಡಿಗೆ ಬಿಡುಗಡೆ ಕೊಡಿಸಿ, ನೀವು ಅವಳನ್ನ ನಿಮ್ಮವಳನ್ನಾಗಿ ಮಾಡ್ಕೋಬೇಕು."

"ನನಗೆ ಆ ಇಚ್ಛೆ ಇಲ್ಲ ಅಂತೀರಾ?"

"ಛೆ! ಹಾಗನ್ನಲಿಲ್ಲ ನಾನು ಹಾರೈಸಿದೆ ಅಷ್ಟೆ. ನೀವು ಈ ಆಶ್ವಾಸನೆಯನ್ನು ಕೊಡದಿದ್ರೆ ಅವಳು ಈ ಸಲ ಪಾಸೂ ಆಗೋದಿಲ್ಲ."

"ಅಷ್ಟಕ್ಕೂ ಅವಳಿಗೆ ನನ್ನಲ್ಲಿ... ."

"ನೋಡಿದ್ರಾ, ಮತ್ತೆ ಮೊದಲಿಗೇ ಬಂದಿರಿ. ಅವಳು ನಿಮಗಾಗಿ ಪರಿತಪಿಸ್ತಾ ಇದಾಳೆ ಅಂತ ನಾನಿನ್ನು ಯಾವ ರೀತಿ ಹೇಳಲಿ. ನೀವು ಚೆನ್ನಾಗಿ ಯೋಚಿಸಿ ನನಗೆ ತಿಳಿಸಿ. ಊರ್ಮಿನೇ ನಿಮ್ಮನ್ನ ತಂದೆ ಹತ್ರ ಕರ್ಕೊಂಡು ಹೋಗೋ ಹಾಗೆ ನಾನು ಮಾಡ್ತೀನಿ"ಎನ್ನುತ್ತಾ ಎದ್ದು ನಿಂತವಳು,

"ಇನ್ನು ಹೋಗೋಣವಾ?" ಎಂದು ಹಿಂದೆ ತಿರುಗಿದಳು.

ಸುಮಳ ತಲೆ ತಿರುಗಿತು. ಎದುರಿಗೇ ಕುಳಿತದ್ದರು ಚಂಪ-ಮಾಧು. ಮೆಲ್ಲಗೆ ಕುರ್ಚಿಯ ಬೆನ್ನು ಹಿಡಿದು ಸಾವರಿಕೊಂಡಳು. ಪಿಸುಮಾತಿನಲ್ಲಿ,"ದೇವದಾಸ್, ಪ್ರೊಫೆಸರ್ ಬಂದದ್ದನ್ನ ನೀವೂ ನೋಡ್ಲಿಲ್ವಾ?" ಎಂದಳು

"ನೋಡಿದೆನಲ್ಲಾ, ವಿಷ್ ಕೂಡ ಮಾಡ್ದೆ ನಾನು. ಆದ್ರೆ ನೀವು ಯಾರಾದ್ರೂ ಇರ್ಲಿ ಬಿಡಿ ಅಂದ್ರಿ. ನಾನು ಸುಮ್ಮನಾಗಿಬಿಟ್ಟೆ."ಎಂದ ದಾಸು.

ಅವರನ್ನು ದಾಟಿ ಮುಂದೆ ಹೋಗಲು ಹೆಜ್ಜೆಯೇಳಲಿಲ್ಲ ಸುಮಳಿಗೆ. ಮಾಧುವಿನ ಕಣ್ಣುಗಳು ಭರ್ತ್ಸನೆಯನ್ನು ಉಗುಳುತ್ತಿದ್ದವು. ದೇವದಾಸ್ ಮುಗುಳುನಗುತ್ತಾ ಮುಂದೆ ಮುಂದೆ ನಡೆದ, ಸುಮ ತಪ್ಪಿತಸ್ಥಳಂತೆ ಹಿಂಬಾಲಿಸಿದಳು.

"ನಿನ್ನ ಫ್ರೆಂಡಿಗೆ ಹೋಟೆಲಿನಲ್ಲಿ ತಿಂಡಿ ತಿನ್ನುವಷ್ಟು ಗುಣವಾಗಿಬಿಡ್ತೇ ಆಗ್ಲೇ?"ಎಂದಳು ಚಂಪ

ಹಾಸ್ಯವಾಗಿ

ಸುಮಳಿಗೆ ಹಾಸ್ಯವೆನಿಸಲಿಲ್ಲ. ತಲೆ ಹೋದಷ್ಟು ಅಪಮಾನವಾದಂತಾಯಿತು ಮಾಧೂ ಏನೂ ಹೇಳಲಿಲಲ್ಲ ಆದರೇನು? ಅವನ ಕಣ್ಣುಗಳು ಸಾಕಲ್ಲ ಕೊಲ್ಲಲು

ಏಕೋ ಇದ್ದಕ್ಕಿದ್ದಂತೆ ಅವಳಿಗೆ ರೇಗಿತು. ಈತ ಯಾರು ತನ್ನನ್ನು ನಿಂದಿಸಲು? ಇವಳು ಯಾರು ತನ್ನನ್ನು ಕೆಣಕಲು? ಎಂಬ ಭಾವನೆ ಹುಟ್ಟಿತು ಸುಮಳಲ್ಲಿ ತಾನೆಲ್ಲಿ ಬೇಕಾದರೂ ಹೋಗುತ್ತಾಳೆ. ಏನು ಬೇಕಾದರೂ ಮಾಡುತ್ತಾಳೆ. ತಾನು ಸ್ವತಂತ್ರಳು. ತನ್ನನ್ನು ಯಾರೂ ಏನೂ ಅನ್ನಬೇಕಿಲ್ಲ ಎನ್ನುವಂತೆ ಸ್ವಲ್ಪ ಗಟ್ಟಿಯಾಗೇ "ದಾಸೂ ಬಂದೆ ನಿಲ್ಲಿ, ಯಾಕಿಷ್ಟು ಆತುರ"ಎಂದು ಬೇಗ ಬೇಗ ಅವನಿಗೆ ಹತ್ತಿರವಾಗಿ ನಡೆದಳು.

ಮಾಧುವಿಗೆ ಅವಳ ರೆಟ್ಟೆ ಹಿಡಿದು ಎಳೆದು ಕುರ್ಚಿಗೆ ಕಟ್ಟಿಹಾಕಿ 'ನೀನು ಮಾಡುತ್ತಿರುವುದು ಸರಿಯೆ, ನಾನಿಲ್ಲಿ ಬೆಂದುಹೋಗುತ್ತಿದ್ದರೆ, ನೀನು ಆ ಕಪ್ಪು ಮುಖದೊಂದಿಗೆ ಸರಸವಾಡುತ್ತಿದ್ದೀಯಲ್ಲ ಇದು ನ್ಯಾಯವೆ'ಎಂದು ಕೇಳಬೇಕೆ ನಿಸಿತು ಆದರೆ ನಾಲಗೆ ಏಳಲಿಲ್ಲ ವೆರಾಂಡದ ಜಾಲರಿಯಿಂದ, ಸ್ಕೂಟರ್ ಹೊರಟಿದ್ದನ್ನೂ, ಅದರ ಹಿಂದಿನ ಸೀಟಿನಲ್ಲಿ ಸುಮಳನ್ನು ಕಂಡು ಮಾಧುವಿನ ಮನಸ್ಸು ಕೆಟ್ಟುಹೋಯಿತು. ಹೃದಯ ಕಲ್ಲಾಯಿತು ಚೇತನ ಜಡ್ಡುಗಟ್ಟಿತು.

ಬಿಲ್ಲು ತೆತ್ತು ಹೊರಬರುತ್ತಿದ್ದಾಗ ಚಂಪ ಕೇಳಿದಳು-"ಆತ ಸುಮಳ ಫ್ರೆಂಡೇನು?"

"ಇರಬಹುದು"ಎಂದು ಚುಟುಕಾಗಿ ಉತ್ತರಿಸಿದ ಮಾಧು ಆ ಉತ್ತರದಲ್ಲಿ 'ನಂಗೇನು ಗೊತ್ತು, ನಾನಿನ್ನೂ ಮೊನ್ನೆ ಬಂದವನು. ಸುಮ ನನಗೆಷ್ಟು ಹೊಸಬಳು ಎಂದು ನಿನಗೆ ಗೊತ್ತಿಲ್ಲವೆ?' ಎನ್ನುವ ಭಾವನೆಯಿತ್ತು.

ಕಾರಿನೊಳಗೆ ಕುಳಿತುಕೊಳ್ಳುತ್ತಾ ಚಂಪ "ಈಗ ಎಲ್ಲಿ ಹೋಗೋಣ?" ಎಂದಳು.

"ನೀನೆಲ್ಲಿಗೆ ಅಂದ್ರೆ ಅಲ್ಲಿಗೆ, ದಿಸ್ ಈಸ್ ಯುವರ್ ಡೇ"ಎಂದ

"ಹೊರಗಡೆ ಹೋಗೋಣ ಅಂದವ್ರು ನೀವೇ, ನಾನಲ್ಲ"

"ಹೊರಗಡೆ ಬೇಡ ಅನ್ನೋದಾದ್ರೆ, ಮನೇಗೇ ಹೋಗ್ಬಿಡೋಣ ನಡಿ"

"ನೋ, ನೋ, ಹೋಗೋಣ ಎಲ್ಲಾದ್ರೂ."

"ಪಿಕ್ಚರಿಗೆ ಹೋಗೋಣವಾ?"

"ಅರೆ, ಪಿಕ್ಚರ್ ಅಂದ್ರೆ ಮೂಗು ಮುರೀತಿದ್ದವ್ರು ಅದೇನಪ್ಪ ಈಗ?"

"ನಿನಗೋಸ್ಕರ ಚಂಪ"ಎಂದ ಮಾಧು ಚಂಪಳ ಮನ ಉಬ್ಬಿತು "ತನಗಾಗಿ" "ತನಗಾಗಿ"ಎಂದು ಕೂಗಿತು ಹೃದಯ ಮಾಧು ತನಗಾಗಿ ಏನಾದರೂ ಮಾಡ ಬಲ್ಲನೆಂಬ ಆ ಒಂದು ಭಾವನೆಯೇ ಅವಳನ್ನು

ಪುಳಕಗೊಳಿಸಿತು.

ಆದರೆ ಮಾಧು ಹೊರಟದ್ದು ಅವಳಿಗೋಸ್ಕರವಲ್ಲ. ಶುದ್ಧ ಸ್ವಾರ್ಥದಿಂದ. ಈಗ ಅವನಿಗೆ ಏನೂ ಬೇಕಿರಲಿಲ್ಲ. ಒಂಟಿಯಾಗಿ ಕಾಲ ಕಳೆಯಬೇಕಿತ್ತು ಅವನು. ಚಿತ್ರಮಂದಿರದಲ್ಲಿ ಕುಳಿತರೆ, ಚಂಪ ಸ್ವಾಭಾವಿಕವಾಗಿ ಅದರಲ್ಲೇ ಮಗ್ನಳಾಗುತ್ತಾಳೆ. ತಾನು ಸುಮ್ಮನೆ ಕಣ್ಣು ಮುಚ್ಚಿ ಏಕಾಂತವಾಗಿರಬಹುದೆಂಬ ಒಂದೇ ಆಸೆಯಿಂದ ಹೊರಟಿದ್ದ.

"ನಾನೇನೋ ರೆಡಿ. ಆದ್ರೆ ಮನೆಯಲ್ಲಿ ಹೇಳ್ಬಿಲ್ವಲ್ಲಾ"-ಎಂದಳು.

"ಈಗ ಹೋಗಿ ಹೇಳೋಣ, ಇನ್ನೂ ಟೈಂ ಇದೆ"ಎಂದು ಚಂಪಳ ಮನೆಯ ಕಡೆ ಕಾರು ತಿರುಗಿಸಿದ.

ಚಂಪಳ ಮನೆಗೆ ಅವರು ಬರುವ ವೇಳೆಗೆ ಗಿರಿರಾಯರು ವೆರಾಂಡದಲ್ಲೇ ಕುಳಿತು ತಮ್ಮ ಗೆಳೆಯರೊಂದಿಗೆ, ಚದುರಂಗವಾಡುತ್ತಿದ್ದವರು ಕಣ್ಣರಳಿಸಿ,

"ಬಾರಯ್ಯಾ ಬಾ, ಮೊನ್ನೇನೆ ಬಂದ್ಯಂತೆ. ಈಗ ಬಿಡುವಾಯ್ತಾ ನಿನಗೆ. ನೋಡಯ್ಯಾ ಹರಿ, ಇವನು ನಮ್ಮ ಅನಂತರಾಯರ ಮಗ ವೇಣುಮಾಧವ್" ಎಂದು ಗೆಳೆಯನಿಗೆ ಹೇಳಿದರು

ನಮಸ್ಕಾರ ಪ್ರತಿನಮಸ್ಕಾರಗಳಾದ ನಂತರ, ಹರಿರಾಯರು "ಗೊತ್ತು ಗೊತ್ತು. ಈತನ್ನ ಕೇಳಿಬಲ್ಲೆ. ನಿನ್ನ ಅಳಿಯ ಅನ್ನು"ಎಂದರು, ವೇಣುವಿನ ಹಿಂದೆಯೇ ಬಂದ ಚಂಪಳನ್ನು ನೋಡಿ.

"ಏನೋ ದೈವಸಂಕಲ್ಪ ನೋಡೋಣ"ಎಂದಂದು ಗಿರಿರಾಯರು ಮಾತಿಗೆ ತೊಡಗುವ ಸೂಚನೆ ಕೊಟ್ಟಾಗ ವೇಣು, ಇನ್ನು ಅವರ ಮಾತಿಗೆ ಫುಲ್‌ಸ್ಟಾಪ್, ಕಾಮಾ, ಒಂದೂ ಇರಲಾರದೆಂದು, ತಾನೇ,

"ಚಂಪನ್ನ ಸಿನಿಮಾಗೆ ಕರಕೊಂಡು ಹೋಗು. ನಿನ್ನೆ ಊರಿನಿಂದ ಬಂದಾಗ್ಲಿಂದ, ನೀನು ಬರಲಿಲ್ಲಾಂತ, ಒಂಟಿ ಕಾಲಲ್ಲಿ ತಪಸ್ಸು ಚಂಪನದು. ಕಡೆಗೆ ಈವತ್ತು ನಿಮ್ಮಮ್ಮ ಬಂದು ಕರಕೊಂಡು ಹೋದಾಗ ಅವಳನ್ನು ನೋಡಬೇಕಿತ್ತು."

ಅಂದರೆ ಅಮ್ಮ ಇಲ್ಲಿಗೆ ಬಂದಿದ್ದರೆ? ಅದೇನು ಅಂತಹ ಆಸಕ್ತಿ ಈ ಅಮ್ಮನಿಗೆ!?

"ಚಂಪ, ಮಾಧೂಗೆ ಏನಾದ್ರೂ...."

"ಈಗ ಏನೂ ಬೇಡ, ಟೈಂ ಇಲ್ಲ" ಎಂದು ಅವನು ಎನ್ನುತ್ತಿದ್ದಾಗಲೇ ಚಂಪ ಹೊರ ಬಂದಳು. ಅವಳು ಮತ್ತೊಮ್ಮೆ ಮೇಕಪ್ ಮಾಡಿಕೊಂಡಸು ಬಂದಿದ್ದಳು, ಸೀರೆಯನ್ನು ಮಾತ್ರ ಬದಲಾಯಿಸಿರಲಿಲ್ಲ. ಅದು ವೇಣು ತಂದುಕೊಟ್ಟ ಸೀರೆಯೆಂದೋ ಏನೋ

ಕಾರು ಸುಮಾರು ದೂರ ಹೋಗುವವರೆಗೂ ಇಬ್ಬರೂ ಮಾತನಾಡಲಿಲ್ಲ. ನಂತರ ಕೇಳಿದಳು ಚಂಪ-"ಯಾವ ಪಿಕ್ಚರಿಗೆ ಹೋಗೋಣ?"

"ನೀನ್ಯಾವುದು ನೋಡಿಲ್ವೋ ಅದಕ್ಕೆ."

"ಅಂದ್ರೆ, ನಾನು ಎಲ್ಲಾ ಚಿತ್ರ ನೋಡ್ತೀನೀಂತ್ಲಾ ನಿಮ್ಮ ಊಹೆ?"

"ಸ್ವಲ್ಪ ಹೆಚ್ಚು ಕಡಿಮೆ" ಎಂದು ನೇರವಾಗಿ ನೋಡುತ್ತಾ, ದಾರಿಗಡ್ಡಲಾಗಿ ಬಂದ ಒಬ್ಬ ಮುದುಕಿಯನ್ನು ತಪ್ಪಿಸಲು ಪಕ್ಕಕ್ಕೆ ಕಾರು ಸರ್ರೆಂದು ತಿರುಗಿಸಿದ. ಚಂಪ ವಾಲಿ ಅವನಿಗೊರಗಿದಳು. ನಾಚುತ್ತಾ ಮತ್ತೆ ಸರಿಯಾಗಿ ಕುಳಿತುಕೊಳ್ಳುತ್ತಾ ಕನ್ನಡ ಚಿತ್ರವೊಂದನ್ನು ಹೆಸರಿಸಿದಳು.

"ಯಾವತ್ತಿನಿಂದ ಕನ್ನಡಿಗಳಾಗಿದ್ದು?"ಎಂದ ಮಾಧು.

"ನಾನು ಯಾವಾಗ್ಲೂ ಕನ್ನಡಿಗಳೇ "

"ಹಾಗಾದ್ರೆ ಇಂಗ್ಲೀಷು, ಹಿಂದಿ ಎಲ್ಲಾ ಮುಗಿದೋಯ್ತು ಅನ್ನು. ಇನ್ನು ತಮಿಳು, ತೆಲುಗು, ಮಲೆಯಾಳಂ ಯಾವತ್ತೋ ನಿನ್ನ ಕೃಪಾದೃಷ್ಟಿಗೆ ಬಿದ್ದು ಪಾವನ ಆಗೋದು"ಹಾಸ್ಯದ ಮಾತೇ ಆಡುತ್ತಿದ್ದರೂ, ರಸ್ತೆಯ ಕಡೆಗೇ ನೋಡುತ್ತಿದ್ದ ವೇಣು

"ಹಾಸ್ಯ ಮಾಡ್ತೀರಾ?"

"ಹಾಸ್ಯ ಅಲ್ಲ, ಕನ್ನಡ ಅಂದ್ರೆ ನೀನೇ ಅದನ್ನು ಭಾರಿಯಾಗಿ ವಿಮರ್ಶಿ ಸ್ತಿದ್ಯಲ್ಲ" ಎಂದು ಅವನು ಮಾತು ಪ್ರಾರಂಭಿಸುತ್ತಿದ್ದಂತೆ, ತನ್ನ ಎಡ ಗೈಯಿಂದ ಅನಾಮತ್ತು ಅವನ ಬಾಯನ್ನೇ ಮುಚ್ಚಿ-

"ಹಾಗೆ ಗಟ್ಟಿಯಾಗಿ ಹೇಳ್ಬೇಡಿ ಆಮೇಲೆ ಕಾರಿನ ಮೇಲೆ ಕಲ್ಲು ಬೀಳುತ್ತೆ" ಎಂದವಳು ಹೇಳುತ್ತಿದ್ದಂತೆಯೇ ಕಾರು ಥಿಯೇಟರನ್ನು ಸಮೀಪಿಸಿತ್ತು

ಅಲ್ಲಿನ ಜನಜಂಗುಳಿ ನೋಡಿ ದಂಗಾದ ವೇಣು ಒಂದು ಚಿತ್ರಕ್ಕೆ ಇಷ್ಟು ಜನವೆ?ಇನ್ನು ಟಿಕೆಟ್ ಸಿಗುವ ಆಸೆಯಿಲ್ಲವೆಂದೆನಿಸಿ, ಹೇಳಿಯೂ ಬಿಟ್ಟ. ಆದರೆ ಇದರಲ್ಲೆಲ್ಲಾ ಪಳಗಿದ ಚಂಪ- "ನೀವು ಒಂದು ನಿಮಿಷ ಇಲ್ಲೇ ಇರಿ, ನಾನು ಟಿಕೆಟ್ ತಂದ್ಬಿಡ್ತೀನಿ ಎಂದು ಕಾರಿನಿಂದ ಇಳಿಯುತ್ತಿದ್ದಾಗ ಅವಳ ರಟ್ಟೆ ಹಿಡಿದು ಎಳೆದು, ಅವಳ ಬ್ಯಾಗನ್ನು ಕಿತ್ತುಕೊಂಡು ತನ್ನ ಪರ್ಸ್ ಅವಳ ಕೈಯಲ್ಲಿ ತುರುಕಿ ಇನ್ನು ಹೋಗು ಎನ್ನುವಂತೆ ನೋಡಿದ. ಚಂಪ ನಾಚಿದಳು, ಸುಖಿಸಿದಳು ನಸುನಗುತ್ತಾ ಹೋಗಿ ಕ್ಯೂನಲ್ಲಿ ಸೇರಿಹೋದಳು

ಅವಳನ್ನೇ ನೋಡುತ್ತಿದ್ದರೂ, ಅವನ ಒಳಕಣ್ಣುಗಳು ದೇವದಾಸನ ಹಿಂದೆ ಸ್ಕೂಟರಿನಲ್ಲಿ ಕುಳಿತಿದ್ದ ಸುಮಳನ್ನೇ ಊಹಿಸುತ್ತಿತ್ತು. ಬಲವಂತವಾಗಿ ತನ್ನ ಭಾವನೆ ತಡೆಯಲು ಹಲ್ಲು ಕಚ್ಚುತ್ತಿದ್ದುದರಿಂದ, ದವಡೆಯ ನರಗಳು ಬಿಗಿಯುತ್ತಿದ್ದುವು. ಅವಳು ಬರುವಷ್ಟರಲ್ಲಿ ಅಮ್ಮನಿಗೆ ಚಿತ್ರಕ್ಕೆ ಬಂದಿರುವುದಾಗಿ ಫೋನ್ ಮಾಡಿ ಬಂದು ಮತ್ತೆ ಕಾರಿನ ಬಳಿ ಬಂದು ಅದನ್ನು ಒರಗಿ ನಿಂತ

ಚಂಪ "ಗಾಟೇ ಗಾಟು ' ಎಂದು ಇಂಗ್ಲೀಷನ್ನು ಕನ್ನಡದಲ್ಲಿ ಹೇಳುತ್ತಾ ಎಗರುತ್ತಾ ಕಾರಿನ ಬಳಿ ಬಂದಳು. 'ಎಂತಹ ಸುಖಿ ಈ ಹುಡುಗಿ' ಎಂದುಕೊಂಡ ಹಾರುವ ಒಂದು ನೊಣವನ್ನು ಕಂಡರೂ ಮಗುವಿನಂತೆ ಎಗರಿ ಕುತೂಹಲ ತೋರುವ ಇವಳು ತನಗೆ ಜೋಡಿಯಾದಾಳೇ ಎನಿಸಿತು ಅವನಿಗೆ.

ಕಾರನ್ನು ಅದರ ಜಾಗದಲ್ಲಿ ಬಿಟ್ಟು ಒಳಹೊಕ್ಕರು,.

ಅವನೆಣಿಸಿದಂತೆಯೇ, ಚಂಪ ಪಕ್ಕದಲ್ಲಿರುವ ಮಾಧುವನ್ನೂ ಮರೆತು ಚಿತ್ರದಲ್ಲಿ ತನ್ಮಯಳಾದಳು. ಮಾಧು ತನ್ನ ಮಾಮೂಲು ಭಂಗಿಯಲ್ಲಿ ಕಾಲು ನೀಳವಾಗಿ ಚಾಚಿ ಜಾರಿದಂತೆ ಕುಳಿತ. ಕೈಗಳನ್ನು ತಲೆಯ ಹಿಂದೆ ಇಟ್ಟುಕೊಳ್ಳಲಾಗಲಿಲ್ಲ ಹಿಂದಿನವರಿಗೆ ಅಡಚಣೆಯಾಗಬಾರದೆಂದು, ಆ ಗಳಿಗೆಯಲ್ಲಿ ಅವನಿಗೆ ತೋಚಿದುದು ಹೆಚ್ಚೇ.

ಚಿತ್ರದ ವಿರಾಮದಲ್ಲಿ "ಹೇಗಿದೆ ಚಿತ್ರ?"ಎಂದಳು ಚಂಪ. "ಚೆನ್ನಾಗಿದೆ" ಎಂದ, ನಿಜಕ್ಕೂ ಅವನು ಅರ್ಥವತ್ತಾಗಿ ನೋಡುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಸ್ವಲ್ಪ ಕುತೂಹಲದಿಂದ ನೋಡಿದರೂ ಮತ್ತೆ ತನ್ನ ಆಲೋಚನೆಯಲ್ಲಿ ಮುಳುಗಿ ಹೋಗುತ್ತಿದ್ದ.

ಅಮ್ಮ ಚಂಪಳ ಮನೆಗಾದರೂ ಹೋಗಿ, ಅವಳನ್ನು ಕರೆತಂದು ತನ್ನ ಮೇಲೆ ತಳ್ಳಬೇಕೇಕೆ? ತನ್ನ ಮನಸ್ಸು ಅಮ್ಮನಿಗೆ ತಿಳಿಯದೆ?ಇಲ್ಲ ಪಾಪ, ಆಕೆಗೆ ತಿಳಿಯದು. ತಾನೆಂದೂ ವಿಮುಖನಾಗಿ ನಡೆದುಕೊಂಡಿಲ್ಲ. ಚಂಪಳಲ್ಲಿ ಏನು ಲೋಪವಿದೆಯೆಂದು ತಾನು ನಿರಾಕರಿಸಬೇಕು? ಪಾದರಸದಂತಹ ಹುಡುಗಿ ಚಂಪ, ಅಂದವಾಗಿದ್ದಾಳೆ. ಪದವೀಧರೆ ಗಿರಿರಾಯರ ಮುದ್ದು ಕುವರಿ. ಇನ್ನೂ ಇಬ್ಬರು ಗಂಡು ಮಕ್ಕಳಿದ್ದರೂ ಕಡೆಯ ಮಗು, ಅಲ್ಲದೆ ಹೆಣ್ಣು ಎಂಬ ಅತಿ ಮಮತೆ ಆ ತಂದೆಗೆ ಹೆಂಡತಿ ಇಲ್ಲದಿದ್ದರೂ ಮಕ್ಕಳನ್ನು ಅಚ್ಚುಕಟ್ಟಾಗಿ ಬೆಳೆಸಿದ್ದಾರೆ ಕೂತುಣ್ಣಲು ಆಸ್ತಿಯಿದೆ. ಈಗ ಅವರ ಒಂದೇ ಧ್ಯೇಯ ಚಂಪಳ ಮದುವೆ. ಆದರೆ ಗಿರಿರಾಯರದೇ ಒಂದು ಧರ. ಅವರು ಯಾವುದನ್ನೂ ಹೆಚ್ಚಾಗಿ ಹಚ್ಚಿಕೊಳ್ಳುವುದಿಲ್ಲವೇನೋ. ಅವರೆಂದೂ ತನ್ನನ್ನು ಚಂಪಳನ್ನು ಮದುವೆ ಆಗ್ತೀಯ ಎಂದಾಗಲೀ, ನಮ್ಮ ಹುಡುಗಿಯನ್ನು ನಿಮ್ಮ ಸೊಸೆಯನ್ನಾಗಿ ಮಾಡಿಕೊಳ್ಳಿ ಎಂದು ಅಮ್ಮ-ಅಣ್ಣನನ್ನಾಗಲೀ ಕೇಳಿದವರಲ್ಲ. ಚಂಪಳನ್ನು 'ನಿನಗೆ ಮಾಧುವಿನಲ್ಲಿ ಆಸಕ್ತಿಯಿದೆಯೇ?'ಎಂದು ಕೇಳಿದ್ದಾರೋ ಇಲ್ಲವೋ ಆದರೂ, ಚಂಪ 'ನನಗೆ ವೇಣು ಇಷ್ಟ'ಅಂದರೆ ಮದುವೆ ಮಾಡಲು ತಯಾರಿರುವಂತಿದೆ, ಬೇಡವೆಂದರೆ ಬಹುಶ: ಬೇಸರವೂ ಪಡಲಾರರು.

ಆದರೆ ಅಮ್ಮ? ಅಮ್ಮನಿಗೆ, ತನ್ನ ಮನೆಗೆ ಸೊಸೆಯಾಗಿ ಬರಲು ಅರ್ಹತೆ ಪಡೆದ ಹೆಣ್ಣೆಂದರೆ ಚಂಪ ಒಬ್ಬಳೇ. ಯಾವ ಮೋಡಿಯಿದೆ ಅವಳಲ್ಲಿ ಎಂದು ಅಮ್ಮನೇ ಹೇಳಬೇಕು. ಇಷ್ಟು ಮಾತ್ರ ನಿಜ. ಅಮ್ಮ ಎಷ್ಟೇ ಒಳ್ಳೆಯವಳಾದರೂ ತಮ್ಮ ದರ್ಜೆ ಬಿಟ್ಟು ಕೆಳಗೆ ಇಳಿಯಲಾರಳು. ಸಹಜವೇ. ಲಕ್ಷಾಧೀಶ್ವರ ಅರಕೆರೆ ಸುಬ್ಬರಾಯರ ಒಬ್ಬಳೇ ಮಗಳಾಗಿ, ಧನಿಕರಾದ ವಕೀಲ ವರದರಾಯರ ಸೊಸೆಯಾಗಿ ಬೆಳೆದ ಅಮ್ಮನಿಗೆ, ತನ್ನ ಸೊಸೆಯೂ ತನ್ನ ಅಂತಸ್ತಿನವಳೇ ಆಗಬೇಕೆಂಬ ಹಂಬಲವಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಬಡವರ ಬವಣೆಗೆ ನೊಂದು, ಮರುಗಿ ಬೇಕಾದ ಸಹಾಯ ಮಾಡಬಲ್ಲಳು ಅಮ್ಮ.

ಆದರೆ ಸಂಬಂಧ ಮಾತ್ರ ಬಯಸುವುದಿಲ್ಲ. ಆಕೆಯ ಆಸೆಯ ಸೊಸೆ ಚಂಪ ಅದನ್ನು ಇಲ್ಲವೆನ್ನಲು ತನಗೆ ಶಕ್ತಿ ಧೈರ್ಯಗಳಾದರೂ ಇವೆಯೆ?

ಅಣ್ಣನ ಮನದ ಆಳ ಮಾತ್ರ ತಿಳಿಯದು ತನಗೆ. ಆತ ಬಡವರಲ್ಲಿ ಬಡವರಾಗಿ ಹೋಗುತ್ತಾರೆ. ಅವರಿಗೆ ಈ ಅಂತಸ್ತುಗಳ ಅರ್ಥವೇ ತಿಳಿಯುವುದಿಲ್ಲ. ಅದೊಂದು ದಿನ, ಭಿಕ್ಷಾರ್ಥವಾಗಿ ಬಂದ ಒಬ್ಬ ಬ್ರಾಹ್ಮಣನನ್ನು ಊಟದ ವೇಳೆಯಲ್ಲಿ ಬಂದನೆಂದು ಪಕ್ಕದಲ್ಲಿ ಎಲೆಹಾಕಿಸಿ ಕುಳ್ಳಿರಿಸಿದಾಗ ಅಮ್ಮ ಮಾಡಿದ ಹಗರಣ ತನಗಿನ್ನೂ ನೆನಪಿದೆ. ಅಣ್ಣನಿಗೆ ಚಂಪಳೇ ಸೊಸೆಯಾಗಬೇಕೆಂಬ ಹಟವೇನೂ ಇರಲಾರದು. ತಾನು ಇಷ್ಟಪಟ್ಟ ಯಾರನ್ನೇ ಆಗಲಿ ಅಣ್ಣ ಒಪ್ಪಿಕೊಳ್ಳಬಹುದು.

ತಾನೇಕೆ ಚಂಪಳನ್ನೇ ಒಪ್ಪಬಾರದು? ಅದರಿಂದ ಎಲ್ಲರಿಗೂ ಸುಖವೆನಿಸು ವುದಾದರೆ? ಆದರೆ ಏಕೋ ಹೆಂಡತಿಯನ್ನಾಗಿ ಸ್ವೀಕರಿಸಲು ಮನಸ್ಸೇ ಆಗದು ಅವಳೆಂದರೆ ತನಗೆ ವಾತ್ಸಲ್ಯವಿದೆ, ವಿಶ್ವಾಸವಿದೆ. ಆದರೆ ಪ್ರೇಮಾನುರಾಗ ಅಂಕುರಿ ಸಲಿಲ್ಲ ಪುಟ್ಟ ಮಗುವನ್ನು ಕಂಡಾಗ ಪ್ರೀತಿಯಿಂದ ಕೆನ್ನೇ ತಟ್ಟುವಂತೆ, ಮಮತೆಯಿಂದ ಮುತ್ತಿಟ್ಟುಕೊಳ್ಳುವಂತೆ ಅನಿಸುತ್ತದೆ ಮಧ್ಯಾಹ್ನ ಅವಳ ಮಗ್ಗುಲಲ್ಲೇ ಕುಳಿತರೂ ತನಗೆ ಏನೂ ಅನಿಸಲಿಲ್ಲ ಅವಳು ಕಾರಿನಲ್ಲಿ ತನ್ನ ಮೇಲೆ ವಾಲಿಬಿದ್ದರೂ ತನ್ನ ಮನ ಚಲಿಸಲಿಲ್ಲ ಒಮ್ಮೆಲೇ ಅವಳು ತನ್ನ ಕೈಯಿಂದ ಬಾಯಿ ಮುಚ್ಚಿದರೂ ಹೃದಯ ಅರಳಲಿಲ್ಲ ಯಾವ ಭಾವನೆಯೂ ಇಲ್ಲದೆ ತಾನು ಅವಳ ರಟ್ಟೆ ಹಿಡಿದೆಳೆದಿದ್ದ ಯಾಕೆ ತನಗೆ ಒಂದು ಅನುಭೂತಿಯೂ ಆಗುವುದಿಲ್ಲ?ಚಂಪಳೊಂದಿಗೆ ಮಾತ್ರವಲ್ಲ ತನಗೆ ಯಾರಮೇಲೂ ಅಂತಹ ಅನುರಾಗ ಮೂಡಲೊಲ್ಲದು. ಮಾಧುರಿಯ ಬಳಿ, ಚಂಪಳ ಒ:ಿ ತೋರಿದಷ್ಟು ಸಲಿಗೆಯನ್ನೂ ಸಹ ತೋರಲಾರೆ.

ಮನದ ಒಳಗಡೆಯಿಂದ, ಅಂತರಾತ್ಮದ ಆಳದಲ್ಲಿ ಯಾರೋ ಮೆಲ್ಲಗೆ ಕದತಟ್ಟಿ 'ನನ್ನ ಬಳಿ' ಎಂದು ಪ್ರಶ್ನಿಸಿದಂತಾಯಿತು ಯಾರದು? ಆ ಧ್ವನಿ ಯಾರದ್ದು?ಚಂಪ, ಮಾಧುರಿಯರ ಎಲ್ಲ ನೆನಪನ್ನು ಪಕ್ಕಕ್ಕೆ ತಳ್ಳಿ, ಆ ಧ್ವನಿಯನ್ನು ಗುರುತಿಸಲು ಪ್ರಯತ್ನಪಟ್ಟ. ಸುಮಾ !!! ಎಂದು ಚೀರಿತು ಹೃದಯ ನಿಟ್ಟುಸಿರು ಬಿಡುತ್ತಾ ತೆರೆ ನೋಡುವ ವೇಳೆಗೆ 'ಜನಗಣಮನ ಕ್ಕಾಗಿ ಎಲ್ಲರೂ ಎದ್ದು ನಿಲ್ಲುತ್ತಿದ್ದರು, ತಾನೂ ಯಾಂತ್ರಿಕವಾಗಿ ಎದ್ದು ನಿಂತ

ಚಿತ್ರದ ಕೊನೆ ದುರಂತವಾದದ್ದು ಅದನ್ನು ನೋಡಿ ನಿಟ್ಟುಸಿರುಬಿಟ್ಟನೆಂದು ಬಗೆದ ಚಂಪ 'ವಾಟ್ ಎ ಟ್ರಾಜಿಡಿ' ಎಂದಳು "ಎಸ್"ಎಂದು ಮತ್ತೊಮ್ಮೆ ನಿಡಿದಾಗಿ ಉಸಿರು ತೆಗೆದುಕೊಂಡ ಹೌದು, ಎಂತಹ ದುರಂತ!ತನಗೆಟುಕುವ ಹೆಣ್ಣು ತನಗೆ ಬೇಡ, ಎಟುಕದ ಸುಮ ತನಗೆ ಬೇಕು, ಬೇಕೇ ಬೇಕು.

ಚಂಪಳನ್ನು ಅವಳ ಮನೆಯಲ್ಲಿ ಬಿಟ್ಟು ಮನೆಗೆ ಹಿಂತಿರುಗಿದಾಗ, ಅಮ್ಮನನ್ನು ಬಿಟ್ಟು ಮಿಕ್ಕೆಲ್ಲರೂ ಮಲಗಿದ್ದರು. ಅಮ್ಮ ಅವನಿಗಾಗಿಯೇ ಕಾದಿದ್ದಂತೆ ಕುಳಿತಿದ್ದರು. ಅವನು ಊಟಕ್ಕಾಗಿ ಕುಳಿತಾಗ

ತೀಕ್ಷ್ಣವಾಗಿ ಅವನ ಕಡೆಗೆ ನೋಡಿದರು. ಸಂತಸದ ಚಿಹ್ನೆಯಾಗಲಿ, ತೃಪ್ತಿಯ ಕುರುಹಾಗಲಿ, ಅವನ ಮುಖದಲ್ಲಿ ಕಾಣಲಿಲ್ಲ. ಚಂಪಳ ಸಾಮೀಪ್ಯದಲ್ಲೂ ಅವನು ಗೆಲುವಾಗಲಾರನೆ ಎಂದು ಸಂಶಯಪಟ್ಟರು ಅವನ ಹೃದಯಾಂತರಾಳದಲ್ಲಿ ಹುದುಗಿದ ನೋವು ಅವರಿಗೆ ತಿಳಿದಿದ್ದೇ. ಇರಲಿ, ಇನ್ನೂ ಬೇಕಾದಷ್ಟು ಸಮಯವಿದೆ ಎಂದು ತಾವೇ ಸಮಾಧಾನ ಮಾಡಿಕೊಂಡರು.

ಊಟದ ಶಾಸ್ತ್ರವನ್ನು ಮಾಡಿ ಮೌನವಾಗಿ ಎದ್ದು ಹೋದ ಮಾಧು ಹಾಸಿಗೆ ಕಂಡೊಡನೆ ಅವನ ಅಸೂಯೆ, ದುಃಖ ಮೇರೆ ಮೀರಿತು. ಅವನ ಹಾಸಿಗೆಯ ಕಡೆ ಸುಮ ಗಮನ ಕೊಟ್ಟಂತಿರಲಿಲ್ಲ. ತಾನೇ ಹೇಗೋ ಹಾಸಿಗೆಯನ್ನು ಸರಿಪಡಿಸಿಕೊಂಡು ಬಿದ್ದುಕೊಳ್ಳುತ್ತ ಹೂದಾನಿಯ ಕಡೆಗೆ ನೋಡಿದ. ಅದರಲ್ಲಿ ಹೂವಿರಲಿಲ್ಲ. ತನ್ನ ಮನಸ್ಸಿನ ಹೂವನ್ನು ತೆಗೆದುಬಿಟ್ಟಂತೆಯೇ ತನ್ನ ಹೂದಾನಿಯಲ್ಲೂ ಹೂ ತೆಗೆದಂತಿದೆ. ಅಸಹಾಯಕತೆ ಕೋಪಕ್ಕೆ ತಿರುಗಿತು. 'ಅವಳು ಮಾಡದಿದ್ದರೆ ನಾಳೆಯಿಂದ ಹೇಳಿ ಮಾಡಿಸಬಲ್ಲೆ. ಏನೆಂದು ತಿಳಿದುಕೊಂಡಿದ್ದಾಳೆ ಇವಳು' ಎಂದು ಹಲ್ಲು ಕಚ್ಚಿದ. ಅವಳಿಗೆ ಬುದ್ಧಿ ಕಲಿಸಬೇಕು ಎಂದು ಅವನ ಆಕ್ರೋಷಿತ ಮನ ಹೇಳಿತು ಆ ದೇವದಾಸನಿಂದ ದೂರ ಕಿತ್ತೊಗೆದುಬಿಟ್ಟರೆ ಆಗ ನೆಟ್ಟಗಾಗುತ್ತಾಳೆ ಎಂದೆಲ್ಲ ಗೊಣಗಿಕೊಳ್ಳುತ್ತಾ ನಿದ್ದೆ ಮಾಡಿದ.

೬

ಸುಮ ವೇಣುವಿನ ಕಣ್ಣಿಗೆ ಬೀಳದಂತೆ ಓಡಾಡಿದಳು ಮಾರನೆಯ ದಿನ. ಅವಳ ದಿನಚರಿಯಲ್ಲಿ ಅವಳು ಅವನ ಕಣ್ಣಿಗೆ ಬೀಳುವ ಸಂಭವವೇ ಇರಲಿಲ್ಲ. ತೋಟದ ಕೆಲಸ ಮುಗಿಸಿ ಅವಳು ಒಳಬಂದಾಗ, ಕಾಫಿ ಕುಡಿದು ಪೇಪರ್ ಓದುತ್ತಿದ್ದ ವೇಣು-"ಸುಮಾ, ಹೋಗಿ ನನ್ನ ಕೋಣೆ ಕಡೆ ಸ್ವಲ್ಪ ಗಮನ ಕೊಡು ಫ್ಲವರ್ ವೇಸಿಗೆ ಒಂದಿಷ್ಟು ಹೊಸ ಹೂ ಇಡು. ಹೇಳ್ಬೇಕೇನು ಇವೆಲ್ಲ?" ಎಂದು ಆಜ್ಞೆ ಮಾಡುವಂತೆ ಕಠಿಣವಾಗಿ ಹೇಳಿದ., ಆ ವೇಳೆಗೆ ಅಲ್ಲಿಗೆ ಬಂದಿದ್ದ ಅಮ್ಮನ ಕಡೆ ನೋಡಿದಳು ಸುಮ 'ಹೋಗು, ಹೇಳಿದಂತೆ ಮಾಡು'ಎಂಬಂತೆ ತಲೆಯಾಡಿಸಿದರು ಆಕೆ. ಎದೆಯ ಮೇಲೆ ಕೈಯಿಟ್ಟುಕೊಂಡು ತೋಟದೊಳಕ್ಕೆ ಓಡಿದಳು. ಅವಳಿಗೆ ಸಂತೋಷ ವಾಯಿತೋ ದುಃಖವಾಯಿತೋ ಹೇಳುವುದು ಕಷ್ಟ.

ಬೆಳಿಗ್ಗೆ ಹೂ ಬಿಡಿಸುವಾಗಲೂ, ಹಾಲಿನಲ್ಲಿದ್ದ ಮೂಲೆಯ ದೊಡ್ಡ ಹೂದಾನಿಗೆ ಗೊಂಚಲು ಗೊಂಚಲು ಹೂಗಳು ಎಲೆಗಳನ್ನು ತಂದು ಜೋಡಿಸಿದಾಗಲೇ ಅವಳ ಧ್ಯಾನ ಮೇಲಿನ ಕೋಣೆಯ ಕಡೆಗೆ ಹೋಗಿತ್ತು. ಆದರೆ ನಿನ್ನೆ ಅಮ್ಮ ಹೇಳಿದ ಮಾತು ಅವಳನ್ನು ತಡೆದಿತ್ತು.

ಸಂಜೆ ದೇವದಾಸನ ಸ್ಕೂಟರಿನ ಮೇಲೆ ಕಬ್ಬನ್ ಪಾರ್ಕಿನಿಂದ ಹೊರಟ ಅವಳಿಗೆ ಅಷ್ಟು ಬೇಗ ಮನೆಗೆ ಹೋಗಿ ಮಾಡುವುದೇನು ಎನಿಸಿ, ಊರ್ಮಿಳೆಯ ಮನೆಗೆ ಹೋದಳು. ತಾನು ಮಾತನಾಡಿದುದೆಲ್ಲಾ

ತಿಳಿಸಿದಳು. ಗೆಳತಿಯ ಹೃದಯಕ್ಕೆ ಸಂತೋಷ ವಾಯಿತು. ಆದರೇನು, ತನ್ನ ಹೃದಯ ಹೆಪ್ಪುಗಟ್ಟಿತ್ತು. ತಾನು ಬಯಸಿ ಹೋಗುವ ಗುಡಿಗೆ ಹಾದಿಯೇ ಸಿಗಲಿಲ್ಲ. ಸಿಗಬಹುದೇನೋ ಎಂದು ನೋಡುವ ವೇಳೆಗೆ ದಾರಿಯಲ್ಲಿ ಪೂಜಾರಿ ಅಡ್ಡ ನಿಂತು ಒಳಬಿಡುವುದಿಲ್ಲವೆಂದ. ತಾನು ನೋಡ ನೋಡುತ್ತಲೇ ಬೇರೆ ಭಕ್ತಳನ್ನು ಹತ್ತಿರವಾಗಿ, ಅತಿ ಹತ್ತಿರವಾಗಿ ದೇವರ ಬಳಿ ನಿಲ್ಲಿಸಿದ. ದೂರದಿಂದ ಕೈಮುಗಿದು ಸರಿದು ನಿಲ್ಲುವ ಸರದಿ ತನ್ನದು. ಆದರೆ ದೇವರಿಗೆ ಈ ಭಕ್ತಳ ಹೃದಯ ತಿಳಿದರೆ'ಎನಿಸಿತು. ಆದರೂ ಪ್ರಯೋಜನವೇನು, ಹಾದಿಯಲ್ಲಿ ಪೂಜಾರಿಯಿದ್ದಾನಲ್ಲ.

ಊರ್ಮಿಳೆಯ ಮನೆಯಿಂದ ಹಿಂತಿರುಗುವಾಗ ಎಷ್ಟು ಹೊತ್ತಾದರೂ ಬಸ್ಸು ಸಿಗಲಿಲ್ಲ. ಈಗ ರಿಕ್ಷಾಗೆ ದಂಡ ತೆರುವ ಮನಸ್ಸಿಲ್ಲ. 'ಇಂಥ ಸಣ್ಣ ವಿಷಯದಲ್ಲೂ ತಾನು ಅದೃಷ್ಟ ಪಡೆದಿಲ್ಲ. ಅಂದಮೇಲೆ ದೊಡ್ಡ ದೊಡ್ಡವು ತನಗೆ ಹೇಗೆ ಸಿಕ್ಕೀತು' ಎಂದುಕೊಂಡಾಗ ದುಃಖವಾಯಿತು. ದೇವರು ಏಕೊ ಕೆಲವರಿಗೆ ಎಲ್ಲಾ ಕೊಡುತ್ತಾನೆ, ಕೆಲವರಿಗೆ ಎಲ್ಲಾ ಕಿತ್ತುಕೊಳ್ಳುತ್ತಾನೆ ಎಂದು ಕೆನ್ನೆಯ ಮೇಲೆ ಹರಿದ ನೀರನ್ನು ಒರಸಿಕೊಂಡಳು.

ನಿಧಾನವಾಗಿ ಮನೆಗೆ ಬಂದು ಕೈಕಾಲು ತೊಳೆದು ಬಟ್ಟೆ ಬದಲಿಸಿದಾಗ, ನಾಗಮ್ಮ ಮೆಲ್ಲಗೆ ಕೋಣೆಗೆ ಬಂದರು. ಅವರು ಹಾಗೆ ಬರುವುದು ಅಪರೂಪ . ಬಂದವರು, ಆತ್ಮೀಯವಾಗಿ "ನಿನ್ನ ಫ್ರೆಂಡ್ ಹುಷಾರಾಗಿದ್ದಾಳಾ?"ಎಂದರು.

ಬೆಚ್ಚಿಬಿದ್ದ ಸುಮ ಸ್ವಲ್ಪ ಸಾವರಿಸಿ "ಹೂಂಮ್ಮ"ಎಂದಳು.

"ನಾನು ಮಧ್ಯಾಹ್ನ ಹಾಗೆಂದದ್ದಕ್ಕೆ ಬೇಜಾರು ಮಾಡ್ಕೊಂಡ್ಯಾ ಸುಮ?"

ಅವಳಿಗೆ ಮರೆತೇ ಹೋಗಿತ್ತು. ಏನಂದಿದ್ದರು ಅವರು? ನೆನಪು ಬಂದು ನಗುತ್ತಾ, "ನೀವೇನೂ ಅನ್ನಲೇ ಇಲ್ವಲ್ಲ?"ಎಂದಳು.

"ಹೋಗ್ಲಿಬಿಡು. ನೀನು ಏನೂ ಮನಸ್ನಲ್ಲಿ ಇಟ್ಕೊಳ್ಳೋ ಹುಡುಗಿ ಅಲ್ಲ ಅಂತ ನನಗ್ಗೊತ್ತು. ನಿಂಗೆ ಒಂದು ವಿಷಯ ಹೇಳ್ಬೇಕು ಅನ್ನಿಸ್ತು, ಬಂದೆ."

'ಹೇಳಿ ಅಮ್ಮ" ಎನ್ನುತ್ತಾ ಬಿಚ್ಚಿ ಹಾಕಿದ್ದ ಸೀರೆಯನ್ನು ಮಡಿಸತೊಡಗಿದಳು.

ನೀನೇನು ಅಂದ್ಕೋಬಾರ್ದು. ನೀನು ಬೆಳೆದ ಹುಡುಗಿ."

"ಅಮ್ಮ, ನನ್ನನ್ನು ನಿಮ್ಮ ಮಗಳ ತರಹ ಅಂತೀರಿ. ಹೇಳೋಕೆ ಇಷ್ಟು ಪೀಠಿಕೆ ಯಾಕೆ? ನೀವೇನು ಹೇಳಿದ್ರೂ ನಾನೇನೂ ಅಂದ್ಕೊಳ್ಳೊಲ್ಲ."

"ಅಂತಹ ದೊಡ್ಡ ವಿಷಯ ಏನೂ ಅಲ್ಲ"ಎಂದು ಸ್ವಲ್ಪ ನಿಧಾನಿಸಿ, "ನೋಡು ಸುಮಾ, ಇಷ್ಟು ದಿನ ಮನೆಯಲ್ಲಿ ಯಾರೂ ಇರಲಿಲ್ಲ. ನೀನು ಎಲ್ಲಂದ್ರೆ ಅಲ್ಲಿ ಓಡಾಡ್ಕೊಂಡಿದ್ದೆ. ಈಗ ಮಾಧು

ಬಂದಿದಾನೆ. ಹುಡುಗು ಬುದ್ಧಿ ಹೇಗಿರುತ್ತೋ ಹೇಳೋದು ಕಷ್ಟ. ನೀನೇನೋ ತುಂಬಾ ಒಳ್ಳೆ ಹುಡುಗಿ. ಆದ್ರೆ ಅವನು ಹೀಗೇ ಅಂತ ಹೇಗೆ ಹೇಳೋದು ನಾಳೆ ಹಚ್ಚು ಕಡಿಮೆ ಆದ್ರೆ ಗತಿಯಿಲ್ಲದ ಹುಡುಗೀಂತ ಮನೇಲ್ಲಿಟ್ಕೊಂಡು ಹೀಗೆ ಮಾಡಿದ್ರು ಅಂತ ನಮಗೂ ಕೆಟ್ಟ ಹೆಸರು. ನಿನ್ನ ಭವಿಷ್ಯಕ್ಕೂ ಆಪತ್ತು. ಅದಕ್ಕೆ ನೀನು...."

"ನನ್ನನ್ನು ಏನು ಮಾಡು ಅಂತೀರಮ್ಮ? ಅಮ್ಮ, ಏನೇ ಆಗಲಿ ಇನ್ನೊಂದು ಆರು ತಿಂಗಳು ನನ್ನನ್ನು ಈ ಮನೆ ಬಿಟ್ಟು ಕಳಿಸ್ಬೇಡಿ. ಇದು ನನ್ನ ಬದುಕಿನ ಪರ್ವಕಾಲ ನಿಮ್ಮೆಲ್ಲರ ಆಶೀರ್ವಾದದಿಂದ ನಾನು ಚೆನ್ನಾಗಿ ಪಾಸು ಮಾಡ್ತೀನಿ. ಆಮೇಲೆ ನೀವು ಇರು ಅಂದ್ರೂ ಹೊರಟುಹೋಗ್ತೀನಿ. ಅಲ್ಲೀತನಕ ಅಮ್ಮ...."ಮೊದಲೇ ನೊಂದ ಮನಸ್ಸು. ಅದರ ಮೇಲೆ ಈ ಪೆಟ್ಟು, ಮುಂದೆ ಮಾತನಾಡಲಾರದೆ ಬಿಕ್ಕಿದಳು.

"ಅಳ್ತಿದೀಯ ಸುಮ? ನಿನ್ನನ್ನು ನಾನೆಲ್ಲೂ ಕಳಿಸೋಲ್ಲ. ಹಾಗೆ ಯಾಕೆ ಊಹಿಸ್ಕೊಂಡು ಅಳ್ತೀಯ? ಹೆಚ್ಚಾಗಿ ಮಾಧು ಎದುರಿಗೆ ಓಡಾಡಬೇಡ ಅವನು ಸ್ನೇಹ ಬಯಸಿದ್ರೂ ದೂರ ನಿಂತುಬಿಡು ಅಂತ ಹೇಳಿದೆ ಅಷ್ಟೆ. ನೀನು ಆರು ತಿಂಗಳಲ್ಲ ಆರು ವರ್ಷವಾದ್ರೂ ನಮ್ಮ ಮನೆಯಲ್ಲೇ ಇರಬಹುದು ಸುಮ"ಎಂದು ಹತ್ತಿರ ಬಂದು ಅವಳನ್ನು ತಮ್ಮ ಕಡೆಗೆ ತಿರುಗಿಸಿಕೊಂಡು ಎದೆಗೆ ಆನಿಸಿಕೊಂಡರು

ಎಷ್ಟು ದಿನದ ದುಃಖವೋ ಕಟ್ಟೆಯೊಡೆದು ಹರಿಯಿತು ಅಳುತ್ತಲೇ ಇದ್ದಳು. ಆಕೆ ಅವಳನ್ನು ಹಾಗೆಯೇ ಹಿಡಿದು ನಿಂತರು ಅವಳಿಷ್ಟು ಅಳಲು ಕಾರಣ? ಒಂದು ವೇಳೆ ಇವಳಾಗಲೇ ಮಾಧುವನ್ನು ಹೃದಯದಲ್ಲಿ ಸ್ಥಾಪಿಸಿ, ದೂರ ನಿಲ್ಲಲು ಅಸಾಧ್ಯವೆಂದು ಪರಿತಪಿಸುತ್ತಿರಬಹುದೆ?

ಸುಮ ಸ್ವಲ್ಪ ಸಮಾಧಾನ ಮಾಡಿಕೊಂಡು ಅವರಿಂದ ದೂರ ಸರಿದು ನಿಂತು-

"ನಾನು ಹೀಗೆ ಹುಚ್ಚಿ ಹಾಗೆ ಅತ್ತದ್ದು ನೋಡಿ ನೀವೇನಂದ್ಕೊಂಡಿರ್ತೀರೊ ಅಮ್ಮ ನನಗೆ ಆಗಾಗ ಹಾಗಾಗುತ್ತೆ. ನನ್ನ ಅಸಹಾಯಕತೆ, ಒಂಟಿತನ, ತಾಯಿ ತಂದೆಯಿಲ್ಲದ್ದು, ಏನೇನೋ ಯೋಚಿಸಿಕೊಂಡು ಅತ್ತುಬಿಡ್ತೀನಿ. ಆದ್ರೆ ಇನ್ನೊಬ್ಬರ ಎದುರಿಗೆ ಅತ್ತದ್ದು ಇವತ್ತೇ. ನಂಗೆ ತುಂಬ ನಾಚಿಕೆ ಆಗ್ತಾ ಇದೆ ...ನಿಮ್ಮೆದುರಿಗೇ ಆದ್ರಿಂದ ಪರವಾಗಿಲ್ಲ, ಅಲ್ವಾಮ್ಮ?"ಎಂದು ನಕ್ಕಳು. ಅಳುಮುಖದಲ್ಲಿನ ನಗೆ, ಮಳೆ ನಿಂತಾಗ ಶೋಭಿಸುವ ವನರಾಜಿಯಂತೆ ಕಂಡಿತು.

"ಈಗ ಸ್ವಲ್ಪ ಹಾಯೆನಿಸುತ್ತೆ ಅಲ್ವಾ?"ಎಂದವರು "ನೀ ಹಾಗೆಲ್ಲಾ ಅಳಬಾರ್ದು. ನಾವೆಲ್ಲಾ ಇಲ್ವಾ ನಿನಗೆ? ಅಣ್ಣನ ಹಾಗೆ ಮಾಧು ಬಂದಿದ್ದಾನೆ ನೀನು ಯಾವುದಕ್ಕೂ ಹೆದರಬೇಕಿಲ್ಲ ಏಳು ಊಟ ಮಾಡುವಿಯಂತೆ"ಎಂದು ಕೋಣೆಯ ಹೊರಗೆ ನಡೆದರು.

"ಅಮ್ಮಾ"ಎಂದು ಮತ್ತೆ ಅವರನ್ನು ಒಳಕ್ಕೆ ಕರೆದು "ನೀವು ಏನೂ ಯೋಚಿಸಬೇಡಿ ಅಮ್ಮ.

ನಾನು ನಿಮಗೇ ಆಗ್಻ಿ, ನಿಮ್ಮ ಮಗನಿಗೇ ಆಗ್ಲಿ ಕೆಟ್ಟ ಹೆಸರು ತರೋ ಹಾಗೆ ನಡೆದುಕೊಳ್ಳೊಲ್ಲ. ನೀವು ಹೇಳಿದ ಹಾಗೆ ದೂರ ಇದ್ದು ಬಿಡ್ತೀನಿ ನನಗೆ ಓದು ಮುಖ್ಯ" ಎಂದು ಆಶ್ವಾಸನೆ ನೀಡಿದಳು.

ಊಟ ಮಾಡಿ ಬಂದು ಮಲಗಿದಾಗ 'ವೇಣೂ.ನಿಮ್ಮ ಮನಸ್ಸು ನನ್ನ ಕಡೆಗಿ ದೇಂತ ಅಮ್ಮಂಗೆ ಗೊತ್ತಾಗಿದೆ ಆದರೆ ನನ್ನ ಮನಸ್ಸು ನಿಮ್ಮನ್ನಾಕ್ರಮಿಸಿದೆ ಅಂತ ನಿಮಗೆ ತಿಳೀಲೇ ಇಲ್ಲ' ಎಂದುಕೊಳ್ಳುತ್ತಾ ಪಕ್ಕಕ್ಕೆ ತಿರುಗಿ ದಿಂಬಿಗೆ ಕೆನ್ನೆ ಆನಿಸಿ, 'ಇನ್ಮೇಲೆ ನಾನು ನಿಮ್ಮ ಎದುರಿಗೆ ಬರೋಲ್ಲ, ನಿಮ್ಮ ಕೋಣೆಗೇ ಕಾಲಿಡೋಲ್ಲ' ಎಂದು ದಿಂಬನ್ನೇ ವೇಣುವನ್ನಾಗಿ ಭಾವಿಸಿ ಕಣ್ಣೀರು ಮಿಡಿದಳು

ಇಂದು ಬೆಳಗ್ಗಿನಿಂದಲೇ ಅಮ್ಮನಿಗೆ ಕೊಟ್ಟ ಮಾತನ್ನು ಉಳಿಸುವ ಕೆಲಸದಲ್ಲಿ ನಿರತಳಾದಳು. ಆದರೆ ಈಗ ವೇಣುವೇ ಕರೆದಾಗ? ಅಮ್ಮ ಅಪ್ಪಣೆ ಕೊಟ್ಟರಲ್ಲ ಅಂದರೆ ಆಕೆಯ ಎದುರಲ್ಲಿ ತಾನು ಅವನನ್ನು ನೋಡಬಹುದು. ಆಕೆಯ ಅಪ್ಪಣೆಯಂತೆ ತಾನು ನಡೆದುಕೊಂಡರೆ ಸಂಕಟವೇ ಇಲ್ಲ ತನ್ನ ಹೃದಯ ಚೋರನನ್ನು ಕಣ್ಣು ತುಂಬಾ ನೋಡಲೂಬಹುದು ಆಕೆಯನ್ನು ಸಂಪ್ರೀತಗೊಳಿಸಲೂಬಹುದು ಎಂದು ಅವಳಿಗೆ ಹರ್ಷವಾಯಿತು

ಕೈ ತುಂಬಾ ಹೂವು ಹಿಡಿದು ಕುಣಿಯುತ್ತಾ ಮಹಡಿಗೆ ಓಡಿ, ಹತ್ತು ನಿಮಿಷದಲ್ಲಿ ಎಳಿದು ಬಂದಳು ಅಲ್ಲಿ ವೇಣುವಿನ ಪಕ್ಕದಲ್ಲಿ ಬಾಲುವನ್ನು ನೋಡಿ, 'ಓ ಪ್ರಾರಬ್ಧ ಹಿಂತಿರುಗಿದೆ'ಎಂದುಕೊಂಡಳು ಅಂದಹಾಗೆ ಅವನು ಬಂದಾಗ ಅವನನ್ನು ಕುರಿತು ತನಗೇಕೆ ಎಚ್ಚರಕೊಡಲಿಲ್ಲ ಅಮ್ಮ? ಕಾರಣ ಸರಳ ಬಾಲುವಿಗೆ ತನ್ನನ್ನು ಕಂಡರೆ ಇಷ್ಟವಿಲ್ಲ. ಬಾಲುವೇನೂ ಅವರ ಮುದ್ದಿನ ಮಗನೂ ಅಲ್ಲ, ಎಂದು ಒಳಗೇ ನಕ್ಕಳು.

ಅಂದಿನಿಂದಲೇ ಕಣ್ಣು ಮುಚ್ಚಾಲೆಯಾಟ ಶುರುವಾಯಿತು

ಸುಮ ತನ್ನ ಕೋಣೆ ಬಿಟ್ಟು ಬರುವುದೇ ನಿಲ್ಲಿಸಿಬಿಟ್ಟಳು ಅಮ್ಮನಾಗಲಿ ಅಣ್ಣನಾಗಲಿ ಕರೆದರ ಮಾತ್ರ ತಲೆ ಇಣುಕಿ ಹಾಕಿ ಮತ್ತೆ ಗುಹೆ ಸೇರಿಬಿಡುತ್ತಿದ್ದಳು ಕೋಣೆ ಬಿಟ್ಟರೆ ಅವಳ ಎರಡನೇ ಕೋಣೆ ತೋಟವಾಗಿತ್ತು.

ವೇಣು ಹಲವೊಮ್ಮೆ ಕರ್ಕಶವಾಗಿ, ಕಠಿಣವಾಗಿ ಕೂಗುತ್ತಿದ್ದ ಅದು ಬಾಲುವಿನ ಕೂಗಿಗಿಂತ ಅವಳನ್ನು ಚುಚ್ಚುತ್ತಿತ್ತು. ಬಾಲು ಹಾಗೆ ಕೂಗಿದಾಗ ಅವಳಿಗೇನೂ ಅನ್ನಿಸುತ್ತಿರಲಿಲ್ಲ. ಆದರೆ ವೇಣುವಿನ ಈ ಚುಚ್ಚು ಮಾತು ಅವಳ ಕಣ್ಣಲ್ಲಿ ನೀರಾಡಿಸುತ್ತಿತ್ತು ಅವನೇಕೆ ತನ್ನೊಡನೆ ಅಷ್ಟು ಕಠಿಣವಾಗಿ ನಡೆದುಕೊಳ್ಳುತ್ತಾನೆಂದು ಅವಳಿಗೇ ಅರ್ಥವಾಗುತ್ತಿರಲಿಲ್ಲ ಇತ್ತೀಚೆಗೆ ಮುಖ ಕೂಡ ಗಂಟಾಗಿಯೇ ಇರುತ್ತಿತ್ತು. ಅಮ್ಮನ ಮಾತಿಗಾಗಿ ತಾನು ಅವನೊಡನೆ ಸಲಿಗೆಯಿಂದಿಲ್ಲದಿರುವುದೇ ದೊಡ್ಡ ಅಪರಾಧವೇ? ಅಷ್ಟಕ್ಕೂ ಅವನಿಗೆ ತಾನು ಏನಾಗಬೇಕು? ಆಪ್ತಳೆ? ಬಂಧುವೆ, ಸ್ನೇಹಿತಳೇ? ಏನೂ ಅಲ್ಲ. ಮನೆಯಲ್ಲಿರುವ

ದಾಸಿಯೆಂದರೂ ನಡೆದೀತು. ಹೌದು, ಹಾಗೆ ಎಣಿಸುವುದರಿಂದಲೇ ಈ ತಾತ್ಸಾರದ ವರ್ತನೆ.

ತನ್ನ- ದೇವದಾಸನ ಕುರಿತಾಗಿ ತಪ್ಪು ಕಲ್ಪನೆ ಮಾಡಿಕೊಂಡು ಪರಿತಪಿಸುತ್ತಿರುವ ಮಾಧುವಿನ ಮನದ ನೋವನ್ನು ಸುಮಳಿಗೆ ಯಾರು ತಿಳಿಯಹೇಳಬೇಕು? ಅವಳ ಧೋರಣೆ ಅವಳಿಗೆ, ಅವನ ತಪ್ಪು ಅಭಿಪ್ರಾಯ ಅವನಿಗೆ ಆ ದೇವದಾಸನಿಗಾಗಿ ಹಲಬುವುದರಿಂದಲೇ ಅವಳು ತನ್ನಿಂದ ವಿಮುಖಳಾಗುತ್ತಿದ್ದಾಳೆಂದು ಮಾಧುವಿನ ಕಲ್ಪನೆ. ತಪ್ಪು ಮಾಡುತ್ತಿದ್ದಾಳೆ. ಆದಕ್ಕೇ ತಲೆ ಮರೆಸಿ ತಿರುಗುತ್ತಿದ್ದಾಳೆ, ಇರಲಿ ಅವಳು ಏನಾದರೆ ತನಗೇನು? ಎಂದು ಉದಾಸೀನ ತೋರಲು ಪ್ರಯತ್ನಿಸುತ್ತಾನೆ ಮಾಧು. ಚಂಪಳ ಹಿಂದೆ ಮುಂದೆ ಸುತ್ತುವ ಈ ಭ್ರಮರಕ್ಕೆ ತಾನು ಮಾತನಾಡದಿದ್ದರೆ ನಷ್ಟವೇನು? ಹಾಗೇಕೆ ಎಗರಾಡಬೇಕು ಎಂದು ಸುಮಳ ಮುನಿಸು.

ಹೀಗೆಯೇ ಹದಿನೈದು ಇಪ್ಪತ್ತು ದಿನಗಳು ಕಳೆದವು. ಮೂರು ನಾಲ್ಕು ದಿನಗಳಿಗೊಮ್ಮೆ ಚಂಪ, ಸಂಜೆ ಹೊತ್ತು ಬರುತ್ತಿದ್ದಳು ಎಲ್ಲರೂ ಸುಖವಾಗಿ ಕಾಲ ಕಳೆಯುತ್ತಿದ್ದರು ಸಾಧಾರಣವಾಗಿ ಬಾಲು ಚಂಪ ಎಲ್ಲಾ ವಿಷಯಗಳಲ್ಲೂ ಏಕೀಭವಿಸುತ್ತಿದ್ದರು. ಚರ್ಚೆ ಮಾಡುತ್ತಿದ್ದರು. ಒಬ್ಬರನ್ನೊಬ್ಬರು ತರ್ಕ ವಿತರ್ಕ ಗಳಿಂದ ಛೇಡಿಸಿಕೊಳ್ಳುತ್ತಿದ್ದರು. ರಾಯರು, ನಾಗಮ್ಮನವರು ಬರಿಯ ವೀಕ್ಷಕರು. ವೇಣು ಯಾರ ಪರವೂ ಮಾತನಾಡದೆ ಅಂತರ್ಮುಖಿಯಾಗುತ್ತಿದ್ದ. ಅಂತಹ ಸಂದರ್ಭಗಳಲ್ಲಿ ಕಾಫಿ ಸರಬರಾಜಿನ ಕೆಲಸ ಸುಮಳದು ಚುಟುಚುಟುಕ್ಕೆನ್ನದೆ ಮಾಡು ತ್ತಿದ್ದಳು ವೇಣು ತೀಕ್ಷ್ಣವಾಗಿ ಅವಳನ್ನೇ ನೋಡುತ್ತಿರುತ್ತಿದ್ದ. ಅವರಿಬ್ಬರ ಕಣ್ಣುಗಳೂ ಸಂಧಿಸುತ್ತಿದ್ದವು ಆದರೆ ಕೂಡಲೆ ಸುಮ ಎಚ್ಚೆತ್ತು ತನ್ನ ಸ್ಥಾನ ತಿಳಿದುಕೊಳ್ಳುತ್ತಿದ್ದಳು ಹಲವೊಮ್ಮೆ ಕಳ್ಳ ನೆವದಲ್ಲಿ ತೋಟಕ್ಕೆ ಓಡಿಹೋಗಿ ಮನಸಾರೆ ಅತ್ತು ಬರುತ್ತಿದ್ದಳು ತನಗೆ ಯಾರೂ ಇಲ್ಲ, ಇದ್ದಾರೆ ಎಂದುಕೊಳ್ಳುವವರೂ ದೂರ, ಬಹಳ ದೂರ, ಎಂಬ ಅನಾಥ ಭಾವನೆ ಬಂದು ಒದ್ದಾಡುತ್ತಿದ್ದಳು. ವೇಣು ಬರುವ ಮುನ್ನ ಎಂದೂ ಹೀಗನ್ನಿಸುತ್ತಿರಲಿಲ್ಲ.

ಇತ್ತೀಚೆಗೆ ಆಗಾಗ ಸುಮಳ ಮುಖ ಅತ್ತು ಕೆಂಪಗಾಗುತ್ತಿರುವುದನ್ನು ಗಮನಿ ಸುತ್ತಿದ್ದ ವೇಣು. ಒಬ್ಬಳೇ ಒಂಟಿಯಾಗಿ ತೋಟದಲ್ಲಿ ನಿಂತು ಬರುತ್ತಿದ್ದದನ್ನೂ ತಿಳಿದಿದ್ದ. ಏನು ತೊಂದರೆಪಡುತ್ತಿದ್ದಾಳೋ, ಆ ದೇವದಾಸ ಇವಳನ್ನು ಯಾವ ಹಿಂಸೆಗೆ ಗುರಿಮಾಡಿದ್ದಾನೋ. ತಾನು ತಿಳಿದು ಪರಿಹಾರ ಹೇಳಿದರೆ! ಎಂದು ಒಮ್ಮೆ ಅನಿಸಿದರೂ, ಪ್ರೇಮಿಗಳ ಮಧ್ಯದಲ್ಲಿ ತಾನೇಕೆ, ತಾವೇ ಸರಿಪಡಿಸಿಕೊಳ್ಳಲಿ ಎಂದು ಸುಮ್ಮನಾಗುತ್ತಿದ್ದ.

ದಿನಗಳುರುಳುತ್ತಿದ್ದುವು. ವೇಣುವಿನಿಂದ ತಪ್ಪಿಸಿ ತಿರುಗುವುದೇ ಸುಮಳಿಗೆ ಮುಖ್ಯ ಕೆಲಸವಾಯಿತು ಕಾಲೇಜಿಗೂ ಅವನು ಹೋಗುವ ಮುನ್ನವೇ ಹೊರಟು ಹೋಗುವುದು. ಹಿಂತಿರುಗುವಾಗ ಅವನು ಮುಂಚೆ ಹೊರಟರೆ ತಾನು ತಡವಾಗಿ ಲೈಬ್ರರಿಯಲ್ಲೋ, ಊರ್ಮಿಳೆಯ ಮನೆಯಲ್ಲೋ ಕಾಲ ಕಳೆದು ರಾತ್ರಿಯಾದ

ನಂತರ ಮನೆಗೆ ಹೋಗುವುದು. ಅವನು ತಡವಾಗಿ ಉಳಿಯುತ್ತಾನೆಂದು ತಿಳಿದ ದಿನ ಬೇಗ ಮನೆಗೆ ಬಂದು ಕೋಣೆಯ ಬಾಗಿಲನ್ನು ಭದ್ರಪಡಿಸಿ ಒಳಗೇ ಓದುವ ನಟನೆ ಮಾಡುತ್ತಿದ್ದಳು

ಈ ಗೊಂದಲದಲ್ಲಿ ಮನದ ಸಂಘರ್ಷಣೆಯಲ್ಲಿ ಓದು ಹಿಂದೆ ಬಿದ್ದಂತೆನಿಸಿ ನಡುಗಿದಳು. ಆದರೂ ತನ್ನ ಜಾಣ್ಮೆ ತನಗೆ ಮೋಸ ಮಾಡಲಾರದೆಂಬ ಅಚಲ ನಂಬಿಕೆ ಕಾಲೇಜಿನಲ್ಲಿ ಪ್ರೊಫೆಸರನ ಬರು-ಹೋಗುವುದನ್ನು ಒಂದೇ ಸಮ ಗಮನವಿಟ್ಟುದ ರಿಂದ, ಊರ್ಮಿಳೆಯ ಹಾಸ್ಯಕ್ಕೂ ಗುರಿಯಾಗಿದ್ದಳು.

'ಏನು ಅವತ್ತು ನಾನು ಹೇಳಿದ್ರೆ ಮಾತು ಹಾರಿಸ್ಬಿಟ್ಟೆ. ಈಗ ನೋಡಿದ್ರೆ ಅಮ್ಮಾವ್ರ ಕಣ್ಣು ಯಾವಾಗ್ಲೂ ಪ್ರೊಫೆಸರ ಮೇಲೇ ಇದ್ಯಲ್ಲಾ?"

"ಊರ್ಮಿ, ನನ್ನ ಕಷ್ಟ ನಿಂಗೇನು ಗೊತ್ತು?"

"ಗೊತ್ತು ಬಿಡೆ, ನಾನೂ ಆ ಸ್ಟೇಜ್ ಮುಗಿಸೀನೇ ಈ ಘಟ್ಟಕ್ಕೆ ಬಂದಿ ರೋದು "

ಸುಮಳಿಗೆ ಸಹನೆ ಉಳಿಯಲಿಲ್ಲ-"ಸುಮ್ಮನಿರು, ಏನೇನೂ ತಿಳೀದೇ ಮಾತಾಡ್ಬೇಡ."

"ತಿಳಿಯೋ ಹಾಗೆ ಹೇಳು ಮತ್ತೆ ಸರಿಯಾಗಿ ಮಾತಾಡ್ತೀನಿ "

ನಿಟ್ಟುಸಿರುಬಿಟ್ಟು ಸುಮ- 'ನೋಡು ಊರ್ಮಿ, ದೊಡ್ಡವರ ಮನೆಯಲ್ಲಿ ಒಂದು ಬಡ ಹುಡುಗಿ, ಅವರಿಗೊಬ್ಬ ಸ್ಫುರದ್ರೂಪಿ ವಿದ್ಯಾವಂತ ಮಗ ಆ ಮಗ ಎಲ್ಲಿ ಈ ಹುಡುಗೀನ ಪ್ರೀತಿಸ್ಬಿಡ್ತಾನೋಂತ ಅವರ ಗಾಬರಿ. ಅದಕ್ಕೆ ಆ ಹುಡುಗೀಗೆ ಅನೇಕ ಕಟ್ಟುಪಾಡುಗಳು "

"ನಿಜವಾ ಸುಮಾ?"

"ಸುಳ್ಳು ಯಾಕೆ ಹೇಳಲಿ? ನೀನೇನೊ ನಿನ್ನ ಪ್ರಪಂಚದಲ್ಲಿ ಹಂಸತೂಲಿಕಾ ತಲ್ಪದಲ್ಲಿ ತೂಗಿಕೊಳ್ತಾ ಇದ್ರೆ ಇವೆಲ್ಲಾ ಯಾಕೆ ಹೇಳೋದೂಂತ ನಾನು ಹೇಳಲಿಲ್ಲ"-ಎಂದು ಎಲ್ಲವನ್ನೂ ವಿವರವಾಗಿ ತಿಳಿಸಿದಳು

"ಇದು ಮಹಾ ಅನ್ಯಾಯ ಸುಮ ಹುಡುಗೀರ್ಗೆ ಬೇರೆ ಇನ್ನೇನೂ ಕೆಲಸವೇ ಇಲ್ಲ. ಹುಡುಗರನ್ನ ಆಕರ್ಷಿಸೋದೊಂದೇ ಕೆಲ್ಸ '-ಎಂದಂದು ಸ್ವಲ್ಪ ಹೊತ್ತು ಸುಮ್ಮನಿದ್ದು-"ಹೀಗೆ ಮಾಡೋವ್ರಿಗೆ ಬುದ್ಧಿ ಬರಬೇಕಾದ್ರೆ ನೀನು ಖಂಡಿತ ಆತನ ಫ್ರೆಂಡ್‌ಷಿಪ್ ಮಾಡ್ಲೇಬೇಕು ನೋಡು "

"ಎಲ್ಲೂ ಬೇಡ ಸದ್ಯ, ನಾನಿರೋ ಪರಿಸ್ಥಿತೀಲಿ-ಇಲ್ಲಾ ನನ್ನ ಪರೀಕ್ಷೆ ಮುಗೀಬೇಕು, ಇಲ್ಲ ಆತನಿಗೆ ಮದ್ವೆ ಆಗ್ಬೇಕು. ಇಲ್ದಿದ್ರೆ ನನಗೆ ಉಳಿಗಾಲವೇ ಇಲ್ಲಾಂತ ಕಾಣುತ್ತೆ "

"ಈ ನಿನ್ನ ಕಣ್ಣು ಮುಚ್ಚಾಲೆ ಆಟದಲ್ಲಿ ಖಂಡಿತ ನೀನು ಸಿಕ್ಕಿಬೀಳ್ತೀಂತ ನಂಗನ್ನಿಸ್ತಿದೆ. ಪ್ರೊಫೆಸರ್ ವೇಣುಮಾಧವ್‌ಗೆ ನೀನೇ ಅರ್ಧಾಂಗಿ ಆಗ್ತಿ ನೋಡ್ತಿರು."

ಸುಮಳಿಗೆ ಈ ಮಾತಿನಿಂದ ಸಂತೋಷವಾಗಲಿಲ್ಲ-"ಅಸಂಬದ್ಧ ಮಾತಾಡ್ತೀ ಊರ್ಮಿಳಾ. ಮಿಕ್ಕವರೆಲ್ಲ ಕಡಲೆಪುರಿ ತಿಂತಿರ್‍ತಾರಾ? ಅಷ್ಟಕ್ಕೂ ಚಂಪ."

ಅವಳ ಮಾತು ಅರ್ಧದಲ್ಲೇ ನಿಂತಿತು. ಎದುರಿಗೆ ದೇವದಾಸ್ ಬರುತ್ತಿದ್ದುದನ್ನು ನೋಡಿ, ತಾನು ಸುಮಳೊಂದಿಗೆ ಮಾತನಾಡುತ್ತಿದ್ದೇನೆಂಬ ಪರಿಜ್ಞಾನವನ್ನೂ ಬಿಟ್ಟು ಓಡಿಬಿಟ್ಟಳು ಊರ್ಮಿಳಾ. ಸುಮಳಿಗೆ ಅವರಿಬ್ಬರ ಪರಸ್ಪರ ಒಲವು ಕಂಡು ಎಲ್ಲಿ ಅವರಿಬ್ಬರೂ ತನ್ನೆದುರಿಗೇ ಆಲಂಗಿಸಿಕೊಂಡು ಬಿಡುವರೋ ಎನಿಸಿತು.

ಒಂದೆರಡು ನಿಮಿಷ ಆತ ಏನೋ ಹೇಳಿದರು. ಊರ್ಮಿ, 'ಸರಿ ಸರಿ' ಎನ್ನುವಂತೆ ತಲೆ ಆಡಿಸಿದಳು. ಮತ್ತೆ ಒಂದು ನಿಮಿಷ ಕಳೆದು ಎಲ್ಲೋ ಹೊರಟುಹೋದಳು. ಒಂಟಿಯಾಗಿ ಸಪ್ಪಗೆ ನಿಂತ ಸುಮಳ ಬಳಿಗೆ ಬರುತ್ತಾ ಆತ-"ನಿಮಗೆ ತುಂಬಾ ಥ್ಯಾಂಕ್ಸ್ ಸುಮ ನನಗೆ ಅವಳ ಡ್ಯಾಡೀನ ಮೀಟ್ ಮಾಡೋಕ್ಕೆ ಇನ್ನೂ ಆಗಿಲ್ಲ, ಇಷ್ಟರಲ್ಲೇ ಮಾಡ್ತೀನಿ. ನೀವು ನಂಗೆಲ್ಲಾ ಹೇಳಿದ್ಮೇಲೆ ಊರ್ಮಿನ್ನ ನಾನಿನ್ನೂ ಚೆನ್ನಾಗಿ ಅರ್ಥ ಮಾಡ್ಕೊಂಡಿದೀನಿ" ಎಂದ.

ಆ ಘಳಿಗೆಯಲ್ಲಿ ಆತನಿಗೆ ಏನು ಹೇಳಬೇಕೋ ತಿಳಿಯದೆ ಸುಮ ತಬ್ಬಿಬ್ಬಾಗಿ ನೋಡುತ್ತಾ ನಿಂತಳು ಒಂದು ನಿಮಿಷ ತಡೆದು ಪೆಚ್ಚು ಪಚ್ಚಾಗಿ ನಗುತ್ತಾ "ನೀವು ಸಂತೋಷವಾಗಿರೋದೇ ನನಗೆ ಬೇಕಾಗಿರೋದು" ಎಂದಳು ಅವಳು ಹಾಗೆ ಹೇಳುವುದಕ್ಕೂ, ವೇಣು ಅಲ್ಲಿಗೆ ಬರುವ ವೇಳೆಗೂ ಸಮನಾಗಬೇಕೆ? ಅದೊಂದು ವಾಕ್ಯವೇ ಅವನಿಗೆ ಕೇಳಿಸಿದ್ದು. ಅವನು ಹುಬ್ಬುಗಂಟು ಹಾಕಿ "ಎಕ್ಸ್‌ಕ್ಯೂಸ್ ಮಿ, ಮಿಸ್ಟರ್ ದೇವದಾಸ್ ಟೈಂ ಟೇಬಲ್ ವಿಷಯ ಸ್ವಲ್ಪ ಮಾತಾಡ್ಬೇಕು ಆಮೇಲೆ ನನ್ನ ರೂಂನಲ್ಲಿ ಮೀಟ್ ಮಾಡಿ. ಐ ಆಮ್ ಸಾರಿ ನಿಮ್ಮ ನಡುವೆ ಬಂದುಬಿಟ್ಟೆ. ಹೀಗೇ ಹೋಗ್ತಿದ್ದೆ, ನೆನಪಾದ್ರಿಂದ ಹೇಳಿದೆ" ಎಂದು ಬಿರುಗಾಳಿಯಂತೆ ನಡೆದುಬಿಟ್ಟ. ಸುಮ ಸ್ವಲ್ಪ ಹೊತ್ತು ಊರ್ಮಿಳೆಗಾಗಿ ಕಾದು ಕ್ಲಾಸಿಗೆ ಹೊರಟುಹೋದಳು.

'ನಿಮ್ಮ ಸಂತೋಷವೇ ನನಗೆ ಬೇಕಾಗಿರೋದು' ಎಂಬ ಸುಮಳ ವಾಕ್ಯ ವೇಣುವಿನ ಮನಸ್ಸನ್ನು ಗೀರಿ ಗಾಯಗೊಳಿಸಿತು ಸುಮ ನೊಂದಂತೆ ಕಾಣುತ್ತಾಳೆ. ಆತ ತೃಪ್ತಿಯಿಂದ ತುಂಬಿ ತುಳುಕುತ್ತಿದ್ದಾನೆ. ಅವಳ ಹೃದಯವನ್ನು ಒದೆದು ಆತ ಬೇರೆಯಾಗಿ ಹೋಗುತ್ತಿದ್ದು ಸುಮ ತ್ಯಾಗಿಯಂತೆ ಹಿಂದೆ ಸರಿಯುತ್ತಿರಬಹುದೆ? ಈ ಊಹೆ ಅವನಿಗೆ ವಿಲಕ್ಷಣ ಸಂತೋಷ ಕೊಟ್ಟಿತು ಓ, ಹಾಗೆಯೇ ನಡೆದ ಪಕ್ಷದಲ್ಲಿ! ಅವನಿಗರಿವಿಲ್ಲದಂತೆಯೇ ಒಳಮನ ಹರ್ಷಿಸಿತು. ರಾಹುವಿನ ಬಾಯಿಂದ ಬಿಡುಗಡೆ ಹೊಂದಿದ ಚಂದ್ರನಾಗುತ್ತಾಳೆ ಸುಮ. ಅವಳನ್ನು ಭೇಟಿ ಮಾಡಿ ಕೇಳಿ ಯಾಕೆ ತಿಳಿದುಕೊಳ್ಳಬಾರದು? ಬೇಡ, ಒಂದು ವೇಳೆ ತನ್ನ ಊಹೆ ತಪ್ಪಾಗಿ, ತಾವು ಮನಸಾರೆ ಒಬ್ಬರನ್ನೊಬ್ಬರು ಪ್ರೀತಿಸುತ್ತೇವೆ ಎಂದು ಅವಳೆಂದುಬಿಟ್ಟರೆ? ಅದನ್ನು ತಾನೆದುರಿಸಲಾರೆ.

'ಇಷ್ಟೆಲ್ಲಾ ತಲೆ ಕೆಡಿಸಿಕೊಳ್ತೀಯಲ್ಲ ಮಾಧು, ಇವರು ಯಾರನ್ನೇ ಪಡೆಯಲಿ, ನೀನು

ಸುಖವಾಗಿರ್ತೀಯ? ಆ ಘಟನೆಯನ್ನು ಮರೆತು ನೀನು ಬದುಕಬಲ್ಲೆಯಾ? ಸುಮ್ಮನೆ ಇಲ್ಲಸಲ್ಲದ ಊಹೆಗಳಿಂದ ಯಾಕೆ ನೊಂದುಕೊಳ್ಳುವುದು? ನಿನ್ನ ಉದ್ಯೋಗ, ಕರ್ತವ್ಯ ಮಾಡಿಕೊಂಡು ನಿರ್ಲಿಪ್ತನಾಗಿರಬಾರದೆ ಎಂದು ಎಚ್ಚರಿಸಿತು ಒಳದನಿ. ನಿರ್ಲಿಪ್ತನಾಗಿರಲು ಚಂಪ ಬಿಡುವುದಿಲ್ಲ. ಅಮ್ಮ ಕೇಳುವುದಿಲ್ಲ, ಛೆ!ಏನೋ ತನ್ನ ಬಾಳು! ವೈಪರೀತ್ಯದ ಪರಮಾವಧಿ.

ಅಂದು ಕಾಲೇಜಿನಿಂದ ಹಿಂದಿರುಗುವಾಗ ಸುಮ ತಾನು ಕೊಟ್ಟ ಸೀರೆ ಉಟ್ಟು ಹಾಲಿನಲ್ಲಿ ನಿಂತು ಅಮ್ಮನೊಂದಿಗೆ ಮಾತನಾಡುತ್ತಿದ್ದಂತಿತ್ತು. ಆನಂದದ ಮಿಂಚು ಹೊಳೆಯಿತು ಇಷ್ಟು ದಿನದ ಮೇಲಾದರೂ ಉಡುವ ಮನಸ್ಸು ಮಾಡಿದಳಲ್ಲಾ ಎಂದು. ಆದರೆ ಆ ಸೀರೆಯಲ್ಲಿ ತನ್ನ ಕಡೆಗೆ ತಿರುಗಿ ನೋಡಿದವಳು ಚಂಪ. ಕಣ್ಣು ಸಂಕುಚಿಸಿ ನೋಡಿದ. ಮಾತನಾಡದೆ ತನ್ನ ಕೋಣೆಗೆ ಹೋದ. ಹಿಂಬಾಲಿಸಿ ಬಂದ ಚಂಪ "ಹೇಗಿದೆ ಸೀರೆ?" ಎಂದಳು.

"ಚೆನ್ನಾಗಿದೆ" ಅವಳತ್ತ ನೋಡದೆಯೇ ನುಡಿದ.

ಸೀರೆಯಲ್ಲಿ ನಾನು?"

"ಚೆನ್ನಾಗಿದ್ದೀ' -ನೀರಸ ಉತ್ತರ

"ನೋಡದೇನೇ ಹೇಳ್ತಿದೀರಿ-ನೋಡಿ ಹೇಳಿ"ಎಂದು ಅವನ ತೋಳು ಹಿಡಿದು ತಿರುಗಿಸ ಹೋದಳು

ಅವನು ಅವಳ ಕೈ ತಳ್ಳಿ- 'ನೀನ್ಯಾಕೆ ಉಟ್ಕೊಂಡೆ ಈ ಸೀರೆ?"-ಎಂದು ನೇರವಾಗಿ ಪ್ರಶ್ನೆ ಹಾಕಿದ

"ಓ ಅದಾ? ಸುಮಳ ಸೀರೆ ನನ್ನ ಹತ್ತಿರ ಹ್ಯಾಗ್ಬಂತೂಂತ್ಲಾ? ನೀವು ನನಗೆ ಅಂತ್ಲೇ ತಂದ್ರಂತೆ. ಇನ್ನು ಅವಳು ಎದುರಿಗೇ ಇದ್ದಾಗ ಕೊಡದಿದ್ರೆ ಚೆನ್ನಾಗಿರೋಲ್ಲಾಂತ ಅಮ್ಮ ಇದನ್ನು ಅವಳಿಗೆ ಕೊಟ್ರಂತೆ. ಅವಳು ಉಡದೇ ಇಟ್ಟಿದ್ಲು. ನನ್ನ ವಸ್ತು ನನಗೆ ಕೊಟ್ಲು "

"ಹೀಗೆಲ್ಲಾ ಯಾರು ಹೇಳಿದ್ರು?" ಎಂದು ಅವಳ ಭುಜ ಹಿಡಿದು ಬಲವಾಗಿ ಅಲುಗಾಡಿಸಿದ.

"ಅಮ್ಮ ತಾನೇ, ನಿಜ ಹೇಳು" ಎಂದು ಗುಡುಗಿದ ಚಂಪ ಹೆದರಿಬಿಟ್ಟಳು

"ಅಲ್ಲ ಅಲ್ಲ, ಸುಮಾನೇ ಈಗ ಸ್ವಲ್ಪ ಮುಂಚೆ ಬಲವಂತ ಮಾಡಿಕೊಟ್ಟಳು ಉಟ್ಕೋಂತ ಬಲವಂತ ಮಾಡಿದ್ಲು., ಉಟ್ಕೊಂಡೆ ನಿಮಗೆ ಇದರಿಂದ ಬೇಜಾರಾಗಿದ್ರೆ ಸಾರಿ, ವೆರಿ ಸಾರಿ."

ವೇಣು ಸಪ್ಪಗಾದ ಸುಮ ತನ್ನ ಮುಖಕ್ಕೆ ತಣ್ಣೀರೆರಚಿದ್ದಳು

"ಇಲ್ಲ ಚಂಪ, ಬೇಜಾರೇನಿಲ್ಲ ಅವಳೇ ಕೊಟ್ಟಿದ್ರೆ ಸರಿ ಅಮ್ಮ ಎಲ್ಲಿ ಹಾಗೆ ಹೇಳಿ ಕೊಡಿಸ್ಬಿಟ್ರೋ, ವೃಥಾ ನೊಂದ್ಕೊಳ್ತಿತ್ತಲ್ಲಾಂತ ಹಾಗೆಂದೆ' ಎಂದು ತನ್ನ ಕಠಿಣ ವರ್ತನೆಗೆ ಸಮಜಾಯಿಷಿ ಹೇಳಿಕೊಂಡು ಚಂಪಳಿಗೆ ಸಮಾಧಾನ ಮಾಡಿದ.

ಅವನ ಆತ್ಮ ಮಾತ್ರ ಕೂಗಿತು- 'ಸುಮ, ಹೀಗ್ಯಾಕೆ ನನ್ನನ್ನು ಕೊಲ್ತೀ?'

ಇತ್ತೀಚೆಗೆ ಸುಮಾ, ಊರ್ಮಿಳಾ, ದೇವದಾಸರನ್ನು ಒಟ್ಟೊಟ್ಟಿಗೆ ಅಲ್ಲಲ್ಲಿ ಕಾಣುತ್ತಿದ್ದ ವೇಣು. ಆಗೊಮ್ಮೆ-ಈಗೊಮ್ಮೆ ಊರ್ಮಿಳಾ-ದೇವದಾಸ್ ಇಬ್ಬರೇ ಕಂಡುಬರುತ್ತಿದ್ದರು. ಅಂದಿನ ಸುಮಳ ನೋವಿನಿಂದ ಹೇಳಿದಂತಿದ್ದ ವಾಕ್ಯ 'ನಿಮ್ಮ ಸಂತೋಷವೇ ನನಗೆ ಬೇಕು'ಎಂಬುದಕ್ಕೂ, ಈಗಿನ ಈ ಇಬ್ಬರ ಓಡಾಟಕ್ಕೂ ಜೋಡಿಸಿದ. ಸುಮಳಿಗಾಗಿ ಪಾಪ ಎನಿಸಿದರೂ ಯಾಕೋ ಇದು ಒಳ್ಳೆಯದಕ್ಕೇ ಎನಿಸಿ ಮುದವಾಯಿತು

ಎಷ್ಟು ಬೇಡವೆಂದರೂ ಅವನ ಹೃದಯ ಸುಮಳ ಕುರಿತು ಚಿಂತನೆಯನ್ನು ಮಾತ್ರ ಬಿಟ್ಟಿರಲಿಲ್ಲ ತಾಯಿಗಾಗಿ ಚಂಪಳ ಜೊತೆಯಲ್ಲಿ ಓಡಾಡುತ್ತಿದ್ದ. ಆದರೂ ಎಂದೂ ಹದ್ದು ಮೀರಿ ವರ್ತಿಸಲಿಲ್ಲ. ಬಂದ ಮಾರನೆಯ ದಿನವೇ ಸುಮಳನ್ನು ಕಂಡು ಆಕರ್ಷಿತನಾದವನಿಗೆ ಗಂಟೆಗಟ್ಟಲೆ ಜೊತೆಯಲ್ಲೇ ಇದ್ದರೂ ಚಂಪಳತ್ತ ಮನ ಚಲಿಸಲಿಲ್ಲ. ಚಂಪ ಅದನ್ನು ತಿಳಿದುಬಿಟ್ಟಿರಬಹುದು ಅವಳೂ ಸಹ ಹಿಂದಿನಂತೆ ಮಾತನಾಡುವುದಿಲ್ಲ ಬಾಲುವಿನೊಂದಿಗೆ ಸರಸವಾಗಿ ಮಾತನಾಡುವಂತೆ ತನ್ನೊಂದಿಗೆ ಆಡುವುದಿಲ್ಲ ಅವರಿಬ್ಬರ ಆಸೆ ಅಭಿರುಚಿಗಳು ಒಂದೇ ಒಬ್ಬರನ್ನೊಬ್ಬರು ಮೆಚ್ಚಿ ಮಾತನಾಡುತ್ತಾರೆ ಆದರೂ ತನಗೆ ಅಸೂಯೆಯೇ ಇಲ್ಲ ಹುಚ್ಚು ಪ್ರಪಂಚ, ಹುಚ್ಚು ಸ್ವಭಾವಗಳು ದೊರೆಯದುದು ಬೇಕೇಬೇಕೆಂಬ ಹಂಬಲ, ಕೈಗೆ ಎಟುಕಿದ್ದರಲ್ಲಿ ಆನಂದವಿಲ್ಲ

ಅದೇ ತಾನೇ ಮನೆಗೆ ಬಂದ ವೇಣುವಿಗೆ ಇಂದು ಬಹಳ ಸುಸ್ತಾಗಿತ್ತು. ಗುರುವಾರ ತನಗೆ ನಾಲ್ಕು ಪಿರಿಯಡ್ಡುಗಳು ಸುಮಳಿಗೆ ತಾನು ತೆಗೆದುಕೊಳ್ಳುತ್ತಿದ್ದುದು ವಾರಕ್ಕೆ ಒಂದೇ ಕ್ಲಾಸು. ಅದು ಗುರುವಾರವೇ ಸುಮ ಒಳ್ಳೆಯ ವಿದ್ಯಾರ್ಥಿನಿ ಅವಳು ತನ್ನ ತರಗತಿಯಲ್ಲಿ ಎದುರಿನ ಡೆಸ್ಕಿನಲ್ಲಿ ಕುಳಿತುಕೊಳ್ಳದೆ ಪಕ್ಕದ ಬೆಂಚಿನಲ್ಲಿ ಅಜ್ಞಾತವಾಗಿ ಕುಳಿತುಕೊಳ್ಳುತ್ತಿದ್ದಳು ಅದು ತನ್ನ ಕಣ್ಣು ತಪ್ಪಿಸಲೆಂದು ಅವನಿಗೆ ಗೊತ್ತು ಆದರೂ ಅವಳು ಅಲ್ಲಿ ಕುಳಿತರೂ ತನಗೇನೋ ಸ್ಫೂರ್ತಿಯಿರುತ್ತಿತ್ತು ಆದರೆ ಇಂದು ಸುಮ ಚಕ್ಕರ್ ಮನಸ್ಸೇ ಇಳಿದುಹೋಯಿತು ದಿನ ಹೇಗೋ ಕಳೆಯಿತು

ಬೇಸರದಿಂದಲೇ ಮನೆಗೆ ಬಂದ ಅಮ್ಮ, ಅಣ್ಣ ಯಾರೂ ಮನೆಯಲ್ಲಿ ಕಾಣಲಿಲ್ಲ. ರಂಗ ಓಡೋಡಿ ಬಂದು, ಕಪ್ಪು ಸಾಸರ್ ಮುಂದೆ ತಂದಿಟ್ಟು ಫ್ಲಾಸ್ಕ್ ನಲ್ಲಿದ್ದ ಕಾಫಿ ಬಗ್ಗಿಸಿ ಕೊಡುತ್ತಾ- "ಅಯ್ಯಾವ್ರು ಆಸ್ಪತ್ರೆಗೆ ಓಗವ್ರೆ. ಅಮ್ಮಾವ್ರು ಓಬ್ಳಯ್ಯನ ಮನೆಗೆ ಓದ್ರು, ಬೇಗ್ನೆ ಬತ್ತೀನಂತಂದ್ರು"ಎಂದ.

"ಬಾಲು?"

"ಚಂಪಮ್ಮಾವ್ರು ಬಂದಿದ್ರು, ಬುಟ್ಟುಬುಟ್ಟು ಬಾ ಅಂತ ಅಮ್ಮಾವ್ರೆ ಕಳ್ಸಿದ್ರು ಬಾಲಪ್ಪಾವ್ರನ್ನ"

"ಸುಮ?"

"ಅವ್ರು ಆಗ್ಲೇ ಬಂದ್ರು. ಮೈಕೆ ಚೆನ್ನಾಗಿಲ್ಲಾಂತ ಸಾಟಿಗೆ ಓದ್ರು."

ಕೈಲಿದ್ದ ಕಾಫಿ ಕುಡಿಯುತ್ತಾ ಏನಾಗಿರಬಹುದು ಇವಳಿಗೆ?ಎಂದು ಯೋಚಿಸಿದ.

"ರಂಗ, ಸುಮ ಯಾವಾಗ ಹೋದ್ಲು?"

"ಇವ್ರೆಲ್ಲಾ ಓದಮ್ಯಾಕೆ ಓದ್ರು."

ಮೈಗೆ ಚೆನ್ನಾಗಿಲ್ಲಾ ಅನ್ನೋದು ಸುಳ್ಳು. ಯಾರೂ ಮನೆಯಲ್ಲಿಲ್ಲದಾಗ ತಾನು ಬಂದರೆ ಎದುರಿಸಬೇಕಾಗುತ್ತದೆಂದು ಈ ದಡ್ಡ ರಂಗನಿಗೆ ಏನೋ ಹೇಳಿ ಹೊರಟು ಹೋಗಿದ್ದಾಳೆ ಎಂದುಕೊಳ್ಳುತ್ತಾ ಕಾಫಿ ಕುಡಿದು ಮುಗಿಸಿದ, ಅದೂ ಒಂದು ಕರ್ತವ್ಯದಂತೆ.

ಯಥಾಪ್ರಕಾರ ಕಾಲು ಚಾಚಿ, ಕೈ ತಲೆಯ ಹಿಂದೆ ಇಟ್ಟು ಜಾರಿ ಕುಳಿತುಕೊಳ್ಳಲು ಹವಣಿಸುತ್ತಿರುವಾಗ, ಅಲ್ಲೇ ಟೀಪಾಯಿಯ ಮೇಲೆ ಎರಡು ನೋಟ್‌ಬುಕ್ಕುಗಳು ಕಂಡವು. ಆ ಮನೆಯಲ್ಲಿ ಸುಮಳನ್ನು ಬಿಟ್ಟು ಮತ್ಯಾರದೂ ಪುಸ್ತಕಗಳಿಲ್ಲದುದರಿಂದ, ಕುತೂಹಲವಾಗಿ ಕೈಗೆತ್ತಿಕೊಂಡು ಪುಟ ತಿರುವಿದ. ಅವಳ ಹಾಗೇ ಉದ್ದುದ್ದವಿರುವ ಅಕ್ಷರಗಳು ಓದಲು ಕಷ್ಟವಾಗದಿದ್ದರೂ, ನೋಡಲು ಅಂದವಿಲ್ಲದ ಬರಹ ಅವಳದು. ಅನ್ಯಮನಸ್ಕನಾಗಿ ಒಂದೊಂದು ಪುಟ ತಿರುವುತ್ತಾ, ಬರಹವಿಲ್ಲದ ಖಾಲಿ ಪುಟಗಳನ್ನೂ ತಿರುಗಿಸಿದ ಆ ಪುಸ್ತಕ ಪಕ್ಕಕ್ಕಿಟ್ಟು ಎರಡನೆಯದನ್ನೂ ಬಿಚ್ಚಿದ. ಅದು ಸುಮಳದಲ್ಲ, ಬರಹ ಬೇರೆ ರೀತಿಯದಾಗಿತ್ತು ಎಲ್ಲೂ ಹೆಸರಿರಲಿಲ್ಲ ಬಹುಶಃ ಊರ್ಮಿಳೆಯದೇ ಇರಬೇಕೆಂದುಕೊಂಡ ಅದರ ಪುಟಗಳನ್ನೂ ಹಾಗಯೇ ತಿರುಗಿಸುತ್ತಾ ಖಾಲಿ ಪೇಜುಗಳನ್ನು ಮುಗಿಸಿ ಕಡೆಯ ಹಾಳೆಗೆ ಬಂದಾಗ ಅವನ ದೃಷ್ಟಿ ಚಲಿಸದೇ ನಿಂತಿತು ಈ ಪೇಜು ಖಾಲಿಯಿರಲಿಲ್ಲ ಅಲ್ಲೊಂದು ಪ್ರೇಮ ಪತ್ರದ ಒಕ್ಕಣೆಯಿತ್ತು, ಸುಮಳ ಬರಹದಲ್ಲಿ ನಿಸ್ಸಂದೇಹವಾಗಿ ಸುಮ ಬರೆದದ್ದೇ ಇದು

*"ಪ್ರಿಯತಮ ಡಿ,*

ನನ್ನ ಮನಸ್ಸಿನಲ್ಲಿ ನಡೆಯುತ್ತಿರುವುದು ನಿಮಗೆ ನಾನು ಹೇಗೆ ಹೇಳಲಿ?ನಾನು ನಿಮ್ಮನ್ನು ಎಷ್ಟು ಪ್ರೀತಿಸ್ತೀನಿ ಅನ್ನೋದನ್ನ ಈ ಕಾಗದದಲ್ಲಿ ಬರೆಯೋಕೆ ಸಾಧ್ಯಾನಾ? ನೀವು ಇತ್ತೀಚೆಗೆ ನನ್ನನ್ನು ಬಹಳ ಅಪಾರ್ಥ ಮಾಡ್ಕೋತಾ ಇದೀರಿ ಈ ಪತ್ರದ ಮೂಲಕ ಬೇಡ್ಕೋತೀನಿ ನನ್ನನ್ನು ಅರ್ಥ ಮಾಡ್ಕೊಳ್ಳಿ ದಾಸೂ, ನಿಮ್ಮನ್ನೇ ನಂಬ್ಕೊಂಡಿರೋಳು ನಾನು ನೀವು ಕೈ ಬಿಡಬೇಡಿ ಈ ಸಮಯದಲ್ಲಿ ನನಗೆ ಸಹಾಯ ಮಾಡೋವ್ರು ಯಾರೂ ಇಲ್ಲ ನನ್ನ ಗೆಳತಿ ಏನೋ ಎಲ್ಲಾ ಸರಿಹೋಗುತ್ತೆ ಅಂತ ಹಾರೈಸ್ತಾಳೆ ಆದ್ರೆ ನಿಮ್ಮ ತಾತ್ಸಾರ ನೋಡಿದ್ರೆ ನನಗೆ ಪ್ರಾಣ ಕಳಕೊಳ್ಳೋಷ್ಟು ದುಃಖವಾಗುತ್ತೆ ಸ್ವಲ್ಪ ಆಲೋಚನೆ ಮಾಡಿ ನೋಡಿ. ನನಗೆ ಮತ್ತೆ ಒಂದೆರಡು ಅವಕಾಶ ಕೊಡ್ತೀರೀಂತ ನನ್ನ ದೃಢವಾದ ನಂಬಿಕೆ. ಅದನ್ನು ಹಾಳು ಮಾಡ್ಬೇಡಿ.

ಇತಿ ನಿಮ್ಮ ಒಲವಿನ

( )"

ಕೆಳಗೆ ರುಜುವಿರಲಿಲ್ಲ. ಎರಡೆರಡು ಬಾರಿ ಓದಿದ ವೇಣು ಆ ಪತ್ರವನ್ನು. ಇದರಿಂದಾಗಿಯೇ ಆ ಆಳು, ಆ ಮೌನ ಸುಮಳದು ಎಂಬುವುದು ಕನ್ನಡಿಯಂತೆ ಸ್ಪಷ್ಟ. ಅವನು ಸುಮಳನ್ನು ತಪ್ಪು ತಿಳಿದು ತಾತ್ಸಾರ ಮಾಡುತ್ತಿದ್ದಾನೆ ಎನ್ನುವುದಕ್ಕೆ ಮತ್ತೆ ಯಾವ ರುಜುವಾತು ಬೇಕು? ಸುಮಳ ಗೋಗರೆತ ಮಾತ್ರ ಸಹಿಸದಾಯಿತು.

ಮೊದಲೇ ಮುದುಡಿದ್ದ ಮನ ಪಾತಾಳಕ್ಕಿಳಿಯಿತು. ತನ್ನ ಬದುಕಿನ ವೀಣೆಯ ತಂತಿ ಒಳ್ಳೆಯದಿದ್ದಂತಿಲ್ಲ. ಎಲ್ಲೋ ಅಪಶ್ರುತಿ ನುಡಿಯುತ್ತಿದೆ-ಎಂದು ನಿಟ್ಟುಸಿರು ಬಿಟ್ಟವನು ಏನೋ ತೋಚಿದಂತೆ, ಆ ಪುಟವನ್ನೇ ಹರಿದು ಚಿಕ್ಕದಾಗಿ ಮಡಿಸಿ, ತನ್ನ ಪರ್ಸಿನಲ್ಲಿ ತುರುಕಿ ಇಟ್ಟುಕೊಂಡ ಮತ್ತೆ ಕೈ ತಲೆಯ ಮೇಲೆ ಕಟ್ಟಿ ಸೋಫಾಗೆ ಒರಗಿದ ಆಯಾಸದಿಂದ ಬಳಲಿದ್ದ ದೇಹ, ಮನ ಎಷ್ಟೇ ನೀರವವಾಗಿ ರೋದಿಸು ತ್ತಿದ್ದರೂ, ನಿದ್ರಾದೇವಿಯನ್ನು ಆಲಂಗಿಸಿತು

* * *

ಮಳೆ ಧಾರಾಕಾರವಾಗಿ ಸುರಿಯುತ್ತಿತ್ತು ಕಾಲೇಜಿನಿಂದ ಮನೆ ಸೇರುವುದು ಹೇಗೆಂದು ಎಲ್ಲರಿಗೂ ಯೋಚನೆ ಸ್ವಲ್ಪ ನಿಂತಂತಾದಾಗ ಊರ್ಮಿಳಾ ದೇವದಾಸ ನೊಂದಿಗೆ ಸ್ಕೂಟರಿನಲ್ಲಿ ಹೊರಟುಹೋಗಿದ್ದಳು ದಿಕ್ಕೇ ತೋಚದ ಸುಮ ತಲೆಯ ಮೇಲೆ ಸೆರಗು ಹೊದೆದು ಧುಡುಧುಡು ಓಡಿ ಲೈಬ್ರರಿ ಸೇರಿದಳು ಮನೆಗೆ ಹೋಗಿ ಮಾಡುವುದಾದರೂ ಏನು? ಎಷ್ಟೇ ಹೊತ್ತಾಗಲಿ, ಮಳೆ ಕಡಿಮೆಯಾಗುವವರೆಗೆ ಲೈಬ್ರರಿಯಲ್ಲಿ ಓದುತ್ತಿದ್ದು ಹೋಗುವುದು ಎಂದು ನಿಶ್ಚಯಿಸಿದಳು.

ಆ ಹತ್ತು ಹೆಜ್ಜೆ ನಡೆಯುವುದರಲ್ಲೇ ನೆನೆದಿದ್ದ ಅವಳು ಮುಖ, ಮೈ ಒರಸಿಕೊಳ್ಳುತ್ತಿದ್ದಂತೆಯೇ ಲೈಬ್ರರಿಯ ಜವಾನ ಬಂದು "ಸಾಹೇಬ್ರು ಕರೀತಿದಾರೆ"ಎಂದ. ಲೈಬ್ರೇರಿಯನ್ನಿಗೆ ತನ್ನ ಬಳಿ ಏನು ಕೆಲಸ ಅಂದುಕೊಳ್ಳುತ್ತಲೇ ಅವನನ್ನು ಹಿಂಬಾಲಿಸಿದವಳು ಬಾಗಿಲ ಬಳಿಗೆ ಬರಬೇಕಾಯ್ತು ಕರೆದವರು ಲೈಬ್ರೇರಿ ಯನ್ನಲ್ಲ, ಬಾಗಿಲ ಬಳಿ ಕಾರಿನಲ್ಲಿ ವೇಣುಮಾಧವ್

'ಬಾ' ಎನ್ನುವಂತೆ ಕೈಬೀಸಿ ಕರೆದ ಡ್ರೈವರ್ ಸೀಟಿನಲ್ಲಿದ್ದ ಮಾಧವ್ ಮತ್ತೆ ತಲೆಯ ಮೇಲೆ ಸೆರಗು ಹೊದೆದು ಕಾರಿನ ಬಳಿ ಹೋದಳು.

' ಇನ್ನು ಈ ಮಳೆ ನಿಲ್ಲುತ್ತೋ, ಇಲ್ವೋ. ಬಾ ಮನೆಗೆ ಹೋಗೋಣ."

"ಇಲ್ಲ, ನೀವು ಹೋಗಿ, ನಂಗೆ ಲೈಬ್ರರಿಯಲ್ಲಿ ಕೆಲಸ ಇದೆ "

"ಆ ಕೆಲಸ ಏನೋ ಮನೆಯಲ್ಲೇ ಮಾಡೋಣ ಬಾ."

ಹೇಳಿದಷ್ಟು ಕೇಳು ಎನ್ನುವಂತಿತ್ತು ಅವನ ಮುಖ, ಮಾತು. ತನ್ನ ಪಕ್ಕದ ಸೀಟಿನ ಬಾಗಿಲು ತೆರೆಯುತ್ತಾ ಕರೆದಿದ್ದ. ಮರುಮಾತನಾಡದೆ ಹತ್ತಿ ಕುಳಿತಳು. ಚಪ್ಪಲಿಗಿದ್ದ ಕೆಸರೆಲ್ಲಾ ಕಾರಿನ ಕಾರ್ಪೆಟ್ಟಿಗೆ

ಬಳಿದಾಗ, ಅವಳಿಗೆ ಸಂಕೋಚವೆನಿಸಿ "ಕಾರೆಲ್ಲಾ ಕೆಸರಾಯಿತು. ನನ್ನಿಂದ"ಎಂದಳು.

"ಕೆಲವು ಸಲ ಮನಸ್ಸುಗಳೇ ಕೆಸರಾಗಿಹೋಗುತ್ತೆ. ಕಾರಾದರೆ ಏನಾಯ್ತೀಗ? ತೊಳೆದ್ರೆ ಹೋಗುತ್ತೆ"ಎಂದು ಕಾರು ಸ್ಟಾರ್ಟ್ ಮಾಡಿದ. ಅವನ ಮಾತಿನ ಅಂತರಾರ್ಥ ಅವಳಿಗೆ ಹೊಳೆಯಲಿಲ್ಲ. ಅವನು ಗಂಭೀರ ಮುಖದಿಂದ ನುಡಿದಿದ್ದ. ಆ ಮಾತಿನಲ್ಲಿ ಹಾಸ್ಯದ ಛಾಯೆಯೂ ಇರಲಿಲ್ಲ.

ಓರೆನೋಟದಿಂದ ಅವನ ಕಡೆ ನೋಡಿದಳು. ಅದೇ ಸಮಯಕ್ಕೆ ಅವನೂ ಎಡಕ್ಕೆ ತಿರುಗಿದುದರಿಂದ ಅವನ ತೀಕ್ಷ್ಣ ನೋಟದಲ್ಲಿ ಅವಳ ದೃಷ್ಟಿ ಬೆರೆಯಿತು. ಅವಳು ದೃಷ್ಟಿ ತೆಗೆಯುವ ಮೊದಲೇ ಅವನು ಸರ್ರೆಂದು ತಿರುಗಿ ರಸ್ತೆಯತ್ತ ನೋಡತೊಡಗಿದ.

ಪಕ್ಕದಿಂದ ನೋಡಿದ ಸುಮಳಿಗೆ ಅವನ ಎಡ ಪಾರ್ಶ್ವ ಮಾತ್ರ ಕಾಣುತ್ತಿತ್ತು. ದುಂಡಗಿದ್ದ ಕೆನ್ನೆಗಳು ಕೆಂಪಾಗಿದ್ದುವು. ಅದರ ಮೇಲೆ ಕಂಡೂ ಕಾಣದಂತೆ ಕೂದಲ ಛಾಯೆ ಕೆನ್ನೆಯಗಲಕ್ಕೂ ಹರಡಿ ಒಂದು ವಿಧವಾದ ಶೋಭೆ ತಂದಿತ್ತು. ನೀಳವಾದ ಮೂಗು ತುದಿಯಲ್ಲಿ ಸ್ವಲ್ಪ ಬಾಗಿತ್ತು. ಹಾಗೆ ಬಾಗಿದರೆ ಅದೃಷ್ಟಶಾಲಿಗಳು ಎನ್ನುತ್ತಾರೆ. ಹೌದು, ಇವನ ಅದೃಷ್ಟಕ್ಕೆ ಏನು ಕಡಿಮೆಯಾಗಿದೆ? ಕೋಟಿನಿಂದ ಮುಚ್ಚಿದ ತೋಳುಗಳ ತುದಿಯಲ್ಲಿ ಕೆಂಪಗೆ ಕಾಣುತ್ತಿದ್ದ ಕೈ ಮತ್ತು ಬೆರಳುಗಳು ಕಾರಿನ ಸ್ಟೀರಿಂಗನ್ನು ಹಗುರವಾಗಿ ಹಿಡಿದು ಚಾಕಚಕ್ಯದಿಂದ ಕೆಲಸ ಮಾಡುತ್ತಿದ್ದವು.

ಮಳೆ ಜೋರಾಗಿ ಮುಂದಿನ ಗಾಜಿಗೆ ಬಡಿಯುತ್ತಿತ್ತು. ವೈಪರ್‌ಗಳು ತಮ್ಮ ಕೆಲಸವನ್ನು ಪ್ರಾರಂಭಿಸಿದವು. ವೇಣು ಒಳಗಿನಿಂದ ಒಂದು ಬಟ್ಟೆ ತೆಗೆದು ಎಡಗೈಯಿಂದ ಗಾಜನ್ನು ಒಳಗಡೆಯಿಂದಲೂ ಒರೆಸುತ್ತಿದ್ದ. ಅಷ್ಟಿದ್ದರೂ ರಸ್ತೆ ಸರಿಯಾಗಿ ಕಾಣದಷ್ಟು ಮಳೆ.

"ಇಲ್ಲಿ ಕೊಡಿ ಆ ಬಟ್ಟೆ, ನಾನು ಒರೆಸ್ತೀನಿ"- ಸುಮ ಸಹಾಯ ಮಾಡುವಂತೆ ಹೇಳಿದಳು.

"ಸದ್ಯ!ಕಾರಲ್ಲಿ ಕೂತ್ಕೊಳ್ಳೋ ಕೃಪೆ ಮಾಡಿದ್ಯಲ್ಲಾ, ಸಾಕು, ಥ್ಯಾಂಕ್ಸ್"ಎಂದು ವ್ಯಂಗ್ಯವಾಗಿ ನುಡಿದನೇ ಹೊರತು, ಒರೆಸುವ ಬಟ್ಟೆಯನ್ನೇನೂ ಅವಳಿಗೆ ಕೊಡಲಿಲ್ಲ. ಸುಮಳಿಗೆ ಏನೂ ಮಾಡಲು ತೋರದೆ ಕಿಟಕಿಯಿಂದ ಹೊರಗಡೆ ನೋಡತೊಡಗಿದಳು. ಕಾರು ಮನೆಯ ಕಡೆ ಹೋಗುತ್ತಿರಲಿಲ್ಲ.

"ಇದೇನು ಈ ಕಡೆ ಬರ್ತಿದೀರಿ"-ಎಂದು ಆಶ್ಚರ್ಯದಿಂದ ಕೇಳಿದಳು.

"ದಾರಿ ತಪ್ಪಿದೆ ಅಂದ್ಕೊಂಡ್ಯಾ? ಅಥವಾ ನಿನ್ನ ಎಲ್ಲೋ ಕರ್ಕೊಂಡ್ಹೋಗ್ತಿದೀನಿ ಅಂದ್ಕೊಂಡ್ಯಾ? ಯೋಚನೆ ಮಾಡ್ಬೇಡ. ಹುಷಾರಾಗಿ ಮನೆ ಸೇರಿಸ್ತೀನಿ"-ಎಂದ ಖಾರವಾಗಿ.

ಏನಾಗಿದೆ ಇವನಿಗೆ ಈ ದಿನ? ಮಾತಿಗೊಮ್ಮೆ ವ್ಯಂಗ್ಯ, ಮಾತಾಡದಿದ್ದರೇನೇ ಚೆನ್ನು ಎನ್ನಿಸಿತು.

"ಇಲ್ಲೆ ನನಗೊಂದು ನಿಮಿಷ ಕೆಲಸ ಇದೆ. ಆಕ್ಷೇಪಣೆ ಏನು ಇಲ್ಲ ತಾನೆ?"ಎಂದು ಮತ್ತೆ ದನಿಗೂಡಿಸಿದ. ತನ್ನ ಆಕ್ಷೇಪಣೆಗೆ ಮಹಾ ಗಮನ ಕೊಡುವಂತೆ.

ಇಲ್ಲವೆನ್ನುವಂತೆ ತಲೆಯಾಡಿಸಿದಳು.

"ತಲೆ ಆಡಿಸಿದರೆ? ನಾನು ನಿನ್ನ ತಲೆ ಎಲ್ಲಿ ನೋಡ್ತಾ ಇರಲಿ, ರಸ್ತೆ ನೋಡ್ಬೇಕು ನಾನು"ಎಂದ.

'ಈಗ ಹಾಗಾದ್ರೆ ನೋಡಿದ್ರಿ?' ಎನ್ನಬೇಕೆನಿಸಿತು, ಅವಳಿಗೆ. ಆದರೆ ಅವಳ ಮನ ಅವನ ಮಾತು, ವರ್ತನೆಯಿಂದ ಬೆಪ್ಪಾಗಿ ಮುದುರಿತ್ತು.

ಇಬ್ಬರೂ ಮೌನವಾಗಿಯೇ ಹೋಗುತ್ತಿದ್ದಾಗ, ಅವಳಿಗೆ ಸ್ವಲ್ಪ ಉಸಿರಾಡುವಂತಾಯಿತು. ಕಾರು ಒಂದು ಅಂಗಡಿಯ ಮುಂದೆ ನಿಂತಿತು. ಸರ್‍ರೆಂದು ಇಳಿದುಹೋದ. ಕಾರಿಗೆ ಬೇಕಿದ್ದ ಯಾವುದೋ ಸಾಮಾನನ್ನು ಮೊದಲೇ ಏರ್ಪಾಟು ಮಾಡಿದ್ದನೇನೋ, ಕೈಯಲ್ಲಿ ಹಿಡಿದು ಹೇಳಿದಂತೆಯೇ ಒಂದೇ ನಿಮಿಷದಲ್ಲಿ ಹಿಂದಿರುಗಿದ.

"ಅಮ್ಮಾವ್ರಿಗೆ ಏನೂ ತೊಂದರೆ ಆಗಲಿಲ್ಲ ತಾನೆ?" ಎಂದ ನಗುತ್ತಾ. ಆ ವ್ಯಂಗ್ಯ ಖಾರ ಮಾಯವಾಗಿತ್ತು. ಆ ನಗು ಎಷ್ಟು ಮೋಹಕ!ದಪ್ಪನೆಯ ಕರಿಯ ಹುಬ್ಬು, ಆ ಹೊಳಪು ಕಣ್ಣುಗಳ ಮೇಲೆ ಕೋಟೆಯಂತೆ ಕುಳಿತಿತ್ತು. ಅವನು ನಕ್ಕಾಗ ಅವನ ಮುಖದ ಕಣಕಣವೂ ವಿಸ್ತಾರಿತವಾಗಿತ್ತು

"ಹಾಗ್ಯಾಕಂತೀರಿ"ಎಂದಳು ದನಿ ತಗ್ಗಿಸಿ, ಮಿದುವಾಗಿ.

"ಅಷ್ಟೇ. ಈಗ ನಾನು ಡ್ರೈವರ್, ನೀನೇ ಅಮ್ಮಾವ್ರು"ಎನ್ನುತ್ತಾ ಒಳಗೆ ಹತ್ತಿ ಕುಳಿತ.

ಮಳೆ ಸ್ವಲ್ಪ ಕಡಿಮೆಯಾಗಿತ್ತು. ಮಾಧುವಿನ ಕೋಟಿನ ಮೇಲೆ ಸಣ್ಣ ಸಣ್ಣ ಮುತ್ತುಗಳಾಗಿ ಕುಳಿತ ಹನಿಗಳನ್ನೇ, ತದೇಕವಾಗಿ ನೋಡುತ್ತಿದ್ದಳು ಸುಮ.

"ಪರೀಕ್ಷೆಗೆ ಹೇಗೆ ಓದುತ್ತಿದ್ದೀಯ ಸುಮ? ಇನ್ನು ನಾಲ್ಕೇ ತಿಂಗಳಿರೋದು."

"ಚೆನ್ನಾಗಿ ಓದುತ್ತಿದ್ದೀನಿ."

"ಇತ್ತೀಚೆಗೆ ನೀನು ಕ್ಲಾಸುಗಳಿಗೆ ಸರಿಯಾಗಿ ಹೋಗೋಲ್ಲವಂತಲ್ಲ"ಎಂದ.

ಗಾಬರಿಯಾಗಿ ಸುಮ "ಯಾರು ಹೇಳಿದ್ರು ಹಾಗೇಂತ?"

"ಗಾಬರಿ ಯಾಕೆ? ನಿನ್ನ ಟೀಚರ್ರೇ ಹೇಳಿದ್ರು. ಮುಖ್ಯವಾಗಿ ಸತ್ಯನ್."

"ನೋ, ನೋ. ಹಾಗ್ಯಾಕೆ ಸುಳ್ಳು ಹೇಳಿದ್ರು?ಅವರ ಕ್ಲಾಸಂತೂ ಒಂದೂ ಮಿಸ್ ಮಾಡಿಲ್ಲ.'

"ಮೊನ್ನೆ ದಿನ ನನ್ನ ಕ್ಲಾಸು?" ಇದಕ್ಕೆ ಸುಮಳಿಂದ ಉತ್ತರವಿಲ್ಲ.

"ಅಂತೂ ಕ್ಲಾಸು ತಪ್ಪಿಸ್ತಾ ಇದ್ದೀ ಅನ್ನೋದು ಪ್ರೂವಾಯ್ತಲ್ಲ."

"ನಾನು ಯಾವ ಕ್ಲಾಸೂ ತಪ್ಪಿಸೋಲ್ಲ. ಅಷ್ಟಕ್ಕೂ ಮೊನ್ನೆ ದಿನ...."

ಅವಳ ಮಾತನ್ನು ಕೇಳಿಸಿಕೊಳ್ಳದೆಯೇ-"ಮನುಷ್ಯರನ್ನು ಮಾತ್ರಾ ತಪ್ಪಿಸಿ ತಿರುಗಾಡ್ತಿ, ಹೌದಾ?" ಎಂದು ಎಡಕ್ಕೆ ತಿರುಗಿದ ಉತ್ತರಕ್ಕಾಗಿ. ಅವಳು ನಾಚಿ ತಲೆ ತಗ್ಗಿಸಿದಳು.

ವೇಣು, ಮೆಲ್ಲಗೆ ಅವಳ ತೊಡೆಯ ಮೇಲಿದ್ದ ಬಲಗೈ ಮೇಲೆ ತನ್ನ ಎಡಗೈ ಇಟ್ಟ. ಆ ಸ್ಪರ್ಶಕ್ಕೆ ಅವಳ ದೇಹ ನಡುಗಿತು.

"ನನ್ನನ್ನು ತಪ್ಪಿಸ್ಕೊಂಡು ತಿರುಗಾಡೋಕ್ಕೆ ಕಾರಣ ಕೇಳಬಹುದಾ ಸುಮ?"

ಅವಳಿಗೆ ಭಯವಾಯಿತು ಏನು ಹೇಳಬೇಕು? ಇದಕ್ಕೆ ಅಮ್ಮ ಕಾರಣರು ಎಂದು ಹೇಳಬಲ್ಲಳೆ? ಅಥವಾ ಚಂಪ ಎನ್ನಬಲ್ಲಳೆ? ಮೂಕಳಾಗಿ ಕುಳಿತಳು.

"ನೀನು ಹೇಳದಿದ್ರೂ ನನಗೆ ಗೊತ್ತು ಬಿಡು."

"ಏನು ಗೊತ್ತು?"- ಅವಳ ದನಿ ಎಲ್ಲೋ ಪಾತಾಳದಿಂದ ಬಂದಂತಿತ್ತು.

'ಹೆದರಬೇಕಾಗಿಲ್ಲ ಸುಮ ಹೀಗೀಂತ ಹೇಳಿದ್ರೆ ನಾನು ಏನಾದ್ರೂ ಸಹಾಯ ಮಾಡ್ತಿದ್ದೆ"- ದಾಸನನ್ನು ಮನಸ್ಸಿನಲ್ಲಿ ತಂದು ನುಡಿದ. ಆದರೆ ಸುಮ ಅಮ್ಮನ ವಿಷಯವೆಂದೇ ಊಹಿಸಿ, ಹಾಗಾದರೆ ಈಗ ಹೇಳಿಬಿಡಲೆ ಎಂದು ಯೋಚಿಸಿದಳು. ಆದರೆ ಬಾಂಬು ಸಿಡಿದಂತೆ ಅವನೆಂದಿದ್ದ.

"ನಿನ್ನ ವಿಷಯವಾಗಿ ಕಾಲೇಜೆಲ್ಲಾ ಏನು ಮಾತಾಡ್ತಿದೇಂತ ನಿಂಗೆ ಗೊತ್ತಿದ್ಯಾ?"

"ನನ್ನ ವಿಷಯವೇ?"-ಒಮ್ಮೆಲೇ ನಡುಗಿ ಕಣ್ಣರಳಿಸಿದಳು

"ಹೂಂ, ನಿನ್ನ-ದೇವದಾಸನ ವಿಷಯ"

ಸುಮಳಿಗೆ ಕಚಗುಳಿಯಿಟ್ಟಂತಾಯಿತು. ಸೆಖೆಯಿಂದ ಒದ್ದಾಡುತ್ತಿದ್ದವಳಿಗೆ ತಣ್ಣೀರ ಸ್ನಾನ ಸಿಕ್ಕಷ್ಟು ಹಗುರವಾಯಿತು. ಓ, ಈ ವ್ಯಂಗ್ಯ, ಈ ದುಮುದುಮು ಮುಖಮುದ್ರೆ ಎಲ್ಲಾ ಇದಕ್ಕಾಗಿ ಎಂದು ನಗು ಬಂತು. ಕಾಲೇಜೇನೂ ಮಾತಾಡ್ತಿಲ್ಲ, ಅದು ನಿಮ್ಮ ಹೃದಯ ಮಾತ್ರ ಎಂದು ಹೇಳಬೇಕೆಂದುಕೊಂಡವಳು ಮತ್ತೆ ಮನಸ್ಸು ಬದಲಾಯಿಸಿ-

"ದೇವದಾಸನ ವಿಷಯ ಮಾತಾಡಿರಬಹುದು, ಆದರೆ ನನ್ನ ವಿಷಯವಲ್ಲ ಅಂತ ನಿಮಗೂ ಗೊತ್ತು"ಎಂದಳು ಸುಮ.

ವೇಣು ಪ್ರಶ್ನಾರ್ಥಕವಾಗಿ ಅವಳ ಕಡೆಗೆ ನೋಡಿದ. ಈಗ ಅವಳಿಗೆ ಅವನನ್ನೇ ಚೇಷ್ಟೆ ಮಾಡಿ ಕಾಡಿಸುವ ಆಸೆಯಾಯಿತು. ಆದರೆ ಅದರಿಂದ ಒಂದು ವೇಳೆ ಹಾನಿಯೇ ಆಗುವುದಾದರೆ? ಮೊದಲೇ ಗೊಂದಲಮಯವಾದ ತನ್ನ ಬಾಳನ್ನು ಇನ್ನೂ ಸಿಕ್ಕಾಗಿಸಿಕೊಳ್ಳುವುದೇಕೆಂದು-

"ಊರ್ಮಿಳಾ, ದೇವದಾಸರ ವಿಷಯ ಎಲ್ಲರಿಗೂ ತಿಳಿದಿದ್ದೇ 'ಎಂದಳು.

"ಅಂದರೆ?"

"ಏನೂ ತಿಳಿಯದವರ ಹಾಗೆ ಕೇಳ್ತೀರಲ್ಲ!" ಎಂದು ನಕ್ಕುಬಿಟ್ಟಳು.

"ನಗುವಷ್ಟು ಸುಲಭವಾಗಿ ಅವನನ್ನ ನಿನ್ನ ಗೆಳತಿಗೆ ಬಿಟ್ಟುಕೊಟ್ಟು ಬಿಟ್ಟೆಯಾ!"

"ಛಿ, ಛಿ. ಎರಡೂ ಪ್ಲಸ್ ಎರಡು ಅಂದ್ರೆ ನಾಲ್ಕು ಅಂತ ನೀವು ತಿಳ್ಕೋತೀರಿ ಅಂತಿದ್ದೆ. ಆದ್ರೆ ನೀವ್ಯಾಕೋ.. "

"ಇಂಥ ವಿಷಯಗಳಲ್ಲಿ ತ್ಯಾಗ ಮಾಡೋದ್ರಿಂದ ಪ್ರಯೋಜನ ಇಲ್ಲ ಸುಮ. ಮನಸ್ಸಿಗೆ ಮೆಚ್ಚುಗೆ ಆದವ್ರನ್ನ ಬಿಟ್ಟುಕೊಟ್ರೆ ಜೀವಮಾನ ಪೂರ್ತಿ ನರಳಬೇಕಾಗುತ್ತೆ" ಎಂದು ಉಪದೇಶ ಆರಂಭಿಸಿದ. ಅವನಿಗೆ ಅವಳ ಮಾತಿನಲ್ಲಿ ನಂಬಿಕೆಯೇ ಬರಲಿಲ್ಲ.

"ಆಮೇಲೆ?"ಎಂದಳು ಈಗ ವ್ಯಂಗ್ಯದ ಸರದಿ ಅವಳದು.

"ಹಾಸ್ಯ ಮಾಡ್ತೀಯ?" ಎಂದು ಅವಳ ಕೈ ಮೇಲಿದ್ದ ತನ್ನ ಕೈಯನ್ನು ಸ್ವಲ್ಪ ಒತ್ತಿದ.

"ಮತ್ತಿನ್ನೇನು ಮಾಡಲಿ, ಹೇಳಿ?"

"ಹಾಗಾದ್ರೆ ಇದಕ್ಕೆ ಏನು ಹೇಳ್ತಿ"ಎಂದು ಚಕ್ರವನ್ನು ಎಡಗೈಲಿ ಹಿಡಿದು ಬಲಗೈ ನಿಂದ ಪರ್ಸ್ ತೆಗೆದು,. ನೋಟ್ ಬುಕ್‌ನಿಂದ ಹರಿದು ತೆಗೆದಿದ್ದ ಆ ಕಾಗದ ಅವಳ ಕೈಯಲ್ಲಿಟ್ಟ.

ಅದನ್ನು ಬಿಚ್ಚಿದ ಕೂಡಲೆ ಅವಳಿಗೆ ನಗು ತಡೆಯಲಾಗಲಿಲ್ಲ. ಜೋರಾಗಿ ನಗಲಾರಂಭಿಸಿದಳು. ಅವನಿಗೆ ಅವಮಾನವಾದಂತಾಯ್ತು ಅವಳು ಮಡಿಲಲ್ಲಿಟ್ಟು ಕೊಂಡಿದ್ದ ಪುಸ್ತಕಗಳನ್ನು ಪಕ್ಕದಲ್ಲಿ ಸೀಟಿನ ಮೇಲಿಟ್ಟು ಹೊಟ್ಟೆ ಹಿಡಿದು ನಕ್ಕಳು. ಕಾರನ್ನು ಒಂದು ಪಕ್ಕಕ್ಕೆ ತಂದು ನಿಲ್ಲಿಸಿ ತನ್ನ ಎಡಗೈಯನ್ನು ಅವಳ ಬೆನ್ನ ಹಿಂದೆ ಬಳಸಿ ಭುಜ ಹಿಡಿದು ಬಲಗೈಯಿಂದ ಅವಳ ಬಾಯಿ ಮುಚ್ಚಲೆತ್ನಿಸುತ್ತಾ-"ಇದೇನು ಹುಚ್ಚುನಗೆ, ಸುಮಾ?" ಎಂದ ಕಾತರವಾಗಿ.

"ಅಬ್ಬ, ಅಮ್ಮ"ಎಂದು ಅವನ ಕೈ ತಳ್ಳಿ ನಗೆ ತಡೆದುಕೊಳ್ಳುತ್ತಾ "ನನಗೇನೂ ಹುಚ್ಚಿಲ್ಲ. ನಿಮಗೆ ಹಿಡಿದಿದ್ದ ಹುಚ್ಚನ್ನು ಈಗ್ಲಾದ್ರೂ ಬಿಡಿಸೋ ಹಾಗಾಯ್ತಲ್ಲ ಸದ್ಯ ಹೆಂಗಸರಿಗೆ ಅಸೂಯೆ ಅಂತಾರೆ. ಆದ್ರೆ ಗಂಡಸರ ಅಸೂಯೆ ಬಹಳ ಡೇಂಜರಸ್."

ಬೆಪ್ಪಾಗಿ ನೋಡುತ್ತಿದ್ದ ಮಾಧು ಕಾರು ನಿಂತುಬಿಟ್ಟುದನ್ನು ಗಮನಿಸಿದ ಸುಮ-"ಕಾರು ಯಾಕೆ ನಿಲ್ಲಿಸ್ಬಿಟ್ರಿ? ಯಾರಾದ್ರೂ ನೋಡಿದ್ರೆ ಏನಂದ್ಕೋತಾರೆ? ಹೊರಡಿರಪ್ಪ. ಈಗ ನಂಗೊಂದು ನಿಮಿಷದ ಕೆಲ್ಸ ಇದೆ ನಡೀರಿ, ಕಬ್ಬನ್ ಪಾರ್ಕಿಗೆ ಹೋಗೋಣ" ಎಂದಳು.

ಈಗ ನಿಜವಾಗಿ ಅಮ್ಮಾವ್ರು ಡ್ರೈವರನಿಗೆ ಹೇಳಿದಂತೆಯೇ, ಡ್ರೈವರ್ ಕಾರನ್ನು ಕಬ್ಬನ್‌ಪಾರ್ಕಿಗೆ ಅಭಿಮುಖವಾಗಿ ತಿರುಗಿಸಿದ. ಮಳೆ ಇನ್ನೂ ನಿಂತಿರಲಿಲ್ಲ. ಆದರೂ ಮೊದಲಿನ ರಭಸ ಕಡಿಮೆಯಾಗಿತ್ತು. ಮಾಧು ಕಾರನ್ನು ಒಂದು ಮರದಡಿ ನಿಲ್ಲಿಸಿದ.

"ಸುಮಾರು ಎರಡು ವರ್ಷದಿಂದ ಊರ್ಮಿಳಾ-ದೇವದಾಸ್ ಸ್ನೇಹಿತರು, ಪ್ರೇಮಿಗಳು. ಈ ಪ್ರೇಮದ ಕಾಯಿಲೆ ಬಂತೂಂದ್ರೆ ನೂರೆಂಟು ತಾಪತ್ರಯ...." ಕಾರಲ್ಲಿ ಅವರು ಕುಳಿತಿದ್ದಂತೆ ಸುಮ

ಪ್ರಾರಂಭಿಸಿದಳು

"ಪಾಪ, ಸ್ವಂತ ಅನುಭವ"ಎಂದು ನಡುವೆ ತಡೆದು ಮೆಲುನಕ್ಕ ಮಾಧು. ಹಲ್ಲು ಕಾಣದಂತೆ, ತುಟಿಗಳಲ್ಲೇ ನಕ್ಕ ಅವನ ಮುಖ, ಆ ನಸುಗತ್ತಲಲ್ಲಿ ಮನೋಹರ ವಾಗಿ ಕಂಡಿತು. ತೆಳುವಾದ, ನಿರ್ಧಾರವನ್ನು ಸೂಚಿಸುವಂತೆ ಒಂದನ್ನೊಂದು ಅಪ್ಪಿ ಕುಳಿತಿದ್ದ ಆ ತುಟಿಗಳನ್ನು ಕಂಡ ಕೂಡಲೆ ಅವಳ ತನುಮನಗಳಲ್ಲಿ ಏನೋ ಉದ್ವೇಗ ಮಿಡಿಯಿತು. ಮುಂದೆ ಮಾತನಾಡಲಾಗದೆ ತಲೆ ತಗ್ಗಿಸಿಬಿಟ್ಟಳು.

ಅದು ತನ್ನ ಹಾಸ್ಯದ ನುಡಿಯಿಂದಾಗಿ ಎಂದುಕೊಂಡ ಮಾಧು- ವೇಳು ಸುಮಾ" ಎಂದು ಉತ್ಸಾಹ ತೋರಿದ ಸುಮಳಿಂದ ಉತ್ತರವಿಲ್ಲ. ಚೇತರಿಸಿಕೊಳ್ಳಲು ಸಮಯ ಬೇಡವೇ?

"ಪ್ಲೀಸ್ ಹೇಳು ಮಧ್ಯೆ ಮಾತಾಡೋಲ್ಲ ಪ್ರಾಮಿಸ್"ಎಂದು ಆಶ್ವಾಸನೆ ನೀಡಿದ ಅವನ ಹೃದಯದ ಮೇಲಿದ್ದ ಕಲ್ಲು ಚಪ್ಪಡಿ ಈಗ ಪಕ್ಕಕ್ಕೆ ಸರಿದಿದ್ದುದರಿಂದ ಹೃದಯ ಹಕ್ಕಿಯಂತೆ ಹಗುರವಾಗಿತ್ತು ಸ್ವಲ್ಪ ಸಾವರಿಸಿಕೊಂಡ ಸುಮ, ಅವನ ಕಡೆಗೆ ನೋಡದೆ – 'ಅವರಿಬ್ಬರ ಮಧ್ಯೆ ಯಾವಾಗ್ಲೂ ಕೋಪ, ಸೆಡವು, ಮಿಸ್ಟೇಕ್ ಮಾಡ್ಕೊಳ್ಳೋದು, ಮತ್ತೆ ಸರಿಹೋಗೋದು ನಡೆದೇಯಿತ್ತು. ಇದು ಒಂದ್ಸಲ ಬಹಳ ಸೀರಿಯಸ್ಸಾಗ್ಬಿಟ್ಟು, ಮಾತು ಬಿಟ್ಬುಬಿಟ್ರು. ಊರ್ಮಿ ಒಂದೇ ಸಮ ಅಳ್ತಿದ್ಲು. 'ಒಂದು ಲೆಟರ್ ಬರಿಯೆ ನೋಡೋಣ ಸರಿಹೋಗುತ್ತೇನೋ' ಅಂತ ನಾನಂದೆ ನಂಗೆ ಬರ್ಕೊಳ್ಳಕ್ಕೆ ಗೊತ್ತಾಗ್ತಾ ಇಲ್ಲ. ನೀನೇ ಹೇಳ್ಕೊಡು' ಅಂದ್ಲು. ಆಗ ಅವಳ ಪುಸ್ತಕದಲ್ಲಿ ಇದನ್ನ ಬರೆದುಕೊಟ್ಟೆ. ತನ್ನ ಕೆಲ್ಸ ಮುಗಿದ್ಮೇಲೆ ಕತ್ತೆ ಇದನ್ನ ಹರಿದುಹಾಕ್ದೆ ಹಾಗೇ ಬಿಟ್ಟಿದ್ದಾಳೆ" ಎಂದು ಅಲ್ಲಿಲ್ಲದ, ಊರ್ಮಿಳೆಯನ್ನೇ ಬೈದಳು.

"ಆಮೇಲೆ ಈ ಕತ್ತೆ ಏನ್ಮಾಡ್ತು?"ಎಂದು ಅವಳ ಕಿವಿಯನ್ನು ಹಿಡಿದು ಮೆಲ್ಲಗೆ ಎಳೆದ ಮಾಧು.

"ಅವರಿಬ್ರೇನೋ ಸರಿಹೋದ್ರು ಆವಾಗ ಮತ್ತೆ ನೀವು ಬರೋ ದಿನ, ಏರ್‌ಪೋರ್ಟಿಗೆ ಹೋಗೋ ವಿಷಯದಲ್ಲಿ ಅದೇನಾಯ್ತೋ ಗೊತ್ತಿಲ್ಲ, ಮನುಷ್ಯ ಸಿಟೆದು ದೂರ ಹೋದ ಸರಿ, ನಾನು ತಾನೇ ಮಧ್ಯ ಪುರೋಹಿತ ಒಂದು ಭೇಟಿ ಫಿಕ್ಸ್ ಮಾಡ್ಕೊಂಡು ಕಬ್ಬನ್ ರೆಸ್ಟೋರೆಂಟ್‌ನಲ್ಲಿ ಆ ಪುಣ್ಯಾತ್ಮನ್ನ ಒಪ್ಪಿಸೋ ಹೊತ್ತಿಗೆ ಸಾಕುಬೇಕಾಯ್ತು ಆವಾಗ್ಲೇ ಯಾರೋ ಒಬ್ರು ಅಲ್ಲಿಗೆ ಬಂದು ನನ್ನನ್ನ ದುರದುರ ನೋಡಿದ್ದು "

' ದುರದುರ ನೋಡಿದ್ದು ಮಾತ್ರ ಅಲ್ಲ ನಾಲ್ಕು ಬಿಗಿದುಬಿಡಬೇಕಾಗಿತ್ತು ಅವರು ನಿನಗೆ ಅವತ್ತು. ಏನೋ ಅದೃಷ್ಟ ಚೆನ್ನಾಗಿತ್ತು, ಬಚಾವಾದೆ."

"ಹುಂ, ಬಿಗಿತಾರೆ. ಬಿಟ್ರೆ ಬಿದ್ದಿದ್ದಾರೆ ನೋಡಿ "

"ಅದೆಲ್ಲಾ ಸರಿ, ಈಗ ಮುಂದೆ ಹೇಳಿ ಮೇಡಂ."

"ಮುಂದೂ ಇಲ್ಲ, ಹಿಂದೂ ಎಲ್ಲಾ ಇಲ್ಲ ಸರಿಹೋಯ್ತು ಇಷ್ಟರಲ್ಲೇ ಮದ್ವೆ ಆಗ್ತಾರೆ, ಅದನ್ನ ಪಾಪ ದೇವದಾಸ್ ನನ್ನ ಹತ್ರ ಹೇಳ್ತಾ ಇದ್ದಾಗ್ಲೇ ಬಂದಿರಲ್ಲ ನೀವು ದೊಡ್ಡ ಮನುಷ್ಯರು, ಮುಖ

ದುಮುಗುಡುತ್ತಾ ಅವರನ್ನ ಎಳ್ಕೊಂಡು ಹೋಗೋಕೆ"ಎಂದು ಮುಖ ದಪ್ಪ ಮಾಡಿದಳು.

"ಅಬ್ಬಾ, ಅದೆಷ್ಟು ಕೋಪ, ಎಲ್ಲಿ ಮುಖ ನೋಡೋಣ"ಎಂದು ತನ್ನ ಮುಖವನ್ನು ಬಹಳ ಹತ್ತಿರ ತಂದ. ಕತ್ತಲು ಕವಿದಿತ್ತು. ಮಳೆ ನಿಂತಿತ್ತು. ಮುಖಗಳು ಕಾಣುತ್ತಿರಲಿಲ್ಲ. ಮುಖದ ಬಳಿ ಬಂದ ಅವನು ಮೃದುವಾಗಿ, ಪಿಸುದನಿಯಲ್ಲಿ-"ನೀನು ನನ್ನನ್ನು ಕೊಂದೇಬಿಟ್ಟಿದ್ದೆ ಸುಮ"ಎಂದ. ಅವನ ಬಿಸಿ ಉಸಿರು ಹತ್ತಿರವಾಗಿ ತಗಲಿದಾಗ ಅವಳಿಗೆ ಮತ್ತೇರಿದಂತಾಯಿತು.

"ನೀವಿಷ್ಟು ಸೂಕ್ಷ್ಮವಾದರೆ ಹೇಗೆ ವೇಣು?"ಎಂದು, ತಕ್ಷಣ ನಾಲಗೆ ಕಚ್ಚಿಕೊಂಡಳು. ಅವಳೆಂದೂ ಅವನನ್ನು ಹೆಸರು ಹಿಡಿದು ಕೂಗಿರಲಿಲ್ಲ. ಅವಳ ಕರೆ ಅವನಿಗೆ ಆಪ್ಯಾಯಮಾನವಾಗಿತ್ತು.

"ಇನ್ನೊಂದ್ಸಲ ನನ್ನನ್ನು ಹಾಗೆ ಕರಿ, ಸುಮ" ಎಂದು ಪಿಸುಗುಟ್ಟಿದ. ಅವಳು ಮೌನ ತಾಳಿದಳು. ಅವನು ಇನ್ನೂ ಪಕ್ಕಕ್ಕೆ ಸರಿದು, ಅವಳನ್ನು ಬಳಸಿ ಹಗುರವಾಗಿ ತನ್ನ ಬಳಿಗೆ ಎಳೆದುಕೊಳ್ಳುತ್ತಾ-"ಪ್ಲೀಸ್, ಕರಿ"ಎಂದಾಗ ಅವಳು ಅವನ ಎದೆಗೆ ಸರಿಯಾಗಿ ಒರಗಿದ್ದಳು. ಅವನು ಬಿಡಲಿಲ್ಲ. "ಹುಂ, ಎಲ್ಲಿ ಮತ್ತೆ, ಹೇಳು, ಕಮಾನ್" ಆಸೆಯಿಂದ ಕಿವಿ ನಿಮಿರಿಸಿಕೊಂಡ.

ಮಧುರವಾಗಿ ಪ್ರೇಮ ತುಂಬಿದ ಧ್ವನಿಯಲ್ಲಿ 'ವೇಣೂ'ಎಂದಳು. ಅವಳನ್ನು ಬಳಸಿದ್ದ ಕೈಗಳು ಸ್ವಲ್ಪ ಬಿಗಿಯಾದವು.

ತನ್ನ ಇರವಿನ ಪ್ರಜ್ಞೆ ಇಲ್ಲವಾದ ಸುಮ ಬಲಗೈಯನ್ನು ಎತ್ತಿ ಅವನ ಕುತ್ತಿಗೆ ಬಳಸಿ ಹಿಡಿದಳು. ಅವನ ಮುಖ ಅವಳ ಮುಖಕ್ಕೆ ತಾಗಿತ್ತು. ಒರಟು ಕೆನ್ನೆ ಮೃದುಕೆನ್ನೆಯೊಡನೆ ಸರಸವಾಡಿತು. ಒಂದು ಘಳಿಗೆ ಅವರ ಪಾಲಿಗೆ ಪ್ರಪಂಚವೇ ತಟಸ್ಥವಾಗಿತ್ತು.

ಎಚ್ಚೆತ್ತುಕೊಂಡ ಸುಮ ಅವನ ತೋಳುಗಳಲ್ಲಿದ್ದಂತೆಯೇ ಅವನ ಕೈ ಗಡಿಯಾರದ ಕಡೆ ನೋಡಿದಳು. ಆ ರೇಡಿಯಂ ಗಡಿಯಾರದಲ್ಲಿ ಗಂಟೆ ಏಳಾಗಿತ್ತು. ಕೂಡಲೆ ಮನೆಯ ನೆನಪು. ಮನೆಯೊಂದಿಗೆ ಅಮ್ಮ, ಅವರ ಮಾತು. ಬೆಚ್ಚಿಬಿದ್ದಂತೆ ಅವನ ಕೈ ಕಿತ್ತೊಗೆದು ದೂರ ಸರಿದಳು.

ವೇಣುವಿಗೆ ನೋವಾಯಿತು. "ಯಾಕೆ ಸುಮಾ, ನಾನು ನಿನ್ನನ್ನು ಮುಟ್ಟ ಬಾರದೆ?"

"ಉಹುಂ."

"ಅದು ಯಾಕೆ"-ಎಂದ ಸಪ್ಪಗೆ, ಮುಖ ಒರೆಸಿಕೊಳ್ಳುತ್ತಾ.

'ಅಮ್ಮನ್ನ ಕೇಳಿ' ಎಂದು ಗಟ್ಟಿಯಾಗಿ ಅರಚಬೇಕೆನ್ನಿಸಿತು. ಆದರೆ ಹಾಗೆ ಹೇಳಲಾರಳು.

'ಮದುವೆ ಆಗೋ ಚಂಪ ಅಲ್ಲಿರೋವಾಗ, ಅವಳಿಗೆ ದ್ರೋಹವಾಗಬಾರದು. ನಾನು ನಿಮಗೆ ಪರಸ್ತ್ರೀ...."

"ಹುಂ ಸರಿಯಪ್ಪ. ಹೋಗ್ಲಿ. ನೋಡೋಕಾದ್ರೂ ಸಿಗ್ತೀಯಾ? ಅಥವಾ ತಲೆ ಮರೆಸ್ಕೊಂಡೇ

ತಿರುಗ್ತೀಯೋ?"

"ನಾನೇನೂ ತಲೆ ಮರಸ್ಕೊಳ್ತಾ ಇರ್ಲಿಲ್ಲ. ನೀವೇ ಏನೇನೋ ಊಹಿಸಿ ಕಠಿಣವಾಗಿ ನಡಕೊಂಡ್ರಿ, ಮೊದಲು ನನ್ನನ್ನು ಬಾಲು ಹೆಂಡ್ತಿ ಮಾಡಿದ್ರಿ. ಈಗ ದೇವದಾಸನ ಪ್ರೇಯಸಿ ಅಂದ್ರಿ. ಇನ್ನು ಯಾವ್ಯಾವ ಕಲ್ಪನೆ ಇದ್ಯೋ ಹೇಳ್ಬಿಡಿ. ಬೇಕೂಂದ್ರೆ ಅದನ್ನೂ ವಿವರಿಸಿಬಿಡ್ತೀನಿ"ಎಂದು ನಗುತ್ತಾ ಅವನ ಮನಸ್ಸನ್ನು ಹರ್ಷಗೊಳಿಸಲು ನೋಡಿದಳು. ಆದರೆ ಅವನು ಗೆಲುವಾಗಲಿಲ್ಲ.

"ನಿಂಗೆ ಹೇಗೆ ಗೊತ್ತಾಯ್ತು ಬಾಲು ವಿಷಯ?"

"ಅಮ್ಮನ ಹತ್ರ ಹೇಳಿದ್ರಂತೆ ಬಾಲು. ಅಮ್ಮ ನನ್ನ ಹತ್ರ ಹೇಳಿ ನಕ್ಕರು. ಇನ್ನು ನನಗೆ ಗುರುತಿರೋ ಗಂಡಸರು ಯಾರಿದ್ದಾರೆ?"ಎಂದು ತಲೆ ಕೆರೆದುಕೊಂಡಂತೆ ಮಾಡಿ "ಹುಂ, ಅಣ್ಣ ಇದ್ದಾರೆ"ಎಂದಳು ನಗುತ್ತಾ.

"ನಾನ್ಸೆನ್ಸ್. ಏನಿದು ಸುಮ?"ಎಂದು ಅವಳ ಬಾಯಿ ಮುಚ್ಚಲು ಬಂದವನು, ಅವಳು ಮುಟ್ಟಬಾರದು ಎಂಬುದನ್ನು ನೆನಪಿಸಿಕೊಂಡು ಹಾಗೇ ಕೈ ಹಿಂದಕ್ಕೆ ತೆಗೆದುಕೊಂಡ

"ಹೋಗ್ಲಿ ಬಿಡಿ, ಅವರು ಬೇಡ, ತಂದೆಯ ಹಾಗಿರುವರು. ಮತ್ತೆ.. ಆ ? ವಾಸು?" ಈ ಬಾರಿ ಅವನಿಗೆ ತಡೆಯಲಾಗಲಿಲ್ಲ. ಬಲವಾಗಿ ರಟ್ಟೆ ಹಿಡಿದು-"ಬಾಯಿ ಮುಚ್ಚದೆ ಇದ್ರೆ ನಾನೇ ಮುಚ್ಚಿಸಬೇಕಾಗುತ್ತೆ ನೋಡು ಸುಮ"ಎಂದ ಕಠಿಣವಾಗಿ.

'ನಮ್ಮ ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ವಾಕ್ ಸ್ವಾತಂತ್ರ್ಯ ಇದೆ ಸಾರ್"ಎಂದು ತನ್ನ ರಟ್ಟೆ ಬಿಡಿಸಿಕೊಳ್ಳಲು ಹೋದಳು. ಅವನು ಆ ಕೈಯನ್ನು ಬಿಗಿಯಾಗಿ ಹಿಡಿದು ಬಲವಂತವಾಗಿ ಅವಳನ್ನು ಹತ್ತಿರಕ್ಕೆಳೆದುಕೊಂಡ. ಹಗುರವಾಗಿದ್ದ ಅವನ ಮನ ಗಡುಸಾಯಿತು. ದೇಹವು ಒರಟಾದಂತೆ ಭಾಸವಾಯಿತು ಸುಮಳಿಗೆ. ಹೆದರಿದ ಅವಳು ಬುದ್ಧಿ ಉಪಯೋಗಿಸಿ, ಬಹಳ ಮಿದುವಾಗಿ ಸಂತೈಸುವ ದನಿಯಲ್ಲಿ 'ವೇಣು, ಹೊತ್ತಾಗಲಿಲ್ವಾ? ಮನೆಗೆ ಹೋಗೋಣ"ಎಂದಳು ಅವಳ ಆ ಕರೆ ಅವನ ಹೃದಯ ವೀಣೆಯನ್ನು ಮೀಟಿತು ಬಿಗಿಯಾದ ಪಟ್ಟು ಸಡಲಿತು

"ಓಕೇ"ಎಂದು ಅವಳನ್ನು ಸರಿಯಾಗಿ ಕೂರಿಸಿ, ಸರಿದಿದ್ದ ಸೆರಗನ್ನು ಹೊದಿಸಿ, ಕಾರು ಸ್ಟಾರ್ಟ್ ಮಾಡುವ ಮುನ್ನ, ಅವಳ ಕೈ ಹುಡುಕಿ, ತನ್ನ ಕೈಯಲ್ಲಿ ಅದನ್ನು ಹಿಡಿದು, ತನ್ನ ತುಟಿಗೊಯ್ದು ಮೃದುವಾಗಿ ಚುಂಬಿಸಿ-"ನನಗಿಷ್ಟು ಸಾಕು"ಎಂದು ಕಾರ್ ಸ್ಟಾರ್ಟ್ ಮಾಡಿದ.

ಹತ್ತಾರು ಗಜ ಬರುವವರೆಗೂ ಇಬ್ಬರ ಮನಸ್ಸೂ ತುಂಬಿ ನಿಂತಿತ್ತು. ಏನೂ ಮಾತನಾಡಲಾರದ ಸ್ಥಿತಿಯಲ್ಲಿದ್ದರು. ನಂತರ ವೇಣು -"ನಾನು ಹೇಗೇ ಇರಲಿ, ಎಲ್ಲೇ ಇರಲಿ ಸುಮ, ಇಷ್ಟು ಮಾತ್ರ ಸ್ನೇಹ ನನಗೆ ಕೊಡ್ತೀಯಾ?"ಎಂದು ಗಂಭೀರವಾಗಿ ಕೇಳಿದ.

ಅವಳೂ ಗಂಭೀರವಾಗಿಯೇ-"ನನ್ನ ಸ್ನೇಹ ನಿಮಗಾಗಿ ಎಂದೂ ಇದೆ. ಇದಕ್ಕಿಂತ ಹೆಚ್ಚು, ನಾನು ಅಸಹಾಯಕಳು. ಅಲ್ಲದೆ ಚಂಪ.. ."ಅವಳ ದನಿಯಲ್ಲಿ ನೋವೂ ಮಿಳಿತವಾಗಿತ್ತು.

"ಯಾವಾಗಲೂ ಚಂಪ, ಮಾಧುರಿ, ಊರ್ಮಿಳಾ ಅಂದ್ರೆ ನಿನ್ನ ಬಗ್ಗೆ ನೀನು ಯೋಚಿಸೋದು ಯಾವಾಗ? ಅಂದಹಾಗೆ ಮಾಧುರಿಗೆ ಮದ್ವೆ ಗೊತ್ತಾಗಿದೆ. ಆದ್ರೆ ನಾನಲ್ಲ ಗಂಡು."

"ಗೊತ್ತು. ನೀವು ಕೈಬಿಟ್ರೆ, ಪಾಪ, ಏನ್ಮಾಡ್ತಾಳೆ?"- ಕುಚೇಷ್ಟೆಯಿಂದ ಹೇಳಿದಳು ಸುಮ.

"ನೀನೂ ಹಾಗೇ ನಂಬ್ತೀಯ"– ಅವನು ನೊಂದು ಕೇಳಿದ.

ಅವನನ್ನು ನೋಯಿಸಲಿಷ್ಟಪಡದೆ. "ನೀವೇ ಹೇಳಿದ್ದಿರಿ, ಅವಳು ನಿಮ್ಮ ಗರ್ಲ್‌ಫ್ರೆಂಡ್ ಅಂತ ಅದಕ್ಕೆ ಹೇಳ್ದೆ. ನಿಜ ಏನೂಂತ ನಂಗೊತ್ತು"ಎಂದಳು

"ಏನು ಗೊತ್ತು ನಿನ್ನ ತಲೆ "

"ನಿಮ್ಮ ತಲೇನೂ ಗೊತ್ತು. ನೀವು ಅವಳನ್ನು ಯಾವತ್ತೂ ಸಲಿಗೆಯಿಂದ ಕಾಣಲಿಲ್ಲ. ಅವಳೇ ಇಲ್ಲಸಲ್ಲದ ಆಸೆ ಇಟ್ಕೊಂಡಿದ್ಲು. ನಂತರ ಗೊತ್ತಾದ್ರಿಂದ ಬೇರೆ ಮದ್ವೆಗೆ ಒಪ್ಕೊಂಡ್ಲು ಅಂತ ನಂಗೆ ಮಾತ್ರ ಅಲ್ಲ ಪ್ರತಿ ಒಬ್ಬರಿಗೂ ಗೊತ್ತು."

"ಅಬ್ಬ, ಸದ್ಯ ಗೆದ್ದೆ"ಎಂದು ಎದೆಯ ಮೇಲೆ ಕೈಯಿಟ್ಟುಕೊಂಡ.

"ನನ್ನನ್ನು ಒಂದಿಷ್ಟು ದೂರದಲ್ಲಿ ಇಳಿಸ್ಬಿಡಿ. ನಾನು ನಡಕೊಂಡು ಬರ್ತೀನಿ"

"ಯಾಕಷ್ಟು ಹೆದರಿಕೆ ಸುಮ? ಜೊತೆಯಲ್ಲಿ ಹೋದ್ರೆ ಏನಾಗುತ್ತೆ?"

"ನಿಮಗೆ ಗೊತ್ತಾಗೊಲ್ಲ. ನನ್ನ ಇಲ್ಲೇ ಇಳಿಸ್ಬಿಡಿ."

"ಇಳಿಸೋಲ್ಲ."

"ಬಾಗಿಲು ತೆರೆದು ಹಾರಿಬಿಡ್ತೀನಿ."

"ಥೂ, ತುಂಟ ಹುಡುಗಿ. ಈವತ್ತೇ ಗೆದ್ದುಕೊಂಡಿದ್ದೀನಿ. ಈವತ್ತೇ ಕಳೆದುಕೊಳ್ತೀನಾ? ಇರು, ನಿನ್ನಿಷ್ಟವೇ ಆಗ್ಲಿ."

"ಬೇರೆ ಯಾವತ್ತಾದ್ರೂ ಕಳೆದುಕೊಳ್ತೀರಿ ಅಲ್ವಾ?"

"ನಿನ್ನ....ನಿನ್ನ ಏನ್ಮಾಡಬೇಕು ಗೊತ್ತಾ?"-ಹಲ್ಲು ಕಚ್ಚುತ್ತಾ ಕೇಳಿದ.

"ಏನ್ಮಾಡ್ಬೇಕೂ?" ಹುಚ್ಚೆತ್ತಿ ರಾಗವಾಗಿ ಕೇಳಿದಳು.

"ಹಿಡಿದು ಕುತ್ತಿಗೇಗೆ"ಎಂದು ಅನ್ನುವ ವೇಳೆಗೆ "ಉರುಲು ಹಾಕ್ಬಿಡ್ಬೇಕು" ಎಂದು ಮುಗಿಸಿ, "ನಿಲ್ಲಿಸಿ ಮತ್ತೆ ಕಾರನ್ನ"ಎಂದು ಅವನ ಎಡ ತೋಳಿನ ಮೇಲೆ ತಟ್ಟಿದಳು.

'ಕುತ್ತಿಗೆಗೆ ಉರುಳಲ್ಲ ಹುಡುಗಿ, ತಾಳಿ'ಎಂದು ಮನದಲ್ಲೇ ಸುಖಿಸಿದ ಅವನು. 'ಈ ಸಂಜೆ

ಹೀಗೇ ನಿರಂತರವಾಗಿ ನಿಲ್ಲಲಾರದೆ? ಸದಾ ಕಾಲವೂ ಸುಮ ಹೀಗೇ ತನ್ನ ಪಕ್ಕದಲ್ಲಿ ಕುಳಿತಿರುವಂತೆಯೇ ಕಾಲ ಮುಪ್ಪಾಗಬಾರದೇ' ಎಂದು ಮೊರೆಯಿಟ್ಟಿತು ಅವನ ಅಂತರಂಗ. 'ಚಿಂತೆಯಿಲ್ಲ, ಇದಿನ್ನೂ ಈಗ ಪ್ರಾರಂಭ. ತನಗೆ ಇನ್ನೂ ಇಂತಹ ಅವಕಾಶಗಳು ಸಿಗಬಹುದು ಸುಮ ತನ್ನ ಹೃದಯದಲ್ಲಿ ನನಗೆ ಸ್ಥಾನ ಕೊಟ್ಟೇ ಕೊಡುತ್ತಾಳೆ'ಎಂದು ತನಗೆ ತಾನೇ ಆಶ್ವಾಸನೆ ಕೊಟ್ಟುಕೊಳ್ಳುತ್ತಾ ಕಾರು ನಿಲ್ಲಿಸಿದ.

ಅವಳು ಇಳಿಯುವಾಗ ಚೇಷ್ಟೆಯಿಂದ "ಅಂಜುಬುರುಕಿ 'ಎಂದ ಮೆಲ್ಲಗೆ. ಅವಳೂ ಬಿಡಲಿಲ್ಲ. ಅದೇ ದಾಟಿಯಲ್ಲಿ "ಅಸೂಯೆಯ ಮುದ್ದೆ" ಎಂದು ಬಾಗಿಲು ಹಾಕಿದಳು.

ಬೆಕ್ಕಿನಂತೆ ಹೆಜ್ಜೆಯ ಸಪ್ಪಳ ಕೂಡ ಆಗದ ಹಾಗೆ ಮೆಲುವಾಗಿ ಸಾಧುವಾಗಿರುವ ಸುಮ ತನ್ನೊಂದಿಗೆ ಅದೆಷ್ಟು ಸರಸದಿಂದಿರುತ್ತಾಳೆ ಎಂದುಕೊಳ್ಳುತ್ತಾ ವೇಣು ಮನೆಯೊಳಗೆ ಬಂದ ಬಾಲುವಿನ ರೂಮಿನಲ್ಲಿ ಅವನೊಂದಿಗೆ ಚಂಪ ಇಸ್ಪೀಟು ಆಡುತ್ತಿದ್ದಳು ವೇಣು ಬಂದನೆಂದೇನೂ ಚಂಪ ಎದ್ದು ಬರಲಿಲ್ಲ. ವೇಣು ಬಯಸಲೂ ಇಲ್ಲ

'ಚಂಪಾ, ಮಾಧು ಬಂದ ನೋಡು"ಎಂದು ತಾಯಿ ಕರೆದಾಗ, ಮಾಧುವಿನ ಸ್ವಪ್ನ ಒಡೆಯಿತು ಚಂಪ ಅಂತಹ ಸಂತೋಷದಿಂದೇನೂ ಎದ್ದು ಬಂದಂತೆ ಕಾಣಲಿಲ್ಲ. ಜಡೆ ಬಿರಿಹುಯ್ದು, ಕೂದಲಿಗೆ ಒಂದೆರಡು ರಬ್ಬರ್ ಬ್ಯಾಂಡ್ ಹಾಕಿ, ಲುಂಗಿಯುಟ್ಟು, ಮೇಲೆ ಅಂಗಿ ತೊಟ್ಟ ಚಂಪಳನ್ನು ನೋಡಿ ದಂಗಾದ ಮಾಧು ಅಮ್ಮ ಇದನ್ನು ಸಹಿಸಿದಳೆ? ಬಹುಶಃ ತಾನು ಮೆಚ್ಚಬಹುದೆಂದು ಅಮ್ಮ ಸುಮ್ಮನಿದ್ದಿರಬೇಕು. ಮೇಲಿನಿಂದ ಕೆಳಗಿನವರೆಗೆ ಒಮ್ಮೆ ಅವಳನ್ನು ನೋಡಿ ಸುಮ್ಮನಾದ ಮಾಧು.

ತಾಯಿಯ ಕಡೆ ತಿರುಗಿ-"ಅದೇನು ಮಳೇಮ್ಮ ಈವತ್ತು. ಅಂತೂ ನಿಲ್ತಲ್ಲ ಸದ್ಯ" ಎನ್ನುತ್ತಾ ಟೈ, ಕೋಟು ಬಿಚ್ಚುತ್ತಿದ್ದಾಗ, ಚಂಪ ಕಾಫಿ ತಂದುಕೊಟ್ಟಳು ತಾನಾಡಿದ ಮಾತಿಗೆ ಅವನಿಗೆ ಮತ್ತೊಂದರ್ಥ ಹೊಳೆದು ಮುದವಾಯಿತು ತನ್ನ ಹೃದಯವೂ ರಭಸದ ಮಳೆಯಂತೆ ಭೋರ್ಗರೆದು ಕ್ರಮೇಣ ಸುಮಳಿಂದ ಶಾಂತವಾಗಿತ್ತು.

ಚಂಪ ಕಾಫಿ ನೀಡುತ್ತಾ "ನಾನು ಬಂದು ಆಗ್ಲೇ ಎಷ್ಟೊತ್ತಾಯ್ತು. ನೀವು ಬರ್‍ತೀರಿ ಅಂತ ಕಾದೂ ಕಾದೂ ಸಾಕಾಯ್ತು. ಕಾರಿತ್ತಲ್ಲಾ, ಬೇಗ ಬಂದ್ಬಿಡ ಬಹುದಿತ್ತು"ಎಂದಳು

"ಕಾರಿದ್ರೆ ಮಾತ್ರ ಈ ಮಳೇಲಿ ಹೊರಗೆ ತರೋಕ್ಕಾಗ್ತಿತ್ತ?"ಎಂದು ಅವನ ತಾಯಿಯ ಕಡೆ ತಿರುಗಿ "ಇನ್ನು ಈ ಹುಡುಗಿ ಹೇಗೆ ಬರ್‍ತಾಳೋ ಅಮ್ಮ, ಸುಮ ಬಂದ್ಬಿಟ್ಟಿದ್ದಾಳೇನು?"

"ಇಲ್ಲಪ್ಪ ಇನ್ನೂ"ಎಂದರು ಅತಂಕದಿಂದ

"ಛೆ, ಎಂಥ ಕೆಲಸ ಆಯ್ತು, ಅವಳನ್ನು ಒಂದ್ಮಾತು ಕೇಳಿ ಕರ್‍ಕೊಂಡು ಬರಬಹುದಾಗಿತ್ತು"ಎಂದ.

"ಹಾಗೆಲ್ಲಾ ಮಾಡಿ ಪ್ರೋತ್ಸಾಹ ಮಾಡ್ಬೇಡಿ. ಹೇಗೋ ಬರ್‍ತಾಳೆ. ನೀವು ಹೀಗೆ ಮಾಡಿದ್ರೆ, ನಾಳೆ

ಅವಳಿಗೇ ಕಷ್ಟ. ಅಲ್ವಾ ಬಾಲು?"ಚಂಪ ಕೇಳಿದಳು.

ತನ್ನ ನಾಟಕಕ್ಕಾಗಿ ಒಳಗೊಳಗೇ ನಗುತ್ತಿದ್ದ ಮಾಧು. ಪ್ರೇಮದ ಖಾಯಿಲೆ ಬಂದರೆ ನೂರೆಂಟು ತಾಪತ್ರಯ. ಸುಳ ಮಾತು ಎಷ್ಟು ಸತ್ಯ. ಮೊದಲು ಸುಳ್ಳು ಹೇಳಲು ಕಲೀಬೇಕು. ಆಮೇಲೆ ಮನೆಯವರಿಗೆ ಮೋಸ ಮಾಡ್ಬೇಕು ಚಿಂತೆಯಿಲ್ಲ. ಅದಕ್ಕೆ ಸಿಗುವ ಪ್ರತಿಫಲ ಓಹ್!ಎಷ್ಟು ಸೊಗಸು! ಎರಡೆರಡು ಮೆಟ್ಟಿಲಾಗಿ ಹಾರಿ ಹೋಗಿ ಬಟ್ಟೆ ಬದಲಾಯಿಸಿ ಬಂದ. ಮನೆಯ ಕಣಕಣವೂ ಸುಂದರ. ಪ್ರತಿ ಸಣ್ಣ ವಿಷಯವೂ ಆಹ್ಲಾದಕರ ಬದುಕು ಬಂಗಾರ. ಆ ಘಳಿಗೆಯಲ್ಲಿ ಅವನಿಗೆ ಚಂಪಳ ಇರವೇ ನೆನಪಿಲ್ಲ. ಇದ್ದರೂ ಅವಳು ತಾಯಿಯ ಸೊಸೆ ಎಂಬ ಧ್ಯಾನವೇ ಇಲ್ಲ.

ಅವನು ಉಡುಪು ಬದಲಿಸಿ, ಪಂಚೆ, ಬನಿಯನ್ನುಗಳಲ್ಲಿ ಕೆಳಗಿಳಿದು ಬಂದಾಗ ಅಮ್ಮ,

"ಇದೇನಿದು ಮಾಧು, ಅವಳು ನಿನಗೋಸ್ಕರ ಕಾಯ್ತಾ ಇದ್ದಾಳೆ, ಮನೆಗೆ ಬಿಟ್ಟು ಬರ್ತಿ ಅಂತ. ನೀನು ನೋಡಿದ್ರೆ ಆರಾಮವಾಗಿ ಬಂದು ಕೂತ್ಕಿಟ್ಟೆ!"ಎಂದರು.

"ಅಮ್ಮ, ಈವತ್ತು ನನಗೆಷ್ಟು ಸುಸ್ತಾಗ್ತಿದೇಂದ್ರೆ ಮೊದ್ಲು ಮಲಗಿದ್ರೆ ಸಾಕಾಗಿದೆ. ಊಟ ಮಾಡದಿದ್ರೆ ನೀನು ಬೇಜಾರು ಮಾಡ್ಕೋತಿಯಲ್ಲ ಅಂತ ಬಂದೆ. ಒಂದು ತುತ್ತು ಊಟ ಹಾಕ್ಬಿಡು, ಹಾಯಂತ ಬಿದ್ಕೋತೀನಿ" ಎಂದು ಸುಸ್ತು ನಟಿಸಿದ.

'ಲೋ ಲೋ ಕಳ್ಳ ವೇಣು, ಸುಸ್ತಾಗಿದ್ಯಾ ನಿಂಗೆ?' ಎಂದು ಅಣಕಿಸಿದ, ಒಳಗಿನ ಮಾಧು.

"ಚಂಪ, ದಯವಿಟ್ಟು ಬಾಲು ಜೊತೆ ಹೋಗ್ಬಿಡಮ್ಮ. ಬಾಲು ಪ್ಲೀಸ್ ನಂಗೊಂದಿಷ್ಟು ಸಹಾಯ ಮಾಡಯ್ಯ. ಇವಳನ್ನ ಡ್ರಾಪ್ ಮಾಡಿಬಿಡು."

ಅಲ್ಲಿದ್ದ ಎಲ್ಲ ರೋಗಿಗಳೂ ಬಯಸುತ್ತಿದ್ದುದೂ ಈ ಹಾಲನ್ನವನ್ನೆ-ಅಮ್ಮ ಒಬ್ಬಳನ್ನು ಬಿಟ್ಟು, ವೈದ್ಯನಾಥ ಮಾಧು ಹೇಳಿದ್ದುದೂ ಅದೇ.

ಬಾಲು, ಚಂಪ ಹೋದ ಕೂಡಲೆ ವೇಣುವಿನ ಸುಸ್ತೆಲ್ಲಾ ಮಾಯವಾಯಿತು ತಾಯಿಯೊಂದಿಗೆ ಗೆಲುವಾಗಿ ಹರಟುತ್ತಿದ್ದಾಗ ಸುಮ ಬಂದಳು-"ಮಳೇಗೆ ಸಿಕ್ಕಿಹಾಕಿ ಕೊಳ್ಳಲಿಲ್ವಾ ಸುಮ ನೀನು?"ಎಂದು ಆಶ್ಚರ್ಯದ ಮುಖ ಮಾಡಿ ಕೇಳಿದ.

"ಇಲ್ಲ, ಮಳೆ ನಿಲ್ಲೋವರೆಗೆ ಲೈಬ್ರರೀಲಿದ್ದು ಬಂದೆ. ಅದಕ್ಕೇ ತಡವಾಯ್ತು" ಎಂದು ತಲೆತತಗ್ಗಿಸಿ, ಸುಮ ಮಾಧುವಿನ ಮುಖದ ಕಡೆಗೆ ನೋಡದೆ, ಸಣ್ಣ ದನಿಯಲ್ಲಿ ಉತ್ತರಿಸಿದಳು.

'ಭಲೆ ಸುಮ'ಎಂದು ಶ್ಲಾಘಿಸಿದ ಮಾಧು.

ಬಾಲುಗಾಗಿ ಕಾಯದೆ ಎಲ್ಲರೂ ಊಟ ಮಾಡಿದರು. ಸುಮಳ ಮುಖದಲ್ಲಿ ಹೊಸ ಕಳೆ ಬಂದಂತೆ ಭಾಸವಾಯಿತು ವೇಣುವಿಗೆ. ಆದರೆ ಕಳೆ ಬಂದುದು ಅವನ ಕಣ್ಣಿಗೆ. ಮುಚ್ಚಿದ್ದ ಪರೆಯನ್ನು ಸುಮ

ಉಪಾಯವಾಗಿ ತೆಗೆದುಹಾಕಿದ್ದಳು.

ಕೆಲಸ ಮುಗಿಸಿ ಸುಮ ತನ್ನ ಕೋಣೆ ಸೇರಿದಾಗ, ನಾಗಮ್ಮ ತಮ್ಮ ಕೋಣೆಗೆ ಬಂದರು ಮಂಚದ ಮೇಲೆ ತಮ್ಮ ಹಾಸಿಗೆಯ ಮೇಲೆ ಕುಳಿತುಕೊಳ್ಳುತ್ತಾ, ಮಾಧು ಇನ್ನೂ ತಂದೆಯೊಂದಿಗೆ ಮಾತನಾಡುತ್ತಿದ್ದುದನ್ನು ಗಮನಿಸಿದರು.

ತಮಗಾದ ಅಚ್ಚರಿಯನ್ನು ವ್ಯಕ್ತಪಡಿಸಿಯೂ ಬಿಟ್ಟರು.

"ಆಗ್ಲೇ ಮಲಗ್ಬೇಕು ಅಂತಿದ್ದೆ ಇನ್ನೂ ಹರಟೆ ಹೊಡೀತಾ ಇದ್ದಿ."

"ಎಲ್ಲೋ ಹಸಿವಾಗಿತ್ತೂಂತ ಕಾಣುತ್ತಮ್ಮ, ಊಟವಾದ ಕೂಡ್ಲೇ ಸುಸ್ತೆಲ್ಲಾ ಹೊರಟ್ಹೋಯ್ತು."

ಊಟವಾದ ಕೂಡಲೆ ಅಲ್ಲ, ಚಂಪ ಹೊರಟುಹೋದ ಕೂಡಲೆ ಎಂದು ಹೇಗೆ ಹೇಳಿಯಾನು? ಚಂಪಳ ಜೊತೆ ಹೋಗಲು ಇಷ್ಟವಿಲ್ಲದೆ ನಾಟಕವಾಡಿದ್ದ ಮಾಧು.

"ಹುಚ್ಚು ಹುಡುಗ, ಹಸಿವಾಗಿದ್ದೂ ಗೊತ್ತಾಗೊಲ್ಲ ಇನ್ನೂ"-ತಾಯಿ ಅಕ್ಕರೆಯಿಂದ ನುಡಿದರು.

"ನೀನು ನನ್ನನ್ನು ಹುಡುಗ ಹುಡುಗ ಅಂತಿರು, ಇಷ್ಟರಲ್ಲೇ ನನಗೆ ಮೂವತ್ತು ವರ್ಷವಾಗುತ್ತೆ."

ಅವನು ಖುಷಿಯಿರುವಾಗಲೇ ತಮ್ಮ ಮನದಿಂಗಿತ ಹೇಳಿಬಿಡಬೇಕೆಂದು-

"ನೀನು ಹುಡುಗ ಅಲ್ಲ ಅನ್ನೋ ಹಾಗೆ ನಡಕೋ, ಆವಾಗ ನಾನು ಅನ್ನೋಲ್ಲ" ಅಂದರು.

"ಅಂದ್ರೆ ಹೇಗೆ ನಡ್ಕೋಬೇಕು?"

"ಮದುವೆ ಮಾಡ್ಕೊಬೇಕು ಮಾಧು ನೀ ಫಾರಿನ್ನಿನಿಂದ ಬರಲಿ ಅಂತ ಕಾಯ್ತಾ ಇದ್ವಿ. ಚಂಪ ಒಂಟಿಕಾಲಲ್ಲಿ ತಪಸ್ಸು ಮಾಡ್ತಿದಾಳೆ. ಇನ್ನೂ ಯಾತಕ್ಕೆ ನಿಧಾನ ಮಾಡ್ಬೇಕು?" ತಾಯಿ ಗಂಭೀರವಾಗಿ ಹೇಳಿದರು. ತಂದೆ, ಈ ತಾಯಿ ಮಗನ ಸಂಭಾಷಣೆ ಕೇಳುತ್ತಾ ಮಲಗಿದ್ದರು

ತಾಯಿಯ ಇಷ್ಟಕ್ಕೆ ಎದುರು ಹೇಳದಿದ್ದರೆ ಚಂಪಳನ್ನು ಮದುವೆ ಆಗಬೇಕು. ಈಗಿನ ತನ್ನ ಮನಃಸ್ಥಿತಿಯಲ್ಲಿ ತಾನು ಚಂಪಳನ್ನು ಆಗುವುದು ಸಾಧ್ಯವೇ ಇಲ್ಲ ಆದರೆ ತನ್ನ ಮನಸ್ಸಿನ ಹುಡುಗಿ ಸುಮಳೆಡೆಗೆ ಅಮ್ಮ ಸುಮುಖಿಯಲ್ಲ ಈಗ ಸುಮಳ ವಿಷಯ ಹೇಳುವುದು ಸರಿಯೂ ಅಲ್ಲ.

ಅವನು ಸ್ವಲ್ಪ ಮೌನವಾಗಿದ್ದುದನ್ನು ಕಂಡು ತಾಯಿ ಉತ್ತೇಜಿತರಾದರು ಅವರು ಏನೋ ಹೇಳಲು ಬಾಯಿ ತೆರೆಯುವಷ್ಟರಲ್ಲಿ-" ಆ ಮಾತು ಸಾಧ್ಯವೇ ಇಲ್ಲಮ್ಮ ' ಎಂದುಬಿಟ್ಟ.

"ಯಾಕೇಂತ ಮಾಧು"-ಏನೋ ಹಟ ಸ್ಫುರಿಸಿತು ಆಕೆಯ ಸ್ವರದಲ್ಲಿ.

"ಮದುವೆ, ಮದುವೆ, ಆ ಮಾತು ಬಿಟ್ರೆ ಬೇರೆ ಮಾತೇ ಇಲ್ವೇನಮ್ಮ? ಈ ಮೂರು ವರ್ಷ ಆ ಮಾತೇ ಬಂದಿರ್ಲಿಲ್ಲ. ಹಾಯಾಗಿದ್ದೆ"-ಏನೋ ನೆನಪಾಗಿ, ಸಂಜೆಯ ಸಂತೋಷವೆಲ್ಲಾ ಮಾಯವಾದಂತಾಯಿತು ಮನ ಕಹಿಯಾಯಿತು. ಮುಖ ಸಿಂಡರಿಸಿ ಕುಳಿತ.

"ಹೇಳಬಾರದ್ದು ನಾನು ಏನೋ ಹೇಳಿದೆ?"

"ಹೇಳಬಾರದ್ದಲ್ದೆ ಮತ್ತೇನಮ್ಮ? ನನಗೆ ಮದುವೆ ಆಗಿಲ್ಲ ಅಂತ್ಲೇನು ನಿನ್ನರ್ಥ?"

"ಅದೂ...." ತಡವರಿಸಿದರು ತಾಯಿ. ಪೆಚ್ಚಾಗಿ ನೋಡುತ್ತಿದ್ದರು ತಂದೆ.

"ಉದ್ಧಾರವಾಗ್ತೀನಿ ಅಂತ ನನಗೆ ಮದ್ವೆ ಮಾಡಿ, ಕಂಡರೀದ ಹುಡುಗೀನ್ನ ಬಲಿ ತೊಗೊಂಡಾಯ್ತು. ನಾನಂತೂ ಉದ್ಧಾರವಾದೆ, ಆದ್ರೆ....ಅಮ್ಮ, ನನ್ನ ಸಂಕಟ ನಿನಗೆ ಯಾಕೆ ತಿಳಿಯೋಲ್ಲಾಮ್ಮ?" ಎಂದು ಎರಡು ಕೈಗಳಿಂದ ಮುಖ ಮುಚ್ಚಿಕೊಂಡು ದುಃಖಿಸಿದ

ತಾಯಿ ಅಚೇತನರಾದರು. ಹತ್ತಿರ ಬಂದು ಅವನ ಬೆನ್ನ ಮೇಲೆ ಕೈಯಿಟ್ಟು-"ನನಗೆ ತಿಳಿಯುತ್ತೆ ಮಾಧು. ಆದ್ರೆ ನಿನ್ನ ಮನಸ್ಸು ಇಷ್ಟು ಹೊತ್ತಿಗೆ ತಹಬಂದಿಗೆ ಬಂದಿರಬಹುದೂಂತ, ಈ ಮಾತೆತ್ತಿದೆ ನೀನು ದುಃಖಪಡಬಾರ್ದು"ಎಂದು ಸೆರಗಿನಿಂದ ಕಣ್ಣೊರೆಸಿಕೊಂಡರು.

ರಾಯರು ಅಸಹನೆಯಿಂದ- ನಿಂಗೆ ಎಷ್ಟು ಸಲ ಹೇಳಿದ್ದೀನಿ ನಾಗೂ, ಅವನ ಮುಂದೆ ಈ ವಿಷಯ ಎತ್ತಬೇಡಾಂತ, ನೀನು ಕೇಳೋಲ್ಲ' ಎಂದು ಸುಮ್ಮನಾದರು.

ಮೂವರ ಮುಖವೂ ಮ್ಲಾನವಾಯಿತು. ಹಲ ನಿಮಿಷಗಳೇ ಕಳೆದುವು ಮಾಧು ಎದ್ದು ಮಲಗುತ್ತೇನೆಂದು ಹೊರಟಾಗ, ರಾಯರು ಸನ್ನೆ ಮಾಡಿ ಕರೆದು ಮಂಚದ ಮೇಲೆ ಕೂರಿಸಿಕೊಂಡರು ಅವನ ಕೈ ಹಿಡಿದು, ಮೃದುವಾದ, ಗಂಭೀರವಾದ ಕನಿಕರದ ಧ್ವನಿಯಲ್ಲಿ-

"ವೇಣು, ನಿಮ್ಮಮ್ಮ ಏನೋ ಹೇಳಿದ್ಲೂಂತ ಮನಸ್ಸಿಗೆ ಹಚ್ಕೋಬೇಡ. ನಿನಗಾಗಿ ನಿನಗೆ ಮದುವೆ ಬೇಕೆನಿಸಿದಾಗ, ನಾಚಿಕೆಪಡದೆ ನನ್ನ ಹತ್ತಿರ ಹೇಳು. ನಿನಗೆ ಆಗಿರೋ ನೋವು ನಾನು ಅರ್ಥಮಾಡ್ಕೊಂಡಿದೀನಿ ಮದುವೆ ಮಾಡಿಕೊಳ್ಳಲೇಬೇಕು ಅಂತ್ಲೂ ನಾನು ಹೇಳ್ತಾ ಇರಲಿಲ್ಲ. ಆದರೆ...."ಎಂದು ಅವನ ಕಡೆ ನೋಡಿದರು.

'ಹುಂ ಹೇಳಿ' ಎನ್ನುವಂತೆ ತಲೆ ಆಡಿಸಿದ ಅವನು. ರಾಯರು ಮುಂದು ವರಿಸಿದರು

"ನಮ್ಮದು ಬಹಳ ಒಳ್ಳೆಯ ವಂಶ. ಅದು ನಿನ್ನ ತಲೆಗೇ ಇತಿಶ್ರೀ ಆಗಬಾರ್ದು ಆದ್ರಿಂದ ನೀನು ಮುದುವೆ ಆಗ್ಲೇಬೇಕು ಅನ್ನೋದು ನನ್ನ ಮತ್ತು ನಿಮ್ಮಮ್ಮನ ಆಸೆ ಅದಕ್ಕಾಗಿ ಈ ಹಂಬಲ ನಮ್ಮದು ನಿನ್ನ ಮನಸ್ಸನ್ನು ನೀನು ಯಾವತ್ತಿಗೆ ಸ್ಥೈರ್ಯಗೊಳಿಸ್ತೀಯೋ ಅವತ್ತೇ ಆಗ್ಲಿ. ನಾನು ಬಲವಂತ ಮಾಡೋಲ್ಲ. ಆದ್ರೆ ಈ ವಿಷಯ ನೀನು ನೆನಪಿಟ್ಕೊಂಡ್ರೆ ಸಾಕು ಇನ್ನು ಯೋಚನೆ ಮಾಡದೆ ಮಲಕ್ಕೋ ಹೋಗು. ಹೋಗಪ್ಪಾ"ಎಂದು ಬೆನ್ನು ತಟ್ಟಿ ಕಳುಹಿಸಿದರು.

ನಾಗಮ್ಮ ಹಾಸಿಗೆಯಲ್ಲಿ ಮಲಗಿ ಮೂಗು ಸೊರಗುಟ್ಟಿಸುತ್ತಿದ್ದರು. ವೇಣು ತಂದೆಯ ಕೋಣೆಯ ದೀಪ ಆರಿಸಿ, ಕಾಲೆಳೆಯುತ್ತಾ ಮೆಟ್ಟಲೇರಿದ. ತನ್ನ ಹಾಸಿಗೆಯ ಮೇಲೆ ಧೊಪ್ಪನೆ ಬಿದ್ದ. ಕಿಟಕಿಯಿಂದಾಚೆ

ಕಾಂಪೌಂಡಿನ ಗೋಡೆಯ ಮೇಲೆ ಬಿದ್ದ ಬೆಳಕಿನಿಂದ ಸುಮ ಇನ್ನೂ ಮಲಗಿಲ್ಲವೆಂದು ತಿಳಿಯಿತು. ತನ್ನ ಗತಚರಿತ್ರೆ ಅವಳಿಗೆ ತಿಳಿದರೆ ಅವಳ ಇಂದಿನ ಸಂತೋಷವೂ ಮಾಯವಾಗುತ್ತದೇನೋ!

## 2

ಆ ರಾತ್ರಿ ತಂದೆ, ತಾಯಿ, ಮಗ ಒಬ್ಬರೂ ಕಣ್ಣು ಮುಚ್ಚಲಿಲ್ಲ. ಆ ಕತ್ತಲ ದಿನಗಳು ವೇಣುವಿಗೆ ಚೆನ್ನಾಗಿ ನೆನಪಿದೆ. ಆ ಪುಟ್ಟ ಹುಡುಗಿಯ ಮುಖವನ್ನು ಅವನು ಮರೆಯಲೇಲಾರ. ಅಂದಿನಿಂದ ಎಂದಿನವರೆಗೆ ಅದೆಷ್ಟೋ ಹೆಣ್ಣುಗಳ ಮುಖಗಳ ಪರಿಚಯವಿದೆ ಅವನಿಗೆ. ಅವೆಲ್ಲವುಗಳನ್ನು ಮುಚ್ಚಿ ಎದ್ದು ನಿಲ್ಲುತ್ತದೆ ಪುಟ್ಟ ಪುಟ್ಟಿಯ ವದನ

ತಾನಾಗ ಎಸ್.ಎಸ್.ಎಲ್.ಸಿ. ಪಾಸು ಮಾಡಿದ್ದ ತನಗಾಗ ಹದಿನಾಲ್ಕು ವರ್ಷ ಇರಬೇಕು. ಏಳನೇ ರ್‍ಯಾಂಕ್ ಗಳಿಸಿದ್ದ ತಮ್ಮ ಮಗನ ಅಭ್ಯುದಯಕ್ಕೆ ತಾಯಿ ತಂದೆ ಉಬ್ಬಿಹೋಗಿದ್ದರು. ಆದರೆ ಅದು ಯಾರ ಕಣ್ಣು ತಗುಲಿತೋ ತನಗೆ ದಿನೇ ದಿನೇ ಜ್ವರ ಬರಲಾರಂಭಿಸಿತು ಓದಿನ ಗೀಳಿನಲ್ಲಿದ್ದ ತನಗೆ ಜ್ವರದ ಪರಿವೆಯೂ ಇಲ್ಲದೆ ಕಾಲೇಜಿಗೆ ಹೋಗುತ್ತಲೇ ಇದ್ದ. ತಾಯಿ ಎಷ್ಟೋ ಜಾಗ್ರತೆ ವಹಿಸಿದ್ದರು. ಎರಡು ವರ್ಷಗಳು ನರಳುತ್ತ ನರಳುತ್ತಲೇ ಇಂಟರ್ ಪಾಸು ಮಾಡಿದ. ತಾನಿದ್ದ ಅನಾರೋಗ್ಯದಲ್ಲಿ ಪಾಸು ಮಾಡುವುದೇ ಕಷ್ಟವಿದ್ದಾಗ ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿದ್ದ. ಲೆಖ್ಖ, ಭೌತಶಾಸ್ತ್ರಗಳಿಗಿಂತ ಮೊದಲಿನಿಂದಲೂ ಅವನಿಗೆ ರಸಾಯನ ಶಾಸ್ತ್ರದಲ್ಲಿ ಆಸಕ್ತಿ ಹೆಚ್ಚು. ಅವನ ಆಸಕ್ತಿಗೆ ತಕ್ಕಂತೆ ಅದರಲ್ಲಿ ಹೆಚ್ಚು ಅಂಕ ಪಡೆದಿದ್ದ. ಎಲ್ಲರಿಂದಲೂ ಪ್ರಶಂಸೆ ಪಡೆದಿದ್ದ. ಕೆಮಿಸ್ಟ್ರಿ ಆನರ್ಸ್‌ಗೆ ಸೇರುವ ಅವನ ಇಚ್ಛೆಗೆ ಯಾರೂ ಅಡ್ಡಿಯಾಗಲಿಲ್ಲ.

ಆದರೆ ವಿಧಿ ಬೇಡವೆಂದಿತು ತಾನು ಕಾಲೇಜಿಗೆ ಸೇರಲಾಗಲೇ ಇಲ್ಲ ಪೂರಾ ಹಾಸಿಗೆ ಹಿಡಿದುಬಿಟ್ಟ. ಅಣ್ಣ ತನ್ನನ್ನು ತೋರಿಸಿದ ಡಾಕ್ಟರುಗಳಾದರೂ ಅದೆಷ್ಟು ಜನ! ಅಣ್ಣನ ಮುಖದಲ್ಲಿ ಕಾಣುತ್ತಿದ್ದ ಆತಂಕ ತಾನು ಮರೆಯಬಲ್ಲನೆ? ಒಬ್ಬ ಡಾಕ್ಟರಿಗಾದರೂ ತನ್ನ ಕಾಯಿಲೆಯ ಮೂಲ ತಿಳಿಯಲಿಲ್ಲ. ದಿನದಿನಕ್ಕೆ ಕೃಶನಾದ. ಕ್ರಮೇಣ ಅವನಿಗೆ ಮೈ ಕೈ ಅಲುಗಿಸಲೂ ಸಹ ಶಕ್ತಿ ಸಾಲದಾಯಿತು ಮಾತು ಆಡಲೊಲ್ಲದಾದ. ಅಲೋಪತಿ ವೈದ್ಯರಲ್ಲದೆ ಆಯುರ್ವೇದ, ಹೋಮಿಯೋಪತಿ, ಯುನಾನಿ ಎಲ್ಲ ತರಹದ ಡಾಕ್ಟರುಗಳೂ ತಮ್ಮ ಮನೆಯ ಮೆಟ್ಟಲು ಸವೆಸಿದರು. ಅಣ್ಣನ ಹಣ ನೀರಾಗಿ ಹರಿಯಿತೇ ವಿನಾ ತಾನು ಚೇತರಿಸಿಕೊಳ್ಳಲಿಲ್ಲ. ಸಾಯಲೂ ಇಲ್ಲ. ಅಮ್ಮನ ದುಃಖ, ಅಣ್ಣನ ಮೌನ ವೇದನೆ, ತಾನೇಕೆ ಬೇಗ ಸತ್ತು ಹೋಗಬಾರದೆಂದು ಪರಿತಪಿಸುವಂತೆ ಮಾಡುತ್ತಿತ್ತು. ಜೋರಾಗಿ ಅಳಲೂ ಸಹ ಚೈತನ್ಯ ಸಾಲದೆ ತನಗಿದ್ದುದು ಕಣ್ಣುಗಳು ಮಾತ್ರ. ಅವುಗಳಲ್ಲಿ ಎಡೆಬಿಡದೆ ನೀರು ಸುರಿಯಲು ಪ್ರಾರಂಭವಾಯಿತು.

ಅದನ್ನು ಒರೆಸಿಕೊಳ್ಳಲು ಸಹ ತನಗೆ ಕೈ ಎತ್ತಲಾಗದೆ ಅಮ್ಮನೇ ಒರೆಸುತ್ತಿದ್ದಳು.

ಕಡೆಗೆ ಮಲೆಯಾಳದ ಮಾಂತ್ರಿಕನಿಗೂ ಮೊರೆಹೊಕ್ಕಳು ಅಮ್ಮ. ಅಣ್ಣ ಪ್ರತಿಭಟಿಸಿದರೂ ಸಹ ಕೇಳಲಿಲ್ಲ. ಅದರಿಂದಾಗಿ ತನ್ನ ದೇಹಕ್ಕೆ ಒಂದೆರಡು ಬೇವಿನಸೊಪ್ಪಿನ ಪೆಟ್ಟುಗಳು ಬಿದ್ದುವೇ ವಿನಾ ಮತ್ತೆಲ್ಲಾ ನಿಷ್ಫಲ. ಹೀಗೆಯೇ ಮತ್ತೆರಡು ವರ್ಷಗಳು ಕಳೆದುವು ತಾನು ಜೀವಚ್ಛವದಂತೆ ಬಿದ್ದುಕೊಂಡಿರುತ್ತಿದ್ದ.

ಅದೊಂದು ದಿನ, ಅಮ್ಮ-ಅಣ್ಣ ಇದ್ದಕ್ಕಿದ್ದಂತೆ ನಂಜನಗೂಡಿಗೆ ಪ್ರಯಾಣ ಬೆಳೆಸಿದರು. ತನ್ನನ್ನೂ ಕರೆದುಕೊಂಡು ತನಗೇನೋ ಬದುಕುವ ಆಸೆಯಿಲ್ಲ ಆದರೆ ಈ ಹೆತ್ತವರಿಗೆ 'ಹಕೀಮ ನಂಜುಂಡ' ತಮ್ಮ ಮುದ್ದಿನ ಮಗನಿಗೆ ಗುಣಪಡಿಸುತ್ತಾನೆಂಬ ನಂಬಿಕೆ. ತನಗಾದರೋ ಯಾರಾದರೂ ಆಕಸ್ಮಾತ್ತಾಗಿಯಾದರೂ ತನ್ನನ್ನು ಅಲ್ಲಿನ ಕಪಿಲಾ ನದಿಯಲ್ಲಿ ತಳ್ಳಿ ಬಿಡಬಾರದೆ? ತಾನು ಹೀಗೆ ಜೀವಂತವಾಗಿ ತಾಯಿ ತಂದೆಯವರಿಗೆ ಕೊರಗು ಕೊಡುವುದಕ್ಕಿಂತ ಕಣ್ಮರೆಯಾದರೆ ಆ ನೋವು ಮಾಯವಾಗಬಹುದು ಎಂಬ ಆಕಾಂಕ್ಷೆ

ತನ್ನನ್ನು ನದಿಯಲ್ಲಿ ಮುಳುಗಿಸಿ ಒದ್ದೆಯಲ್ಲೇ ದೇವರ ಮುಂದೆ ಮಲಗಿಸುತ್ತಿದ್ದರು ಪ್ರತಿದಿನ ಬೋರಲು ದಬ್ಬಿ, ಕೈಗಳನ್ನು ತಾವೇ ಜೋಡಿಸಿ ನಮಸ್ಕಾರ ಮಾಡಿಸುತ್ತಿದ್ದರು. ಯಾವುದನ್ನೂ ಬೇಡವೆನ್ನಲು ತನಗೆ ಬಾಯಿಲ್ಲ. ಹೀಗದೆಷ್ಟು ದಿನಗಳು ಕಳೆದುವೋ ನೆನಪಿಲ್ಲ.

ಒಂದು ದಿನ ತಾನು ಮಲಗಿದ್ದ ಕೋಣೆಯ ಹೊರಗಡೆ ಹಜಾರದಲ್ಲಿ ಏನೋ ಗಡಿಬಿಡಿ. ಆದರೆ ಮೌನದ ನಿಟ್ಟುಸಿರಿನ ಓಡಾಟ. ಕೆಲ ಘಳಿಗೆಯಾದ ಮೇಲೆ ಹೊರ ಗಡೆ ಓಲಗದ ಶಬ್ದವಾಯಿತು. ನಮ್ಮ ಒಳಗಡೆ ಬಂದು ತನ್ನ ಮೇಯೆಲ್ಲಾ ಒದ್ದೆ ಬಟ್ಟೆಯಲ್ಲಿ ಒರೆಸಿ ಹೊಸ ಪಂಚೆಯೊಂದನ್ನು ತಂದು ಉಡಿಸಿ, ಉತ್ತರೀಯ ಹೊದಿಸಿ, ಹಣೆಗೆ ಅಂಗಾರವಿಟ್ಟಳು. ಇದೆಲ್ಲಾ ಏನೋ ಎಂದು ಕಣ್ಣಗಲಿಸಿ ನೋಡುತ್ತಿದ್ದ ತಾನು. ಒಂದೆರಡು ನಿಮಿಷದ ನಂತರ ಒಂದು ದೊಡ್ಡ ಸೀರೆಯನ್ನು ಹೊರಲಾರದೆ ಹೊತ್ತು, ಮುಡಿ ತುಂಬಾ ಹೂ ಮುಡಿದ ಒಂದು ಚಿಕ್ಕ ಹುಡುಗಿಯನ್ನು ಕರೆತಂದು ತನ್ನ ಹಾಸಿಗೆಯ ಬಳಿ ಯಾರೋ ಕೂರಿಸಿದರು. ಅಮ್ಮ ತನ್ನನ್ನು ಮೆಲ್ಲಗೆ ಎಬ್ಬಿಸಿ ಒರಗಿಸಿ ಕೂರಿಸಿಕೊಂಡರು. ಒಬ್ಬ ಪುರೋಹಿತರೂ ಬಂದಿದ್ದರು. ಒಬ್ಬಿಬ್ಬರು ಮುತ್ತೈದೆಯರು ಕೈಯಲ್ಲಿ ಅಕ್ಷತೆ ಹಿಡಿದು ನಿಂತರು. ಯಾರೋ ದಂಪತಿಗಳು ಬಂದರು.

ಆ ಹುಡುಗಿಯ ಕೈಯನ್ನು ತನ್ನ ಕೈಯಲಿಟ್ಟಾಗ ತನಗೆ ಅರ್ಥವಾಗಿತ್ತು. ಅವಳೊಂದಿಗೆ ತನಗೆ ಮದುವೆ ಮಾಡುತ್ತಿದ್ದಾರೆಂದು. ತನ್ನ ಕೈಯನ್ನು ಹಿಂತೆಗೆದು ಕೊಂಡು, ಬೇಡವೆನ್ನಬೇಕೆಂದು ಬಯಸಿದ. ತನಗೆ ಮದುವೆ ಬೇಡವೆಂದು ಹೇಳಬೇಕೆಂದು ಎಷ್ಟೋ ಇಷ್ಟವಾಯಿತು. ಇಂದೋ ನಾಳೆಯೋ ಸಾಯುವ ತಾನು ಆ ಪುಟ್ಟ ಹುಡುಗಿಯನ್ನು ಕಣ್ಣು ಬಿಡುವ ಮುನ್ನವೇ ವಿಧವೆ ಮಾಡಬೇಕೆ?ಆದರೆ ಯಾವುದೂ

ತನ್ನಿಂದ ಸಾಧ್ಯವಾಗಲಿಲ್ಲ. ಆ ಮಗುವನ್ನು ತನಗೆ ಧಾರೆಯೆರೆದೇ ಬಿಟ್ಟರು. ಅಣ್ಣ ಬಹಳ ದುಗುಡದ ಮುಖ ಹೊತ್ತು ನನ್ನ ಕೈಯಲ್ಲೊಂದು ತಾಳಿ ಕೊಟ್ಟರು. ಅಮ್ಮ ಕಟ್ಟಲು ಸಹಾಯ ಮಾಡಿದರು. ಆಗ....ಆಗ ಆ ಪುಟ್ಟಿ ಕಣ್ಣೆತ್ತಿ ನೋಡಿದಳು ತನ್ನ ಕಡೆಗೆ. ದೊಡ್ಡ ಕಣ್ಣಿನ ಹುಡುಗಿ ಬೆಳದಿಂಗಳಿನಂತೆ ಬಿಳುಪಾದ ಹುಡುಗಿ. ಅವಳ ಮುಖದಲ್ಲಿ ಗೆಲುವೂ ಇಲ್ಲ, ದುಃಖವೂ ಇಲ್ಲ. ಆದರೆ ಕಣ್ಣಿನಲ್ಲಿ ಮಾತ್ರ ದೈವೀಕ ಹೊಳಪಿತ್ತು. ಹಸುಕಂದನ ಮುಖ ತನಗೆ ಪಾಪ ಎನಿಸಿತು. ಅಷ್ಟೆ, ತನಗೇಕೆ ಮದುವೆ ಮಾಡಿದರೆಂಬುದು ಮಾತ್ರ ಅರಿವಾಗಲಿಲ್ಲ. ತಾನು ಮಾತ್ರ, ಏನು ಮಾಡುವಂತಿದ್ದೆ?

ಮಾರನೆಯ ದಿನ ಬೆಂಗಳೂರಿಗೆ ಹಿಂತಿರುಗುವ ಸನ್ನಾಹದಲ್ಲಿದ್ದರು. ಆ ಬೆಳಿಗ್ಗೆ ತಾನು ಎಚ್ಚರವಾಗೇ ಮಲಗಿದ್ದೆ. ಯಾರೋ ಬಾಗಿಲಿನ ಚೌಕಟ್ಟನ್ನು ಎರಡೂ ಕೈಗಳಲ್ಲಿ ಹಿಡಿದು ಮೆಲ್ಲಗೆ ಬಗ್ಗಿ ನೋಡಿದರು. ತಾನು ಎಚ್ಚರವಾಗಿರುವುದನ್ನು ನೋಡಿ ಒಳಗೆ ಬಂದವಳು ಪುಟ್ಟಿ. ತುಟಿಗಳು ಮೆಲುನಗೆ ಸೂಸುತ್ತಿದ್ದುವು ಆಗ ಸೀರೆ ಉಟ್ಟಿರಲಿಲ್ಲ. ಲಂಗ, ಜಂಪರ್ ತೊಟ್ಟು, ಎರಡು ಜಡೆ ಹಾಕಿಕೊಂಡಿದ್ದಳು. ಮೆಲ್ಲಗೆ ಹತ್ತಿರ ಬಂದು ಪಕ್ಕದಲ್ಲಿ ಕುಳಿತಳು. ಅದೇನು ತೋಚಿತೋ, ಕೈಯಲ್ಲಿಟ್ಟುಕೊಂಡಿದ್ದ ಕರವಸ್ತ್ರದಿಂದ ತನ್ನ ಕಣ್ಣು ಒರೆಸಿದಳು. ಮೆಲ್ಲಗೆ ಮುಖದ ಬಳಿ ಮುಖ ತಂದು .

"ಅಳಬೇಡಿ, ಇನ್ನು ನಿಮಗೆ ಬೇಗ ವಾಸಿಯಾಗುತ್ತೆ. ನಾನಿನ್ನೂ ದೊಡ್ಡೋಳಾ ಗಿಲ್ವಂತೆ ದೊಡ್ಡೋಳಾದ್ಮೇಲೆ ನಾನೂ ನಿಮ್ಮೂರಿಗೆ ಬರ್ತೀನಿ. ನಿಮ್ಮ ಸೇವೆ ಚೆನ್ನಾಗಿ ಮಾಡ್ತೀನಿ. ನೀವು ಚೆನ್ನಾಗಿ ಆಗ್ತೀರ. ನಾನೊಂದು ವೇಳೆ ಸತ್ತುಹೋದರೂ ಚಿಂತೆಯಿಲ್ಲ. ನೀವು ಚೆನ್ನಾಗಾಗ್ಬೇಕು"ಎಂದಳು. ಆ ಪುಟ್ಟ ಹುಡುಗಿಯಿಂದ ಅದೆಷ್ಟು ದೊಡ್ಡ ಮಾತುಗಳು! ಯಾರೋ ಹೇಳಿಕೊಟ್ಟಿರಬೇಕು.

"ನಾಳೆ ಮಧ್ಯಾಹ್ನ ಹೊಟ್ಟೋಗ್ತೀರಂತೆ, ಹೋಗ್ಬನ್ನಿ"ಎಂದು ಎದ್ದಳು. ಬಾಗಿಲವರೆಗೆ ಹೋದವಳು ಮತ್ತೆ ಹಿಂತಿರುಗಿ ಬಂದು ತನ್ನ ಜಂಪರಿನೊಳಗಿಂದ ಒಂದು ಫೋಟೋ ತೆಗೆದು-

"ಇದನ್ನು ಇಟ್ಕೊಂಡಿರಿ. ನಾನು ನಿಮ್ಮೂರಿಗೆ ಬಂದಾಗ ಗುರುತು ಹಿಡಿತೀರಾ? ದೊಡ್ಡೋಳಾದ್ಮೇಲೆ ಬೇರೆ ತರ ಆಗಿರ್ತೀನಂತೆ"ಎಂದು ಅಲ್ಲೇ ಇದ್ದ ಒಂದು ಸೂಟ್‌ಕೇಸಿನ ಬಾಗಿಲನ್ನು ಎತ್ತಿದಳು ಬೀಗ ಹಾಕದ ಅದು ತೆರೆದುಕೊಂಡಿತು. ಅದರೊಳಗಿದ್ದ ಯಾವುದೋ ಒಂದು ಇಟ್ಟಳು. ಸಣ್ಣ ಡೈರಿಯಂತಹ ಪುಸ್ತಕದಲ್ಲಿ ಅದನ್ನು ಇಟ್ಟಳು. ಮತ್ತೆ ಬಾಗಿಲು ಮುಚ್ಚಿ ಎದ್ದು ತನ್ನ ಕಾಲ ಬಳಿ ಬಂದು ಬಗ್ಗಿ ಕಾಲು ಮುಟ್ಟಿ ನಮಸ್ಕರಿಸಿ ಹೊರಗೆ ಹೊರಟವಳು, ಬಾಗಿಲ ಬಳಿ ನಿಂತು ಹಿಂದಕ್ಕೆ ತಿರುಗಿ ನೋಡಿದಳು. ಆ ದೊಡ್ಡ ಕಣ್ಣುಗಳು ಏನೋ ಆಶ್ವಾಸನೆ ನೀಡಿದುವು.

ಆ ದೃಶ್ಯ, ಆ ಮುಖ, ಆ ಕಣ್ಣುಗಳನ್ನು ಎಂದಿಗೂ ಎಂದೆಂದಿಗೂ ಮರೆಯಲಾರ ತಾನು. ಮತ್ತೆ ತಾನು ಪುಟ್ಟಿಯನ್ನು ನೋಡಲಿಲ್ಲ. ಆ ಕಡೆಯ ದಿನದ ದೃಶ್ಯವೇ ತನ್ನ ಮನಃಪಟಲದ ಮೇಲೆ ನಿಚ್ಚಳವಾಗಿ

ನಿಂತಿದೆ. ಅವಳ ಭಾವಚಿತ್ರ ತನ್ನ ಬಳಿ ಭದ್ರವಾಗಿದೆ. ಈಗಲೂ ಯಾವಾಗಲಾದರೊಮ್ಮೆ ಅದನ್ನು ನೋಡದಿದ್ದರೆ ತನಗೆ ತೃಪ್ತಿಯೇ ಇಲ್ಲ.

ದೈವದ ವಿಚಿತ್ರ ಆಟ! ಅದೇನು ಆ ಹುಡುಗಿಯ ಮಾಂಗಲ್ಯದ ಬಲವೋ, ತನ್ನ ಅದೃಷ್ಟವೋ, ನಂಜನಗೂಡಿನ ದೈವ ನಂಜುಂಡೇಶ್ವರನ ಆಶೀರ್ವಾದವೋ, ಇಷ್ಟು ದಿನಗಳ ಔಷಧದ ಪ್ರಭಾವ ಆಗ ಕಾಣತೊಡಗಿತೋ, ತಾನಂತೂ ಬೆಂಗಳೂರಿಗೆ ಹಿಂತಿರುಗಿದ ಒಂದು ತಿಂಗಳೊಳಗಾಗಿ ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಂಡ ಅಮ್ಮ, ಅಣ್ಣನ ಸಂಭ್ರಮಕ್ಕೆ ಮಿತಿಯೇ ಇಲ್ಲ. ಪುಟ್ಟಿಯನ್ನು ಕೊಂಡಾಡಿದರು. ಮನೆಯ ಜ್ಯೋತಿಯೆಂದರು, ಭಾಗ್ಯದೇವತೆಯೆಂದರು. ತನ್ನ ಬದುಕಿನ ಅಧ್ಯಾಯ ಮಗುಚಿತು. ತಾನು ಮತ್ತೆ ಓಡಾಡುವಂತಾದ, ಆರು ತಿಂಗಳಲ್ಲಿ ಮಾತಾಡುವಂತಾದ.

ಕಾಲೇಜು ತೆರೆಯುವ ದಿನಗಳು. ಸೇರಲೇಬೇಕೆಂಬ ಹಂಬಲ ತನ್ನದು. ಅಮ್ಮನ ಎಣಿಕೆಯಲ್ಲಿ ತಾನಿನ್ನೂ ಗುಣವಾದವನಲ್ಲ. ಹಾಗೆಂದು ಈಗ ಸೇರದಿದ್ದರೆ ಮತ್ತೆ ಒಂದು ವರ್ಷ ಸೇರುವಂತಿಲ್ಲ. ತಂದೆ, ಯಾವಾಗಲೂ ತನ್ನ ಕಡೆ. ಅಪ್ಲಿಕೇಷನ್ ಹಾಕಿದರು. ತನ್ನ ಇಚ್ಛೆಯ ಪ್ರಕಾರವೇ ಕೆಮಿಸ್ಟ್ರಿ ಆನರ್ಸ್ ಸೇರಿದ್ದಾಯಿತು. ತನಗಾಗಿ ಮತ್ತೆ ಕಾರು ಕೊಂಡರು. ತಾನು ಚಿಕ್ಕವನಿದ್ದಾಗ ಮಾರಿದ ಮೇಲೆ ತಂದೆ ಕಾರನ್ನೇ ಬಳಸುತ್ತಿರಲಿಲ್ಲ. ನಾಣಿಯನ್ನು ಡ್ರೈವರನಾಗಿ ನೇಮಿಸಿದರು. ನಾಣಿ!ಈಗ ಎಲ್ಲಿದ್ದಾನೋ. ಅವನು ಬರಿಯ ಡ್ರೈವರನಾಗಿರಲಿಲ್ಲ. ಗೆಳೆಯ, ಸೇವಕ, ಎಲ್ಲವೂ ಅವನೇ. ಆ ಒಂದು ವರ್ಷ ತನ್ನನ್ನು ಮಗುವಿನಂತೆ ನೋಡಿಕೊಂಡ. ಉಡುಪು ತೊಡಿಸುವುದರಿಂದ ಹಿಡಿದು ಕಾಲೇಜಿಗೆ ಹೋಗಿ ಸೀಟಿನಲ್ಲಿ ಕುಳಿತುಕೊಳ್ಳುವವರೆಗೆ ಹಿಂದೆ ಬಂದು ಮತ್ತೆ ಸಂಜೆ ಹಿಂತಿರುಗುವಾಗ ಕರೆದೊಯ್ಯುತ್ತಿದ್ದ. ಆ ವರ್ಷ ಕಳೆಯುವುದರಲ್ಲಿ, ಮೊದಲನೆಯ ಆನರ್ಸ್ ಮುಗಿಯುವಲ್ಲಿ ತಾನು ಸಂಪೂರ್ಣವಾಗಿ ಗುಣಮುಖನಾದ. ಅಣ್ಣ ನಾಣಿಗೆ ಸರಕಾರಿ ಕೆಲಸ ಸಿಗಲು ಸಹಾಯಮಾಡಿ ಆಶೀರ್ವಾದ ಮಾಡಿ ಕಳುಹಿಸಿಕೊಟ್ಟರು.

ತಾನು ಒಂದು ಹೆಜ್ಜೆಯೂ ನಡೆಯದಂತೆ ಅಮ್ಮ ಎಚ್ಚರ ವಹಿಸಿದರು. ತನಗೆ ಇಷ್ಟು ಓದು ಔಷಧಿಗಳ ಮಧ್ಯದಲ್ಲೂ ಪುಟ್ಟಿಯ ನೆನಪು. ದೊಡ್ಡವಳಾಗದಿದ್ದರೆ ಏನಂತೆ. ಬಂದು ಮನೆಯಲ್ಲಿರಬಹುದಲ್ಲ. ತನ್ನನ್ನು ಬದುಕಿಸಿದ ದೇವತೆ ಆ ಪುಟ್ಟಿ, ಪುಟ್ಟಿ. ಈ ಯೋಚನೆ ಬಂದ ಕೂಡಲೆ ತನ್ನ ತಂದೆಯ ಮುಂದೆ ಮನ ಬಿಚ್ಚಿದ.

"ಅಣ್ಣ, ನಾಣಿಯೂ ಇಲ್ಲದೆ ಮನೆಯಲ್ಲಿ ಬೇಜಾರು. ಪುಟ್ಟೀನ್ನ ಕರೆಸಿಬಿಡೋಣ್ವಾ?"

ತಂದೆ ಮಾತನಾಡಲಿಲ್ಲ. ಪತ್ನಿಯ ಕಡೆ ನೋಡಿದರು-ಅಷ್ಟೆ. ಈಗೊಂದು ವರ್ಷದಿಂದಲೂ ಗಮನಿಸುತ್ತಲೇ ಇದ್ದ. ತನಗೆ ಗುಣವಾದುದಕ್ಕೆ ಸಂತೋಷಪಟ್ಟರೂ ತಾಯಿ ತಂದೆಯರ ಮುಖದಲ್ಲಿ ಹರ್ಷವಿಲ್ಲ. ನಿಸ್ತೇಜಕವಾಗಿದೆ ಅವರ ಮುಖಗಳು. ಈಗ ಇಬ್ಬರೂ ಒಬ್ಬರ ಮುಖ ಒಬ್ಬರು

ನೋಡಿಕೊಂಡಾಗ ತನಗೆ ಅನುಮಾನ, ಐಶ್ವರ್ಯದ ಮದದಿಂದ ಆ ಬಡಹುಡುಗಿಯನ್ನು ಇವರು ಈಗ ತಿರಸ್ಕರಿಸುತ್ತಿರ ಬಹುದೆ ಎಂದು ಸ್ವಲ್ಪ ಸಮಯದ ನಂತರ, ತಂದೆ-"ಒಂದು ಘಳಿಗೆ ನನ್ನ ಕೋಣೆಗೆ ಬಾ ವೇಣು. ನಾಗೂ, ಕಾಫಿ ತಿಂಡಿ ನನ್ನ ರೂಮಿಗೇ ತೊಗೊಂಡ್ಬಾ"ಎಂದು ಮೆಟ್ಟಲು ಹತ್ತಿದರು. ಆಗ ಅಮ್ಮ ಅಣ್ಣನ ಕೋಣೆ ಮಹಡಿಯ ಮೇಲಿತ್ತು. ತಾನು ಹೆಚ್ಚು ಆಯಾಸಗೊಳ್ಳಬಾರದೆಂದು ಕೆಳಗಿನ ಕೊರಡಿ ತನ್ನದಾಗಿತ್ತು.

ತಾನು ತಂದೆಯನ್ನು ಹಿಂಬಾಲಿಸಿ ಕೋಣೆಯ ಒಳಗಡೆ ಹೋದಕೂಡಲೆ, ಗಂಟಲು ಸರಿಮಾಡಿಕೊಂಡು ಅಣ್ಣ ಅಸ್ಪಷ್ಟ ದನಿಯಲ್ಲಿ-"ವೇಣು, ಪುಟ್ಟೀನ ಕರೆಸೋಕ್ಕೆ ಆಗೋಲ್ಲಪ್ಪ. ನೀನು ಅವಳನ್ನು ಮರೆತ್ಬಿಡ್ಬೇಕು"ಎಂದರು.

ತನಗೆ ಕೋಪ, ಅಸಹ್ಯ, ಜಿಗುಪ್ಸೆಯಾಗಿ "ನನಗೆ ಗೊತ್ತು. ನೀವು ದೊಡ್ಡ ಮನುಷ್ಯರು. ನಿಮ್ಮ ಮಗ ಬದುಕಿ ಉದ್ಧಾರವಾಗಲಿ ಅಂತ ಒಂದು ಬಡಹುಡುಗಿಗೆ ಮೋಸ ಮಾಡಿ ಮದುವೆ ಮಾಡಿದ್ರಿ. ನಿಮ್ಮ ಕೆಲಸ ಆಯ್ತು. ನಿಮಗೆ ಅವರ ಅಗತ್ಯ ಇನ್ಯಾಕೆ?"ಎಂದಿದ್ದ ಕಹಿಯಾಗಿ

ತಂದೆ ತಲೆತಗ್ಗಿಸಿ ಕುಳಿತರು ಇದರಿಂದ ತನ್ನ ಸಂಶಯ ದೃಢವಾಗಿ ಮತ್ತೂ ನೋವಿನಿಂದ ಹೇಳಿದ ತಾನು "ನಾನು ನಿಮ್ಮನ್ನ ಇನ್ನೇನೂ ಕೇಳೋಲ್ಲ. ನನಗೆ ಜೀವ ಕೊಟ್ಟ ಆ ಒಂದು ಹುಡುಗಿಯನ್ನು ಅಸಡ್ಡೆ ಮಾಡ್ಬೇಡಿ ಅಣ್ಣ." ಆ ವೇಳೆಗೆ ತಾಯಿ ತಿಂಡಿ ತಟ್ಟೆಗಳನ್ನು ಹಿಡಿದು ಅಲ್ಲಿ ಬಂದವ್ರು ಅವನ್ನೆಲ್ಲಾ ಟೇಬಲ್ಲಿನ ಮೇಲಿಟ್ಟು, ತನ್ನ ದೀನದನಿಯಿಂದ ವಿಚಲಿತರಾಗಿ ಕಣ್ಣು ಒರೆಸಿಕೊಂಡರು.

"ವೇಣು, ನೀನು ನನ್ನನ್ನು ಇನ್ನೂ ಅರ್ಥ ಮಾಡ್ಕೊಂಡಿಲ್ಲ. ಬಡವರೂಂತ ನಾನು ಯಾರನ್ನೂ ಅಸಡ್ಡೆ ಮಾಡೋಲ್ಲ ಅಂತ ನಿನಗೆ ಗೊತ್ತಿರಬೇಕಲ್ವಾ?"ಎಂದರು ತಂದೆ.

"ಹಾಗಾದ್ರೆ ಮತ್ಯಾಕಣ್ಣ ಪುಟ್ಟೀನ್ನ ಕರೆಸಬಾರದು?"- ಅಸಹನೆಯಿಂದ ಕಹಿಯಾಗಿ ಕೂಗಿದ

ಸ್ವಲ್ಪ ಇರು ಎನ್ನುವಂತೆ ಕೈಮಾಡಿ, ತಮ್ಮ ಬೀರು ತೆಗೆದು, ಡೈರಿಯೊಳಗೆ ಮಡಿಸಿಟ್ಟಿದ್ದ ಒಂದು ಕಾಗದ ತೆಗೆದು ಕೈಯಲ್ಲಿ ಇಡುತ್ತಾ-"ನೀನಿನ್ನೂ ಚೇತರಿಸಿ ಕೊಂಡಿಲ್ಲ ವೇಣು. ಹೆಚ್ಚು ಉದ್ವೇಗ ಮಾಡ್ಕೋಬೇಡ. ಘಟನೆಗಳನ್ನು ಬಂದಹಾಗೇ ಒಪ್ಪಿಕೊಳ್ಳಬೇಕು"ಎಂದರು. ಅಮ್ಮ ಅಲ್ಲಿ ನಿಲ್ಲದೆ ಹೊರಟುಹೋದರು. ತಮ್ಮ ಕರುಳ ಕುಡಿ ಪಡುವ ಬವಣೆ ನೋಡುವುದು ಅವರಿಗೆ ಬೇಕಿಲ್ಲ. ನೋಡಲಾರರು.

ಅಚ್ಚರಿಯಿಂದ ಪತ್ರ ಬಿಚ್ಚಿದ ತಾನು ಎಲ್ಲವೂ ವಿಚಿತ್ರವಾಗಿ ಕಾಣುತ್ತಿತ್ತು.

'ರಾಯರಿಗೆ ನಮಸ್ಕಾರಗಳು. ವಿಷಯ ತಿಳಿಸಲು ವಿಷಾದವಾಗುತ್ತಿದೆ. ಆದರೂ ವಿಧಿಯಿಲ್ಲದೆ ತಿಳಿಸುತ್ತಿದ್ದೇನೆ. ಚಿ|| ಸೌ|| ಪುಟ್ಟ ಮತ್ತು ಅವಳ ತಾಯಿ ಈಗೆಂಟು ದಿನದ ಹಿಂದೆ ಬಂದ ಜೋರಾದ

ಮಳೆಯಿಂದ ಮನೆ ಕುಸಿದು ಬಿದ್ದು ಮೃತರಾದರು. ಎಲ್ಲಾ ಕಾರ್ಯಗಳನ್ನೂ ಮುಗಿಸಿದ್ದೇನೆ. ನೀವು ಬರುವ ಅಗತ್ಯವಿಲ್ಲ.

ಇತಿ

ಸೋಮಶೇಖರ"

ನಡುಗುವ ಕೈಗಳಿಂದ ಹಿಡಿದು ಆ ಪತ್ರವನ್ನು ಹತ್ತಾರು ಬಾರಿ ಓದಿದ ತಾನು. ಆ ಕಾಗದ ಬಂದು ಒಂದು ವರ್ಷವೇ ಆಗಿದೆ. ಅಂದರೆ ಮದುವೆಯಾದ ಆರೇ ತಿಂಗಳಲ್ಲಿ ಅನಾಹುತ ನಡೆದುಹೋಗಿದೆ. ತನಗೆ ಪ್ರಾಣಜ್ಯೋತಿ ನೀಡಿದ ಆ ಪುಟ್ಟ ಜ್ಯೋತಿ ಬತ್ತಿ ಹೋಗಿ-'ನಾನು ಸತ್ತು ಹೋದರೂ ನೀವು ಚೆನ್ನಾಗಿ ಆಗಬೇಕು'ಎಂದಿದ್ದ ಆ ಪುಟ್ಟ ಮುಖ ತನ್ನನ್ನ ಚುಚ್ಚತೊಡಗಿತು.

ಕೈಗಳಲ್ಲಿ ಮುಖ ಮುಚ್ಚಿ 'ಅಣ್ಣಾ ಯಾಕಣ್ಣ ಹೀಗಾಯ್ತು?' ಎಂದು ತಾನು ರೋದಿಸಿದಾಗ,

ತೆಕ್ಕೆಸಿಕೊಂಡು "ಇದೆಲ್ಲಾ ವಿಧಿನಿಯಮ ವೇಣು. ಏನಾಗಬೇಕೋ ಅದು ನಡೆಯಲೇಬೇಕು. ಕಾಗದ ಬಂದಾಗಲೇ ತಿಳಿಸಿದರೆ ನೀನು ತಡೆದುಕೊಳ್ಳಲಾರೆ. ಇನ್ನೂ ಆರೋಗ್ಯ ಕುದುರಿಲ್ಲವಲ್ಲ ಅಂತ ನಿನಗೆ ತಿಳಿಸ್ಲಿಲ್ಲ. ಆ ಜೀವ ಹೋಯ್ತೂಂತ ನಿನ್ನನ್ನ ಕಳೆದುಕೊಳ್ಳೋಕೆ ನಾವು ತಯಾರಿಲ್ಲಪ್ಪ. ಆ ಮಗು ಬಲಿಯಾಗಬಾರದಿತ್ತು. ಆದರೆ ಆಗಿಹೋಗಿದೆ. ನೀನು ಧೈರ್ಯ ತಂದ್ಕೋಬೇಕು ವೇಣು"ಎಂದು ಸಾವಧಾನವಾಗಿ ತನಗೆ ಸಮಾಧಾನ ಹೇಳಿದರು.

ಕ್ರಮೇಣ ಆ ಘಟನೆ ಮರೆಯಾಗುತ್ತಾ ಬಂದರೂ ಪುಟ್ಟ ತನ್ನಲ್ಲೇ ಪ್ರತಿಷ್ಠಿತಳಾಗಿ ಕುಳಿತುಬಿಟ್ಟಳು. ಓದಿನಲ್ಲಿ ಮಗ್ನತೆ ಬೆಳೆಸಿಕೊಂಡು ಪುಟ್ಟಿಯನ್ನ ಮರೆಯಲು ತಾನು ಪ್ರಯತ್ನಿಸಿದ್ದೆಷ್ಟು? ತಾನು ನಗುಮುಖದಿಂದಿದ್ದರೆ ಅಮ್ಮ-ಅಣ್ಣ ಉತ್ಸಾಹಿತರಾಗು ತ್ತಾರೆ. ಇಲ್ಲದಿದ್ದರೆ ತಮ್ಮ ಬದುಕೇ ದುರಂತವಾದಂತೆ ಪರಿತಪಿಸುತ್ತಾರೆ ಎಂಬುದನ್ನು ಕಂಡುಹಿಡಿಯಲು ತಡವಾಗಲಿಲ್ಲ. ಆದುದಾಯ್ತು ಅವರ ಮನಸ್ಸಿಗಾದರೂ ಶಾಂತಿ ಯಿರಲಿ ಎಂದು ತನ್ನ ವೇದನೆಯನ್ನು ಮುಚ್ಚಿಟ್ಟು ತೋರಿಕೆಯ ಬಾಳು ಪ್ರಾರಂಭಿಸಿದ್ದ.

ಆದರೂ ತನ್ನ ಉದ್ಧಾರಕ್ಕಾಗಿ ಬಲಿಯಾದ ಪುಟ್ಟಿಯನ್ನು ಮರೆಯದಾದ. ತನ್ನ ಎಮ್.ಎಸ್.ಸಿ. ಪರೀಕ್ಷೆ ಮುಗಿಯುವಷ್ಟರಲ್ಲಿ ಅನೇಕ ಹುಡುಗಿಯರನ್ನು ಕಂಡಿದ್ದಾನೆ. ಆದರೆ ಅವರಾರಲ್ಲೂ ತನಗೆ ಸ್ನೇಹವಿಲ್ಲ. ಯಾರ ಬಳಿಯೂ ತನಗೆ ಸಲಿಗೆ ಬೇಡ. ತನ್ನ ಹೃದಯದ ಸುತ್ತ ಪುಟ್ಟಿ ಕಟ್ಟಿದ್ದ ಪರಿವೇಷದಲ್ಲಿ ಯಾರನ್ನೂ ಒಳ ಸೇರಿಸ ಲಾರದಾದ.

ತನ್ನ ಅದೃಷ್ಟದಿಂದಲೋ ಅಥವಾ ತಂದೆಯ ಕೀರ್ತಿಪ್ರತಿಷ್ಠೆಗಳಿಂದಲೋ ತನಗೆ ಎಮ್.ಎಸ್.ಸಿ. ಮಾಡಿದ ವರ್ಷವೇ ಅದೇ ಕಾಲೇಜಿನಲ್ಲಿ ಲೆಕ್ಚರರ್ ಕೆಲಸ ಸಿಕ್ಕಿತು. ಮತ್ತೆರಡು ವರ್ಷಗಳಲ್ಲಿ ಒಬ್ಬಿಬ್ಬರನ್ನು

ಹಾರಿ, ರೀಡರ್ ಆಗಿಯೂ ನೇಮಕವಾಗಿದ್ದ. ತನ್ನ ಜಾಗಕ್ಕೆ ಲೆಕ್ಚರರ್ ಆಗಿ ಬಂದವಳು ಮಾಧುರಿ. ಅವಳಲ್ಲಿ ತನಗೆ ಸ್ವಲ್ಪ ಸ್ನೇಹವಾದದ್ದು ನಿಜ. ಆದರೂ ತನ್ನ ಮನಸ್ಸಿನಲ್ಲಿ ಅವಳಿಗೆ ಸ್ಥಾನ ಕೊಡಲಾರದಾದ. 'ಪ್ರಯತ್ನಿಸಿದರೆ ನೀನುಪುಟ್ಟಿಯನ್ನು ಮರೆಯಬಹುದು. ನೀನು ಪ್ರಯತ್ನಿಸುತ್ತಲೇ ಇಲ್ಲ'ಎಂದು ಅವನ ಬುದ್ಧಿ ಚುಚ್ಚುತ್ತಲೇ ಇತ್ತು. ಆದರೂ ದುರ್ಬಲ.

ತೆಳ್ಳಗೆ ಎತ್ತರವಾಗಿ ಕೆಂಪಗಿದ್ದ ಮೇಧಾವಿ ರೀಡರ್ ಎಂದು ತನ್ನ ಸ್ನೇಹ ವರ್ತುಲದೊಳಕ್ಕೆ ಬರಲು ಹಲಕೆಲವು ಹುಡುಗಿಯರು ಹಾತೊರೆಯುತ್ತಿದ್ದರೆಂಬ ವಿಷಯ ಅವನಿಗೆ ಗೊತ್ತು. ಆದರೆ ಅವರೆಲ್ಲಾ ಕೇವಲ ವಿದ್ಯಾರ್ಥಿನಿಯರಾಗಿ ಕಾಣುತ್ತಿದ್ದರೇ ಹೊರತು ಅದಕ್ಕಿಂತ ಒಂದು ಹೆಜ್ಜೆಯೂ ತನ್ನೆಡೆಗೆ ಬರಲು ಅವನು ಆಸ್ಪದ ಕೊಡಲಿಲ್ಲ. ಅವನ ಸ್ನೇಹವರ್ತುಲ ಸಣ್ಣದು ಅದರಲ್ಲಿ ಯಾರಿಗೂ ಸ್ಥಳ ಕೊಡಲಾರದಾದ. ಈ ಗುಣಗಳಿಗಾಗಿ ಕೆಲವರಿಗೆ ತಾನು ಸೊಕ್ಕಿದವನಾಗಿಯೂ ಕಂಡಿದ್ದ.

ಮಾಧುರಿ ಮಾತ್ರ ಮಾಧುವನ್ನು ತನ್ನ ಹತ್ತಿರ ಸೆಳೆದುಕೊಂಡುದೂ ಅಲ್ಲದೆ, ಅವನ ಹೃದಯದ ಸುತ್ತ ಇದ್ದ ಪರಿವೇಷದೊಳಗೆ ಪ್ರವೇಶಿಸಲು ಪ್ರಯತ್ನಿಸುತ್ತಲೂ ಇದ್ದಳು. ಅವಳೊಂದಿಗೆ ಮಾಧು ಆಗೊಮ್ಮೆ ಈಗೊಮ್ಮೆ ಹೊರಗಡೆ ಸುತ್ತಾಡುತ್ತಿದ್ದ ಅಂತಹ ಒಂದು ಸಂದರ್ಭದಲ್ಲಿ ಒಂದು ಚಿತ್ರಕ್ಕೆ ಹೋಗಿದ್ದಾಗ, ಬಹಳ ರಸಮಯ ಸನ್ನಿವೇಶವೊಂದರಲ್ಲಿ ಭಾವೋದ್ವೇಗಕ್ಕೆ ತುತ್ತಾದ ಮಾಧುರಿ ಅವನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡಿದ್ದಳು. ಆದರೆ ತನಗೆ ಯಾವ ಸ್ಪಂದನವೂ ಆಗಲಿಲ್ಲ. ಏಕೆ? ಏಕೆ ತನ್ನ ತನುಮನ ಈ ರೀತಿ ಜಡ್ಡುಗಟ್ಟಿದೆ ಎಂದು ಕಸಿವಿಸಿಗೊಂಡ. ಪುಟ್ಟಿ ಅಗಲ ಕಣ್ಣುಗಳಿಂದ 'ನನ್ನನ್ನು ಮರೆತಿರಾ?' ಎಂದಂತಾಯಿತು ಅವನಿಗೆ ಆಗ ತಿಳಿಯಿತು, ತನ್ನ ಅಭೇದ್ಯ ಕೋಟೆ ಒಡೆದು ಮಾಧುರಿ ಒಳಕ್ಕೆ ನುಗ್ಗಲಾರಳೆಂದು. ಅವಳ ಸ್ನೇಹ ಬಿಡದಿದ್ದರೂ ವೃಥಾ ಪ್ರೋತ್ಸಾಹ ಕೊಡಬಾರದೆಂದು, ದೂರ ಸಿಡಿದು ನಿಂತ ಅವಳಲ್ಲಿ ತನಗೆ ಪ್ರೇಮವಿಲ್ಲವೆಂದು ಹೇಳಿಬಿಡಬೇಕೆಂದುಕೊಂಡ. ಆದರೆ ಅಷ್ಟರಲ್ಲೇ ತಾನು ಅಮೇರಿಕಾಗೆ ಹೋಗುವ ಸಂದರ್ಭ ಬಂದಿತು. ಈ ಮೂರು ವರ್ಷಗಳಲ್ಲಿ ಮಾಧುರಿ ಖಂಡಿತ ತನ್ನನ್ನು ಮರೆಯುತ್ತಾಳೆ. ತಾನಾಗಿ ಅವಳ ಆಸೆಗೆ ಭಂಗ ತಂದು ನೋಯಿಸ ಬೇಕಿಲ್ಲ ಎಂದುಕೊಂಡು ಹರ್ಷ ತಾಳಿದ ತಾನು. ಹೊರಡುವ ದಿನ 'ನೆನಪಿರಲಿ ಮಾಧವ್' ಎಂದು ಅವಳು ಕಣ್ಣೀರಿಟ್ಟರೆ ತನ್ನ ಹೃದಯ ವಿಚಲಿತವಾಗಲಿಲ್ಲ. ಅವಳು ಪತ್ರಗಳನ್ನು ಬರೆದಾಗಲೂ ತಾನು ಬೇಕಂದೇ ಉತ್ತರ ಕೊಡಲಿಲ್ಲ.

ತಾನು ಹಿಂದಿರುಗಿದಾಗ ಮಾಧುರಿ-"ನಾನಿನ್ನೂ ಎಷ್ಟು ದಿನ ಕಾಯಬೇಕು?" ಎಂದು ಕೇಳಿದ್ದಳು.

"ಯಾವುದಕ್ಕೆ?"ಎಂದು ನಕ್ಕಿದ್ದ ತಾನು, ಏನೂ ತಿಳಿಯದಂತೆ

"ಮದುವೆಯಾಗಲು?"-ಅವಳು ನಗಲಿಲ್ಲ, ಗಂಭೀರವಾಗಿ ಕೇಳಿದ್ದಳು.

"ಆಗಿ, ನೀವು ಮದುವೆಯಾಗಲು ನನ್ನ ಅಪ್ಪಣೆಯೇಕೆ?"ಎಂದು ಸಾಧಾರಣವಾಗಿ.

ಕಣ್ಣೀರು ತುಂಬಿದ ಮಾಧುರಿ "ಹಾಸ್ಯ ಮಾಡ್ತೀರಾ ಮಾಧವ್ ನಿಮ್ಮ ಒಪ್ಪಿಗೆಯಿಲ್ಲದೆ, ಅದು ಸಾಧ್ಯವೆ?"ಎಂದು ನುಡಿದಾಗ, ಬಳಿಯಲ್ಲಿ ಕುಳಿತು ತನಗಂತಹ ಮನೋಭಾವಿಲ್ಲವೆಂದು ತಿಳಿಯಪಡಿಸುವ ವೇಳೆಗೆ ಸುಸ್ತಾಗಿದ್ದ.

ಇದಾದ ಒಂದು ತಿಂಗಳೊಳಗೇ ಅವಳು ಬೇರೆಯವರೊಂದಿಗೆ ಮದುವೆಗೆ ಒಪ್ಪಿಕೊಂಡಿದ್ದಾಳೆ. ಅದು ಹೇಗೆ ಸಾಧ್ಯ? ಹಾಗಾದರೆ ಅವಳು ನಿಜವಾಗಿಯೂ ತನ್ನನ್ನು ಪ್ರೀತಿಸಿದಳೆ? ಪ್ರೀತಿಸಿದ್ದರೆ ಇಷ್ಟು ಬೇಗ ಬೇರೆಯವರನ್ನು ಒಪ್ಪಿಬಿಡುತ್ತಿದ್ದಳೆ? ಒಂದು ವಿಧದಲ್ಲಿ ಇದು ಒಳ್ಳೆಯದೇ ಆಯಿತು. ಅವಳು ತನಗಾಗಿ ಹಾಗೇ ಉಳಿದಿದ್ದರೆ ತಾನು ತಪ್ಪಿತಸ್ಥನಾಗುತ್ತಿರಲಿಲ್ಲವೆ? ತನಗೇಕೆ ಹಾಗೆ ಸಾಧ್ಯವಿಲ್ಲ? ತನ್ನ ಪುಟ್ಟಿಯನ್ನೂ ಬಿಟ್ಟು ಯಾರನ್ನೂ ತಾನೇಕೆ ನೆನೆಸಲಾರ? ಅವಳೇ ನನ್ನ ಪತ್ನಿ. ತನಗೆ ಬೇರೆ ಮದುವೆಯೇ ಬೇಡವೆನಿಸುತ್ತದೆ ಏಕೆ ಹೀಗೆ? ಹೀಗೇಕೆ?

ತನ್ನ ಕಳೆದ ಜೀವನ ನೆನೆಸಿಕೊಳ್ಳುತ್ತಾ ಹಾಸಿಗೆಯಲ್ಲಿ ಹೊರಳಿ ಹೊರಳಿ ಸಾಕಾಗಿ ಎದ್ದುಬಿಟ್ಟ. ಎದ್ದು ಕಿಟಕಿಯ ಬಳಿ ಬಂದು ನಿಂತ. ಬೆಳದಿಂಗಳ ದಿನಗಳು. ಹೊರಗೆಲ್ಲಾ ಹಾಲು ಚೆಲ್ಲಿದಂತೆ ಜ್ಯೋತ್ಸ್ನೆ. ಅವನ ಕಿಟಕಿಯಿಂದ ತಮ್ಮ ಆವರಣ ಕಾಣುತ್ತಿರಲಿಲ್ಲ. ಪಕ್ಕದ ಕಾಂಪೌಂಡಿನಲ್ಲಿ ಗಿಡಗಳೆಲ್ಲಾ ಪ್ರಫುಲ್ಲವಾಗಿ ಕಾಣುತ್ತಿದ್ದುವು. ಎಲ್ಲೋ ನಿತ್ಯಮಲ್ಲಿಗೆ ಅರಳಿ ಕಂಪು ಈ ದಿಕ್ಕಿಗೇ ಹರಡುತ್ತಿತ್ತು. ತಣ್ಣಗೆ ಗಾಳಿ ಬೀಸಿತು ಚಳಿಯಾದಂತಾಯ್ತು. ಹೌದು ಡಿಸೆಂಬರ್ ತಿಂಗಳು ಚಳಿಯಾಗದಿದ್ದೀತೆ? ಎಂದು ಒಳಸರಿದು, ಕಡುಬೂದಿ ಬಣ್ಣದ ಪುಲ್‌ಓವರ್ ತೆಗೆದು ತೊಟ್ಟುಕೊಂಡು ಮತ್ತೆ ಕಿಟಕಿಯ ಬಳಿ ಬಂದು ನಿಂತ. ಮೈ ಬೆಚ್ಚಗಾದಂತಾಗಿ ಮನ ಸ್ವಲ್ಪ ಲವಲವಿಕೆ ಯಾಯಿತು.

ಮತ್ತೆ ಚಿಂತನೆಗಾರಂಭ. ತಾನು ಮಾಧುರಿಯೊಡನೆ ಸ್ವಲ್ಪ ಓಡಾಡುತ್ತಿದ್ದೇನೆಂದು ಅಮ್ಮನಿಗೆ ಯಾರು ಹೇಳಿದರೋ. ಮಾಧುರಿಯ ಹೆಸರೆತ್ತದೆ, ಮದುವೆಯ ಮಾತೆತ್ತಿದ್ದರು. ತಾನು ಬಹಳ ಕಠಿಣವಾಗಿ, ಖಡಾಖಂಡಿತವಾಗಿ ಹೇಳಿದ್ದ, 'ನನಗಿನ್ನು ಮದುವೆ ಬೇಡ, ನನಗೆ ಮದುವೆ ಆಗಿದೆ, ನನ್ನ ಆಸಕ್ತಿಯೆಲ್ಲಾ ಇನ್ನು ನನ್ನ ವೃತ್ತಿಯಲ್ಲಿ ಮಾತ್ರ'ಎಂದು. ಆದರೆ ಹತ್ತ ಕರುಳು ಬೇರೆ ಆಲೋಚನೆ ಮಾಡಿರಬೇಕು. ತಮಗೆ ದೂರದ ನೆಂಟರೂ ಆಗಿ ಆಸ್ತಿವಂತರೂ ಆದ ಗಿರಿರಾಯರ ಮಗಳನ್ನು ಪರಿಚಯ ಮಾಡಿಸಿದರು. ಆಗಾಗ ಮನೆಗೆ ಕರೆಸುತ್ತಿದ್ದರು. ಬಲವಂತವಾಗಿ ತನ್ನೊಡನೆ ಸ್ನೇಹದಿಂದಿರಗೊಡುತ್ತಿದ್ದರು. ಚಂಪ ಒಳ್ಳೆಯ ಹುಡುಗಿ, ಎಲ್ಲಾ ವಿಧದಲ್ಲೂ ಮಗನಿಗೆ ಸರಿಯಾಗಬಹುದು ಎಂಬುದು ಅಮ್ಮನ ಸ್ವಂತ ಅಭಿಪ್ರಾಯ. 'ವೇಣು ಒಪ್ಪಿದರೆ ಆಗಬಹುದು, ಬಲವಂತಬೇಡ'ಎಂಬುದು ಅಣ್ಣನ ಅಭಿಮತ.

ಚಂಪ ಎತ್ತರದ ಹುಡುಗಿಯಲ್ಲ. ತನ್ನ ಪಕ್ಕದಲ್ಲಿ ತುಂಬಾ ಕುಳ್ಳು ಅವಳು. ತಾನು ಸಾಂಪ್ರದಾಯಿಕ ಮನೋಭಾವದವನು. ಅವಳದು ಆಧುನಿಕ ಮನೋಭಾವ, ಅಂತಸ್ತು ಪ್ರತಿಷ್ಠೆಗಳ ಪ್ರಜ್ಞೆ ಬೆಳೆಸಿಕೊಂಡವಳು.

ತಾನೋ ನಿರಾಡಂಬರ ವ್ಯಕ್ತಿಗೆ ತಕ್ಕ ಮಗನಾಗಿ ಬೆಳೆದವ. ಹಾತಿರುವಾಗ ಯಾವ ವಿಷಯದಲ್ಲಿ ತಾವು ಜೋಡಿ ? ಮಿಗಿಲಾಗಿ ಚಂಪ ತನ್ನ ಹೃದಯಕ್ಕೆ ಹತ್ತಿರವಾಗಲಿಲ್ಲ. ಆದರೆ ಮದುವೆಯಾದರೆ ಸರಿಹೋದೀತೆ? ತನ್ನ ಹಂಡತಿಯಾಗಿ ಅವಳನ್ನು ನಡೆಸಿಕೊಳ್ಳಬಲ್ಲೆನೆ? ಹೇಗೋ, ತನಗೆ ತಿಳಿಯುತ್ತಿಲ್ಲ. ತಾನು ಯಾರನ್ನೂ ಹತ್ತಿರದಲ್ಲಿ ಕಲ್ಪಿಸಿಕೊಳ್ಳಲಾರ. ಚಂಪಳನ್ನು ತನ್ನ ಮಡದಿಯಾಗಿ ಹಾಸಿಗೆಯಲ್ಲಿ ಊಹಿಸಿಕೊಂಡ ಕೂಡಲೆ ಅವನ ಮೈ ಬೆವರಿಟ್ಟಿತು. ಸಾಧ್ಯವಿಲ್ಲ, ಉಹುಂ, ಸಾಧ್ಯವೇ ಇಲ್ಲ. ಅಮ್ಮನಿಗೆ ಹೇಳಿಬಿಡಬೇಕು. ಆದರೆ ಚಂಪಳ ಮನಸ್ಸಿನಲ್ಲಿ ತನ್ನ ಬಗೆಗೆ ಗೋಪುರಗಳನ್ನು ನಿರ್ಮಿಸಿಬಿಟ್ಟಿದ್ದಾಳೆ. ಈ ಅಮ್ಮ ತಾನೀಗ ಬೇಡವೆಂದರೆ?ಚಂಪಳ ಕನಸಿನ ಗೋಪುರ ಕುಸಿಯಬಹುದು. ಅಮ್ಮನಿಗೆ ನಿರಾಶೆಯ ಜೊತೆಗೆ ಅವಮಾನವೂ ಆಗಬಹುದು, ತಮ್ಮ ಮಗ ತಾವು ಕೊಟ್ಟ ಮಾತನ್ನು ಉಳಿಸಲಿಲ್ಲವೆಂದು.

ಹಾಗೆಂದು ಚಂಪಳನ್ನು ಮದುವೆಯಾಗಲು ಸಾಧ್ಯವೆ? ಲಿಸ್‌ಳೊಂದಿಗೆ ಆದಂತೆ ಆದರೆ, ಚಂಪ ಏನು ಸುಖಪಟ್ಟಾಳು? ಒಳ್ಳೆಯ ಹುಡುಗಿ. ಅವಳು ಚೆನ್ನಾಗಿರಬೇಕು. ಯಾರದೋ ಮಾತಿಗೆ ಬೆಲೆ ಕೊಟ್ಟು, ತನ್ನನ್ನು ಮದುವೆಯಾಗಿ ನರಕ ಅನುಭವಿಸ ಬಾರದು ಅವಳು ಮಾತ್ರವೇನು? ಯಾವ ಹುಡುಗಿಯಾದರೂ ಅಷ್ಟೆ. ತನ್ನೊಡನೆ ಬಾಳ್ವೆ ಮಾಡಲಾರಳು. ತನ್ನ ದೇಹದಲ್ಲಿ ಸಾಕಷ್ಟು ಕಾವಿಲ್ಲ. ಪ್ರೇಮ ಉಕ್ಕಿ ಹರಿಯುವುದಿಲ್ಲ, ಪತಿಯ ಪ್ರೇಮದಿಂದ ವಂಚಿತಳಾದರೆ ಹೆಣ್ಣಿಗೆ ಬೇರೆ ಬದುಕಾದರೂ ಎಲ್ಲಿದೆ? ಅವಳ ಬಾಳ ಸಾರ್ಥಕತೆಯಾದರೂ ಏನು?

ಯೋಚನೆಗಳಿಂದ ತಲೆ ಸಿಡಿಯುತ್ತಿತ್ತು ತಂಪಾದ ಗಾಳಿಯೂ ಹಿತ ತರಲಿಲ್ಲ. ಮತ್ತೆ ಹಾಸಿಗೆಗೆ ಬಂದು ಬಲಗಿದ. ಗಂಟೆ ಎರಡು ಹೊಡೆಯಿತು. ಅಬ್ಬ, ಬೆಳಗಾಗುವುದು ಯಾವಾಗ? ಕಾಲೇಜಿಗೆ ಹೋಗಿ ಪಾಠಗಳಲ್ಲಿ ತಲೆ ತೂರಿಸಿದ ವಿನಾ, ಈ ವೇದನೆ ಕಡಿಮೆಯಾಗಲೊಲ್ಲದು-ಎಂದುಕೊಳ್ಳುತ್ತಾ ಹೊದಿಕೆ ಎಳೆದುಕೊಂಡ ಪುಲ್‌ಓವರಿನ ಅಗತ್ಯ ಇನ್ನಿಲ್ಲವೆಂದು ಕಳಚಿ, ದೂರದ ಸ್ಟ್ಯಾಂಡಿನ ಮೇಲಕ್ಕೆ ಮಲಗಿದ್ದಲ್ಲಿಂದಲೇ ಎಸೆದ ಅದು ಸ್ಟ್ಯಾಂಡ್ ಸೇರದೆ ಮಧ್ಯ ಬಿದ್ದು ಕತ್ತಲಿನಲ್ಲಿ ಕಪ್ಪಗೆ ಗುಪ್ಪೆಯಾಗಿ ಕುಳಿತಿತು. 'ಇಷ್ಟೆ ನನ್ನ ಪದಾರ್ಥಗಳಿಗೆ ನೀನು ಕೊಡುವ ಬೆಲೆ' ಎಂದಳು ಲಿಸ್ ಆ ಪುಲ್‌ಓವರಿನೊಳಗಿಂದ. ಅವನ ಯೋಚನೆ ದೂರ ಅಮೆರಿಕಾಕ್ಕೆ ಹೊರಳಿತು.

* * *

ಅಮೆರಿಕಾದಲ್ಲಿ ಮೂರು ವರ್ಷಗಳು ಚೆನ್ನಾಗಿ ಕಳೆದುಹೋಗಿದ್ದವು. ತನಗೆ ಒಳ್ಳೆಯ ವಿದ್ಯಾರ್ಥಿಯೆಂದು 'ಪರ್ಫೆಕ್ಟ್ ಜಂಟಲ್‌ಮನ್' ಎಂದೂ ಹೆಸರು ಬಂದಿತ್ತು. ಅಲ್ಲಿನ ಜನರಂತೆಯೇ, ಎತ್ತರವಾಗಿ, ಕೆಂಪಗಿದ್ದ ತನ್ನನ್ನು ಕಂಡರೆ ಕೆಲವರಿಗೆ ಅಭಿಮಾನ. ಕೆಲ ಹುಡುಗಿಯರು ಪೈಪೋಟಿಯಿಂದ ತನ್ನ ಸ್ನೇಹ ಗಳಿಸಿದ್ದರು. ತಾನು ಅವರೊಂದಿಗೆಲ್ಲಾ ಹಿತಮಿತ ಸ್ನೇಹ ಮಾಡಿದ್ದ. ಪಿಕ್‌ನಿಕ್ ಹೋಗುತ್ತಿದ್ದ.

ನೃತ್ಯ ಮಾಡುತ್ತಿದ್ದ. ಅವರಂತೆಯೇ ನೃತ್ಯ ಮಾಡಬಲ್ಲ ಕೆಲವೇ ಭಾರತೀಯರಲ್ಲಿ ಅವನೂ ಒಬ್ಬನಾಗಿದ್ದ.

ಆದರೂ ಹೃದಯದ ವಿಷಯದಲ್ಲಿ ಮಾತ್ರ ಅವನ ಬಳಿ ಯಾರೂ ಸುಳಿ ದಿರಲಿಲ್ಲ, ಸುಳಿಯಲಾರರಾಗಿದ್ದರು. ಆ ಕೋಟೆಗೆ ಬಾಗಿಲೆಲ್ಲಿದೆ ಎಂದು ಯಾರಿಗೂ ತಿಳಿದಿರಲಿಲ್ಲ. ಇದರಿಂದ ಹೊರತಾಗಿದ್ದವಳು ಲಿಸ್ ಒಬ್ಬಳು ಮಾತ್ರ. ತಾನಿದ್ದ ಮನೆಯ ಒಡೆಯನ ತಂಗಿ ಲಿಸ್. ಅವಳು ಹಳ್ಳಿಯೊಂದರಿಂದ ಬಂದು ಎರಡು ವರ್ಷದ ವ್ಯಾಸಂಗಕ್ಕಾಗಿ ಅಣ್ಣನ ಬಳಿಯಿದ್ದಳು. ತಾನು ಅಮೆರಿಕಕ್ಕೆ ಹೋದ ಮರುವರುಷ ಬಂದಳು. ತನ್ನನ್ನು ಕಂಡರೆ ಅವಳಿಗೆ ಅತ್ಯಂತ ಆದರ. ತನಗೂ ಅದು ಸಂತೋಷವೇ. ಆದರೆ ಈ ಆದರ, ಪ್ರೇಮದ ಪೀಠಿಕೆಯೆಂದು ಕನಸುಮನಸಿನಲ್ಲಿಯೂ ನೆನೆಸಿರಲಿಲ್ಲ. ತಾನು ಅವಳ ಪ್ರೇಮ ಹಿಂತಿರುಗಿಸಲಾರದಷ್ಟು ದುರ್ಬಲನೆಂದು ತನಗೆ ತಿಳಿದದ್ದೂ ಒಂದು ಆಕಸ್ಮಿಕವೇ.

ಸಾಧಾರಣವಾಗಿ ತಾನು ಮತ್ತು ಲಿಸ್ ಒಟ್ಟಿಗೇ ಊಟಕ್ಕೆ ಕೂಡುತ್ತಿದ್ದುದು. ಅವಳೂ ತನ್ನಂತೆಯೇ ರೊಟ್ಟಿ, ಬೆಣ್ಣೆ, ಗಿಣ್ಣು, ಹಣ್ಣು ತೆಗೆದುಕೊಳ್ಳುತ್ತಿದ್ದಳು. ಎಂದಾದರೂ ಮಾಂಸದ ಊಟ ಮಾಡಬೇಕಾದರೆ, ಅಂದು ಮಾತ್ರ ಬೇರೆ ಹೋಗುತ್ತಿದ್ದಳು.

ಆ ದಿನ ಅವಳು ಹಾಗೆಯೇ ಬೇರೆ ಹೋಗಿದ್ದಳು ತಾನು ಊಟ ಮುಗಿಸಿ ಹಾಸಿಗೆಯಲ್ಲಿ ಮಲಗಿ ಎದೆಯ ಮೇಲೆ ಪುಸ್ತಕವಿಟ್ಟುಕೊಂಡು ಓದುತ್ತಿದ್ದಾಗ ಲಿಸ್ ಕೋಣೆಯೊಳಕ್ಕೆ ಬಂದಳು. ಅವಳ ಮುಖ, ದೀಪದ ಬೆಳಕಿನಲ್ಲಿ ರಕ್ತವರ್ಣದ್ದಾಗಿದ್ದುದು ತಿಳಿಯಿತು. ಕಣ್ಣುಗಳೂ ಕೆಂಪಗಾಗಿದ್ದುವು. ಮಾಂಸದ ಊಟವೆಂದರೆ, ಪೇಯದ ಆತಿಥ್ಯವೂ ನಡೆದಿರುತ್ತದೆಂದು ತನಗೆ ಗೊತ್ತು. ಈಗಿನ ಲಿಸ್‌ಳ ಮುಖಚರ್ಯೆಯೂ ಅದನ್ನೇ ಹೇಳುತ್ತಿತ್ತು.

ಲಿಸ್ ನೇರಾಗಿ ಬಂದು ತನ್ನ ಮಂಚದ ಅಂಚಿನಲ್ಲಿ, ತನ್ನ ಪಕ್ಕದಲ್ಲೇ ಮೈ ತಗಲುವಂತೆ ಕುಳಿತಳು. ಆದರೂ ತಾನು ಪುಸ್ತಕದಿಂದ ಮುಖ ತೆಗೆಯಲಿಲ್ಲ. ತಟ್ಟನೆ ಪುಸ್ತಕವನ್ನು ತನ್ನ ಕೈಯಿಂದ ಕಿತ್ತು ಮೇಜಿನ ಮೇಲಕ್ಕೆ ಒಗೆದಳು, ಲಿಸ್. ತಾನು ನಗುತ್ತಾ, "ವಾಟ್ ಈಸ್ ರಾಂಗ್?" ಎಂದಾಗ.

"ನಾನು ಬಂದದ್ದು ತಿಳಿದೂ ತಿರುಗಿ ನೋಡಲಿಲ್ಲ. ನೀನು ಮಾಡ್" ಎಂದಳು ಮುಖ ಉಬ್ಬಿಸಿ.

"ಹತ್ತೇ ಹತ್ತು ಸಾಲಿತ್ತು. ಓದಿಬೊಡೋಣಾಂತಿದ್ದೆ....ಸರಿ, ಈಗೇನು ಬಂದೆ?" ಎಂದ.

"ಹತ್ತು ಸಾಲಲ್ಲ, ಹತ್ತುಪದ ಕೂಡ ನೀ ಓದಬಾರದು, ನಾನಿಲ್ಲಿ ನಿನ್ನ ಹತ್ತಿರ ಬಂದಾಗ ಹತ್ತು ಅಕ್ಷರ ಸಹ ಕೂಡದು" ಎಂದಳು, ಚೇಷ್ಟೆಯಿಂದ ಕಣ್ಣು ಹೊಡೆಯುತ್ತಾ.

"ಹಾಗಾದ್ರೆ ಆ ಮೂರಕ್ಷರ ಪಿ.ಹೆಚ್.ಡಿ. ಅನ್ನೋದನ್ನ ಕೈಬಿಡಬೇಕಾದದ್ದೇ ನಾನು?" ಎಂದೆ ಏಳುತ್ತಾ.

ಅವಳು ತನ್ನನ್ನು ಏಳಲು ಬಿಡದೆ, ಬಲಗೈಯನ್ನು ಆ ಬಲಬದಿಗೆ ಹಾಕಿ ತನ್ನ ಮೇಲೆ ಬೋರಲು

ಮಲಗಿ, ಚೂಪಾದ ಗಲ್ಲವನ್ನು ಎದೆಯ ಮೇಲೆ ಆನಿಸಿ ನಿಲ್ಲಿಸಿ, ತನ್ನ ಕಣ್ಣುಗಳೊಳಕ್ಕೆ ನೋಡುತ್ತಾ- "ನಿನಗೆ ಪಿ.ಹೆಚ್.ಡಿ. ಆಗೋಲ್ವ ಮಾಡ್ ಡಾರ್ಲಿಂಗ್?"ಎಂದು ಪಿಸುಗುಟ್ಟಿದಾಗ, ಅವಳ ಬಾಯ ವಾಸನೆ ಅಸಹ್ಯವೆನಿಸಿತು.

ಅವಳನ್ನು ತಳ್ಳಬೇಕೆಂದು ಕೈಗಳನ್ನು ಮೇಲೆತ್ತುವ ವೇಳೆಗೆ ಅವಳ ಎರಡು ಕೈಗಳಿಂದಲೂ ತಬ್ಬಿ ಅನಾಮತ್ತಾಗಿ ಪಕ್ಕಕ್ಕೆ ಎಳೆದುಕೊಂಡಳು. ಈ ದಾಳಿಗೆ ತಾನು ಸಿದ್ಧವಾಗಿರದಿದ್ದರೂ ತನಗೆ ಅರಿವಿಲ್ಲದಂತೆ ದೇಹ ಜಡವಾಯಿತು, ಹಿಮದಂತೆ ಶೀತಲವಾಯಿತು, ಮರದ ಕೊರಡಿನಂತೆ ನಿಶ್ಚಲವಾಯಿತು. ಅವಳ ಯಾವ ಪ್ರಯತ್ನವೂ ತನ್ನಲ್ಲಿ ಪ್ರೇಮವನ್ನೇ ಆಗಲಿ, ಕಾಮವನ್ನೇ ಆಗಲಿ ಉತ್ಪಾದಿಸಲಿಲ್ಲ. ಸುಮ್ಮನೆ ನಿಸ್ಸತ್ವನಾಗಿ ಬಿದ್ದುಕೊಂಡಿದ್ದ

ಕೋಪದಿಂದ, ಅವಮಾನದಿಂದ ಬುಸುಗುಟ್ಟುತ್ತಾ ಎದ್ದ ಅವಳು, ಅಸ್ತವ್ಯಸ್ತ ಮಾಡಿಕೊಂಡಿದ್ದ ತನ್ನ ಉಡುಪು ಸರಿಪಡಿಸಿಕೊಂಡು-"ನೀನು ...ನೀನು ಮಾಡ್, ಗಂಡಸಲ್ಲ, ಷಂಡ, ಷಂಡ...."ಎಂದು ಕೂಗಿ ಓಡಿಹೋಗಿ ಟೇಬಲ್ಲಿನ ಬಳಿ ತಲೆಯಾನಿಸಿ ಕುಳಿತಳು. ತಾನೇನೂ ಮಾತಾಡಲಿಲ್ಲ ಕೋಣೆಯೆಲ್ಲಾ ನಿಶ್ಶಬ್ದವಾಗಿತ್ತು. ಅಲಾರಂ ಗಡಿಯಾರದ ಟಿಕ್ ಟಿಕ್ ವಿನಾ ಮತ್ತೇನೂ ಕೇಳಿಸದಷ್ಟು ವಾತಾವರಣ ನೀರವವಾಗಿತ್ತು. ಮೊದಲೇ ಅರ್ಧ ರಾತ್ರಿಯ ನೀರವತೆ. ಅದರಲ್ಲಿ ಬಿಗಡಾಯಿಸಿದ ಮನಗಳ ಅಚೇತನ ಮೌನ.

ಒಂದು ನಿಮಿಷ ಕಳೆದು ಬಿರುಗಾಳಿಯಂತೆ ಹೊರಗೋಡಿದಳು

'ಲಿಸ್, ಹೋಗುವವಳು ದೀಪ ಆರಿಸಿ ಹೋಗಬಾರದೆ?"ಎಂದ, ಏನೂ ನಡೆದಿಲ್ಲವೆಂಬಂತೆ. ಯಾವಾಗಲೂ ಬೆಡ್ ಲ್ಯಾಂಪ್‌ನಲ್ಲಿ ಓದುತ್ತಿದ್ದು, ತಲೆಯ ಬಳಿಯಿದ್ದ ಸ್ವಿಚ್ ಒತ್ತುತ್ತಿದ್ದ. ಇಂದು ದೊಡ್ಡ ದೀಪವೇ ಉರಿಯುತ್ತಿದ್ದು, ಸ್ವಿಚ್ ಬಾಗಿಲ ಬಳಿಯಿತ್ತು.

ಬಾಗಿಲ ಬಳಿ ನಿಂತು ಲಿಸ್ ಸ್ವಿಚ್ ಆರಿಸಿ ಹೊರಟುಹೋದಳು. ತಾನು ಮೂಕನಾಗಿ ಮಲಗಿದ್ದ. ಎದ್ದು ಬಾಗಿಲು ಹಾಕಿಕೊಳ್ಳುವ ಮನವೂ ಆಗಲಿಲ್ಲ. ಮನಸ್ಸೇ ಹುಳಿಯಾಗಿತ್ತು. ಸ್ವದೇಶಕ್ಕೆ ಹಿಂತಿರುಗಲು ಕೇವಲ ಎರಡೇ ತಿಂಗಳುಳಿದಾಗ, ಇಂತಹ ಅನಿರೀಕ್ಷಿತ ಘಟನೆ ಏಕಾಗಬೇಕಿತ್ತು?ಅವಳ ಸ್ನೇಹ ತನಗೆ ದುರ್ಲಭವಾಗಬೇಕೆಂಬುದು ವಿಧಿ ನಿಯಮವೇನೋ ಎಂದು ಪಿಚ್ಚೆನಿಸಿತು ತನಗೆ. 'ಗಂಡಸಲ್ಲ, ಷಂಡ, ಷಂಡ'ಎಂದ ಅವಳ ಮಾತು ಚುಚ್ಚಿತಾದರೂ ನೋಯಿಸಲಿಲ್ಲ, ಏಕೆ? ಏಕೆ? ಹೌದು. ತಾನು ಪುಟ್ಟಿಗೆ ಮಾತ್ರ ಗಂಡಸು. ಬೇರೆ ಹೆಣ್ಣುಗಳಿಗೆ ತಾನು ಯಾರಾದರೆ ಏನು ಎಂಬ ಭಾವನೆ ಧೈರ್ಯ ಕೊಟ್ಟಿತು.

ಬಹಳ ಹೊತ್ತು ಹಾಗೆಯೇ ಚಿಂತಿಸುತ್ತಿದ್ದ. ಮತ್ತೆ ಸ್ವಲ್ಪ ಸಮಯದ ನಂತರ ಲಿಸ್ ಬಂದು ಕಿಟಕಿ ಬಳಿ ನಿಂತಂತಾಯಿತು. ಸದ್ದು ಮಾಡದೆ ಎದ್ದು, ಅವಳ ಪಕ್ಕಕ್ಕೆ ಹೋಗಿ ನಿಂತು ಮೃದುವಾಗಿ

ಅವಳ ಭುಜದ ಮೇಲೆ ಕೈಯಿಟ್ಟು ಪಿಸುದನಿಯಲ್ಲಿ-"ಲಿಸ್, ಒಂದು ನಿಮಿಷ ಬಾ. ನಿಂಗೊಂದು ಮಾತು ಹೇಳಬೇಕು"ಎಂದು ತಾನು ಸೌಹಾರ್ದವಾಗಿ ನುಡಿದಾಗ, ಭುಜದ ಮೇಲಿನ ತನ್ನ ಕೈಯನ್ನು ಹಿಡಿದು-"ಮಾಡ್ ಡಾರ್ಲಿಂಗ್, ನನ್ನನ್ನು ಕ್ಷಮಿಸು. ಯಾವುದೋ ಘಳಿಗೆಯಲ್ಲಿ ನಾನು ತುಚ್ಛವಾಗಿ ವರ್ತಿಸಿಬಿಟ್ಟೆ. ಕ್ಷಮಿಸ್ತೀಯಾ ಡಾರ್ಲಿಂಗ್?" ಎಂದಳು. ಧ್ವನಿಯಲ್ಲಿ ನೋವಿತ್ತು.

ಆ ಕೈ ಹಿಡಿದು, ಅವಳನ್ನು ಮಂಚಕ್ಕೆ ಕರೆತಂದು ಕೂಡಿಸಿ, ತನ್ನ ಮತ್ತು ಪುಟ್ಟಿಯ ವಿಷಯವೆಲ್ಲಾ ಹೇಳಿದ. ಲಿಸ್ ಅದೆಷ್ಟು ಸಹಾನುಭೂತಿಯಿಂದ ಕೇಳಿಸಿಕೊಂಡಳು? ಎಲ್ಲಾ ಕೇಳಿದ ಮೇಲೆ ಅವಳು-

"ಮಾಡ್, ನೀನು ಪುಟ್ಟಿಯನ್ನು ಬಹಳ ಹಚ್ಚಿಕೊಂಡ ಹಾಗೆ ಕಾಣುತ್ತೆ. ಅದಕ್ಕೇ ಹೀಗೆ, ನೀನೇನೂ ಅವಳನ್ನು ಕೊಂದಿಲ್ಲ. ಅದನ್ನ ಯಾಕೆ ತಿಳ್ಕೋಬಾರ್ದು ನೀನು?"

"ಕೊಂದಿಲ್ಲ. ಆದ್ರೆ ನನ್ನ ಜೀವಕ್ಕಾಗಿ ಅವಳ ಜೀವ ಹೋಯ್ತು ಎನ್ನೋ ನಂಬಿಕೆ ನನ್ನದು ನಾನು ಯಾವ ಹುಡುಗಿಯ ಹತ್ತಿರವೂ ಹೋಗ್ಲಾರೆ ಲಿಸ್. ನಿನ್ನ ಬಳಿಯೇ ಹೀಗಾಯ್ತು ಅಂದಮೇಲೆ. ..ನೀನು ನನ್ನ ಪ್ರೇಮದ ಹುಡುಗಿ, ಆತ್ಮೀಯ ಗೆಳತಿ.'

ಸ್ವಲ್ಪ ಯೋಚಿಸಿದ ನಂತರ-"ನೀನು ಬಹಳ ಒಳ್ಳೇ ಮನುಷ್ಯ ಮಾಡ್ ನಿನ್ನ ಜೀವನದ ಮೌಲ್ಯಗಳು ಬಹಳ ಶ್ರೇಷ್ಠ ಮಟ್ಟದ್ದು. ನಿಮ್ಮ ಉತ್ತಮ ತಾಯಿ ತಂದೆಗಳ ಮಗು. ಆದರೂ ಈಗ ನಿನ್ನ ಪುಟ್ಟಿ ಬದುಕಿಲ್ಲ. ನೀನು ನಿಮ್ಮ ಹುಡುಗಿಯನ್ನು ಮದುವೆಯಾಗು. ಅದಕ್ಕೆ ಮುಂಚೆ ಒಂದು ಸಲ ಸೈಕಾಲಜಿಸ್ಟ್‌ನ ನೋಡು ಮಾಡ್."

"ನಾನು ಹುಚ್ಚ ಅಂತೀಯೇನು ಲಿಸ್?" ಎಂದು ಹುಚ್ಚನಂತೆಯೇ ನಕ್ಕ.

'ಇದೂ ಸಹ ಒಂದು ವಿಧವಾದ ಹುಚ್ಚೇ ಮಾಡ್. ಯೋಚನೆ ಮಾಡ್ಬೇಡ ದೇವ್ರು ನಿನ್ನಂಥಾವ್ರನ್ನ ನಿಜವಾಗೂ ಕಾಪಾಡ್ತಾನೆ"ಎಂದಳು ನಿಟ್ಟುಸಿರು ಬಿಟ್ಟು.

"ನನ್ನನ್ನ ಅರ್ಥ ಮಾಡ್ಕೊಂಡ್ಯಾ ಲಿಸ್? ನಿನಗೆ ಅವಮಾನವಾಗಿದ್ದಕ್ಕೆ ನನ್ನನ್ನ ಕ್ಷಮಿಸ್ತೀಯಾ?"

"ಓ ಮಾಡ್! ನಿನ್ನಂಥ ಉನ್ನತ ವ್ಯಕ್ತಿ ಫ್ರೆಂಡ್ ಅಂತ ನನಗೆ ಹೆಮ್ಮೆ. ಕಂಡ ಹುಡುಗಿಯರೊಂದಿಗೆಲ್ಲಾ ಸ್ನೇಹ ಮಾಡುವ ಗಂಡಸರನ್ನೇ ನೋಡಿ ನೋಡಿ ನಿನ್ನಂಥ ವ್ಯಕ್ತಿಗಳಿರ್ತಾರೆ ಅನ್ನೋದೇ ನಂಬೋಕ್ಕೆ ಕಷ್ಟ. ನಿಮ್ಮ ದೇಶದಲ್ಲಿ ನಿನ್ನಂಥಾವ್ರು ತುಂಬಾ ಇದ್ದಾರಂತೆ. ನಿಮ್ಮ ದೇಶ ಅಂದರೆ ನನಗೆ ಹೆಮ್ಮೆ ಅನಿಸುತ್ತೆ"ಎಂದಳು.

"ಥ್ಯಾಂಕ್ಸ್ ಲಿಸ್, ನಂದೊಂದು ಮಾತು. ನಾನು ನಿನಗೆ ಯಾವಾಗ್ಲೂ ಫ್ರೆಂಡೇ. ಲಿಸ್, ನೀನು ಬೇರೆ ಯಾರನ್ನಾದ್ರೂ ಲವ್ ಮಾಡಿ ಮದ್ವೆ ಮಾಡ್ಕೋಬೇಕು."

"ಪ್ರಯತ್ನಿಸ್ತೀನಿ ಮಾಡ್. ನಾನು ನೀನಲ್ಲ ನಿನ್ನ ಹಾಗೆ ಇರ್ಬೇಕು. ಅಂತ ನನಗೂ ಅನಿಸಿದ್ರೂ

ನಾನು ಹಾಗೆ ಇರಲಾರೆ. ಇನ್ನು ಮಲಗು. ನಿನ್ನ ಮನಸ್ಸಿಗೆ ಬೇಸರ ಮಾಡಿದೀನಿ. ಐ ಆಮ್ ಅಷೇಮ್ಡ್ ಆಫ್ ಮೈಸೆಲ್ಫ್"ಎಂದಳು ವಿಷಾದವಾಗಿ.

"ನೋ, ನೋ. ನಾನು ಹಾಗೇಂತ ಭಾವಿಸೇ ಇಲ್ಲ. ನಾವು ಮತ್ತೆ ಫ್ರೆಂಡ್ಸ್, ಹೌದಾ?" ಎಂದು ಕೈ ನೀಡಿದಾಗ ಕೈ ಕುಲುಕಿ ತನ್ನನ್ನು ಮಲಗಿಸಿ, ಕುತ್ತಿಗೆಯವರೆಗೆ ಹೊದಿಕೆ ಹೊದಿಸಿ-"ಗುಡ್ ನೈಟ್ ಡಾರ್ಲಿಂಗ್"ಎಂದು ಕೆನ್ನೆಯ ಮೇಲೆ ತುಟಿ ಒತ್ತಿ ಹೊರಟುಹೋದಳು.

ನಂತರದ ದಿನಗಳಲ್ಲಿ ಲಿಸ್ ಮೊದಲಿಗಿಂತಲೂ ಹೆಚ್ಚು ಆತ್ಮೀಯವಾಗಿ ನಡೆದುಕೊಂಡಳು ತಾನು ಹಿಂತಿರುಗುವ ಸನ್ನಾಹದಲ್ಲಿದ್ದಾಗ ಒಂದು ದಿನ, ಹೌದು, ಒಂದು ವಾರದ ಹಿಂದೆ ಇರಬೇಕು-ಅವಳು ನೇರ ತನ್ನ ರೂಮಿಗೆ ಬಂದಳು.

"ಮಾಡ್, ನೀನು ಹೊರಟುಹೋಗೋವಾಗ ನನಗೆ ಇಲ್ಲಿ ಇರೋಕೆ ಇಷ್ಟವಿಲ್ಲ ಅದಕ್ಕೆ ನಾನು ಈವತ್ತೇ ಮಮ್ಮಿ ಹತ್ರ ಹೊರಟೋಗ್ತೀನಿ, ಇದನ್ನು ತೊಗೊ, ನಾನೇ ಹೆಣೆದದ್ದು ನಿನಗೆ ಉಡುಗೊರೆ"ಎಂದು ಈ ಪುಲ್‌ಓವರ್ ಕೊಟ್ಟಳು. ತಾನು ತಕ್ಷಣವೇ ಅದನ್ನು ತೊಟ್ಟುಕೊಂಡಾಗ ತೃಪ್ತಿಯಿಂದ ನೋಡಿ, "ನಿನಗೆ ಸರಿಯಾಗಿದೆ. ಐ ಆಂ ಹ್ಯಾಪಿ. ಇದರಲ್ಲಿ ನೀನು ಪ್ರಿನ್ಸ್ ತರ ಕಾಣ್ತೀಯ"ಎಂದು ಹತ್ತಿರ ಬಂದು ಎದೆಯನ್ನು ಮೃದುವಾಗಿ ತಟ್ಟಿದಳು "ನಿನ್ನ ಎತ್ತರಕ್ಕೆ ನೀನು ಇನ್ನೂ ಸ್ವಲ್ಪ ದಪ್ಪವಾಗ ಬಹುದು. ಹೋಗಿ ಬಾ ಮಾಡ್. ದೇವರು ನಿನ್ನನ್ನು ಚೆನ್ನಾಗಿಟ್ಟಿರಲಿ"ಎಂದಳು.

ಮನ ತುಂಬಿ ಬಂದು, ಇಬ್ಬರಿಗೂ ಒಂದು ಘಳಿಗೆ ಏನು ಮಾಡಲೂ ತೋರಿರಲಿಲ್ಲ. ಹತ್ತಿರ ನಿಂತಿದ್ದ ಅವಳು ಮುಗುಳುನಗುತ್ತಾ ."ಡಾರ್ಲಿಂಗ್, ಈ ಜೀವನದಲ್ಲಿ ನಾವು ಮತ್ತೆ ಭೇಟಿ ಆಗೋಲ್ಲ. ಅದಕ್ಕಾಗಿ ನೀನಾಗಿ ಒಂದು ಸಲ, ಬಂದೆ ಒಂದು ಸಲ ಕಿಸ್ ಮಾಡಲಾರೆಯಾ? ಯಾವಜ್ಜೀವವೂ ನನ್ನ ನೆನಪಿಗಾಗಿ?" ಎಂದು ಪಿಸುಗುಟ್ಟಿದಳು.

ಕೈ ಚಾಚಿ ಅವಳನ್ನು ಹತ್ತಿರಕ್ಕೆಳೆದುಕೊಂಡು ತನ್ನೆಲ್ಲಾ ಚಳಿ ಬಿಟ್ಟು ಅವಳನ್ನು ಚುಂಬಿಸಲು ಪ್ರಯತ್ನಿಸಿದ್ದ ತಾನು. ಮೆಲ್ಲಗೆ ಬಿಡಿಸಿಕೊಂಡು ನಕ್ಕಳು, ಲಿಸ್.

"ಊಹುಂ ಪ್ರಯೋಜನವಿಲ್ಲ ಮಾಡ್, ನಾನು ಇದನ್ನು ಬಯಸಿದ್ದು ನಿನ್ನನ್ನು ಪರೀಕ್ಷಿಸಲೆಂದೇ. ಏನೂ ಬದಲಾವಣೆಯಿಲ್ಲ. ತೋರಿಕೆ ಮಾಡಿ ಫಲವಿಲ್ಲ. ನನ್ನ ಹಾರೈಕೆ ಇಷ್ಟೇ. ಎಲ್ಲವೂ ಇರುವ ನಿನಗೆ ಇದೊಂದು ಕಾರಣದಿಂದ ಜೀವನ ಬರಡಾಗಬಾರದು. ನೀನು ನಿಮ್ಮೂರ ಮಣ್ಣು ತುಳಿದ ಕೂಡಲೆ ನಿನ್ನ ದೇಹಕ್ಕೆ ಕಾವು, ಬಯಕೆ ಶಕ್ತಿ ಕೊಡುವಂತಹ ಹೆಣ್ಣೊಂದು ನಿನ್ನ ಕಣ್ಣಿಗೆ ಬೀಳಲಿ ಅಂತ ಹಾರೈಸ್ತೀನಿ. ಬರ್ತೀನಿ, ಗುಡ್‌ಬೈ" ಎಂದು ಹೊರಟುಹೋಗಿದ್ದಳು. ಅವಳನ್ನೇ ಹಿಂಬಾಲಿಸಿತ್ತು ತನ್ನ ದೃಷ್ಟಿ. ಕೈಯಲ್ಲೊಂದು ಚಿಕ್ಕ ಚೀಲ ಹಿಡಿದು ನಿಧಾನವಾಗಿ ಗಂಭೀರವಾಗಿ, ನಡೆಯುತ್ತಾ ಕಣ್ಮರೆಯಾಗಿದ್ದಳು.

ಎಂತಹ ಒಳ್ಳೆಯ ಮನಸ್ಸಿನ ಹುಡುಗಿ ಲಿಸ್!

ಚಂಪಳೊಡನೆ ಈ ಹಿಂದಿನ ಅನುಭವಕ್ಕಿಂತ ಬೇರೆಯಾಗಬಹುದೆಂಬ ನಂಬಿಕೆ ಏನು? ಅವಳಾದರೂ ಅವಿವಾಹಿತ ಹೆಣ್ಣು. ಪಾಶ್ಚಾತ್ಯ ಸಮಾಜದ ರೀತಿ ನೀತಿಗಳಲ್ಲಿ ಇಂತಹದಾದರೆ ಅದರಿಂದ ಕಷ್ಟನಷ್ಟಗಳು ಕಡಿಮೆ. ಆದರೆ ಚಂಪಳನ್ನು ತಾನು ಮದುವೆಯಾಗಿ ಮೊದಲ ರಾತ್ರಿಯೇ ಹಾಗಾದರೆ'ಚಂಪಳ ಗತಿಯೇನು? ಅವಳ ಮತ್ತು ತನ್ನ ಬದುಕೇ ಹಾಳಲ್ಲವೇ? ಅಮ್ಮ ಸರಿಹೋಗುತ್ತೆ ಎನ್ನಬಹುದು ಅಮ್ಮ.

'ಚಂಪಾ, ನೀನೇಕೆ ನನ್ನ ಹಿಂದೆ ಮುಂದೆ ಸುತ್ತುತ್ತಿ? ಅಮ್ಮನ ಮಾತು ಕೇಳಬೇಡ. ಹೋಗಿಬಿಡು ಚಂಪಾ'ಎಂದು ಮನದಲ್ಲಿ ಕನವರಿಸಿ ಕೂಗಿದ.

ಏನೋ ಬೆಳಕು ಮಿಂಚಿದಂತಾಯಿತು. ಚಂಪ ತನ್ನ ಹಿಂದೆ ಮುಂದೆ ಸುತ್ತು ತ್ತಿದ್ದಾಳೆಯೇ? ಊಹುಂ, ಈ ಮೂರು ತಿಂಗಳಿಂದಲೂ ಗಮನಿಸುತ್ತಿದ್ದಾನೆ, ಅವಳು ಸುತ್ತುತ್ತಿರುವುದು ಬಾಲುವಿನ ಹಿಂದೆ. ಮನಸ್ಸಿಗೇಕೋ ಆನಂದವಾಯಿತು. ಧೈರ್ಯ ವಾಯಿತು. ಬಾಲುವೂ ಸಹ ಈಗ ಹೋಗ್ತೀನಿ, ಆಗ ಹೋಗ್ತೀನಿ ಅಂದವನು ಊರಿಗೆ ಹೋಗಿಯೇ ಇಲ್ಲ. ಹೋದರೂ ಒಂದೆರಡು ದಿನದಲ್ಲೇ ಮತ್ತೆ ಹಾಜರಾಗಿರು ತ್ತಾನೆ. ಹಾಗಾದರೆ ಅವನಿಗೂ ಅವಳಲ್ಲಿ ಆಕರ್ಷಣೆ ಇದೆ. ಅಮ್ಮ ಇದನ್ನೇಕೆ ಗಮನಿಸ ಬಾರದು?

ಮತ್ತೊಮ್ಮೆ ಲಿಸ್‌ಳ ನೆನಪಾಗಿ ನೆಲದ ಮೇಲೆ ಬಿದ್ದಿದ್ದ ಆ ಪುಲ್‌ಓವರನ್ನು ಮಲಗಿದ್ದಲ್ಲಿಂದಲೇ ಕೈ ಚಾಚಿ ಎಳೆದುಕೊಂಡು ಮಂಚದ ಓರೆಯಲ್ಲಿ ಮಡಿಸಿಟ್ಟ. 'ನೋಡಿದ್ಯಾ ಲಿಸ್ ಎಷ್ಟು ಜೋಪಾನವಾಗಿಟ್ಟದ್ದೀನಿ' ಎಂದು ಅದನ್ನು ಕೈಯಿಂದ ತಟ್ಟಿ ನಕ್ಕ. ನಕ್ಕಾಗ ಅವಳ ಕಡೆಯ ಮಾತಿನ ನೆನಪಾಯಿತು. "ದೇಹದಲ್ಲಿ ಕಾವು, ಬಯಕೆ, ಶಕ್ತಿ ಕೊಡುವ ಹೆಣ್ಣೊಂದು ನಿನ್ನ ಕಣ್ಣಿಗೆ ಬೀಳಲಿ "ಎಂದು ಎರಡು ಬಾರಿ ಉಚ್ಚರಿಸಿಕೊಂಡಾಗ, ಕಿಟಕಿಯ ಹೊರಗಡೆ ಪಕ್ಕದ ಗೋಡೆಯ ಮೇಲೆ ಫಳಕ್ ಎಂದು ಬೆಳಕಾಯಿತು. ಮಂಚದ ಮೇಲೆ ಎದ್ದು ಕೂತು ಬಾಗಿ ನೋಡಿದ. ಕಿಟಕಿಯ ಹೊರಗಡೆಗೆ ಸುಮಳ ಕೋಣೆಯಲ್ಲಿ ದೀಪ. ಅವಳ ಕೋಣೆಯ ಕಿಟಕಿಯಿಂದ ಗೋಡೆಯ ಮೇಲೆ ಬೆಳಕು ಹರಿದಿತ್ತು. ಅಂದರೆ ಬೆಳಗಾಗುತ್ತಿದೆ. ಬೆಳಗಿನ ಜಾವದ ಕೋಳಿ, ಓದಲು ಎದ್ದಿದೆ.

ಅವನ ಎದೆ ಡವ ಡವ ಎಂದಿತು. ಈ ರೀತಿ ಯಾರನ್ನು ನೆನೆಸಿದಾಗಲೂ ಆಗಿರಲಿಲ್ಲ. ಅಂದರೆ ಅಂತಹ ಹೆಣ್ಣು ಸುಮಳಾಗಬಹುದೆ?ಅವಳ ನೆನಪಿನಿಂದ ತನಗಾಗುವ ಹೃದಯ ಸ್ಪಂದನವೇ ಬೇರೆ ರೀತಿಯದು. ಅದು ಒಂದು ಪ್ರತ್ಯೇಕ ಭಾವನೆ. ಸುಮಳ ಮುಖ, ಛಾಯೆ ಎದುರಿಗೆ ನಿಂತಾಗ ಪುಟ್ಟ ಮರೆಯಾಗಿರುತ್ತಾಳೆ. ಹಾಗಾದರೆ ಪುಟ್ಟ ಸುಮಳಿಗೆ ಸ್ಥಾನ ಕೊಡಬಹುದೆ?

ಊಹುಂ, ಮಾಧುರಿ, ಚಂಪ, ಲಿಸ್‌ರ ಸಮಾಚಾರವೇ ಬೇರೆ. ಅವರಿಗೆಲ್ಲಾ ಬೇರೆ ರೀತಿಯ

ಸವಲತ್ತು ಸೌಲಭ್ಯಗಳಿವೆ. ಬದುಕಿನಲ್ಲಿ ಸ್ವಲ್ಪ ಎಡರುತೊಡರಾದರೂ ಆಧರಿಸಿ ಆದರಿಸುವವರಿದ್ದಾರೆ. ಆದರೆ ಈ ಅನಾಥ ಹುಡುಗಿ?ಪದವಿಗಾಗಿ ಕಾದು ಕೂತು, ಅಹರ್ನಿಶಿ ಶ್ರಮಿಸುತ್ತಿರುವ ಅವಳು ತನ್ನ ಕೈಯಲ್ಲಿ ನಲುಗಬಾರದು. ತಾನು ಅವಳೊಂದಿಗೆ ಹೀಗೆ ಅತಿ ಸಲಿಗೆ ತೋರಿದುದೇ ತಪ್ಪು. ಅವಳ ಬಾಳಿನೊಡನೆ ಆಡುವುದು ಸರಿಯೇ?

ಯಾವುದೋ ಒಂದು ಮೂಲೆಯಲ್ಲಿ ಅವನ ಅಂತರಂಗ ಹೇಳುತ್ತಿತ್ತು- "ನಿನ್ನಿಂದ ಅವಳು ನಲುಗೋಲ್ಲ ಮಾಧು. ನಿನ್ನೆ ಸಂಜೆ ಅವಳು ನಿನಗೆ ಹತ್ತಿರವಾಗಿ ಬಂದಿದ್ದಳು. ಆಗಿನ ಭಾವನೆ ನೆನಸಿಕೋ ಅದು ನಿನ್ನ ಮಿಕ್ಕ ಅನುಭವಗಳಿಗಿಂತ ಭಿನ್ನವಾಗಿರಲಿಲ್ಲವೆ?"

ಲಿಸ್ ಹೇಳಿದಂತೆ ತಾನು ಸೈಕಾಲಜಿಸ್ಟ್ ಒಬ್ಬರನ್ನು ನೋಡಿದರೆ ಹೇಗೆ?ಏನೆಂದು ಹೇಳುವುದು?ಪುಟ್ಟಿಯನ್ನು ಮರೆತು ಬೇರೆ ಯಾರನ್ನೂ ಬಯಸಲಾರೆ ಎಂದೆ?ಇಷ್ಟು ವಿದ್ಯಾವಂತ ತಾನು!ಆ ಕಾರಣ ಹೇಳಿ ತನ್ನ ದೌರ್ಬಲ್ಯ ವ್ಯಕ್ತಪಡಿಸುವುದೇ?ಛೆ, ಬೇಡ, ತನ್ನಲ್ಲಿ ಮತ್ತಾವ ಕೊರತೆಯೂ ಇಲ್ಲ. ಸುಮಳೇ ತನ್ನ ವೈದ್ಯಳಾಗಿರಬಹುದು. ಕಾದು ನೋಡೋಣ, ವಿಧಿ ನಿಯಮವೇನಿದೆಯೋ ಇತ್ತೀಚೆಗೆ ಸುಮಳ ಸಂಪರ್ಕ, ಬಂಧನದಿಂದ ತನ್ನ ಹೃದಯ ಮಾರ್ದವಗೊಳ್ಳುತ್ತಿದೆ ಎಂದು ಪಕ್ಕಕ್ಕೆ ಹೊರಳಿ ಅಲ್ಲಿದ್ದ ಪುಲ್ ಓವರ್‌ಗೆ ಹತ್ತಿರವಾಗಿ ಮುಖ ಮಾಡಿ ಕಣ್ಣು ಮುಚ್ಚಿದ. ಬಹುಶಃ ಸುಮಳ ನೆನಪು ಅವನನ್ನು ಮೆಲುವಾಗಿ ಮಧುರವಾಗಿ ತಟ್ಟಿದ್ದಿರಬೇಕು ಒಂದೇ ಕ್ಷಣದಲ್ಲಿ ಭಾರವಾಗಿ, ನೇರವಾಗಿ ಉಸಿರಾಡತೊಡಗಿದ.

* * *

ವೇಣು ಕೋಣೆಯಿಂದ ಹೊರಟುಹೋದ ಕೂಡಲೇ ರಾಯರ ಕೊರಡಿಯಲ್ಲಿ ಮೌನವಾವರಿಸಿತು. ನಾಗಮ್ಮ ಅಳುತ್ತಿದ್ದಾರೆಂದು ತಿಳಿದ ರಾಯರು ಕತ್ತಲಲ್ಲಿ ಸೂರನ್ನು ನೋಡುತ್ತಿದ್ದವರು. "ಈಗ ಅತ್ತರೆ ಏನು ಪ್ರಯೋಜನ ನಾಗೂ?ಎಲ್ಲಕ್ಕೂ ಹಟ ಮಾಡಿದವಳು ನೀನೇ ನಡೆಯಬಾರದ್ದು ನಡೆದಾಯ್ತು ಅದು ಅವನ ಮನದಲ್ಲಿ ಪ್ರಚಂಡ ಗಾಳಿ ಎಬ್ಬಿಸಿದೆ. ಅವನಾಗ ಹೇಳೋವರೆಗೆ ಈ ಮಾತೆತ್ತಬೇಡ ಅಂತ ನಾನೆಷ್ಟೋ ಸಲ ಹೇಳಿದ್ದೀನಿ. ನೀನು ಕೇಳೋಲ್ಲ ಅವನನ್ನೂ ನೋಯಿಸ್ತಿ. ನೀನೂ ನೊಂದ್ಕೊಳ್ತಿ."

"ಅವನಾಗಿ ಮದುವೆ ಆಗ್ತೀನೀಂತ ನಿಜವಾಗ್ಲೂ ಹೇಳೋ ದಿನ ಬರುತ್ತೆ ಅಂತ ನಂಗನ್ನಿಸೋಲ್ಲ"

"ಹುಚ್ಚಿ, ನೀನು ಇಲ್ಲದ್ದು ಕಲ್ಪನೆ ಮಾಡ್ತೀಯ. ಒಂದಿಷ್ಟು ದಿನ ಕಾಯಿಲೆ ಅಂತ ಆಯ್ತು. ಇನ್ನೊಂದಷ್ಟು ದಿನ ಓದು ಅಂತಾಯ್ತು. ಆಮೇಲೆ ವಿದೇಶ ಯಾತ್ರೆ. ಈಗ ತಾನೇ ಆತನಿಗೆ ಬಿಡುವು. ಈಗಿನ್ನೂ ಒಂದು ನೆಲೆಗೆ ಬರ್ತಿದಾನೆ,ಸ್ವಲ್ಪ ದಿನ ತಡಿ."

"ನಿಮಗಿರೋ ಧೈರ್ಯ ನನಗಿಲ್ಲ."

"ಇದು ಧೈರ್ಯ, ಅಧೈರ್ಯದ ಪ್ರಶ್ನೆ ಅಲ್ಲ ನಾಗೂ. ಜೀವನವನ್ನು ಸ್ವಾಭಾವಿಕವಾಗಿ ನೋಡ್ಬೇಕು. ಈಗಲ್ಲದಿದ್ರೂ, ಇನ್ನೊಂದು ಹತ್ತು ವರ್ಷಕ್ಕಾದರೂ ಸರಿ, ಅವನು ನಿನ್ನಿಷ್ಟ ನೆರವೇರಿಸ್ತಾನೆ."

"ಅವನು ಬೇಡಾಂತಲೇ ಉಳಿದುಬಿಟ್ರೆ?" -ಗಾಬರಿಯಿಂದ ಪಿಸುಗುಟ್ಟಿದರು ಆ ರಾತ್ರಿ ಅವರು ಸಂಭಾಷಣೆಯಲ್ಲಿ ಎಷ್ಟು ಮೆಲ್ಲಗೆ ಮಾತಾಡಿದ್ರೂ ಮತ್ತೊಬ್ಬರ ಕಿವಿಗೆ ಬೀಳಬಹುದೆಂಬ ಭೀತಿಯೂ ಸೇರಿತ್ತು. ಮುಂದಿನ ರೂಮಿನಲ್ಲಿ ಬಾಲು ಇದಾನೆ. ಸರಿಯಾಗಿ ಮೇಲಿನ ರೂಂನಲ್ಲಿ ವೇಣು ಇದ್ದಾನೆ. ಇನ್ನೂ ಎಚ್ಚರವಾಗೇ ಇದ್ದರೂ ಇರಬಹುದು. ಅದಕ್ಕೇ ರಾಯರೂ ತಗ್ಗಿದ ದನಿಯಲ್ಲಿ-

"ಹಾಗಂತೂ ಅವನು ಉಳಿಯೋಲ್ಲ. ನಾವು ತಲೆತಲಾಂತರದಿಂದಲೂ ಒಳ್ಳೇತನಕ್ಕೆ ಹೆಸರಾದ ವಂಶದವರು. ದೈವ ಅಂತಹ ನಮ್ಮ ವಂಶಾವನ್ನು ಯಾವತ್ತಿಗೂ ತುಂಡರಿಸೋಲ್ಲ. ಇನ್ನೊಂದೆರಡು ವರ್ಷದಲ್ಲಿ ವೇಣು ಗೃಹಸ್ಥನಾಗ್ತಾನೇಂತ ನನಗೇನೋ ಮನಸ್ಸು ಹೇಳ್ತಾನೇ ಇದೆ. ನೀನು ಏನೂ ಯೋಚನೆ ಮಾಡ್ಬೇಡ, ಮಲಕ್ಕೋ" ಎಂದವರು ಸ್ವಲ್ಪ ತಡೆದು "ಆದ್ರೆ ನೀನು ವೇಣೂನ್ನ ಅವಸರಿಸಬೇಡ" ಎಂದರು.

ಆಕೆ ಮಾತನಾಡಲಿಲ್ಲ. ಅದು ಆತನಿಗೆ ಆಕೆಯ ಅಸಮ್ಮತಿಯೆನಿಸಿ-

"ಏನು, ನಾ ಹೇಳಿದ್ದು ಕೇಳಿಸ್ತಾ? ತಿಳೀತಾ" ಎಂದರು ಮತ್ತೆ.

"ಹೂಂ" ಎಂದರು ನಾಗಮ್ಮ. ಆ ಹೂಂಕಾರದಲ್ಲಿ ತೃಪ್ತಿಯಿರಲಿಲ್ಲ, ಬಲವಂತವಿತ್ತು

ಮೇಲೆ ಮೇಲೆ ಪತ್ನಿಗೆ ಸಮಾಧಾನ ಮಾಡಿದರೂ, ರಾಯರಿಗೆ ತಮ್ಮ ಮಾತಿನಲ್ಲಿ ತಮಗೇ ನಂಬುಗೆಯಿರಲಿಲ್ಲ. ದೈವನಿಯಮದ ಮುಂದೆ ತಮ್ಮ ಇಚ್ಛೆ ಏನಿದೆ? ತಮ್ಮ ಇಚ್ಛೆಯೇ ಆಗಿದ್ದರೆ ವೇಣುವಿಗೆ ಆ ಅಪ್ರಬುದ್ಧ ಮದುವೆ ಮಾಡುತ್ತಿದ್ದರೆ? ಏನೋ ತಮ್ಮ ತಲೆಮಾರಿನಲ್ಲಿ ತಾವು ಉದ್ಧಾರವಾಗಬೇಕಾದರೆ ಹೀಗೊಂದು ಹುಡುಗಿಯ ಬಲಿಯಾಗಬೇಕೇನೋ. ವಾಣಿ ತಮ್ಮ ಕೈಯಾರೆ ಸತ್ತಿದ್ದಳು. ಈ ಪುಟ್ಟಮ್ಮ ತಮ್ಮ ಮಗನ ಕಾರಣವಾಗಿಯೇ ಬಲಿಯಾದಳೇನೋ.

ಎಲ್ಲ ನಾಗುವಿನ ಹಟ. ಹಾಗೆ ತಾನೇ ಏಕನ್ನಬೇಕು? ದೈವ ಅವಳ ಕೈಯಲ್ಲಿ ಹಟಮಾಡಿಸಿರಬೇಕು. ವೇಣು ಸಕತ್ ಕಾಯಿಲೆ ಬಿದ್ದು, ಯಾವ ಔಷಧವೂ ಹತ್ತದೆ ಇದ್ದಾಗ, ತಾವು ಅವನ ಆಸೆಯನ್ನೇ ಬಿಟ್ಟುಬಿಟ್ಟಿದ್ದರು. ತಮ್ಮ ಸಂತಾನದ ಬಗೆಯಲ್ಲಿ ನಿರ್ವಿಣ್ಣರಾಗಿದ್ದರು. ಯಾರೋ ಹೇಳಿದರೆಂದು ನಂಜನಗೂಡಿನ ಶ್ರೀಕಂಠೇಶ್ವರನಿಗೆ ಅವನನ್ನೂ ಕೊಂಡೊಯ್ದು ಪೂಜೆ ಮಾಡಿಸಿದರೆ ಗುಣವಾಗುವುದೆಂದೂ ನಾಗು ಶುರುಮಾಡಿಬಿಟ್ಟಳು. ದೇವರ ಸೇವೆಗೆ ಹೋಗಲು ತಮಗೇನೂ ಹಿಂದೇಟಿರಲಿಲ್ಲ. ಆದರೆ ದೇವರ ಸನ್ನಿಧಿಗೆ ಹೋದ ಮಾತ್ರಕ್ಕೆ, ಇಷ್ಟು ಔಷಧಿಗಳಿಗೆ ಮಣಿಯದ ಕಾಯಿಲೆ ಗುಣವಾಗುತ್ತದೆಂಬ ನಂಬಿಕೆ ಬರಲಿಲ್ಲ. ಅರ್ಥವಾಗದ ಕಾಯಿಲೆ ವೇಣುವಿನದು. ನಂಬಿಕೆ ಇಲ್ಲವಾದ ಮೇಲೆ ಹೋಗುವುದೇಕೆಂದು ಬೇಡವೆಂದರೂ ನಾಗೂ ಬಿಡಲಿಲ್ಲ. ಹೆತ್ತ ಕರುಳಿಗೆ ನಿರಾಶೆ ಮಾಡಲಾರದೆ ತಾವು ಹೊರಟಿದ್ದಾಯಿತು.

ಒಂದು ಪೂಜೆಯೇ ಏನು, ಅಲ್ಲಿರುವ ಪೂಜಾರಿಗಳೆಲ್ಲರೂ ಹೇಳಿದ ಪ್ರತಿ ಪೂಜೆಯನ್ನೂ ಯಥೇಚ್ಛವಾಗಿ ನಡೆಸಿದ್ದರು. ಸಮಯಕ್ಕಿರಲಿ ಎಂದು ತೆಗೆದುಕೊಂಡು ಹೋಗಿದ್ದ ಚೆಕ್ಕು ಪುಸ್ತಕ ಖಾಲಿಯಾಗುವವರೆಗೂ ಬರೆದಿದ್ದರು. ಅದರಲ್ಲಿ ತಮಗೆ ತೃಪ್ತಿ ಸಿಕ್ಕಿತ್ತು. ಹುಡುಗನಿಗೆ ವಾಸಿಯಾಗುತ್ತದೋ ಇಲ್ಲವೋ ಅಂತೂ ಅಲ್ಲಿನ ಜನಕ್ಕೆ ತಾವು ಬಿಚ್ಚುಗೈಯಿಂದ ನೆರವು ನೀಡಿದಂತಾಗಿತ್ತು.

ಬಂದ ಕೆಲ ದಿನಗಳಲ್ಲೇ ತಾವು ಇಳಕೊಂಡಿದ್ದ ಮನೆಗೆ ಒಬ್ಬ ಜೋಯಿಸರು ಬಂದರು. ಹುಡುಗನನ್ನು ನೋಡಿದರು. ಗ್ರಹ ಎಣಿಸಿದರು. 'ಜಾತಕವಿದೆಯೇ?' ಎಂದು ತಾವು ಅದನ್ನು ತೆಗೆದುಕೊಂಡು ಹೋಗಿರಲಿಲ್ಲವಾದರೂ, ನಾಗು ಕಂಡಕಂಡವರಿಗೆ ವೇಣುವಿನ ಜಾತಕ ತೋರಿಸುವುದು ಬಿಟ್ಟಿರಲಿಲ್ಲ. ಜಾತಕ ಕೊಟ್ಟಳು. ಜೋಯಿಸರು ತದೇಕಚಿತ್ತರಾಗಿ ಅದನ್ನು ಪರಿಶೀಲಿಸಿದವರು, ತಲೆಯೆತ್ತಿ "ರಾಯರೆ, ಹುಡುಗನಿಗೆ ಅನ್ಯ ಜಾತಕದಿಂದ ಸುಖವಿದೆ. ಸೋದರ ಜಾತಕ, ಪತ್ನೀ ಇತ್ಯಾದಿ. ಅವನ ಸೋದರಸೋದರಿಯರಾರದಾದರೂ ಜಾತಕ ಇದ್ರೆ ಕೊಡಿ" ಎಂದರು ಅಂತಹವರು ಯಾರೂ ಇಲ್ಲವೆಂದಾಗ, ಒಂದು ಘಳಿಗೆ ತಡೆದ ಅವರು "ಹಾಗಾದರೆ ಇನ್ನೊಂದು ಮಾರ್ಗವಿದೆ. ನೀವು ಒಪ್ಪಿದರೆ ಆಗಬಹುದು" ಎಂದರು ಅನುಮಾನವಾಗಿ,

"ಅದೇನು ಹೇಳಿ" ಎಂದು ನಾಗು ಒಂದೇ ಅವಸರ ಮಾಡಿದಾಗ ಸಂಕೋಚಿ ಸುತ್ತಲೇ ಎಂದಿದ್ದರು "ಹುಡುಗನಿಗೆ ಒಂದು ಮದುವೆ ಮಾಡಿದರೆ, ಹುಡುಗಿಯ ಮಾಂಗಲ್ಯಭಾಗ್ಯ, ಅವನನ್ನು ಕಾಯುತ್ತದೆ."

ಆಗ ತಮಗೆ ನಿಜವಾಗಿ ಕೋಪ ಬಂದಿತ್ತು "ಅಸಂಭವ ಮಾತನಾಡಬೇಡಿ. ತಾವು ಹಿರಿಯರು ಹೀಗೆಲ್ಲಾ ಮಾತನಾಡಿ ನೋಯಿಸಬಾರದು. ಹೋಗಿ ಬನ್ನಿ" ಎಂದುಬಿಟ್ಟರು ಆದರೆ ಜೋಯಿಸರು ಕೋಪಿಸಿಕೊಳ್ಳಲಿಲ್ಲ.

"ಸಾವಧಾನ, ಸಾವಧಾನ, ನಿಮಗೆ ಬೇಡದಿದ್ದರೆ ಬಿಡಿ, ಇರುವ ವಿಷಯ ಹೇಳಿದೆ, ನಿಧಾನವಾಗಿ ಯೋಚಿಸಿ" ಎಂದು ಹೊರಟೇಹೋದರು. ತಾವು ಯೋಚಿಸು ವುದೇನೂ ಇರಲಿಲ್ಲ. ತಮ್ಮದು ಒಂದೇ ನಿರ್ಧಾರ, 'ಕೂಡದು' ಎಂದು. ಆಗುವುದಾದರೆ ಯಾಕೆ ಬೇಡ?' ಎಂದು ಗೋಳು ಆರಂಭಿಸಿಬಿಟ್ಟಳು ನಾಗು. ಅವಳ ಕೂಗು ಕೇಳಿದಂತೆ ಜೋಯಿಸರು ಮಾರನೆಯ ದಿನ ಬಂದು-

"ಏನು ಯೋಚಿಸಿದಿರಿ ರಾಯರೇ, ಊರಿಗೆ ಹೋಗಿಬೇಕಾದರೂ ಪ್ರಯತ್ನಿಸಿ. ಇಲ್ಲಾ ಅಂದರೆ ಇಲ್ಲೇ ಒಂದು ಹುಡುಗಿಯಿದೆ. ಪಾಪ, ಬಡಹೆಂಗಸು ಅವಳ ತಾಯಿ. ಅವಳನ್ನ ಒಪ್ಪಿಸೋಣ" ಎಂದರು.

ತಾವು ಸಸೇಮಿರಾ ಒಪ್ಪಲಿಲ್ಲ. ಆದರೆ ನಾಗು, ಆಕೆಯನ್ನು ಕರೆತರುವಂತೆ ಹೇಳಿಯೇಬಿಟ್ಟಳು. ಲಲಿತಮ್ಮ ಬಂದಳು. ಸುಮಾರು ಮೂವತ್ತರ ಹರೆಯದ ಯೌವನಸ್ಥೆ, ಸುಂದರಿ. ಬರಿಯ ಹಣೆಯ ವಿಧವೆಯೆಂದು ತಿಳಿಯಿತು. "ಅಜ್ಜ ಎಲ್ಲಾ ಹೇಳಿದ್ದಾರೆ, ದೈವೇಚ್ಛೆಯಿದ್ದರೆ ಏಕಾಗಬಾರದು?" ಎಂದಳು

ಆಕೆ, ಏನೂ ಪೀಠಿಕೆಯಿಲ್ಲವೆ. ತಾವು ಅವಾಕ್ಕಾದರು.

"ನೋಡಿ ತಾಯಿ, ಆ ಮಗು ನಿಮ್ಮ ಮಗಳೇ ಆದರೂ ಅವಳ ಭವಿಷ್ಯ ಹಾಳು ಮಾಡೋ ಹಕ್ಕು ನಿಮಗಿಲ್ಲ. ನಮ್ಮ ಹುಡುಗನ ಪ್ರಾರಬ್ಧ ಕರ್ಮ. ಉಳಿಯುವ ಕರ್ಮ ಅವನದಾದರೆ ನಮ್ಮದು ಪುಣ್ಯ ಅಂದ್ಕೊಳ್ತೀನಿ. ಇಲ್ಲವೋ ದೈವೇಚ್ಛೆ ಅಂದ್ಕೊಳ್ತೀವಿ. ಹಾಗೇಂತ ಇನ್ನೊಂದು ಜೀವಿಯ ಭವಿಷ್ಯ ಹಾಳು ಮಾಡೋ ಕಟುಕ ರಲ್ಲಮ್ಮ ನಾವು"ಎಂದರು ವೇದನೆಯಿಂದ.

ಆಕೆ ಗಂಭೀರವಾಗಿ ಕುಳಿತಿದ್ದಳು. ಸ್ವಲ್ಪ ಯೋಚನೆ ಮಾಡಿದಂತೆ ಇದ್ದು-

"ನಿಮ್ಮ ಮನೋಭಾವಕ್ಕೆ ಅಡ್ಡ ಹೇಳೊಲ್ಲ. ಆದರೂ ಅಜ್ಜ ಹೇಳಿದ್ದಾರೆ. ಅವರು ಜಾತಕ ಅಂತ ನೋಡಿ ಹೇಳಿದ್ಮೇಲೆ ತಪ್ಪು ಆಗೋಲ್ಲ. ನಾನು ಬಡವಿ. ಇಲ್ಲೇ ಪಕ್ಕದ ಹಳ್ಳೀಲಿ ಟೀಚರಾಗಿದ್ದೀನಿ. ನನ್ನ ಮಗಳನ್ನ ಚೆನ್ನಾಗಿ ಬೆಳಸ್ಬೇಕೂಂತ್ಲೇ ನನ್ನ ಆಸೆ. ಅವಳಿಗೆ ಈಗ ಇನ್ನೂ ಎಂಟು ತುಂಬಿತು. ಮುಂದೆ ಹೇಗೋ ಏನೋ, ನನ್ನ ಸ್ಥಿತಿಗತೀಲಿ. ನಿಮ್ಮಂಥೋರ, ಒಳ್ಳೆಯೋರ ಸಂಬಂಧ ಸಿಕ್ಕಿದೆ. ಅಜ್ಜ ಹೇಳಿದ ಹಾಗೆ ಅವಳ ಮಾಂಗಲ್ಯ ನಿಮ್ಮ ಮಗೂನ್ನ ಉಳಿಸಿದ್ರೆ ಅವಳು ನಿಮ್ಮ ಮನೆ ಸೇರ್ತಾಳೆ, ಸುಖವಾಗಿರ್ತಾಳೆ. ಒಂದು ವೇಳೆ-"

ಆಕೆಯ ಮಾತನ್ನು ಕಡಿದು ತಾವು,"ಹಾಗಲ್ಲ, ಲಲಿತಮ್ಮ"-ಎಂದು ಏನೋ ಹೇಳಹೋದರೆ ಆಕೆ ಕೇಳಿಸಿಕೊಳ್ಳದೆ ತನ್ನದೇ ಧಾಟಿಯಲ್ಲಿ ಉಗುಳು ನುಂಗುತ್ತಾ "ಒಂದು ವೇಳೆ ಹೆಚ್ಚು-ಕಡಿಮೆಯಾದ್ರೆ ನನ್ನ ಹಾಗೇ ಅವಳೂ ಇರ್ತಾಳೆ"ಎಂದು ತಲೆತಗ್ಗಿಸಿದಳು.

"ಅವಳು ಚೆನ್ನಾಗಿ ಓದಲಿ, ನಾವು ಸಹಾಯ ಮಾಡ್ತೀವಿ. ಹಾಗಂದ ಮಾತ್ರಕ್ಕೆ ಇಂಥ ಸಾಹಸ ಬೇಡಿ ತಾಯಿ"ಎಂದು ಮುಂದೆ ಮಾತು ಬೇಡ ಎನ್ನುವಂತೆ ತಾವೆದ್ದು ಒಳಗೆ ಹೋಗಿದ್ದರು.

ಲಲಿತಮ್ಮ ನಾಗುವಿನ ಮುಂದೆ ಹೇಳುತ್ತಿದ್ದಳು-"ನೋಡೀಮ್ಮ, ಅಜ್ಜ ನಮ್ಮ ಪುಟ್ಟೀ ಜಾತಕ ನೋಡಿ ಹೇಳಿದ್ದಾರೆ, ಅವಳು ಒಳ್ಳೇ ರಾಣಿ ಥರಾ ಇರ್ತಾಳೆ. ಮೊದಲು ಕಷ್ಟಪಟ್ರೂ ಒಳ್ಳೇ ಮನೆತನ ಸೇರಿ, ಒಂದು ಹೆಸರಾಂತ ವಂಶ ಉಳಿಸ್ತಾಳೇಂತ. ನಿಮ್ಮನ್ನು ನೋಡಿದ್ಮೇಲೆ ಅವಳನ್ನ ನಿಮ್ಮ ಉಡೀಗೆ ಹಾಕ್ಲೇಬೇಕೂಂತ ನನಗನ್ನಿಸ್ತಾ ಇದೆ. ನಮ್ಮಿಂದ ಒಂದು ಒಳ್ಳೇ ಕೆಲಸ ಆಗೋದಾದ್ರೆ ಆಗ್ಲಿ ಅನ್ನೋ ಸಮಾಧಾನ ನನ್ನದು"ಎಂದು ಅರೆ ಮನಸ್ಸಿನಿಂದ ಹೊರಟುಹೋದಳು.

ಆಕೆಯ ಪ್ರತಿ ಮಾತೂ ತಾವು ಕೇಳಿಸಿಕೊಂಡರೂ, ವಿಚಲಿತರಾಗಿರಲಿಲ್ಲ. ಒಬ್ಬ ವಾಣಿಯ ಬಲಿಯೇ ತಮ್ಮನ್ನು ಜರ್ಝರಿತ ಮಾಡುತ್ತಿದೆ. ಅದು ತಿಳಿಯದೆ ನಡೆದದ್ದು. ತಿಳಿದೂ ತಿಳಿದೂ ಈ ಪುಟ್ಟಿಯೆಂಬ ಮಗುವಿನ ಕೊರಳಿಗೆ ಉರುಳು ಎಸೆಯಲು ಒಪ್ಪಲಿಲ್ಲ ತಮ್ಮ ಮನಸ್ಸು. ಆದರೆ ನಾಗುವಿನ ಮನಸ್ಸು ಮಾತ್ರ ಉಲ್ಲಾಸವಾಗ ತೊಡಗಿತು. ಆಕೆ ಹೊರಟುಹೋದ ನಂತರ, ಒಂದೇ ಸಮ ಕಾಡತೊಡಗಿದಳು.

"ಆಕೇನೇ ಹೇಳಿದ ಹಾಗೆ, ಮಾಧುಗೆ ವಾಸಿಯಾದರೆ ಭಾಗ್ಯದೇವತೇಂತ ಆ ಹುಡುಗಿಯನ್ನ ಮನೆತುಂಬಿಸಿಕೊಳ್ಳೋಣ. ಇಲ್ಲವಾದರೆ "ಎಂದು ವಾಕ್ಯ ಪೂರೈಸುವ ಮುನ್ನವೇ, ತಾವು ರೋಷದಿಂದ, "ಇಲ್ಲವಾದರೆ ಹಾಳು ಬಾವೀಗೆ ತಳ್ಳೋಣ" ಎಂದು ಕೂಗಿದ್ದರು

"ಛಿ, ಏನು ಮಾತಾಡ್ತೀರಾ. ಆ ಮಗುವಿಗೆ ಮದುವೆಯೇ ಆಗಿಲ್ಲಾಂತನ್ನೋಣ. ನಾವೇ ಬೆಳೆಸಿ ಬೇರೆ ಮದುವೆ ಮಾಡೋಣ. ಆದಷ್ಟೂ ಈ ಮದುವೆ ಗುಟ್ಟಾಗಿ ನಡೆಸೋಣ" ಎಂದಳು ನಾಗು, ಆಸೆಯಿಂದ.

"ನಾಗೂ, ಎಷ್ಟು ಸಿಹಿ ಮಾತು ಹೇಳಿದೆ. ಎಂತಹ ದೊಡ್ಡ ಹೃದಯ ನಿನ್ನದು" ಎಂದು ನಾಗುವಿಗೆ ಮೆಚ್ಚುಗೆ ಹೇಳಿ, ಆ ಮಾತುಗಳನ್ನೇ ಮೆಲುಕು ಹಾಕಿದ್ದರು. ನಾಗುವಿನ ರೀತಿ ತಮಗೆ ಹಿಡಿಸಿತು. ಜೋಯಿಸರಿಗೂ, ಲಲಿತಮ್ಮನಿಗೂ ಹೇಳಿಕಳುಹಿಸಿ, ಪುಟ್ಟಿಯನ್ನು ಧಾರೆಯೆರೆಸಿಕೊಂಡರು.

ದೀರ್ಘ ವಿವರ, ಪ್ರವರಳಿಗೆ ಕಾಯದೆ ಜೋಯಿಸರು, ಪುಟ್ಟಿಯೆಂಬ ಮಧುವನ್ನು ಮಾಧವನೆಂಬ ವರನಿಗೆ ಮದುವೆ ಮಾಡಿಸಿದರು ಬಾಯಿತುಂಬಾ ವಧೂವರರನ್ನೂ, ಬೀಗ ಬೀಗತಿಯರನ್ನೂ ಹರಸಿದರು, ವೃದ್ಧ ಜೋಯಿಸರು

ನಂಜನಗೂಡಿನಿಂದ ಹಿಂತಿರುಗಲು ಅನುವಾದಾಗ ಲಲಿತಮ್ಮ, ಹುಡುಗಿ ದೊಡ್ಡವಳಾದ ಕೂಡಲೇ ಕಳುಹಿಸಿಕೊಡುವುದಾಗಿಯೂ, ಎಲ್ಲವೂ ಒಳ್ಳೆಯದಾಗ ಲೆಂದೂ ಹಾರೈಸಿದಳು ತಮ್ಮ ಇಚ್ಛೆಯಂತೆಯೇ ನಾಗು ಲಲಿತಮ್ಮನಿಗೆ ಎಂಟು ಸಾವಿರ ರೂಪಾಯಿಗೆ ಚೆಕ್ಕನ್ನು ತಾಂಬೂಲದಲ್ಲಿಟ್ಟು ಕೊಟ್ಟಾಗ, ಲಲಿತಮ್ಮ ಹೌಹಾರಿದಳು. ಅದು ಅಪಮಾನವೆಂದಳು ತಾನೇನೂ ಹುಡುಗಿಯನ್ನು ಮಾರಿಲ್ಲ ವೆಂದಳು. ಆದರೆ ತಾವೇ ಆಕೆಯನ್ನು ಸಮಾಧಾನ ಮಾಡಬೇಕಾಯಿತು.

"ಲಲಿತಮ್ಮ, ನೀನು ನನಗೆ ತಂಗಿ ಇದ್ದ ಹಾಗೆ, ನಾನು ಯಾರೋ ಕಂಡರೀದೇ ಇರೋವ್ರಿಗೆಲ್ಲಾ ಕೊಡ್ತೀನಿ. ಈಗ ನೀನು ನನ್ನ ಮಗನ ಅತ್ತೆ ನೀನು ಬಡತನದಲ್ಲಿ ರೋದು ನನಗೆ ಇಷ್ಟವಿಲ್ಲ. ಅದಕ್ಕಾಗಿ ಅಷ್ಟೆ. ನಿನ್ನನ್ನು ಅವಮಾನ ಮಾಡೋಷ್ಟು ಅಲ್ಪರಲ್ಲಮ್ಮ ನಾವು. ನೀನೂ ನಿನ್ನ ಮಗಳೂ ವಿನಾಕಾರಣ ಎಂಥ ತ್ಯಾಗ ಮಾಡ್ತಿದೀರ! ಆ ಒಳ್ಳೇತನದ ಮುಂದೆ ತಲೆಯೆತ್ತಿ ನಿಂತ್ಕೊಳ್ಳೋ ಹಾಗೆ ನಮಗೂ ಒಂದವಕಾಶ ಇರಲೀಮ್ಮ" ಎಂದು ಹೇಳಿ ಹತ್ತಿರ ಹೋಗಿ ಬೆನ್ನುತಟ್ಟಿ- "ಹುಂ, ತೊಗೊಮ್ಮ. ಮನೆಯ ಹೆಣ್ಣು ಮಗಳಿಗೆ ಕೊಟ್ಟರೋ ತಾಂಬೂಲ ಅಂದ್ಕೋ"ಎಂದು ತಾವಂದಾಗ, ಲಲಿತಮ್ಮ ನಡುಗುತ್ತಿರುವ ಕೈಗಳಿಂದ ತಾಂಬೂಲ ತೆಗೆದುಕೊಂಡಳು. ತಮ್ಮ ಮನಸ್ಸಿಗೆ ಆಕೆ ಮೂಕವಿಸ್ಮಿತಳಾಗಿದ್ದಂತೆ ಕಂಡುಬಂತು. ನಾಗು ಪುಟ್ಟಿಯನ್ನು ಹತ್ತಿರ ಕರೆದು ತಲೆ ತಡವಿದಳು.

ಊರಿಗೆ ಹಿಂತಿರುಗಿದ ಮೇಲೂ ಹದಿನೈದು ದಿನಗಳಿಗೊಮ್ಮೆ ತಾವು ಲಲಿತಮ್ಮನಿಗೆ ಕಾಗದ ಬರೆಯುತ್ತಿದ್ದರು. ತಿಂಗಳಿಗೊಮ್ಮೆ ಸೊಸೆಯ ಓದಿಗೋಸ್ಕರ ವೆಂದು ನೂರು ರೂ. ಕಳುಹಿಸುತ್ತಿದ್ದರು.

ತಮ್ಮ ನಂಬಿಕೆ, ಭಾವನೆಗಳೇ ತಲೆಕೆಳ ಗಾಗುವಂತೆ ವೇಣು ಚೇತರಿಸಿಕೊಳ್ಳತೊಡಗಿದ. ಪುಟ್ಟಿ ಮನೆಯ ಭಾಗ್ಯದೇವತೆಯೆಂದು ತಾವು, ನಾಗು ಎಷ್ಟು ಹರ್ಷಿಸಿದರು!ಲಲಿತಮ್ಮನಿಂದ ಮೂರು ತಿಂಗಳ ಕಾಲ ಸರಿಯಾಗಿ ಉತ್ತರ ಬರುತ್ತಿತ್ತು. ಐದನೇ ಕ್ಲಾಸಿನಲ್ಲಿ ತರಗತಿಗೇ ಪ್ರಥಮ ಸ್ಥಾನ ಗಳಿಸಿದ್ದಾಳೆಂದೂ ಅದು ತಮ್ಮೆಲ್ಲರ ಆಶೀರ್ವಾದವೆಂದೂ ತಮ್ಮ ಸೊಸೆಯಾಗುವ ಅರ್ಹತೆ ಪಡೆಯುತ್ತಿದ್ದಾಳೆಂದೂ ಸಂತೋಷ ಪತ್ರ ಬಂದದ್ದೇ ಕಡೆ, ಮತ್ತೆ ಕಾಗದವಿಲ್ಲ. ತಾವು ಆದರೂ ತಪ್ಪದೆ ಬರೆದರು. ಹಣವನ್ನೂ ಕಳುಹಿಸಿದರು-ಇನ್ನೂ ಮೂರು ತಿಂಗಳ ಕಾಲ.

ಆಮೇಲೆ ? ....... ಆಮೇಲೆ ? . ............ ಯೋಚಿಸಲಾರದಾದರು ರಾಯರು ಅವರ ರಕ್ತದ ಒತ್ತಡ ಒಮ್ಮೆಲೇ ಜಾಸ್ತಿಯಾದಂತಾಯಿತು. ಮೆಲ್ಲನೆ 'ನಾಗೂ'ಎಂದರು. ಅವರ ಕ್ಷೀಣ ಧ್ವನಿ ಆಕೆಯ ಕಿವಿ ಮುಟ್ಟಲಿಲ್ಲ. ಆಕೆಯೂ ಕಣ್ಣೆವೆ ಮುಚ್ಚದೆ ಮಾಧುವಿನ ಬಾಲ್ಯದ ಮದುವೆಯ ಸ್ಮೃತಿಯಲ್ಲಿದ್ದವರು ಅಂದು ಬಂದಿದ್ದ ಪತ್ರದಲ್ಲಿ ಲೀನವಾಗಿದ್ದರು. ಕಹಿ ಸುದ್ದಿ ಹೊತ್ತು ತಂದ ಪತ್ರ ಅದು

ತಮ್ಮ ಮನೆಯ ಜ್ಯೋತಿಗೆ ಎಣ್ಣೆ ಎರೆದ ಜೀವ ಆರಿಹೋಗಿತ್ತು. ತ್ಯಾಗಮಯಿ ತಾಯಿ ಮಣ್ಣಾಗಿದ್ದಳು. ಯಾಕೆ ಹೀಗಾಯಿತು ಎಂದು ತಾವು ಕುಸಿದುಬಿಟ್ಟದ್ದರು. ಮಗ ಚೇತರಿಸಿಕೊಳ್ಳುತ್ತಿದ್ದರೂ ತಮ್ಮ ಹೃದಯ ಸುಣ್ಣದ ಗೂಡಾಯಿತು. ಪತಿ ಹೇಳಿದಂತೆ "ದೈವೇಚ್ಛೆಯಿದ್ದರೆ ಅವನು ಹೇಗೂ ಬದುಕುತ್ತಾನೆ. ಈ ಮಧ್ಯದಲ್ಲಿ ಆ ಮಗುವಿನ ಬಲಿಯೇಕೆ ನಾಗೂ"ಎಂದು ಎಷ್ಟು ಹೇಳಲಿಲ್ಲ ಇವರು ನನಗೆ. ನಾನೇಕೆ ಕೇಳಲಿಲ್ಲ? ತನಗೇಕೆ ಹಟಬಂದಿತ್ತು? ಪುಟ್ಟಿಯನ್ನು ತಾವೇ ಕೊಂದಂತೆನಿಸಿತ್ತು.

ಆದೇ ತಾನೇ ಗುಣಮುಖನಾಗುತ್ತಿದ್ದ ಮಾಧುವಿಗೆ ಹೇಳುವುದೇ ಬೇಡವೆಂದು ನಿಶ್ಚಯಿಸಿಯಾಗಿತ್ತು ಆದರೆ ಒಂದು ವರ್ಷದೊಳಗಾಗಿ ಮಾಧುವೇ ಪ್ರಸ್ತಾಪಿಸಿ ವಿಷಯ ಕೆದಕಿದ್ದ. ಅವನಿಗೆ ಹೇಳದೇ ವಿಧಿಯಿಲ್ಲವಾಯಿತು. ಅವನು ಸ್ವಲ್ಪ ಕಾಲ ಅಂತರ್ಮುಖನಾಗಿದ್ದರೂ ಕ್ರಮೇಣ ಉಲ್ಲಾಸಭರಿತನಾದುದರಿಂದ, ಅವನು ಆ ಘಟನೆ ಮರೆತಿದ್ದಾನೆಂದು ಬಗೆದಿದ್ದರು.

ಆದರೆ ಮಾಧುವಿನ ಮನದಲ್ಲಿ ಇದು ಇಷ್ಟು ತೀವ್ರವಾಗಿದೆಯೆಂದು ತಾವು ತಿಳಿಯಲಿಲ್ಲ, ಅವನು ಇಷ್ಟು ನೊಂದಿರುತ್ತಾನೆಂದು ತಮ್ಮ ಕಲ್ಪನೆಗೆ ಬರಲಿಲ್ಲ. ಕಾಯಿಲೆಯ ತೀವ್ರತೆಯಲ್ಲಿ ನಡೆದ ಈ ಘಟನೆ ಒಂದು ಸ್ವಪ್ನದಂತಿರಬಹುದು. ಚೇತರಿಸಿಕೊಂಡ ಕೂಡಲೇ ಮರೆತಿರುತ್ತಾನೆಂದು ತಾವು ಬಯಸಿದುದು ಮರೀಚಿಕೆ ಯಾಗಿತ್ತು ಅಜ್ಜ ಹೇಳಿದ್ದರು-ರಾಣಿಯ ಹಾಗಿರ್ತಾಳೆ. ಒಳ್ಳೆಯ ಮನೆ ಸೇರ್ತಾಳೆ ಎಂದು. ಹುಂ, ಎಲ್ಲಿಯ ರಾಣಿ ಇನ್ನು? ನಿಜ, ಇದ್ದಿದ್ದರೆ ತಾವು ಅವಳನ್ನು ರಾಣಿಯ ಹಾಗೆ ಇಟ್ಟುಕೊಳ್ಳುತ್ತಿರಲಿಲ್ಲವೆ? ಮಾಧುವಿನಲ್ಲಿ ಕ್ಷೀಣಿಸುತ್ತಿರುವ ಉಸಿರು ತುಂಬಲೆಂದೇ ಹುಟ್ಟಬಂದಿದ್ದು, ತನ್ನ ಉಸಿರನ್ನು ಅವನಿಗೆ

ತುಂಬಿ ಹೊರಟುಬಿಟ್ಟಳೆ?ಅಜ್ಜನ ಜಾತಕ ಎಂದೂ ಸುಳ್ಳಾಗೋದಿಲ್ಲ ಎಂದಿದ್ದಳು ಆ ಮುಗ್ಧ ಜೀವಿ. ಎಲ್ಲಿದ್ದೀರಿ ಜೋಯಿಸರೆ ಈಗ?

ಮಾಧು, ತಮ್ಮ ಮಾಧು, ಪುಟ್ಟಿಯನ್ನು ಮರೆಯಲಾರನೆ?ಹೀಗೆಯೇ ಉಳಿದುಬಿಡುತ್ತಾನೆಯೇ? "ಪುಟ್ಟೀ, ಅವನನ್ನು ಉಳಿಸ್ತೀನಿಂತ ಬಂದೆಯಲ್ಲ ಮಗೂ, ಈಗ ಉಳಿಸೋಲ್ವ?" ಎಂದು ಮೊರೆಯಿಡುತ್ತಾ ಕಣ್ಣು ಮುಚ್ಚಿಕೊಂಡರು ನಾಗಮ್ಮ. ರಾಯರ ವೇದನೆ ಆಕೆಗೆ ತಿಳಿಯುವ ಮೊದಲೇ ನಿದ್ದೆ ಹೋಗಿದ್ದರು.

## ೮

ಎಲ್ಲ ದಿನಗಳಂತೆಯೇ ಅಂದೂ ಬೆಳಗಾಯಿತು ಆದರೆ ರಾಯರ ಮನೆಯವರಿಗೆ ಮಾತ್ರ ವಿಚಿತ್ರವಾಗಿ ಬೆಳಗಾಗಿತ್ತು.

ಹಿಂದಿನ ದಿನದ ಮಧುರಾನುಭವದಿಂದ ಸುಮಳಿಗೆ ಪ್ರಪಂಚವೆಲ್ಲಾ ರಂಗುರಂಗಾಗಿ ಬಣ್ಣ ಬೀರುತ್ತ ಎದ್ದಿತ್ತು ಗಾಳಿಯಲ್ಲಿ ಗಾನಮಾಧುರ್ಯ ಸವಿಯು ತ್ತಿದ್ದಳು. ರವಿಯ ಬೆಳಕು ಪುಳಕ ತರುತ್ತಿತ್ತು ಕಣಕಣವೂ ಬೆಡಗು ಸೊಗಸುಗಳಿಂದ ಕೂಡಿತು ಕುಣಿಯುತ್ತಾ ಎಗರುತ್ತಾ ಅವಳು ತೋಟದ ಕೆಲಸ ಮಾಡುತ್ತಿದ್ದಳು ಗುಲಾಬಿ ಗುಚ್ಛಗಳು ತಲೆದೂಗಿ ಅವಳನ್ನು ಕರೆದವೇನೋ ಎನ್ನುವಂತೆ, ಒಂದೊಂದು ಗಿಡದ ಬಳಿಯೂ ನಿಲ್ಲುತ್ತಿದ್ದಳು.

ರಾಯರು ದಿನಕ್ಕಿಂತಲೂ ಗಂಭೀರವಾಗಿ ಕುಳಿತಿದ್ದರು. ಯೌವನದ ಉನ್ಮಾದದಲ್ಲಿ ತೂಗುತ್ತಿರುವ ಆ ಹುಡುಗಿಯ ಆನಂದಕ್ಕೆ ಸರಿಯಾಗಿ ಸಂತಸ ತೋರಿಸಲು ಸಾಧ್ಯವಿಲ್ಲದಿದ್ದರೂ, ಅವಳ ಸಂತೋಷ ಮಾಸಬಾರದೆಂದು ಗೆಲುವು ತಂದುಕೊಂಡು ಮಾತಾಡುತ್ತಿದ್ದರು

ಅಮ್ಮ ಎಂದಿನಂತೆ ಗಂಭೀರ, ಅವರ ಮುಖದ ಮೇಲೆ ಮತ್ತೊಂದು ಗೀರು ಹೆಚ್ಚಾಗಿ ಕುಳಿತಿತ್ತು. ಅವರ ನೋವನ್ನೇ ಆಗಲಿ, ನಲಿವನ್ನೇ ಆಗಲಿ ಪ್ರತಿಬಿಂಬಿಸುತ್ತಿದ್ದದು ಈ ಗೀರುಗಳೇ.

ಮಾಧುವಿಗೆ ಬಹಳ ಹೊತ್ತು ಬೆಳಗಾಗಲೇ ಇಲ್ಲ. ಬೆಳಗಾದಾಗ ಹೊತ್ತು ಬಹಳ ಮೇಲೇರಿ ಬಂದಿತ್ತು. ಬೇಗ ಇಳಿದು ಬಂದವನು, ಮುಖ ಮಾರ್ಜನ ಮುಗಿಸಿ ನೇರಾಗಿ ಬಾಲುವಿನ ಕೋಣೆಗೆ ಬಳಿ ಬಂದು, ಪತ್ರಿಕೆಗಾಗಿ. ಓಹ್! ಬಾಲುವಿನ ಕೋಣೆಯ ಇರವೇ ಬದಲಾಯಿಸಿತ್ತು ಎಲ್ಲವೂ ಶುಭ್ರವಾಗಿ, ಓರಣವಾಗಿ ಕುಳಿತಿತ್ತು. ಬಹುಶಃ ಚಂಪಳ ಕೈವಾಡವೆಂದು ಮೆಲ್ಲಗೆ ಹುಸಿನಕ್ಕ. ಕಾಲಮೇಲೆ ಕಾಲು ಹಾಕಿ ಪೇಪರ್ ಓದುತ್ತಿದ್ದ ಬಾಲು ತಲೆಯೆತ್ತಿದ ಅವನ ಮುಖದಲ್ಲೂ ಏನೋ ಬದಲಾವಣೆ ಕಂಡಂತಾಯಿತು ಮಾಧುವಿಗೆ.

"ರಾತ್ರಿ ಎಷ್ಟೊತ್ತಿಗೆ ಬಂದೆ ಬಾಲು?" ಎನ್ನುತ್ತ ಅವನ ಮಂಚದ ಮೇಲೆ ಕುಳಿತ.

"ಒಂಬತ್ತೂಮುಕ್ಕಾಲು. ಚಂಪಳ ತಂದೆ ಚದುರಂಗ ಇಟ್ಕೊಂಡು ಚಂಪ ಹೋದ್ಮೇಲೆ 'ಬಾಮ್ಮ, ಒಂದಾಟ ಆಡೋಣ' ಅಂದ್ರು. ಅವಳೂ ಕಿಲಾಡಿ. 'ಇವ್ರಿಗೆ ಆಟ ಚೆನ್ನಾಗಿ ಬರುತ್ತಪ್ಪ. ಆಡ್ತಾ ಇರಿ, ನಾನು ಊಟಕ್ಕೆ ರಡೀಮಾಡ್ತೀನಿ' ಅಂತ ನಡೆದೇಬಿಟ್ಳು. ಊಟ ಮಾಡೋವರ್ಗೂ ಬಿಡಲಿಲ್ಲ ತಂದೆ ಮಕ್ಕಳು. ಬಹಳ ಲೇಟಾಗೋಯ್ತು" ಎಂದು ಉತ್ಸಾಹಿತನಾಗಿ ಹೇಳಿದ.

"ಒಳ್ಳೇದಾಯ್ತು ಬಿಡು" ಎಂದು ಮಾಧು ಪತ್ರಿಕೆಯನ್ನು ಬಾಲುವಿನ ಕೈಯಿಂದ ತೆಗೆದುಕೊಂಡು, ಬಾಗಿಲವರೆಗೆ ಬಂದಾಗ ಬಾಲು – "ಮಾಧೂ, ಒಂದ್ಮಾತು" ಎಂದ. ಮಾಧು ಬಾಗಿಲ್ಲೇ ನಿಂತ. "ಚಂಪ ಬಂದಾಗಲೆಲ್ಲಾ ನೀನು ಮನೆಯಲ್ಲಿರೋಲ್ಲ. ಕಾದೂ ಕಾದೂ ಸುಸ್ತಾಗ್ತಾಳೆ. ನೀನು ಬರೋ ವೇಳೆಗೆ ನೀನೇ ಜೋಲುಮುಖ ಹಾಕ್ಕೊಂಡಿರ್ತಿ. ಅವಳಿಗೆ ನೀನು ಇನ್ನೂ ಸ್ವಲ್ಪ ಹೆಚ್ಚಾಗಿ ಕಂಪೆನಿ ಕೊಡೋಕ್ಕಾಗೋಲ್ವ? ಪೂರ್ ಗರ್ಲ್!" ಎಂದು ಸೇರಿಸಿದ.

ನಿಂತಲ್ಲಿಂದಲೇ ಮಾಧು ಪತ್ರಿಕೆಯಿಂದ ತಲೆಯೆತ್ತದೆ – "ಏನ್ಮಾಡೋದು ಬಾಲು, ಕೆಲಸ ಇರುತ್ತಲ್ಲಾ" ಎಂದವನು "ನಾನು ಬರೋವರ್ಗೂ ನೀನು ಸ್ವಲ್ಪ ಮಾತಾಡ್ತಿರು" ಎಂದು ನೇರವಾಗಿ ಅವನನ್ನು ನೋಡಿದ. ಬಾಲುವಿಗೆ ಮಾಧುವನ್ನು ಎದುರಿಸಲು ಧೈರ್ಯ ಸಾಲದಾಯಿತು. ಅವನ ನೇರದೃಷ್ಟಿ ತಾಳಿಕೊಳ್ಳಲಾರದಾದ "ಮಾತಾಡ್ತಾನೇ ಇರ್ತೀನಪ್ಪ" ಎಂದು ತಲೆತಗ್ಗಿಸಿ ಬಿಟ್ಟ. ಒಳಗೊಳಗೆ ನಗುತ್ತ ಮಾಧು ಕಾಫಿಗಾಗಿ ತಾಯಿಯ ಬಳಿಗೆ ಬಂದ. 'ನನ್ನನ್ನು ಮೂರ್ಖ ಅಂತ ತಿಳ್ಕೊಂಡಿದಾನೆ ಈ ಬಾಲಚಂದ್ರ, ಚಿಂತೆಯಿಲ್ಲ. ಒಳ್ಳೆಯ ಫಲ ಕೊಡೋದಾದ್ರೆ ಹೇಗಾದ್ರೂ ತಿಳಕೊಳ್ಳಲಿ ನನಗೇನು' ಎಂದು ನಕ್ಕ.

ಮತ್ತೆ ಮೊದಲಿನ ವಾತಾವರಣಕ್ಕೆ ಬರಲು ಈ ತಾಯಿ ತಂದೆ, ಮಗನಿಗೆ ಒಂದೆರಡು ದಿನಗಳೇ ಬೇಕಾದುವು.

ಸುಮಳೊಬ್ಬಳಿಗೆ ಮಾತ್ರ ಅವರ ಗಂಭೀರ ವರ್ತನೆಯ ಅರಿವೇ ಆಗಲಿಲ್ಲ. ತನ್ನ ಮನದ ಗೆಲುವನ್ನು ಊರ್ಮಿಳೆಗೆ ಹೇಳಬೇಕೆಂದು ಸಂತೋಷದಿಂದ ಕಾಲೇಜಿಗೆ ಹೋದಾಗ ಆನಂದದ ಪರಮಾವಧಿಯಲ್ಲಿದ್ದ ಊರ್ಮಿಳಾ ಆಸ್ಪದವೇ ಕೊಡಲಿಲ್ಲ. ತನ್ನ ತಂದೆಯನ್ನು ದಾಸ್ ಕಂಡನೆಂದೂ, ತಂದೆ ಬಹಳ ಸುಪ್ರೀತರಾಗಿದ್ದಾರೆಂದೂ, ಇನ್ನು ತಾಯಿಯನ್ನು ಕಂಡುಬಿಟ್ಟರೆ ಎಲ್ಲವೂ ಮುಗಿಯಿತೆಂದೂ ಉಬ್ಬಿ ಹೇಳುತ್ತಿದ್ದಾಗ, ತನಗೆ ಹೇಳಲು ಏನಿದೆ ? ತನ್ನ ಆಶ್ರಯದಾತರ ಮಗ ತನ್ನನ್ನು ಆದರದಿಂದ ಮಾತನಾಡಿಸಿದ ಎನ್ನುವುದು ಒಂದು ವಿಶೇಷ ವಿಷಯವೇ? ಅಥವಾ ಪ್ರೊಫೆಸರ್ ತನ್ನನ್ನು ಆತ್ಮೀಯವಾಗಿ ಕಂಡ, ಎಂಬುದು ಮಹಾ ಸಂಗತಿಯೇ?–ಎಂದು ಸುಮ್ಮನಾಗಿಬಿಟ್ಟಳು.

* * *

ಅಂದೇ ಮಾಧುರಿಯ ಮದುವೆ. ಹೋಗದಿದ್ದರೆ ತಾನಾಗಿ ಅಪಾರ್ಥಕ್ಕೆ ದಾರಿಕೊಟ್ಟಂತಾಗುತ್ತದೆಂದು

ಹಾಜರಿ ಹಾಕಲು ನಿಶ್ಚಯಿಸಿದ ಮಾಧು. ಸಂಜೆ, ತಾಯಿಯ ಎದುರಿಗೇ "ಸುಮ, ಮಾಧುರಿ ಮದ್ವೆಗೆ ಬರ್‍ತೀನಿ ಅನ್ನೋದಾದ್ರ ಕರ್‍ಕೊಂಡು ಹೋಗ್ತೀನಿ" ಎಂದು ಆಹ್ವಾನಿಸಿದ. "ಬೇಡಪ್ಪ, ನಾನು ನನ್ನ ಫ್ರೆಂಡ್ಸ್ ಜೊತೆ ಹೋಗ್ತೀನಿ, ಬರ್‍ತೀನೀಂತ ಬೇರೆ ಹೇಳ್ಬಿಟ್ಟಿದ್ದೀನಿ ಅವರಿಗೆ" ಎಂದು ಏನೋ ಒಂದು ಹೇಳಿದಳು. ನಾಗಮ್ಮನವರಿಗೆ ಸುಮಳ ಈ ಮಾತಿನಿಂದ ಖುಷಿಯಾಯಿತು. ಬಹಳ ವಿನಮ್ರ ಹುಡುಗಿ ಸುಮ ಎಂದು ಹೆಮ್ಮೆ ಪಟ್ಟುಕೊಂಡರು ಕೂಡ.

ಬೇಗ ಸಿದ್ಧವಾಗಿ ಬಂದವನು, ಇಷ್ಟು ಬೇಗ ಹೋಗಿ ಮಾಡುವುದೇನೆಂದು ಸುಮ್ಮನೆ ಹಾಲಿನ ಸೋಫಾದಲ್ಲಿ ಕುಳಿತ. ಸುಮ ತನ್ನ ನೇರಳೆ ಬಣ್ಣದ ಸೀರೆ ಉಟ್ಟು ಹೊರಬಂದಳು. ಈ ಸೀರೆ ಬಿಟ್ಟರೆ ಬಹುಶಃ ಅವಳಿಗೆ ಬೇರೆ ಒಳ್ಳೆಯ ಸೀರೆ ಇರಲಾರದು ಎನಿಸಿ ಮಾಧುವಿಗೆ ಹೇಗೆಹೇಗೋ ಆಯಿತು. ತನ್ನ ಬಳಿಯಿರುವ ಸೂಟುಗಳ ಅರ್ಧದಷ್ಟಾದರೂ ಸೀರೆಗಳು ಅವಳಿಗಿದೆಯೋ ಇಲ್ಲವೋ.

"ಹೂ ಮುಡ್ಕೊ ಸುಮ"-ಅಮ್ಮ ದೊಡ್ಡ ಹೂದಂಡೆಯನ್ನು ತಂದರು.

"ಅಮ್ಮ. ದಯವಿಟ್ಟು ಬೇಡಿ. ನನ್ನನ್ನು ಕ್ಷಮಿಸಿ, ಹೂವು ನನಗಿಷ್ಟವಿಲ್ಲ" ಎಂದು ಹೊರಗೆ ಹೊರಡುತ್ತಾ,

"ನಾನು ಹೋಗಿ ಬರ್‍ತೀನಿ"ಎಂದು ನಡದೇಬಿಟ್ಟಳು.

"ಹುಚ್ಚು ಹುಡುಗಿ. ಇಷ್ಟೊಂದು ಹೂ ಬಿಡುತ್ತೆ. ಒಂದು ದಿನಾನೂ ಒಂದು ಹೂ ಮುಡಿಯೋಲ್ಲ. ಹೂವು ಇಷ್ಟವಿಲ್ಲ ಅನ್ನೋ ಹುಡುಗೀರ್‍ನ ನಾನು ನೋಡೇ ಇರ್‍ಲಿಲ್ಲ"ಎಂದುಕೊಂಡರು, ಗಟ್ಟಿಯಾಗಿ. ಅವರ ಮಾತು ಮಾಧುವಿನ ಕಿವಿಗೆ ಬಿತ್ತೋ ಇಲ್ಲವೋ ಹೇಳುವುದು ಕಷ್ಟ. ತನ್ನ ಕೋಣೆಗೆ ಬೇಗ ಬೇಗ ಹೋಗಿ, ತನ್ನ ಪೆಟ್ಟಿಗೆಯಿಂದ ಒಂದು ಸಣ್ಣ ಪೆಟ್ಟಿಗೆ ಹಾಗೂ ಚೆಕ್ ಬುಕ್ ತೆಗೆದು ಜೇಬಿಗೆ ಸೇರಿಸಿ ಇಳಿದು ಬರುತ್ತ-"ನಾನು ಹೋಗ್ಬರ್‍ತೀನಮ್ಮ. ಊಟಕ್ಕೆ ಬಲವಂತ ಮಾಡಿದ್ರೆ, ಮಾಡಿಯೇ ಬರ್‍ತೀನಿ. ಕಾಯಬೇಡ"ಎಂದು ಗಡಿಯಾರದ ಕಡೆ ನೋಡಿ, ದಾಪುಗಾಲು ಹಾಕಿ ಬಂದು ಕಾರು ಹೊರಡಿಸಿದ. ಸುಮ ಇನ್ನೂ ಬಸ್ ಸ್ಟಾಪ್ ತಲುಪಿರಲಾರಳೆಂದು ವೇಗ ಹೆಚ್ಚಿಸಿದ ಅವನ ಊಹೆ ನಿಜವಾಯಿತು. ದಾರಿಯಲ್ಲೇ ಸಿಕ್ಕಿದಳು ಸುಮ. ಕಾರನ್ನು ಅವಳ ಪಕ್ಕ ನಿಲ್ಲಿಸಿ, "ಸುಮ, ನಂಗೊಂದು ಚಿಕ್ಕ ಉಪಕಾರ ಮಾಡಬೇಕಲ್ಲ? ನಾನು ಏನೂ ಪ್ರೆಸೆಂಟ್ ಕೊಂಡುಕೊಂಡಿಲ್ಲ. ಸ್ವಲ್ಪ ನನ್ನ ಜೊತೆ ಬಂದು ಏನಾದ್ರೂ ಸೆಲೆಕ್ಟ್ ಮಾಡ್ತೀಯಾ!"

"ನಾನಾ? ಅವಳ ಅಭಿರುಚಿ ನಂಗೇನು ಗೊತ್ತಾಗುತ್ತೆ?"

"ಅಭಿರುಚಿ ಗಿಭಿರುಚಿ ನೋಡೋಲ್ಲ ನಾನು. ಒಂದು ಸೀರೆ ಕೊಟ್ಟು ಬಿಡೋಣಾಂತ ತೀರ್ಮಾನಿಸಿದ್ದೀನಿ. ನೀನು ಆರಿಸ್ಬಿಡು, ಕಮಾನ್."

ಫಾರಿನ್ನಿನಿಂದ ಸೀರೆ ತಂದಾಗ ತಾನೇ ಇದ್ದಳೇನೋ ಆರಿಸೋಕ್ಕೆ ಎಂದು ಕೊಳ್ಳುತ್ತಾ ಏನೂ

ಹೇಳದೆ ಕಾರು ಹತ್ತಿ ಕುಳಿತಳು.

ಅಂಗಡಿಯಲ್ಲಿ ಸೀರೆಗಳ ವಿಭಾಗದಲ್ಲಿ ನೈಲೆಕ್ಸ್ ಸೀರೆ ಆರಿಸಲು ತೊಡಗಿದರು. ಒಮ್ಮೆಲೇ ವೇಣು"ಒಂದು ನಿಮಿಷ ನೋಡ್ತಾ ಇರು. ಈಗ ಬಂದೇ"ಎಂದು ಹೊರಗಡೆ ಹೊರಟುಹೋದ. ಸುಮ ಒಂದು ಸೀರೆ ಆರಿಸಿಟ್ಟಳು. ಐದೇ ನಿಮಿಷದಲ್ಲಿ ಹಿಂತಿರುಗಿ ಬಂದು ವೇಣು ಸುಮ ಆರಿಸಿದ ಸೀರೆಗೆ ಹಣಕೊಟ್ಟು ಹೊರಗೆ ಬಂದ. ಸುಮ ಹಿಂಬಾಲಿಸಿದಳು.

"ನಿಂಗಿನ್ನೂ ಟೈಂ ಇದ್ಯಾ?ಒಂದು ನಿಮಿಷ, ಕಾಲೇಜು ಕಡೆ ಹೋಗ್ಬಿಟ್ಟು ಹೋಗೋಣ. ಅಲ್ಲಿ ಒಂದು ಪುಸ್ತಕ ಇದೆ. ಅರ್ಜೆಂಟಾಗಿ ತೊಗೋಬೇಕು"ಎಂದು ಅವಳ ಉತ್ತರಕ್ಕಾಗಿ ಕಾಯದೆ ಕಾಲೇಜಿನ ಕಡೆಗೆ ಕಾರು ನಡೆಸಿದ.

ಅವನ ಆಫೀಸು ರೂಮು ಬಾಗಿಲು ಹಾಕಿತ್ತಾದರೂ, ಅವನನ್ನು ಕಂಡೊಡನೆ ಬಂದ ವಾಚ್‌ಮನ್ ಬಾಗಿಲು ತೆಗೆದಿರಿಸಿದ.

"ಒಂದು ನಿಮಿಷ ಕೂತ್ಕೊ ಸುಮ"ಎಂದು ತನ್ನ ಕೈಯಲ್ಲಿದ್ದ ದೊಡ್ಡ ರಟ್ಟಿನ ಪೆಟ್ಟಿಗೆಯನ್ನು ಮೇಜಿನ ಮೇಲಿಟ್ಟು, ಒಂದು ಕುರ್ಚಿಯ ಕಡೆಗೆ ಕೈ ತೋರಿಸಿದ. ಅವಳು ಕುಳಿತ ನಂತರ, "ಈ ಪೆಟ್ಟಿಗೆಯ ಟೇಪ್ ಬಿಚ್ಚು"ಎಂದ

ಬಿಚ್ಚಿದಾಗ ಸುಮಳಿಗೆ ಕಣ್ಣು ಕೋರೈಸಿತು. ಗೇಣಂಚು ಅಗಲ ಜರಿಯ ಕಂಚು ಹೊತ್ತ ಕೆಂಪು ಬನಾರಸ್ ಸೀರೆ, ಮೈಯೆಲ್ಲಾ ಜರಿಯ ಬುಟ್ಟೆ. ಈ ಸೀರೆಯನ್ನು ಕೊಡುವಷ್ಟು ಆತ್ಮೀಯಳೆ ಮಾಧುರಿ?- ಎಂದು ಕಣ್ಣಗಲಿಸಿ ನೋಡಿದಳು.

"ಹೇಗಿದೆ ಸುಮ?"ಆಸಕ್ತಿಯಿಂದ ಕೇಳಿದ.

"ತುಂಬಾ ಚೆನ್ನಾಗಿದೆ. ಅದ್ರಲ್ಲೂ ಬೆಳ್ಳಗಿರೋವ್ರಿಗೆ ತುಂಬಾ ಚೆನ್ನಾಗಿರುತ್ತೆ."

"ಅದು ಬೆಳ್ಳಗಿರೋವ್ರಿಗೆ ಅಂತಲೇ ತಂದದ್ದು, ಉಟ್ಟುಕೋ ಸುಮಾ."ಸುಮ ಬೆಚ್ಚಿದಳು.

"ಇದು ನನಗಾ?ಯಾಕೆ?ಉಹುಂ, ಇಂಥ ಸೀರೆ ನಾ ಉಟ್ಕೊಳ್ಳೋಲ್ಲ."

"ನಾನು ತಂದದ್ದೂಂತ ಬೇಡಾಂತೀಯಾ?ನಾಳೆ ನಿನ್ನ ಪರೀಕ್ಷೆ ಆದ್ಮೇಲೆ ಅಣ್ಣ ನಿನಗೆ ಮದ್ವೆ ಗೊತ್ತು ಮಾಡಿದಾಗ ಸೀರೆ, ಒಡವೆ ಎಲ್ಲಾ ತರೋದು ನಾನೇ."

"ನನ್ನ ಮದುವೆ!ಅದು ನಡೆಯೋಲ್ಲ ಬಿಡಿ. ಆದ್ರಿಂದ ಆ ಸಮಸ್ಯೆ ನಿಮಗೆದು ರಾಗೊಲ್ಲ"ಎಂದು ಅನ್ಯಮನಸ್ಕಳಾಗಿಬಿಟ್ಟಳು. ಅವಳು ತನ್ನ ಗತಜೀವನದೊಳಕ್ಕೆ ಜಾರಿಬಿಟ್ಟಳು.

ಚಟ್ಟನೆ ಹತ್ತಿರ ಬಂದ ಮಾಧು ರಟ್ಟೆ ಹಿಡಿದು ಅವಳನ್ನೆಬ್ಬಿಸಿ, ಸೀರೆಯನ್ನು ಅವಳ ಕೈಯೊಳಗೆ ತುರುಕಿ, ಪಕ್ಕದ ಕೋಣೆಯೊಳಕ್ಕೆ ತಳ್ಳಿ- "ಸುಮ್ಮನೆ ಉಟ್ಕೊಂಡು ಬಾ, ಹೊತ್ತಾಗ್ತಾ ಇದೆ"ಎಂದ

ಗಂಭೀರವಾಗಿ.

ಅವನ ಅಗ್ರಹದಿಂದ ಅವಳಿಗೆ ಸಂತೋಷವೂ ಆಯಿತು. ದುಃಖವೂ ಆಯಿತು. ಆ ಮಿಶ್ರಭಾವನೆಯಿಂದಲೇ ಸೀರೆ ಉಟ್ಟಳು. ಬಾಗಿಲು ತೆರೆದು ಹೊರಗೆ ಬಂದ ಅವಳನ್ನು ನೋಡಿ, "ಈಗ ಜಾಣೆ"ಎಂದ ಮಾಧು ಪರೀಕ್ಷೆಯಾಗಿ ಅವಳನ್ನೇ ನೋಡುತ್ತಾ ಮತ್ತೂ ಹತ್ತಿರ ಬಂದು, ಅವಳ ಕುತ್ತಿಗೆಯಲ್ಲಿದ್ದ ಒಂದೆಳೆ ಸರವನ್ನು ಕಳಚಿ, ತನ್ನ ಜೇಬಿನಲ್ಲಿದ್ದ ಪುಟ್ಟ ಪೆಟ್ಟಿಗೆಯಿಂದ ಕೆಂಪಿನ ಹಾರವನ್ನು ತೆಗೆದು ಕುತ್ತಿಗೆಗೆ ಹಾಕಿದ. ಆ ಹಾರ ಅವಳ ಬೆಳ್ಳನೆಯ ಕೊರಳಲ್ಲಿ ,,ಪ್ಪವಾಗಿ ಕುಳಿತಿತು.

"ಇದೆಲ್ಲಾ ಏನು?"ಎಂದು ಅಸಮಾಧಾನವಾಗಿ ನುಡಿದಳು. ಮಾಧು ಆ ಮಾತು ತನಗಲ್ಲವೆನ್ನುವಂತೆ ಕಳಚಿದ ಸರವನ್ನು ಅವಳ ಕೈಲಿ ಕೊಟ್ಟು, ವಾಷ್‌ಬೇಸಿನ್ ಬಳಿಯಿದ್ದ ಕನ್ನಡಿಯ ಮುಂದೆ ಅವಳನ್ನು ನಿಲ್ಲಿಸಿ "ಇದೆನೂಂತ ಈಗ ಹೇಳ್ತೀನಿ, ಕೇಳು. ಈಗ ನೀನು ನನ್ನ ಜೊತೆ ಮದುವೆ ಮನೆಗೆ ಬರ್‍ತಿದ್ದಿ. ಅದಕ್ಕೆ, ನನ್ನ ಪಕ್ಕದಲ್ಲಿ ನೀನು ಹೇಗೆ ಕಾಣಬೇಕು ಅನ್ನೋದನ್ನ ನಿಶ್ಚಯಿಸೋವ್ನು ನಾನು. ಈ ಸೀರೆ ನಿನಗೇಂತ, ನೀನು ಸೀರೆ ಆರಿಸ್ತಾ ಇದ್ದಾಗ ಬೇರೆ ಅಂಗಡಿಯಿಂದ ತಂದೆ. ಈ ನೆಕ್‌ಲೇಸ್ ಚಿನ್ನದ್ದಲ್ಲ. ನಾನು ಅಮೇರಿಕಾದಿಂದ ತಂದದ್ದು. ಹರಳುಗಳಿಗೇ ಬೆಲೆ ಇದರಲ್ಲಿ ಅದನ್ನು ನಾನು ಯಾರಿಗೆ ಕೊಡ್ಬೇಕು ಅಂತ ತಂದೆ ಅನ್ನೋದು ನನಗೇ ಗೊತ್ತಿಲ್ಲ. ಈವತ್ತು ನಿನಗೆ ಕೊಡ್ಬೇಕು ಅನ್ನಿಸ್ತು, ಕೊಟ್ಟಿದ್ದೀನಿ. ಇದೆಲ್ಲಾ ಈವತ್ತಿನಿಂದ ನಿನ್ನದು."

ಅವನು ತನ್ನ ಕೊರಳನ್ನು ಸ್ಪರ್ಶಿಸಿದಾಗಿನಿಂದ ನವಿರಾಗಿ ನಡುಕುತ್ತಿದ್ದ ಅವಳ ದೇಹ ಈಗ ಅವಳನ್ನು ಮೂಕಳನ್ನಾಗಿ ಮಾಡಿತ್ತು. ಆದರೂ ಒಂದು ಕೃತಜ್ಞತೆಯ ಅನುರಾಗದ ಮಾತು ಹೇಳಬೇಕೆಂದು ಬಾಯಿ ತೆರೆದಳು. ಅವನ ಅಗಲವಾದ ಹಸ್ತ ಮೃದುವಾಗಿ ಬಾಯಿ ಮುಚ್ಚಿತು. ಅವನ ಅದುರುವ ತುಟಿಗಳು ಅವಳ ಕೊರಳ ಬಳಿ ಆಟವಾಡಿದವು. ಒಂದು ಘಳಿಗೆ ಮೈಮರೆತಿದ್ದ ಮಾಧು.

"ಇನ್ನು ಹೆಚ್ಚು ಹೊತ್ತು ನಾವಿಲ್ಲಿ ನಿಲ್ಲಬಾರದು ಸುಮ. ನಿಂತರೆ ಆಮೇಲೆ ಆಗೋ ಪ್ರಮಾದಕ್ಕೆ ನಾನು ಜವಾಬ್ದಾರನಲ್ಲ ನೋಡು"ಎಂದು ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ, ಅವನು ಬಯಸಿದ ಭಾವ ಆ ಕಣ್ಣುಗಳಲ್ಲಿ ಪ್ರತಿಬಿಂಬಿಸುತ್ತಿದ್ದವು. ಅವನಿಗೆ ತೃಪ್ತಿಯಾಯಿತು. ಮೃದುವಾಗಿ ಅವಳ ಕೆನ್ನೆ ತಟ್ಟಿ-"ನಾನೀಗ ಕೊಟ್ಟಿದ್ದು ನಿನಗಲ್ಲ. ನಿನ್ನ ಹಾರಕ್ಕೆ"ಎಂದ ಚೇಷ್ಟೆಯಾಗಿ.

ಕೆಂಪುಸೀರೆ, ಕೆಂಪುಹಾರಗಳ ಜೊತೆ ಸ್ಪರ್ಧಿಸಿದುವು ಅವಳ ಕೆಂಪು ಕೆನ್ನೆಗಳು. ಇವರು ಹೊರಬರುವುದನ್ನೇ ಕಾಯುತ್ತಿದ್ದ ವಾಚ್‌ಮನ್‌ಗೆ ಬಾಗಿಲು ಹಾಕ ಹೇಳಿದ.

"ಈ ಅಲಂಕಾರದಲ್ಲಿ ನಿನ್ನ ಕಂಡ್ರೆ ಎಲ್ರೂ ಬೆಪ್ಪಾಗ್ತಾರೆ. ನಿನ್ನಿಂದ ಬೆಪ್ಪಾದವರಲ್ಲಿ ಫಸ್ಟ್ ನಾನು"ಎಂದು ನಕ್ಕ. ಅವನ ಆ ನಗು-ಅದೆಷ್ಟು ಮೋಹಕ! ಯಾವ ಹೆಣ್ಣಲ್ಲೇ ಆಗಲಿ

ಮಾಧುರಾನುಭವಗಳನ್ನು ಹೊಡೆದೆಬ್ಬಿಸುವ ಸಮ್ಮೋಹಕ ನಗು ಅದು. ಮುಖವನ್ನೆಲ್ಲಾ ಕಾಂತಿಗೊಳಿಸುವ ಆ ನಗುವಿನಿಂದ ಸುಮಳ ಹೃದಯ ಅಲ್ಲೋಲಕಲ್ಲೋಲವಾಯಿತು.

ಮದುವೆ ಮನೆಯಲ್ಲಿ ಎಲ್ಲರೂ ಈ ಜೋಡಿಯನ್ನು ನೋಡುವವರೇ ಕಾಲೇಜಿನಿಂದ ಬಂದಿದ್ದವರು ಹುಬ್ಬೇರಿಸಿದರು-ಒಬ್ಬರಿಗೊಬ್ಬರು ಪ್ರಶ್ನಿಸಿಕೊಂಡರು. ಪ್ರೊಫೆಸರ್, ಫೈನಲ್ ವರ್ಷದ ಒಬ್ಬ ವಿದ್ಯಾರ್ಥಿನಿಯ ಜೊತೆಯಲ್ಲಿ! ಅದು ಸಾಮಾನ್ಯ ಸಂಗತಿಯಲ್ಲ.

ಗುಂಪಿನಲ್ಲಿ ಕಂಡ ಊರ್ಮಿಳಾ ಹತ್ತಿರ ಓಡಿ ಬಂದಳು. ಬಂದು ರಟ್ಟೆ ಜಿಗುಟಿ ಪಿಸುಗುಟ್ಟುತ್ತಾ- "ಏನಮ್ಮ ವಿಶೇಷ?ನನ್ನ ಹತ್ರಾನೂ ಗುಟ್ಟಾ?"ಎಂದು ಕೀಟಲೆ ಮಾಡಿದಳು. ಕೈಬಿಡಿಸಿಕೊಂಡ ಸುಮ "ಎಲ್ಲಾ ಎರವಲು ಗರಿಗಳು. ಮದ್ವೆ ಮನೇಗೆ ಹೋಗ್ತೀಯಾ, ಸ್ವಲ್ಪ ಚೆನ್ನಾಗಿ ಹೋಗೂಂತ ಅಮ್ಮಾನೇ ......."ಎಂದು ಸುಳ್ಳು ಪೋಣಿಸಿ, ವಿಷಯ ಮರೆಸಿದಳು. ಮಾಧುವಿನೊಂದಿಗೆ ಶುಭಾಶಯ ಹೇಳಿ ಉಡುಗೊರೆ ಕೊಡಲು ಮಾಧುರಿಯ ಬಳಿಗೆ ಹೋಗಲಿಷ್ಟಪಡದೆ ಊರ್ಮಿಳಾ ಸಿಕ್ಕಿದ್ದೇ ಸಾಕೆಂದು ಅವಳೊಂದಿಗೆ ನಡೆದುಬಿಟ್ಟಳು.

ಸುಮ ಹಾಗೆ ಹೊರಟುಹೋದಳೆಂದು ಮಾಧುವೇನೂ ಬೇಸರಿಸಿಕೊಳ್ಳಲಿಲ್ಲ. ಒಬ್ಬನೇ ಮಾಧುರಿಯ ಬಳಿ ಹೋಗಿ ಶುಭಾಶಯ ಹೇಳಿದ ಉಡುಗೊರೆ ಕೊಟ್ಟ. ಪರಿಚಯವಾದನಂತರ, ಜಗನ್ನಾಥನ ಕೈಕುಲುಕಿ, ಬಂದ ಕೆಲಸ ಮುಗಿಯಿತೆಂಬಂತೆ ತನ್ನ ಜಾಗಕ್ಕೆ ಹಿಂದಿರುಗಿ ಕುಳಿತ. ತೃಪ್ತಿಯಲ್ಲಿ ತೇಲುತ್ತಿದ್ದ.

ದೂರದಲ್ಲಿ ಊರ್ಮಿಳಾ "ಏ ಸುಮಾ, ಯಾಕೋ ಪ್ರೊಫೆಸರ್ ತುಂಬಾ ಚಿಂತಾಮಗ್ನರಾಗಿದ್ದಾರೆ, ನೀನಿಲ್ಲಿ ಬಂದ್ಬಿಟ್ಟೇಂತ ಇರ್ಬೇಕು. ಓಡು ಓಡು"ಎಂದು ಚುಚ್ಚಿದಳು.

"ಪಾಪ, ಅವರನ್ಯಾಕೆ ಅಂತೀ ಊರ್ಮಿ?ದಾಸು ಹತ್ರ ಹೋಗ್ಬೇಕೂಂತ, ನನ್ನ ಓಡಿಸೋಕ್ಕೋಸ್ಕರ ಅವರನ್ನ ಹಾಸ್ಯ ಮಾಡ್ತೀಯಾ?"ಪ್ರತಿಯಾಗಿ ಕೆಣಕಿದಳು ಸುಮ.

"ಆದ್ರೂ ನೀ ಯಾಕಮ್ಮ ಅವರನ್ನು ವಹಿಸ್ಕೊಂಡು ಬರೋದು?..... ನೋಡು, ಈ ಕಡೇನೇ ನೋಡ್ತಿದಾರೆ, ಕರೀತಿದ್ದಾರೆ ನಡಿ, ನಾಳೆ ಸಿಕ್ತೀಯಲ್ಲ. ಎಲ್ಲಾ ಹೇಳದಿದ್ರೆ ಜನ್ಮ ಜಾಲಾಡಿಬಿಡ್ತೀನಿ. ಬಿ ಕೇರ್‌ಫುಲ್"ಎಂದು ಹಾಸ್ಯ ಮಾಡಿ ಕಳುಹಿಸಿದಳು.

ಹಾದಿಯಲ್ಲಿ ಬರುವಾಗ ಸುಮ ಸ್ವಲ್ಪ ಗಾಬರಿಯಿಂದ-"ನಾನು ಹೀಗೇ ಮನೇಗೆ ಬರ್ಬೇಕಾ?"ಎಂದಳು. ಮಾತನಾಡಿದರೆ ತನ್ನ ಸಂಯಮ ಕೆಡುವ ಪ್ರಮೇಯವಿದೆಯೆಂದು ಹಲ್ಲು ಕಚ್ಚಿ ಕುಳಿತಿದ್ದ ಮಾಧು ಎಂದು ಅವಳೇನು ಬಲ್ಲಳು? ಮಾಧು ಮಾತನಾಡದೆ ಹೋದಾಗ ಅವಳಿಗೆ ದುಃಖ ಒತ್ತರಿಸಿಬಂತು. ಸಣ್ಣಗೆ ಅಳತೊಡಗಿದಳು. ದಾರಿ ಯಲ್ಲೆಲ್ಲಾ ಕತ್ತಲು ತುಂಬಿದ್ದುದರಿಂದ ಅವಳ ಮುಖ

ಅವನಿಗೆ ಕಾಣಲಿಲ್ಲ. ಆದರೆ ಆಗೊಮ್ಮೆ ಈಗೊಮ್ಮೆ ಬೀದಿ ಲೈಟಿನ ಬೆಳಕು ಒಳಗೆ ತೂರಿ ಬಂದಾಗ ಮತ್ತು ಅವಳು ಕರವಸ್ತ್ರದಿಂದ ಪದೇ ಪದೇ ಮೂಗು, ಕಣ್ಣು ಒರೆಸಿಕೊಂಡಾಗ ಅವಳು ಅಳುತ್ತಿದ್ದಾಳೆಂದು ತಿಳಿಯಿತು.

ಮೃದುವಾಗಿ"ಅಳ್ತಿದೀಯ ಸುಮಾ?"ಎಂದ ಆ ಮೃದು ನುಡಿಯಿಂದ ಅವಳ ದುಃಖ ಇನ್ನೂ ಉಕ್ಕಿತು.

"ನೀವು ನನ್ನನ್ನು ಯಾವುದೋ ಗಂಡಾಂತರದಲ್ಲಿ ತಳ್ತಿದೀರಿ ಅಷ್ಟೆ"ಎಂದು ಬಿಕ್ಕಿದಳು.

ಮಾಧು ಕಾರನ್ನು ಒಂದು ಪಕ್ಕದ ಸಂದಿಗೆ ತಿರುಗಿಸಿ ನಿಲ್ಲಿಸಿದ. ಪರಿಸರವೆಲ್ಲಾ ನಿಶ್ಶಬ್ದವಾಗಿತ್ತು. ಆ ಮೌನದ ಹಿನ್ನೆಲೆಯಲ್ಲಿ ಮೆಲ್ಲಗೆ ಅವಳ ತಲೆಯನ್ನು ತನ್ನ ತೊಡೆಯ ಮೇಲಕ್ಕೆಳೆದುಕೊಂಡು, ಅವಳ ಕೂದಲು ನೇವರಿಸುತ್ತಾ "ನನ್ನಿಂದ ನಿನಗೆ ಗಂಡಾಂತರವಾ? ನಾನು ಮಾಡೋ ಸಣ್ಣ ಪುಟ್ಟದರಿಂದ ನಿನಗಿಷ್ಟು ನೋವಾಗುತ್ತೆ ಅಂತ ನಂಗೆ ತಿಳೀಲಿಲ್ಲ. ನೀನೂ ಸಂತೋಷ ಪಡಬಹುದೂಂತ್ಲೇ ಊಹಿಸ್ದೆ. ಅಪಾರ್ಥ ಮಾಡ್ಕೊಬೇಡ ಸುಮ. ಯಾರೂ ಅಳೋದನ್ನ ನಾನು ನೋಡ್ಲಾರೆ. ಅದ್ರಲ್ಲೂ ನೀನು ಅತ್ತರೆ ನನಗೆ ಬಹಳ ಕಷ್ಟವಾಗುತ್ತೆ"ಎಂದ ದೃಢವಾದ ದನಿಯಲ್ಲಿ.

'ನಾನು ಅಪಾರ್ಥ ಮಾಡ್ಕೊಂಡಿಲ್ಲ. ನೀವು ನನ್ನಲ್ಲಿ ಇಷ್ಟು ಅಕ್ಕರೆ ತೋರ್ಸ್ತೋದು ಅಮ್ಮಂಗೆ ಇಷ್ಟವಿಲ್ಲ. ಅದಕ್ಕೆ ಅಷ್ಟೇ. ನೀವು ಮಾಡಿರೋದೆಲ್ಲಾ ನಂಗೆ ತುಂಬಾ ಸಂತೋಷ'ಎಂದೆಲ್ಲಾ ಹೇಳಬೇಕೆಂದು ಅವಳ ಮನಸ್ಸು ಆಶಿಸಿತು. ಆದರೆ ನಾಲಗೆ ಸಹಕರಿಸಲಿಲ್ಲ. ಒಂದೆರಡು ನಿಮಿಷ ಕಳೆದು ಮಾಧುವೇ-

"ಈಗ ನಿನಗೆ ಸ್ವಲ್ಪ ಸಮಾಧಾನ ಆಗಿರಬೇಕಲ್ವಾ!ನೀನು ಹೆದರೋಕೆ ಕಾರಣ ಇಲ್ಲ ಸುಮ. ಅಮ್ಮ ಏನಾದ್ರೂ ಅಂತಾರೆ ಅನ್ನಿಸಿದ್ರೆ ಸದ್ಯಕ್ಕೆ ಏನಾದ್ರೂ ಉತ್ತರ ಕೊಟ್ಬಿಡು. ಈಗ ಹೋಗಿ ಸೀರೆ ಬದಲಾಯಿಸೋದು ಸಾಧ್ಯವಿಲ್ಲವಲ್ಲ. ಇನ್ಮೇಲೆ ನಿನಗೆ ಮನಸ್ಸಿಗೆ ನೋವಾಗೋ ಕೆಲಸ ನಾ ಮಾಡೋಲ್ಲ, ಸರೀನಾ?"ಎಂದು ಅವಳ ಕೈ ಹಿಡಿದು ಆಶ್ವಾಸನೆಯಿತ್ತ. ದುಃಖ ದ್ವಿಗುಣವಾಯಿತು. ಅವನೇ ಕೊಟ್ಟಿದ್ದ ಅಮೃತದ ಬಟ್ಟಲನ್ನು ಅವನೇ ಕಿತ್ತುಕೊಳ್ಳುತ್ತಿದ್ದಾನೆಯೇ?ಆದರೂ ಅವನಿಂದ ಅಮೃತಪಾನ ಬಯಸಲು ತನಗಿರುವ ಅರ್ಹತೆಯಾದರೂ ಏನು?ಯಾವ ಯೋಗ್ಯತೆ ಇದೆಯೆಂದು ಅವನ ಹೃದಯದಲ್ಲಿ, ಅವನ ತೆಕ್ಕೆಯಲ್ಲಿ ಸ್ಥಾನ ಪಡೆಯಬಲ್ಲಳು?

ಕೈ ಬಿಡಿಸಿಕೊಂಡು ಮೌನವಾಗಿ ಎದ್ದು ಕುಳಿತುಕೊಂಡಳು.

"ಕಣ್ಣು ಚೆನ್ನಾಗಿ ಒರೆಸ್ಕೋ ಸುಮ, ಅಮ್ಮಂಗೆ ನೀನು ಅತ್ತಿರೋದು ತಿಳಿಯಬಾರದು ....... ಸುಮ ಒಂದು ವೇಳೆ ನಿನಗೆ ಆ ಸರ, ಸೀರೆ ಇಷ್ಟವಾಗದಿದ್ರೆ .........." ಮುಂದೆ ಹೇಳಲಾಗಲಿಲ್ಲ. ಸುಮ್ಮನಾದ. ಸುಮ ಆ ವೇಳೆಗೆ ಸ್ವಲ್ಪ ಸ್ವಲ್ಪವಾಗಿ ಧೈರ್ಯ ಕೂಡಿಸಿಕೊಂಡವಳು,

"ಏನು ಹೇಳಿ?ಇಷ್ಟವಾಗದಿದ್ರೆ?"ಎಂದು ಪ್ರಶ್ನಿಸಿದಳು.

"ಏನೂ ಇಲ್ಲ ಬಿಡು. ಚಂಪಳಿಗಂತೂ ಕೊಡುವ ಹಾಗಿಲ್ಲ. ಒಂದು ಸಲ ಉಟ್ಟಿದ್ದು"ಹಳೆಯ ಘಟನೆ ಜ್ಞಾಪಿಸಿದ. ಸುಮಳಿಗೆ ಅತೀವ ನಾಚಿಕೆಯಾಯಿತು.

" ಆ ಸೀರೆ, ಅವತ್ತು ........."

"ನೀನೇನೂ ಹೇಳಬೇಡ. ನಾನು ಕೊಡೋ ಯಾವ ವಸ್ತುವೂ ನಿನಗೆ ಬೇಡ ಅಂತ ತಿಳಿದ್ರೂ ಮತ್ತೆ ಅದೇ ತಪ್ಪು ಮಾಡ್ತೀನಿ. ಅಲ್ಲೇ ಇರೋದು ನೋಡು."

"ನೀವು ಹಾಗೆಲ್ಲಾ ಅಂದ್ಕೋಬಾರ್ದು. ನೀವು ಕೊಟ್ಟಿದ್ದು ತೊಗೋಬಾರ್ದು ಅನ್ನೋ ಹಟ ನನಗೇನೂ ಇಲ್ಲ. ನಾನು ಬದುಕ್ತಿರೋದೇ ಬೇರೆಯವರ ಕರುಣೆಯಲ್ಲಿ ಅಂತ ನನಗೆ ಗೊತ್ತು. ಆ ಕರುಣೆ ಸ್ವೀಕರಿಸೋದು ಕೆಲವು ಸಲ ತುಂಬಾ ಹಿಂಸೆಯಾಗಿರುತ್ತೆ. ಅಭಿಮಾನ ಚುಚ್ಚಿ ತೋರಿಸ್ದಾಗ ಸ್ವಲ್ಪ ಒರಟಾಗ್ತೀನಿ "

"ಅಂದ್ರೆ ನಿನ್ನ ಮೇಲೆ ಕರುಣೆಗಾಗಿ ನಾನು ಸೀರೆ ತಂದೆ ಅಂತ ತಾನೆ ನಿನ್ನ ಅಭಿಪ್ರಾಯ? ಕರುಣೆಗೆ ಅಂತ ಕೊಡಬೇಕಿದ್ರೆ ಎರಡು ವಾಯಿಲ್ ಸೀರೆ ಸಾಕಿತ್ತು ಮೂನ್ನೂರ ಇಪ್ಪತ್ತೆಂಟು ರೂಪಾಯಿ ಸುರಿಯಬೇಕಿರಲಿಲ್ಲ ನಾನು"

"ಅಷ್ಟು ಬೆಲೆ ಸೀರೆಗೆ, ನನಗೆ ಅರ್ಹತೆ ಇದೆ ಅನ್ನಿಸ್ತಾ ನಿಮಗೆ!"

"ನೀನು ಕೆಲವು ಸಲ ತಿಳಿದೂ ಸಹ ಮಾತಾಡ್ತಿ, ಅದೇ ನನ್ನನ್ನು ರೇಗಿಸೋದು ಅನಂತರಾಯರ ಮಗಳ ಸ್ಥಾನ ನಿನಗಿದೆ ಅಂತ ನಿನಗ್ಗೊತ್ತಿಲ್ವಾ?"

'ಮಗಳ ಸ್ಥಾನ' ಎಂದನೇ ಹೊರತು ಸೊಸೆಯ ಜಾಗ ಎನ್ನಲಿಲ್ಲವೆಂದು ಅವಳಿಗೆ ಪಿಚ್ಚೆನಿಸಿತು ತನಗೇ ಹೇಳಿಕೊಳ್ಳುವಂತೆ "ಹೌದು, ಇನ್ನೊಂದೆರಡು ತಿಂಗಳು" ಎಂದಳು.

ಮನೆಗಿನ್ನೂ ಒಂದು ಫರ್ಲಾಂಗು ಇರುವಾಗಲೇ ಕಾರು ನಿಲ್ಲಿಸಿ "ಇಲ್ಲಿ ಇಳಿದುಬಿಡು ಸುಮ. ಸರಿ, ಅಮ್ಮಂಗೆ ಏನು ಹೇಳ್ತೀಯ?ನೀನು ಏನು ಹೇಳ್ತಿ ಅನ್ನೋದಕ್ಕೆ ಸರಿಯಾಗಿ ನಾನೂ ಏನಾದ್ರೂ ಹೇಳ್ಬೇಕಲ್ಲ!"

"ತೋಚಿದ್ದು ಹೇಳು ಅಂದ್ರಲ್ಲಾ ನೀವೇ."

"ಬಹಳ ತುಂಟ ನೀನು" ಎಂದು ಅವಳ ಕೈಹಿಡಿದು ಮೃದುವಾಗಿ ಅದುಮಿದ. ಕೆಳಗೆ ಇಳಿದು ಬಂದು ಅವಳು, ಮುಂದುಗಡೆಯಿಂದ ಬಳಸಿ ಅವನ ಕಿಟಕಿಯ ಬಳಿ ಬಂದು, ತಲೆಗೆ ಹತ್ತಿರವಾಗಿ ತಲೆ ತಂದು-"ನಿಮಗೆ ಬಹಳ ಥ್ಯಾಂಕ್ಸ್ ಎಲ್ಲಾದಕ್ಕೂ!ಈ ಮಾರ್ವೆಲಸ್ ಸಂಜೆಗೆ, ಸೀರೆಗೆ, ನೆಕ್‌ಲೇಸ್‌ಗೆ, ಎಲ್ಲಾದಕ್ಕೂ"-ಎಂದು ಮಿಂಚಿನಂತೆ ಬಾಗಿ ಅವನ ಬಲಗೆನ್ನೆಯ ಮೇಲೆ ತನ್ನ ತುಟಿಯೊತ್ತಿ ಓಡಿ

ಮರೆಯಾಗಿಬಿಟ್ಟಳು.

ಓಹ್ ಅದೆಂತಹ ಅನುಭವ!ಸುಮ ತಾನಾಗಿ ಇತ್ತ ಉಡುಗೊರೆ. ಅದು ನೂರು ಸೀರೆ, ಸಾವಿರ ಹಾರಗಳಿಗೂ ಸರಿತೂಗಲಾರದ ಉಡುಗೊರೆ. ಕೈಯಿಂದ ಮೃದುವಾಗಿ ಕೆನ್ನೆ ಮುಟ್ಟಿ ನೋಡಿಕೊಂಡ. ಇದು ನಿಜವೇ?ಸುಮಳಿಗೆ ನಿಜಕ್ಕೂ ತನ್ನಲ್ಲಿ ಪ್ರೇಮ ಇದೆಯೇ? ತಾನಾಗಿ ಮುಂದೆ ಬಿದ್ದು ಅವಳನ್ನು ಹತ್ತಿರ ಸೆಳೆದುಕೊಂಡಾಗಲೆಲ್ಲಾ ಪ್ರತಿಭಟಿಸದಿದ್ದರೂ ಪ್ರೇಮ ಹಿಂದಿರುಗಿಸುತ್ತಿರಲಿಲ್ಲ. ಇಂದು ಅಕಸ್ಮಾತ್ ಪ್ರೇಮ ಪ್ರದರ್ಶನ ಮಾಡಿಬಿಟ್ಟಳು. ಕಾರನ್ನೂ ಹೊರಡಿಸದೇ ಕನಸು ಕಾಣುತ್ತ ಕುಳಿತಿದ್ದ. ಮನೆಗೆ ಹೋಗಿ ಈ ಸಮಯ ಸನ್ನಿವೇಶದಲ್ಲಿ, ವಾಸ್ತವ ಜೀವನವನ್ನು ಎದುರಿಸುವುದೇ ಬೇಡವೆನಿಸುತ್ತಿತ್ತು. ಕಾರನ್ನು ಹಿಂದೆ ತಿರುಗಿಸಿ ಕತ್ತಲಲ್ಲಿ ಮರೆಯಾದ.

ಸುಮಳಿಗೆ ಮಾಧುವಿನೊಂದಿರುವವರೆಗೂ ಇದ್ದ ಧೈರ್ಯ ಈಗ ಮರೆ ಯಾಯಿತು. ಒಳಗೊಳಗೇ ಅಂಜುತ್ತಾ ನಿಧಾನವಾಗಿ ಮನೆಯ ಮೆಟ್ಟಲು ಇಳಿದಳು.

ವರಾಂಡದಲ್ಲಿ ಕುರ್ಚಿ ಹಾಕಿಕೊಂಡು, ಅತ್ತೆ ಅಳಿಯ ಲೋಕಾಭಿರಾಮ ಮಾತನಾಡುತ್ತಾ ಕುಳಿತಿದ್ದರು ಸುಮಳನ್ನು ಗುರುತುಹಿಡಿಯದಾದ ಬಾಲು-"ಯಾರೋ ಬರ್ತ್ತಿದಾರೆ ಅತ್ತೆ" ಎಂದು ಒಳಗೆ ನಡೆದುಹೋದ. ಆ ವೇಳೆಗೆ ಹತ್ತಿರವಾಗಿ ಬಂದಿದ್ದ ಸುಮಳನ್ನು ನೋಡಿ ಚಕಿತರಾದರು ನಾಗಮ್ಮ.

"ಸುಮ,ನೀನಾ? ಏನಿದು ಇಷ್ಟೊಂದು ಅಲಂಕಾರ?"ಪ್ರಶ್ನೆ ಆಶ್ಚರ್ಯ ದ್ದಾದರೂ, ಅದರಲ್ಲಿ ಭರ್ತ್ಸನೆ ಇರಲಿಲ್ಲ. ಎದ್ದು ನಿಂತಿದ್ದ ಬಾಲು, ಅಲ್ಲೇ ಬೆಕ್ಕಸ ಬೆರಗಾಗಿ ನಿಂತ, ಸುಮಳ ಚೆಲುವನ್ನು ಮೊಟ್ಟಮೊದಲ ಬಾರಿಗೆ ಕಂಡ ಬಾಲು.

ಸುಮ ಉತ್ತರ ಕೊಟ್ಟಳು-"ಮದುವೆ ಮನೆಗೆ ಸಿಂಪಲ್ ಬೇಡ ಅಂತ ನನ್ನ ಫ್ರೆಂಡು, ನಾನು ಬೇಡಾಂದ್ರೂ ಬಲವಂತವಾಗಿ ಈ ಸೀರೆ ಉಡಿಸಿ, ಈ ಹಾರ ಹಾಕಿ ಕಳಿಸಿದ್ಲು."

"ಹೋಗ್ಲಿಬಿಡು. ಏನಾಯ್ತೀಗ. ಸರೀಕರಲ್ಲಿ ಹೋಗೋವಾಗ ಹಾಗೇ ಮತ್ತೆ"ಎಂದು ಅಮ್ಮ ಅಂದಾಗ, ಅವಳ ಮುಖ ಮೊರದಗಲವಾಯಿತು ಹಿಮಾಲಯದಂತೆ ನಿಲ್ಲಬಹುದಾಗಿದ್ದ ಕಷ್ಟ ಹುಲ್ಲಿನಂತೆ ಪುರ್ರೆಂದು ಗಾಳಿಗೆ ಹಾರಿ ಹೋಗಿತ್ತು. ಅವಳ ಗಂಟಲು ಕೃತಜ್ಞತೆಯಿಂದ ತುಂಬಿ ಬಂತು.

ಕಾರಿನಲ್ಲಿ ಬಂದವರು ತನಗಿಂತ ಮುಂಚೆಯೇ ಬಂದಿರಬೇಕೆಂದು ಬಗೆದಿದ್ದ ಸುಮಳಿಗೆ ಮನೆಯಲ್ಲಿ ವೇಣುವಿನ ಸಪ್ಪಳವೇ ಇಲ್ಲದುದನ್ನು ಕಂಡು ಚಡಪಡಿಕೆಯಾಯಿತು. ಬಟ್ಟೆ ಬದಲಿಸಿ ಊಟಕ್ಕೆ ಕುಳಿತಾಗ ಅಮ್ಮ ಮದುವೆಯ ವಿಷಯಗಳನ್ನೆಲ್ಲಾ ವಿಚಾರಿಸಿದರೂ ಮಗನ ಮಾತೆತ್ತಲಿಲ್ಲ.

ರಾತ್ರಿ ಹತ್ತು ಗಂಟೆಯೂ ದಾಟದಾಗ ಅಮ್ಮ ಅವಳ ಕೋಣೆಗೆ ಬಂದು-"ಸುಮ, ಮದುವೆ ಮನೇಲಿ ಮಾಧೂ ಎಲ್ಲಾದ್ರೂ ಕಾಣಿಸಿದ್ನಾ?"ಎಂದರು

ಸುಮ ಬೆಚ್ಚಿದಳು. ಅಮ್ಮ "ಯಾಕೆ ಹಾಗೆ ಬೆಚ್ಚಿಬಿದ್ದೆ?"ಎಂದಾಗ "ಸ್ವಲ್ಪ ಜೊಂಪು ಹತ್ತಿತ್ತು. ನೀವು ಮಾತಾಡಿದಾಗ ಹಾಗಾಯ್ತು. ಏನಂದ್ರಿ ಅಮ್ಮ ನೀವು?"ಎಂದು ಚೇತರಿಸಿಕೊಂಡು ಪ್ರಶ್ನಿಸಿದಳು. ಉತ್ತರ ಕೊಡಲು ಸಮಯ ಬೇಕಿತ್ತು.

"ಮಾಧೂನ್ನ ಮದುವೆ ಮನೇಲ್ಲಿ ನೋಡಿದ್ದೆಯಾಂದೆ?"

"ಬಂದಿದ್ರು. ಆದ್ರೆ ಬೇಗನೆ ಹೊರಟುಹೋದ್ರೂಂತ ನನ್ನ ಫ್ರೆಂಡ್ ಹೇಳ್ತಾ ಇದ್ರು. ಯಾಕಮ್ಮ, ಇನ್ನೂ ಮನೆಗೆ ಬಂದಿಲ್ವಾ?"

"ಇಲ್ಲ ನೋಡು. ಯಾಕೆ ಹೀಗ್ಮಾಡ್ತಾನೋ"ಎಂದು ಕಾತರ ವ್ಯಕ್ತ ಪಡಿಸಿದರು ನಾಗಮ್ಮ.

ಸುಮಳಿಗೆ ನಿಜವಾಗಿಯೂ ಎದೆ ಡವಗುಟ್ಟಿತು ಮನೆಯಿಂದ ಫರ್ಲಾಂಗ್ ದೂರದಲ್ಲಿ ತನನ್ನು ಇಳಿಸಿದವರು ಎಲ್ಲಿ ಹೋಗಿರಬಹುದು. ಹೌದು, ಯಾಕೆ ಹೀಗೆ ಮಾಡಿದರು?

ಆಗಲೇ ಮನೆಯ ಮುಂದೆ ಕಾರು ಬಂದು ನಿಂತ ಶಬ್ದವಾಯಿತು. ಇಬ್ಬರೂ ಒಂದೇ ದಾರಿಗೆ ಬಾಗಿಲಿಗೆ ಬಂದರು. ಸಣ್ಣಗೆ ಸಿಳ್ಳು ಹಾಕುತ್ತಾ ಒಳಕ್ಕೆ ಬಂದ ಮಾಧು-

"ರಂಗಾ, ಗ್ಯಾರೇಜ್ ಬಾಗಿಲು ತೆಗಿ"ಎಂದು ಕೂಗಿ ವೆರಾಂಡದೊಳಕ್ಕೆ ಬಂದ. ಸುಮ ತನ್ನ ಕಾತುರ ಅದುಮಿಟ್ಟುಕೊಳ್ಳಲಾರದೆ, "ಮದುವೆ ಮನೆಯಿಂದ ಬೇಗ ಹೊರಟುಹೋದ್ರು ಅಂತಿದ್ರು ಎಲ್ಲಾ. ಆದರೆ ನೀವು ಈಗ ಬರ್ತಿದೀರಾ"ಎಂದಳು ಆದಷ್ಟೂ ತನ್ನ ನಾಟಕವನ್ನು ಸಹಜವಾಗಿಸುವ ದನಿಯಲ್ಲಿ

ಅಮ್ಮ, ಸುಮ ಒಟ್ಟಿಗೆ ನಿಂತಿದ್ದನ್ನು ನೋಡಿ, ಯಾವ ಪ್ರಮಾದವೂ ನಡೆದಿಲ್ಲವೆಂದು ಖಾತರಿ ಮಾಡಿಕೊಂಡ ಮಾಧು "ಓ, ನಾನಾವಾಗ ಹೋದದ್ದು ಯಾರನ್ನೋ ಡ್ರಾಪ್ ಮಾಡೋಕೆ, ನಾನು ಊಟ ಮುಗಿಸ್ಕೊಂಡು ಬಂದೆ, ಅದಕ್ಕೇ ಲೇಟು"ಎಂದು ಸುಮಳಿಗೆ ಉತ್ತರಿಸಿ, ಅಮ್ಮನ ಕಡೆ ತಿರುಗಿ "ಊಟ ಮಾಡಿ ಬರ್ತೀನಿ ಅಂತ ಹೇಳಿದ್ದೆನಲ್ಲಮ್ಮ"ಎಂದು ಸಮಜಾಯಿಸಿ ಹೇಳಿದ.

"ಆದರೂ ತುಂಬಾ ಹೊತ್ತಾಯ್ತಪ್ಪ ಮಾಧು"ಎಂದು ಅಸಮಾಧಾನ ವ್ಯಕ್ತಪಡಿಸಿ ಒಳನಡೆದರು, ನಾಗಮ್ಮ.

ಕಾರನ್ನು ಗ್ಯಾರೇಜಿನಲ್ಲಿ ಬಿಟ್ಟು ಬಂದ ಮಾಧು ತಂದೆಯ ಕೋಣೆಯ ಬಾಗಿಲಲ್ಲಿ ನಿಂತ. "ಎಲ್ಲ ಚೆನ್ನಾಗಿ ನಡೀತಾಪ್ಪ?"ಎಂದು ವಿಚಾರಿಸಿದರು ರಾಯರು. ಆ ಹೊತ್ತಿನಲ್ಲೂ, ಕೇಸರಿ ಹಾಕಿದ ಹಾಲು ತಂದುಕೊಡುವುದು ಮರೆಯಲಿಲ್ಲ ಅಮ್ಮ. ಕಿರುನಗುತ್ತಾ ಹಾಲು ಕುಡಿಯುತ್ತಿದ್ದ ಅವನನ್ನೇ ನೋಡುತ್ತಿದ್ದ ರಾಯರಿಗೆ ಅವ್ಯಕ್ತ ಆನಂದವಾಯಿತು. ಸುಂದರವಾದ ಉಡುಪಿನಲ್ಲಿ ಅತಿ ಸುಂದರವಾಗಿ ಕಾಣುತ್ತಿದ್ದ ವೇಣು. ತಮ್ಮಂತಹ ವಾಮನನಿಗೆ, ಇಂತಹ ತ್ರಿವಿಕ್ರಮ ಜನಿಸಿದ್ದಾನೆಂಬುದೇ ಅವರಿಗೆ ಹೆಮ್ಮೆಯ, ಅಭಿಮಾನದ ವಿಷಯ.

"ತುಂಬಾ ಹೊತ್ತಾಗಿದೆ, ಮಲಕ್ಕೋ ಹೋಗು"ಎಂದು ಅವನಿಗಾಗಿಯೇ ಇದುವರೆಗೆ ಕುಳಿತಿದ್ದ ರಾಯರು, ಹಾಸಿಗೆಯ ಮೇಲೆ ಉರುಳಿಕೊಂಡರು.

ಮಾಧು ಮಲಗಲು ಹೊರಟ. ತಂಪಾದ ತಂಬೆಲರು ಬೀಸಿತು. ಮೆಟ್ಟಿಲು ಹಂತ ಸುಖವಾಗಿ ತೂಗಿತು. ಆ ರಾತ್ರಿ ಹಾಸಿಗೆ ಹಂಸತೂಲಿಕಾತಲ್ಪವಾಗಿತ್ತು ಮಾಧುವಿನ ಪಾಲಿಗೆ.

೯

ಮಾರನೆಯ ಬೆಳಗ್ಗೆ ವೇಣುವನ್ನು ಕಣ್ಣೆತ್ತಿ ನೋಡುವ ಸಾಹಸವಾಗಲಿಲ್ಲ ಸುಮಳಿಗೆ. ಕಣ್ಣು ತಪ್ಪಿಸಿಯೇ ತಿರುಗಿದಳು. ಆದರೆ ವೇಣುವಿಗೆ ಅವಳನ್ನು ಹತ್ತಿರವಾಗಿ ಕಾಣಬೇಕೆಂಬ ಹಂಬಲ ಕಳೆದ ರಾತ್ರಿಯ ಅವಳ ಪ್ರೇಮಚುಂಬನ ಅವನ ಕೆನ್ನೆಯ ಮೇಲೆ ಇನ್ನೂ ಬಿಸಿಯಾಗಿಯೇ ಕುಳಿತಿತ್ತು. ಕಾಣಿಕೆ ಕೊಟ್ಟ ಆ ಅಧರಗಳನ್ನು ಕಾಣಬೇಕೆಂಬ ಉತ್ಕಾಟಾಕಾಂಕ್ಷೆ ಅವನಿಗೆ ಆದರೆ, ಅದೇ ತುಟಿಗಳಿಗೆ ನಾಚಿಕೆ ತುಂಬಿಬಂದು, ಈ ಕಣ್ಣುಗಳಿಗೆ ಬೀಳಲಾರದೆಂಬ ಗೋಪ್ಯ. ಈ ಕಣ್ಣುಮುಚ್ಚಾಲೆ ವೇಣುವಿಗೆ ಹಿಂಸೆಯೆನಿಸಿತು ಆದರೂ ಸುಮ ಆಸ್ಪದ ಕೊಡಲಿಲ್ಲ.

ಅಂತಹ ಆಸ್ಪದ ಹಲಕೆಲವು ದಿನಗಳು ದೊರಕದೇ ಹೋಗಬಹುದೆಂದು ಮಾಧುವಂತೂ ಎಣಿಸಲಿಲ್ಲ.

ಅಂದು ಸಂಜೆ ಕಾಲೇಜಿನಿಂದ ಹಿಂತಿರುಗುವ ವೇಳೆಗೆ ಚಂಪ ಹಾಜರಾಗಿದ್ದಳು ಬೆಲ್‌ಬಾಟ್ಸ್ ತೊಟ್ಟು, ಹುಲಿಪಟ್ಟೆಗಳ ಡಿಸೈನ್ ಇದ್ದ ಜುಬ್ಬಾ ಧರಿಸಿ ಕುಳಿತಿದ್ದ ಅವಳನ್ನು ಕಂಡು ಮೊದಲು ಬೆಚ್ಚಿದ. ನಂತರ ಜುಗುಪ್ಸೆ ಪಟ್ಟುಕೊಂಡ. ಆದರೂ ತೋರಿಕೆಗೆ "ಹಲೋ ಚಂಪ"ಎನ್ನುತ್ತಾ ಕೈಯಿಂದ ಟೈ ಗಂಟು ಬಿಚ್ಚುತ್ತಾ ಸೋಫಾದಲ್ಲಿ ಕುಳಿತ. ಚಂಪ ಎಗರಿ ಅವನ ಬಳಿಬಂದು-"ಡ್ರೆಸ್ ಬದಲಾಯಿಸಬೇಡಿ"ಎಂದು ಅವನ ಕುತ್ತಿಗೆಯ ಬಳಿ ಕೈಯಿಟ್ಟು ಸಡಿಲ ಮಾಡಿದ ಟೈ ಗಂಟನ್ನು ಬಿಗಿಪಡಿಸಿದಳು

"ನೋಡಿ ಇಲ್ಲಿ"ಎಂದು ಕೈಯಲ್ಲಿದ್ದ ಎರಡು ಟಿಕೀಟುಗಳನ್ನು ತೋರಿಸಿದಳು.

"ನಾನೀಗ ಯಾವ ಸಿನಿಮಾಗೂ ಬರೋಲ್ಲ ಚಂಪ"ಎಂದ ಚಟ್ಟನೆ ಬೂಡ್ಸ್ ಬಿಚ್ಚತೊಡಗಿದ, ಮಾಧು

ಅವರಿಬ್ಬರೂ ಕುಳಿತಿದ್ದ ಜಾಗ ಸುಮಳ ಕೋಣೆಯ ಬಾಗಿಲ ಸಂದಿನಿಂದ ಚೆನ್ನಾಗಿ ಕಾಣುತ್ತಿತ್ತು ಎಷ್ಟೇ ಬೇಡವೆಂದುಕೊಂಡರೂ ಸುಮಳ ಕಣ್ಣುಗಳು ಆ ಕಡೆಗೆ ಆಕರ್ಷಿತವಾಗಿದ್ದುವು. ಬಾಗಿಲ ಸಂದಿನಿಂದ ಕಾಣುತ್ತಿದ್ದುದರಿಂದ ಅವಳಲ್ಲಿ ನೋಡು ತ್ತಿರುವಳೆಂಬ ಸುಳಿವು ಇಲ್ಲಿದ್ದವರಿಗೆ ತಿಳಿಯುವಂತಿರಲಿಲ್ಲ.

ಚಂಪ, ತನ್ನ ಕಾಲಿನಿಂದ ಅವನ ಬೂಡ್ಸಿನ ಕಾಲನ್ನು ತುಳಿದು ಹಿಡಿದಳು ಬಿಚ್ಚಲಾಗದಂತೆ.

"ಪಿಚ್ಚರಿಗಲ್ಲಪ್ಪ, ಸಂಗೀತಕ್ಕೆ. ಎಂ. ಎಸ್. ದು. ರಾಮ ಮಂದಿರದಲ್ಲಿ ಎರಡು ಟಿಕೆಟ್ ತೊಗೊಂಡಿದೀನಿ."

"ಸಂಗೀತವೇ ಆದ್ರೂ ನಾನು ಬರೊಲ್ಲ, ನನಗೆ ತುಂಬಾ ಸಾಕಾಗಿದೆ."

ಆದರೂ ಕಾಲು ತೆಗೆಯಲಿಲ್ಲ ಚಂಪ. ತನ್ನ ಕೈಯಿಂದ ಬಲವಂತವಾಗಿ ಅವಳ ಕಾಲು ಸರಿಸಿ-

"ಪ್ಲೀಸ್, ದಯವಿಟ್ಟು ಬಿಟ್ಟುಬಿಡು ಚಂಪ"ಎಂದ ಮಾಧು.

ಅವನಿಗೆ ತಿಂಡಿ ಹಿಡಿದು ಬಂದ ತಾಯಿ"ಯಾಕೆ ಮಾಧು, ಈಚೆಗೆ ಎಲ್ಲೂ ಹೋಗೋಲ್ಲಾಂತಿ"ಎಂದು ಕಳವಳದಿಂದ ಕೇಳಿದರು.

"ಟೈಮೇ ಆಗೋಲ್ವಲ್ಲಮ್ಮ. ಅಮ್ಮ, ಒಂದ್ಕೆಲ್ಸ ಮಾಡು ಚಂಪ ಜೊತೆಗೆ ನೀನು ಹೋಗಿ ಬಾ."

"ನಾನು ಹೋಗೋದು ಬಿಡೋದು ಬೇರೆ ವಿಷಯ. ನೀನು ............"

"ಈಗೇನು ನೀವು ಬರ್ತ್ತೀರೊ ಇಲ್ವೋ ಹೇಳಿ-"ಚಂಪ ಮುಖ ದಪ್ಪ ಮಾಡಿದಳು

ಸಂಗೀತಪ್ರಿಯ ಮಾಧೂ, ಈಗಾಗಲೇ ಅದೂ ಎಂ. ಎಸ್. ಸುಬ್ಬಲಕ್ಷ್ಮಿಯ ಕಛೇರಿಯೆಂದು ಮನಸ್ಸನ್ನು ಆ ಕಡೆಗೆ ತಿರುಗಿಸಿದ್ದನಾದ್ದರಿಂದ ಬೇಗ ಬೇಗ ತಿಂಡಿ ತಿನ್ನುತ್ತಾ"ಮಹಾತಾಯಿ, ಕೋಪಮಾಡ್ಕೋಬೇಡ. ನಡಿ ಹೋಗೋಣ"ಎಂದು ಒಪ್ಪಿಗೆಯಿತ್ತ.

ಹೊರಡುವ ಸಮಯದಲ್ಲಿ-"ನೀನು ಹೀಗೆ ಬರೋದಾದ್ರೆ ನಾನು ಬರೋಲ್ಲ. ಸೀರೆ ಉಟ್ಕೊಂಡು ಬಂದ್ರೆ ಬರ್ತ್ತೀನಿ"ಎಂದು ಷರತ್ತು ಹಾಕಿದ ಮರುಮಾತಾಡದೆ ಸೀರೆ ಉಟ್ಟು ಬಂದಳು ಚಂಪ. ಸುಮ ಕೊಟ್ಟ ಅದೇ ಸೀರೆ.

ಇಬ್ಬರೂ ಸಂತೋಷವಾಗಿ ಹೊರಟುಹೋದಾಗ ಸುಮಳಿಗೆ ನಿರಾಸೆಯಾಯಿತು. ತನ್ನ ಬಗ್ಗೆ ಒಂದಿಷ್ಟೂ ಯೋಚಿಸದೆ ಚಂಪಳೊಂದಿಗೆ ಹೊರಟ ಅವನ ಮೇಲೆ ಕೋಪವು ಬಂದಿತು. ಆದರೆ ಮತ್ತೆ ತನ್ನ ಸ್ಥಿತಿ ನೆನೆಸಿ ಕಣ್ಣೀರು ತುಂಬಿಕೊಂಡಳು? ಅದಕ್ಕಿಂತ ಮತ್ತೇನು ತಾನೇ ಮಾಡಲು ಸಾಧ್ಯ ಅವಳಿಂದ?

ಸಂಗೀತದಲ್ಲಿ ಮಗ್ನನಾಗಿದ್ದ ಮಾಧು. ಮೂರು ಗಂಟೆ ಕಾಲ ಕಳೆದುದೇ ತಿಳಿಯಲಿಲ್ಲ ಪಕ್ಕದಲ್ಲಿದ್ದ ಚಂಪ ಸಂಗೀತಕ್ಕಿಂತ ಯಾರ್ಯಾರು ಬಂದಿದ್ದರೆಂಬುದರಲ್ಲಿ ತಲ್ಲೀನಳಾಗಿದ್ದಾಳೆಂಬುದೂ ಸಹ ತಿಳಿಯದು ಮಾಧುವಿಗೆ.

ಹಿಂತಿರುಗುವಾಗ ಕಾರಿನ ಬಳಿ ಬಾಲು ನಿಂತಿದ್ದ. "ಅರೆ, ನೀನೂ ಬಂದಿದ್ದಾ ಬಾಲು? ಮುಂಚೇನೆ ಗೊತ್ತಿದ್ರೆ ಮೂವರೂ ಒಟ್ಟಿಗೇ ಬರಬಹುದಿತ್ತಲ್ಲ?"ಎಂದ ಮಾಧು.

"ಇವರು ಇನ್ನೂ ಬರೋದೋ ಬೇಡ್ವೋ ಅಂತ ಮೀನ ಮೇಷ ಎಣಿಸ್ತಾ ಇದ್ರು. ಬಂದ್ರೂ ನೀವು ಒಟ್ಟಿಗೇ ಬರ್ತ್ತೀರಲ್ಲಾಂತ, ನಾನು ಮುಂಚೇನೇ ಹೊರಟ್ಬಿಟ್ಟೆ" ಎಂದು ಚಂಪಳೆಡೆಗೆ ನೋಡಿದ.

ಕಾರಿನಲ್ಲಿ ಚಂಪ ಮುಂದಿನ ಸೀಟಿನಲ್ಲಿ ಕುಳಿತಳು, ಮಾಧುವಿನ ಪಕ್ಕ. ಬಾಲು ಹಿಂದಿನ ಸೀಟಿನಲ್ಲಿ ಕುಳಿತಿದ್ದ. ಹಾದಿಯುದ್ದಕ್ಕೂ ಸಂಭಾಷಣೆ ನಡೆದದ್ದು ಬಾಲು-ಚಂಪರಿಗೆ ಚಂಪ ಸೀಟಿನಲ್ಲೇ ಹಿಂದೆ ತಿರುಗಿ ಕುಳಿತಳು. ಬಾಲು ಮುಂದಕ್ಕೆ ಜಾರಿ ಕುಳಿತ, ಸುಬ್ಬಲಕ್ಷ್ಮಿಯ ಸಂಗೀತಕ್ಕಿಂತ, ಅವಳ ವ್ಯಕ್ತಿಗತ ವಿಷಯವೆಲ್ಲ ಮಾತನಾಡಿದರು. ಮಾಧು, ಡ್ರೈವರನಂತೆ ಸುಮ್ಮನೆ ನಡೆಸುತ್ತಿದ್ದ. ಅವನಿಗೆ ಇಬ್ಬರನ್ನೂ ನೋಡಿ, ಅವರ ಮಾತುಕತೆ ಕೇಳಿ ಒಳಗೊಳಗೇ ನಗು

ಕಾರು ಚಂಪಳ ಮನೆಗೇ ಹೋಗುವ ಕಡೆ ತಿರುಗಿದಾಗ ಮಾತ್ರ ಚಂಪ ಎಚ್ಚೆತ್ತು-

"ಕಾರು ನಿಮ್ಮ ಮನೇಗೆ ಹೋಗಲಿ"ಎಂದಳು.

"ಅದೇನು? ಆಮೇಲೆ ಮತ್ತೆ ಮನೆಗೆ ಡ್ರಾಪ್ ಮಾಡು ಅಂದ್ರೆ ನನ್ನಿಂದ ಸಾಧ್ಯವಿಲ್ಲ ನೋಡ್ಕೋ."

"ಅಂಥಾ ಪ್ರಾಬ್ಲಮ್ ಬರೋಲ್ಲ ಈ ಚಂಪಾದೇವಿಯರು ಇನ್ನೊಂದು ಹದಿನೈದು ದಿನ ವೇಣುಮಾಧವರ ಮನೆಯಲ್ಲಿ ಝಾಂಡ ಊರ್ತಾರೆ"ಎಂದು ನಕ್ಕಳು

"ಅದೇನು?"-ಆಶ್ಚರ್ಯ, ಕುತೂಹಲ ಮಾಧುವಿಗೆ

"ನಂಗೊತ್ತಿಲ್ಲ"

"ಮತ್ಯಾರಿಗೆ ಗೊತ್ತು?"

"ಅತ್ತೇಗೆ, ಮಾವಂಗೆ."

ತಾಯಿಯ ಯೋಚನೆ ಅರ್ಥವಾಯಿತು. ಹಾಗಾದರೂ ತಾನು ಚಂಪಳಿಂದ ಆಕರ್ಷಿತನಾಗಬೇಕೆಂದು ಅಮ್ಮನ ಬಯಕೆಯಲ್ಲವೆ? 'ಅಮ್ಮ, ನಿನಗೆ ಹುಚ್ಚು. ಇದು ಮನಸ್ಸು, ಜೇಡಿ ಮಣ್ಣಲ್ಲ. ಬೇಕೆಂದ ಹಾಗೆ ಮಾಡಲು'ಎಂದು ಒಳಗೇ ನಗುತ್ತಾ ಕಾರನ್ನು ತನ್ನ ಮನೆಯ ಕಡೆ ತಿರುಗಿಸಿದ.

ಬಾಲು -ಚಂಪರ ಸಂಭಾಷಣೆ ಮುಗಿಯುವಂತೆಯೇ ಕಾಣಲಿಲ್ಲ. ಊಟ ಮಾಡುವಾಗಲೂ ಮುಂದುವರಿಯಿತು. "ಹೇಗಿತ್ತು ಮಾಧು!"ಎಂದು ಅಮ್ಮ ಮಗನನ್ನು ಕೇಳಿದರೆ ಉತ್ತರ ಕೊಟ್ಟವಳು ಚಂಪ. ಅವರಿಬ್ಬರ ಮಾತು, ಮಗನ ಮೌನ ಆ ತಾಯಿಗೆ ಸ್ವಲ್ಪ ಬೇಸರವೇ ಎನಿಸಿತು. ರಾಯರಿಗೆ ಈ ಪರಿವೆಯೇ ಇಲ್ಲದೆ ಆಗಲೇ ನಿದ್ರಿಸಿದ್ದರು. ಎಚ್ಚರವಾಗಿದ್ದೂ ಈ ಗುಂಪಿಗೆ ಸೇರದೆ ಉಳಿದವಳೆಂದರೆ ಸುಮ. ನಾಗಮ್ಮ-ರಾಯರು ಇರುವ ಗುಂಪಿನಲ್ಲಾದರೂ ಒಮ್ಮೊಮ್ಮೆ ಕಂಡಾಳು ಅವಳು. ಆದರೆ ಬಾಲುವಿರುವಲ್ಲಿ ಬರಲು ಸುತಾರಾಂ ಇಷ್ಟಪಡುತ್ತಿರಲಿಲ್ಲ. ಚಂಪಳ ಬಗೆಗೆ, ಈ ದಿನದವರೆಗೆ ಅವಳಲ್ಲಿ ಯಾವ ಭಾವನೆಯೂ ಇರಲಿಲ್ಲ. ಆದರೆ ಇಂದೇಕೋ ಅಸೂಯೆ ತನ್ನ ಕೆಲಸ ಪ್ರಾರಂಭಿಸಿತ್ತು.

ಮಾಧು ತನ್ನ ಕೋಣೆಗೆ ಹೋದ ಎರಡೇ ನಿಮಿಷದಲ್ಲಿ ಹಿಂದೆಯೇ ಬಂದ ಚಂಪಳನ್ನು ನೋಡಿ ಅಧೀರನಾದ. ಅವಳಿಂದ ತಪ್ಪಿಸಿಕೊಳ್ಳುವುದು ಹೇಗೆಂದು ಯೋಚಿಸಿದ. ಚಂಪ ಹಾಲು ತಂದು ಮೇಜಿನ

ಮೇಲಿಟ್ಟು ಅಲ್ಲೇ ಕುಳಿತಳು. ಮಾಧು ತುಟಿಪಿಟಕ್ಕೆನ್ನದೆ ಹಾಲು ಕುಡಿದು ಲೋಟವನ್ನು ಮೇಜಿನ ಮೇಲಿಟ್ಟು ಸೊಳ್ಳೆ ಪರದೆಯೊಳಗೆ ತೂರಿ-"ಗುಡ್‌ನೈಟ್ ಚಂಪ. ಹೋಗುವಾಗ ದೀಪ ಆರಿಸಿ ಹೋಗು"ಎಂದು ಹೊದಿಕೆ ಎಳೆದುಕೊಂಡ. ಚಂಪ ಮತ್ತೇನೂ ಮಾಡಲಾರದೆ, ಲೋಟ ಹಿಡಿದು ಹೊರಟುಹೋದಳು. ಅಂದಿನ ಮಟ್ಟಿಗೆ ಮಾಧು ಗೆದ್ದ .

ಚಂಪಳ ದಿನದಿನದ ವರ್ತನೆಯೇ ಮಾಧುವಿಗೆ ಸಮಸ್ಯೆಯಾಯಿತು. ಅದೇನು ಅಮ್ಮನ ಪ್ರಚೋದನೆಯೋ, ಇಲ್ಲ ಸ್ವತಃ ಆಸಕ್ತಿಯೋ, ಬೆಳಿಗ್ಗೆ ಎಬ್ಬಿಸುವುದರಿಂದ ಹಿಡಿದು, ಕಾಫಿ ತಂದುಕೊಡುವುದು, ಪೇಪರ್ ಕೊಡುವುದು, ಷೇವ್‌ಗೆ ಅಣಿ ಮಾಡುವುದು, ಸ್ನಾನಕ್ಕೆ ನೀರಿಡುವುದು, ಬಟ್ಟೆ ತೆಗೆದಿಡುವುದು, ಊಟದ ಸಿದ್ಧತೆ ಮೊದಲಾದ ಎಲ್ಲದರಲ್ಲೂ ಚಂಪಳ ಹಸ್ತಕ್ಷೇಪ. ತನ್ನ ಪಾಡಿಗೆ ತಾನು ಇರಲು ಆಸ್ಪದವೇ ಇಲ್ಲವಾಯಿತು. ಎರಡು ದಿನ ಹೇಗೋ ತಡೆದ. ಈ ಬಿಸಿ ತುಪ್ಪವನ್ನು ನುಂಗಲಾರದಾದ ಬೇಡವೆಂದು ಹೇಳಲಾರ, ಮಾಡಿದರೆ ಹಿಂಸೆಪಡುತ್ತಿದ್ದ. ಇವನ ಮನ ತಿಳಿಯದ ಚಂಪ ಬಹಳ ಮುತುವರ್ಜಿಯಿಂದ ಇಲ್ಲಾ ಮಾಡತೊಡಗಿದಳು.

ಹೆಚ್ಚು ಹೊತ್ತು ಕಾಲೇಜಿನಲ್ಲಿ ಕಳೆದರೆ ಮುಕ್ತಿ ಸಿಗುವುದೆಂಬ ಅಭಿಲಾಷೆ ಬೆಳೆಯಿತು. ಬೆಳಿಗ್ಗೆ ತಡವಾಗಿ ಏಳುವುದು, ಸರಸರ ದಿನಚರಿ ಮುಗಿಸಿ ಕಾಲೇಜಿಗೆ ಹೋಗಿಬಿಡುವುದು. ತಡವಾಗಿ ಬಂದು ಊಟ ಮಾಡಿ ಮಲಗುವುದು. ಹಾಗೂ'ಒಂದೆರಡು ದಿನ ಕಳೆಯಿತು. ಆದರೆ ಈ ರೀತಿ ಮಾಡುವುದು ಬಹಳ ಕಷ್ಟವಾಗಿ ತೋರಿತು. ವಿನಾಕಾರಣ ಮನೆಯ ಹೊರಗಡೆ ಸಮಯ ಕಳೆಯುವುದು ಅವನ ಬಾಳಿನ ರೀತಿಗೆ ಒಗ್ಗದ ಕೆಲಸ. ತನಗೆ ಚಂಪಳಲ್ಲಿ ಆಸಕ್ತಿಯಿಲ್ಲವೆಂದೇ ಅಮ್ಮನಿಗೆ ಹೇಳಿಬಿಡಬಾರದೇಕೆ? ಅಥವಾ ಅವಳಿಗೇ ತಿಳಿಸಿದರೆ? ಅವಳು ಅಳಬಹುದು. ಆದರೆ ತಾನೇನು ಮಾಡಬಲ್ಲ? ಬಲವಂತವಾಗಿ ಪ್ರೇಮಿಸಲು ಸಾಧ್ಯವೇ?

ಸುಮ ದೂರ ದೂರ ಸರಿಯತೊಡಗಿದಳು. ಪರೀಕ್ಷೆ ಹತ್ತಿರ ಬಂದುದು ಮತ್ತೂ ಅನುಕೂಲವಾಯಿತು. ಕೋಣೆಯಲ್ಲೇ ಬಾಗಿಲು ಲಹಾಕಿ ಕುಳಿತಿರುತ್ತಾಳೆ. ಇಲ್ಲವೇ ಲೈಬ್ರರಿಗೆ ಹೋಗಿರುತ್ತಾಳೆ. ನಿಜಕ್ಕೂ ಅವಳ ವ್ಯಾಸಂಗ ಹೆಚ್ಚಾಗಿತ್ತು.

ಚಂಪಳಿಂದ ತಪ್ಪಿಸಿಕೊಳ್ಳಬೇಕಾದರೆ, ಸುಮಳ ಶರಣು ಹೋಗುವುದೇ ಸರಿ ಎನಿಸಿ, ಒಂದು ದಿನ ಎಲ್ಲರೂ ಕುಳಿತು ಮಾತನಾಡುತ್ತಿದ್ದಾಗ ಮಾಧು "ಸುಮ ಪರೀಕ್ಷೆ ಬಹಳ ಹತ್ತಿರ ಬಂತು,ಇನ್ಮೇಲೆ ನೀನು ನನ್ನ ಕೋಣೆಯಲ್ಲಿ ಕೂತು ಓದು. ನೀನೇನು ಓದುತ್ತಿ ಅನ್ನೋದನ್ನ ನಾನು ನೋಡ್ಬೇಕು. ಓದುತ್ತೀಯೋ ಇಲ್ಲ ತೂಕಡಿಸ್ತೀಯೋ...."ಎಂದು ಆಜ್ಞೆಯಿತ್ತಂತೆ ಹೇಳಿದ.

ನಾಗಮ್ಮ, ಸುಮ ಏನು ಹೇಳುವಳೋ ಎಂದು ಗಮನಿಸಿ ನೋಡಿದರು.

"ನಾನು ಚೆನ್ನಾಗೇ ಓದ್ತಿದೀನಿ. ನನ್ನ ಜವಾಬ್ದಾರಿ ನನಗೆ ಗೊತ್ತು. ನನ್ನ ರೂಮಿನಲ್ಲೇ ಓದ್ಕೋತೀನಿ"ಎಂದು ಅವಳೆಂದಾಗ ನಿಟ್ಟುಸಿರು ಬಿಟ್ಟರು ಆಕೆ. ಆದರೆ ಆಕೆಯ ತೃಪ್ತಿಯನ್ನು ಚೆದುರಿಸಿಬಿಟ್ಟರು ರಾಯರು.

"ವೇಣು ಹೇಳೋ ಹಾಗೆ ಮಾಡಮ್ಮ, ಒಂದೆರಡು ತಿಂಗಳು. ವೇಣು ಏನು ನಿನಗೆ ಹೊಸಬನ?"

ರಾಯರ ಮಾತಿಗೆ ಯಾರೂ ಪ್ರತಿ ಹೇಳುವಂತಿರಲಿಲ್ಲ. ಆದರೆ ಸುಮಳಿಗೇ ಅಭ್ಯಂತರವಿತ್ತು ಅವಳಿಗೆ ವೇಣುವಿನ ಬಗೆಗೆ ಕೋಪ, ತನ್ನ ಬಗೆಗೆ ಅನುಕಂಪ. ಚಂಪಳನ್ನು ಪ್ರೀತಿಸುವ ವ್ಯಕ್ತಿ ತನ್ನೊಂದಿಗೇಕೆ ಸಲಿಗೆಯಾಗಿ ವರ್ತಿಸಬೇಕು? ಛೀ, ಛೀ, ತಾನೆಂತಹ ಮೂಢಳು! ತಾನಾಗಿ ಅವನನ್ನು ಕೆನ್ನೆಯ ಮೇಲೆ ಆ ದಿನ ಥೂ! ತಾನು ಹಾಗೆ ಮಾಡಬಾರದಾಗಿತ್ತು. ಏನಂದುಕೊಂಡಿರುತ್ತಾನೋ, ಅಗ್ಗದ ಹುಡುಗಿ ಅಂದುಕೊಂಡಿರಬಹುದು. ಇಲ್ಲಾ ಒಂದು ವೇಳೆ ಅವನೇ ಬಯಸಿದರೂ ಆತನ ಬಳಿ ಏನಾಗಿ ನಿಲ್ಲಬೇಕು? ಚಂಪ ಪತ್ನಿಯಾದರೆ ತಾನು ಪ್ರೇಯಸಿಯಾಗಿ ಕಣ್ಣ ಮುಚ್ಚಾಲೆ ಆಡಬೇಕೆ? ಛೆ ಅದೆಂಥ ಬಾಳು! ಇಲ್ಲ ಹಾಗಾಗುವುದಿಲ್ಲ ಇನ್ನೊಂದೆರಡು ತಿಂಗಳಲ್ಲಿ ಓದು ಮುಗಿಸಿ ಆಮೇಲೆ ಉದ್ಯೋಗ. ಆಮೇಲೆ ಬೇರೆಯ ನೆಲೆ. ಆಮೇಲೆ? ಕಣ್ಣೀರು ತುಂಬಿ ಬಂತು ಅವಳಿಗೆ ತಾನು ಈ ವಿಶಾಲ ಪ್ರಪಂಚದಲ್ಲಿ ಒಂಟಿ ಪಕ್ಷಿ ತನ್ನ ಬಾಳಿಗೆ ಪೂರ್ಣತೆಯಾದರೂ ಎಲ್ಲಿದೆ? ಇದೆಲ್ಲ ಈಗಲೇ ಯಾಕೆ ಯೋಚಿ ಸುವುದು ಆ ಕಾಲ ಬಂದಾಗ ಅಳಲು ಸಮಯವಿದೆ. ಈಗ ಸದ್ಯಕ್ಕೆ ಚೆನ್ನಾಗಿ ಓದಬೇಕು. ಆದರೆ ಅವನ ಕೋಣೆಗೆ ತಾನೇಕೆ ಹೋಗಬೇಕು? ಈತನದು ಎಲ್ಲಾ ಅತಿ ವಿಚಿತ್ರ ಅಭಿಪ್ರಾಯಗಳು ಈ ತಾಕಲಾಟದಲ್ಲೇ ಪುಸ್ತಕಗಳ ಹೊರೆ ಹೊತ್ತು ಅವನ ಕೋಣೆಗೆ ಕಾಲಿಟ್ಟಳು.

ವೇಣು ಅಲ್ಲಿಯೇ ಕುಳಿತು ಓದುತ್ತಿದ್ದವನು ಸುಮಳನ್ನೇನೂ ಮಾತನಾಡಿ ಸಲಿಲ್ಲ. ಹಾಲು ತಂದ ಚಂಪ ಅಲ್ಲಿಯೇ ಕುಳಿತಳು. ಯಾರೂ ಅವಳೊಂದಿಗೆ ಚಕಾರವಾಡಲಿಲ್ಲ. ವೇಣು ಸುಮ ಓದುತ್ತಲೇ ಇದ್ದರು, ಬಹಳ ಹೊತ್ತು ಚಂಪ ಆಕಳಿಸಿ ಸಾಕಾಗಿ, ಹೋಗಿ ಮಲಗಿದಳು. ಇದೇ ದಿನಚರಿ ಪುನರಾವರ್ತಿಸಿತು. ಚಂಪಳಿಗೆ ಅತ್ತೆಯ ಮನೆಯ ವಾತಾವರಣ ಉಸಿರು ಹಿಡಿಯಿತು. ಅತ್ತೆಯೇನೋ ತಾನು ಬಾಲುವಿನೊಂದಿಗೆ ಹೆಚ್ಚು ಬೆರೆಯದಂತೆ ಎಚ್ಚರವಹಿಸುತ್ತಿದ್ದರೂ ಮಾಧು ಮಾತ್ರ ಯಾವ ಅನುಮಾನವೂ ಇಲ್ಲದೆ ಇಬ್ಬರನ್ನೇ ಒಟ್ಟಿಗೆ ಹೋಗಲು ಪ್ರೋತ್ಸಾಹಿಸುತ್ತಿದ್ದ. ತಾನು ಮಾತ್ರ ಚಂಪಳೊಂದಿಗೆ ಒಂಟಿಯಾಗಿ ಹೋರಾಡುತ್ತಲೇ ಇರಲಿಲ್ಲ. ಸಂಜೆಯ ಓಡಾಟವೆಲ್ಲಾ ಬಾಲು-ಚಂಪರದೇ. ಅತ್ತೆಯು ಮಾಧುವಿನ ವರ್ತನೆಯ ಬಗೆಗೆ ಚಡಪಡಿಸುತ್ತಿದ್ದರು. ಚಂಪಳಿಗೆ ಕೇಳಿಸುವಂತೆಯೇ ಒಮ್ಮೆ "ನಿನ್ನ ಜೊತೇಲಿ ನಾಲ್ಕು ದಿನ ಹಾಯಂತ ಇರ್ಲಿ ಅಂದ್ರೆ ಏನೋ ಇದು ಮಾಧು?"ಎಂದು ದನಿ ತೆಗೆದರು.

"ಏನಾಯ್ತಮ್ಮ ಈಗ? ನಂಗಂತೂ ಪುರಸೊತ್ತಿರೊಲ್ಲ. ಬಾಲು ಬಿಡುವಾಗಿ ದ್ದಾನೆ. ಅವಳನ್ನ

ಒಂದೆರಡು ಕಡೆ ತಿರುಗಾಡಿಸಲಿ"ಎಂದು ಉತ್ಸಾಹದ ಉತ್ತರ ಕೊಟ್ಟಿದ್ದ.

ಪ್ರತಿ ರಾತ್ರಿ ಚಂಪಳ ಎದುರಿನಲ್ಲೇ ಮಾಧು-ಸುಮ ಗುರುಶಿಷ್ಯರಾಗಿ ಚರ್ಚಿಸುತ್ತಿದ್ದರು. ಅವರ ನಡುವೆ ಬೇರೊಂದು ಭಾವನೆ ಇದೆ ಎಂಬುದಕ್ಕೆ ಯಾವ ಕಾರಣವೂ ಕಾಣಲಿಲ್ಲ ಯಾರಿಗೂ.

ಹೀಗೆ ಹತ್ತಾರು ದಿನ ಕಳೆಯಿತು. ಅಂದು ಮಾತ್ರ ಮಾಧು ಓದದೆ ಮಲಗಿಬಿಟ್ಟ. ಚಂಪ ಹಾಲು ತಂದಿತ್ತು ಹೋದುದೇ ತಡ, ಸುಮಳಿಗೆ ಸೂಚನೆಯೂ ಕೊಡದೆ, ಹೋಗಿ ಮಲಗಿದ. ಸುಮ ಮಾತ್ರ ಓದುತ್ತಲೇ ಇದ್ದಳು. ಅವನು ಮಲಗಿಯಾದ ಮೇಲೆ ತಾನು ತನ್ನ ಕೋಣೆಗೇ ಯಾಕೆ ಹೋಗಿ ಓದಿಕೊಳ್ಳಬಾರದು ಎನಿಸಿ, ಪುಸ್ತಕ ಜೋಡಿಸಿ, ಕೈಲಿ ಹಿಡಿದು, ದೀಪ ಆರಿಸಿ ಮುಂದೆ ಹೆಜ್ಜೆಯಿಟ್ಟಳು ಸೀರೆ ಸಿಕ್ಕಿಕೊಂಡ ಹಾಗಾಯಿತು. ಕುರ್ಚಿಗೆ ಸಿಕ್ಕಿಕೊಂಡಿರಬಹುದೆಂದು, ಹಾಗೆಯೇ ಕತ್ತಲಿನಲ್ಲಿ ಕೈಯಾಡಿಸಿದಳು. ಸೀರೆ ಬರಲಿಲ್ಲ. ದೀಪ ಹಾಕಿದಳು. ಅವಳ ಎದೆಯ ಬಡಿತ ತೀವ್ರವಾಯಿತು. ಸೆರಗಿನ ತುದಿ ಹಿಡಿದಿದ್ದವನು, ಮಂಚದಿಂದ ಇಳಿದು ನಿಂತಿದ್ದ ಮಾಧು. ಮಾದಕವಾಗಿ ನಗುತ್ತಿದ್ದ "ಹೀಗೆ ತಾನೇ ನೀನು ಓದೋದು"-ಭರ್ತ್ಸನೆ ಯಿದ್ದಂತಿತ್ತು ಅವನ ದನಿಯಲ್ಲಿ

"ಕೂತ್ಕೋ, ನಾನಿನ್ನೂ ನಿದ್ದೆ ಮಾಡಿಲ್ಲ"ಎಂದು ಬಲವಂತವಾಗಿ ಕೂರಿಸಿದ. ವಿಧಿಯಿಲ್ಲದೆ ಕುಳಿತು ಪುಸ್ತಕ ಬಿಚ್ಚಿದಳು. ಅವಳಿಗೆ ರೋಷ ಬಂದಿತ್ತು. ಆದರೂ ಕೈಲಾಗದವನ ಕೋಪ ಅದು. ಅವಳು ಏನೂ ಮಾಡುವಂತಿರಲಿಲ್ಲ. ಓದುವ ನಟನೆ ಮಾಡಿ ಪುಸ್ತಕವನ್ನೇ ನೋಡುತ್ತಿದ್ದಳು. ನಿಂತಿದ್ದ ಮಾಧು ಈಗ ಮೃದುವಾಗಿ "ಸುಮ, ನಿನಗೆ ನಾಳೆ ಮೂರಕ್ಕೆ ಕ್ಲಾಸ್ ಆಗಿಹೋಗುತ್ತೆ ಅಲ್ವಾ? ಆಮೇಲೆ ಮನೆಗೆ ಓಡಿ ಬಿಡ್ಬೇಡ. ನಂಗೆ ಸ್ವಲ್ಪ ಕೆಲ್ಸ ಇದೆ. ನಿನ್ನ ಸಹಾಯ ಬೇಕಾಗುತ್ತೆ. ಅಮ್ಮಂಗೆ ಲೇಟಾಗಿ ಬರ್ತೀನೀಂತ ಏನಾದ್ರೂ ಕಾರಣ ಹೇಳು."

ಉತ್ತರವೇ ಕೊಡದೆ ಪುಸ್ತಕದಲ್ಲಿ ತಲ್ಲಲೀನತೆ ತೋರುತ್ತಿದ್ದ ಸುಮಳ ಹಿಂದೆ ಬಂದು ನಿಂತು ಅವಳ ಭುಜ ಹಿಡಿದು, ಅವಳ ಮೇಲೆ ಬಾಗುತ್ತಾ, "ಬಹಳ ಥ್ಯಾಂಕ್ಸ್, ನನ್ನ ಮಾತಿಗೆ ಬೆಲೆ ಕೊಟ್ಟಿದ್ದಕ್ಕೆ" ಎಂದು ಅವಳ ಎಡಗೆನ್ನೆಯ ಮೇಲೆ ಚುಂಬಿಸಿ, ಪರದೆಯೊಳಗೆ ತೂರಿಕೊಂಡ, ಕೀಟಲೆಯ ನಗು ನಗುತ್ತಾ.

ಸುಮ ವಿಚಲಿತಳಾದಳು. ಆ ಮಿಂಚಿನಂತಹ ಸ್ಪರ್ಶ ಅವಳನ್ನು ಅಚೇತನಳನ್ನಾಗಿ ಮಾಡಿತು ಈತನೇಕೆ ಹೀಗೆ ತನ್ನೊಂದಿಗೆ ಆಟವಾಡುತ್ತಾನೆ? ಚಂಪಳಿಗೆ ಹೇಳಿ ತನ್ನನ್ನು ಕಾಯ್ದುಕೊಂಡರೆ ಹೇಗೆ?- ಎಂದೂ ಅನಿಸಿತು. ಒಮ್ಮೆ ನೀನು ಮನೆಯ ಮಗಳು-ತಂಗಿಯ ಹಾಗೆ ಎಂದರೆ, ಮತ್ತೊಮ್ಮೆ ಇಂತಹ ಅನುರಾಗದ ಪ್ರದರ್ಶನ. ಒಟ್ಟಿನಲ್ಲಿ ತುಂಟ ಮನುಷ್ಯ.

"ನಾಳೆಯಿಂದ ನಾನಿಲ್ಲಿಗೆ ಬರೊಲ್ಲ" ಎಂದು ಪುಸ್ತಕಗಳನ್ನೆಲ್ಲಾ ಅಲ್ಲೇ ಬಿಟ್ಟು ದೀಪ ಆರಿಸಿ, ಧಡಧಡ ಮೆಟ್ಟಿಲಿಳಿದು ಬಂದುಬಿಟ್ಟಳು. ಎದೆ ಇನ್ನೂ ಹೊಡೆದು ಕೊಳ್ಳುತ್ತಲೇ ಇತ್ತು. ಸದ್ಯ ಪರೀಕ್ಷೆ

ಮುಗಿದರೆ, ನಂತರ ಈ ಸಮಸ್ಯೆಗಳ ಕಡೆ ಗಮನ ಕೊಡುವುದು ಅಲ್ಲಿಯವರೆಗೆ ಏನೇ ಆಗಲಿ ಹಲ್ಲು ಕಚ್ಚಿ ತಡೆದುಕೊಳ್ಳುವುದು ಒಳ್ಳೆಯದು ಎಂದು ನಿಷ್ಕರ್ಷೆಗೆ ಬರುವ ವೇಳೆಗೆ ಬೆಳಗಿನ ಝಾವವಾಗಿತ್ತು ಅದು ಅವಳು ಏಳುವ ಸಮಯವೇ ಆಗಿತ್ತು

* * *

ಮೂರು ಗಂಟೆ ಆಗುವುದೇ ಕಾಯುತ್ತಿದ್ದಂತೆ ಮಾಧು ಸುಮಳಿಗೆ ಕರೆ ಕಳುಹಿಸಿದ. ಕಾರಿನ ಬಳಿಗೆ ನಡೆದಾಗ `ಕೆಲಸ ಇರೋದು ಇಲ್ಲಲ್ಲಾ' ಎಂದಳು ಸುಮ ತಲೆಯಲ್ಲಾಡಿಸಿ ಕಾರಿನ ಬಾಗಿಲು ತೆರೆದ

'ನಾನು ಹಿಂದುಗಡೆ ಕೂತ್ಕೋತೀನಿ"

'ಅದ್ಯಾಕೆ?'

'ಸುಮ್ಮನೆ, ಮುಂದುಗಡೆ ಕೂತ್ಕೊಳ್ಳೋಕೆ ಇಷ್ಟವಿಲ್ಲ'

ಆಲ್‌ರೈಟ್ ಹಾಗೇ ಮಾಡು, ಮೊಂಡು ಹುಡುಗಿ" ಎಂದು ನಗುತ್ತಾ ಹಿಂದಿನ ಬಾಗಿಲು ತೆರೆದ

ಕಾರು ಊರು ಹೊರಗಡೆ ಸಾಗುತ್ತಿದೆಯೆಂದು ಭಾಸವಾದಾಗ ಅವಳು ಅರ್ಧ ಗಾಬರಿ, ಅರ್ಧ ಕುತೂಹಲದಲ್ಲಿ ಅಯ್ಯೋ, ಇಲ್ಲೆಲ್ಲಿ ಹೋಗ್ತೀದೀವಿ" ಎಂದಳು

'ಮದರಾಸಿಗೆ'

'ಮದರಾಸಿಗಾ? ಯಾಕೆ?" - ಅವಳ ಸ್ವರದಲ್ಲಿ ಆತಂಕ ಗಮನಿಸಿದ ಮಾಧೂ ಇನ್ನೂ ಚೇಷ್ಟೆಯಾಗಿ "ಅಲ್ಲಿ ನಿನ್ನ ಮದುವೆ ಮಾಡ್ಕೊಳ್ಳೋಕ್ಕೆ" ಎಂದ

ಅವಳ ಹೃದಯದ ಬಡಿತ ಆಯತಪ್ಪಿತು ಬಿಳುಪು ಕೆನ್ನೆಗಳು ರಂಗೇರಿದವು

"ತಮಾಷೆ ಮಾಡ್ಬೇಡೀಪ್ಪ. ಏಳು ಗಂಟೆ ಒಳಗೆ ಬರ್ತೀನೀಂತ ಹೇಳಿದೀನಿ ಅಮ್ಮಂಗೆ"

ಹೋಹೋ ಎಂದು ನಕ್ಕುಬಿಟ್ಟ ವೇಣು ಈಗಿನ್ನೂ ಮೂರು ಗಂಟೆ ಅಂದ್ರೆ ಇನ್ನು ನಾಲ್ಕು ಗಂಟೆ ಟೈಂ ಇದೆ ಏನೂ ಹೆದರ್ಕೋಬೇಡ ನಾನು ನಿನ್ನನ್ನ ಏನೂ ಮಾಡ್ಬಿಡೋಲ್ಲ ಇಲ್ಲಿ ನನ್ನ ಫ್ರೆಂಡ್‌ದು ಎಸ್ಟೇಟಿದೆ ಅವರ ಹತ್ರ ಸ್ವಲ್ಪ ಕೆಲಸ ಇದೆ"

'ನಿಮಗೆ ಕೆಲಸ ಇದ್ರೆ ನಾನ್ಯಾಕೆ ಬರಬೇಕಿತ್ತು?'

'ಯಾಕೆ ಅಂದ್ರೆ, ಇನ್ಮೇಲೆ ನಮಗೇನು ಜವಾಬ್ದಾರಿ ಕಡಿಮೆಯಿದ್ಯಾ? ನಿನಗೆ ಕೆಲ್ಸ ಹುಡುಕ್ಬೇಕು, ಗಂಡು ನೋಡ್ಬೇಕು? ಅದ್ರಲ್ಲಿ ಇನ್ನೂ ಆರಂಭದ ಪ್ರಯತ್ನ"

"ಹಾಂ, ಹಾಂ ಈಗಿದ್ಯಾವುದೋ ಅದ್ರಲ್ಲಿ?"

'ಏನಾದ್ರೂ ಕೆಲ್ಸ ನಿನಗೆ ಗೊತ್ತು ಮಾಡೋಣಾಂತ ನಿನ್ನನ್ನು ನೋಡಿರ್ಲಿ ಈಗ, ಮುಂದೆ ಪ್ರಯತ್ನಿಸಬಹುದೂಂತ ಕರ್ಕೊಂಡ್ಬಂದೆ ಬೇಡ ಅಂದ್ರೆ ಬಂದುಬಿಡೋಣ ಹುಂ, ಏನು ಹೇಳ್ತಿ?"

"ಹೋಗೋಣ"-ಎಂದಳು ಸುಮ. ಕೆಲಸ ಸಿಗುವ ಆಮಿಷ ತೋರಿಸಿದ ಮಾಧು.

ಕಾರು ವೇಗವಾಗಿ ಓಡಿ 'ವಾಸುಕಿ ಎಸ್ಟೇಟ್'ಎಂದು ಫಲಕ ಹಾಕಿದ್ದ, ತಂತಿ ಬೇಲಿ ಕಟ್ಟಿದ್ದ ಒಂದು ಆವರಣ ಹೊಕ್ಕು, ಒಂದು ಚಿಕ್ಕ ಬಂಗಲೆಯ ಮುಂದೆ ನಿಂತಿತು. ಕಾರಿನ ಶಬ್ದ ಕೇಳಿ ಹೊರಬಂದರು ಧಡೂತಿಯಾಕಾರದ ಒಬ್ಬ ಐವತ್ತು ವರ್ಷದ ವ್ಯಕ್ತಿ, ಸ್ನಾನ ಮಾಡಿದ ಅಗ್ನಿದೇವನಂತಿದ್ದ.

"ಹಲೋ ವೇಣುಮಾಧವ್, ಬಹಳ ದೂರ ಬಂದ್ಬಿಟ್ರಲ್ಲಾ?" ಎಂದು ಹಿಂದಕ್ಕೆ ನೋಡಿ, "ಅರೆ, ಯಾವಾಗ್ಲೂ ಒಬ್ಬರೇ ಬರ್‍ತಿದ್ದವ್ರು, ಈಗ ...ಓ ಅರ್ಥವಾಯ್ತು, ವಾಟ್ ಎ ಫೈನ್ ಸೆಲೆಕ್ಷನ್! ಯಾವಾಗ ಲಾಡು ಹಾಕಿಸ್ತೀರಿ?" ಎಂದರು ಆತ ಮೂವತ್ತೆರಡು ಹಲ್ಲೂ ತೋರಿಸುತ್ತಾ.

ಸುಮಳಿಗೆ ನಾಚಿಕೆಯಿಂದ ತಲೆತಗ್ಗಿಸುವಂತಾಯಿತು. ಒಬ್ಬ ಗಂಡಸಿನ ಜೊತೆಯಲ್ಲಿ ಒಂದು ಹೆಣ್ಣು ಹೊರಗೆ ಹೊರಡುವಂತೆಯೇ ಇಲ್ಲ ಹಾಳು, ಏನು ಸಮಾಜವೋ.

ಕಾರಿನಿಂದಿಳಿದು ಬೀಗ ಹಾಕಿ, ಮುಂದೆ ಹೆಜ್ಜೆ ಹಾಕುತ್ತಾ- "ಲಾಡೂಗೇನಂತೆ, ಹಾಕಿಸೋಣ ಮಿ|| ವೆಸ್ಲಿ"ಎಂದು ಕೈ ಚಾಚಿ ನಿಂತಿದ್ದ ಅವನ ಕೈ ಕುಲುಕಿದ ಮಾಧು.

' ಯು ಆರ್ ವೆಲ್‌ಕಮ್ ವೇಣು. ಆದ್ರೆ ನಾನೀಗ ಎಲ್ಲೋ ಹೋಗ್ತಿದೀನಿ. ಬಹಳ ಅರ್ಜೆಂಟ್ ನೀವು ಇದ್ದುಬಿಟ್ಟೇ ಹೋಗಿ ಮೇಕ್ ಯುವರ್‌ಸೆಲ್ಫ್ ಕಂಫರ್ಟಬಲ್... ದೇವಿಡ್, ಇವರಿಗೆ ಕಾಫಿ ಮಾಡ್ಕೊಡು. ಇನ್ನೂ ಏನಾದ್ರೂ ಬೇಕಿದ್ರೆ ಕೊಡು" ಎಂದು ಹೇಳುತ್ತಾ ಹೊರಟೇಹೋದನಾತ.

ಸುಮಳಿಗೆ ಎಲ್ಲಾ ವಿಚಿತ್ರವೆನಿಸಿತು ಕಣ್ಣು ಬಿಡುತ್ತಾ ಸುತ್ತಲೂ ನೋಡುತ್ತಿದ್ದಳು. ಮೂರು ಕೋಣೆಯ ಸಣ್ಣ ಮನೆ ಅದು. ಮನೆಯಂತೆ ಮಾತ್ರ ಇರಲಿಲ್ಲ. ಬರಿಯ ಒಂದು ಅತಿಥಿಗೃಹವಿದ್ದಂತಿತ್ತು. ಒಂದು ಕೋಣೆಯಲ್ಲಿ ಒಂದೇ ಒಂದು ಚಿಕ್ಕ ಮಂಚ, ಮತ್ತೊಂದು ಕೋಣೆ ಆಫೀಸು ಮಧ್ಯದ ಕೋಣೆಯಲ್ಲಿ ಒಂದೆರಡು ಸೋಫಾ ಕುರ್ಚಿ, ಆಧುನಿಕ ಸಜ್ಜುಗಟ್ಟು. ಈತ ಇಲ್ಲೇಕಿರುತ್ತಾನೆ? ಹೇಗೆ ಇರುತ್ತಾನೆ? ತಲೆ ಕೆರೆದುಕೊಂಡಳು.

"ಹೆದ್ರಿಕೆ ಆಗ್ತಿದ್ಯಾ ಸುಮ, ಎಲ್ಲಿಗೋ ಬಂದಿದ್ದೀವೀಂತ? ಇದು ಆತನ ಎಸ್ಟೇಟ್ ಆಫೀಸ್. ಮನೆ ಬೆಂಗಳೂರಲ್ಲೇ ಅಲಸೂರಲ್ಲಿ ಇದೆ. ನನ್ನಂಥಾ ಫ್ರೆಂಡ್ಸ್‌ಗೆ ಸ್ವಲ್ಪ ಚೇಂಜ್ ಬೇಕೂಂದ್ರೆ ಇಲ್ಲಿ ಬಂದಿದ್ದು ಹೋಗಿ ಅಂತಾನೆ. ಮಾಧುರಿ ಮದುವೆ ದಿನ ನಾನು ರಾತ್ರಿ ಬಂದಿದ್ದು ಇಲ್ಲಿಗೆ. ಅವತ್ತು ನೋಡು ಸುಮ, ಮನೆ ಹತ್ತಿರ ಒಂದು ಹುಡುಗಿಗೆ ಡ್ರಾಪ್ ಕೊಟ್ಟೆ. ಆ ಹುಡುಗಿ ಎಂಥ ತುಂಟಿ ಅಂತೀ? ನನ್ನ ಕೆನ್ನೆಗೆ ಕಾಣಿಕೆ ಕೊಟ್ಟು ಓಡಿಬಿಟ್ಟಳು. ನಾನು ಏನೂ ಮಾಡೋಕ್ಕೆ ತೋಚದೆ ಇಲ್ಲಿಗೆ ಬಂದ್ಬಿಟ್ಟೆ"- ಎಂದು ಬಲಗೆನ್ನೆ ಮುಟ್ಟಿ ನೋಡಿಕೊಂಡ.

ಆ ಹುಡುಗಿ ತಾನೇ ಎಂದು ಗೊತ್ತಾಗಿ ಸುಮ ನಾಚಿ ಕೆಂಪಾದಳು. ಆ ನೆನಪಿನಿಂದ ಅವಳಿಗೆ

ಮಾಧುವಿನೆಡೆಗೆ ತಲೆಯೆತ್ತಲಾಗಲಿಲ್ಲ.

ಮಾಧು ಮಂಚವಿದ್ದ ಕೋಣೆಯೊಳಕ್ಕೆ ಹೋಗಿ, ಹಿಂತಿರುಗಿ ಸಣ್ಣದಾಗಿ ಸಿಳ್ಳೆ ಹಾಕುತ್ತ ಬಂದು- " ಆ ರೂಮಲ್ಲಿ ಕೂತ್ಕೊಳ್ಳೋಣ ಬಾ"ಎಂದ.

"ಊಹುಂ"ಎಂದು ತಲೆಯಲ್ಲಾಡಿಸಿದಳು. ಆತನ ಬಳಿ ಕೆಲಸ, ಅದಕ್ಕಾಗಿ ಬಂದದ್ದು ತನ್ನನ್ನೂ ನೋಡಿರಲಿ. ಆದರೆ ಈಗ ಆತನೇ ಇಲ್ಲ. ಉಳಿದದ್ದು ತಾವಿಬ್ಬರೇ. ಚೇಂಜ್ ಬೇಕೂಂದ್ರೆ ಬನ್ನಿ ಅಂತಾನೆ. ಸಣ್ಣ ಕೋಣೆಯಲ್ಲಿ ಇಬ್ಬರೇ ಕುಳಿತುಕೊಳ್ಳಲು ಆಹ್ವಾನ ಏನಿದೆಲ್ಲಾ? ಸುಮ ನಡುಗಿದಳು. ಬೆವರಿದಳು. ವೇಣು ದುಷ್ಟ ಯೋಚನೆಯಿಂದ ಬಂದಿರಬಹುದೆ ಎಂದೂ ಅವಳ ಹೃದಯ ಶಂಕಿಸಿತು.

"ಪಕ್ಕಾ ಅಂಜುಬುರುಕಿ. ಓಕೆ, ಇಲ್ಲೇ ಇರೋಣ ಬಿಡು"ಎಂದು ಅಲ್ಲಿಯೇ ಇದ್ದ ಸೋಫಾದಲ್ಲಿ ತಾನು ಕುಳಿತು ಅವಳನ್ನು ಕೂರ ಹೇಳಿದ. ಏನೋ ನೆನಪಿಸಿ ಕೊಂಡ-"ಸುಮ, ಅಸೂಯೆಯ ಮುದ್ದೆ ಅನ್ನೋಲ್ವಾ?"ಎಂದು ನಕ್ಕ, ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ ಸುಮ. ಅವಳು ನಿಜವಾಗಿಯೂ ಹೆದರಿದ್ದಾಳೆಂದು ಗ್ರಹಿಸಿದ ವೇಣು ಧೈರ್ಯ ಕೊಡುವಂತೆ ಮಾತು ಮಹಗುರ ಮಾಡಿದ-"ನಂಗೆ ಸ್ವೀಟ್ಸೆಲ್ಲಿ?"

"ಯಾಕೆ?"

"ಸೀನಿಯರ್ ಷಾರ್ಟ್‌ಹ್ಯಾಂಡ್, ಟೈಪ್‌ರೈಟಿಂಗ್‌ನಲ್ಲಿ ಫಸ್ಟ್‌ಕ್ಲಾಸ್ ಬಂದಿದ್ದಕ್ಕೆ."

"ಓ, ಯಾವ ಕಾಲದ ಕತೆ! ರಿಸಲ್ಟ್ಸ್ ಬಂದೇ ಒಂದು ತಿಂಗಳ ಮೇಲಾಯ್ತು. ಅಷ್ಟಕ್ಕೂ ಅಂಥದಕ್ಕೆಲ್ಲಾ ಸ್ವೀಟ್ಸ್ ಕೊಡಿಸುವಷ್ಟು ಶ್ರೀಮಂತಳಲ್ಲ ನಾನು."

"ಹಾಗಾದ್ರೆ ಇನ್ಯಾವುದಕ್ಕೆ ಕೊಡಿಸೋಷ್ಟು ಶ್ರೀಮಂತಳು ಹೇಳು-ಹೋಗ್ಲಿ ನಿನ್ನ ಬರ್ತ್‌ಡೇ ಸ್ವೀಟ್ಸ್ ಕೊಡು "

"ನನ್ನ ಬರ್ತ್‌ಡೇದಾ?"

"ಹೂಂ, ಈವತ್ತು ನಿನ್ನ ಹುಟ್ಟು ಹಬ್ಬ ಅಲ್ವಾ?" ಎಂದ ಕೀಟಲೆಯಿಂದ.

ಒಂದು ಕ್ಷಣ ಯೋಚಿಸಿದಳು. ಹೌದು ಹಾಗೆಂದು ತಾನೆಂದೂ ಆಚರಿಸಿದ ವಳಲ್ಲ. ತನ್ನ ಹುಟ್ಟು ಹಬ್ಬದ ದಿನವನ್ನು ಒಮ್ಮೆ ಅಮ್ಮನೊಂದಿಗೆ ಹೇಳಿದಾಗ ಕೇಳಿದ್ದಾನು ಅದನ್ನು ನೆನಪಿಸಿಕೊಳ್ಳುವಷ್ಟು ಆತನಿಗೆ ತನ್ನಲ್ಲಿ ಆಸಕ್ತಿಯಿದೆಯೆ?- ಎಂದು ಮನಸ್ಸಿಗೆ ಹರ್ಷವಾಯಿತು. ಆದರೂ ಅದನ್ನು ತೋರಗೊಡದೆ ನಿರುತ್ಸಾಹ ದಿಂದ,

"ಬರ್ತ್‌ಡೇಗಳಿಗೇನು ವರ್ಷಕ್ಕೊಮ್ಮೆ ಬರುತ್ತೆ" ಎಂದಳು.

"ಆದರೂ ಈ ಸಲದ್ದು ಸ್ಪೆಷಲ್ಲು."

"ಹೇಗೊ?"

"ನನ್ನ ಗುರುತಾದ ಮೇಲೆ ಇದೇ ಮೊದಲು. ಇರಲಿ, ನನ್ನ ಶುಭಾಶಯ ಹೇಳ್ತಿದೀನಿ ಸುಮ ನಾನೇ ಸ್ವೀಟ್ಸೂ ತಂದಿದೀನಿ ಬಿಡು ನೀನು ಕೊಟ್ಟರೇನು, ನಾನು ಕೊಟ್ಟರೇನು? ಮುಖ್ಯ ಈ ದಿನ ಸ್ವೀಟ್ಸ್ ತಿನ್ನಬೇಕು ಎಂದು ಎದ್ದು ಹೋಗಿ ಕಾರಿನಿಂದ ಸ್ವೀಟ್ಸ್ ಮತ್ತು ಒಂದು ಉಡುಗೊರೆಯ ಪ್ಯಾಕೆಟ್ಟುಗಳನ್ನು ತಂದನು ಸ್ವೀಟ್ಸ್ ತಾನು ಬಿಚ್ಚುತ್ತಾ, ಉಡುಗೊರೆ ಅವಳ ಕೈಯಲ್ಲಿಟ್ಟನು ಬೆಲೆಬಾಳುವ ಪಾರ್ಕರ್ ಪೆನ್. ಅವಳ ಸಂತೋಷ ಆನಂದಗಳು ಮುಖದಲ್ಲಿ ಎದ್ದು ಕಾಣುತ್ತಿದ್ದವು

"ಈ ಪೆನ್ನಲ್ಲಿ ಬರೆದು ಈ ಸಲ ರ್‍ಯಾಂಕ್ ಗಿಟ್ಟಿಸೋ ಹಾಗಾಗ್ಲಿ ಅಂತ ಆಶೀರ್ವಾದ ಮಾಡ್ತೀನಿ ಸುಮ"

"ಥ್ಯಾಂಕ್ಸ್" ಎಂದಳು ಆನಂದಾತಿಶಯದಿಂದ ಧ್ವನಿ ಅಡಗಿಹೋಗಿತ್ತು ಅವಳು ಹಾಗೆಂದಾಗ ವೇಣು ತನ್ನ ಬಲಕೆನ್ನೆಯನ್ನು ಮೃದುವಾಗಿ ಸವರಿಕೊಳ್ಳುತ್ತಾ ಅವಳ ಕಣ್ಣುಗಳೊಳಕ್ಕೆ ನೋಡುತ್ತಾ ತುಟಿ ಅಗಲಿಸಿದ ಸುಮ ನಾಚಿಕೆಯಿಂದ ತಲೆ ತಗ್ಗಿಸಿದಳು

ನಾವಿಲ್ಲಿಗೆ ಬಂದದ್ರಲ್ಲಿ ಒಂದು ಕೆಲಸವು ಮುಗೀತು ಎರಡನೇದು ಏನಂದ್ರೆ, ನಿನ್ನ ಹತ್ತಿರ ಸ್ವಲ್ಪ ಮಾತಾಡೋದು ನಿನ್ನಿಂದ ಒಂದು ಸಹಾಯವೂ ಆಗಬೇಕು ಸುಮಾ '

' ಅದಕ್ಕೆ ಲಂಚಾನಾ? ' ಎಂದು ಛೇಡಿಸಿದಳು

"ಹೂಂ, ಹಾಗೇ ಅಂದ್ಕೋ ಆ ಕೆಲಸ ಆದ್ರೆ ಇನ್ನೂ ನಿಂಗೆ ಎಂಥೆಂಥ ಬಹುಮಾನ ಕೊಡ್ತೀನಿ ಅನ್ನೋದು ತಿಳಿಯುತ್ತೆ . ಸುಮ, ಚಂಪ ಎಂಥವಳು?"

"ಅಂದ್ರೆ?"

ಅವಳನ್ನು ನಾನು ಮದುವೆ ಮಾಡಿಕೊಂಡ್ರೆ, ನಮ್ಮಿಬ್ಬರ ಜೋಡಿ ಸರಿಯಾಗಿರುತ್ತಾ?"

ಸುಮಳಿಗೆ ತಲೆ ತಿರುಗಿದಂತಾಯಿತು ಇದನ್ನು ಕೇಳಲು ಇಷ್ಟು ದೂರ ಬರಬೇಕಿತ್ತೆ? ಇದೂ ಒಂದು ಕೆಲಸವೆ? ಸ್ವಲ್ಪ ಚೇತನ ಕೂಡಿಸಿಕೊಂಡು-"ನನ್ನ ಕೇಳಿದ್ರೆ ಹೇಗೆ? ನೋಡೋವ್ರಿಗೆ ಸರಿಯಾಗಿರುತ್ತೆ ಆದರೆ ನೀವಿಬ್ಬರೂ ಒಬ್ಬರನ್ನೊಬ್ರು ಪ್ರೀತಿಸಿ ಅರ್ಥ ಮಾಡ್ಕೊಂಡಿದ್ರೆ ಸರಿ ಹೊರಗಿನವರಿಗೆ ಏನು ಗೊತ್ತಾಗುತ್ತೆ?

' ನನಗೇನೊ, ಚಂಪ ನನಗೆ ಸರಿಯಾಗಿ ಜೋಡಿ ಅಂತ ಅನ್ನಿಸ್ತಾ ಇಲ್ಲ, ಅದಕ್ಕೆ ನಾನು ಅವಳನ್ನು ಮದ್ವೆ ಮಾಡ್ಕೊಳ್ಳೋಲ್ಲ ಅಂತ ತೀರ್ಮಾನಿಸಿದ್ದೀನಿ"-ಸುಮಳ ಆತಂಕಗಳ ಮೋಡದಿಂದ, ಮನಸ್ಸಿನ ಚಂದಿರ ಹೊರಗೆ ಬಂದ.

"ಹೂಂ."

ನಾನು ಬೇರೆ ಹುಡುಗೀನ ಪ್ರೀತಿಸಿದ್ದೀನಿ '

ಸರಿ ಎಂದಳು ಸಹಜವಾಗಿರಬೇಕೆಂದರೂ, ಮುಖ ಕೆಂಪೇರಿ ಮೋಸ ಮಾಡುತ್ತಿತ್ತು

'ಆ ಹುಡುಗಿ ಬಡವಳು. ಅವಳ ಮನೆಯವರು ಯಾರೂ, ಮುಖ್ಯವಾಗಿ ಅವಳೂ ಒಪ್ತಾ ಇಲ್ಲ."

ಏನು ಈತ ಹೇಳುತ್ತಿರುವುದು? ಕತ್ತಲಲ್ಲಿ ತಡಕಾಡುವಂತಾಯಿತು. ಒಂದು ಸೆಕೆಂಡಿನ ಹಿಂದೆ ಕಂಡಿದ್ದ ಚಂದಿರ ಎಲ್ಲಿ ಹೋಗಿ ಅವಿತುಕೊಂಡ? ಮಾಧು ಮುಂದುವರಿಸಿದ-"ನಮ್ಮ ಅಂತಸ್ತು, ಕೀರ್ತಿ, ಪ್ರತಿಷ್ಠೆಗಳಿಂದ ನಮ್ಮ ಮನೆ ಸೇರಲು ಅವಳಿಗೆ ಇಷ್ಟವಿಲ್ಲ ನಮ್ಮಮ್ಮ, ಅಣ್ಣನ ಒಪ್ಪಿಗೆ ಇಲ್ದೆ ಅವಳು ನಮ್ಮ ಮನೆ ಹೊಸಿಲು ತುಳಿಯೊಲ್ಲ ಅದಕ್ಕೇ ನೀನು ಅಮ್ಮ, ಅಣ್ಣ ಒಳ್ಳೆಯವ್ರು ಬಡವರನ್ನು ಕಂಡ್ರೆ ಅವರಿಗೆ ತಿರಸ್ಕಾರ ಇಲ್ಲ ಅಂತ ಅವಳಿಗೆ ತಿಳಿಹೇಳ್ಬೇಕು

ಕತ್ತಲಾಳದಲ್ಲಿ ಕರಗಿಹೋದಳು ಸುಮ ಕಾಣಿದ್ದ ಬಂಗಲೆ ಗಿರಗಿರ ತಿರುಗಿದಂತಾಯಿತು ಅವಳು ಮಾತನಾಡದೆ ತಟಸ್ಥಳಾದಾಗ ಮಾಧುವೇ ಮತ್ತೆ ನೀನೂ ಬಡಹುಡುಗಿ ನಿನ್ನನ್ನ ಅಮ್ಮ, ಅಣ್ಣ ಹೇಗೆ ನೋಡ್ತೆದಾರೆ ಅನ್ನೋ ಅನುಭವ ಚೆನ್ನಾಗಿದೆ ಹೆಲ್ಪ್ ಮಾಡ್ತೀಯಾ ಸುಮ?

'ನನಗವಳ ಪರಿಚಯವೇ ಇಲ್ಲವಲ್ಲ?'

'ನಾನು ಮಾಡಿಕೊಡ್ತೀನಿ."

'ಪ್ರಯತ್ನಿಸ್ತೀನಿ '

'ಹಾಗಂದ್ರೆ ಸಾಲ್ದು ನೀನು ಅವಳನ್ನು ಗೆದ್ದುಕೊಟ್ರೆ ನಾನು ಈ ಜನಮವೆಲ್ಲಾ ನಿನಗೆ ಋಣಿಯಾಗಿರ್ತೀನಿ ಈ ನಿನ್ನ ಹುಟ್ಟಿದ ಹಬ್ಬದ ದಿನ ಪ್ರಾಮಿಸ್ ಮಾಡ್ತೀಯಾ ನನಗೆ?" ತೊಡೆಯ ಮೇಲೆ ನಿಸ್ಸಹಾಯಕವಾಗಿ ಕುಳಿತಿದ್ದ ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಭಾಷೆಗಾಗಿ ಕೇಳಿದ ಕೈ ತಣ್ಣಗೆ ನಡುಗುತ್ತಿತ್ತು ಎಡಗೈಯಿಂದ ಅವಳ ಗಲ್ಲ ಮೇಲೆತ್ತಿ ಕಣ್ಣೊಳಕ್ಕೆ ನೋಡುತ್ತಾ ಭಾಷೆ ಕೊಡ್ತೀಯಾ? ಎಂದು ಅವಳ ಕೈಯನ್ನು ಮಿದುವಾಗಿ ಅದುಮಿದ ಹುಂ ಎನ್ನುವಂತೆ ತಲೆ ಅಲ್ಲಾಡಿಸಿದಳು ಮಾತನಾಡಲು ಮಾತ್ರ ನಾಲಿಗೆ ಬತ್ತಿ ಹೋಗಿತ್ತು.

'ತುಂಬಾ ಥ್ಯಾಂಕ್ಸ್ ನಾವು ಇನ್ನು ಹೋಗೋಣ್ವಾ?' ಎಂದ ಮಾಧು ಮತ್ತೊಮ್ಮೆ ಹುಂ ಎನ್ನುವಂತೆ ತಲೆಯಾಡಿಸಿ ಎದ್ದು ನಿಂತಳು ಅವರು ಹೊರಟು ಬಾಗಿಲ ಹೊರಗೆ ಬಂದಾಗ, ಡೇವಿಡ್ ಹಲ್ಲು ಕಿರಿಯುತ್ತಾ ಒಂದೆರಡು ನಿಮಿಷ ಇರಬೇಕೆಂದು ಬೇಡಿಕೊಂಡ. ತನ್ನ ಧಣಿಯ ಆಣತಿಯಂತೆ ಕಾಫಿ ತಂದುಕೊಡುವೆನೆಂದು ಮತ್ತೆ ಅವರನ್ನು ಕುಳಿತುಕೊಳ್ಳುವಂತೆ ಮಾಡಿದ. ಇಬ್ಬರೂ ಮೌನವಾಗಿ ಕಾಫಿ ಕುಡಿದರು.

ಇದ್ದಬದ್ದ ಶಕ್ತಿಯನ್ನೆಲ್ಲ ಕೂಡಿಸಿ, 'ನಿರಾಶೆಯಾಳದಿಂದ ಮನಸ್ಸನ್ನು ಮೇಲೆತ್ತಿ ನಗಲು ಯತ್ನಿಸಿದಳು. ಹೌದು, ತಾನು ನಗಲೇಬೇಕು. ನಿರಾಸೆಪಡಲು ಕಾರಣವೇ ಇಲ್ಲ. ತಾನಾರು? ಅವನಾರು? ಅವನ ಸಣ್ಣ ಪುಟ್ಟ ಚೇಷ್ಟೆಗಳನ್ನು ಪ್ರೇಮವೆಂದು ತಿಳಿದ ಮೂರ್ಖಳು ತಾನು ಅಷ್ಟೆ. ತನ್ನ ಮನಸ್ಸನ್ನು ಗೆದ್ದುಕೊಳ್ಳಲು ಅವೆಲ್ಲಾ ನಾಟಕಗಳು. ಈಗ ತನ್ನಿಂದಲೇ ಅವನಿಗೆ ಸಹಕಾರ ಬೇಕು. ಅಷ್ಟಾದರೂ ಮಾಡಬೇಕು ತಾನು. ಆ ತಾಯಿ ತಂದೆಯರು ತನ್ನ ಮೇಲೆ ಸುರಿಸಿರುವ ಪ್ರೀತಿ ವಿಶ್ವಾಸಗಳಿಗೆ ಪ್ರತಿಫಲವಾಗಿ, ತಾನು ಅವರ ಮಗನ ಬಾಳಿಗೆ ಸಹಾಯವಾಗಬೇಕು. ತನ್ನಂತಹವರಿಗೆ ಉಳಿದಿರುವುದೇ ನಿರಾಸೆ. ಅದಕ್ಕಿಂತ ಹೆಚ್ಚು ಬಯಸುವುದಾದರೂ ಸರಿಯೆ? ಅವನ ಹೃದಯದಲ್ಲಿ ತನಗೆ ಶಾಶ್ವತ ಸ್ಥಳ ಸಿಗಲಾರದು. ಅವನೇ ಒಂದು ವೇಳೆ ಬಯಸಿದ್ದರೂ ಅಮ್ಮ, ಅಣ್ಣ ಒಪ್ಪುತ್ತಿರಲಿಲ್ಲ, ಏಕೆ ತಾನೇ ಒಪ್ಪಲಾರಳು. ಆ ಉದಾರ ಹೃದಯದ ಮನಸ್ಸಿನಿಂದ ದೂರವಾಗುವಂಥ ಕೆಲಸವನ್ನು ತಾನೆಂದಿಗೂ ಮಾಡುವುದಿಲ್ಲ. ಅಂದ ಮೇಲೆ ವೇಣುವಿನ ಹೃದಯದಲ್ಲಿ ಎಂದಿಗೂ ನಿಲ್ಲಲಾರಳು. ಈಗೇಕೆ ವೃಥಾ ನೋಯಬೇಕು. ಅವನಿಗೆ ಸಹಾಯ ಮಾಡಿ ತೃಪ್ತಿ ಕೊಟ್ಟರೆ, ಹಾಗಾದರೂ ಅವನ ಹೃದಯದಲ್ಲಿ ತನಗೊಂದು ಸ್ಥಾನ ಕಲ್ಪಿಸಿಕೊಳ್ಳಬಹುದಲ್ಲ?

"ಅವಳನ್ನು ಯಾವಾಗ ಪರಿಚಯ ಮಾಡಿಸ್ತೀರಿ?" ಹಿಂತಿರುಗುತ್ತಿರುವಾಗ, ಇದ್ದಕ್ಕಿದ್ದಂತೆ ಕೇಳಿದಳು

"ನಿನ್ನ ಪರೀಕ್ಷೆ ಮುಗಿಯಲಿ. ನಿನ್ನ ಓದಿಗೆ ಅಡ್ಡಿಪಡಿಸುವ ಇಷ್ಟ ನನಗಿಲ್ಲ" ಎಂದ, ಮೊಟಕಾಗಿ

## ೧೦

ಸುಮಳ ಮನಸ್ಸು ಮುದುಡಿಹೋಗಿತ್ತು. ಅವಳನ್ನು ಈಗ ಒಂದು ಬಗೆಯ ನಿರ್ಲಿಪ್ತತೆ ಆವರಿಸಿತ್ತು. ಆಸೆನಿರಾಸೆಗಳ ತುಯ್ದಾಟವಲ್ಲ, ತಾನು ರಾಯರ ಮನೆಗೆ ಕಾಲಿಟ್ಟಾಗ ಇದ್ದಂಥದೇ ಮನಃಸ್ಥಿತಿ ಮತ್ತೆ. ಐದಾರು ತಿಂಗಳಿಂದ ತನ್ನ ಬದುಕಿನಲ್ಲೇ ಒಂದು ಮಾರ್ಪಾಟು ಉಂಟಾಗಿದೆ ಎಂಬ ಅಂಶವನ್ನು ನೆನೆಸಿಕೊಳ್ಳುವ ಇಷ್ಟವಿಲ್ಲ. ಪ್ರಶಾಂತವಾಗಿದ್ದ ಸರೋವರಕ್ಕೆ ಒಬ್ಬ ತುಂಟ ಹುಡುಗ ಕಲ್ಲು ಬೀಸಿ ಅಲೆಗಳನ್ನು ಎಬ್ಬಿಸಿದ ಸ್ವಲ್ಪ ಹೊತ್ತಾದ ಮೇಲೆ ಅದು ಮತ್ತೆ ಪ್ರಶಾಂತವಾಗಲೇಬೇಕಷ್ಟೆ. ಅಲ್ಲೊಬ್ಬರು ಕಲ್ಲುಬೀಸಿದ್ದರೆಂಬ ನಾಮಶೇಷವೂ ನೀರಿನಲ್ಲಿ ಇರುವುದಿಲ್ಲ. ಅವಳ ಹೃದಯ ಗತಿಯೂ ಹಾಗೆಯೇ ಆಗಿದೆ. ತಾನಾಯಿತು, ತನ್ನ ಓದಾಯಿತು. ಹಗಲಿರುಳೂ ಓದೊಂದೇ ಅವಳಿಗೆ ಸಂಗಾತಿ. ಆಗೊಮ್ಮೆ ಈಗೊಮ್ಮೆ ರಾಯರು ವಿಚಾರಿಸಿಕೊಳ್ಳುತ್ತಾರೆ. ಊಟ ತಿಂಡಿಗಳ ಬಗೆಗೆ ಅಮ್ಮನೂ ಗಮನಿಸುತ್ತಾರೆ. ಆದರೂ ಸುಮ ಯಾವುದೋ ಕನಸಿನಲ್ಲಿದ್ದಂತಿದ್ದಾಳೆ. ವೇಣುವಿನ ಬಗೆಗೆ ಅವಳಿಗೆ ಆಸಕ್ತಿಯಿಲ್ಲ. ಅವನು ಆಸಕ್ತಿ ತೋರಿದರೂ ತನಗದು ಬೇಕಿಲ್ಲ ಈಗ. ಚಿಪ್ಪಿನೊಳಗಿಂದ ಆಮೆಯ ತಲೆ ಹೊರಬಂದಿತ್ತು. ಆದರೆ

ಚೇಷ್ಟೆಯ ಪೋರರಿಗೆ ಅದು ತಮಾಷೆಯೆನಿಸಿ ಹುಯಿಲೆಬ್ಬಿಸಿದರು. ಆಮೆ ಮತ್ತೆ ಚಿಪ್ಪಿನೊಳಕ್ಕೆ ಸರಿದಿತ್ತು.

ಚಂಪಳೆಡೆಗೆ ಮಾಧು ಯಾವಾಗ ಸುಮುಖನಾಗುತ್ತಾನೋ ಎಂಬ ಹಂಬಲ ವೊಂದನ್ನು ಬಿಟ್ಟರೆ ನಾಗಮ್ಮನವರಿಗೆ ಯಾವ ಸಂಕಟ, ತಾಪತ್ರಯಗಳೂ ಇಲ್ಲ. ದಿನಗಳು ಹಾಯಾಗಿ ಉರುಳುತ್ತಿವೆ. ಬಾಲು-ಚಂಪರಿಗೆ ಬದುಕೆಲ್ಲಾ ಚೇನಾಗಿ ಕಾಣುತ್ತಿದೆ. ರಾಯರು ಮಾತ್ರ ತಮ್ಮ ಕಣ್ಣೆದುರಿಗೆ ನಡೆಯುತ್ತಿರುವ ಪ್ರತಿ ಒಂದು ಚಲನೆಯ ಅರಿವಿದ್ದರೂ, ನಡೆಯಬೇಕಾದದ್ದು ನಡೆಯಲೇಬೇಕು ಎಂಬ ಧೋರಣೆಯಲ್ಲಿದ್ದಾರೆ.

ಮಾಧುವಿಗೆ ಮಾತ್ರ ನೆಮ್ಮದಿಯಿಲ್ಲ. ಚಂಪಳಿಗೆ ತನ್ನ ಮನಸ್ಸನ್ನು ತಿಳಿಸುವುದು ಹೇಗೆ ಎಂಬ ಸಮಸ್ಯೆ ಅವನ ತಲೆ ತಿನ್ನುತ್ತಿದೆ. ಹದಿನೈದು ದಿನಗಳಿಗೆಂದು ಬಂದ ಚಂಪ, ಇಪ್ಪತ್ತಾರು ದಿನಗಳಾದರೂ ಉಳಿದುಬಿಟ್ಟಿದ್ದಾಳೆ. ಪರರ ಹೆಣ್ಣು ತಮ್ಮ ಮನೆಯಲ್ಲಿ ಹೀಗೇಕೆ? ಬೇಗನೆ ತನ್ನ ಇತ್ಯರ್ಥ ಹೇಳಿಬಿಡಬೇಕು. ಬಾಲಚಂದ್ರನೂ ಮೂರು ದಿನ ಊರಿಗೆ ಹೋದರೆ ನಾಲ್ಕು ದಿನ ಇಲ್ಲಿರುತ್ತಾನೆ. ಬಹುಶಃ ಚಂಪಳಿಗಾಗಿ ಅಥವಾ ಇಲ್ಲದೆಯೂ ಇರಬಹುದೆ? ಎಲ್ಲರೂ ಮನೆಯಲ್ಲಿರುವಾಗ ತಾನು ಚಂಪ ಳೊಡನೆ ಮಾತನಾಡಲಾರ. ಸಮಯಕ್ಕಾಗಿ ಕಾಯಬೇಕು. ಆದರೆ ಜಾಗ್ರತೆಯಾಗಬೇಕು.

ಅಂದು ಸುಮಳಿಗೆ ಕಾಲೇಜಿನ ಕಡೆಯ ದಿನ. ನಂತರ ಪರೀಕ್ಷೆಗೆ ಓದಿಕೊಳ್ಳಲು ರಜೆ. ಅವಳು ಹೊರಟುಹೋಗಿದ್ದಳು. ಅಣ್ಣನೂ ಎಲ್ಲೋ ಹೊರಗಡೆ ಹೋಗಿದ್ದರು. ಅವರಿಗೆ ಆರೋಗ್ಯ ಸುಧಾರಿಸಿದುದೇ ಒಂದು ಕಷ್ಟವಾಗಿದೆ. ಇತ್ತೀಚೆಗೆ ಮೊದಲಿ ನಂತೆಯೇ ತಿರುಗಾಟ ಹೆಚ್ಚು ಮಾಡಿದ್ದಾರೆ. ಬಲವಂತವಾಗಿ ಬಾಲುವನ್ನು ಪುಸ ಲಾಯಿಸಿ, ಅಮ್ಮನನ್ನು ಪೌರಾಣಿಕ ಚಿತ್ರವೊಂದರ ಬೆಳಗಿನ ಆಟಕ್ಕೆ ಕಳುಹಿಸಿದ. ಮನೆಯಲ್ಲಿ ಉಳಿದವಳು ಚಂಪ ಒಬ್ಬಳೇ. ತನ್ನ ಕೆಲಸ ಒಂದೆರಡು ಗಂಟೆಗಳಲ್ಲಿ ಮುಗಿಸಿಬಿಡಬೇಕು.

"ಚಂಪ, ನನಗೊಂದು ಲೋಟ ನೀರು ತಂದುಕೊಡ್ತೀಯ?" ಎಂದು ಮೇಲಿ ನಿಂದಲೇ ಕೂಗಿ ಕೇಳಿದ.

ಚಂಪ, ಒಂದು ಚೊಂಬಿನಲ್ಲಿ ನೀರು ಹಿಡಿದು ಮೇಲೊಂದು ಲೋಟ ಇಟ್ಟುಕೊಂಡು ಮೇಲಕ್ಕೆ ಬಂದಳು. ನೀರು ಬಗ್ಗಿಸಿಕೊಡುತ್ತಾ-"ಇನ್ನೂ ಡ್ರೆಸ್ಸೇ ಮಾಡ್ಕೊಂಡಿಲ್ಲ. ಕಾಲೇಜಿಗೆ ಹೋಗೋಲ್ವ?" ಎಂದಳು.

"ಈವತ್ತು ನನಗೆ ಮೊದಲೆರಡು ಪೀರಿಯಡ್ ಕ್ಲಾಸಿಲ್ಲ. ಸ್ವಲ್ಪ ಲೇಟಾಗಿ ಹೋಗ್ತೀನಿ," ಎಂದು ಬೇಕಿಲ್ಲದಿದ್ದರೂ ನೀರು ಕುಡಿದು ಮುಗಿಸಿ, ಲೋಟ ಹಿಂದಕ್ಕೆ ಕೊಟ್ಟು-"ಕೂತ್ಕೋ ಚಂಪ, ನಿಂಗೆ ಈವಾಗ ಏನೂ ಕೆಲಸ ಇಲ್ಲ ತಾನೆ?" ಎಂದ.

"ಇಲ್ಲ."

"ಹಾಗಾದ್ರೆ ಕೂತ್ಕೋ. ಒಂದೆರಡು ವಿಷಯ ನಿನ್ನ ಹತ್ತಿರ ಮಾತಾಡ್ಬೇಕು."

ಮಾತನ್ನು ಹೇಗೆ ಆರಂಭಿಸಬೇಕೆಂದು ಮಾಧುವಿಗೆ ತೋಚದಾಯಿತು. ಎದ್ದು ಕಪಾಟಿನಲ್ಲಿದ್ದ ಒಂದು ಪುಸ್ತಕ ತೆಗೆದುಕೊಂಡು ಮಂಚದ ಮೇಲೆ ಕುಳಿತು ಪುಟ ತಿರುವತೊಡಗಿದ. ಚಂಪ ಅವನನ್ನೇ ನೋಡುತ್ತಾ ಕುಳಿತಳು. ಮಾಧು ನೇರವಾಗಿ ಮಾತನಾಡಿಬಿಡುವುದೇ ಸರಿ ಎಂದು ತೀರ್ಮಾನಿಸಿದ.

"ಚಂಪ, ಅಮ್ಮಂಗೆ ನಾವು ಮದುವೆ ಮಾಡ್ಕೋಬೇಕೂಂತ ಆಸೆ."

"ಹೂಂ."

"ಅದಕ್ಕೆ ನಿನ್ನ ಅಭಿಪ್ರಾಯ ಏನು?"

"ಅಭಿಪ್ರಾಯ ಅಂದ್ರೆ? ದೊಡ್ಡವರೆಲ್ಲಾ ಏನು ನಿಶ್ಚಯಿಸಿದ್ರೆ ಅದೇ"

"ಅದು ಹೇಗಾಗುತ್ತೆ? ನಾಳೆ ಒಟ್ಟಿಗೆ ಬಾಳಿ ಬದುಕಬೇಕಾದವ್ರು ನಾವು. ನಾವು ಒಬ್ಬರನ್ನೊಬ್ರು ಬಯಸಿದರೆ ಮಾತ್ರ ಈ ಮದುವೆ ಸಾಧ್ಯ. ಅದಕ್ಕೇ ನಿನ್ನ ಸ್ಪಷ್ಟ ಅಭಿಪ್ರಾಯ ಏನೂಂದೆ" ಎಂದ. ಪುಸ್ತಕದಿಂದ ತಲೆ ಎತ್ತದೆ. ಚಂಪ ಮಾತಾಡಲಿಲ್ಲ. ಯೋಚಿಸುತ್ತಿರಬಹುದೆ ಅಥವಾ ಉತ್ತರ ಕೊಡಲು ನಾಚಿಕೆಯಿರಬಹುದೆ ಎಂದು ಓರೆಗಣ್ಣಿನಲ್ಲಿ ಅವಳೆಡೆಗೆ ನೋಡಿದಾಗ, ಕಾಲಿನ ಹೆಬ್ಬೆರಳಿನಿಂದ ನೆಲ, ಮೇಲೆ ಏನೋ ಗೀಚುತ್ತಾ, ಅದನ್ನೇ ನೋಡುತ್ತೇ ಕುಳಿತಿದ್ದಳು. ಅವನೇ ಹೇಳಿದ-

"ನಾನು ನಿನ್ನ ಹಿತೈಷಿ ಚಂಪ. ನೀನು ಅಂದ್ರೆ ನಂಗಿಷ್ಟ ಇದೆ, ವಿಶ್ವಾಸ ಇದೆ. ಏನು ಹೇಳಬೇಕು ಅನ್ನಿಸುತ್ತೋ ಅದನ್ನ ನೇರವಾಗಿ ಹೇಳು, ಇದರಲ್ಲಿ ಬಲವಂತದ ಪ್ರಶ್ನೆಯಿಲ್ಲ."

ಚಂಪಳಿಂದ ಉತ್ತರವಿಲ್ಲ. ಎದ್ದು ಚಂಪಳಿಗೆ ಎದುರಾಗಿ ನಿಂತು ಮೃದುವಾದ ಮೆಲುವಾದ ದನಿಯಲ್ಲಿ "ನೀನು ನನ್ನನ್ನು ಪ್ರೀತಿಸ್ತಿದೀಯಾ ಚಂಪಾ?" ಎಂದ.

"ನೀನು ನನ್ನನ್ನು ಪ್ರೇಮಿಸ್ತಾ ಇಲ್ಲ ಅಂತ ನನಗೊತ್ತು. ನಿನ್ನ ಹೃದಯ ಎಲ್ಲಿದೆ ಅಂತ್ಲೂ ಗೊತ್ತು."

ಅಸೂಯೆಯಿಂದ ಮಾತನಾಡುತ್ತಿದ್ದಾನೆಯೇ? ಅಥವಾ ನೋವಿನ ನುಡಿಯೇ? ಎಂದು ಬೆರಳ ಸಂದಿನಿಂದ ನೋಡಿದಳು ಚಂಪ. ಆದರೆ ಆ ನಿರ್ಮಲ ಮುಖದಲ್ಲಿ ಅಂತಹ ಯಾವ ಭಾವನೆಯೂ ಕಾಣಲಿಲ್ಲ.

"ನೀನು ಹೇಳದಿದ್ರೂ ಪರ್ವಾಗಿಲ್ಲ. ಆದ್ರೆ ನನ್ನ ಇಷ್ಟ ಹೇಳ್ತೀನಿ ಕೇಳು. ನನಗೆ ನಿನ್ನನ್ನ ಮದುವೆಯಾಗೋದು ಖಂಡಿತ ಇಷ್ಟವಿಲ್ಲ. ಪ್ರೇಮ, ಪ್ರೀತಿ ಬಲವಂತದ ವಸ್ತುಗಳಲ್ಲ ಅಂತ ನಂಬುವವನು ನಾನು ದೊಡ್ಡವ್ರು ಹೇಳ್ತಾರೇಂತ, ಇಲ್ಲ ನಮ್ಮಮ್ಮನ ಮನಸ್ಸಿಗೆ ನೋವಾಗುತ್ತೇಂತ ನಾನು ಏನೂ

ನಿರ್ಧಾರ ಮಾಡಬೇಕಾದ್ದಿಲ್ಲ. ನಾನು ದೊಡ್ಡ ಆಸ್ತಿಗೆ ಒಬ್ಬನೇ ಹಕ್ಕುದಾರ ಅಂತ ನೀನು ಆಸೆಪಡೋವ್ಳಲ್ಲ ಅಂತ್ಲೂ ನನಗೆ ಗೊತ್ತು. ನಿನಗೆ ಯಾರು ಇಷ್ಟವೋ ಅವರೇ ಸಿಗುವ ಏರ್ಪಾಡೂ ಮಾಡ್ತೀನಿ ... ಹೋಗ್ಲಿ, ಇಷ್ಟಾದ್ರೂ ಹೇಳು ಚಂಪ, ನೀನೂ ಬಾಲೂ ಏನು ನಿಶ್ಚಯಿಸಿದ್ದೀರಿ?"

ಚಂಪ ನಡುಗಿಬಿಟ್ಟಳು. ಸಿಕ್ಕಿಬಿದ್ದ ಕಳ್ಳನಂತಾಗಿತ್ತು. ನಾಲಗೆ ತಡವರಿಸಿತು

"ನಾನು ಬಾಲೂನ್ನ ..."

"ಚಂಪಾ, ನಾನು ಮಗು ಅಂತ ತಿಳ್ಕೊಂಡಿದೀಯಾ? ಒಂದೇ ಜಾವಣೆ ಕೆಳಗಿದ್ರೂ ಯಾರು ಏನು ಅಂತ ತಿಳ್ಕೊಳ್ದೆ ಇರುವಷ್ಟು ನಾನು ಮುಗ್ಧನಲ್ಲ."

"ನೀವು ... ನೀವು ... ನನ್ನ ಕ್ಷಮಿಸ್ಬೇಕು ಮಾಧು" ಎಂದು ಎದುರಿದ್ದ ಅವನ ಕೈ ಹಿಡಿದುಕೊಂಡಳು

"ಕ್ಷಮಿಸೋಕ್ಕೆ ಏನಾಗಿದೆ? ನಾನು ಬಾಲು ಹತ್ತಿರ ಮಾತಾಡ್ತೀನಿ."

"ನಿಮ್ಮಮ್ಮ ನನ್ನ ಕ್ಷಮಿಸೋಲ್ಲ"

"ಮತ್ತೆ ಕ್ಷಮೆಯ ಮಾತು ಯಾಕಾಡ್ತೀಯ? ನೀನೇನು ತಪ್ಪು ಮಾಡಿದ್ದಿ? ನಮ್ಮಮ್ಮ ಇಷ್ಟಪಟ್ಟಳೂಂತ ನೀನು ಇಷ್ಟಪಡದಿದ್ರೆ ಅದು ತಪ್ಪಲ್ಲ. ಅಮ್ಮನಿಗೆ ನಾನು ಹೇಳ್ತೀನಿ."

ಒಂದು ನಿಮಿಷ ತಡೆದು-"ನೀನು ಬಾಲೂನ್ನ ಪ್ರೇಮಿಸುವುದರಿಂದ ನನಗೆ ನಿಜಕ್ಕೂ ಸಂತೋಷ ಚಂಪಾ. ನಿಮ್ಮಿಬ್ಬರ ಮದುವೆ ನಾನೇ ಮಾಡಿಸ್ತೀನಿ" ಎಂದ

"ನಿಮ್ಮದೆಷ್ಟು ದೊಡ್ಡ ಮನಸ್ಸು" ಎಂದು ಪಿಸುಗುಟ್ಟಿದಳು. ಮಾಧು ಮೆಲುವಾಗಿ ನಕ್ಕ

"ನೀನಿವತ್ತೇ ಸಂಜೆ ಮನೆಗೆ ಹೊರಟ್ಹೋಗು, ಅಮ್ಮ ಕೇಳಿದ್ರೆ ನನಗೆ ಹೇಳಿದ್ದೀನಂತ ಹೇಳು ಮಿಕ್ಕಿದ್ದೆಲ್ಲ ನನಗೆ ಬಿಡು."

ಚಂಪ ದಿಗ್ಭ್ರಾಂತಳಾದಳು. ಮಾಧು ಮನಶ್ಶಾಸ್ತ್ರಜ್ಞನೂ ಹೌದೆ, ಎಂದು ಯೋಚಿಸಿದಳು. ತಾವು ಯಾರ ಎದುರಿಗೂ ಪ್ರೇಮ ಪ್ರದರ್ಶನ ಮಾಡಿರಲಿಲ್ಲ. ಬಾಲುವೂ ಒಂದು ಬಾರಿಯಾದರೂ ತನ್ನನ್ನು ಕಂಡರೆ ತುಂಬಾ ಇಷ್ಟ ಎನ್ನುವಂತೆ ನಡಿದುಕೊಂಡಿರಲಿಲ್ಲ. ಆದರೆ ಈಗ ಮಾಧುವಿನ ಮಾತು ತನಗೆ ಆನಂದ ಕೊಡುತ್ತಿರಬೇಕಾದರೆ ತನ್ನ ಪ್ರೇಮ ಬಾಲುವಿನಲ್ಲಿ ಎಂಬುದು ಖಚಿತ

* * *

ಮಾಧು ಕಾಲೇಜಿಗೆ ಹೊರಟುಹೋದ.

ಊಟ ಮುಗಿಸಿ, ಮಲಗುವ ಪ್ರಯತ್ನದಲ್ಲಿದ್ದ ಬಾಲುವಿಗೆ ಮಾಧುವಿನಿಂದ ಫೋನ್ ಬಂದಿತ್ತು, ಕಾಲೇಜಿನ ಬಳಿ ಕೂಡಲೆ ಬಂದು ನೋಡಬೇಕೆಂದು. ಕಾಲೇಜಿಗೆ ಬಂದ ಬಾಲುವಿನೊಂದಿಗೆ ತನ್ನ ಚಂಪಳ ಮಾತುಕತೆ ತಿಳಿಸಿ, ಚಂಪ ಪ್ರೀತಿಸುತ್ತಿರುವುದು ಬಾಲುವನ್ನು. ಅವರಿಬ್ಬರೂ ಮದುವೆಯಾದರೆ ಚೆನ್ನ

ಎಂದು ಮಾಧು ಒತ್ತಾಯ ಮಾಡಿದ.

"ಮಾಧು ನನ್ನ ತಪ್ಪು ತಿಳ್ಕೋತಾ ಇದ್ದಿ. ಆನು ಅವಳ ಜೊತೆಯಲ್ಲಿ ಸ್ವಲ್ಪ ಫ್ರೀಯಾಗಿದ್ದರೆ ನೀನು...."

"ನೋಡು ಬಾಲು, ಚರ್ಚೆ ಮಾಡೋದು ಬೇಡ. ಅಥವಾ ತಮಾಷೆಗೆ ಇದು ಸಮಯವಲ್ಲ. ಅವಳು ಪ್ರೇಮಿಸೋದು ನಿನ್ನನ್ನು. ನನಗೂ ಅವಳನ್ನು ಮದುವೆ ಯಾಗೋ ಇಷ್ಟವಿಲ್ಲ. ಇನ್ನು ನಿನ್ನಿಷ್ಟ. ನಿಮ್ಮಿಬ್ಬರ ಇಷ್ಟ. ಅವಳ ಭವಿಷ್ಯ ನಿನ್ನ ಕೈಲಿದೆ."

"ನೀನು ಇದೇ ಕಾರಣವಾಗಿ ಅವಳನ್ನು ಬೇಡಾ ಅಂತಾ ಇಲ್ವಲ್ಲಾ?"- ಅನುಮಾನದಿಂದ ಕೇಳಿದ ಬಾಲು.

"ಫೂಲ್. ನನ್ನನ್ನು ಏನಂದುಕೊಂಡಿದೀಯಾ?" ಎಂದು ಬೆನ್ನ ಮೇಲೆ ಹೊಡೆದು, "ಇಲ್ಲಿಗೆ ಬಂದಾಗಿನಿಂದ ನನಗ್ಗೊತ್ತು ಚಂಪ ನನಗೆ ಸರಿಯಾದವಳಲ್ಲ ಅಂತ. ಆದ್ರೆ ಅಮ್ಮ ಇಷ್ಟಪಡ್ತಾಳೇಂತ ಸುಮ್ನೆ ಇದ್ದೆ. ಅದೂ ಒಳ್ಳೇದಕ್ಕೆ ಆಯ್ತು. ನೀನಿಲ್ಲಿರೋವಾಗ್ಲೆ ಅವಳು ಇಲ್ಲಿ ಬಂದು ಇದ್ದಳು ಒಂದೇ ಒಂದು ಸಂದರ್ಭದಲ್ಲಿ ಕಂಡುಹಿಡಿದ್ಬುಬಿಟ್ಟೆ, ಅವಳು ನಿನಗೆ ಮನಸೋತಿದ್ದಾಳೆ ಅಂತ. ಅದಕ್ಕೆ ನಿಮ್ಮಿಬ್ಬರನ್ನೂ ಒಟ್ಟಿಗೆ ಓಡಾಡೋಕೇಂತ ಬಿಟ್ಟು, ನಾನು ಸುಸ್ತಿನ ನಾಟಕ ಹೂಡಿ ಹಿಂದೆ ಉಳಿದೆ. ನಾನು ನಿನ್ನ ತಪ್ಪು ತಿಳೀತೀನಾ?"

"ನನ್ನ ಹೊಗಳಿಕೆ ಆಮೇಲೆ ಈಗ ನೀನು ಗ್ರೀನ್ ಸಿಗ್ನಲ್ ಕೊಡ್ತೀಯೋ ಇಲ್ವೋ?"

"ಸ್ವಲ್ಪ ಯೋಚನೆ ಮಾಡೋಕೆ ಅವಕಾಶ ಕೊಡು."

"ಈ ಮೂರು ತಿಂಗಳು ಮಾಡಿದ್ದು ಸಾಲ್ದಾ? ಬಿಂಕ, ಬಿಗುಮಾನ ಸಾಕು. ಈಗಲೇ ನೀನು ಊರಿಗೆ ನಡಿ. ಇನ್ನೊಂದು ವಾರದಲ್ಲಿ ಎಲ್ಲಾ ಸೆಟ್ಲ್ ಆಗಬೇಕು."

ಖುಷಿಯಾದ ಮನದಿಂದ ಮನೆಗೆ ಹಿಂತಿರುಗಿ ಬಂದ ಬಾಲು, ಸರಸರ ಸಿದ್ಧವಾಗಿ ಊರಿಗೆ ಹೊರಡಲು ಅನುವಾದ. ಅತ್ತೆಯ ಬಳಿ ಅವಸರದ ಕೆಲಸದಿಂದ ಊರಿಗೆ ಹೊರಡುತ್ತಿರುವುದಾಗಿಯೂ ಇನ್ನೆರಡು ದಿನದಲ್ಲಿ ಮತ್ತೆ ಬರುವುದಾಗಿಯೂ ತಿಳಿಸಿದ. ಈ ರೀತಿ ಅವನು ಹೋಗುವುದು, ಬರುವುದು ಅಪರೂಪವಲ್ಲದ್ದರಿಂದ ನಾಗಮ್ಮನವರಿಗೆ ಏನೂ ಅನ್ನಿಸಲಿಲ್ಲ.

* * *

ಸಾಯಂಕಾಲ ಮನೆಗೆ ಬಂದಾಗ ಮಾಧುವಿಗೆ ಮನೆ ಭಣಭಣ ಎನ್ನಿಸಿತು. ತಾನು ಹೇಳಿದ್ದಂತೆಯೇ ಬಾಲು, ಚಂಪ ಇಬ್ಬರೂ ಹೊರಟು ಹೋಗಿದ್ದರು. ಸುಮಾ ತಂದೆಯೊಡನೆ ತೋಟದಲ್ಲಿದ್ದಳು.

ಸೋಫಾದಲ್ಲಿ ಕುಳಿತ ಮಾಧು ಕಾಲು ಉದ್ದವಾಗಿ ಚಾಚಿದಂತೆ ಚಾಚುತ್ತಾ "ಅಮ್ಮಾ" ಎಂದು

ಕರೆದ. ಆ ಕರೆಗೆ, ಆತ್ಮೀಯ ಕೂಗಿಗೆ ಆಕೆಯ ಹೃದಯ ಅರಳುತ್ತಿತ್ತು.

"ಕೂತ್ಕೋ ಬಾಮ್ಮಾ ಇಲ್ಲಿ, ತಿಂಡಿ ಕಾಫಿ ಆಮೇಲಾಗಲಿ" ಎಂದು ಆಹ್ವಾನಿಸಿದ. ಆದರೆ ತಾಯಿ ತಿಂಡಿ ಕಾಫಿ ಹಿಡಿದೇ ಬಂದು ಅವನ ಪಕ್ಕದಲ್ಲೇ ಕುಳಿತರು. ಅವರ ಕೈಯಿಂದ ತಿಂಡಿ ತಟ್ಟೆ ತೆಗೆದುಕೊಳ್ಳುತ್ತಾ ಕೇಳಿದ, ಮಾಧು

"ಚಂಪ ಮನೆಗೆ ಹೊರಟುಹೋದಳೇನು?"

"ಈಗ ಸಾಯಂಕಾಲ ಹೋದಳು. ನಿನಗೆ ಬೆಳಿಗ್ಗೆ ಹೇಳಿದ್ಲಂತಲ್ಲಾ."

"ಹೌದು ಹೇಳಿದ್ಲು. ಅಮ್ಮ, ಇದ್ದಕ್ಕಿದ್ದ ಹಾಗೇ ಅವಳನ್ನು ಯಾಕಮ್ಮಾ ಇಲ್ಲಿ ಕರೆಸಿದೆ?"

"ಸುಮ್ಮನೆ, ನಾಲ್ಕುದಿನ ನಮ್ಮನೇಲಿ ಇರಲೀಂತ "

"ಬೇರೆ ಮನೆ ಹೆಣ್ಣು ಮಕ್ಕಳನ್ನ ಸುಮ್ಮ ಸುಮ್ಮನೆ ಹಾಗೆ ಕರೆಸ್ತಾರೇನಮ್ಮಾ ಯಾರಾದ್ರೂ? ನಿನ್ನ ಮನಸ್ಸಿನಲ್ಲಿ ಬೇರೆ ಏನೋ ಇವೆ ನೀ ನನಗೆ ಹೇಳ್ತಾ ಇಲ್ಲ "

"ಏನೋ ಇದು ಮಾಧು ಹೊಸದಾಗಿ ಮಾತಾಡ್ತಿದ್ದಿ? ನೀನು ಅಮೇರಿಕಾಗೆ ಹೋಗೋ ಮುಂಚಿನಿಂದಲೂ ಚಂಪ ನಿನ್ನ ಹಂಡತಿಯಾಗೋಳು ಅಂದ್ಕೊಂಡಿರ್ಲಿಲ್ವಾ? ನೀನು ಬಂದ್ಮೇಲೆ ಒಂದೆರಡು ದಿನ ಒಟ್ಟಿಗೇ ಇರ್ಲೀಂತ ಕರೆಸ್ದೆ, ಏನೀಗ?" ಎಂದು ಸಮರ್ಥಿಸಿಕೊಂಡರು

"ನನಗಿಷ್ಟವಿರಲಿ, ಬಿಡಲಿ?!"

"ಯಾವುದಕ್ಕೆ ನಿನ್ನಿಷ್ಟ. ಅವಳಿಲ್ಲಿ ಇರೋಕ್ಕಾ?"

"ಅಲ್ಲಮ್ಮ, ಮಹರಾಯಳಾಗಿ ಇಲ್ಲಿರಲಿ. ಅದಕ್ಕಲ್ಲ, ಅವಳನ್ನ ನಾನು ಮದುವೆಯಾಗೋಕೆ ನನ್ನಿಷ್ಟ ಬೇಡ್ವಾ?"

"ನೀನು ಇಷ್ಟಪಡದೆ ಇರೋಕೆ ಏನಾಗಿದೆಯೋ ಅವಳಿಗೆ? ದಿವ್ಯವಾದ ಹುಡುಗಿ "

"ನಿನ್ನ ಲೆಖ್ಖದಲ್ಲಿ ಇರಬಹುದಮ್ಮ. ಆದರೆ ನನ್ನ ಮನಸ್ಸಿಗೆ ಯಾಕೋ ಇಲ್ಲ."

"ಸರಿಯಾಗೇ ಇದೀ ತಾನೇ ಮಾಧು?" ಎಂದು ಅವನ ಪಕ್ಕಕ್ಕೆ ಸರಿದು ಎದೆಯ ಮೇಲೆ ಕೈಯಿಟ್ಟರು.

ಅವನು ನಸುನಕ್ಕ- "ನಾನವತ್ತಿನಿಂದ ಹೇಳಬೇಕೂಂತಿದ್ದೆ. ಅದೇ ಚಂಪಾ ಇಲ್ಲೇ ಇದ್ದದ್ದರಿಂದ ಆಗ್ಲಿಲ್ಲ. ಈವತ್ತು ಹೇಳ್ತೀದೀನಮ್ಮ, ನಿನಗೆ ಬೇಜಾರಾಗುತ್ತೆ, ನಾನೇನ್ಮಾಡ್ಲಿ, ನನಗೆ ಅವಳು ಇಷ್ಟವಿಲ್ಲ" ಎಂದು ತಿಂಡಿ ಮುಗಿಸಿ ತಟ್ಟೆಯನ್ನು ಅಲ್ಲೇ ಟೀಪಾಯಿಯ ಮೇಲಿಟ್ಟು, ಕಾಫಿ ಲೋಟ ಕೈಗೆ ತೆಗೆದುಕೊಂಡ.

ನಾಗಮ್ಮ ದಂಗಾದರು. ಅವರ ಮನ ಸ್ತಬ್ಧವಾಯಿತು. ಮಾಧುವಿನ ಮಾತೆಂದರೆ ಯಾವಾಗಲೂ ಕಡ್ಡಿ ತುಂಡು ಮಾಡಿದಂತೆ ಎಂದು ಅವರು ಬಲ್ಲರು. ಚಂಪ ತಪ್ಪಿ ಹೋಗುತ್ತಾಳೆ ಎನ್ನುವುದಕ್ಕಿಂತ, ಮಗ ಮದುವೆಯೆಡೆಗೆ ಸುಮುಖನಾಗುವ ಲಕ್ಷಣ ಗಳೇ ಶೂನ್ಯವೆಂದು ನಡುಗಿದರು. ಅವರಿಗೆ ದುಃ

ಖವಾಗಿ ಅಳಬಹುದು, ತಾನು ಯಾವ ರೀತಿ ಸಮಾಧಾನ ಹೇಳಬೇಕೋ ಎಂದು ಚಿಂತಿಸುತ್ತಿದ್ದ ಮಾಧು, ಅವರು ನಿರ್ವಿಣ್ಣ ರಾಗಿ, ಮೌನವಾಗಿ, ಶೂನ್ಯದೊಳಕ್ಕೆ ನೋಡುತ್ತಾ ಕುಳಿತಿದ್ದನ್ನು ಕಂಡು ಆಶ್ಚರ್ಯ ಪಟ್ಟ.

ಆಕೆ ಒಂದು ಕ್ಷಣ ತಡೆದು- ಏನೋಪ್ಪ, ಮೊದಲಿನಿಂದಲೂ ನಮ್ಮ ಮನೆತನ ಸಂಪ್ರದಾಯಕ್ಕೆ ಹೆಸರಾದ್ದು ಈಗ ಕಂಡವರ ಹುಡುಗೀನ ಮನೆ ತುಂಬಿಸ್ಕೋತೀವೀಂತ ಇಟ್ಕೊಂಡು, ಕಡೇ ಗಳಿಗೆಯಲ್ಲಿ ಕೈಬಿಟ್ರೂಂತ ಮುಖಕ್ಕೆ ಮಸಿ ಬಳಿಸಿಕೊಳ್ಳೋ ದಿನ ಬಂತು ಎಂದರು ಜುಗುಪ್ಸೆಯಿಂದ ನಿನ್ನಿಂದ ಮನೆಯ ಕೆಟ್ಟ ಹೆಸರು ಕೆಟ್ಟಿತು ಎಂಬಂತಿತ್ತು ಅವರ ಧೋರಣೆ

'ಅದಾಮ್ಮ ನಿನ್ನ ಹೆದರಿಕೆ? ಅದಕ್ಕೇನು, ಈಗ್ಲೂ ಮನೆ ತುಂಬಿಸ್ಕೊಳ್ಳೋಣ ನಮ್ಮ ಬಾಲೂಗೆ ತಂದುಕೊಂಡ್ರೆ ಆಯ್ತು - ತಾಯಿಯ ಜಿಗುಪ್ಸೆಯ ಮಾತು ತನಗೆ ತಾಗಲೇ ಇಲ್ಲವೆನ್ನುವಂತೆ, ಹಗುರವಾಗಿ ಗಂಭೀರ ಪರಿಹಾರ ಸೂಚಿಸಿದ ಮಾಧು

ಹುಂ, ಅವನೊಬ್ಬ ಬಂದು ಇಲ್ಲಿ. ಸೇರ್ಕೊಂಡ ಎಂದು ಹುಬ್ಬು ಗಂಟಿಕ್ಕಿದರು

ಅಮ್ಮ, ಯಾಕೆ ಹಾಗೆ ಮಾತಾಡ್ತೀ? ಬಾಲು ಏನು ಮಾಡಿದ ಪಾಪ? ನನ್ನಿಂದ ಬರೋ ಕೆಟ್ಟ ಹೆಸರಿನಿಂದ ನಮ್ಮ ಮನೆ ಕಾಯೋಕ್ಕೇಂತ ನಾನು ಅವನ ಹೆಸರು ಹೇಳಿದೆ

ನಿನ್ನಿಷ್ಟ, ಏನಾದ್ರೂ ಮಾಡ್ಕೋ ಹೆತ್ತ ತಾಯಿ ನೊಂದ್ಕೋತಾಳೆ, ಅನ್ನೋದು ನಿಂಗೆ ಇಲ್ದಿರೋವಾಗ, ನಾನೇನು ಹೇಳಿ ತಾನೇ ಪ್ರಯೋಜನ? ನಿನ್ನ ವಿಪರೀತ ಬುದ್ಧೀನೆಲ್ಲಾ ಅವರ ಕಿವಿಗೂ ಅಷ್ಟು ಹಾಕ್ಬಿಡು. ನೀನುಂಟು ಅವರುಂಟು ನಿಮ್ಮ ತಾಯಿಯ ನೋವು ಯಾರಿಗೆ ಬೇಕಾಗಿದೆ' ಎಂದು ಎದ್ದರು

ನಿನ್ನ ಮಾಧುಗೆ ಬೇಕಿದೆ ಅಮ್ಮ ಯೋಚನೇ ಮಾಡ್ಬೇಡ, ನಿನ್ನ ಮಗ ಗೃಹಸ್ಥನಾಗೋ ದಿನ ಹತ್ತಿರ ಬರ್ತ ಇದೆ ಎನ್ನುತ್ತಾ, ಆಕೆಯ ಸೀರೆ ಎಳೆದು ಕೂರಿಸಿದ ''ಅಣ್ಣನ ಹತ್ತಿರ ನೀನೇ ಹೇಳಮ್ಮ, ನೀನು ತಾನೇ ಅವರಿಗೆ ಸೆಕ್ರೆಟರಿ!' ಎಂದು ತಾಯಿಯನ್ನು ಛೇಷ್ಟೆ ಮಾಡಿದ

ತಾಯಿ ನಗಲಿಲ್ಲ ಅವರ ಭಾವನೆಗಳು ಚೆಲ್ಲಾಪಿಲ್ಲಿಯಾಗಿ ಚೆದರಿದ್ದುವು ಆಕೆ ಇಷ್ಟು ದಿನ ಪೋಣಿಸಿದ್ದ ಮುತ್ತಿನ ಮಾಲೆಯನ್ನು ದಾರ ಕಡಿದು ಚೆಲ್ಲಿದ್ದ, ಮಾಧು ಮುತ್ತನ್ನು ಆರಿಸಲಾರದೆ ದಿಗ್ಭ್ರಮೆಯಲ್ಲಿ ಸುಮ್ಮನೆ ನೋಡುತ್ತಾ ನಿಂತುಬಿಟ್ಟಿದ್ದರು ಅವನೇ ಆರಿಸಿ ಮತ್ತೆ ಎತ್ತಿ ಕೊಟ್ಟರೆ ಮತ್ತೆ ಪೋಣಿಸಬಲ್ಲರೋ ಏನೋ. ಆ ದಿಗ್ಭ್ರಮೆಯಲ್ಲೂ ನಿಚ್ಚಳವಾಗಿ ಕೇಳಿಸುತ್ತಿತ್ತು ಅವನ ಆ ವಾಕ್ಯ 'ನಿನ್ಮಗ ಗೃಹಸ್ಥ ಆಗೋ ದಿನ ಹತ್ರ ಬರ್ತಾ ಇದೆ' ಅಂದರೆ ಬೇರೆ ಯಾವುದಾದರೂ ಹುಡುಗಿಯನ್ನು ನೋಡಿ ಮೆಚ್ಚಿದ್ದಾನೆಂದೆ? ತಮಗಷ್ಟೇ ಬೇಕು. ತಮ್ಮ ಅಂತಸ್ತಿಗೆ ಅನುಗುಣವಾದ ಒಂದು ಹುಡುಗಿ

ಅವನ ಮನ ಒಲಿಸಿದರೆ ಸಾಕಾಗಿತ್ತು

ಅವರ ಆಲೋಚನೆ ಕಡಿಯುವಂತೆ ಮಾಧು 'ನಾನು ನಾಳೆಯೇ ಯಶೋದತ್ತೆ ಹತ್ತಿರ ಹೋಗ್ಬರ್ತೀನಿ ಸಾಧ್ಯವಾದ್ರೆ ಗಿರಿರಾಯರನ್ನೂ ಕರ್ಕೊಂಡು' ಎನ್ನುತ್ತಿದ್ದಾಗ, ರಾಯರು ಸುಮಳೊಡನೆ ಒಳಗೆ ಬಂದರು

ದೀಪ ಹಚ್ಚಿತು ಸುಮ ತನ್ನ ದಿನಚರಿಯಂತೆ ಇಲ್ಲ ಕಡೆಯಲ್ಲೂ ಊದುಬತ್ತಿ ಹಚ್ಚಿದಳು ಆದರೆ ಮೇಲೆ ಹೋಗಲಿಲ್ಲ ಚಂಪ ಬಂದನಂತರ, ಆ ಕಾರ್ಯಕ್ರಮ ಮೇಲಿನ ಕೋಣೆಯಲ್ಲಿ ಚಂಪಳಿಂದ ನಡೆಯುತ್ತಿತ್ತು ಇಂದು ಚಂಪ ಇಲ್ಲವೆಂದು ತಿಳಿದರೂ ಸುಮ ಅದನ್ನು ತಾನು ಮಾಡುವ ಅಗತ್ಯವಿಲ್ಲವೆನಿಸಿ ಸುಮ್ಮನಿದ್ದಳು

ಮಲಗುವ ಮುನ್ನ ತಂದೆಯ ಬಳಿ ಒಂದು ಘಳಿಗೆ ಕುಳಿತು ಹೊರಡುವ ಪರಿಪಾಠ ವೇಣುವಿನದು ಇಂದು ಹಾಗೆ ಹೋದಾಗ, 'ಏನೆಲ್ಲಾ ನಡೆಸಿದ್ದಿ ವೇಣು? ನಿಮ್ಮಮ್ಮ ಹೇಳಿದ್ಲು' ಎಂದರು ತಂದೆ ಅದು ಮೆಚ್ಚುಗೆಯೋ,ಛರ್ತ್ಸನೆಯೋ ತಿಳಿಯಲಿಲ್ಲ

'ತಪ್ಪಾಗಿದ್ರೆ ಕ್ಷಮಿಸೀಣ್ಣ ಮನಸ್ಸಿಲ್ದೇ ಇದ್ಮೇಲೆ ಬಲವಂತ ಮಾಡ್ಲ ಬಾರ್ದೂಂತ ಅಣ್ಣ ಸೂಕ್ಷ್ಮವಾಗಿ ನೋಡಿದ್ರಲ್ಲಿ ಬಾಲುಗೆ ಇಷ್ಟವಿದ್ದ ಹಾಗಿದೆ ಅದಕ್ಕೇ ನಾನು ಯಶೋದತ್ತೆ ಹತ್ರ ಹೋಗ್ಬರ್ತೀನಿ.'

"ನೀನು ಹೋಗೋದು ಚೆನ್ನಾಗಿರುತ್ತೆ ಅಂತೀಯಾ?"

"ಗಿರಿರಾಯರನ್ನೂ ಕರ್ಕೊಂಡು ಹೋಗಿ ಅತ್ತೆಗೆ ಪರಿಚಯ ಮಾಡಿ ಬರ್ತೀನಿ ಆಮೇಲೆ ಅವರಿಗೆ ಬಿಟ್ಟದ್ದು "

'ಸರಿ, ಇದು ಹೀಗೆ ನಡೀಬಹುದು ಅಂತ ನನಗೆ ಅನ್ನಿಸ್ತು ನಡೀಲಿ, ದೈವೇಚ್ಛೆ ತಿಳಿದವ್ರು ಯಾರು?' ಎಂದರು ಚಂಪಳನ್ನು ತಾನು ನಿರಾಕರಿಸಿರುವುದು ತಂದೆಗೆ ಅಸಮಾಧಾನವಿದ್ದಂತಿಲ್ಲ ಎಂಬುದು ವೇಣುವಿಗೆ ಎಷ್ಟೋ ಧೈರ್ಯಕೊಟ್ಟಿತು ತಾಯಿಯ ಕಡೆ ನೋಡಿದಾಗ, ಅವರು ಮುಸುಕಿಟ್ಟು ಮಲಗಿ ನಿದ್ದೆ ನಟಿಸಿದರು ಅದು ಬೇಕಾಗಿ ಎಂದು ಅವನಿಗೆ ಗೊತ್ತು ತಾನೇನು ಸಾಮಾನ್ಯವಾದ ಷಾಕ್ ಕೊಟ್ಟಿರಲಿಲ್ಲ ಆದರೆ ಏನು ಮಾಡಬಲ್ಲ? ಅಮ್ಮನಿಗೋಸ್ಕರ ಬೇಕಾದ್ದು ಮಾಡಲು ಸಿದ್ಧವಿದ್ದರೂ, ಇಂತಹ ವಿಷಯಗಳಲ್ಲಿ ತನ್ನನ್ನು ಬಯಸದ ಹೆಣ್ಣನ್ನು, ತಾನು ಪ್ರೀತಿಸದ ಹುಡುಗಿಯನ್ನು ಬಲವಂತ ಮಾಡಿ ವಂಚಿಸುವುದಾಗಲಿ, ಆತ್ಮವಂಚನೆ ಮಾಡಿಕೊಳ್ಳುವುದಾಗಲಿ ಅವನಿಗೆ ಸರಿತೋರಲಿಲ್ಲ ಅಮ್ಮನೂ ಅರ್ಥ ಮಾಡಿ ಕೊಳ್ಳುತ್ತಾಳೆ ಬಹುಶಃ ನಿಧಾನವಾಗಬಹುದು ಎಂದುಕೊಳ್ಳುತ್ತಾ ತನ್ನ ಮಂಚ ಸೇರಿದ

* * *

ಮಾಧು ನೆನೆಸಿದ್ದುದಕ್ಕಿಂತಲೂ ಸುಗಮವಾಗಿ ಎಲ್ಲ ನಡೆಯಿತು. ಎರಡೇ ದಿನಗಳಲ್ಲಿ ಮುಖ್ಯ ಕೆಲಸ ಮುಗಿದಿತ್ತು. ಗಿರಿರಾಯರ ಬಳಿ, ತನ್ನ ಸೋದರತ್ತೆಯ ಮಗ ಚಂಪಳನ್ನು ನೋಡಿ ಮೆಚ್ಚಿದ್ದಾನೆಂದೂ, ಅಭ್ಯಂತರವಿಲ್ಲದಿದ್ದರೆ ಅವನಿಗೆ ಚಂಪಳನ್ನು ಧಾರೆಯೆರೆದು ಕೊಡಬೇಕೆಂದೂ, ಮಾಧು ವಿವರಿಸಿದಾಗ, ಗಿರಿರಾಯರು ಚದುರಂಗದಿಂದ ತಲೆಯೆತ್ತದೆ-"ಸರಿಯಪ್ಪ, ನಮ್ಮ ಅಮ್ಮಯ್ಯ ಯಾರನ್ನ ಒಪ್ಪಿದ್ರೆ ಅವರಿಗೆ ಗಂಟು ಹಾಕೋಕೆ ನಾನು ತಯಾರು" ಎಂದಿದ್ದರು.

"ಹಾಗಾದ್ರೆ ನಿಮ್ಮ ಅಮ್ಮಯ್ಯನ ಕೇಳಿ ಒಪ್ಪಿಗೇನಾ ಅಂತ" ಎಂದಾಗ "ಅಮ್ಮಯ್ಯಾ" ಎಂದು ಒಂದು ಕೂಗು ಹಾಕಿದರು. "ನನ್ನನ್ನು ಏನೂ ಕೇಳೋದು ಬೇಡ" ಎಂದು ಚಂಪ ಒಳಗಿನಿಂದಲೇ ಉತ್ತರ ಕಿರುಚಿದ್ದಳು

"ನಡಿ ಹೋಗೋಣ ಹಾಗಾದ್ರೆ ಈವತ್ತೇ ದಿನ ಚೆನ್ನಾಗಿದ್ದ ಹಾಗಿದೆ" ಎಂದು ಚದುರಂಗದ ಕಾಯಿಗಳನ್ನು ಎತ್ತಿದರು ಗಿರಿರಾಯರು.

"ಸಾರ್, ವಿಷಯ ಪೂರ್ತಿ ತಿಳಿದೇ, ನೀವು... "

"ಸುಮ್ಮನೆ ನಡಿಯಪ್ಪ. ನಿನಗೆ ಗೊತ್ತಿರೋದಕ್ಕಿಂತ ಹೆಚ್ಚು ನನಗೆ ಗೊತ್ತಿದೆ. ಚಂಪ ನನ್ನ ಮಗಳು ಕಣಯ್ಯ. ಎಲ್ಲಾ ಹೇಳಿದ್ದಾಳೆ" ಎಂದು ಮಾಧುವನ್ನು ಅಚ್ಚರಿ ಯಿಂದ ಬಾಯಿಬಿಡುವಂತೆ ಮಾಡಿದರು

"ನಿಮ್ಮ ಮನೆ ವಿಷಯ ಹೊಸದಾಗಿ ನನಗೆ ಹೇಳ್ಬೇನಪ್ಪ. ನಿಮ್ಮ ಮನೆತನದಲ್ಲಿ ಹೆಜ್ಜೆಯಿಟ್ಟು ನನ್ನ ಮಗಳು ನಿಮ್ಮೆಲ್ಲರ ಹಾಗೆ ಆಗ್ಬೇಕು ಅಷ್ಟೆ. ಒಟ್ಟಿನಲ್ಲಿ ನೀನು ತುಂಬಾ ದೊಡ್ಡ ಮನಸ್ಸಿನ ಹುಡುಗ" ಎಂದಿದ್ದರು, ತಾನು ಏನೋ ತ್ಯಾಗ ಮಾಡಿದ್ದಂತೆ.

ಅಲ್ಲಿ ಯಶೋದತ್ತೆಯೂ ಹಾಗೇ, ಬಾಲುವಿನಿಂದ ವಿಷಯ ತಿಳಿದಿದ್ದವರು ತನ್ನನ್ನು ಕೊಂಡಾಡಿದರು. ಮಾಧುವಿಗೆ ಕಚಗುಳಿಯಿಟ್ಟಂತಾಯಿತು. ಬಾಲು ಚಂಪಳನ್ನು ಪ್ರೀತಿಸಿದುದರಿಂದ, ಚಂಪ ಬಾಲುವಿಗೆ ಮನಸೋತುದರಿಂದ ತನಗೆ ಮೀಸಲಾಗಿದ್ದ ಹೆಣ್ಣನ್ನು ಅಪೂರ್ವ ತ್ಯಾಗದಿಂದ ಬಿಟ್ಟು ಕೊಟ್ಟಂತೆಯೇ ಅವಳ ಸಂತೋಷಕ್ಕಾಗಿ ತಾನೇ ಮುಂದೆ ನಿಂತು ಎಲ್ಲಾ ಮಾಡುತ್ತಿರುವ ಆದರ್ಶಮೂರ್ತಿಯೆಂದೂ ಅವರೆಲ್ಲ ಅಭಿಪ್ರಾಯಪಟ್ಟಂತಿತ್ತು. ಅದು ತಪ್ಪು ಎಂದು ತಿಳಿಯಹೇಳುವ ಸಂದರ್ಭವೇ ಬರಲಿಲ್ಲವಾಗಿ, ಸುಮ್ಮನಾಗಿಬಿಟ್ಟಿದ್ದ ಮಾಧು.

ಅತ್ತೆಯ ಮನೆಯ ಆದರ ಪಡೆದು ಬಹಳ ದಿನವಾಗಿತ್ತು. ಬಾಲುವಿನ ತಂಗಿಯರಾದ ಮಲ್ಲಿಕಾ, ರಾಧಿಕಾರಂತೂ ಈ ಮಾವನ ಮಗನನ್ನು ಬಿಟ್ಟು ಸರಿಯಲಿಲ್ಲ. ಅವನು ಬಾಲುವಿನೊಂದಿಗೆ ಕಳುಹಿಸಿದ್ದ ಸೀರೆಗಳು ಪ್ರಪಂಚದಲ್ಲೇ ಅತ್ಯುತ್ತಮವೆನ್ನುವಂತೆ ಮೆಚ್ಚುಗೆ ಹೇಳಿದರು.

ಗಿರಿರಾಯರಿಗೂ ಯಶೋದಮ್ಮ ಮತ್ತು ಅವಳ ಗಂಡನ ಸರಳತೆ ಹಿಡಿಸಿತು. ಅನಂತರಾಯರಿಗೆ

ತಕ್ಕ ಅಕ್ಕ ಎಂದುಕೊಂಡರು. ಒಳ್ಳೆಯ ಬೀಗರು ಸಿಗುವುದೂ ಪೂರ್ವಾರ್ಜಿತ ಪುಣ್ಯ ಎಂದು ಸಂತೋಷಪಟ್ಟರು.

ಎರಡೇ ದಿನಗಳಲ್ಲಿ ಎಲ್ಲಾ ತೀರ್ಮಾನವಾಗಿ, ತನ್ನ ಮದುವೆಯೂ ಇಷ್ಟೇ ಸುಗಮವಾಗಿ ನಡೆಯುವುದಾದರೆ? ಎಂದು ಆಶಿಸಿದ. ಆದರೆ ತನ್ನ ಹುಡುಗಿ ಚಂಪಳಂತಹ ಉತ್ತಮ ಪರಿಸ್ಥಿತಿಯಲ್ಲಿಲ್ಲ, ಎಲ್ಲರೂ ಒಮ್ಮೆಲೆ ಹೂಂಗುಟ್ಟಲು. ಅವಳನ್ನು ಪಡೆಯುವುದು ಅಷ್ಟು ಸುಲಭ ಸಾಧ್ಯವಲ್ಲ. ಅಮ್ಮನೊಂದಿಗೆ ದೊಡ್ಡ ಯುದ್ಧವೇ ಆಗುತ್ತದೊ? ಅಥವಾ ಸಂಧಾನ ಸಾಧ್ಯವೋ?

* * *

ಯಶೋದತ್ತೆಯ ಮನೆಯ ವಿದ್ಯಮಾನಗಳನ್ನು ತಂದೆಗೆ ವಿವರಿಸುತ್ತಿದ್ದ ಮಾಧು, ತನ್ನ ಕಣ್ಣುಗಳನ್ನು ಸುತ್ತಲೂ ಹಾಯಿಸುತ್ತಿದ್ದ ಸುಮಳೆಲ್ಲಿ? ಕಾಣುತ್ತಿಲ್ಲವಲ್ಲಾ ಎಂದು ಅವನ ಅಂತರಂಗ ಯೋಚಿಸುತ್ತಿತ್ತು.

"ಸುಮ ಎಲ್ಲಿ ಕಾಣ್ತಾ ಇಲ್ಲ?" ಯಾರನ್ನೂ ಉದ್ದೇಶಿಸದೆ ಗಾಳಿಯಲ್ಲಿ ಪ್ರಶ್ನೆ ಹಾಕಿದ

ಅಲ್ಲಿಯೇ ಕುಳಿತಿದ್ದ ಅಮ್ಮ ಅವನ ಮಾತೆಲ್ಲಾ ಕೇಳುತ್ತಿದ್ದರೂ, ಅವನ ಈ ಪ್ರಶ್ನೆಗೆ ಕುಟಿಪಿಟ್ಟೆನ್ನಲಿಲ್ಲ. ತಾನು ಚಂಪಳನ್ನು ಮುದುವೆಯಾಗುವುದಿಲ್ಲವೆಂದು ಮೊನ್ನೆ ಹೇಳಿದಾಗಲಿಂದ ಅಮ್ಮ ಮೌನವ್ರತ ಆರಂಭಿಸಿದ್ದಾಳೆ, ತಾನು ಬಂದಾಗಿ ನಿಂದಲೂ ಅಮ್ಮ 'ಏನು' ಎಂದಿಲ್ಲ ಅಣ್ಣನೇ ಉತ್ತರ ಕೊಟ್ಟರು.

"ಅವಳು ರಾಣೋಜಿ ಮನೆಗೆ ಹೋಗಿದ್ದಾಳೆ."

"ಎಷ್ಟೊತ್ತಿಗೆ ಬರ್ತ್ತಾಳೆ? ಹೇಗೆ ಓದ್ತಿದಾಳೆ ಅಣ್ಣ? ಇನ್ನು ಹತ್ತೇ ದಿನ ಇರೋದು ಪರೀಕ್ಷೆ."

"ಅವಳ ವಿಷಯದಲ್ಲಿ ಹೆದರಿಕೆಯಿಲ್ಲ ವೇಣು, ಅವಳು ರ್‍ಯಾಂಕ್ ಸ್ಟೂಡೆಂಟ್. ರಾಣೋಜಿ ಮಗಳು ಅವಳ ಕ್ಲಾಸ್‌ಮೇಟಂತಲ್ಲಾ ಜೊತೇಲಿ ಓದ್ಕೋತೀವೀಂತ ಅಲ್ಲಿಗೆ ಹೋದಳು, ಪರೀಕ್ಷೆ ಮುಗಿಯೋವರ್ಗೂ ಬರೋಲ್ಲ "

"ನೀವು ಒಪ್ಪಿ ಕಳಿಸಿಕೊಟ್ರಾಣ್ಣ?"

"ತಪ್ಪು ಕೆಲಸವಾದ್ರೆ ಬೇಡ ಅನ್ಬೇಕು" ಎಂದರು ಮೊಟಕಾಗಿ.

ಮಾಧುವಿಗೆ ಸುಮಳ ಮೇಲೆ ಅತಿಯಾದ ಕೋಪ ಬಂತು. ತನಗೆ ತಿಳಿಸದೆ, ತಾನಿಲ್ಲದಾಗ ಹೀಗೇಕೆ ಹೊರಟುಹೋಗಬೇಕು? ಬರುಬರುತ್ತಾ ಸೊಕ್ಕು ಜಾಸ್ತಿಯಾಗಿದೆ ಈ ಹುಡುಗಿಗೆ-ಎಂದು ಹಲ್ಲು ಕಡಿದ. ಅವಳನ್ನು ಲಕ್ಷ್ಯಕ್ಕೆ ತಂದುಕೊಳ್ಳದಂತೆ ಚಂಪ-ಬಾಲಚಂದ್ರರ ವಿವಾಹದ ಜವಾಬ್ದಾರಿಯೆಲ್ಲಾ ತನ್ನ ಮೇಲೆಯೇ ಬಿದ್ದಂತೆ ಓಡಾಡಿದ. ಬೇಕೆಂದೇ ಸುಮಳನ್ನು ಒಮ್ಮೆಯೂ ನೋಡಲು ಹೋಗಲಿಲ್ಲ, ಅಲ್ಲದೆ

ಅವನಿಗೆ ಅವಳನ್ನು ಹುಡುಕಿಕೊಂಡು ಊರ್ಮಿಳೆಯ ಮನೆಗೆ ಹೋಗಲು ಇಷ್ಟವೂ ಆಗಲಿಲ್ಲ. ಅವಳು ಕಾಲೇಜಿಗೆ ಬರುವುದಂತೂ ಸಾಧ್ಯವಿರಲಿಲ್ಲ.

ಬಾಲುವಿನ ಮದುವೆ ಸುಮಳ ಪರೀಕ್ಷೆಯ ನಡುವೆಯೇ ಒಂದು ದಿನ ಬಂದಿತು.

ಇದಾವ ಸಮಾಚಾರವೂ ತಿಳಿಯದ ಸುಮ ಪುಸ್ತಕಗಳ ರಾಶಿಯಲ್ಲಿ ಹುದುಗಿ ಹೋಗುತ್ತಿದ್ದಳು. ಊರ್ಮಿಳಾ-ದೇವದಾಸರ ಪ್ರಸಂಗ ಸುಖಪ್ರದವಾಗಿ ಪರ್ಯವಸಾನಗೊಂಡಿತ್ತಾದ್ದರಿಂದ ಊರ್ಮಿಳೆಯ ಮನೆಯಲ್ಲಿ ಈಗ ಸುಖಸಂತೋಷ ತುಳುಕುತ್ತಿತ್ತು. ಹೀಗಾಗಿ ಸುಮಳಿಗೆ ಊರ್ಮಿಳೆಯ ಕೋಣೆಯಲ್ಲಿ ಅರ್ಧ ಭಾಗ ಪಡೆಯಲು ಯಾವ ಸಂಕೋಚವೂ ಆಗಲಿಲ್ಲ.

'ಬ್ರಾಹ್ಮಣರ ಹುಡುಗಿ ಮರಾಠೀ ಮನೆಯಲ್ಲಿ ಅಂತ ನಾಳೆ ಪೇಪರಿನಲ್ಲಿ ಬರುತ್ತೆ ನೋಡು' ಎಂದೂ 'ಜಾತಿ ಕೆಡ್ತಾಯಿದ್ದೀಯಲ್ಲೆ!' ಎಂದೂ 'ಬ್ರಾಹ್ಮಣರ ವಟು ನಿನ್ನನ್ನು ತ್ಯಜಿಸಿಬಿಡ್ತಾನಲ್ಲೇ ಸಖೀ' ಎಂದೂ ಊರ್ಮಿಳಾ ನಾನಾ ರೀತಿಯಾಗಿ ಹಾಸ್ಯ ಮಾಡುತ್ತಿದ್ದರೂ ಸುಮ ನಿಶ್ಚಿಂತೆಯಾಗಿ ಓದುತ್ತಿದ್ದಳು. ಸದಾಕಾಲವೂ ಹರಟೆ, ತಿರುಗುವುದರಲ್ಲೇ ಕಾಲ ಕಳೆಯುತ್ತಿದ್ದ ಗೆಳತಿಯನ್ನು ಒಮ್ಮೊಮ್ಮೆ ಎಚ್ಚರಿಸುತ್ತಾ 'ಕ್ಲಾಸ್ ಬರೋದು ಹಾಳಾಗ್ಲಿ. ಪಾಸಾದ್ರೂ ಮಾಡೋ ಯೋಚ್ನೆ ಮಾಡ್ತೀಯೋ ಇಲ್ವೋ ಊರ್ಮಿ?' ಎಂದು ಬೈಯುತ್ತಿದ್ದಳು.

"ಫೇಲಾದ್ರೆ, ದಾಸು 'ನನಗೀ ಹುಡುಗಿ ಬೇಡ' ಅಂದ್ಬಿಡ್ತಾರಲ್ಲಾ?" ಎಂದು ಅವಳು ಕಣ್ಣು ಮಿಟುಕಿಸಿದರೆ,

"ಛೀ? ಇನ್ನೊಬ್ರಿಗಾಗಿ ಪಾಸ್ ಮಾಡ್ತಾರೇನು? ಆದ್ರೂ ಪಾಸಾದ್ರೆ ತನ್ನ ಹುಡುಗಿ ಗ್ರಾಜ್ಯುಯೇಟ್ ಅಂತ ಅವನಿಗೆ ಸಂತೋಷವಾಗೋಲ್ವೇನು?" ಎಂದು ವಾದಿಸುತ್ತಿದ್ದಳು.

ಹೀಗೆ ಆಗೊಮ್ಮೆ ಈಗೊಮ್ಮೆ ಒಂದೆರಡು ಮಾತನಾಡಿದರೂ ಮತ್ತೆ ಪುಸ್ತಕಗಳ ಮೊರೆಹೊಕ್ಕುಬಿಡುತ್ತಿದ್ದಳು. ಹೃದಯದ ಘೋರ್ಗರೆತ ನಿಂತು ಮನಸ್ಸಿಗೆ ನೆಮ್ಮದಿ ಲಭಿಸಿತು. ರಾಯರ ಮನೆ ಬಿಟ್ಟು ತಾನಿಲ್ಲಿದ್ದೇನೆಂಬ ಗಮನ ಕೂಡ ಅವಳಿಗೀಗ ಇಲ್ಲ. ಅವಳ ಕಣ್ಣಿಗೆ ಕಾಣುತ್ತಿದ್ದುದು ಓದು. ಇದರಿಂದ ತಪ್ಪಿಸಿಕೊಂಡಾಗ, ತನ್ನ ಭವಿಷ್ಯ ಕುರಿತು ಅವಳ ಎದೆ ತೂಕವಾದರೆ, ಇನ್ನು ಎದುರಿಸಬೇಕಿರುವ ಭವಿಷ್ಯದ ದಿನಗಳೇ ಒಂದು ತೂಕ. ಭಯಂಕರ ದಿನಗಳವು. ಆಸರೆಯಿಲ್ಲದೆ ತಾನು ಬದುಕಬಲ್ಲಳೆ? ಒಂಟಿಯಾಗಿ ಇರಬಲ್ಲಳೆ? ವಿಷಾದದ ನಗು ಬಂತು. ಇರಬಲ್ಲಳೆ ಎಂದರೆ ಹೇಗಾದೀತು? ಇರಲೇಬೇಕಲ್ಲ. ತನಗೆ ಜೊತೆ ಪಡೆಯುವ ಅಧಿಕಾರವೇ ಇಲ್ಲವಲ್ಲ. ತನ್ನ ಭವಿಷ್ಯದ ದಿನಗಳು ಎದುರಾಗಲು ಇನ್ನು ಹೆಚ್ಚು ದಿನಗಳಿಲ್ಲ. ಉಳಿದಿರುವುದು ಮೂರು ದಿನ. ಮತ್ತೆ ಪರೀಕ್ಷೆ ಆಮೇಲೆ ಪ್ರಾಕ್ಟಿಕಲ್ಸ್ ಪರೀಕ್ಷೆಗಾಗಿ ಎಂದೋ ಒಂದು ದಿನ ನಂತರ ವಿಶಾಲ ಪ್ರಪಂಚವನ್ನು ಎದುರಿಸಲು ಒಂಟಿಯಾಗಿ

ಧುಮುಕಬೇಕು. ಆ ಒಂದುಆಲೋಚನೆ ಕಣ್ಣಿನ ತುಂಬಾ ನೀರು ತರುತ್ತಿತ್ತು ಸೆರಗಿನಿಂದ ಕಣ್ಣು ಒರೆಸಿಕೊಂಡು, ಪುಸ್ತಕ ಎಳೆದುಕೊಂಡು ಓದಲು ಹವಣಿಸುತ್ತಿದ್ದಳು.

ಪರೀಕ್ಷೆಯ ಮೊದಲ ದಿನ. ಸೀಟು ಹುಡುಕಿಕೊಳ್ಳಲು ಅನುಕೂಲವಾಗುವಂತೆ ಗೆಳತಿಯರು ಹದಿನೈದು ನಿಮಿಷ ಮುಂಚೆಯೇ ಕಾಲೇಜು ಸೇರಿದ್ದರು. ಇನ್ನೇನು ಹಾಲಿನಲ್ಲಿ ಕಾಲಿಡಬೇಕೆಂದು ಅಂದುಕೊಳ್ಳುವ ವೇಳೆಗೆ ಪ್ರೊಫೆಸರ್ ವೇಣುಮಾಧವ್, ಆ ಕಡೆಯಿಂದ ವಿದ್ಯಾರ್ಥಿಗಳಿಗೆಲ್ಲಾ ಶುಭ ಕೋರುತ್ತಾ ಇತ್ತ ಬಂದರು.

"ಹಲೋ ಊರ್ಮಿಳಾ, ಹಲೋ ಸುಮಾ, ವಿಷ್ ಯು ಬೆಸ್ಟ್ ಆಫ್ ಲಕ್" ಎಂದ ನಗುತ್ತಾ ಮಾಧು

"ಥ್ಯಾಂಕ್ಯು ಸರ್' ಎಂದ ಊರ್ಮಿ, "ಸುಮ, ನಾನು ಸೀಟು ನೋಡ್ತಿರ್ತೀನಿ. ನೀನು ಆಮೇಲೆ ಬಾ' ಎಂದು ಅವಳ ಉತ್ತರಕ್ಕಾಗಿ ಕಾಯದೆ ಇವರಿಬ್ಬರನ್ನೇ ಬಿಟ್ಟು ಓಡಿಬಿಟ್ಟಳು

ಮಾಧು ಸುಮಳನ್ನು ನೋಡುತ್ತಾ ನಿಂತ ಈ ಹತ್ತು ದಿನಗಳಲ್ಲಿ ಹಿಂಜಿದ ಹತ್ತಿಯಂತಾಗಿದ್ದಳು ಕಣ್ಣುಗಳು ಆಳಕ್ಕೆ ಇಳಿದಿದ್ದುವು ಕೆನ್ನೆಗಳು ಒಳಹೊಕ್ಕಿದ್ದವು. ಮೊದಲೇ ಬಿಳುಪಾದ ಮುಖ ಬಣ್ಣ ಮತ್ತೂ ಬಿಳಿಚಿಕೊಂಡು, ಕಾಂತಿಹೀನವಾಗಿ ಕಾಣುತ್ತಿತ್ತು ಮಾಧುವಿನ ಕಣ್ಣಲ್ಲಿ ಅನುಕಂಪವಿರಲಿಲ್ಲ, ರೋಷವಿತ್ತು. ಅವಳಿಗೆ ಏನಾದರೂ ಹೇಳಬೇಕೆಂದೇ ಅವನ ಮನ ಬಯಸಿತ್ತು. ತನ್ನನ್ನು ನಿರ್ಲಕ್ಷ್ಯ ಮಾಡಿ ಹೊರಟುಹೋದ ಅವಳ ಮೇಲಿನ ಕೋಪ ತಣ್ಣಗಾಗಿರಲಿಲ್ಲ ಆದರೂ ವಿವೇಕ ತಂದುಕೊಂಡು ಪರೀಕ್ಷೆಗೆ ಬರೆಯಲು ಬಂದಿರುವವಳನ್ನು ಚಂಚಲ ಮಾಡಬಾರದೆಂದು ಉಗುಳು ನುಂಗಿ, ಮೆಲುನಗು ತಂದುಕೊಳ್ಳುತ್ತಾ "ಹೇಗೆ ಪ್ರಿಪೇರಾಗಿದ್ದಿ ಸುಮಾ?" ಎಂದ

ಇಷ್ಟು ದಿನ ತಾನು ಸತ್ತಳೇ, ಬದುಕಿದಳೇ ಎಂದು ಯೋಚಿಸದಿದ್ದ ಈತನಿಗೆ ತಾನೇನಾದರೆ ಏನು ಎಂದು ಕಟುವಾಗಿ ಉತ್ತರ ಕೊಡಬೇಕೆನಿಸಿದರೂ ಆತ ವೇಣುವಾಗಿ ವಿಚಾರಿಸುತ್ತಿಲ್ಲ. ಪ್ರೊಫೆಸರಾಗಿ ಕರ್ತವ್ಯ ಮಾಡುತ್ತಿದ್ದಾನೆ ಯಾವ ವಿದ್ಯಾರ್ಥಿನಿಯೇ ಆಗಿದ್ದರೂ ಕೇಳಬಹುದಾಗಿದ್ದ ಪ್ರಶ್ನೆಯದು. ವಿದ್ಯಾರ್ಥಿನಿಯಾಗಿ ವಿಧೇಯತೆ ತೋರಿಸುವುದು ತನಗೂ ಕರ್ತವ್ಯವೆಂದು "ಪರವಾಗಿಲ್ಲ" ಎಂದಳು, ಅವಳನ್ನೇ ಒಂದು ಗಳಿಗೆ ನೋಡಿ "ಸರಿ, ಚೆನ್ನಾಗಿ ಮಾಡು ಸುಮಾ" ಎನ್ನುತ್ತಾ ಹೊರಟುಹೋದ

ಈಗ ಈತ ಎದುರಿಗೆ ಕಾಣಿಸದಿದ್ದರೂ ಚೆನ್ನಾಗಿತ್ತು ಎನಿಸಿತ್ತು ಸುಮಳಿಗೆ. ಇದ್ದಕ್ಕಿದ್ದಂತೆ ಹೃದಯ ಭಾರವಾಯಿತು. ಉತ್ಸಾಹ ಬತ್ತಿ ಹೋಯಿತು ಒಳಹೊಕ್ಕು ಊರ್ಮಿಳಾ ನಿಂತು ತೋರಿಸಿದ ಜಾಗದಲ್ಲಿ ಹೋಗಿ ಕುಳಿತಳು

ಪರೀಕ್ಷೆ ಮುಗಿಸಿ ಹೊರಬಂದಾಗ ಗೆಳತಿಯರಿಬ್ಬರಿಗೂ ತೃಪ್ತಿಯಾಗಿತ್ತು. ಬಹಳ ಸುಲಭವಾದ

ಪ್ರಶ್ನೆಗಳೇ ಬಂದಿದ್ದು ಸುಮಳಿಗಂತೂ ನೀರು ಕುಡಿದ ಹಾಗಿತ್ತು.

ಊರ್ಮಿಳೆಗಾಗಿ ಕಾಯುತ್ತಿದ್ದ ದೇವದಾಸನನ್ನು ಕಂಡು ಸುಮ, "ನೀನು ಹೋಗು ಊರ್ಮಿ, ನಾನೂ ಹೋಗ್ತೀನಿ ಮನೆಗೆ" ಎಂದು ಅವಳನ್ನು ಕಳಿಸಿ ಒಬ್ಬಳೇ ಬಸ್‌ಸ್ಟಾಪಿನ ಕಡೆ ಹೆಜ್ಜೆ ಹಾಕಿದಳು ದೂರದಲ್ಲಿ ಕಾರು ನಿಲ್ಲಿಸಿ, ಇವಳ ಬರುವಿಕೆ ಗಾಗಿಯೇ ಕಾಯುತ್ತಿದ್ದ ವೇಣು, ಇಳಿದು ದೊಡ್ಡ ಹೆಜ್ಜೆ ಹಾಕಿ-"ಸುಮಾ" ಎಂದು ಹಿಂದೆ ಬಂದ ಗಕ್ಕನೆ ನಿಂತಳು. ಅವಳ ಮುಖದಲ್ಲಿ ತೃಪ್ತಿ, ಕಣ್ಣಲ್ಲಿ ಮಿಂಚು ಕಂಡೇ ಚೆನ್ನಾಗಿ ಬರೆದಿದ್ದಾಳೆಂದು ತಿಳಿದ ಆದರೂ ಕೇಳಲೇಬೇಕಾದ ಪ್ರಶ್ನೆ ಕೇಳಿದ, "ಹೇಗೆ ಮಾಡಿದ್ದೀ ? ಪೇಪರ್ರಲ್ಲಿ?"

ಪೇಪರ್ ಕೊಟ್ಟಳು ಯಾವ್ಯಾವ ಪ್ರಶ್ನೆಗೆ ಏನೇನು ಉತ್ತರ ಬರೆದಿದ್ದಾಳೆಂದೆಲ್ಲಾ ವಿಚಾರಿಸಿ ಶಹಭಾಸ್‌ಗಿರಿ ಕೊಟ್ಟ. ನಂತರ ಕಡೆಯಲ್ಲಿ "ಮನೆಗೆ ಹೋಗೋಣ್ವ ಸುಮ?" ಅಂದ

'ನಾನೀಗ ಹೋಗ್ತಿರೋದೇ ಮನೆಗೆ' ಎಂದಳು ನಸುನಕ್ಕು

"ಯಾವ ಮನೇಗೆ?" ಅವಳ ನಗುವಿನಿಂದ ಉತ್ತೇಜಿತನಾಗಿ ತಾನೂ ನಕ್ಕು ಕೇಳಿದ

ಕೂಡಲೇ ಗಂಭೀರಳಾಗಿ ನಿಟ್ಟುಸಿರು ಬಿಟ್ಟು, "ಹೌದು, ಯಾವ ಮನೆಗೆ? ನನಗೆ ಮನೆ ಎಲ್ಲಿದೆ? ನಾನೆಲ್ಲಿದ್ರೆ ಅದೇ ನನ್ನ ಮನೆ ಈಗ ಊರ್ಮಿಳಾ ಮನೆಗೆ' ಎಂದಳು

ಮಾಧುವಿಗೇಕೋ ಅವಳ ಧ್ವನಿಯಲ್ಲಿನ ವೇದನೆ ಗುರುತಿಸಿ ಕೆಡುಕೆನಿಸಿತು ಅವನೂ ಮೃದುವಾಗಿ, "ಇನ್ನೂ ಎಷ್ಟು ದಿನ ಅಲ್ಲಿರ್ಬೇಕೂಂತ ಮಾಡಿದ್ದಿ?"

"ಗೊತ್ತಿಲ್ಲ "

"ಹಾಗಾದ್ರೆ ನಡಿ, ನಾ ಬರ್‍ತೀನಿ ಸಾಮಾನೆಲ್ಲಾ ತೊಗೊಂಡು ನಮ್ಮ ಮನೆಗೆ ಹೋಗೋಣ '

ಸುಮ ಎತ್ತಲೋ ನೋಡುತ್ತಾ "ಊಹುಂ" ಎಂದು ತಲೆಯಲ್ಲಾಡಿಸಿದಳು

ಅವನಿಗೂ ಆ ಕೂಡಲೆ ಹೊಳೆಯಿತು ಇನ್ನು ಮೂರೇ ದಿನಕ್ಕೆ ಮದುವೆ ಯಶೋದತ್ತೆ, ನೆಂಟರೆಲ್ಲಾ ನಾಳೆಯೇ ಬರುವವರಿದ್ದಾರೆ ಮನೆಯಲ್ಲಿ ತುಂಬಾ ಗಲಾಟೆಯಿರುತ್ತೆ ಈಗ ಅವಳನ್ನು ಕರೆದೊಯ್ದರೆ, ಇಷ್ಟು ದಿನದ ಅವಳ ಶ್ರಮ ಹೋಮ ಮಾಡಿದಂತಾಗುತ್ತದೆ ಎಂದು ಬಲವಂತ ಮಾಡಲಿಲ್ಲ

"ಚಂಪಾಗೆ ಆಚೆ ನಾಡಿದ್ದು ಮದುವೆ. ಇನ್ವಿಟೇಷನ್ ಬಂತಾ ' ಮಾತು ಬದಲಾಯಿಸಲು ಕೇಳಿದ

"ನನಗಾ? ನಾನು ಯಾವ ದೊಡ್ಡ ಮನುಷ್ಯಳೂಂತ ಕೊಡ್ಬೇಕು? ಅಷ್ಟಕ್ಕೂ ಯಾರು ತಂದ್ಕೊಡ್ಬೇಕು, ಯಾರು ಕರೀಬೇಕು ನನ್ನನ್ನ?"

"ನಾನೀಗ ಕರೀತಿದೀನಲ್ಲಾ. ನೀನು ಬರೋಲ್ವ ಮದುವೆಗೆ?"

"ಹುಂ" ವ್ಯಂಗ್ಯವಾಗಿ ನಕ್ಕು " ಬಾ ಅಂದ್ರೆ ಬರ್ಬಹುದು. ಬರ್‍ತೀಯಾ ಅಂದ್ರೆ ಉತ್ತರ ಕೊಡ್ಬಹುದು.

ಬರೋಲ್ವ ಅಂದ್ರೆ ಇಲ್ಲ ಅಂತ್ಲೇ ಅನ್ನಬೇಕಾಗುತ್ತೆ ""

"ಸುಮ! ಏನಾಗಿದೆ ನಿನಗೀವತ್ತು? ಯಾಕೆ ಹೀಗೆ ಮಾತಾಡ್ತಿದ್ದಿ?"

ಸುಮಳಿಗೂ ಅನ್ನಿಸಿತು 'ಹೌದು, ಇವನೊಂದಿಗೆ ತಾತ್ಸಾರ ಗಡಸುತನಗಳೇಕೆ?' ಎಂದು. ಮನಸ್ಸನ್ನು ಹಗುರಗೊಳಿಸಿಕೊಂಡು-"ಸಾರಿ ಪರೀಕ್ಷೆದು ಸ್ವಲ್ಪ ಸ್ಟ್ರೈನ್ ಇರ್ಬೇಕು, ನೋಡೋಣ, ಆದ್ರೆ ಬರ್‍ತೀನಿ" ಎಂದಳು

"ಈಗ ಮನೇಗ್ಬಂದು ಒಂದು ತೊಟ್ಟು ಕಾಫಿ ಕುಡಿದು ಹೋಗುವಿಯಂತೆ ಬಾ "

"ಬೇಡಪ್ಪ, ನನಗೆ ಟೈಮಿಲ್ಲ ನಾಳೇಗೆ ಇನ್ನೂ ತುಂಬಾ ಓದೋದಿದೆ "

'ನಡಿಯಮ್ಮ ಹಾಗಾದ್ರೆ. ನಿಂಗೆ ಡ್ರಾಪ್ ಕೊಟ್ಟು ಈಗ ನಾನು ವ್ಯರ್ಥ ಮಾಡಿದ ಸಮಯವನ್ನೂ ಕಟ್ಟಿಕೊಟ್ಟಿಡ್ತೀನಿ" ಎಂದ, ಹಾಸ್ಯವಾಗಿ

ಅವಳಿಗೂ ಬಹಳ ಆಯಾಸವಾಗಿದ್ದುದರಿಂದ ಬೇಡವೆನ್ನಲಿಲ್ಲ. ಇಬ್ಬರೂ ಕಾರಿನ ಬಳಿಗೆ ನಡೆದಾಗ ಮಾಧು, 'ತಾವು ಹಿಂದೋ ಮುಂದೋ ಆಸನಾರೂಢರಾ ಗೋದು? ಅಪ್ಪಿತಪ್ಪಿ ಬಾಗಿಲು ತೆಗೆದ್ರೆ ಇನ್ನೊಂದು ಥಂಥಮಾಂತ ಬಾಂಬು ಬಂದೀತು" ಎಂದ

"ಪಾಪ, ಪಾಪ ಹೆದರಿ ನಡುಗ್ತೀರಿ ಈ ಬಾಂಬಿಗೆಲ್ಲಾ" ಎಂದು ಮುಂದು ಗಡೆಗೇ ಬಂದು ನಿಂತಳು ತುಂಬು ಸಮಾಧಾನದಿಂದ ಮುಂಬದಿಯ ಬಾಗಿಲು ತೆಗೆದು ತಾನು ತನ್ನ ಸ್ಥಳಕ್ಕೆ ಹೋಗು ಕುಳಿತ ಮಾಧು ಅವಳು ಒಳಗೆ ಕುಳಿತು ಬಾಗಿಲೆಳೆದು ಕೊಂಡಾಗ, ಬಾಗಿಲು ಸರಿಯಾಗಿ ಮುಚ್ಚಲಿಲ್ಲ. ಅವಳ ಮೇಲೆ ಬಾಗಿ ಬಾಗಿಲೆಳೆದು ಕೊಳ್ಳುತ್ತಾ "ಕಾರು ಬಾಗಿಲು ಹಾಕೋದೂ ಬರೋಲ್ಲ" ಎಂದ ತುಂಟತನದಿಂದ

'ಅಂದರೆ ನನಗೇನೂ ಬರೋಲ್ಲ ಅಂತ ತಾನೇ ನಿಮ್ಮರ್ಥ' ಎಂದಳು ಸುಮ, ಹುಸಿಮುನಿಸು ತೋರುತ್ತಾ

'ಛೇ ಛೇ ಉಂಟೇ! ನಿನಗೆ ಇದು ಬರುತ್ತೆ, ಅದು ಬರುತ್ತೆ' ಎಂದು ಕಾರ್ ಸ್ಟಾರ್ಟ್ ಮಾಡಿದ.

ಪ್ರಶ್ನಾರ್ಥಕವಾಗಿ ನೋಡಿದಳು 'ಇದು ಅಂದ್ರೆ ಕೋಪ ಅದು ಅಂದ್ರೆ ಅಳು ಬರೋಲ್ವ ನಿಂಗೆ?" ಎಂದು ತುಟಿಯಂಚಿನಲ್ಲೇ ನಗುತ್ತಾ- ನೋಡು ಆಗ್ಲೇ ಬರ್‍ತಾ ಇದೆ ನಿನಗೆ ಅಗೋ ಅಗೋ, ಕಾಣಿಸ್ತಾ ಇದೆ ನನಗೆ ನಿನ್ನನ್ನು ನೋಡ್ತೇ ಇದ್ರೂ ಎಂದು ರಮಿಸಿದ ಥಕ್ಕನೆ ನಕ್ಕಳು ಸುಮ

ಅವನ ಹೃದಯ ಜೋರಾಗಿ ಬಡಿದಿಕೊಂಡಿತು. ಆ ನಗುವ ಸೌಂದರ್ಯ ಪಕ್ಕದಲ್ಲಿ ಕುಳಿತಾಗ, ಸುಮ್ಮನಿರಲು ಸಾಧ್ಯವೆ? ಆದರೂ ಹೇಗೋ ತುಟಿ ಕಚ್ಚಿ ತನ್ನನ್ನು ಸಂಭಾಳಿಸಿಕೊಂಡ

ಸ್ವಲ್ಪ ಸಮಯದ ನಂತರ 'ಖಂಡಿತವಾಗಿ ಮದುವೆಗೆ ಬಾ ಸುಮ" ಎಂದ.

"ಊಹುಂ ಅಂದ್ರೆ ಊಹುಂ" ಮೊಂಡುತನವಾಗಿ ಹೇಳಿದಳು.

"ಅಣ್ಣ ಮೈಯೆಲ್ಲಾ ಕಣ್ಣಾಗಿ ಕೂತಿರ್ತಾರೆ, ಪರೀಕ್ಷೆಯಲ್ಲಿ ಈ ನಮ್ಮ ಹುಡುಗಿ ಹೇಗೆ ಮಾಡಿರ್ತಾಳೋ ಅಂತ. ನಿನಗೋ ಅತೀ ಜಂಭ" ಅವನಂದದ್ದು ಹಾಸ್ಯಕ್ಕೆ. ಆದರೆ ಸುಮ ಈ ಮಾತಿನಿಂದ ತಣ್ಣಗಾದಳು. ಯಾವ ಕಾರಣಕ್ಕೇ ಆಗಲಿ ರಾಯರನ್ನು ನೋಯಿಸುವ ಇಷ್ಟವಿಲ್ಲ ಅವಳಿಗೆ ತನಗೇಕೆ ಈ ವಿಷಯ ಮೊದಲೇ ಹೊಳೆಯಲಿಲ್ಲ? ಅವರಿಗೆ ಕೃತಜ್ಞತೆ ಸಲ್ಲಿಸಲಾದರೂ ತಾನು ಹೋಗಲೇಬೇಕು-ಎಂದುಕೊಂಡಳು.

"ನಂಗೇನೂ ಜಂಭವಿಲ್ಲ. ಸರಿ ಬರ್‍ತೀನಿ."

"ಅಂದ್ರೆ ಈಗ ಹೋಗ್ತೀನೀಂತ್ಲೋ. ಮದುವೆಗೆ ಬರ್‍ತೀನೀಂತ್ಲೋ?"

"ಎರಡೂ" ಎಂದು ಬಾಗಿಲು ಕಡೆಗೆ ಜರುಗಿದಳು ಕಾರು ಊರ್ಮಿಯ ಮನೆಯ ತಿರುವಿನಲ್ಲಿ ಬಂದು ನಿಂತಿತ್ತು. ಯಾರೂ ಸುತ್ತಲಲ್ಲಿ ನೋಡುತ್ತಿಲ್ಲವೆಂದು ಖಚಿತ ಮಾಡಿಕೊಂಡು ಸರ್‍ರನೆ ಅವಳ ಕೈ ಹಿಡಿದು ತುಟಿಗೆ ತಾಗಿಸಿಕೊಂಡ "ಹೇಳಿದ ಮಾತು ಕೇಳೋ ಹುಡುಗಿಯರು ಅಂದ್ರೆ ನನಗಿಷ್ಟ" ಎಂದು ಕೈಬಿಟ್ಟ. ಅವನ ತುಟಿಯ ಸ್ಪರ್ಶ, ಅವನ ಮಾತಿನ ಮೋಡಿಯಿಂದ, ದೇಹ ಹಗುರವಾಗಿ ಕಂಪಿಸಿತು ಹೃದಯ ಹುಚ್ಚೆದ್ದು ಕುಣಿಯಿತು ಅವನೆಡೆಗೊಮ್ಮೆ ನೋಡಿ ಮೆಲುನಕ್ಕು ಕೈ ಆಡಿಸಿ ಹೊರಟು ಹೋದಳು ಅವಳು ಕಣ್ಮರೆಯಾಗುವವರೆಗೂ ನೋಡುತ್ತಿದ್ದು, ಕಾರು ಸ್ಟಾರ್ಟ್ ಮಾಡಿದ.

ಪ್ರತಿದಿನವು ಪರೀಕ್ಷೆಯ ಹಾಲಿನ ಬಳಿ ಬೆಳಿಗ್ಗೆ, ಸಂಜೆ ಬಂದು ಅವಳನ್ನು ವಿಚಾರಿಸಿಕೊಳ್ಳುತ್ತಿದ್ದ. ಇದರಿಂದ ಅನೇಕರ ಕುತೂಹಲವನ್ನೂ ಕೆರಳಿಸಿದ್ದ. ಅವಳನ್ನು ಸಾಯಂಕಾಲಗಳಲ್ಲಿ ಊರ್ಮಿಳೆಯ ಮನೆಗೆ ತಲುಪಿಸುವುದನ್ನು ಮರೆಯುತ್ತಿರಲಿಲ್ಲ

ಅಂದು ಮದುವೆಯ ದಿನ. ಆದರೂ ಬೆಳಿಗ್ಗೆ ಮಾಧು ಬಂದದ್ದನ್ನು ಕಂಡು ಸುಮಳಿಗೆ ಹೆಮ್ಮೆಯೆನಿಸಿತು. ಎಷ್ಟೋ ಕೆಲಸ ಇರಬಹುದು ಅದನ್ನು ಬಿಟ್ಟು ಬರಬೇಕಾದರೆ ತನಗೋಸ್ಕರ! ತನ್ನ ಮೇಲೆ ಅಷ್ಟು ಅಕ್ಕರೆಯೆಂದೆ? ಅಲ್ಲವೇ ಅಲ್ಲ. ತನ್ನಿಂದ ಕೆಲಸವಾಗಬೇಕಲ್ಲ-ಅದಕ್ಕಾಗಿ ಇರಬೇಕು

ಅವಳಿಗೆ ವಿಷ್ ಮಾಡಿ-" ಸಂಜೆ ಮರೀಬೇಡ ಸುಮ. ನಾನಿಲ್ಲಿಗೇ ಬರ್‍ಲೋ ಅಥವಾ ಮನೆ ಹತ್ರ ಬರ್‍ಲೋ?"

"ಎಲ್ಲಿಗೂ ಬೇಡ ಸದ್ಯ. ನಾನೇ ಬರ್‍ತೀನಿ" ಎಂದಳು ಸುಮ ಅವಳ ಅಂತರಂಗ ಅವನಿಗೆ ತಿಳಿಯಿತು. ಎಲ್ಲರಿಗೂ ತಾನು ಅವಳನ್ನು ಕರೆದೊಯ್ಯುವ ವಿಷಯ ತಿಳಿಯುವುದು ಬೇಡ. ಜಾಣೆ ಹುಡುಗಿ ಎಂದುಕೊಂಡು ಹೊರಟುಹೋಗಿದ್ದ.

ಅವಳು ಬೇಡವೆಂದಿದ್ದರೂ ಸಂಜೆ ಮಾಧು ಕಾಲೇಜಿನ ಬಳಿ ಯಥಾಪ್ರಕಾರ ಹಾಜರು. ಆದರೆ

ಮನೆಗೆ ಮಾತ್ರ ಹಿಂಬಾಲಿಸಲಿಲ್ಲ. ಎಂದಿನಂತೆ ಪರೀಕ್ಷೆಯ ವಿಷಯ ವಿಚಾರಿಸಿದ. ಹಿಂತಿರುಗುವಾಗ ಅವನಿಗೆ ತೋರಿತು-ಅವಳಿಗೆ ಆ ಕೆಂಪು ಸೀರೆ ಉಟ್ಟು ಬಾ ಎಂದು ಹೇಳಬೇಕಿತ್ತು' ಎಂದು.

ಊರ್ಮಿಳೆಯ ತಂದೆ ಎರಡನೆಯ ಮದುವೆಯಾದಂದಿನಿಂದ, ತುಳಸೀಬಾಯಿ ಮನೆಗೆ ಬಂದಾಗಿನಿಂದ, ಅವರ ಮನೆಯ ಅಡಿಗೆಯ ಜವಾಬ್ದಾರಿ ಜನ್ನಭಟ್ಟಂದು. ಅವನು ಮನೆಯ ಜನಕ್ಕೆಲ್ಲ ಅಜ್ಜ. ಯಾರಿಗೆ ಏನು ಬೇಕಾದರೂ ಅಜ್ಜನನ್ನೇ ಕೇಳುತ್ತಿದ್ದುದು. ಹೀಗಾಗಿ ಸುಮಳಿಗೂ ಅವರ ಮನೆಯಲ್ಲಿ ಯಾವ ಅಡಚಣೆಯೂ ಇಲ್ಲ. ತುಳಸೀಬಾಯಿ ಯಾವ ತಂಟೆಗೂ ಬರುತ್ತಿರಲಿಲ್ಲ.

ಸುಮ ಸರಸರ ಅಲಂಕಾರ ಮುಗಿಸಿ ಹೊರಡುತ್ತಿದ್ದಾಗ, ಊರ್ಮಿಳಾ ಎದುರಿಗೆ ಬಂದಳು. ಕಣ್ಣಗಲಿಸಿ, "ಓಹ್, ವಾಟ್ ಎ ಲಾಸ್! ನಾನು ಹೆಂಗಸಾಗಿಬಿಟ್ಟೆ. ಯಾರನ್ನು ಕೊಲ್ಲೋಕೆ ಇಷ್ಟೊಂದು ಬಾಣಗಳು ಸುಮ?" ಎಂದು ಗೆಳತಿಯ ಅಲಂಕಾರದಿಂದ ಆನಂದಪಟ್ಟು ಚೇಷ್ಟೆ ಮಾಡಿದಳು.

"ಮದುವೆ ಮನೆಗೆ ಹೋಗ್ತಿದೀನಿ ಊರ್ಮಿ."

"ಒಂದ್ನಿಮಿಷ ಒಳಗೆ ಬಾ ಸುಮ" ಎಂದು ಒಳಗೋಡಿದಳು ಯಾಕೆಂದು ತಿಳಿಯದೆ ಸುಮ ಹಿಂದೆಯೇ ಒಳಗೆ ಹೋದಾಗ, "ಈ ಅಲಂಕಾರದಲ್ಲಿ ಕೊರತೆ ಆಗಿರೋದನ್ನು ತುಂಬಿಕೊಡ್ತೀನಿ" ಎನ್ನುತ್ತಾ ಜಡೆ ಬಿಚ್ಚಿ ಬೇಗಬೇಗ ತುರುಬು ಕಟ್ಟಿದಳು "ಸ್ವಲ್ಪ ಇರು" ಎಂದು ತುಟಿಗೆ ತೆಳುವಾಗಿ ಲಿಪ್‌ಸ್ಟಿಕ್ ಸವರಿದಳು. ಸುಮಳ ಸೌಂದರ್ಯ ದ್ವಿಗುಣವಾಯಿತು. ಹತ್ತಿರವಾಗಿ ಬಂದು ಕಿವಿಯ ಬಳಿ ಪಿಸುಗುಟ್ಟುತ್ತಾ-"ನಿನ್ನ ಹೃದಯ ಚೋರ ಏನು ಹೇಳ್ತಾನೇಂತ ನನಗೆ ನಾಳೆ ಹೇಳು....ನಾಳೆ ಪರೀಕ್ಷೆಯಿದೆ ರತೀದೇವಿ. ಮನ್ಮಥನ ಸನಿಯದಲ್ಲಿ ಮರೆತೀರಿ" ಎಂದು ಕೈ ಚಿಗುಟಿ ಕಳುಹಿಸಿದಳು.

ಬಾಗಿಲಲ್ಲೇ ತಟಪಟಾಯಿಸುತ್ತಿದ್ದ ಮಾಧು, ಈ ಅಪ್ಸರೆಯನ್ನು ಕಂಡು ದಂಗಾದ. ತನ್ನ ಊಹೆಗೂ ಮಿಕ್ಕು ಸುಂದರವಾಗಿ ಪ್ರತ್ಯಕ್ಷವಾದಳು. ತುಟಿಯಂಚಿನಲ್ಲಿ ಮೆಲುನಗೆ ಸೂಸಿ, 'ಅಣ್ಣ ಎಲ್ಲಿ?" ಎಂದಳು.

"ನಾನಿಲ್ಲಿ ಜೀವ ಕೈಯಲ್ಲಿ ಹಿಡ್ಕೊಂಡು ಕಾಯ್ತಾ ಇದ್ರೆ ಅಣ್ಣ ಎಲ್ಲೀಂತೆ ಹುಂ, ನಡಿ. ಮೇಲಿದ್ದಾರೆ" ಎಂದು ಛತ್ರದಲ್ಲಿ ಮೇಲಿದ್ದ ಒಂದು ಕೋಣೆಗೆ ಕರೆದೊಯ್ದು. ಹತ್ತಾರು ಜನ ಇವರ ಕಡೆಗೇ ನೋಡಿದರೂ, ಇವರು ಗಮನಿಸಲಿಲ್ಲ.

"ಅಣ್ಣ ಇಲ್ಲಿದ್ದಾರೆ ನೋಡು" ಎಂದು ಒಂದು ಕೋಣೆಯ ಒಳಗೆ ತಳ್ಳಿದ ಮೆಲ್ಲಗೆ ತಾನೂ ಹಿಂದೆಯೇ ಒಳಗೆ ಹೆಜ್ಜೆಯಿಟ್ಟ. ಅದು ಸಣ್ಣ ಕೋಣೆ. ತೆಂಗಿನಕಾಯಿ ತುಂಬಿಸಿದ್ದ ಕೋಣೆ. "ಎಲ್ಲಿ?" ಎಂದು ಅವಳು ಹಿಂತಿರುಗಿದಾಗ, ಬಾಗಿಲಲ್ಲಿ ಬಾಗಿಲಷ್ಟು ಎತ್ತರವೂ ಅಡ್ಡನಿಂತು ನಗುತ್ತಿದ್ದ ಮಾಧು.

"ಅಣ್ಣ ಇಲ್ಲ. ಅಣ್ಣನ ಮಗ ಇರೋದು" ಎಂದ.

"ನೀವು ಬಹಳ ಕೆಟ್ಟೋರು. ನಾನು ಬಂದದ್ದು ಅಣ್ಣನ್ನ ನೋಡೋಕೆ."

"ಮುಂಚೆ ಈ ಪೂಜಾರೀಗೆ ದಕ್ಷಿಣೆ ಕೊಟ್ರೇನೇ, ಆ ದೇವ್ರನ್ನ ತೋರಿ ಸೋದು."

"ಏನು ನಿಮ್ಮ ಚೇಷ್ಟೆ?" ಎಂದು ಹುಬ್ಬುಗಂಟು ಹಾಕಿದಳು, ಸುಮ. ತಾನು ಹದ್ದು ಮೀರಿದನೇನೋ ಎಂದು ಅವನಿಗೆ ಸಂಶಯವಾಯಿತು. ಆದರೂ ವಿಷಯ ಹಗುರಗೊಳಿಸುವಂತೆ ಮಾತನಾಡಬೇಕೆಂದು-

"ಮತ್ತೆ ಒಳ್ಳೇ ಹುಡುಗರ ಮನಸ್ಸಲ್ಲೂ ಕೋಲಾಹಲವುಂಟು ಮಾಡೋ ಹಾಗೆ ತಾವು ಯಾಕೆ ಬರ್ಬೇಕು?"

"ನೀವಾ ಒಳ್ಳೇ ಹುಡುಗ? ನೀವು ಪಕ್ಕಾ.. ."

"ಹುಂ ನಾನು ಪಕ್ಕಾ....? ಅದಿರಲಿ, ನೀನು ಹೇಗೆ ಕಾಣ್ತೀಂತ ಯಾರೂ ನಿಂಗೆ ಹೇಳ್ಲಿಲ್ವಾ?"

"ಯಾರಾದರು ಯಾಕೆ ಹೇಳ್ಬೇಕು? ಅದ್ರಲ್ಲೂ ಒಂದು ಹುಡುಗಿಯ ಅಂದ ಚಂದಾನ್ನ ಯುವಕ ಹೊಗಳಲೇಬಾರ್ದು."

"ಯಾಕೆ ಹೊಗಳ್ಬಾರ್ದು? ಅದು ಆ ಹುಡುಗೀರ ತಲೇಗೆ ಏರಿಬಿಡುತ್ತೆಂತ ಇರ್ಬೇಕು."

"ಬೇಗ ಕಳಿಸ್ಕೊಡೀಪ್ಪ ನನ್ನ. ಇನ್ನು ಆರು ದಿನ ಆಗ್ಹೋದ್ರೆ ಈ ಕಾಡುಹರಟೆ ಹೊಡೆಯೋಕೆ ಸದಾ ಬಿಡುವೆ" ಆತಂಕ ವ್ಯಕ್ತಪಡಿಸಿದಳು.

"ಬೇಜಾರಾಯ್ತ ಸುಮ ನನ್ನ ಮಾತಿಂದ? ಐ ಆಮ್ ಸಾರಿ" ಮಾಧುವಿನ ಮುಖ ಸಪ್ಪಗಾಯಿತು

ತನ್ನ ಬರುವಿಗಾಗಿ ಆಶಿಸಿದ್ದ ಅವನ ಮನಸ್ಸಿಗೆ ನೋವುಂಟು ಮಾಡುವುದು ನ್ಯಾಯವಲ್ಲವೆನಿಸಿ ಸುಮ "ಛೆ, ಬೇಜಾರೇಕೆ? ಈ ಪರೀಕ್ಷೆ ಇಲ್ದೆ ಇದ್ದಿದ್ರೆ ನಿಮ್ಮ ಜೊತೇಲೇ ಇರ್ತಿದ್ದೆ" ಎಂದಳು ಮತ್ತೆ ಗೆಲುವಿನಿಂದ.

"ಹೋಗೋಣ್ವ?" ಎಂದು ಅವಳು ಕೇಳಿದಾಗ "ಹುಂ, ಹೊರಡು" ಎಂದು ಬಾಗಿಲಿಗೆ ಅಡ್ಡ ನಿಂತ. ಹೆಚ್ಚು ಹೊತ್ತು ಗೋಗರೆಯುತ್ತಾ ನಿಂತರೆ ತನಗೇ ವಿಳಂಬ ವೆಂದು ಬಲ್ಲ ಅವಳು, ತೀರ ಹತ್ತಿರವಾಗಿ ಬಂದು, ಅವನ ಕಣ್ಣಲ್ಲಿ ಕಣ್ಣಿಟ್ಟು "ನನ್ನನ್ನೀಗ ದಾರಿ ಬಿಟ್ಟು ಕಳಿಸ್ದೇ ಇದ್ರೆ, ಆಮೇಲೆ ಶಾಶ್ವತವಾಗಿ ನಿಮ್ಮ ಪಕ್ಕ ಇಟ್ಕೋಬೇಕಾಗುತ್ತೆ. ನಿಮ್ಮ ಆ ಹುಡುಗೀಗೆ ಆಮೇಲೆ ಪಂಗನಾಮವೇ."

"ಓಹೋ ಹಾಗೋ! ನಾನು ರೆಡಿ" ಎಂದ ಮಾಧು. ಅವನ ಕಣ್ಣಲ್ಲಿ ಚೇಷ್ಟೆ ಮಿನುಗುತ್ತಿತ್ತು.

"ಪ್ಲೀಸ್ ದಾರಿ ಬಿಡಪ್ಪ" ಪುಸಲಾಯಿಸಿದಳು. ಅವಳು ಕೇಳಿದ ರೀತಿ, ನಿಂತ ವೈಯ್ಯಾರ, ಅವಳ ಇಂದಿನ ಶೃಂಗಾರ ಅವನನ್ನು ಹೊಡೆದೆಬ್ಬಿಸಿದುವು. ಹತ್ತಿರವಾಗಿ ನಿಂತಿದ್ದ ಅವಳನ್ನು ಎರಡೂ ಕೈಗಳಿಂದ ಇನ್ನೂ ಹತ್ತಿರಕ್ಕಳೆದುಕೊಂಡು, ಅವಳ ಬೈತಲೆಯ ಬಳಿ ಚುಂಬಿಸಿದ. ಮತ್ತೆ ಕೈ ಬಿಟ್ಟು "ಹೋಗಿ ಬಾ. ಇನ್ನು ಅಣ್ಣನ್ನಾದ್ರೂ ಹುಡುಕು, ಯಾರನ್ನಾದ್ರೂ ಹುಡುಕು" ಎಂದು ಪಕ್ಕಕ್ಕೆ ನಿಂತ. ಮುಖವೆಲ್ಲ ಕೆಂಪಾಗಿದ್ದ

ಸುಮ, ನಿಧಾನವಾಗಿ ಮೆಟ್ಟಿಲಿಳಿದು ರಾಯರನ್ನು ಅರಸಿ ಹೋದಳು.

ಅನಂತರಾಯರ ಬಳಿ ಅವಳು ಮಾತನಾಡುತ್ತಿದ್ದಾಗ ಅನೇಕರ ದೃಷ್ಟಿ ಆ ಕಡೆಗೆ ತಿರುಗಿತು. ಎಲ್ಲರ ಹುಬ್ಬುಗಳಿಗೂ ಒಂದೇ ಪ್ರಶ್ನಾರ್ಥಕ ಚಿಹ್ನೆ. ಇವಳಾರು? ಯಾರ ಮಗಳು? ಯುವಕರು ಕೆಲವರು, ರಾಯರ ಬಳಿ ಕೆಲಸವಿಲ್ಲದಿದ್ದರೂ ಬಂದು ಏನೇನೋ ಮಾತನಾಡಿ ಹೋಗುತ್ತಿದ್ದರು. ರಾಯರು ಅವರ ಯಾರ ಮಾತಿಗೂ ಹೆಚ್ಚು ಲಕ್ಷ್ಯ ಕೊಡದೆ ಅವಳ ವಿಷಯವನ್ನೇ ವಿಚಾರಿಸುತ್ತಿದ್ದರು.

ರಾಯರ ಕುರ್ಚಿಯ ಬಳಿ, ತನ್ನ ಹೊಸ ಸೀರೆಯನ್ನೂ ಗಮನಿಸದೆ, ನೆಲದ ಮೇಲೆ ಕುಳಿತು ಇವಳು ವಿನಯದಿಂದ ಮಾತನಾಡುತ್ತಿದ್ದಾಗ, ಯಶೋದಮ್ಮ ಹತ್ತಿರ ಬಂದು, "ಸುಮ ಅಲ್ವೆ?" ಎಂದರು. "ಹೌದಮ್ಮ" ಎಂದು ಎದ್ದು ನಿಂತಳು

"ನಾನಂದ್ಕೊಂಡೆ, ನಮ್ಮ ಅನಂತೂ ಹತ್ರ ಇಷ್ಟು ಸದರವಾಗಿ ಮಾತಾಡಬೇಕಿದ್ರೆ ನೀನೇ ಇರಬೇಕೂಂತ" ಎಂದು ಮೇಲಿಂದ ಕೆಳಕ್ಕೆ ನೋಡಿದರು ಅವಳನ್ನು ಆಕೆಯ ಮನಸ್ಸಿನಲ್ಲಿ ಒಂದು ಊಹೆ ಸುಳಿದುಹೋಯಿತು.'ಇಂತಹ ಬೆಣ್ಣೆ ಮನೆಯಲ್ಲಿರುವ ಹೊತ್ತಿಗೇ ಮತ್ತೆ!' ಎಂದು ಆದರೆ ಮೇಲೆ ಆಡಿ ತೋರಿಸಲಿಲ್ಲ.

ಸುಮ ಅಮ್ಮನನ್ನು ಹುಡುಕಿ ಹೋದಾಗ ಕೋಣೆಯ ಒಂದು ಮೂಲೆಯಲ್ಲಿ ಸಪ್ಪಗೆ ಕುಳಿತಿದ್ದರು ಈ ವಿಜೃಂಭಣೆಯೆಲ್ಲಾ ತಮ್ಮ ಮಗನಿಗಿಲ್ಲವಲ್ಲಾ ಎಂಬ ಆತಂಕ ಆಕೆಗೆ ಕಡಿಮೆಯಾದಂತಿರಲಿಲ್ಲ ಆದರೂ ಸುಮಳನ್ನು ಅಕ್ಕರೆಯಿಂದಲೇ ಮಾತನಾಡಿಸಿದರು. ಅವಳು ಧರಿಸಿದ್ದ ಸೀರೆ ಹಾರಗಳನ್ನು ಕಂಡು, ಮತ್ತೆ ಆ ಗೆಳತಿಯೇ ಹಾಕಿರಬೇಕೆಂನದು ನಂಬಿದರು. ಪರಿಪಕ್ವ ಅಲಂಕಾರದಲ್ಲಿ ಲಕ್ಷಣವಾಗಿ ಅವಳು ತಮ್ಮ ಮನೆಯ ಹುಡುಗಿಯೆಂದು ಅವರಿಗೇನೋ ಸಂತೋಷವೇ ಆಯಿತು ಅಂತಹ ಒಂದು ಹುಡುಗಿಯನ್ನು ತಾವು ಆಶ್ರಯಕೊಟ್ಟು ಬೆಳೆಸುತ್ತಿರುವುದು ಹತ್ತು ಜನಕ್ಕೆ ಕಾಣಲಿ, ತಿಳಿಯಲೆಂದೋ ಏನೋ, ಹತ್ತಿರ ಕರೆದು ತಲೆ ಸವರಿ, ಸ್ವಲ್ಪ ಗಟ್ಟಿಯಾಗಿಯೆ, "ಪರೀಕ್ಷೆ ಮುಗಿದ ಕೂಡಲೆ ಮನೆಗೆ ಬಂದುಬಿಡು ಏನು? ಫಸ್ಟ್‌ಕ್ಲಾಸ್ ಗ್ಯಾರಂಟಿ ತಾನೆ?" ಎಂದೆಲ್ಲ ವಿಚಾರಿಸಿಕೊಂಡರು. ಅವರ ಆ ಪ್ರಯತ್ನ ಹುಸಿಯಾಗಲಿಲ್ಲ. ಹತ್ತಾರು ಜನ ಆಕೆಯನ್ನು ಇದೇ ವಿಷಯವಾಗಿ ಹೊಗಳಿಯೇ ಹೊಗಳಿದರು.

ಊಟ ಮುಗಿಸಿ ಹಿಂತಿರುಗುವ ಸಮಯದಲ್ಲಿ ಅಣ್ಣ ಮತ್ತೆ ಪದೇ ಪದೇ ಎಚ್ಚರಿಸಿದರು ಚೆನ್ನಾಗಿ ಬರೆಯಬೇಕೆಂದೂ, ಪರೀಕ್ಷೆ ಮುಗಿದ ಕೂಡಲೆ ಮನೆಗೆ ಬಂದುಬಿಡಬೇಕೆಂದೂ ಒತ್ತಿ ಹೇಳಿದರು. ಈ ದಂಪತಿಗಳ ವಾತ್ಸಲ್ಯದಿಂದ ಅವಳಿಗೆ ಹೃದಯ ತುಂಬಿ ಬಂತು.

ಬಾಗಿಲವರೆಗೆ ಕಳಯಹಿಸಿಕೊಡಲು ಬಂದ ವೇಣು-"ಸುಮ, ಮುಖ್ಯವಾದ ಕೆಲಸವನ್ನೇ ಮಾಡ್ದೇ ಹೋಗ್ತಿದ್ದಿ" ಎಂದ "ಏನು?" ಎಂಬಂತೆ ನಿಂತು ಅವನ ಕಡೆಗೆ ನೋಡಿದಳು.

"ಬಾಲೂ-ಚಂಪಾನ್ನ ಮಾತಾಡ್ಸಿದ್ಯಾ?" ಅವನು ಗಮನಿಸಿದ್ದ ಈ ಲೋಪವನ್ನು. ಯಾರೋ ಕೆನ್ನೆಗೆ ಹೊಡೆದಂತಾಯಿತು. ಮದುಮಕ್ಕಳನ್ನೇ ಮಾತನಾಡಿ ಸದೆ ತಾನು ಹೊರಟುಹೋಗುವಂತಹ ದುರ್ಬುದ್ಧಿ ಯಾಕೆ ಬಂತು ತನಗೆ? ಅಲ್ದೆ ತಾನೆಂಥಾ ಮೂರ್ಖಳು. ಬರಿಗೈಯಲ್ಲಿ ಬಂದಿದ್ದಾಳೆ. ಬಾಲುವನ್ನು ಕಾಣುವ ಇಚ್ಛೆ ಬಂದಿದ್ದರಲ್ಲವೆ ಉಡುಗೊರೆಯ ನೆನಪು ಬರಲು.

ಅವಳು ಬೆಪ್ಪಾಗಿ ನಿಂತುದನ್ನು ನೋಡಿ, ಅವಳ ಅಸಹಾಯಕತೆ ಅರ್ಥ ಮಾಡಿಕೊಂಡವನಂತೆ, ಒಳಗೆ ಕರೆದೊಯ್ದು ಪೆಟ್ಟಿಗೆಯಿಂದ ಒಂದು ಪ್ಯಾಕೆಟ್ ತೆಗೆದು ಅವಳ ಕೈಯಲ್ಲಿ ಕೊಡುತ್ತಾ-

"ಪ್ರೆಸೆಂಟ್ ಕೊಡಲೇಬೇಕೂಂತ ಎಲ್ಲಿ ಹೇಳಿದೆ ಸುಮ? ಇರಲಿ, ಇದನ್ನು ಕೊಡು" ಎಂದವನು "ಹೋಗಿ ಮಾತಾಡಿಸು ಅವನೇನೂ ಹುಲಿ ಅಲ್ಲ" ಎಂದು ಸೇರಿಸಿದ. ಮಂತ್ರಮುಗ್ಧಳಂತೆ, ಅವನ ಮಾತಿಗನುಗುಣವಾಗಿ ಹೋಗಿ "ಕಂಗ್ರಾಚ್ಯುಲೇಷನ್ಸ್" ಎಂದಳು ಇಬ್ಬರಿಗೂ ಆ ಪ್ಯಾಕೇಟ್ ಬಾಲುವಿಗೋ, ಚಂಪಳಿಗೋ ಕೇಳಬೇಕಿತ್ತು. ಆದರೂ, ಬಾಲು ತಾನೇ ರಾಯರ ಬಳಗ ಎನಿಸಿ, ಅವನ ಕೈಗಿತ್ತು, ಬೆವರು ಸುರಿಸಿಕೊಳ್ಳುತ್ತಾ ನಡೆದುಬಂದಳು

ಮಾಧು ಬಾಗಿಲವರೆಗೆ ಬಂದವನು, ಅಲ್ಲೇ ಕೈಕಟ್ಟಿ ನಿಂತುಬಿಟ್ಟಾಗ, ಅವನು ತನ್ನೊಂದಿಗೆ ಈಗ ಬರುವುದಿಲ್ಲವೆಂದು ಅವಳಿಗೆ ತಿಳಿಯಿತು. ಡ್ರೈವರಿಗೆ ಸರಿಯಾದ ರಸ್ತೆ, ವಿಳಾಸ ವಿವರಿಸುತ್ತಿದ್ದ. ಸುಮಳಿಗೆ ನಿರಾಸೆಯಾಯಿತು. ಆದರೂ ತೋರಗೊಡದೆ "ಹೋಗಿಬರ್ತೀನಿ" ಎಂದು ಹೊರಟುಹೋದಳು. ಅವನಿದ್ದ ಮನಃಸ್ಥಿತಿಯಲ್ಲಿ ಅವಳೊಡನೆ ತಾನು ಈ ರಾತ್ರಿಯಲ್ಲಿ ಹೋಗುವುದು ಕ್ಷೇಮವಲ್ಲವೆಂದು, ಮನ ಬಿಗಿಹಿಡಿದು ಹಿಂದುಳಿದನೆಂದು ಸುಮಳಿಗೆ ಹೇಗೆ ತಿಳಿಯಬೇಕು?

ಅಂದು ಓದಿಗೆ ತಿಲಾಂಜಲಿಯಾಯಿತು. ಬೇರೊಬ್ಬ ಹುಡುಗಿಯನ್ನು ಪ್ರೀತಿಸುವ ವೇಣು ತನ್ನನ್ನೇಕೆ ಹೀಗೆ ತನ್ನ ಬಲೆಯೊಳಕ್ಕೆ ಎಳೆಯುತ್ತಾನೆ? ತನಗೋ ಅದಾವ ದೌರ್ಬಲ್ಯವೋ ಅವನ ಹತ್ತಿರ ಸೋತು ಕರಗಿ ಹೋಗುತ್ತಾಳೆ. ನಾಚಿಕೆಗೆಟ್ಟ ಹೆಣ್ಣು ತಾನು. ಅದೇನು ತನ್ನ ಪ್ರೇಮವೋ, ಅಪ್ಪನೆಡೆಗಿನ ಕೃತಜ್ಞತೆಗಾಗಿ ತಾನು ಮಗನಿಗೆ ಬಲಿಯಾಗುತ್ತಿಲ್ಲವಷ್ಟೆ. ಇನ್ನು ಆರು ದಿನದ ನಂತರ ಕೆಲವೇ ದಿನಗಳಲ್ಲಿ ಉದ್ಯೋಗ. ಬೇರೆಯ ನೆಲೆ. ವೇಣುವಿನಿಂದ ದೂರ ದೂರ ಹೋಗುತ್ತೇನೆ. ಹೋಗಲೇಬೇಕು. ಕ್ರಮೇಣ ಮರೆಯಲೂ ಬೇಕು. ಗಂಗಾ-ಭಾಗೀರಥಿ ಪ್ರಸನ್ನವಾಗಲು ಈ ಭಾವನೆಯೊಂದು ಸಾಕು.

ಇಷ್ಟು ದಿನ ಇದ್ದ ಪ್ರಶಾಂತತೆ ಎಲ್ಲಿ ಮಾಯವಾಯಿತು? ತನಗೇಕೆ ಸಲ್ಲದ ಉಪದ್ವ್ಯಾಪ-ಅದೂ ಒಬ್ಬ ತರುಣನೊಡನೆ. ಅವನ ಹೆಣ್ಣನ್ನು ಗೆದ್ದುಕೊಡುವ ಭಾಷೆ ಬೇರೆ ಕೊಟ್ಟಾಗಿದೆ. ಆದರೂ ಅವನೇಕೆ ತನ್ನೊಂದಿಗೆ ಹೀಗೆ ನಡೆದುಕೊಳ್ಳುತ್ತಾನೆ?-ಛೆ! ತಾನು ಇದೆಲ್ಲಾ ಬಯಸುತ್ತೇನೆಂದು ಆತ ಭಾವಿಸಿರಬಹುದು. ತಾನೇಕೆ ಪ್ರತಿಭಟಿಸುವುದೇ ಇಲ್ಲ? ಅಗ್ಗವಾಗಿ ಕೈಗೆ ಸಿಕ್ಕಿ ಬೀಳುತ್ತೇನೆಯೇ?

ಮತ್ತೆ ಮತ್ತೆ ಅದೇ ನೆನಪು. 'ಆತನ ಸ್ಪರ್ಶ, ಒಂದು ಮೃದು ಚುಂಬನ ಹಗುರ ಆಲಿಂಗನ ತನ್ನನ್ನೇಕೆ ಮೈಮರೆಸುತ್ತವೆ ಭಗವಂತಾ' ಎಂದು ಏನೂ ಓದದೆ ಮಲಗಿಬಿಟ್ಟಳು.

"ಸುಮ್ಮಾ, ನಾಳೆ ರಜ ಇಲ್ಲ, ಹೀಗೆ ಆರಾಮವಾಗಿ ಮಲಗೋಕೆ" ಊರ್ಮಿಳಾ ಕೂಗಿ ಹೇಳಿದಳು.

"ಗೊತ್ತು, ಯಾಕೋ ಸುಸ್ತಾಗಿದೆ ಊರ್ಮಿ" ಎಂದು ಮುಸುಕೆಳೆದುಕೊಂಡಳು.

ಊರ್ಮಿಳಾ ಎದ್ದು ಹೋಗಿ ಬಂದ ಎರಡು ನಿಮಿಷಗಳಲ್ಲಿ ಜನ್ನಭಟ್ಟರು ಕೈ ತುಂಬಾ ಉಪ್ಪು ತಂದು- "ಏನು ಮಗೂ, ಒಮ್ಮೆ ನೋಡುವ" ಎಂದು. ಅವಳನ್ನು ಎಬ್ಬಿಸಿ ಕೂರಿಸಿ ನೀವಾಳಿಸಿಯೇಬಿಟ್ಟರು.

ಊರ್ಮಿಯ ಕಾತರ, ಜನ್ನಜ್ಜನ ಆದರ ಕಂಡು ಅವಳಿಗೆ ಕಣ್ಣು ತೇವವಾಯಿತು. ತನಗೆ ದೃಷ್ಟಿ ತಾಕಿದೆಯೆಂದು ಈ ಆತ್ಮೀಯರು ತಿಳಿದಿದ್ದರು. ಆದರೆ ತನ್ನ ಹೃದಯ ಅಳುತ್ತಿದೆಯೆಂದು ಅವರೇನು ಬಲ್ಲರು ಪಾಪ!

ಪರೀಕ್ಷೆ ಮುಗಿದ ದಿನವೇ ಹಿಂತಿರುಗಬೇಕೆಂದಿದ್ದ ಸುಮಳನ್ನು ರಾಣೋಜಿ-ತುಳಸೀಬಾಯಿಯರು ಹೋಗಗೊಡಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಜನ್ನಭಟ್ಟರು "ಸಿಹಿ ಉಣ್ಣದೆ ಹೋಗಲಿಕ್ಕುಂಟೆ?" ಎಂದು ನಿಲ್ಲಿಸಿಕೊಂಡರು ಮಾರನೆಯ ದಿನ ಹಬ್ಬದ ಊಟ ಮುಗಿಸಿ, ಅವರು ಕೊಟ್ಟ ಸೀರೆರವಿಕೆ ಉಡುಗೊರೆ ಸಂಕೋಚದಿಂದಲೇ ಸ್ವೀಕರಿಸಿ ಮನೆಗೆ ಹಿಂತಿರುಗಿದಳು ಸುಮ

## ೧೧

ಪರೀಕ್ಷೆ ಮುಗಿದ ಮೇಲೆ ಎರಡೇ ದಿನಗಳಲ್ಲಿ ಸುಮಳಿಗೆ ಬೇಸರ ಬಂದಿತು ಎಷ್ಟೇ ತನ್ನ ದಿನಚರಿಯ ಕೆಲಸಗಳನ್ನು ಮುಗಿಸಿದರೂ ಸಮಯವೇ ಕಳೆಯುತ್ತಿರಲಿಲ್ಲ. ರಾಯರು, ನಾಗಮ್ಮನವರು ಅವಳನ್ನು ಎಂದಿನಂತೆಯೇ ಆದರದಿಂದ ಕಾಣುತ್ತಿದ್ದರು

ಪರೀಕ್ಷೆಗಳು ಮುಗಿದಿದ್ದರೂ, ವೇಣುವಿಗಿನ್ನೂ ಕಾಲೇಜಿನಿಂದ ಬಿಡುಗಡೆ ಸಿಕ್ಕಿರಲಿಲ್ಲವಾಗಿ ಕಾಲೇಜಿಗೆ ಹೊರಟುಹೋಗುತ್ತಿದ್ದ. ಪೂರ್ಣ ಗುಣಮುಖರಾಗಿದ್ದ ರಾಯರಿಗೆ ಅನೇಕ ಕೆಲಸಗಳು ಅವರು ಮನೆಯಲ್ಲಿರುತ್ತಿದ್ದುದೇ ವಿರಳವಾಗಿತ್ತು ಚಂಪಳ ಮದುವೆಯಾದಾಗ ಮೌನ ಧರಿಸಿದ್ದ ನಾಗಮ್ಮ ಈಗ ಮಾತನಾಡುವುದೇ ಅಪರೂಪವಾಗಿಬಿಟ್ಟಿತ್ತು ಸುಮಳಿಗೆ ಕಾಲ ನಡೆಯುತ್ತಿದ್ದಂತೆಯೇ ತೋರುತ್ತಿರಲಿಲ್ಲ ಇಂತಹ ನಿಶ್ಶಬ್ದ ಗಂಭೀರ ಪರಿಸ್ಥಿತಿಯಲ್ಲಿ ಇದರೊಟ್ಟಿಗೆ ಅವಳ ಮನಃಸ್ಥೈರ್ಯವೇ ದಿನೇ ದಿನೇ ಕುಂಠಿತವಾಗುತ್ತಿತ್ತು ಒಂದೇ ಚಾವಣಿಯಲ್ಲಿ ತಾನು ಮತ್ತು ವೇಣುವಿರುವೆಡೆ ಇರಲಾರಳು ಇರುವುದು ಒಳಿತೂ ಅಲ್ಲ ಎಂದು ಮನವರಿಕೆಯಾಗ ತೊಡಗಿತು. ಮೊದಲೇ ನೊಂದಿದ್ದ ನಾಗಮ್ಮನವರ ಮನಸ್ಸನ್ನು ತಾನು ಮತ್ತೂ ನೋಯಿಸಲು ಅವಳಿಗೆ ಸುತರಾಂ ಇಷ್ಟವಿಲ್ಲ. ಇದ್ಯಾವುದರ ಗಮನವೂ ಇಲ್ಲದಂತೆ,

ಮನೆಯಲ್ಲಿರುವಷ್ಟು ಹೊತ್ತೂ ವೇಣು ' ಸುಮ' ' ಸುಮ ' ಎಂದು ತಿರುಗಾಡುವುದು ಹೆಚ್ಚಾಯಿತು. ಅಮ್ಮ ನೋಡುತ್ತಲೇ ಇದ್ದರು ಆದರೂ ಚಕಾರವಾಡುತ್ತಿರಲಿಲ್ಲ. ಆದರೆ ಸುಮಳಿಗೆ ಮಾತ್ರ ತನ್ನೆಡೆಗೆ ಅವರ ಆದರ ಕಡಿಮೆಯಾಗುತ್ತಿದೆಯೆಂದು ಭಾಸವಾಗತೊಡಗಿತು. ಆಗಾಗ ತನ್ನ ಮೇಲೆ ಸಿಡುಕುತ್ತಿದ್ದಾರೆಂದೂ ತಿಳಿಯಿತು.

ಇದೆಲ್ಲದರಿಂದ ಪಾರಾಗಲು ಬೇಗ ಒಂದು ಉದ್ಯೋಗ ,ದೊರಕಿಸಿಕೊಳ್ಳಬೇಕು. ಆದಷ್ಟು ಬೇಗ ತನ್ನ ಸ್ವಂತ ಠಿಕಾಣಿ ಹುಡುಕಬೇಕು ಅದರಿಂದ ವೇಣುವಿಗೆ ಸ್ವಲ್ಪ ಅಸಮಾಧಾನವಾದರೂ ಅಮ್ಮ ತನ್ನನ್ನು ದ್ವೇಷಿಸುವುದಿಲ್ಲ ಅವರ ಹೃದಯದಲ್ಲಿ ತನಗೆ ಸ್ಥಾನ ಬೇಕು ಇದಕ್ಕಾಗಿ ತಾನು ಯಾವ ತ್ಯಾಗಕ್ಕಾದರೂ ಸಿದ್ಧ. ನಾಳಿನ ಒಂಟಿ ಬಾಳಿನಲ್ಲಿ ಆಸರೆಯಾಗಿ ಪಡೆಯಬಹುದಾದದ್ದು ಇವರನ್ನು ಮಾತ್ರ ಅವರು ಮನದಲ್ಲಿ ಕಹಿ ಹುಟ್ಟಿಸಿದ ಮೇಲೆ ತಾನು ನೆಮ್ಮದಿಯಾಗಿ ಬದುಕಬಲ್ಲಳೆ?

ಮನಸ್ಸು ಸ್ಥಿಮಿತ ಮಾಡಿಕೊಂಡು ಕಂಡ ಎಲ್ಲರೊಂದಿಗೂ ತನಗೆ ಕೆಲಸ ಸಿಗಲು ಸಹಾಯ ಮಾಡಬೇಕೆಂದು ಕೇಳತೊಡಗಿದಳು ರಾಯರು ಒಂದು ದಿನ" ಒಂದು ನಾಲ್ಕು ದಿನ ಹಾಯಂತ ಇರಬಾರದೇನಮ್ಮ? ನಿನಗೆ ಖಂಡಿತ ಒಂದು ಒಳ್ಳೇ ಕೆಲಸ ಕೊಡಿಸೋಣಂತೆ" ಎಂದು ಅಂದಾಗ ಸುಮ್ಮನಾದಳು ಆದರೆ ರಾಯರು ಹಾಗೆ ಹೇಳಿದ್ದು ಮಾತ್ರ ಮತ್ತೆ ಸುದ್ದಿ ಎತ್ತಲಿಲ್ಲ, ಸುಮ ಚಡಪಡಿಸತೊಡಗಿದಳು

ಈ ಮಧ್ಯದಲ್ಲಿ ಅವಳು ಪ್ರಾಕ್ಟಿಕಲ್ಸ್ ಪರೀಕ್ಷೆಯೂ ಮುಗಿಯಿತು ಚೆನ್ನಾಗಿ ಮಾಡಿದ್ದಳು

ಒಂದು ಸಂಜೆ ಕಾಲೇಜಿನಿಂದ ಹಿಂತಿರುಗಿದ ಮಾಧು-" ಸುಮ, ರೆಡಿ ಆಗು, ಒಂದು ಕಡೆ ಹೋಗ್ಬೇಕು. ಇಂಟರ್‌ವ್ಯೂಗೆ ಕರ್ಕೊಂಡು ಹೋಗ್ತೀನಿ" - ಎಂದಾಗ ನಿಜವೋ ಸುಳ್ಳೋ ಎಂದು ನಿಂತಲ್ಲೇ ನಿಂತಿದ್ದಳು. ಮಾಧು ತಂದೆಯ ಕಡೆಗೆ ತಿರುಗಿ ಹೇಳಿದ

"ಅಣ್ಣಾ, ನನ್ನ ಫ್ರೆಂಡ್ ಒಬ್ಬರಿಗೆ ಸದ್ಯಕ್ಕೆ ಒಬ್ಬ ಅಸಿಸ್ಟೆಂಟ್ ಬೇಕಂತೆ, ಸುಮ ಒಂದೇಸಮನೆ ಗಲಾಟೆ ಮಾಡ್ತಿದ್ದಾಳಲ್ಲಾ ಕರ್ಕೊಂಡು ಹೋಗ್ಬರ್ತೀನಿ"

ಸುಮ ಅದು ನಿಜವೆಂದುಕೊಂಡು, ಕೋಣೆಗೆ ಓಡಿ ಬೇಗ ಬೇಗ ಸಿದ್ಧವಾದಳು. ಅಮ್ಮನ ಬಳಿ ಬಂದು " ಬೇಗ ಕೆಲಸ ಸಿಕ್ಕಲಿ ಅಂತ ಆಶೀರ್ವಾದ ಮಾಡಿ" ಎಂದಳು ಆಕೆ ಮೆಲುನಕ್ಕರು.

ದಾರಿಯಲ್ಲಿ ಅವಳು ಒಂದೇ ಸಮ " ಯಾರು ನಿಮ್ಮ ಫ್ರೆಂಡ್? ಅವರ ಹೆಸರೇನು? ಅವರ ಹತ್ತಿರ ಏನಂತೆ ಕೆಲ್ಸ? ಎಲ್ಲಿರೋದು ಅವರ ಆಫೀಸು?" ಎಂದು ಒಂದೇ ಉಸುರಿಗೆ ಪ್ರಶ್ನೆ ಹಾಕತೊಡಗಿದಳು. ಮಾಧು ಒಳಗೊಳಗೇ ನಗುತ್ತಾ, ಎಲ್ಲಾ ಪ್ರಶ್ನೆಗಳಿಗೂ ಒಂದೇ ಉತ್ತರವಾಗಿ,

"ಅಲ್ಲಿಗೆ ಹೋಗ್ತಿದೀವಲ್ಲ? ನಿನಗೇ ತಿಳಿಯುತ್ತೆ." ಎಂದ.

" ನಾನಿನ್ನೂ ಗ್ರಾಜುಯೇಟ್ ಆಗಿಲ್ಲ. ರಿಸಲ್ಟು ಬರೋದು ಇನ್ನೂ ಎಷ್ಟುದಿನ ಆಗುತ್ತೋ. ಒಂದ್ವೇಳೆ ಡಿಗ್ರಿ ಇಲ್ದೆ ಅವರು ತೊಗೊಳ್ಳೋಲ್ಲ ಅಂದ್ರೆ?"

ಮಾಧು ಈಗ ಗಟ್ಟಿಯಾಗೇ ನಗುತ್ತ "ನಾನೀಗ ಕೊಡ್ಸೋ ಕೆಲಸಕ್ಕೆ ಡಿಗ್ರಿಯ ಅವಶ್ಯಕತೆ ಇಲ್ಲ" ಎಂದ.

"ಅಂದ್ರೆ? " ಎಂದಳು ಅಚ್ಚರಿಯಿಂದ.

"ಆ ಕೆಲಸಕ್ಕೆ ಹೆಸರು ಗೃಹಿಣೀಂತ. ಅದು ಡಿಗ್ರಿ ಇಲ್ದೇನೇ ಸಿಗಬಹುದು ನನ್ನ ಫ್ರೆಂಡ್ ತುಂಬಾ ಒಳ್ಳೆಯವ್ನು ನೋಡೋಕೆ ಲಕ್ಷಣವಾಗಿದ್ದಾನೆ ಕೈತುಂಬಾ ಸಂಪಾದಿಸ್ತಾನೆ ನಿನ್ನನ್ನ ನೋಡಿಯೂ ಇದಾನೆ ನೀನೀಗ ಅವನನ್ನ ನೋಡಿ ಒಪ್ಗೆ ಕೊಟ್ರೆ, ಅಣ್ಣಂಗೆ ಹೇಳಿ ಮುಂದಿನ ಏರ್ಪಾಟು "

ಬೆಪ್ಪಾದಳು ಸುಮ ಎಷ್ಟು ಖುಷಿಯಾಗಿತ್ತೋ ಮನಸ್ಸು ಅಷ್ಟೂ ಮುದುರಿಹೋಯ್ತು.

'ನನಗೆ ಮದುವೆ ಆಗೋ ಇಷ್ಟವಿಲ್ಲ"ಎಂದಳು ದನಿ ತಗ್ಗಿಸಿ

"ಐ, ಸೀ ಯಾಕೇಂತ ಕೇಳಬಹುದಾ?' ಹಲ್ಲಿನಿಂದ ಕೆಳತುಟಿ ಕಚ್ಚಿನಗುತಡೆದು ಕೇಳಿದ

ಸುಮಳಿಂದ ಉತ್ತರವಿಲ್ಲ

'ಯಾರನ್ನಾದ್ರೂ ಪ್ರೇಮಿಸಿದಿಯೇನು ಸುಮ? ಇದ್ರೆ ನನ್ನಹತ್ರ ಹೇಳು ನಾನು ಎಲ್ಲಾ ಸರಿಹೋಗೋ ಹಾಗೆ ಮಾಡ್ತೀನಿ"ಎಂದು ಅವಳ ಕಡೆ ತಿರುಗಿದ ಅವನ ಮುಖದಲ್ಲಿ, ಕಣ್ಣುಗಳಲ್ಲಿ ಚೇಷ್ಟೆಯ ನಗುವಿತ್ತು ಅವಳೂ ಸ್ವಲ್ಪ ಗೆಲು ವಾದಳು

"ಹೂಂ. ಪ್ರೇಮಿಸಿದ್ದೀನಿ,ಆದರೆ ಅವರು ನಂಗೆ ಸಿಕ್ಕೋಲ್ಲ"ಎಂದಳು

"ಯಾರಪ್ಪಾ ಅಂಥಾವ್ರು?"

"ದೇವದಾಸ್"ಎಂದು ನಕ್ಕಳು. ಕೀಟಲೆಯ ನಗುವಿನ ಸರದಿ ಅವಳದಾಯಿತು

'ದೇವದಾಸ್?' ಎನ್ನುತ್ತಾ ಹಲ್ಲು ಕಚ್ಚಿ ತನ್ನ ಎಡಗೈಯಿಂದ ಅವಳ ಬಲ ಕಿವಿ ಹಿಡಿದು ಹತ್ತಿರಕ್ಕೆ ಎಳೆಯುತ್ತಾ-"ಯಾರಂದೆ ದೇವದಾಸಾ? '-ಎಂದ ಮತ್ತೊಮ್ಮೆ

"ಅಲ್ಲಾ,ಅಲ್ಲಾ. . . ಮತ್ತೆ ಮತ್ತೆ ವಾಸು"ಎಂದಳು, ತನ್ನಕಿವಿಯನ್ನು ಬಿಡಿಸಿ ಕೊಳ್ಳಲು ಪ್ರಯತ್ನಿಸುತ್ತ ಅವನು ಕಿವಿ ಬಿಡಲೇಬೇಕಾಯಿತು ಅಷ್ಟು ಹೊತ್ತಿಗೆ ಕೆಂಪುದೀಪ ಬಂದು,ಕಾರು ನಿಲ್ಲಿಸಬೇಕಾಗಿ ಬಂತಾದ್ದರಿಂದ ಅಕ್ಕಪಕ್ಕದ ವಾಹನ ಗಳವರು ಕಂಡಾರೆಂದು ಕೈ ಬಿಡುತ್ತಾ-

"ನೀನು ಬಹಳ ಹೆಚ್ಚಿಕೊಂಡಿದ್ದೀ ಹುಡುಗಿ"ಎಂದು ಅವಳಿನ್ನೂ ನಗುತ್ತಲೇ ಇದ್ದಳು.

ಸ್ವಲ್ಪ ಹೊತ್ತುದೀಪವನ್ನೇ ಗಮನಿಸುತ್ತಾ ಕುಳಿತ ಮಾಧು-"ನಿನಗೆ ಆ ನನ್ನ ಫ್ರೆಂಡ್ ಬೇಡ ಅನ್ನೋ ಹಾಗಾದ್ರೆ ಈಗ ಸದ್ಯದಲ್ಲಿ ನೋಜಾಬ್' ಎಂದ

"ಅಣ್ಣ ಕೊಡಿಸ್ತಾರೆ"ಎಂದಳು ಸುಮ ಮಹಾ ನೀವು ಕೊಡಿಸದಿದ್ದರೆ ಏನೀಗ ಎನ್ನುವಂತಿತ್ತು ದನಿ

"ರೈಟ್.ಈಗ ನಾವು ಹಿಂತಿರುಗಿ ಹೋಗ್ಬಿಡೋಣ್ವ?"

"ಅಷ್ಟೇ ಮತ್ತೆ, ಮತ್ತೇನು ಮಾಡುವುದಕ್ಕಾಗುತ್ತೆ"ಎಂದು ಅವಳೆನ್ನುವ ವೇಳೆಗೆ ದೀಪ ಹಳದಿ ತೋರಿಸಿ ಹಸಿರಾಯಿತು. ಕಾರನ್ನು ಮತ್ತೆ ಹೊರಡಿಸಿದ ಮಾಧು. ರಷ್ ಸ್ವಲ್ಪ ಕಡಿಮೆಯಾದ ಕೂಡಲೆ-

"ಅಂತೂ ಸುಮ ನೀನು ತುಂಬಾ ಸ್ವಾರ್ಥಿ"ಎಂದ

"ಯಾಕೆ ಹಾಗಂತೀರಿ?"

"ಮತ್ತಿನ್ನೇನು, ಪರೀಕ್ಷೆ ಮುಗಿದು ಇಷ್ಟು ದಿನ ಆಯ್ತಲ್ಲ. ನಿನ್ನ ಪರೀಕ್ಷೆ, ಕೆಲಸ, ರಿಸಲ್ಟು ಅಂತ ಅಷ್ಟೇ ಮಾತಾಡ್ತೀಯೆ ವಿನಾ'ನಿಮ್ಮ ಫ್ರೆಂಡ್ ಸಂಗತಿ ಏನು? ಮತ್ತೆ ನೋಡಿದ್ರಾ? ಯಾವಾಗ ಪರಿಚಯ ಮಾಡಿಸ್ತೀರಿ?' ಅಂತ ಒಂದು ಸಲವಾದ್ರೂ ಕೇಳಿದ್ಯಾ?"

"ಐ ಆಮ್ ಸಾರಿ"ನಿಜವಾಗಿಯೂ ಅವಳಿಗೆ ನಾಚಿಕೆಯಾಗಿತ್ತು, ತಪ್ಪು ಒಪ್ಪಿಕೊಂಡಳು.

"ಪರವಾಗಿಲ್ಲ ಬಿಡು,ಹೋಗ್ಲಿ ಈವಾಗ ಹೋಗೋಣ್ವ?"

"ಓ ಎಸ್" ಎಂದಳು, ಉತ್ಸುಕತೆ ತೋರಿ.

ಹೆಚ್ಚು ಮಾತಿಲ್ಲದೆ, ಕಾರನ್ನು ವೇಗವಾಗಿ ನಡೆಸಿ ಲಾಲ್‌ಬಾಗಿಗೆ ಬಂದ

"ಅದೇನು ಇಲ್ಲಿಗೆ ಬಂದ್ರಲ್ಲ?"

"ಅವಳನ್ನ ಇಲ್ಲಿಗೇ ಬರಹೇಳಿದ್ದೀನಿ ಇಲ್ಲಾಂದ್ರೆ,ಇನ್ನು ಅವರ ಮನೇತನಕ ಹೋಗಬೇಕಾಗುತ್ತಲ್ಲಾಂತ ಈ ಅರೇಂಜ್‌ಮೆಂಟ್ "

"ನಾವು,ನಿಮ್ಮ ಫ್ರೆಂಡ್ ಹತ್ತಿರ ಹೋಗೋಲ್ಲ, ಇಲ್ಲಿಗೆ ಬರ್ತೀವೀಂತ ಹೇಗೆ ಗೊತ್ತು ನಿಮಗೆ?ನಾನೀಗ ಬರೋಲ್ಲ ಅಂದಿದ್ರೆ ಏನು ಮಾಡ್ತಿದ್ರಿ?"

"ನೋಡಿ ಮೇಡಂ, ಆ ಫ್ರೆಂಡ್ ಹತ್ತಿರ ಏನೂ ಜಾಸ್ತಿ ಹೊತ್ತಾಗ್ತಾ ಇರ್ಲಿಲ್ಲ. ನಿಮ್ಮನ್ನ ಮನೆಯಲ್ಲಿ ಬಿಟ್ಟು ನೇರವಾಗಿ ಬರ್ತಿದ್ದೆ. ಅವಳು ಒಂದೆರಡು ನಿಮಿಷ ಕಾಯಬೇಕಾಗ್ತಿತ್ತು ಅಷ್ಟೆ"

"ಆಗಾಗ ನೀವಿಲ್ಲಿ........."ಎಂದು ಉಗುಳು ನುಂಗಿಕೊಂಡಳು.

"ಭೇಟಿ ಮಾಡ್ತೀವಿ"ಎಂದು ಪೂರೈಸಿದ.

ಕಾರನ್ನು ದೂರವಾಗಿ ನಿಲ್ಲಿಸಿ ಹುಲ್ಲಮೇಲೆ ಬಂದು ಕುಳಿತರು. ಕೂಡಲೆ ಅವನು "ಇಷ್ಟು ಹೊತ್ತಿಗೆ ಬಂದಿರು ಅಂದಿದ್ದೆ. ಏನಾಯ್ತೋ ಇನ್ನೂ ಬಂದಿಲ್ಲ" ಎಂದು, ತನಗೆ ತಾನೇ ಹೇಳಿಕೊಳ್ಳುವಂತೆ.

"ಅವಳು ಹೇಗಿರ್‍ತಾಳೆ?ಅವಳ ಹೆಸರೇನು?"

"ಹೆಸರು ಸುಮ-ನ. ಹೇಗಿದ್ದಾಳೆ ಅನ್ನೋದು ನೀನೇ ನೋಡ್ತೀಯಲ್ಲಾ."

"ಅದಕ್ಕಲ್ಲ, ಇಲ್ಲೆಲ್ಲಾದ್ರೂ ಈಗ ಕಾಣಿಸಿದ್ರೆ ಗುರುತು ಹಿಡೀಬಹುದಲ್ಲಾ ಅದಕ್ಕೆ "

"ಎಲ್ಲೂ ಕಾಣ್ತಾ ಇಲ್ಲ. ನಾನೇ ನೋಡಿ ಬರ್ತೀನಿ ತಾಳು"ಎಂದು ಎದ್ದು ಒಂದೆರಡು ಹೆಜ್ಜೆ ಹೋಗಿ, ಒಂದು ನಿಮಿಷ ನಿಂತಿದ್ದು ಸುತ್ತ ನೋಡಿ, ಹಿಂತಿರುಗಿ ಬಂದು, ಸುಮಳಿಗೆ ಹತ್ತಿರವಾಗಿ, ಅವಳ ಬಲಗಡೆಗೆ ಅಂಗೈಗಳನ್ನು ನೆಲದ ಮೇಲೆ ಹಿಂದಕ್ಕೆ ಊರಿ ಕಾಲು ಚಾಚಿ ಕುಳಿತುಕೊಂಡ ಸುಮ್ಮನಿರದೆ- "ಏನು ಹೆಂಗಸರೋ ಟೈಂ ಸೆನ್ಸೇ ಇಲ್ಲ" ಎಂದ

ಸುಮ ಮಾತಾಡಲಿಲ್ಲ ಅವಳು ಮಾತಾಡುವ ಸ್ಥಿತಿಯಲ್ಲೇ ಇರಲಿಲ್ಲ. ಕೇವಲ ಹದಿನೈದು ನಿಮಿಷದ ಹಿಂದೆ ಇದ್ದ ಉಲ್ಲಾಸ ಮಾಯವಾಗಿತ್ತು. ತಾನು ಹೃದಯಾಂತ ರಾಳದಿಂದ ಬಯಸುವ ವ್ಯಕ್ತಿಯನ್ನು ಈಗ ಮತ್ತೊಬ್ಬ ಹುಡುಗಿಗೆ ಬಿಟ್ಟುಕೊಡುವ ಸಂದರ್ಭ. ಅದೂ ಇಷ್ಟಪಡದ ಆ ಹುಡುಗಿಯನ್ನು ತಾನೇ ಪುಸಲಾಯಿಸಿ ಪ್ರಿಯತಮನಿಗೆ ತನ್ನ ಒಪ್ಪಿಸುವ ಕೆಲಸ ಎಂತಹ ಸಂದಿಗ್ಧ ಇದು! ತಾನೇಕೆ ಇದಕ್ಕೆ ಒಪ್ಪಿಕೊಂಡಳು, ವಿಧಿಯೇ ಇರಲಿಲ್ಲವಲ್ಲ ಆತನ ಸಂತೋಷವೇ ತನಗೆ ಆನಂದ ಅವನ ಆನಂದಕ್ಕಾಗಿ ತನ್ನ ಪ್ರೇಮದ ತ್ಯಾಗ ಇದು ಯಾರಿಗೂ ತಿಳಿಯಬಾರದು ಅವನಿಗೂ ಸಹ ಈ ಘಳಿಗೆ ಬೇಗ ಕಳೆದುಹೋಗಬಾರದೇ? ಎಂದು ಹುಲ್ಲು ಕಡ್ಡಿಯ ಮೇಲೆ ಹುಲ್ಲು ಕಡ್ಡಿ ಕಚ್ಚಿ ಅಗಿದು ಉಗಿಯುತ್ತಿದ್ದಳು

ವೇಣು ಚಾಚಿದ ಕಾಲನ್ನು ಮೆಲ್ಲಗೆ ಎತ್ತಿ ಅತ್ತಿಂದಿತ್ತ ಅಲುಗಾಡಿಸುತ್ತಿದ್ದುದು ಮಾತ್ರ ಕಣ್ಣುಗಳಿಗೆ ನಿಚ್ಚಳವಾಗಿ ಕಾಣುತ್ತಿತ್ತು. ಕಾರಣ ಅವು ಅವಳ ತೀರಾ ಪಕ್ಕದಲ್ಲಿ ದ್ದುವು ಅವನು ಸಣ್ಣಗೆ ಸಿಳ್ಳಿನಲ್ಲಿ ಹಾಡುತ್ತಿದ್ದ. ಹಾಡು ಮಿದುಳನ್ನು ತಾಕಿರಲಿಲ್ಲ. ಹೃದಯವೆಲ್ಲಾ ಆ ಹುಡುಗಿಯ ಕುರಿತೇ ಚಿಂತಿಸುತ್ತಿತ್ತು

ವೇಣು ಕುಳಿತ ಭಂಗಿ ಸ್ವಲ್ಪವೂ ಚಲಿಸದೆ "ಅಬ್ಬ, ಸದ್ಯ ಬಂದಳು, ಬರ್ತಿದಾಳೆ" ಎಂದ. 'ಎಲ್ಲಿ" ಎನ್ನುವಂತೆ ಅವನ ಕಡೆಗೆ ನೋಡಿದಳು ಸುಮ

"ಅಲ್ಲಿ, ಕಾಣಿಸ್ತಾ? ಇನ್ನೂ ಸ್ವಲ್ಪ ಈ ಕಡೆ ನೋಡು ಅಲ್ಲೊಂದು ಕೆಂಪು ಹೂವಿನ ಗಿಡ ಕಾಣ್ತಾ ಇಲ್ವಾ, ಅದರ ಸಂದಿಯಲ್ಲಿ ನೋಡು" ಎಂದು ಒಂದು ಕೈಯೆತ್ತಿ ಬೆರಳು ತೋರಿಸುತ್ತಾ "ಇನ್ನೂ ಸ್ವಲ್ಪ ಬಗ್ಗಿ ನೋಡು ಮರಿ" ಎಂದಾಗ ಪೂರ್ಣವಾಗಿ ಅವನ ಕಾಲುಗಳ ಮೇಲೆ ಬಾಗಿದಳು.

ತಕ್ಷಣವೇ ಅವನು 'ಇಲ್ಲಿ, ಬಂದೇಬಿಟ್ಟಳು ಹತ್ತಿರ' ಎಂದು ಎರಡು ಕೈಗಳಿಂದಲೂ ಚಾಚಿ ಹತ್ತಿರಕ್ಕೆ ಎಳೆದುಕೊಂಡುಬಿಟ್ಟ.

"ನಿಮ್ಮದು ತೀರ ಅತಿ" ಎಂದು ಕೊಸರಿಕೊಂಡಳು ಸುಮ.

ಹಿಡಿತವನ್ನು ಸಡಿಲಗೊಳಿಸದೆ ಅವನು-"ನೀನು ಕೆಮಿಸ್ಟ್ರಿಯಲ್ಲಿ ರ್‍ಯಾಂಕ್ ಬಂದ್ರೂ ಹೃದಯದ ವಿಷಯಗಳಲ್ಲಿ ಸೊನ್ನೆ" ಎಂದು ಅವಳ ತಲೆಯನ್ನು ತನ್ನ ಎದೆಯ ಮೇಲಿರಿಸಿಕೊಂಡ "ಅಲ್ಲ ಹುಚ್ಚಿ,

ಬೇರೆ ಫ್ರೆಂಡ್ ಯಾರೋ ನನಗಿದ್ದಿದ್ರೆ ನಿನ್ನ ಹತ್ರ ಇಷ್ಟು ಸದರವಾಗಿ ನಡಿದುಕೊಳ್ತಾ ಇದ್ದೆನೆ? ಅಥವಾ ಅಂಥ ನೀಚ ನಾನು ಅಂದ್ಕೊಂಡ್ಯಾ?" ಎಂದ ಮೃದುವಾಗಿ ಅವನ ಎದೆಯ ಮೇಲೆಯೇ ಸುಮ ಬಿಕ್ಕಿದಳು ' ಅರೆ, ಅಳೋಕ್ಕೆ ಏನಾಯ್ತು?" ಎಂದು ಅವಳ ತಲೆಯೆತ್ತಿದ.

"ನೀವು ಹೀಗೆ ನನ್ನ ಸತಾಯಿಸಬಾರದಿತ್ತು ಈ ಒಂದು ತಿಂಗಳಿಂದ ನಾನು ಎಷ್ಟು ಸಂಕಟಪಟ್ಟೆ ಅನ್ನೋದು ನನಗೇ ಗೊತ್ತು."

' ನೀನು ಸಂಕಟಪಡಬಹುದು ಅಂತ ನನಗನ್ನಿಸಿತ್ತು ನಾನು ತಾನೇ ನಿನ್ನನ್ನು ಊರ್ಮಿಳಾ ಮನೆಯಲ್ಲಿ ಬಿಟ್ಟು ಹಾಯಾಗಿದ್ದೆ ಅಂದ್ಕೊಂಡ್ಯಾ? ನನಗೊಂದು ಮಾತು ಕೂಡಾ ಹೇಳದೆ ನೀನು ಹೋಗ್ಬಿಟ್ಟೆ. ನನಗೆ ಮನಸ್ಸಿಗೆ ಎಷ್ಟು ನೋವಾಗಿರಬಹುದೂಂತ ನೀನು ಊಹಿಸಬಲ್ಲೆಯಾ ಸುಮ? ಇರಲಿ ಬಿಡು, ಈಗ ಸರಿಯಾಯ್ತಲ್ಲ ನಾನು ಆ ಹುಡುಗಿಯನ್ನು ಸೃಷ್ಟಿಸಿದ್ದು ನಿನ್ನ ಪರೀಕ್ಷಿಸೋಕ್ಕೆ ಅದೂ ಅಲ್ದೆ ನೀನೇ ಹೇಳೋ ಹಾಗೆ ಈ ಪ್ರೇಮದ ಕಾಯಿಲೆ ಬಂದರೆ, ಹಗಲುಗನಸು ಕಾಣೋದು ಒಂದು ಚಿಹ್ನೆ ಹಗಲುಗನಸು ಕಾಣ್ತಾ ಓದು ಹಾಳು ಮಾಡ್ಕೋತಿಯ ಲ್ಲಾಂತ ಈ ಉಪಾಯ ಹೀಗೆ ಮಾಡಿದ್ರೆ ನಿರಾಸೆಪಟ್ಟು, ಅದನ್ನು ಮರೆಯೋಕೆ ಇನ್ನೂ ಹೆಚ್ಚು ಹೆಚ್ಚು ಓದುತ್ತೀ ಅಂತ ನನಗ್ಗೊತ್ತು ಸರಿತಾನೇ? ನನ್ನನ್ನು ಮರೆತುಬಿಟ್ಟು ಚೆನ್ನಾಗಿ ಓದಿದ್ಯೋ ಇಲ್ವೋ?"

"ಆದರೂ ನೀವು ನನ್ನನ್ನು ತುಂಬಾ ಗೋಳಾಡಿಸಿದಿರಿ ನಿಮಗೆ ಇದೆಲ್ಲಾ ಗೊತ್ತಿದ್ದೂ ಇವತ್ತು ಯಾಕೆ ನನ್ನನ್ನು ನಿಮ್ಮ ಫ್ರೆಂಡ್‌ಗೆ ತೋರಿಸಿ ಮದುವೆ ಏರ್ಪಾಟಿಗೆ ಹೊರಟಿದ್ದು?"

"ಓ ಅದಾ?" ಎಂದು ಗಟ್ಟಿಯಾಗಿ ನಕ್ಕ ವೇಣು, "ನೀನು ಸೂಕ್ಷ್ಮವಾಗಿ ಗಮನಿಸಿದ್ದಿದ್ರೆ ಆ ಫ್ರೆಂಡ್, ನಾನೇ ಅಂತ ನಿನಗೆ ಗೊತ್ತಾಗ್ತಿತ್ತು "

"ನೀವು ತುಂಬಾ ಕೆಟ್ಟವರು "

"ನೀನು ತುಂಬಾ ಒಳ್ಳೆಯವಳಾ? ಕಳ್ಳಿ. ಪಕ್ಕಾ ಕಳ್ಳಿ "

"ಹೌದು ಪಾಪ, ಏನು ಕದ್ದಿದ್ದೀನೋ?"

"ಏನೂ ಕದ್ದೇ ಇಲ್ವಾ? ಇದನ್ನ?" ಎಂದು ಎದೆ ತೋರಿದ.

"ನೀವು ಮಾತ್ರ!"

' ನಾನೇನು ಕದೀಲಿಲ್ಲ ಫಾರಿನ್ನಿಂದ ಬರೋ ವೇಳೆಗೆ ಅಮ್ಮ ಅಣ್ಣ ಮನೇಲಿ ತಂದಿಟ್ಟಿದ್ರು. ನನಗೇನೇ ಅಂದ್ಕೊಂಡು ತೊಗೊಂಡೆ ಅದು ನನ್ನ ವಸ್ತು. ಆದ್ರೆ ನೀನು ಮಹಾಕಳ್ಳಿ. ಮಾಧುರಿಯಿಂದ, ಚಂಪಳಿಂದ ಇದನ್ನ ಕದ್ದುಕೊಂಡು ಓಡಿ ಬಿಟ್ಟಿದೀಯ' ಎಂದು ಕಣ್ಣು ಮಿಟುಕಿಸಿದ

ಅವನ ಎದೆಯ ಮೇಲೆ ತನ್ನ ಕೈ ಉಜ್ಜುತ್ತಾ ಸುಮ "ನೀವ್ಯಾಕೆ ನನ್ನ ಇಷ್ಟೊಂದು ಪ್ರೀತಿಸ್ತೀರಾ?"

ಎಂದಳು.

"ಗೊತ್ತಿಲ್ಲ ಸುಮ ನೀನ್ಯಾಕೆ ಪ್ರೀತಿಸ್ತೀಯಾ?"

'ನಾನು ನಾನು ಯಾಕೇಂದ್ರೆ . ನೀವು ನನಗೆ ಕನಸಿನ ವ್ಯಕ್ತಿ?"

"ನನಗೆ ನೀನೂ ಅಷ್ಟೆ. ಯಾಕೇಂತ ಗೊತ್ತಿಲ್ಲ ಸುಮ, ನಿನ್ನ ಮೊದಲ ದಿನ ನೋಡಿದಾಗಿನಿಂದ, ಒಳ್ಳೆ ಹುಡುಗನಾಗಿದ್ದ ಈ ವೇಣು ಹುಚ್ಚನಾಗಿಬಿಟ್ಟ "

"ಹಾಗಾದ್ರೆ ನಾನು ಹುಚ್ಚು ಹಿಡಿಸಿದೆ ಅಂತ್ಲಾ?"

"ಖಂಡಿತ ಮತ್ತಿನ್ನೇನು ಈ ಹೃದಯ ಈಗ ಲಬ್‌ಡಬ್ ಲಬ್ ಡಬ್ ಅನ್ನೋದು ಮರೆತ್ಬಿಟ್ಟು ಸುಮ ಸುಮ ಅನ್ನೋಕೆ ಪ್ರಾರಂಭಿಸಿದೆ "

"ಅರೆ, ಹೌದಲ್ವಾ?" ಎಂದು ಅವನ ಎದೆ ಕಿವಿಯಾನಿಸಿದಳು ಅವನ ಕೈಗಳು ಅವಳನ್ನು ಬಳಸಿದ್ದು ಹಿಡಿತ ಬಿಗಿಯಾಯಿತು, ಉಸಿರು ತೀವ್ರವಾಯಿತು ಒಂದು ಘಳಿಗೆ ಬಿಟ್ಟು,

' ನೀನು ನಿನ್ನ ಪ್ರಾಮಿಸ್ ನಡೆಸಿಕೊಟ್ಟ, ಹಾಗೇನಾ?" ಅವಳ ಮನಸ್ಸು ತಿಳಿಯಲು ಕೇಳಿದ

"ಯಾವ ಪ್ರಾಮಿಸ್?"

"ನನ್ನ ಹುಡುಗಿಯನ್ನು ಗೆದ್ದುಕೊಡ್ತೀನಿ ಅಂದಿದ್ಯಲ್ಲಾ?"

'ಇನ್ನೂ ಅನುಮಾನವೆ? ನಿಮ್ಮ ಹುಡುಗಿ ಎಂದಿನಿಂದಲೋ ನಿಮ್ಮವಳು"

"ನಾನು ನಂಬೋಲ್ಲ ಅನುಮಾನದ ಪರಿಹಾರ ಆಗುವಂಥಾದ್ದು ಏನೂ ನಡೀಲಿಲ್ಲ."

ಅವಳ ಉಸಿರು ವೇಗವಾಗಿ ಹರಿಯಿತು ತುಸು ಎದ್ದು ಅವನ ಮುಖವನ್ನು ಬೊಗಸೆಯಲ್ಲಿ ಹಿಡಿದು, "ಏನು ಮಾಡಬೇಕು ನಾನು ಹೇಳಿ, ನಿಮಗೇನು ಬೇಕು?" ಎಂದಳು

"ಛಿ! ಇಂಥಾದ್ದು ಬೇಕೂಂತ ನಾಚಿಕೆ ಬಿಟ್ಟು ಕೇಳ್ತಾರೇನು?"

' ಮತ್ತೆ ನಾಚಿಕೆ ಬಿಟ್ಟುಕೊಟ್ಬಿಡ್ತಾರೇನೋ ಎಂದು ಅವಳಿನ್ನೂ ಹೇಳುತ್ತಿರುವಾಗಲೇ ಅವನ ಅವಳ ಬಾಯನ್ನು ತನ್ನ ತುಟಿಗಳಿಂದಲೇ ಮುಚ್ಚಿದ ಗಾಳಿ ಜೋರಾಗಿ ಬೀಸಿತು ಆ ಗಾಳಿಗೆ, ಒಂದೆರಡು ಎಲೆಗಳೊಂದಿಗೆ ಹೂಗಳು ಉದುರಿ ಅವರ ಮೇಲೆ ಬಿದ್ದುವು ಒಂದು ಲತೆ, ತಾನು ಹೆಣೆದುಕೊಂಡಿದ್ದ ವೃಕ್ಷಕ್ಕೆ ಹತ್ತಿರವಾಗಿ ಸುತ್ತಿಕೊಂಡಿತು

ಈ ಅಮೃತಘಳಿಗೆಯಿಂದ ಎಚ್ಚೆತ್ತಾಗ ಸುಮ ಏಕೊ ಸಪ್ಪಗಾಗಿಬಿಟ್ಟಿದ್ದಳು. ಮಾಧು ಚಾಟಿಯಿಂದ ಪೆಟ್ಟು ತಿಂದವನಂತೆ "ಯಾಕೆ ಸುಮ? ನನ್ನಿಂದ ಬೇಜಾರಾಯ್ತಾ?" ಎಂದ, ನೋವು ತುಂಬಿದ ಸ್ವರದಲ್ಲಿ.

"ಇಲ್ಲ ಆದರೆ ನೀವು ನನ್ನ ವಿಷಯ ಏನೂ ತಿಳೀದೇನೇ . "

"ನೀನು ಏನು ಹೇಳ್ತೀಯಾಂತ ನನಗೆ ಗೊತ್ತು ಸುಮ ನಾನು ಬಡವಳು, ಅನಾಥಳು ನೀವು

ಶ್ರೀಮಂತರು, ಅಂತಸ್ತು, ಮಣ್ಣು ಮಸಿ ಅಂತ ಹೌದಾ" ಎಂದು, ಮೊಣಕಾಲು ಮಡಿಸಿ ಅದರ ಮೇಲೆ ಗಲ್ಲ ಊರಿ ಕುಳಿತಿದ್ದ ಅವಳ ಮಂಡಿಯ ಮೇಲೆ ಕೈಯಿಟ್ಟ. ಅವಳ ಕಣ್ಣುಗಳು ಕೊಳಗಳಾಗಿದ್ದವು

"ಅದೂ ಹೌದು , ಮತ್ತೆ.. .ನಾನು...."

"ಹೇಳು ಸುಮ, ನನ್ನ ಹತ್ತಿರ ಯಾವುದಕ್ಕೂ ಸಂಕೋಚ ಬೇಡ ಹೇಳು" ಎಂದು ಇನ್ನೂ ಪಕ್ಕಕ್ಕೆ ಸರಿದ.

"ನಾನು. . ನಾ... ನು ವಿಧವೆ" ಎಂದು ಮುಖ ಮುಚ್ಚಿಕೊಂಡಳು.

ಸುಮಳ ಮಂಡಿಯ ಮೇಲಿದ್ದ ವೇಣುವಿನ ಕೈ ಚಟ್ಟೆಂದು ಹಿಂದಕ್ಕೆ ಹೋಯಿತು. ಅವನ ಹೃದಯ ಕೇಳಿತು-ಅವಳು ವಿಧವೆಯಾದರೇನು? ತಾನೂ ವಿಧುರನಲ್ಲವೆ? ಜೋಡಿ ಸರಿಯಾಯಿತಲ್ಲ! ಸುಮ ಹೇಳುತ್ತಿದ್ದ- 'ನನಗೆ ಹೂ ಬೇಡ, ಹೂಗಿಡದಲ್ಲಿರಬೇಕು, ಇಲ್ಲ ದೇವರ ಮುಡಿಯಲ್ಲಿ' ಎಂಬ ಮಾತುಗಳ ನೆನಪಾಯಿತು. ಸದಾಕಾಲವೂ ಕಾಡಿಗೆ ಹಣೆಗಿಡುತ್ತಿದ್ದ ಅವಳ ಹಣೆ ಕಣ್ಣೆದುರಿಗೆ ತೇಲಿಬಂತು ಮನ ಹೀಗೆ ಅಂತರ್ಮುಖವಾದಾಗ ಕೈ ಹಿಂದೆ ಸರಿದಿತ್ತು

ಆದರೆ ಸುಮ ತಿಳಿದದ್ದೇ ಬೇರೆ, ತಾನು ವಿಧವೆಯೆಂದು ಅವನು ಹಿಂಜರಿದ ನೆಂದು.

"ನಾನು ವಿಧವೆ ಅಂತ ತಿಳಿಯೋ ವೇಳೆಗೆ ನನ್ನ ಮೇ ಮೇಲಿಟ್ಟಿದ್ದ ಕೈ ಕೂಡಾ ತೆಗೆದ್ಬಿಟ್ರಿ ಹೌದು, ನನಗ್ಗೊತ್ತು, ಇದು ಹೀಗೇ ಆಗುತ್ತೇಂತ" ಎಂದು ಅತ್ತಳು

"ನಿನ್ನಿಂದ ಕೈ ತೆಗೆದದ್ದು ಅದಕ್ಕಾಗಿ ಅಲ್ಲ. ಇದು ಸಾಧ್ಯವೆ ಅಂತ ಅಚ್ಚರಿಯಿಂದ ಕೈ ಹಿಂದಕ್ಕೆ ಹೋಯ್ತು ಅಷ್ಟೆ. ನನ್ನನ್ನು ಮದ್ವೆ ಮಾಡ್ಕೊಳ್ಳೊಕ್ಕೆ ಇಷ್ಟವಿಲ್ಲಿದ್ರೆ ಹಾಗೆ ನೇರವಾಗಿ ಹೇಳಿಬಿಡು ಸುಮ. ನಿನಗೆ ಅಮಂಗಳ ಹೇಳಿಕೋಬೇಡ."

"ನಿಜ ಹೇಳೋಕೆ ಕತೆ ಸೃಷ್ಟಿಸಬೇಕಿಲ್ಲ "

"ನಿಜ ಸುಮ ನಿಜ ಅದು ನಿಜವೇ ಇರಲಿ, ಸುಳ್ಳೇ ಇರಲಿ, ನನಗೆ ನಿನ್ನ ಹಿಂದಿನ ಜೀವನದ ಪ್ರಮೇಯವೇ ಬೇಡ ಸುಮ. ನೀನು ಯಾರೇ ಆಗಿರು, ಏನೇ ಆಗಿರು. ನೀನು ನನ್ನವಳು ' ಎಂದು ಅವಳ ಬಲಗೈ ಹಿಡಿದು, "ನೋಡು ನಾನು ಈ ಕೈ ಹಿಡಿದಿದೀನಿ. ಏನೇ ಆಗಲಿ ಬಿಡೋಲ್ಲ ನನ್ನಲ್ಲಿ ನಂಬಿಕೆ ಇದೆಯಾ ಸುಮಾ?" ಎಂದ.

ಅವಳು ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಳ್ಳುತ್ತಿದ್ದವಳು ಅವನ ಎದೆಯ ಮೇಲೊರಗಿ ಅತ್ತುಬಿಟ್ಟಳು ಅವಳು ಅಳಲಿ ಎಂದು ಸುಮ್ಮನೆ ಬೆನ್ನು ನೇವರಿಸುತ್ತಿದ್ದ ಮಾಧು.

"ವಿಷಯ ಅಮ್ಮ, ಅಣ್ಣಂಗೆ ಗೊತ್ತಾ?"

"ಇಲ್ಲ, ಹೇಳಿಬಿಡೋಣಾಂತ ತುಂಬಾ ಸಲ ಅಂದ್ಕೊಂಡೆ. ಆದರೆ ಧೈರ್ಯವೇ ಬರಲಿಲ್ಲ. ಎಷ್ಟೋ

ಸಲ ವ್ರತ ನೇಮಗಳಲ್ಲೆಲ್ಲಾ ಕೈ ಹಾಕಿಸಿ ಬಿಡ್ತಿದ್ರು ಅಮ್ಮ. ಮನಸ್ಸು ತುಂಬಾ ಹಿಂಜರೀತಿತ್ತು. ಆದ್ರೂ ಹೇಳೋಕೆ ಆಗಲಿಲ್ಲ. ನೀವು ಬಂದ ದಿನ ಜನಿಮಗೆ ಆರತಿ ಹಿಡಿದಾಗ ನನಗೆ ಜಂಘಾಬಲವೇ ಉಡುಗಿತ್ತು. ನನ್ನಂತಹ ವಿಧವೆ ನಿಮಗೆ ಆರತಿಯೆತ್ತಿ ನಿಮಗೇನಾದ್ರೂ ಕೆಟ್ಟದಾದ್ರೆ ಅಂತ ನಡುಗ್ತಾ ಇದ್ದೆ. ಆದ್ರೂ ಯಾಕೋ ನನ್ನ ವಿಷಯ ನಾನು ಹೇಳಲಾರದೆ ಹೋದೆ."

"ಒಳ್ಳೇ ಕೆಲಸ ಮಾಡ್ದೆ. ಅಮ್ಮ, ಅಣ್ಣ ತುಂಬಾ ಸಂಪ್ರದಾಯಸ್ಥರು. ಅವರ ಮನಸ್ಸಿಗೆ ಈ ವಿಷಯದಲ್ಲಿ ನೋವು ಮಾಡಬಾರದು. ಮತ್ತೆ ಇನ್ಯಾರಿಗಾದ್ರೂ ಗೊತ್ತಾ?"

" ನನಗೆ ತಿಳಿದಮಟ್ಟಿಗೆ ಯಾರಿಗೂ ಗೊತ್ತಿಲ್ಲ ನನ್ನ ಅಂತರಂಗಕ್ಕೆ, ಆತ್ಮ ಸಾಕ್ಷಿಗೆ ಗೊತ್ತಲ್ಲ. ನಿನಗೆ ಮೋಸ ಮಾಡೋದಕ್ಕೆ ಇಷ್ಟ ಆಗ್ಲಿಲ್ಲ ವೇಣೂ" ಎಂದು ಮತ್ತೆ ಕಣ್ಣೀರು ತುಂಬಿಕೊಂಡಳು.

"ಇನ್ನು ಅಳಬಾರದು ನನ್ನಲ್ಲಿ ನಿನಗೆ ನಂಬಿಕೆಯಿದ್ದ ಮೇಲೆ ಇನ್ನು ಈ ವಿಷಯ ಯೋಚಿಸಲೇಬಾರ್ದು ..ಎಲ್ಲಿ ನಗು ಮತ್ತೆ" ಎಂದು ಅವಳ ಗಲ್ಲ ಹಿಡಿದು ಮೇಲೆತ್ತಿದ ಕಣ್ಣೀರಿನಿಂದ ತೇವವಾಗಿದ್ದ ಕಣ್ಣವೆಗಳು ಅವಳ ಸೋಂದರ್ಯವನ್ನು ಹೆಚ್ಚಿಸಿತ್ತು

"ಅತ್ತರೆ ನೀನು ಎಷ್ಟು ಚೆನ್ನಾಗಿ ಕಾಣ್ತೆ ಸುಮ" ಎಂದು ಪಿಸುಗುಟ್ಟಿದ

"ಹಾಗಾದ್ರೆ ಅಳ್ತಾನೇ ಇರ್ತೀನಿ ಇನ್ಮೇಲೆ" ಎಂದು ಅಳುವಿನಲ್ಲೂ ನಕ್ಕಳು. ಮರುಳು ಹಿಡಿಸುವಂತಿತ್ತು ಆ ನಗೆ

"ಏನಂದೆ? ಇನ್ನೊಂದ್ಸಲ ಹೇಳು- ಎತ್ತಿ ಕೆಳಗೆ ಹಾಕ್ಬಿಡ್ತೀನಿ" ಎಂದು ಅವಳನ್ನು ಅನಾಮತ್ತು ಎತ್ತುವಂತೆ ಕೈ ಮುಂದೆ ತಂದ

"ಸದ್ಯ ಇಷ್ಟು ಹೊತ್ತು ಇಲ್ಲಿ ಯಾರೂ ಇರಲಿಲ್ಲ ಮಜನ ನೋಡಿದ್ರೆ ಏನಂದ್ಕೋತಾರೆ?"

"ಅಂದ್ಕೊಂಡ್ರೆ ಏನಂತೆ?" ಎಂದು ಅವಳನ್ನು ಬಳಸಿ ಹಿಡಿದು ಕಾರಿನ ಕಡೆಗೆ ನಡೆಯತೊಡಗಿದ.

"ಈಗ ಅಣ್ಣಂಗೆ ಏನು ಹೇಳ್ತೀರಿ?" ಎಂದು ನಿಂತುಬಿಟ್ಟಳು ನಡುವೆ.

"ನನ್ನ ಫ್ರೆಂಡ್ ಸಿಕ್ಕಿದ್ದ. ಅವನಿಗೆ ಸುಮ ಮೆಚ್ಚುಗೆ ಆದ್ಲು. ಅವಳಿಗೂ ಅವನು ಕೊಡೋ ಕೆಲಸ ಇಷ್ಟ. ಒಪ್ಕೊಂಡ್ಲು ಆದ್ರೆ ಆತ ತನ್ನ ತಾಯಿತಂದೆಯರನ್ನು ಕೇಳದೆ ಅಪಾಯಿಂಟ್‌ಮೆಂಟ್ ಕೊಡೋಲ್ಲ. ಒಂದು ಮಾತು ಕೇಳ್ತೀನಿ ಅಂದ...." ಎನ್ನುತ್ತಿದ್ದಂತೆ ಅವನ ಬಾಯಿ ಮುಚ್ಚಿ "ಖಂಡಿತ ಹೀಗೆ ಹೇಳ್ತೀರಾ?" ಎಂದಳು.

"ಹುಂ, ಯಾಕೆ ನಾನು ಕೊಡಿಸುವ ಗೃಹಿಣಿ ಕೆಲಸ ನಿನಗಿಷ್ಟವಿಲ್ವಾ?"

"ಇಲ್ಲ. ಖಂಡಿತವಾಗಿ ಇಲ್ಲ" ಎಂದಳು.

ತಮಾಷೆಗಾಗಿ ಹೇಳುತ್ತಿದ್ದಾಳೇನೋ ಎಂದು ಅವಳ ಕಡೆ ತಿರುಗಿದರೆ, ಅವಳು ಶೂನ್ಯದೊಳಕ್ಕೆ

ನೋಡುತ್ತಿದ್ದಳು ಕಣ್ಣಲ್ಲಿ ಗಾಬರಿ. ಮನೆಗೆ ಹೋದ ಕೂಡಲೇ ನಿಜ ತಿಳಿದ ಅಮ್ಮ 'ಉಪ್ಪುಂಡ ಮನೆಗೆ ದ್ರೋಹ ಬಗೀತೀಯಾ ಪಾಪಿಷ್ಟೆ' ಎಂದು, ಮಹಾಕಾಳಿಯಂತೆ ಕಣ್ಣು ಬಿಟ್ಟು, ವೇಣುವಿನಿಂದ ತನ್ನನ್ನು ಕಿತ್ತು, ಕುತ್ತಿಗೆ ಹಿಡಿದು ಹೊಸ್ತಿಲಿನಿಂದ ಹೊರಕ್ಕೆ ತಳ್ಳಿದಂಥ ದೃಶ್ಯ ಕಾಣಿಸಿ ನಡುಗಿದಳು. ಓಡಿಹೋಗಿ ಒಂದು ಮರದ ಬುಡ ತಬ್ಬಿ ಹಿಡಿದು ಮುಖ ಮರೆ ಮಾಡಿ ನಿಂತುಬಿಟ್ಟಳು. ವೇಣು ಬೆಪ್ಪಾದ ಹಿಂದೆಯೇ ಓಡಿ ಬಂದು,

"ಏನಾಯ್ತು ಸುಮ? ಯಾಕೆ ಹೀಗೆ ಓಡಿ ಬಂದೆ? ಹುಚ್ಚು ಹಿಡೀತಿದೆಯೇನು?" ಎಂದು ಅಸಹನೆ ತೋರಿದ.

"ಹಿಡೀತಾ ಇಲ್ಲ ಹುಚ್ಚು, ಹಿಡಿದುಬಿಟ್ಟಿದೆ. ಬಿಡಿಸಿಕೊಳ್ಳೋದು ಹೇಗೇಂತ ತಿಳೀತಾ ಇಲ್ಲ ವೇಣು" ಎಂದು ಏದುಸಿರು ಬಿಡತೊಡಗಿದಳು. "ವೇಣು, ನೀವು ನನ್ನನ್ನು ಮರೆತುಬಿಡಿ ನಾನು ನಿಮ್ಮವಳಾಗಲಾರೆ ನಿಮ್ಮನ್ನ ಪ್ರೀತಿಸೋದು ನಿಜ. ಆದ್ರೆ ನಿಮ್ಮ ಹತ್ರ ಬರೋಕೆ ನನ್ನ ಮನಸ್ಸು ಒಪ್ತಾ ಇಲ್ಲ. ನಾನು ಬದುಕಿನಲ್ಲಿ ಬಹಳ ಕಷ್ಟಪಟ್ಟಿದ್ದೀನಿ ಆದರೆ ಈ ಕಳೆದ ಮೂರು ವರ್ಷ ನನ್ನ ಬಾಳಿನಲ್ಲಿ ಒಳ್ಳೆಯ ದಿನಗಳು ಆ ದಿನಗಳನ್ನು ಮಧುರವಾಗಿ ಮಾಡಿದ ಆ ಸಾಧ್ವೀಗೆ ನಾನು ಯಾವ ರೀತಿಯಲ್ಲೂ ದ್ರೋಹ ಮಾಡಲಾರೆ ನನ್ನ ಕ್ಷಮಿಸ್ಬಿಡಿ ವೇಣು" - ಎಂದು ಮರದ ಕಡೆಗೆ ಮುಖ ಮಾಡಿಕೊಂಡಳು

"ನೀನು ಅಮ್ಮನ ವಿಷಯ ತಾನೇ ಹೇಳ್ತಾ ಇರೋದು?"

ಹಿಂತಿರುಗದೆಯೇ 'ಹುಂ' ಎಂದು ತಲೆಯಾಡಿಸಿದಳು ಅವನು ಹಿಂಡಿನಿಂದ ಅವಳನ್ನು ಹಿಡಿದು-

" ಅಮ್ಮ ಒಪ್ಪೋಲ್ಲ ನಿಜ. ಆದ್ರೆ ಅಮ್ಮನಿಗೆ ಇರೋ ಒಂದು ದೊಡ್ಡ ಹಂಬಲ ಅಂದ್ರೆ ನಾನು ಮದುವೆ ಆಗ್ಬೇಕು ಅನ್ನೋದು ಸುಮ. ಆದ್ರಿಂದ ಒಪ್ಕೊಳ್ತಾಳೆ. ಖಂಡಿತವಾಗಿ ಒಪ್ತಾಳೆ."

"ನಿಮಗೆ ಗೊತ್ತಿಲ್ಲ ವೇಣು, ನಿಮಗೆ ಗೊತ್ತಿಲ್ಲ. ಅಮ್ಮ ಒಪ್ಪೋಲ್ಲ "

"ನನ್ನ ಬದುಕಿನಲ್ಲೂ ವಿಚಿತ್ರ ಘಟನೆ ನಡೆದಿದೆ ಸುಮ ಅದರಿಂದಾಗಿ ನಾನು ಮದುವೆಯೇ ಇಲ್ಲದೆ ಉಳಿದುಬಿಡ್ತೀನಿ ಅನ್ನೋ ಭಯ ಅಮ್ಮಂಗೆ ಇದೆ ಅದ್ದರಿಂದ ಅಮ್ಮ ನನ್ನಿಷ್ಟ ಬೇಡ ಅನ್ನೋಲ್ಲ ಒಪ್ಪೇಬಿಡ್ತಾಳೆ."

"ಒಬ್ಬರ ಇಷ್ಟಕ್ಕೆ ಒಪ್ಪಿದ್ರೆ ಅವರ ಮನದ ನೋವೇನೂ ಕಡಿಮೆ ಆಗೋಲ್ಲ. ಅವರಾಗಿ ಅವರು ನನ್ನನ್ನು ಸೊಸೆ ಅಂತ ಒಪ್ಪಿಕೊಂಡ ಹೊರತು ಇದು ಸಾಧ್ಯವಿಲ್ಲ. ನಿಮಗೆ ಅವರು ಜನ್ಮ ಕೊಟ್ಟ ತಾಯಿ ತಂದೆ ಇರಬಹುದು. ಆದರೆ ನನಗೆ, ಅನಾಥ ಳಾಗಿದ್ದಾಗ ಆಸರೆ ಕೊಟ್ಟ ತಾಯಿ ತಂದೆ. ನಿಮ್ಮ ಮನಸ್ಸು ನೊಂದರೂ ಬೇಗ ಚೇತರಿಸಿಕೊಳ್ಳಬಲ್ಲುದು. ಅಥವಾ ಬೇರೆ ಆಕರ್ಷಣೆಗೆ ಒಳಗಾಗಿ ಮರೆಯಲೂ ಬಹುದು."

"ಮುಗೀತಾ ಸುಮ ಭಾಷಣ?"- ಎಂದ ವೇಣು ಅಸಹನೆಯಿಂದ.

"ನೀವು ಏನು ಬೇಕಾದರೂ ತಿಳ್ಕೊಳ್ಳಿ. ನಿಮ್ಮ ಮನಸ್ಸಿನಿಂದ ದೂರ ಬೇಕಾದ್ರೂ ಹೋಗಬಲ್ಲೆ. ಆದರೆ ಈ ವಿಶಾಲ ಪ್ರಪಂಚದಲ್ಲಿ ನನಗಾಗಿ ಇರೋವರು ಅವರಿಬ್ಬರೇ. ಅವರನ್ನು ದೂರ ಮಾಡಿಕೊಳ್ಳಲಾರೆ. ನಾನು ಅನಾಥಳು ವೇಣು ' ಅಮ್ಮಾ' ಎನ್ನಲು ಅವರು ನನಗೆ ಬೇಕು."

"ಏನೋ ಮಾಡಹೋಗಿ ಏನೋ ಮಾಡ್ತಿ ನೀನು ಅಷ್ಟೆ ಈಗ, ಅಮ್ಮನ ಮನಸ್ಸು ನೋಯಿಸಬಾರದೂಂತ ನೀನು ನನ್ನಿಂದ ದೂರ ಸರಿದರೆ, ಅವರಿಗೆ ಇನ್ನೂ ಹೆಚ್ಚು ನೋವಾಗುತ್ತೆ ಅಷ್ಟೆ. ಇಷ್ಟು ಮಾತ್ರ ತಿಳಿದುಕೊ ಸುಮ ನಾನು ಮದುವೆಗೆ ಮನಸ್ಸು ಮಾಡಿರುವುದೇ ಹೆಚ್ಚು ನನಗೆ ಯಾವ ಹುಡುಗಿಯನ್ನು ಕಂಡರೂ ಮನಸ್ಸು ಚಂಚಲವಾಗ್ತಿರಲಿಲ್ಲ ನೀನು ನನ್ನ ದೃಷ್ಟಿಗೆ ಬಿದ್ದ ಕೂಡಲೇ ನಾನು ಮನಸ್ಸು ಮಾಡಿದೆ ಈಗ ನೀನು ದೂರ ಹೋದ್ರೆ, ನಾನು ಮತ್ತೆ ಒಂಟಿಯಾಗಿ ಉಳೀತೀನಿ. ಅದರಿಂದ ಅಮ್ಮನಿಗೆ ಆಗೋ ಹೆಚ್ಚು ನೋವಿಗೆ ನೀನೇ ಜವಾಬ್ದಾರಳಾಗ್ತೀಯ, ಅಷ್ಟೆ. ಅಳು ನಿಲ್ಲಿಸಿ ನಡಿ, ಇನ್ನು ಮನೆಗೆ ಹೋಗೋಣ" ಎಂದ ನಿರ್ವಿಕಾರವಾಗಿ

ಸುಮ ಅಲುಗಾಡಲಿಲ್ಲ

"ಸುಮಾ, ಅಮ್ಮ ಖಂಡಿತ ಒಪ್ಪಿಕೊಳ್ತಾರೆ ನನ್ನನ್ನು ನಂಬು. ಅಮ್ಮನಿಗೆ ನನ್ನಲ್ಲಿ ಜೀವ ಇದೆ. ನನ್ನ ಸಂತೋಷಾನೇ ತನ್ನದು ಅನ್ನುವ ಭಾವನೆಯಿದೆ" ಎಂದು ಮೃದುವಾಗಿ.

"ಆದರೆ ನನ್ನಲ್ಲಿ ದ್ವೇಷವಿದೆ. ನೀವು ಮದುವೆ ಆಗಬೇಕು ಅನ್ನುವ ಆತುರ ಇದೆ. ಆದರೆ ಒಂದು ಪರದೇಶಿ ಹುಡುಗಿ ಸೊಸೆಯಾದರೆ ಅಸಹ್ಯವೂ ಇದೆ "

"ಇಲ್ಲದ್ದು ಯೋಚಿಸಿ ಸಂಕಟಪಡ್ತೀಯ"

"ಇಲ್ಲ, ನನಗೆ ಅಮ್ಮನ ಮನಸ್ಸು ಚೆನ್ನಾಗಿ ಗೊತ್ತು ನೀವು ಹೇಳುವ ಹಾಗೆ ಅಮ್ಮ ತಾನಾಗಿ ಪ್ರೀತಿಯಿಂದ ನನ್ನನ್ನು ಸ್ವೀಕರಿಸಿದರೆ ನನ್ನಷ್ಟು ಭಾಗ್ಯಶಾಲಿ ಯಾರಿರ್ತಾರೆ?"

'ಆ ಭಾಗ್ಯ ನಿನಗೆ ಖಂಡಿತಸಿಗಲಿದೆ ಸುಮ 'ನೀನು ನನ್ನವ್ಳು' ಅಂತ ಪ್ರೇಮದಿಂದ ಕೈಚಾಚಿ ಕರೀತಿದ್ರೆ 'ಅತ್ತೆ ನನ್ನನ್ನು ಸೊಸೆ ಅನ್ನಲಿ ಅಂತೀಯಲ್ಲ! ನಿಮ್ಮಮ್ಮ ಅಪ್ಪ ಒಪ್ಪದಿದ್ರೆ ಬೇಡ, ನಾವಿಬ್ಬರೂ ರಿಜಿಸ್ಟರ್ ಮದುವೆ ಮಾಡಿಕೊಳ್ಳೋಣ' ಅನ್ನೋದು ಲೋಕದ ತೀರಾದ್ರೆ ನೀನು-"

"ನೀವು ಎಂದಿದ್ರೂ ನನ್ನವ್ರು ಅಂತ ನನಗ್ಗೊತ್ತು. ಆದರೆ ಆ ತಾಯಿ ಕೈಯೆತ್ತಿ ನನಗೆ ನಿಮ್ಮನ್ನು ಕೊಡಲಿ ಅಂತ ನನ್ನಿಷ್ಟ" ಎಂದಳು ಈಗ ಅವಳ ಅಳು ನಿಂತಿತ್ತು.

"ನಾನು ನಿನ್ನವನೂಂತ ನಿನಗೆ ಹೇಗೆ ಗೊತ್ತು?" - ನಾಲಿಗೆ ಕೆನ್ನೆಯೊಳಕ್ಕೆ ತೂರಿಸಿ ಕೇಳಿದ.

"ನಿಮಗೆ ನಾನು ನಿಮ್ಮವಳೂಂತ ಹೇಗೆ ಗೊತ್ತು?" - ಅವಳೂ ಅದೇ ಧಾಟಿಯಲ್ಲಿ ಕೇಳಿದಳು.

" ಹೇಳ್ತೀನಿ ತಾಳು" ಎಂದು ಬಲವಾಗಿ ಅವಳನ್ನು ಎಳೆದು ಕೈಗಳೊಳಕ್ಕೆ ಯಿಡಿದು ಆಲಂಗಿಸಿದ ಅವಳೇ ಪ್ರಚೋದಿಸಿದ್ದಳು. ಸಂಯಮದಿಂದ ಉಳಿದಿದ್ದರೂ, ಅವಳ ಸನಿಹ, ಮಾತು ಅವನನ್ನು ಉದ್ರೇಕಿಸಿತ್ತು. ಉನ್ಮತ್ತನನ್ನಾಗಿ ಮಾಡಿತ್ತು. ಕಡೆಗೂ ಮೈಮರೆತು ಅವಳನ್ನು ತೋಳಿನಲ್ಲಿ ಸೆರೆಯಾಗಿಸಿದ ಅವಳೂ ಪ್ರತಿಭಟಿಸ ಲಿಲ್ಲ. ನಿಮಿಷ ನಿಮಿಷ ಕಳೆದಂತೆ ಅವನ ಮೈ ಬಿಸಿಯೇರಿತು. ಆಲಿಂಗನ ಬಿಗಿ ಯಾಯಿತು. ಹೂವು ಸ್ವಲ್ಪ ಸ್ವಲ್ಪ ನಲುಗಿತು. ನೋವಿನಿಂದ ನರಳಿತು ಕೂಡ.

"ವೇಣೂ, ನೋಯಿಸ್ತಿದೀರಾ" ಎಂದಳು ಮೆಲ್ಲಗೆ ತುಟಿಗಳನ್ನು ಕೆನ್ನೆಗೆ ಸರಿಸಿ. ಸ್ವಪ್ನದಿಂದ ಎಚ್ಚೆತ್ತವನಂತೆ ಹಿಡಿತ ಸಡಿಲ ಮಾಡಿದ. "ನೋಯಲಿ, ನೋಯಬೇಕು ಮತ್ತೆ ಇಂತಹ ಅವಕಾಗ ಸಿಗೋವರೆಗೂ ನೆನಪಿರಬೇಕು" ಎಂದು ಮೆಲುನಕ್ಕ. ಅವಳ ಮುಖದ ಬಿಳುಪೆಲ್ಲಾ ಕೆಂಪು ಬಣ್ಣಕ್ಕೆ ತಿರುಗಿತ್ತು ದೇಹದ ರಕ್ತವೆಲ್ಲಾ ಮುಖಕ್ಕೆ ಬಂದು ಆಕ್ರಮಿಸಿದಂತಿತ್ತು. ಅವಳ ತೋಳಿನಲ್ಲೇ ಸ್ವಲ್ಪ ಹಿಂದಕ್ಕೆ ಬಾಗಿ-

"ಅಬ್ಬ ! ಈ ತೋಳುಗಳಲ್ಲಿ ಇಷ್ಟು ಶಕ್ತಿ ಇರಲು ಏನಿದೆ?" ಎಂದು ಅವನ ತೋಳು ಸವರಿದಳು

ಅವನಿಗೆ ಆಗ ಲಿಸ್‌ಳ ನೆನಪಾಯಿತು 'ನಿನ್ನಲ್ಲಿ ಕಾವು, ಬಯಕೆ ಶಕ್ತಿ ಹುಟ್ಟಿಸುವಂಥ ಹುಡುಗಿ ಕಣ್ಣಿಗೆ ಬೀಳಲಿ' ಎಂದು ಹಾರೈಸಿದ್ದಳು

"ನಿನ್ನ ಹಾರೈಕೆ ಫಲಿಸಿದೆ ಲಿಸ್" ಎಂದ ಗಟ್ಟಿಯಾಗೇ.

ಸ್ವಪ್ನದಲ್ಲಿ ವಿಹರಿಸುತ್ತಿದ್ದ ಸುಮಳಿಗೆ ಮಾತಿನ ಶಬ್ದ ಕೇಳಿಸಿತೇ ವಿನಾ ಮಾತು ಕೇಳಿಸಿರಲಿಲ್ಲ.

"ಏನಂದ್ರಿ?" ಎಂದಳು.

"ಏನೂ ಇಲ್ಲ, ನಿನಗೆ ತುಂಬಾ ಥ್ಯಾಂಕ್ಸ್ ಸುಮ" ಎಂದು ಮಾತು ಮರೆಸಿದ.

"ಯಾಕೆ?" - ಅವಳಿಗೆ ಆಶ್ಚರ್ಯ, ಆಗ ಥ್ಯಾಂಕ್ಸ್ ಹೇಳುವ ಪ್ರಮೇಯ ಏನಿದೆ?

" ನೀನು ನನ್ನವಳೂಂತ ತೋರಿಸಲು ಒಂದು ಅವಕಾಶ ಕೊಟ್ಟಲ್ಲಾ ಅದಕ್ಕೆ, ಗೊತ್ತಾಯ್ತಾ ಈಗ, ನೀನು ಹೇಗೆ ನನ್ನವಳೂಂತ?" ಎಂದು ಅವಳ ಕಣ್ಣುಗಳೊಳಕ್ಕೆ ನೋಡಿದ. ಸುಮ ನಾಚಿ ತಲೆ ತಗ್ಗಿಸಿದಳು.

ವೇಣುವಿಗೆ ಗೌರಿಶಂಕರ ಹತ್ತಿದಷ್ಟು ವಿಜಯೋತ್ಸಾಹವಾಗಿತ್ತು. ಸುಮ ತನ್ನವಳಾದದ್ದು ಒಂದು ಸಂತೋಷವಾದರೆ, ಅವಳಿಗೆ ಅನ್ಯಾಯವಾಗದಂತೆ ತಾನು ದಾಂಪತ್ಯ ಜೀವನ ನಡೆಸಬಲ್ಲೆನೆಂಬ ಆತ್ಮವಿಶ್ವಾಸ ಮೂಡಿಬಂದದ್ದು ಬೇರೆ. ಇಬ್ಬರ ಎದೆಗಳು ಡವಗುಟ್ಟುತ್ತಿದ್ದವು. ವೇಣುವಿಗೆ ವಿಜಯೋನ್ಮಾದದಿಂದ ಎದೆ ತೀವ್ರ ಗತಿಯಲ್ಲಿ ತುಡಿಯುತ್ತಿತ್ತು. ಸುಮಳಿಗೆ ಮನೆಗೆ ಹಿಂತಿರುಗಲು ಭಯ.

ದಾರಿಯಲ್ಲಿ ಬರುತ್ತಿರುವಾಗ-" ಮನೆಯಲ್ಲಿ ನೀವು ನನ್ನ ಹತ್ತಿರ ಹೀಗೆಲ್ಲಾ

ಸಲಿಗೆಯಾಗಿರಬಾರದು" ಎಂದು ಷರತ್ತು ಹಾಕಿದಳು.

"ಹಾಗಾದ್ರೆ ದಿನಾ ಪಾರ್ಕಿಗೆ ಬರೋಣ್ವೇನು?" ಕೊಂಕಿನ ಪ್ರಶ್ನೆ.

"ಹಾಗಲ್ಲಪ್ಪ...."

"ಮತ್ತೆ ಹೇಗಪ್ಪ?"

"ಅಮ್ಮ ಒಪ್ಪುವವರೆಗೆ ನಾನು ಬರೀ ಸುಮ "

"ಆಮೇಲೆ?"

"ನಿಮ್ಮ ತಲೆ" ಎಂದು ತಲೆಯ ಮೇಲೆ ಮೃದುವಾಗಿ ತಟ್ಟಿದಳು.

"ಆಮೇಲೆ ಮಿಸೆಸ್ ವೇಣುಮಾಧವ್" ಎಂದ ಅವನು ಮೆಲ್ಲಗೆ ಅವಳ ಕಡೆ ನೋಡಿದ. ತಕ್ಷಣವೇ ಅವಳ ಮುಖ ಕಪ್ಪಿಟ್ಟು, ನೇರವಾಗಿ ದೃಷ್ಟಿ ರಸ್ತೆಗೆ ಹೋಯಿತು ಅವಳ ಮನದ ಭಯದ ಅರಿವು ಅವನಿಗಿತ್ತು. ಅಮ್ಮ ಕಡಿಮೆ ಅಂತಸ್ತಿನ ಸುಮಳನ್ನು ಸೊಸೆಯಾಗಿ ಸ್ವೀಕರಿಸುವುದಿಲ್ಲವೆಂಬ ಸತ್ಯ ಅವನಿಗೂ ತಿಳಿದದ್ದೇ, ಆದರೂ ಕಡೆಗೆ ಜಯ ತನಗೇ ಎಂಬ ಒಂದು ಆತ್ಮವಿಶ್ವಾಸ ಅವನಿಗಿತ್ತು ತನ್ನ ಮತ್ತು ಅಮ್ಮನ ನಡುವಿನ ಘರ್ಷಣೆಯಲ್ಲಿ, ಅಮ್ಮ ಸೋಲುತ್ತಾಳೆಂದು ಅವನಿಗೆ ಅಪಾರ ನಂಬಿಕೆ. ಹಾಗಾಗಿ, ಸುಮಳಿಗೆ ಧೈರ್ಯ ಕೊಡುವುದು ಅವನ ಕರ್ತವ್ಯವಾಗಿತ್ತು.

"ನೋಡಿ ಮಿಸೆಸ್ ವೇಣುಮಾಧವ್, ಎಲ್ಲಾ ಸರಿಹೋಗುತ್ತೆ. ಏನೂ ಯೋಚನೆ ಮಾಡ್ಬೇಡಿ. ನಿಮ್ಮ ಚಿಂತೆಗಳನ್ನೆಲ್ಲಾ ಡಾ|| ವೇಣುಮಾಧವ್‌ಗೆ ಬಿಟ್ಬಿಡಿ ಇನ್ಮೇಲೆ, ಅವರು ನೋಡ್ಕೋತಾರೆ" ಎಂದು ಹಾಸ್ಯವಾಗಿಯೇ ಧೈರ್ಯಕೊಡುವಂತೆ, ಅವಳ ತೊಡೆಯ ಮೇಲೆ ಮೆಲ್ಲಗೆ ತಟ್ಟಿದ. ಅದು ತಣ್ಣಗೆ ಕೊರೆಯುತ್ತಿತ್ತು. 'ಹೆದರಬೇಡ' ಎನ್ನುವಂತೆ ಆ ಮೃದು ಕೈಯನ್ನು ತನ್ನ ಬಲಿಷ್ಠ ಹಸ್ತದಿಂದ ಹಿಡಿದು ಒತ್ತಿದ.

ಮನೆ ತಲುಪಿದಾಗ ಇವರಿಗಾಗಿಯೇ ಕಾಯುತ್ತಿದ್ದಂತೆ ರಾಯರೂ, ನಾಗಮ್ಮ ವೆರಾಂಡದಲ್ಲಿ ಕುರ್ಚಿ ಹಾಕಿ ಕುಳಿತಿದ್ದರು. ಮಾಧು ನೇರವಾಗಿ ಖಾಲಿಯಿದ್ದ ಕುರ್ಚಿಯೊಂದರಲ್ಲಿ ಅವರ ಬಳಿಯೇ ಕುಳಿತ. ಸುಮ ರಾಯರ ಕುರ್ಚಿಯ ಕೈಯ ಬಳಿ ನಿಂತಳು.

"ಸುಮಳ ಮುಖ ನೋಡಿದ್ರೆ ಹೋದ ಕೆಲಸ ಆಗಿದೆ ಅಂತ ಹೇಳ್ತಾ ಇದೆ. ಏನಮ್ಮ" ಎಂದರು ರಾಯರು.

ಸುಮ ಬಾಯಿ ಬಿಟ್ಟರೆ ಧ್ವನಿ ನಡುಗೀತೆಂದು ತಲೆಯನ್ನು ಮಾತ್ರ ಅಲ್ಲಾಡಿಸಿದಳು. ಅವಳ ತಲೆಯನ್ನು ನೋಡುತ್ತಿದ್ದ ನಾಗಮ್ಮ, "ನಾನು ಆಶೀರ್ವಾದ ಮಾಡಿ ಕಳಿಸಿದ್ದೇ, ಆಯ್ತು!" ಎಂದರು ಅವರು ಅಷ್ಟು ಮಾತನಾಡಿದುದೇ ಹೆಚ್ಚು ಎನಿಸಿತು ಸುಮಳಿಗೆ. ಆಕೆ ಮತ್ತೆ ಮಗನ ಕಡೆಗೆ ತಿರುಗಿ-

"ಕಾಫಿ ಬೇಡ್ವೇ ಮಾಧೂ ಅಥವಾ ಫ್ರಂಡೇ ತರ್ಸಿ ಕೊಟ್ಟನೋ?" ಎಂದರು.

ಅಧರಾಮೃತ ಮಡಿದವರಿಗೆ ಕಹಿ ಕಾಫಿಯ ಗೊಡವೆಯೇಕೆ? ಆದರೂ ಚೆನ್ನಾಗಿ ನಟನೆ ಕಲಿತಿದ್ದ ಮಾಧು-"ಬೇಕಮ್ಮ, ತುಂಬಾ ಹಸಿವಾಗ್ತಿದೆ" ಎಂದು ಎದ್ದ. ತಾಯಿ ಪ್ರೀತಿಯಿಂದ ನಗುತ್ತಾ ಮಗನೊಂದಿಗೆ ಒಳಗಡೆ ಹೋದರು. ಸುಮಳಿಗೀಗ ಉಸಿರಾಡುವಂತಾಯಿತು. ಆದರೂ ಈ ಹಿರಿಯರನ್ನು ಹೇಗೆ ಎದುರಿಸುವುದೋ ಎಂದು ಭಯ. ಅವರ ನಿಷ್ಕಲ್ಮಷ ಮನಸ್ಸಿಗೆ ಸುಳ್ಳಿನ ಸರ ಪೋಣಿಸಿ ಹೇಳಬೇಕಲ್ಲಾ ಎಂಬ ನೋವೊಂದು ಕಡೆ. .

"ಕೂತ್ಕೋ ಸುಮ, ಏನೆಲ್ಲಾ ಕೇಳಿದ್ರು? ಇನ್ನು ಎಷ್ಟು ಜನ ಕೆಲಸ ಮಾಡ್ತಾರೆ ಅಲ್ಲಿ? ಹುಡುಗಿಯರು ಇದಾರ? ಕೆಲಸದ ಸಮಯ ಏನಂತೆ? ಯಾವತ್ತಿಂದ ಡ್ಯೂಟಿಗೆ ಹೋಗಬೇಕಂತೆ ನೀನು?" - ಹತ್ತಾರು ಪ್ರಶ್ನೆ ರಾಯರದು. ಎಲ್ಲಕ್ಕೂ ಏನೋ ಒಂದು ಉತ್ತರ ಕೊಟ್ಟಳು. ಆದರೆ ಕಡೆಯ ಪ್ರಶ್ನೆಗೆ ಮಾತ್ರ ನಿಖರವಾಗಿ ಹೇಳಬೇಕಿತ್ತು - "ನಿಮ್ಮ ಮಗನಿಗೆ ತಿಳಿಸ್ತಾರಂತೆ ಒಂದು ತಿಂಗಳೇ ಆಗಬಹುದು ಹೆಡ್ ಆಫೀಸಿನಿಂದ ಒಪ್ಪಿಗೆ ಬರಬೇಕಂತೆ." ಎಂದಳು. ಸದ್ಯ ಆ ವೇಳೆಗೆ ವೇಣು ಅಲ್ಲಿಗೆ ಬಂದು ಅದನ್ನು ಕೇಳಿಸಿಕೊಂಡ. 'ಇಲ್ಲದಿದ್ದರೆ ಅವನು ಹೇಳುವುದೇ ಬೇರೆಯಾಗಿಬಿಟ್ಟರೆ? ಅಮ್ಮಯ್ಯ' ಎಂದು ಎದ್ದು ಒಳಗೆ ನಡೆದಳು.

ಇವಳು ಒಳಗೆ ಹೋಗುವಾಗ, ಎದುರಿಗೆ ಪ್ರೀತಿಯ ದೃಷ್ಟಿಯಿಂದ ವೇಣು ನಿಂತಿದ್ದನ್ನೂ ರಾಯರು ಗಮನಿಸಿದರು. 'ಯಾಕಾಗಬಾರದು, ದೈವ ಬಯಸಿದರೆ?' ಎಂದುಕೊಂಡರು. ಸುಮಳನ್ನು ಕಾಫಿಗಾಗಿ ಒಳಗೆ ಕರೆಯಲು ಬಂದ ನಾಗಮ್ಮನೂ ಅದೇ ದೃಶ್ಯವನ್ನು ಕಂಡರು. ಅವರ ಮನ ಹೇಳಿದುದೇ ಬೇರೆ. "ಹೀಗಾಗಬಾರದು, ತಾವು ಅದನ್ನು ಆಗಗೊಡಬಾರದು" ಎಂದು.

## ೧೨

ವೇಣುವಿಗೆ ಬೇಸಿಗೆ ರಜ ಬಂತು. ಅವನಿಗೆ ಮನೆಯಲ್ಲಿರುವುದು ಕಷ್ಟವಾಗ ತೊಡಗಿತು. ಆದಷ್ಟು ಬೇಗ ತನ್ನ ಸಮಸ್ಯೆಯನ್ನು ಅಮ್ಮನ ಮುಂದಿಡಬೇಕೆಂದು ಧೈರ್ಯ ಕೂಡಿಸತೊಡಗಿದ. ಒಮ್ಮೊಮ್ಮೆ, ಅಣ್ಣನೊಡನೆ ಪ್ರಸ್ತಾಪಿಸಿ, ಅಮ್ಮನನ್ನೂ ಒಪ್ಪಿಸುವಂತೆ ಬೇಡಿಕೊಂಡರೆ? - ಎಂದುಕೊಳ್ಳುತ್ತಿದ್ದ. ಅಣ್ಣ ತಪ್ಪಲ್ಲದ ಯಾವ ಕೆಲಸವನ್ನೂ ಬೇಡವೆನ್ನುವುದಿಲ್ಲವೆಂದು ಗೊತ್ತು. ಹಾಸ್ಟೆಲಿನಲ್ಲಿದ್ದ ಹುಡುಗರ ಬೆನ್ನ ಮೇಲೆ ಕೈಹಾಕಿ ಮಾತನಾಡುವ ಅಣ್ಣನಿಗೆ ಬಡವರ, ಅನಾಥರ ಬಗೆಗಿದ್ದ ಔದಾರ್ಯ ವೇಣುವಿಗೆ ತಿಳಿದ ವಿಷಯವೇ. ಅಮ್ಮನದೇ ತಕರಾರು. ಆಕೆಗೆ ಇನ್ನೂ ಅಂತಸ್ತು, ಐಶ್ವರ್ಯ, ಕೀರ್ತಿ, ಪ್ರತಿಷ್ಠೆಗಳ ವ್ಯಾಮೋಹ ಪೂರ್ತಿ ಅಳಿಸಿಹೋಗಿಲ್ಲ. ಅಣ್ಣನ ಕೈ ಹಿಡಿದ ದಿನದಿಂದಲೇ ಆಕೆಯ ಈ ಮೋಹ ಇಳಿಮುಖವಾಗಿದೆ.

ಈಗ ಯಾವ ದೀನದಲಿತರ ಬಗೆಗೂ ತಿರಸ್ಕಾರ ತೋರುವುದಿಲ್ಲ. ಆದರೂ ಸ್ವಂತ ಮಗನ ಮಡದಿಯಾಗಿ ಬರುವವಳು ಸಮ ಅಂತಸ್ತಿನವಳಾಗಬೇಕೆಂದು ಅಮ್ಮ ಹಂಬಲಿಸುವುದು ನ್ಯಾಯವೇ ಎನಿಸಿದಾಗ ಅವನಿಗೆ ಜಂಘಾಬಲವೇ ಉಡುಗಿಹೋಗುತ್ತಿತ್ತು. ಅದೇ ಸಮಯದಲ್ಲಿ ಒಬ್ಬನೇ ಮಗನಾದ ತನ್ನಿಚ್ಛೆಯನ್ನು ಬೇಡವೆನ್ನುವಷ್ಟು ದೊಡ್ಡದಾಗ ಬೇಕೆ, ಅಂತಸ್ತಿನ ವ್ಯಾಮೋಹ? ಅಮ್ಮ ಅರ್ಥ ಮಾಡಿಕೊಳ್ಳುತ್ತಾಳೆ ಎಂಬ ಯಾವುದೋ ನಂಬಿಕೆ ಧೈರ್ಯ ತುಂಬುತ್ತಿತ್ತು. 'ಅಮ್ಮ ಒಪ್ಪದಿದ್ದರೆ, ಕಡೆಗೆ ಒಂದು ನಿಟ್ಟುಸಿರು ಬಿಟ್ಟರೂ ನಾನು ನಿಮ್ಮ ಕೈ ಹಿಡಿಯುವುದು ಅಸಂಭವ' ಎಂದು ಪ್ರತಿ ಘಳಿಗೆಯಲ್ಲೂ ನೆನಪು ಮಾಡುತ್ತಾಳೆ ಈ ಸುಮ. ಹಟಮಾರಿ ಹುಡುಗಿ ಅಬ್ಬ. ಅವಳಿಗೆಷ್ಟು ಸಂಯಮ.

"ಕೆಲಸ ದೊರಕಿಸಿಕೊಡಿ" ಎಂದು ಒಂದೇ ಸಮ ತಗಾದೆ ಮಾಡುತ್ತಿದ್ದ ಸುಮ ಏಕೆ ಸುಮ್ಮನಾಗಿಬಿಟ್ಟಿದ್ದಾಳೆ ಎಂದು ಒಂದೆರಡು ಸಲ ರಾಯರು ಯೋಚಿಸಿದರು. ಅವಳು ಕೆಲಸಕ್ಕೆ ಹೋಗುವ ಬಗ್ಗೆ ಅವರಿಗೂ ಅಂತಹ ಆಸಕ್ತಿಯಿರದ ಕಾರಣ ಸುಮ್ಮನಾದರು. ಹೆಣ್ಣು ಮಕ್ಕಳಿಲ್ಲದ ಕಾರಣ ಅವರಿಗೆ ಸುಮ ಎಂದರೆ ಏನೋ ಒಂದು ನಿಧಿಯೆನಿಸುತ್ತಿತ್ತು. ಸ್ವಂತ ಮಗಳಾಗಿದ್ದರೂ ಸಹ ಇಷ್ಟು ವಿನಯ, ವಿಧೇಯತೆ, ವಿಶ್ವಾಸಗಳನ್ನು ತೋರಿಸುತ್ತಿರಲಿಲ್ಲವೇನೋ ಎನಿಸುವಷ್ಟು ಒಳ್ಳೆಯತನ ಅವಳದು. ಅವಳನ್ನು ನಡುನೀರಿನಲ್ಲಿ ಬಿಟ್ಟುಬಿಡಲು ಅವರು ಇಚ್ಛಿಸಿರಲಿಲ್ಲ. ಯಾವುದೋ ದೈವ ಪ್ರೇರಣೆಯಿಂದ ತಮ್ಮ ಉಡಿಗೆ ಬಂದು ಬಿದ್ದಿದೆ ಈ ಪುಷ್ಪ. ಒಳ್ಳೆಯ ಮುಡಿಗೆ ಏರಿಸಬೇಕು ಎಂಬುದು ಅವರ ಇಚ್ಛೆ.

ಪ್ರತಿ ಘಳಿಗೆಯಲ್ಲೂ ಸುಮ ಸುಮ ಎಂದು ಓಡಾಡುವ ಮಾಧುವನ್ನು ಚೆನ್ನಾಗಿ ಗಮನಿಸುತ್ತಿದ್ದರು ನಾಗಮ್ಮ. ತಮ್ಮ ಊಹೆ ನಿಜವಾಗಿಬಿಡುವುದೇನೋ ಎಂದು ಹೆದರುತ್ತಿದ್ದರು. ಆದರೆ ಸುಮಳ ಸೌಮ್ಯ ಮುಖ ಕಂಡೊಡನೆ ಅವಳು ಅಂತಹ ವಂಚನೆಯ ಹುಡುಗಿಯಲ್ಲ ಎಂದು ಸಮಾಧಾನ ಹೇಳಿಕೊಳ್ಳುವರು. ಮಾಧುವೆಂದಿದ್ದ ಆ ಮಾತು ಎಂದೋ ಅನಂತರದಲ್ಲಿ ಕರಗಿಹೋಗಿದೆ. 'ನಿನ್ಮಗ ಗೃಹಸ್ಥನಾಗೋ ದಿನ ಹತ್ತಿರ ಬರ್ತಾ ಇದೆ' ಎಂದಿದ್ದ ಚಂಪಳ ಮದುವೆಗೂ ಮುಂಚೆ. ಈಗಾಗಲೆ ಎರಡು ತಿಂಗಳೇ ಕಳೆದಿವೆ. ಪುಣ್ಯಾತ್ಮ ಮದುವೆಯ ಸುದ್ದಿಯೇ ಎತ್ತಿಲ್ಲ. ತಾವಾಗಿ ಪ್ರಸ್ತಾಪಿಸಬಾರದೆಂದು ಪತಿಯ ಕಟ್ಟಾಜ್ಞೆ ಬೇರೆ.

ಅವನು ಅಮೆರಿಕದಿಂದ ಹಿಂತಿರುಗಿ ಬಂದು ಆರು ತಿಂಗಳ ಮೇಲಾಯಿತು. ಮೊದಲೆಲ್ಲಾ ಕನ್ಯಾಪಿತೃಗಳಿಗೆ 'ಅವನು ಬರಲಿ ನೋಡೋಣ' ಎಂದು ಉತ್ತರ ಕೊಟ್ಟಾಯಿತು. ಬಂದ ಮೇಲೆ ಚಂಪಳು ದೃಷ್ಟಿಯಲ್ಲಿದ್ದುದರಿಂದ ನಿರಾಕರಿಸಿದರು. ಈಗ ಮೂವತ್ತು ತುಂಬಿ ಕುಳಿತಿದೆ. ಇನ್ನೂ ಇವನು ಮನಸ್ಸು ಮಾಡುವುದು ಯಾವ ಕಾಲಕ್ಕೆ, ಮೆಚ್ಚುವುದು ಯಾವ ಹುಡುಗಿಯನ್ನು?

ಮೆಣಸಿನಪುಡಿ ಕುಟ್ಟಿ ಕೊಡುವ ಶಾರದಮ್ಮ ಮೊನ್ನೆ ಏನೋ ಮಾತಿಗೆ ಬಂದು ಕೇಳಿಯೇಬಿಟ್ಟರು. "ನಿಮ್ಮ ಮಾಧು ಯಾವುದೋ ಕಾಲೇಜಿನ ಹುಡುಗೀಗೆ ಮನಸ್ಸು ಕೊಟ್ಟಿದ್ದಾನಂತಲ್ಲ - ನಿಮ್ಮವರೆಗೂ

ವಿಷಯ ಬಂದಿರ್ಲ್ವೇನು? ವಿಚಾರಿಸಿಕೊಳ್ಳೀಮ್ಮ" ಎಂದು. ನಾಗಮ್ಮನಿಗೆ ಕೆಡುಕೆನಿಸಲಿಲ್ಲ. ಆ ಹುಡುಗಿಯ ಹುಟ್ಟು ಪೂರ್ವೋತ್ತರ ಎಲ್ಲಾ ವಿಚಾರಿಸಿ, ಒಳ್ಳೆಯ ಮನೆತನದ ಹುಡುಗಿಯಾದರೆ, ತಾವೇ ಕರೆಸಿ ಅವರು ವಿಚಾರಿಸಿದಲ್ಲಿ ಅಂತಹ ಹುಡುಗಿ ಯಾರೂ ಇಲ್ಲವೆಂದು ತಿಳಿದುಬಂತು. 'ಆ ಹುಡುಗಿ ಇದ್ದಳು. ಸುಮಳೇ ಆ ಕಾಲೇಜು ಹುಡುಗಿ' ಎಂದು ಆಕೆಗೆ ತಿಳಿಯುವುದಾದರೂ ಹೇಗೆ?

* * *

ಒಂದು ದಿನ ಮಧ್ಯಾಹ್ನ ಸುಮ ಮುಖ ತೊಳೆದು ಬಂದು ಕಾಡಿಗೆ ಮುಖಕ್ಕಿಟ್ಟುಕೊಂಡ ನಂತರ ಕಾಫಿ ಬೆರೆಸಿಕೊಡಲು ಒಳಗೆ ಬಂದಳು. ತಾಯಿ ಮಗ ಮಾತನಾಡುತ್ತಿದ್ದ ಎಡೆಗೆ ಕಾಫಿ ಹಿಡಿದು ಬಂದಾಗ ಮಾಧು, "ಸುಮ, ಅದೇನು ಹಣೆಗೆ ಸದಾ ಕಾಡಿಗೆಯನ್ನೇ ಹಚ್ಚಿಕೊಳ್ತಿ? ನಾಳೆಯಿಂದ ಕುಂಕುಮ ಇಟ್ಕೋ" ಎಂದ.

"ಅವಳೇನಾದ್ರೂ ಇಟ್ಕೊಳ್ಲಿ ನಿಂಗ್ಯಾಕೆ ಮಾಧು?" - ಮಧ್ಯೆ ಮಾತಾಡಿದರು ತಾಯಿ.

"ಅಲ್ಲಮ್ಮ, ಇಷ್ಟು ದೊಡ್ಡ ಹುಡುಗಿಯಾಗಿ ಕಾಡಿಗೆ ಹಣೆಗೆ ಅಸಹ್ಯ" ಎಂದು ಮತ್ತೂ ಸೇರಿಸಿದ ಹಾಗಾದರೂ ಅಮ್ಮ 'ನಿನಗ್ಯಾಕೆ ಅವಳಲ್ಲಿ ಆಸಕ್ತಿ?" ಎಂದು ಕೆಣಕಲಿ, ವಿಷಯ ಹೇಳಲು ಪೀಠಿಕೆ ಆಗುತ್ತದೆಂದು ಬಗೆದ.

ಅಮ್ಮ ಗೆದ್ದುಬಿಟ್ಟರು. ಕೆಣಕಲಿಲ್ಲ - "ಸರಿ. ನಾಳೆಯಿಂದ ಕುಂಕುಮ ಇಟ್ಕೋಮ್ಮ ಸುಮ" ಎಂದರು.

"ನಾಳೆಯಿಂದ ಯಾಕೆ? ಈಗ್ಲೇ ಇಟ್ಕೋ ಸುಮ, ನಡಿ" ಎಂದು ಅವಳನ್ನು ಓಡಿಸುವನಂತೆ ಅವಳ ಕೋಣೆಗೆ ನಡೆದು ಮೆಲ್ಲಗೆ "ಸುಮ, ನಾನು ಮತ್ತೆ ಹೇಳಬೇಕೂಂತಿದ್ದೆ. ನೀನು ಇನ್ಮೇಲೆ ವಿಧವೆಯಲ್ಲ. ಲಕ್ಷಣವಾಗಿ ಕುಂಕುಮ ಇಟ್ಕೋ, ಹೂ ಮುಡಿ" ಎಂದ.

"ಊಹುಂ, ಈ ತಕ್ಷಣದ ಬದಲಾವಣೆ ಕಂಡರೆ ಅಮ್ಮ ಏನಂದ್ಕೋತಾರೆ. ಕುಂಕುಮ ಇಟ್ಕೋತೀನಿ. ಹೂವು ಬೇಡ. ಇಷ್ಟವಿಲ್ಲದೆ ಮುಡಿಯುತ್ತಿಲ್ಲ ಅಂದ್ಕೊಂಡಿದಾರೆ. ಹಾಗೇ ಇರಲಿ" ಎಂದು ಹಣೆಗೆ ದೊಡ್ಡದಾಗಿ ಕುಂಕುಮವಿಟ್ಟು ಕೊಂಡಳು. ಅವಳ ಹಣೆಯೇ ನಗುತ್ತಿದ್ದಂತಿತ್ತು. ಅವಳನ್ನೆಳೆದು ಅಲ್ಲಿಯೇ ಹೃದಯಕ್ಕೆ ಒತ್ತಿಕೊಳ್ಳಬೇಕೆಂಬ ಇಚ್ಛೆ ಪ್ರಬಲವಾಯಿತು ಮಾಧುವಿಗೆ. ಆದರೆ ಅಮ್ಮ ಅಲ್ಲೇ ಕಣ್ಣಳತೆಯಲ್ಲಿದ್ದಾರೆಂದು ಬಲವಂತವಾಗಿ ತಡೆದುಕೊಂಡ. ಅವಳಿಗೆ ಸೌಭಾಗ್ಯ ಕೊಡುವ ಭಾಗ್ಯ ತನ್ನದೆಂದು ಅವನಿಗೆ ಹೆಮ್ಮೆಯಿಂದ ಎದೆಯುಬ್ಬಿತು. ತೃಪ್ತಿಯಿಂದ ಅವಳನ್ನೇ ನೋಡುತ್ತ ಅವನು ಕೋಣೆಯ ಬಾಗಿಲಲ್ಲಿ ನಿಂತಿದ್ದರೆ ಅವಳು ಅವನನ್ನು ದಾಟಿಕೊಂಡು ತಾಯಿಯ ಬಳಿಗೆ ಬಂದಳು, "ಆಯ್ತೇನಪ್ಪ ತೃಪ್ತಿ?" ಎಂದು ತಾಯಿ ಸಮ್ಮತಿ ಸೂಚಿಸಿದಾಗ, ಮತ್ತೆ ಮಾಧುವಿಗೆ ಸೋಲೇ. ಸಾಲದು ಎಂಬಂತೆ

"ಕುಂಕುಮ ಇಟ್ಕೊಂಡ್ರೆ ಹೆಚ್ಚು ಲಕ್ಷಣವಾಗಿ ಕಾಣ್ತೀಯಮ್ಮ" ಎಂದು ಹೊಗಳಿಕೆ ಬೇರೆ. ಕೈ ಕೈ ಹಿಸುಕಿಕೊಂಡ ಮಾಧು. ಕುಸ್ತಿ ಹಿಡಿದರೆ ಗೆಲ್ಲಬಹುದು. ಒಳ್ಳೆಯತನವನ್ನು ಗೆಲ್ಲಲು ಅಸಾಧ್ಯ.

ಅಮ್ಮನ ಕಣ್ಣಿಗೆ ಕಾಣುವ ಹಾಗೆ ಸುಮಳ ಕೋಣೆಗೆ ಓಡಾಡಬೇಕೆಂದುಕೊಂಡ. ಆದರೆ ಆ ಉಪಾಯದಿಂದ ಸುಮಳಿಗೆ ತೊಂದರೆಯಾಗಬಹುದು. ಅಮ್ಮ ಅವಳಲ್ಲಿ ತಪ್ಪು ಕಾಣಬಹುದು. ಹಾಗಾಗಬಾರದು. ಅವಳನ್ನು ಸಿಕ್ಕಿಸಬಾರದು. ಹಾಗಾದರೆ ಮತ್ತೆ ಹೇಗೆ? ಹೇಗೋ, ದೇವರಿಗೇ ಗೊತ್ತು ಎಂದು ಸ್ವಲ್ಪ ನಿರಾಶನಾದ. ನೇರವಾಗಿ ಮಾತನಾಡಿಬಿಡಬೇಕೆಂದು ಎಷ್ಟೇ ಅಂದುಕೊಂಡರೂ ಒಂದೇ ಸಲಕ್ಕೆ ಬೇಡ ಎಂದರೆ? ಎಂಬ ನಿಷ್ಠೂರ ಸತ್ಯಕ್ಕೆ ಹೆದರಿ ಕುಳಿತ.

* * *

ಅದೊಂದು ಸಂಜೆ ಸುಮ ಗೆಳತಿಯ ಮನೆಗೆ ಹೋಗಿದ್ದಳು. ರಾಯರೂ ಇರಲಿಲ್ಲ. ಏನೋ ತೋಚಿದಂತೆ ಡ್ರೆಸ್ ಮಾಡಿಕೊಂಡು ಹೊರಗಡೆ ಹೊರಟುಹೋದ ಮಾಧು, ಒಂದು ಗಂಟೆಯ ಒಳಗೇ ಪುನಃ ಹಿಂತಿರುಗಿ ಬಂದವನು ಎರಡು ಸೀರೆಗಳನ್ನು ಅಮ್ಮನ ಮುಂದೆ ಹಿಡಿದ.

"ಏನಿದು ಮಾಧು, ಈಗ್ಯಾಕೆ ಇವುಗಳನ್ನ ಕೊಂಡುಕೊಂಡು ಬಂದೆ?" ಎಂದರು ನಾಗಮ್ಮ.

"ಚೆನ್ನಾಗಿದೆಯೋ ಇಲ್ವೋ ಹೇಳಮ್ಮ. ನನಗೆ ಒಂದು ಕಡೆ ಸ್ವಲ್ಪ ಕೆಲಸ ಇತ್ತು. ಹೋಗಿದ್ದೆ. ಒಬ್ಬ ಫ್ರೆಂಡ್ ಸಿಕ್ಕಿಬಿಟ್ಟು ಬಟ್ಟೆ ಅಂಗಡೀಗೆ ಹೋಗ್ಬೇಕೂಂತ ನನ್ನನ್ನೂ ಎಳಕೊಂಡು ಹೋದ. ಇವೆರಡೂ ಚೆನ್ನಾಗಿತ್ತು. ತಂದ್ಬಿಟ್ಟೆ. ಬೇಡದಿದ್ರೆ ಹೇಳು. ಇನ್ನೂ ದುಡ್ಡು ಕೊಟ್ಟಿಲ್ಲ. ವಾಪಸ್ ಕೊಟ್ಟಿಡ್ತೀನಿ."

"ಚೆನ್ನಾಗಿದೆ ಮಾಧು."

"ಇದು ನಿನಗೆ, ಇದು ಸುಮಾಗೆ" ಎಂದು ಹೇಳಿ ತಾಯಿಯ ಕಡೆಗೆ ನೋಡಿದ.

ಅವನು ಬಯಸುತ್ತಿದ್ದ ಸಂದರ್ಭ ಸನ್ನಿಹಿತವಾದಂತೆ ಕಂಡಿತು. ಅಮ್ಮ ಬೇಸರದಿಂದ ದನಿ ತೆಗೆದು "ಸುಮ್ಮನೆ ಅವಳನ್ನು ಯಾಕೆ ಪ್ರೋತ್ಸಾಹಿಸುತ್ತೀ ಮಾಧೂ?" ಎಂದರು.

"ಒಂದು ಸೀರೆ ತಂದ್ಕೊಟ್ರೆ ಪ್ರೋತ್ಸಾಹ ಏನಮ್ಮ? ಅದೂ ಅಲ್ಲದೆ ಅವಳು ಇಂತಹ ಸೀರೆ ತೊಗೊಳ್ಳೋಕೆ ಸಾಧ್ಯವೆ?"

"ಅದೇ ಬೇಡ ಅಂತ ನಾನಂತಿರೋದು. ನೀನು ಒಂದು ವಾಯಿಲ್ಲೋ, ನೈಲಾನೋ ತಂದಿದ್ರೆ ನಾನೇನೂ ಬೇಡ ಅಂತಿರಲಿಲ್ಲ. ಇಷ್ಟು ಭಾರಿ ಸೀರೆ ತಂದಿದ್ದಿ. ಹೀಗೆಲ್ಲಾ ಮಾಡಿದ್ರೆ ನಾಳೆ ಅವಳಿಗೇ ಕಷ್ಟ ಆಗುತ್ತೆ."

"ಏನೋಮ್ಮ, ನಿನ್ನ ಮಾತೇ ನನಗರ್ಥ ಆಗ್ತಾ ಇಲ್ಲ."

"ಅದರಲ್ಲಿ ಅರ್ಥ ತಾತ್ಪರ್ಯ ಏನಿದೆ ಹೇಳು. ಈವತ್ತೋ ನಾಳೆಯೋ ಒಂದು ಉದ್ಯೋಗ

ಹಿಡಿದು ತನ್ನ ಪಾಡಿಗೆ ತಾನು ಇರೋಳು ಅವಳು. ಒಂದು ವೇಳೆ ಮದುವೆ ಆದರೂ ಇಂಥಾ ಪದಾರ್ಥಗಳನ್ನು ಬಳಸುವ ಶಕ್ತಿ ಅವಳಿಗೆ ಇರುತ್ತಾ? ಈಗ ಹೀಗೆ ಅಭ್ಯಾಸವಾಗಿ, ನಾಳೆ ಸಾಧಾರಣವಾಗಿರಬೇಕೂಂದ್ರೆ ಬಹಳ ನೊಂದುಕೋಬೇಕಾಗುತ್ತೆ."

"ಒಂದು ಕೆಲಸ ಮಾಡೋಣ. ಅಂಥವರಿಗೆ ಕೊಟ್ಟು ಮದುವೆ ಮಾಡುವುದೇ ಬೇಡ. ಚೆನ್ನಾಗಿ ಆಸ್ತಿ ಇರೋವ್ರನ್ನೇ ಹುಡುಕಿ ಮಾಡಿದರಾಯ್ತು."

"ಚೆನ್ನಾಗಿ ಹೇಳಿದೆ. ಅಲ್ಲ ಮಾಧು ಯಾರು ಮಾಡ್ಕೋತಾರೆ? ಏನೂ ತಿಳಿಯದವನ ಹಾಗೆ ಮಾತಾಡ್ತೀಯ."

"ಯಾಕಮ್ಮ ಮಾಡ್ಕೊಳ್ಳೋಲ್ಲ? ಯಾರೂ ಮಾಡ್ಕೊಳ್ದೆ ಇದ್ರೆ ನಾನೇ ಮಾಡ್ಕೊಳ್ತೀನಿ."

"ಮಾಧೂ!!" ಸ್ವಲ್ಪ ಗಟ್ಟಿಯಾಗೇ ಕೂಗಿದರು ನಾಗಮ್ಮ.

"ಹೂಂ ಅಮ್ಮ. ಒಳ್ಳೇ ಹುಡುಗಿ, ನಿಮ್ಮಿಬ್ಬರಿಗೂ ಇಷ್ಟವಾದ ಹುಡುಗಿ. ಅವಳಿಗೂ ನಿಮ್ಮನ್ನು ಕಂಡರೆ ಗೌರವ, ಅಕ್ಕರೆ "

"ಮಾಧು, ಸಾಕು ನಿಲ್ಲಿಸು  ಯಾರಾದ್ರೂ ಕೇಳಿಸಿಕೊಂಡಾರು" - ಆಕೆ ಅದನ್ನು ತಮಾಷೆ ಎಂದುಕೊಂಡರು.

"ಯಾಕಮ್ಮ? ಎಲ್ಲಕ್ಕೂ ಹೆಚ್ಚಾಗಿ, ನನ್ನ ಎತ್ತರಕ್ಕೆ ಸರಿಯಾದ ಜೋಡಿ ಆಗ್ತಾಳೆ. ಅವಳು ಹುಂ ಅಂದ್ರೆ ನಾನು ರೆಡಿ. ನೀನೂ ಅಣ್ಣ ಬೇಡ ಅನ್ನೋಲ್ಲ ಅಂತ ನನಗೆ ಗೊತ್ತೇ ಗೊತ್ತು" - ಎಂದು ಓರೆಗಣ್ಣಿನಲ್ಲಿ ತಾಯಿ ಕಡೆ ನೋಡಿದ.

"ನಿಮ್ಮ ತಂದೆ ವಿಷಯ ನನಗೆ ಗೊತ್ತಿಲ್ಲ. ನನಗಂತೂ ಇಷ್ಟವಿಲ್ಲ ಮಾಧು" - ಖಡಾಖಂಡಿತವಾಗಿ ಹೇಳಿದರು.

"ಯಾಕೇಂತ? ನನಗಿಷ್ಟವಿದೇಮ್ಮ  ಅವಳು. .."

"ಹಾಗೆ ಹೇಳು, ನೀನೂ ಅವಳೂ ಮೊದಲೇ ಮಾತನಾಡಿ, ಈಗ ನನ್ನ ಹತ್ತಿರ...."

"ಛೆ, ಛೆ, ಇಲ್ಲಿ ಕೇಳಮ್ಮ. ಅವಳ ಸುದ್ದಿಯೇ ಇಲ್ಲಿ ಬರೋಲ್ಲ, ಅವಳಿಗೆ ಈ ವಿಷಯವೂ ಜಗೊತ್ತಿಲ್ಲ. ನಿಮ್ಮಿಬ್ಬರಿಗೂ ಅವಳನ್ನು ಕಂಡರೆ ಇಷ್ಟ. ಮೇಲಾಗಿ ಅವಳು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ತಾಳೆ ಅನ್ನೋದನ್ನು ದೃಷ್ಟಿಯಲ್ಲಿ ಇಟ್ಕೊಂಡು ನಾನೇ ಹೇಳ್ತಾ ಇದೇನ್ಯೇ ಹೊರತು, ಪಾಪ ಸುಮ...."

"ನನಗೂ ಅವಳ ವಿಷಯದಲ್ಲಿ ಖಂಡಿತ ಅನುಮಾನ ಇಲ್ಲ ಮಾಧು."

"ಹಾಗಾದರೆ ನನ್ನ ವಿಷಯದಲ್ಲೇ ನಿನಗೆ....?" ಎಂದ ನಗುತ್ತಾ.

"ಮಾಧು, ಯಾಕೆ ಹೀಗೆ ಗೋಳು ಹುಯ್ದುಕೊಳ್ತೀಯ? ಎದ್ದು ನಡಿ ಆಚೇಗೆ. ನೀನೂ ಸುಮ ಅಣ್ಣ ತಂಗಿ ಹಾಗೆ ಇರಬೇಕೇ ಹೊರತು, ಅವಳು ಈ ಮನೆ ಸೊಸೆ ಆಗುವುದು ಬೇಡ. ತಿಳೀತಾ?"

"ತಿಳೀತಮ್ಮ, ಸರಿ. ಈಗ ಸೀರೆ ಇಟ್ಕೊಳ್ಳೋದೋ ಬೇಡವೊ?"

"ಸೀರೆಗೂ ಇದಕ್ಕೂ ಏನು ಸಂಬಂಧ? ಲಕ್ಷಣವಾಗಿ ಶುಕ್ರವಾರ ತಂದಿದ್ದಿ ಒಂದು ತಾಂಬೂಲ ಇಟ್ಟು ಸುಮಾಗೆ ಕೊಡೋಣ. ಮುತ್ತೈದೇಗೆ ಕೊಟ್ಟ ಭಾಗ್ಯವಾದ್ರೂ ಬರುತ್ತೆ" ಎಂದರು ಅಮ್ಮ.

ಮಾಧುವಿಗೆ ಕರುಳಿನಲ್ಲಿ ಹಿಂಡಿದ ಹಾಗಾಯ್ತು. ಎಂಥ ಒಳ್ಳೆಯ ಮನಸ್ಸಿನ ಅಮ್ಮ! ಅವಳಿಗೇ ತಾನೀಗ ಮೋಸ ಮಾಡುತ್ತಿದ್ದೇನಲ್ಲಾ ಎಂದು ಕಸಿವಿಸಿಗೊಂಡ.

"ಅಮ್ಮ, ಅವಳು ಮುತ್ತೈದೆ ಅಲ್ವಲ್ಲಾ? ಅವಳನ್ನು ಬೇಗ ಮುತ್ತೈದೆ ಮಾಡೋಣಾಂತ ನಾನು ಹೇಳ್ತಿರೋದು" ನಿಜವೇ ಆದರೂ ತಮಾಷೆಯಾಗಿ ನುಡಿದ.

"ಕನ್ಯೆ ಮುತ್ತೈದೇಗಿಂತ ಹೆಚ್ಚು ಮಾಧು"- ತಿಳಿವಳಿಕೆ ಹೇಳುವ ದನಿಯಲ್ಲಿ ನುಡಿದರು ನಾಗಮ್ಮ.

"ಹಾಗಾದರೆ ನಾನು ಆವಾಗಾವಾಗ ಸೀರೆ ತಂದ್ಕೊಡ್ತಾ ಇರಬಹುದು."

"ಹೂ "

"ಇನ್ನೂ ಏನೇನು ತಂದ್ಕೊಡಬಹುದು?"

"ಸುಮ್ಮನೆ ಹೋಗ್ತೀಯೋ ಇಲ್ವೊ?" ಎಂದು ಕೊಸರಿಬಿಟ್ಟಂತೆ ನುಡಿದರು.

"ಇನ್ನು ಒಂದೇ ಒಂದು ಮಾತಮ್ಮ. ಹಾಗಾದ್ರೆ ಸುಮಾನ್ನ ನಾನು ಮದುವೆ ಆಗೋದು ಬೇಡಾಂತೀಯಾ?"

ನಾಗಮ್ಮ ಮಾತನಾಡಲಿಲ್ಲ.

"ಮದುವೆ ಮಾಡಿಕೋ ಅಂತ ನೀನು ಗಲಾಟೆ ಮಾಡಿದಾಗ ನಾನು ಒಪ್ಪಿಕೊಳ್ಳಲಿಲ್ಲ ಈಗ ನಾನು ಮಾಡ್ಕೋತೀನಿ ಅಂದಾಗ ನೀನು ಒಪ್ತಾ ಇಲ್ಲ ಇದು ಮುಯ್ಯಿಗೆ ಮುಯ್ಯಿ ಅಲ್ಲ ತಾನೆ?"

"ನೀನು ಮದುವೆ ಮಾಡ್ಕೊಳ್ಳೋದು ಬೇಡ ಅಂತ ನಾನು ಅನ್ಲಿಲ್ಲ ಮಾಧು. ನೀನಿಷ್ಟು ಮಾತ್ರ ಮನಸ್ಸು ಯಾವಾಗ ಮಾಡ್ತೀಯೋ ಅಂತ ಕಾಯ್ತಾ ಇದೀನಿ. ಆದರೆ ನೀನು ಆರಿಸಿರೋ ಹುಡುಗಿ ನನಗೆ ಸರಿ ಕಾಣ್ತಾ ಇಲ್ಲ ಅಷ್ಟೆ" ಎಂದು ಕಣ್ಣು ಒರೆಸಿಕೊಂಡರು.

ಅವರ ಕಣ್ಣೀರನ್ನು ಅವನು ನಿರೀಕ್ಷಿಸಿರಲಿಲ್ಲ. ಸ್ವಲ್ಪ ಅಧೀರನಾದ. ಆದರೂ ವಿಷಯ ಬಂದಾಗ ಕಡೆಯವರೆಗೆ ಮಾತಾಡಿ ಮುಗಿಸಬೇಕೆಂದು "ನೀನು ನೊಂದುಕೊಳ್ಳುವಂಥ ಕೆಲಸ ನಾನು ಮಾಡೋಲ್ಲಮ್ಮ. ಹೋಗಲಿ ಮರೆತ್ಬಿಡು. ಆದರೆ ನನಗೊಂದು ಯೋಚನೆ ಬಂತು. ಇಪ್ಪತ್ತು ದಿನ ಚಂಪ ನಮ್ಮ ಮನೆಯಲ್ಲಿರೋ ವೇಳೆಗೆ, ನಾನು ಬೇಡ ಅಂದ್ರೆ ಜನ ಏನಂದ್ಕೋತಾರೋಂತ ನೀನು ಹೆದರಿಬಿಟ್ಟೆ.

ಏನೋ ಬಾಲು ದೊಡ್ಡ ಮನಸ್ಸು ಮಾಡಿದ, ಸರಿಹೋಯ್ತು. ಈಗ ಈ ಹುಡುಗಿ ನಾನು ಬಂದ ಆರು ತಿಂಗಳಿಂದಲೂ ಇಲ್ಲೇ ಇದ್ದಾಳೆ. ಅದಕ್ಕೇನೂ ಜನ ಅಂದ್ಕೊ ಳ್ಳೋಲ್ವಾಮ್ಮ? ವೃಥಾ ಕೆಟ್ಟ ಹೆಸರು ಬರಬಾರದು ನೋಡು. ಇದೆಲ್ಲಾ ಯೋಚನೆ ಮಾಡಿ ನನ್ನ ಮನಸ್ಸನ್ನು ನಿನ್ನ ಮುಂದಿಟ್ಟೆ. ಹುಡುಗಿ ಒಳ್ಳೆಯವಳು. ಜನಾ ಏನೂ ಅಂದ್ಕೋಬಾರ್ದು. ನಿಮಗಿಷ್ಟವಾದ ಹುಡುಗಿ ಆಗಿರ್ಬೇಕು. ನಿಮ್ಮನ್ನು ಆದರಿಸುವ ಗುಣ ಇರ್ಬೇಕು. ಇಷ್ಟೆಲ್ಲಾ ಇರೋದು ಈ ಒಂದೇ ಹುಡುಗಿಗೆ. ನನ್ನ ಮಟ್ಟಿಗೆ ಹೇಳೋದಾದ್ರೆ ಈ ಲಂಬೂಗೆ ಸರಿಯಾದ ಜೋಡಿ ನಿಮ್ಮ ಸುಮ"- ಎಂದು ಹೇಳುತ್ತಾ ತನ್ನ ಕೋಣೆಗೆ ನಡೆದುಬಿಟ್ಟ.

ಮೆಟ್ಟಿಲ ಮೇಲೆ ನಿಂತವನು - "ಸುಮಳ ಕಿವಿಗೆ ಇದು ಬೀಳೋದು ಬೇಡಮ್ಮ. ಏನೋ ಯಾವ ಭಾವನೆಯೂ ಇಲ್ಲದೆ ಸರಸವಾಗಿ ಮಾತಾಡ್ತಾಳೆ. ಇನ್ನು ನನ್ನ ಮನಸ್ಸು ಏನಾದರೂ ತಿಳಿದುಬಿಟ್ಟರೆ ಹಾಳು ನಾಚಿಕೆಯೋ ಗೀಚಿಕೆಯೋ ಬಂದು ಒಳಗೆ ಕೂತುಬಿಟ್ಟಾಳು" ಎಂದು ಎರಡೆರಡು ಮೆಟ್ಟಿಲು ಹಾರಿ ತನ್ನ ಕೋಣೆ ಸೇರಿಕೊಂಡ "ಒಳ್ಳೆಯ ನಾಟಕ ಆಡ್ತೀ ವೇಣು" ಎಂದು ತನಗೆ ತಾನೇ ಶಹಭಾಸ್‌ಗಿರಿ ಕೊಟ್ಟು ಕೊಂಡ. ಹೌದು, ಒಂದು ಉತ್ಕೃಷ್ಟ 'ಸುಮ' ತನಗೆ ಸಿಗಬೇಕಾದರೆ, ಆ ಗಿಡದ ಅನೇಕ ಮುಳ್ಳು ಟೊಂಗೆಗಳಿಂದ ಗೀರಿಸಿಕೊಳ್ಳಬೇಕು. ಗೀರಿಸಿಕೊಳ್ಳದೆ ಪಡೆಯ ಬೇಕಾದರೆ ಅತಿಯಾದ ಜಾಣ್ಮೆ ಬೇಕು, ಕುಶಲತೆ ಬೇಕು. 'ಸುಮ' ನಲುಗದಂತೆ ಕಾಯ್ದು ತೆಗೆದಿರಿಸಿಕೊಳ್ಳಬೇಕು. ಒರಟಾಗಿ ನುಗ್ಗಿದರೆ ನಲುಗೀತು.

ನಾಗಮ್ಮನವರು ಬೆಪ್ಪಾಗಿ ನೋಡುತ್ತಾ ಕುಳಿತರು. ತಾವು ಒಪ್ಪಿದಂತೆಯೇ ಎನ್ನುವಂತೆ ನಡೆದುಬಿಟ್ಟನಲ್ಲ! ಯಾಕೆ ಎಲ್ಲಾ ಹೀಗೆ ನಡೆಯುತ್ತಿದೆ? ಹುಟ್ಟಿ ಸತ್ತಾಗಿನಿಂದ, ಬದುಕಿನಲ್ಲೇ ಆಸಕ್ತಿ ತೋರಿಸದ ಮಾಧು ಇತ್ತೀಚೆಗೆ ಎಷ್ಟೋ ವಾಸಿ. ಚಂಪಳನ್ನು ಬಯಸಬಹುದೆಂದೇ ನಂಬಿದ್ದರು ತಾವು. ಆದಾಗಲಿಲ್ಲ, ದೈವದ ಇಚ್ಛೆ ಏನಿದೆಯೋ?

ಒಂದು ವೇಳೆ ಇವರಿಗೆ ಇದು ತಿಳಿದಿರಬಹುದೆ! ತಿಳಿದೂ ನನಗೆ ತಿಳಿಸದೆ ಇದ್ದಾರೆಯೆ? ಅವರು ಯಾವುದನ್ನೂ ಹಚ್ಚಿಕೊಳ್ಳುವುದಿಲ್ಲ. ಅವನು ಬಯಸಿದಾಗ ವಿವಾಹಕ್ಕೆ ಅಣಿ ಮಾಡುವುದು ಮಾತ್ರ ತಮ್ಮ ಕರ್ತವ್ಯವೆಂದು ಆ ದಿನ ಹೇಳಿದರಲ್ಲವೆ? ಈ ಸುಮ ಅವರಿಗೆ ಪ್ರಿಯವಾದ ಹುಡುಗಿ. ಬೇಡವೆನ್ನುತ್ತಾರೆಯೆ? ಮುದ್ದಿನ ಮಗ ನೆಚ್ಚಿನ ಹುಡುಗಿಯನ್ನು ಮದುವೆ ಆಗ್ತೀನಿ ಅಂದರೆ ಬೇಡ ಎಂದಾರೆಯೆ?

ತನಗೇಕೆ ಇಷ್ಟವಿಲ್ಲ? ಸುಮಳಲ್ಲಿ ಏನು ಕೊರತೆಯಿದೆ? ಕೊರತೆಯಿಲ್ಲವೆ? ಅವಳು ಅನಾಥಳು. ಅದು ಅವಳ ತಪ್ಪೆ? ಅವಳ ತಾಯಿ ತಂದೆ ಯಾರೋ, ಯಾವ ವಂಶದ ಹುಡುಗಿಯೋ. ಕುಲಗೋತ್ರಗಳೇ ತಿಳಿಯದ ಅನಾಮಿಕ ಹೆಣ್ಣನ್ನು ತಮ್ಮ ವಂಶೋದ್ಧಾರಕಳಾಗಿ ಸ್ವೀಕರಿಸುವುದೇ? ಇಂತಹ ಹುಡುಗಿ ವಂಶವೃಕ್ಷವನ್ನು ಬೆಳೆಸಲು ನಾಂದಿ ಆಗಬೇಕೇ. ತಮಗಾದರೂ ನಾಲ್ಕಾರು ಮಕ್ಕಳಿದ್ದಿದ್ದರೆ, ಒಬ್ಬ ಸೊಸೆ

ಇಂಥವಳಾಗಿದ್ದರೂ ಹೇಗೋ ಮನ ಹೊಂದಿಸಿಕೊಳ್ಳಬಹುದಿತ್ತು. ಆದರೆ ಒಬ್ಬನೇ ಒಬ್ಬ. ಅವನು ಹೀಗೆ ಏಕಾದ? ತಾವು ಬೇಡವೇ ಬೇಡವೆಂದು ಹಟ ತೊಟ್ಟರೆ? ಅವನು ಹಾಗೆಯೇ ಉಳಿದುಬಿಡಬಹುದು. ತಮ್ಮ ವಂಶದ ಬೆಳವಣಿಗೆಗೆ ತಾವೇ ಕೊಡಲಿಯ ಪೆಟ್ಟು ಹಾಕಿದಂತಾಗುತ್ತದೆ. ತಾವು ಪಟ್ಟು ಹಿಡಿದರೂ ಗಂಡ ಸುಮ್ಮ ನಿರುತ್ತಾರೆಯೆ? ಅವರಿಬ್ಬರೂ ಒಂದುಗೂಡಿದರೆ ತಮ್ಮ ಮಾತಿಗೆ ಬೆಲೆಯಾದರೂ ಏನು ಉಳಿದೀತು? ಬರಿಯ ಮನಸ್ತಾಪ ಮಾತ್ರ. ತಾವೇ ಒಪ್ಪಿಕೊಂಡರೆ, ಎಲ್ಲರಿಗೂ ಸಂತೋಷ, ಒಬ್ಬ ಅನಾಥ ಹುಡುಗಿಯನ್ನು ಉದ್ಧಾರ ಮಾಡಿದ ಪ್ರಚಂಡ ಕೀರ್ತಿ ತಮಗೆ ಸಲ್ಲುತ್ತದೆ. ಹೌದು ಯಾಕಾಗಬಾರದು?

ಛೂ, ಛೂ, ಕೂಡದು. ಹಾಗೇಕೆ ಆಗಬೇಕು? ತಮ್ಮ ಬಳಗಕ್ಕೆಲ್ಲ, ಮನೆ ಯಲ್ಲಿರುವ ಸುಮ ನಿರ್ಗತಿಕಳೆಂದು ಗೊತ್ತಿದೆ. ಅವಳನ್ನೇ ಸೊಸೆ ಮಾಡಿಕೊಂಡರೆಂದು ಅವರೆಲ್ಲಾ ಕೇಕೆ ಹಾಕಿ ನಗುವುದಿಲ್ಲವೆ? ಮಾಧುವಿನ ಹುದ್ದೆ, ರೂಪ, ವಿದ್ಯೆ, ತಮ್ಮ ಮನೆತನದ ಹೆಸರು, ಇವುಗಳಿಂದಾಗಿ ಎಂಥೆಂಥ ಹೆಣ್ಣುಗಳು ಸಿಗುತ್ತವೆ. ಸುಮಳಿಗೂ ಅನ್ಯಾಯ ಮಾಡುವುದು ಬೇಡ. ಒಳ್ಳೆಯ ಮನೆ ನೋಡಿ ಸೇರಿಸಿದರಾಯಿತು. ಒಳ್ಳೆಯ ಹುಡುಗನನ್ನು ಆರಿಸಿದರಾಯಿತು. ಅದೇನೂ ಕಷ್ಟದ ಕೆಲಸವಲ್ಲ.

ಅವರ ಮನಶ್ಚಕ್ಷುಗಳ ಮುಂದೆ ವಾಸು ಸುಳಿದುಹೋದ. ಮಾಧು ಅಂದಿದ್ದೂ ಅಷ್ಟೆ. ಒಳ್ಳೆಯ ಹುಡುಗ ಸಿಗದಿದ್ರೆ ನಾನೇ ಆಗ್ತೀನಿ ಅಂದಿದ್ದ. ಅಷ್ಟಕ್ಕೇ ಎಷ್ಟು ಹೆದರಿಬಿಟ್ಟೆ! ನನ್ನ ಹೆದರಿಕೆ ನೋಡಿ ಚುಡಾಯಿಸ್ತಾನೆ ತುಂಟ. ಈ ಯೋಚನೆಯಿಂದ ಆಕೆಯ ಮನ ಹಗುರಾಯಿತು. ಪ್ರಸನ್ನ ಮನಸ್ಸಿನಿಂದ ಸೀರೆಗಳನ್ನು ತೆಗೆದುಕೊಂಡು ದೇವರ ಕೋಣೆಗೆ ನಡೆದರು. ಅದು ಅವರ ಪದ್ಧತಿ. ಹೊಸ ಬಟ್ಟೆಯನ್ನು ದೇವರ ಮುಂದಿಟ್ಟು, ಅರಿಸಿನ ತೊಡೆದು ನಂತರವೇ ಉಡುವುದು.

* * *

ನಾನು ಸುಮಳನ್ನು ಮದುವೆ ಆಗ್ತೀನಿ, ಅವಳಿಲ್ಲದೆ ಇದ್ರೆ ಮದುವೆಯೇ ಬೇಡ ಎಂದೆಲ್ಲಾ ಹಟ ಮಾಡಿದರೆ ಅಮ್ಮನೂ ಬೇಡವೇ ಬೇಡ ಎಂದು ಹಟ ಹಿಡಿಯ ಬಹುದು. ಹಟಗಳಿಂದ ಏನೂ ಸಾಧಿಸಲಾಗದು. ಅಮ್ಮನಿಗೆ ದೀರ್ಘ ಸಮಯ ಕೊಟ್ಟೇ ಗೆದ್ದುಕೊಳ್ಳಬೇಕೆಂದು, ಏನೂ ನಡದೇ ಇಲ್ಲವೆನ್ನುವಂತೆ ಖುಷಿಯಾಗಿಯೇ ಓಡಾಡತೊಡಗಿದ ಮಾಧು. ದಿನಗಳು ನಿಮಿಷಗಳಂತೆ ಕಳೆಯುತ್ತಿದ್ದವು ಅವನ ಪಾಲಿಗೆ. ಆಗಾಗ ಸುಮಳನ್ನು ಹೊರಗಡೆ ಭೇಟಿಯಾಗಲು ಅವಕಾಶ ಸಿಗುತ್ತಿತ್ತು, ಆನಂದದ ಏಣಿಯ ತುದಿ ಮೆಟ್ಟಿಲ ಮೇಲಿದ್ದ ಅವನು ಕೆಳಗೆ ನಿಂತ ಸುಮಳನ್ನು ಮೆಟ್ಟಿಲು ಮೆಟ್ಟಿಲಾಗಿ ಮೇಲೆಳೆದುಕೊಳ್ಳಬೇಕೆಂಬ ಯೋಚನೆಯಲ್ಲಿದ್ದ.

ಸುಮಳಿಗೆ ಈಗ ಕೈತುಂಬ ಕೆಲಸ. ವೇಣು ತಂದೆಗೆಂದು ತಂದುಕೊಟ್ಟ ಟೈಪ್‌ರೈಟರ್ ಈಗ ಸುಮಳ ಕೈಗೆ ಬಂದಿತ್ತು. ಅವಳು ಕಲಿತ ಟೈಪಿಂಗ್ ಈಗ ಪೂರ್ಣ ಉಪಯೋಗವಾಗುತ್ತಿತ್ತು. ರಾಯರ

ಎಲ್ಲ ಕೆಲಸಗಳಿಗೂ ಸುಮಳೇ ಬಲಗೈ. ಅವರ ವ್ಯವಹಾರಗಳಿಂದ ಬ್ಯಾಂಕುಗಳು, ಹಲ ಕೆಲವು ಸಂಘಗಳು, ತಾವೇ ನಡೆಸುತ್ತಿದ್ದ ಹಾಸ್ಟೆಲ್, ಜಮೀನಿನ ಆಗು ಹೋಗುಗಳು ಇವೆಲ್ಲದರ ಪತ್ರ ವ್ಯವಹಾರಕ್ಕೆ ಸುಮಳೇ ಕಾರ್ಯದರ್ಶಿ. ರಾಯರು ಅವಳ ಕ್ಷಮತೆಯನ್ನು ನಂಬಿ ಹಾಯಾಗಿದ್ದು ಬಿಟ್ಟಿದ್ದರು. ಅವಳೂ ಬೇಸರವಿಲ್ಲದೆ ರಾಯರ ಮಾರ್ಗದರ್ಶನದಲ್ಲಿ ಎಲ್ಲವನ್ನೂ ಮಾಡುತ್ತಿದ್ದಳು. ರಾಯರೇ ಒಂದೆರಡು ದಿನಗಳಿಗೊಮ್ಮೆ "ಎಲ್ಲಾದ್ರೂ ಹೋಗಿ ಬಾಮ್ಮ ಸ್ನೇಹಿತರ ಮನೆಗೋ, ಸಿನಿಮಾಕ್ಕೋ" ಎಂದು ಕಳುಹಿಸಿಕೊಡುತ್ತಿದ್ದರು ಅದೇ ಸಮಯ ಸಾಧಿಸಿ ವೇಣುವೂ ಹೊರಗಡೆ ಹೊರಟು ಸುಮಳನ್ನು ಎಲ್ಲಿಯಾದರೂ ಕರೆದೊಯ್ಯುತ್ತಿದ್ದ.

ತಾಯಿ ತಂದೆಯರಿಗೆ ಗೊತ್ತಿಲ್ಲದೆ ಈ ಭೇಟಿಗಳು ನಡೆಯುತ್ತಿದ್ದವು. ಆದರೇನು? ಇತ್ತೀಚೆಗೆ ಸುಮ ವೇಣುವನ್ನು ಸ್ವಲ್ಪವೂ ಹತ್ತಿರ ಸೇರಿಸುತ್ತಿರಲಿಲ್ಲ. ಪ್ರತಿ ಭೇಟಿ ಯಲ್ಲೂ ಅವಳದು ಒಂದೇ ಮಾತು - " ಅಮ್ಮ ಅಣ್ಣ ಒಪ್ಪುವವರೆಗೆ ನಾನು ನಿಮ್ಮ ಹತ್ತಿರ ಬರೋಲ್ಲ. ನಾನು ನಿಮ್ಮ ಹಿತೈಷಿ, ಗೆಳತಿ ಮಾತ್ರ. ನನ್ನ ಮನಸ್ಸೆಲ್ಲಾ ನಿಮ್ಮಲ್ಲೇ ಇದ್ರೂ ನಿಮ್ಮವಳಾಗಬೇಕಾದ್ರೆ ಅವರ ಆಶೀರ್ವಾದ ಇಲ್ಲದೆ ಸಾಧ್ಯವಿಲ್ಲ" ಎಂದು ಖಂಡಿತವಾಗಿ ಹೇಳಿಬಿಡುತ್ತಿದ್ದಳು ಎಷ್ಟೋ ಸಂತೋಷದಿಂದ ಹೊರಟದ್ದರೂ ಹಿಂತಿರುಗುವ ವೇಳೆಗೆ ಯಾವುದೋ ನಿರಾಶೆ ಆವರಿಸಿ ಮನ ಮುದುಡಿ ಹಿಂತಿರುಗುತ್ತಿದ್ದ ವೇಣು ಕೆಲವು ಸಲ ಸುಮಳ ಮೇಲೆ ಅತಿಯಾಗಿ ಕೋಪಮಾಡಿಕೊಳ್ಳುತ್ತಿದ್ದುದ್ದೂ ಉಂಟು ಆದರೆ ಮನೆಯಲ್ಲಿ ಮಾತ್ರ ತೋರಿಕೆಯ ಸಮಾಧಾನದಿಂದ ಇರುತ್ತಿದ್ದ ಸುಮಳನ್ನು ಮಾತನಾಡಿಸುವುದು ಕಡಿಮೆ ಮಾಡಿದ್ದ. ಸುಮಳೂ ಸಹ, ಅಮ್ಮ ಅಣ್ಣ ಎದುರಿಗಿದ್ದರೆ ಮಾತ್ರ ವೇಣುವಿನೊಂದಿಗೆ ಮಾತನಾಡುತ್ತಿದ್ದಳು.

ವೇಣುವೂ ಸಂತೋಷ ಸಮಾಧಾನಗಳಿಂದ ಇರುತ್ತಿದ್ದುದನ್ನು ನೋಡಿ ನಾಗಮ್ಮನವರು, ತಮ್ಮೊಂದಿಗೆ ಅವನಾಡಿದ ಮಾತೆಲ್ಲ ಕುಚೋದ್ಯ ಎಂಬ ತಮ್ಮ ಊಹೆಯೇ ನಿಜವೆಂದು ನಿಶ್ಚಿಂತರಾದರು

* * *

ಮಗನ ವಿಷಯದಲ್ಲಿ ನಿಶ್ಚಿಂತೆ ತಂದುಕೊಂಡ ನಾಗಮ್ಮನವರು, ಹೇಗಾದರೂ ಸುಮಳಿಗೆ ಬೇಗ ಒಂದು ಮದುವೆ ಮಾಡಿ ಕಳುಹಿಸಿಬಿಡಬೇಕೆಂಬ ಚಿಂತೆ ಹಚ್ಚಿ ಕೊಂಡರು. ಅವರ ಗಮನ ಈಗೀಗ ಹೆಚ್ಚು ಹೆಚ್ಚಾಗಿ ವಾಸುವಿನ ಕಡೆಗೆ ತಿರುಗಿತು ಏನಾದರೂ ಕೆಲಸದ ಮೇಲೆ ಒಂದೆರಡು ದಿನಗಳಿಗೆ ಒಂದು ಸಲವಾದರೂ ಮನೆಗೆ ಬರುತ್ತಿದ್ದ ವಾಸು, ಎಂದೂ ಅವರನ್ನು ಆಕರ್ಷಿಸಿರಲಿಲ್ಲ. ಇತರ ಹುಡುಗರಂತೆಯೇ ಅವನೂ ಒಬ್ಬ. ಆದರೆ ಈಗ! ಅವನ ಬಗೆಗೆ ಹೆಚ್ಚು ಆಸಕ್ತಿ ಆಕೆ ತೋರಿಸುತ್ತಿದ್ದುದು ರಾಯರ ಗಮನಕ್ಕೆ ಬರದೆ ಹೋಗಲಿಲ್ಲ.

ಒಂದು ದಿನ, ತಮ್ಮೊಂದಿಗೆ ಮಾತನಾಡಿ ಹೊರಬಿದ್ದ ವಾಸುವನ್ನು ಬಾಗಿಲ ವರೆಗೆ ಕಳುಹಿಸಿಕೊಟ್ಟು

ಒಳಗೆ ಬರುತ್ತಿದ್ದ ರಾಯರು ತದೇಕಚಿತ್ತಳಾಗಿ ವಾಸು ಹೋಗುವುದನ್ನೇ ನೋಡುತ್ತಾ ಬಾಗಿಲಲ್ಲಿ ನಿಂತಿದ್ದ ಪತ್ನಿಯನ್ನು ಕಂಡರು. ಒಳಗೇ ನಕ್ಕರು ಕೂಡ.

"ಇವನದು ಓದು ಮುಗಿಯೋದು ಯಾವತ್ತಿಗೆ?" ಎಂದರು ಇದ್ದಕ್ಕಿದ್ದಂತೆ ನಾಗಮ್ಮ.

"ಮೊನ್ನೆ ಡಿಸೆಂಬರಿಗೆ ಮುಗೀತು. ಇನ್ನು ಒಂದು ವರ್ಷ ಟ್ರೈನಿಂಗ್ ಇರುತ್ತೆ ಆಮೇಲೆ ಮುಗಿದ ಹಾಗೆ. ಯಾಕೆ?" ಎಂದ ರಾಯರು ಅಲ್ಲೇ ಅವರ ಬಳಿ ನಿಂತುಕೊಂಡರು.

"ಅವನಿಗೆ ಎಷ್ಟು ವಯಸ್ಸಿರಬಹುದು?" - ಮರುಪ್ರಶ್ನೆ ಆಕೆಯದು

"ಸುಮಾರು ಇಪ್ಪತ್ಮೂರು - ಇಪ್ಪತ್ನಾಲ್ಕು, ಯಾಕೆ ನಾಗೂ?" ಎಂದರು ಆಶ್ಚರಿಯಿಂದ ರಾಯರು.

"ಸುಮ ಇವನಿಗೆ ಸರಿಹೋಗಬಹುದೇನೋ ಅಂತ" ಎಂದು ಆಕೆ ಅಂದ ಕೂಡಲೆ ರಾಯರು ಒಳಗೇ ನಗುತ್ತಿದ್ದವರು ಗಟ್ಟಿಯಾಗೇ ನಕ್ಕುಬಿಟ್ಟು - "ನಿಂಗ್ಯಾಕೆ ಇಂಥಾ ಯೋಚನೆ ಬಂತು? ಪಾಪ, ಅವನು ಇನ್ನೂ ತನ್ನ ಕಾಲ ಮೇಲೆ ನಿಂತು, ಸಂಪಾದಿಸಿ ಮದುವೆ ಅಂತ ಯೋಚನೆ ಮಾಡೋಕೆ ಒಂದೈದು ವರ್ಷ ಬೇಕು."

"ಏನೂ ಪರವಾಗಿಲ್ಲ, ಓದು ಮುಗಿದಿದ್ರೆ ಸಾಕು ಸುಮನ್ನ ಅವನಿಗೆ ಕೊಟ್ಟು ಮಾಡಿಬಿಡೋಣ ಸಹಾಯಕ್ಕೆ ನಾವು ಇದ್ದೇ ಇರ್ತೀವಲ್ಲ" ಎಂದು ತೀರ್ಮಾನಿಸಿದಂತೆ ಹೇಳಿಬಿಟ್ಟರು

"ಸುಮಳ ಮದುವೆಗೆ ಏನವಸರ? ಸ್ವಲ್ಪ ನೋಡೋಣ ತಡಿ"

"ನೋಡೋದೇನು ಬಂತು? ಏನೋ ನಮ್ಮ ಆಸರೆಗೆ ಬಂದುದಕ್ಕೆ ಒಂದು ನೆಲೆ ಕೊಡಿಸ್ಬಿಡೋಣಾಂತ"

"ನಾನೇನು ಬೇಡ ಅಂದ್ರೆ ಈಗ? ಒಳ್ಳೇ ಗಂಡು ನೋಡಿ ಮಾಡೋಣ "

"ವಾಸು ಏನಾಗಿದ್ದಾನೆ? ಜೋಡಿ ಸರಿಹೋಗಬಹುದು "

"ಆಗಲೇ ಹೇಳಿದೆನಲ್ಲ ನಾಗೂ, ವಾಸೂ ಇನ್ನೂ ಒಂದೈದು ವರ್ಷನಾದ್ರೂ ಮದುವೆ ಯೋಚನೆ ಮಾಡೋಲ್ಲ. ಮಾಡೋಕೆ ನಾನೇ ಬಿಡೋಲ್ಲ" ಎನ್ನುತ್ತಾ ಅಲ್ಲಿಯೇ ವೆರಾಂಡದಲ್ಲಿದ್ದ ಕುರ್ಚಿಯಲ್ಲಿ ಕುಳಿತರು ಚರ್ಚೆ ಇನ್ನೂ ಇದೆ ಅನ್ನಿಸಿತು ಅವರಿಗೆ ವಾಸುವಿನ ವಿಷಯ ಬಿಟ್ಟು ಆಕೆ -

"ಮಾಧುಗೆ ನಾವಿನ್ನೂ ಯಾವಾಗ ಮದುವೆ ಮಾಡೋದು?" ಎಂದರು.

ರಾಯರು ನಗುತ್ತಾ ಕುರ್ಚಿಯಲ್ಲಿ ಬಂದು ಕೂಡು ಎನ್ನುವಂತೆ ಸಂಜ್ಞೆಯಿಂದ ಕುರ್ಚಿ ತೋರಿಸಿ "ನಿನ್ನ ಒಂದು ಮಾತಿಗೂ ಇನ್ನೊಂದು ಮಾತಿಗೂ ಹೊಂದಾಣಿಕೆಯಿಲ್ಲ ನಾಗು" ಎಂದರು.

"ಬೆಳೆದ ಹುಡುಗ, ಪರರ ಹೆಣ್ಣು ಮನೇಲಿರೋವಾಗ, ಜವಾಬ್ದಾರಿ ಎಷ್ಟು ಅಂತ ನೀವು ಯೋಚನೇನೆ ಮಾಡೋಲ್ಲ. ಸುಮ್ಮನೆ ನಗ್ತಿದೀರಿ" ಎಂದರು ರೋಷದಿಂದ.

"ಈಗ ತಿಳೀತು ನಿನ್ನ ಮಾತು. ವೇಣು ಎಲ್ಲಾದ್ರೂ ಸುಮಾಗೆ ಮನಸೋತಾನು ಅಂತ ನಿನ್ನ ಸಂಕಟ? ಹಾಗೇನಾದ್ರೂ ಆದ್ರೆ ಮತ್ತೂ ಒಳ್ಳೇದೇ, ಹಾಯಂತ ಮದುವೆ ಮಾಡೋಣ. ಇವಳಿಗೆ ಗಂಡು, ಅವನಿಗೆ ಹೆಣ್ಣು ಹುಡುಕೋ ಕಷ್ಟವೇ ತಪ್ಪುತ್ತೆ" ಎಂದರು.

"ಸುಮ ಎಷ್ಟೇ ಒಳ್ಳೆಯ ಹುಡುಗಿ ಆಗ್ಲಿ ನಂಗೆ ಅವಳನ್ನ ಈ ಮನೆಯ ಸೊಸೆಯಾಗಿಸಿಕೊಳ್ಳೋದು ಇಷ್ಟವಿಲ್ಲ. ವೇಣುಗೆ ಅವಳಿಗಿಂತ ಒಳ್ಳೇ ಮನೆತನದ ಹುಡುಗಿಯನ್ನು ತರಬೇಕು" ಎಂದರು.

ಇವಳಿಗೆ ಅಂತಸ್ತು, ಪ್ರತಿಷ್ಠೆಗಳ ವ್ಯಾಮೋಹ ಇನ್ನೂ ಕಡಿಮೆಯಾಗಿಲ್ಲ. ಈಗ ಅವಳನ್ನು ರೇಗಿಸುವ ಬದಲು ಸಮಾಧಾನ ಹೇಳುವುದೇ ಒಳಿತೆಂದುಕೊಂಡರು ರಾಯರು.

"ಹಾಗೇನು ಆಗೋಲ್ಲ ನಾಗು. ನಿನ್ನದು ಸುಳ್ಳು ಭಯ ಅಷ್ಟೆ. ವೇಣೂಗೆ ನೀನು ಹೇಳೋ ಹಾಗೆ ಒಳ್ಳೇ ಹೆಣ್ಣು ತರೋಣ. ನಮ್ಮ ಶ್ರೀಪಾದೂ ಕಡೇ ಮಗಳು ಒಬ್ಬಳಿದ್ದಾಳೆ. ವ್ಯಾಸ ಗೊತ್ತಲ್ಲಾ. ನಮ್ಮ ಹಾಸ್ಟೆಲ್‌ನಲ್ಲೇ ಇದ್ದು ಐ.ಎ.ಎಸ್ ಮಾಡಿದ್ನಲ್ಲಾ ಅವನ ತಂಗಿ ಒಬ್ಬಳಿದ್ದಾಳೆ. ಇಬ್ಬರು ಹುಡುಗಿಯರೂ ವಿದ್ಯಾವಂತೆ ಯರು, ಚೆನ್ನಾಗಿಯೂ ಇದ್ದಾರೆ ಅವರುಗಳಿಂದ ಕಾಗದಗಳೂ ಬಂದಿವೆ ಮುಖ್ಯ ವೇಣು ಮನಸ್ಸು ಮಾಡ್ಬೇಕು. ನಾನು ನಿನಗೆ ಹೇಳ್ತಾನೇ ಇದೀನಿ ನಾಗೂ. ಅವನಾಗಿಯೇ ಮದುವೆಗೆ ಒಪ್ಪುವ ತನಕ...."

ನಾಗಮ್ಮನವರು ಮಧ್ಯೆ ತಡೆದು.. "ಯಾವ ಹುಡುಗ ತಾನೇ 'ನಾನು ಮದುವೆ ಮಾಡ್ಕೋತೀನೀಂತ' ತಾಯಿ ತಂದೆ ಹತ್ತಿರ ಬಂದು ಹೇಳ್ತಾನೇಂದ್ರೆ? ನೀವೊಬ್ರು" - ಎಂದರು ಕೋಪದಿಂದ

ಅವರ ಕೋಪ ನೋಡಿ ರಾಯರಿಗೆ ಕಚಗುಳಿಯಿಟ್ಟಂತಾಯಿತು. ಆದರೂ ನಕ್ಕರೆ ನಾಗು ನೊಂದುಕೊಳ್ಳುತ್ತಾಳೆಂದು "ನಿಜ, ಯಾರೂ ಹೇಳೊಲ್ಲ, ವೇಣು ಸಮಾಚಾರ ಬೇರೆ ಆಗಬಹುದು ಅವನ ಮನಸ್ಸಿನಲ್ಲಿ ಪುಟ್ಟಿ ಎಷ್ಟುರಮಟ್ಟಿಗೆ ಕೂತಿದ್ದಾಳೇಂತ ಅವನ ಹತ್ತಿರ ಇರೋ ಅವಳ ಫೋಟೋ ನೋಡಿದ್ರೆ ತಿಳಿಯುತ್ತೆ. ಈಗ್ಲೂ ಅದನ್ನ ನೋಡ್ತಾ ಇರ್ತಾನೋ ಏನೋ. ಅದರ ಕೆಳಗೆ ಏನು ಬರ್ದಿದ್ದಾನೆ ಗೊತ್ತೇ ' ನಾ ಮರೆಯಲಾರೆ, ನನ್ನ ಭಾಗ್ಯದೇವತೆ' ಅಂತ. ಅವನಿಗೆ ನಾವು ಇನ್ನೂ ಸಮಯ ಕೊಡಬೇಕು ನಾಗು."

"ಅವನು ಸುಮಳ ಹಿಂದೆ ಮುಂದೆ ಸುತ್ತೋದು ನೋಡಿದ್ರೆ ಅವನಿಗೆ ಈಗ ಮನಸ್ಸಿದೆ ಅನ್ನಿಸುತ್ತೆ "

"ಒಂದು ಮಾತು ಹೇಳ್ತೀನಿ ಕೇಳು. ದೈವೇಚ್ಛೆ ಏನಿದೆಯೋ ಅದು ನಡೀಲೇಬೇಕು ನಾವು ನೆನೆಸಿದ ಹಾಗೇ ಎಲ್ಲಾ ಆಗ್ಬಿಟ್ರೇ - ದೈವ, ದೇವರು ಯಾಕೆ ಬೇಕು? ಅಷ್ಟಕ್ಕೂ ನಾವು ನೆನೆದದ್ದೇ ಆಗಬೇಕು ಅನ್ನೋ ಹಟ ಯಾಕೆ ನಮಗೆ? ಬಂದದ್ದಕ್ಕೆ ತಲೆ ಬಾಗೋದು ಕಲಿತ್ಕೋಬೇಕು ನಾಗು. ನಿನ್ನ ಇಷ್ಟದ ಹಾಗೆ ಸುಮಾಗೆ ಬೇರೆ ಮದುವೆ ಮಾಡೋಣ. ವೇಣುಹತ್ತಿರ ನಾನು ಮಾತಾಡ್ತೀನಿ. ನೀನು ಬೇಜಾರು

ಮಾಡ್ಕೋಬೇಡ. ಒಂದ್ವೇಳೆ ನಮ್ಮ ಲೆಕ್ಕ ತಪ್ಪಿದರೆ ನೊಂದ್ಕೋಬಾರ್ದು ನೀನು ನಾಗು" ಎಂದು ಕುರ್ಚಿಯ ಕೈಮೇಲಿದ್ದ ಆಕೆಯ ತೋಳನ್ನು ಮೆಲ್ಲಗೆ ತಟ್ಟಿದರು. ಆಕೆಗೆ ಎಷ್ಟೋ ಸಮಾಧಾನವಾಯಿತು.

* * *

ಅದೇ ಸಂಜೆ ರಾಯರು - 'ವೇಣು, ನನ್ನನ್ನು ಸ್ವಲ್ಪ ಗೋಖಲೆ ಇನ್‌ಸ್ಟಿಟ್ಯೂಟ್ ಹತ್ರ ಡ್ರಾಪ್ ಮಾಡ್ತೀಯ? ನಾನು ಅಲ್ಲಿಗೆ ಆರು ಗಂಟೇಗೆ ಬರ್ತೀನಿ ಅಂದಿದ್ದೆ. ಆಗ್ಲೇ ಐದೂವರೆ ಆಗಿಹೋಯ್ತು" ಎಂದರು.

"ಆಗ್ಲಿ ಅಣ್ಣ, ದಿನಾ ಡ್ರಾಪ್ ಕೊಡ್ತೀನಿ ಎಲ್ಲಿಗೆ ಬೇಕಾದ್ರು ಅಂದ್ರೂನೂ ನೀವೇ ಬೇಡಾಂತೀರಿ" ಎಂದು ಸರಸರ ಬಟ್ಟೆ ಬದಲಿಸಿ ಬಂದು, ಕಾರನ್ನು ಗ್ಯಾರೇಜಿನಿಂದ ತಂದು ಮನೆಯ ಮುಂದೆ ನಿಲ್ಲಿಸಿದ. ರಾಯರು ಕಾರಿಗಾಗಿ ಕಾಯುತ್ತಿದ್ದುದು ಅಪರೂಪ. ಅದರಲ್ಲೂ ಮಗ ಬಂದಾಗಿನಿಂದ ಆಟೋರಿಕ್ಷಾ, ಟ್ಯಾಕ್ಸಿಗಳನ್ನೇ ಬಳಸುತ್ತಿದ್ದರು. ಕಾರಿನ ಆಸೆಯನ್ನು ಎಂದೋ ಬಿಟ್ಟಿದ್ದರಲ್ಲ.

ದಾರಿಯಲ್ಲಿ ರಾಯರು ನೇರವಾಗಿಯೇ -" ವೇಣು, ನಂಗೊಂದಿಬ್ಬರು ಕನ್ಯಾಪತ್ರಗಳು ಕಾಗದ ಬರೆದಿದ್ದಾರೆ ಅವರಿಗೆ ಏನು ಬರೀಲಿ" ಎಂದು ಕೇಳಿದರು ಒಮ್ಮೆ ತಂದೆಯ ಕಡೆಗೆ ತಿರುಗಿ ನೋಡಿ ವೇಣು ಸುಮ್ಮನೆ ನಕ್ಕ. ಏನೂ ಉತ್ತರ ಕೊಡಲಿಲ್ಲ.

"ನೀನು ಇನ್ನೂ ಮನಸ್ಸು ಮಾಡಲಿಲ್ವೇನು?"

"ಅಣ್ಣಾ, ನೀವು ನೇರವಾಗಿ ಕೇಳ್ತಿರೋದ್ರಿಂದ ನಾನು ಅಷ್ಟೇ ನೇರವಾಗಿ ಹೇಳ್ತೀನಿ ನೀವೂ ಅಮ್ಮ ಒಪ್ಪಿದ್ರೆ ನಾನು ಸುಮಾನ್ನ ಮದುವೆ ಆಗ್ತೀನಿ" ಎಂದ ಗಂಭೀರವಾಗಿ ರಸ್ತೆಯ ಕಡೆ ನೋಡುತ್ತಾ.

"ನಾವು ಒಪ್ಪದಿದ್ರೆ?"

ಚಟ್ಟೆಂದು ಎಡಕ್ಕೆ ತಿರುಗಿ ತಂದೆಯ ಕಡೆ ನೋಡಿದ ವೇಣು. ಈಗ ರಾಯರು ರಸ್ತೆಯ ಕಡೆಗೆ ನೋಡುತ್ತಿದ್ದರು.

"ಒಪ್ಪದಿದ್ರೆ ನಾನು ಹೀಗೆ ಇರ್ತೀನಿ. ನೀವು ಯಾರಿಗೂ ಏನು ಬರೆಯೋದು ಬೇಡ."

"ಹಾಗಂದ್ರೆ ಹೇಗಾಗುತ್ತಪ್ಪ?"

"ನಿಮ್ಮ ಮನಸ್ಸಿಗೆ ನೋವಾಗೋದು ನನಗೆ ಬೇಕಿಲ್ಲ. ಹಾಗೇಂತ ನನ್ನನ್ನು ನಾನು ವಂಚಿಸಿಕೊಳ್ಳಲಾರೆ."

"ಒಂದು ವೇಳೆ ನಾನು ಒಪ್ಪಿದ್ರೂ ನಿಮ್ಮಮ್ಮ ಒಪ್ಪೋಲ್ಲ ವೇಣು."

"ನಂಗೆ ಗೊತ್ತಣ್ಣ. ಆದರೆ ಒಂದು ವಿಷಯ ನಿಮ್ಮ ಹತ್ರ ಹೇಳ್ತೀನಿ. ನಾನು ಯಾರ ಹತ್ತಿರ ಸಲಿಗೆಯಾಗಿದ್ರೂ ನನ್ನ ಮನಸ್ಸು ಮಾತ್ರ ಯಾರನ್ನೂ ಹತ್ತಿರವಾಗಿ ಸೇರಿಸ್ಕೊಳ್ಳೋ ಹಾಗೆ ಪ್ರೇರೇಪಿಸಲೇ

ಇಲ್ಲ. ನನ್ನ ಸಹೋದ್ಯೋಗಿ ಮಾಧುರಿಯ ವಿಷಯ ನಿಮಗೇ ಗೊತ್ತಲ್ಲ? ಕಡೆಯ ಪಕ್ಷ ನನ್ನ ಸ್ನೇಹವೃತ್ತದೊಳಕ್ಕೆ ಕೂಡ ಬೇಡ ಅನ್ನಿಸ್ತು ನನಗೆ ಚಂಪನ್ನ ಅಮ್ಮ ಮನೆಯಲ್ಲೇ ಇರಿಸಿಕೊಂಡಾಗ ಕೂಡ ಒಂದು ಸಲವೂ ಅವಳ ಹತ್ತಿರ ಪ್ರೀತಿಯಿಂದ ಮಾತಾಡೋಕ್ಕೆ ನನ್ನಿಂದ ಆಗಲಿಲ್ಲ" - ಎಂದು ನಿಲ್ಲಿಸಿ ತನ್ನ ಮಾತಿನಿಂದ ಅಣ್ಣ ಏನೆಂದುಕೊಳ್ಳುತ್ತಾರೋ ಎಂದು ಸಂಕೋಚಪಟ್ಟ.

"ಹೇಳು ವೇಣು" ಅವರು ಉತ್ತೇಜಿಸಿದರು.

'ಅಮೆರಿಕಾದಲ್ಲಿ ಲಿಸ್ ಅಂತ ಒಂದು ಹುಡುಗಿ. ಬಹಳ ಒಳ್ಳೆಯವಳು. ತಾನಾಗಿ ನನ್ನನ್ನು ಬಯಸಿ ಬಂದಳು. ನನ್ನ ಇಡೀ ಚೈತನ್ಯ ತಣ್ಣಗಾಯ್ತೇ ವಿನಾ ಮನಸ್ಸು, ದೇಹ ಸ್ವಲ್ಪವೂ ಚಂಚಲಗೊಳ್ಳಲಿಲ್ಲ. ಪುಟ್ಟಿ ನನ್ನ ಮನಸ್ಸಲ್ಲಿ ಅಷ್ಟು ಆಳವಾಗಿ ಕೂತುಬಿಟ್ಟಿದ್ದಾಳೆ ಅಣ್ಣ. ನಾನೇನ್ಮಾಡ್ಲಿ? ಅಮ್ಮಂಗೂ ನಿಮಗೂ ಇದರಿಂದ ಎಷ್ಟು ಬೇಸರ ಅಂತ...." ಎಂದು ಉಗುಳು ನುಂಗಿಕೊಂಡ.

"ನನಗೆ ಅರ್ಥವಾಗುತ್ತೆ ವೇಣು. ನಮ್ಮ ಮನೆತನಕ್ಕೆ ಹೀಗೊಂದು ಶಾಪ ಇರಬೇಕು. ಒಂದು ಚಿಕ್ಕ ಹುಡುಗಿಯ ಬಲಿಯಿಂದ ನಾವು ಉದ್ಧಾರವಾಗಬೇಕು ಅಂತ ಇದೆಯೋ ಏನೋ ಆದರೂ ನಮ್ಮ ವಂಶ ಬೆಳೀಬೇಕು ವೇಣು"

"ಏನಣ್ಣ ಹಾಗಂದ್ರೆ?" ಎಂದು ಅಚ್ಚರಿ ತೋರಿಸಿದ

"ಅದು ಹಾಗೇ ನಾನು ಹದಿನೆಂಟು - ಇಪ್ಪತ್ತು ವರ್ಷದವನಿದ್ದಾಗ ತುಂಬಾ ದುಷ್ಟನಾಗಿದ್ದೆ. ನಮ್ಮ ತಂದೆ ನನ್ನ ಹತ್ತಿರ ಅಯೋಗ್ಯ ಅಂತ ಮಾತೂ ಕೂಡಾ ಬಿಟ್ಟುಬಿಟ್ಟಿದ್ರು. ಆದರೆ ..."

"ಅಣ್ಣ ನೀವು....?" ಅನುಮಾನವಾಗಿ ನೋಡಿದ.

"ಹೌದಪ್ಪ ನಾನೇ. ಅಪ್ಪಂಗೆ ಅವಮಾನ ಮಾಡೋದೇ ನಂಗೊಂದು ಮೋಜು. ಅಂಥಾ ದಿನಗಳಲ್ಲಿ ಕೈಯಾರೆ ಒಂದು ಹುಡುಗಿಯನ್ನು ಬಲಿ ತೊಗೊಂಡೆ ಮನೆಯಲ್ಲಿದೆಯಲ್ಲಾ ಆ ವಾಣಿ ಫೋಟೋ ಅದೇ ಹುಡುಗಿ ನಿನ್ನಕ್ಕ ಅಂದ್ಕೊಂಡಿದ್ದೀ ನೀನು. ಆದ್ರೆ ನನ್ನ ವ್ಯಕ್ತಿತ್ವಕ್ಕೆ ಅಡಿಗಲ್ಲಾದ ವಾಣಿ ಇವಳು ನನ್ನ ಅಂತರ್ವಾಣಿ" ಎಂದು ಆ ಘಟನೆಯನ್ನೆಲ್ಲಾ ವಿವರಿಸಿದರು. ಅಂದಿನಿಂದ ಅವಳನ್ನು ಮನ ಮಂದಿರದಲ್ಲಿ ಸ್ಥಾಪಿಸಿ ತಾವು ಹೇಗೆ ಮುಂದಿನ ಬಾಳನ್ನು ರೂಪಿಸಿಕೊಂಡರೆಂಬು ದನ್ನೆಲ್ಲಾ ವಿವರಿಸಿದರು ಕಥೆ ಕೇಳುತ್ತಾ ಕೇಳುತ್ತಾ ವೇಣು, ಕಾರನ್ನು ಬಹು ಮೆಲ್ಲಗೆ ಡ್ರೈವ್ ಮಾಡುತ್ತಿದ್ದ.

'ಹಾಗೆಯೇ, ನೀನೂ ಸುಮಾರು ಅದೇ ವಯಸ್ಸಿನಲ್ಲಿ ರೋಗಿಯಾದೆ. ಪುನಃ ಒಂದು ಹುಡುಗಿಯ ಬಲಿ ಅಪರೋಕ್ಷವಾಗಿ ಆಯಿತು. ನೀನು ಉದ್ಧಾರವಾದದ್ದು ಆ ಬಲಿಯಿಂದ ಅನ್ನುವ ನಂಬಿಕೆ ನಿನ್ನ ಮನಸ್ಸಿನಲ್ಲಿ ಗಾಢವಾಗಿ ಬೇರು ಬಿಟ್ಟಿದೆ ನಿಜ. ಹಾಗೆಂತ ಅದು ನಿನ್ನ ಮುಂದಿನ ಬದುಕನ್ನು ಹಾಳುಮಾಡಬಾರ್ದು. ಪುಟ್ಟಿಯ ನೆನಪಿರಲಿ ವೇಣು. ಶಾಶ್ವತವಾಗಿ ಇರಲಿ. ಅವಳ ನೆನಪಿನಲ್ಲೇ ಒಳ್ಳೆಯ

ಕೆಲಸಗಳನ್ನು ಮಾಡು. ಜೊತೆಜೊತೆಯಲ್ಲೇ ಜೀವನದ ಎಲ್ಲಾ ಹಂತಗಳನ್ನೂ ಎದುರಿಸೋ ಸಿದ್ಧತೆಯನ್ನೂ ಮಾಡ್ಕೋಬೇಕು. ನಮ್ಮ ಮನೆ ಬೆಳೆಯಬೇಕೋ ಬೇಡ್ವೋ?"

"ಅದಕ್ಕೆ ಅಣ್ಣ, ಯಾರನ್ನು ನೋಡಿದಾಗಲೂ ಆಗದ ಒಂದು ಸಂವೇದನೆ ಸುಮಳನ್ನು ಮೊದಲ ದಿನ ಕಂಡಾಗ್ಲೇ ಆಯ್ತು. ಅವಳನ್ನಾದ್ರೆ ಮನಸ್ಸು ಒಪ್ಪಬಹುದು ಅನ್ನಿಸ್ತು ಅದಕ್ಕೆ ನಿಮ್ಮ ಮುಂದೆ ಎಲ್ಲಾ ಹೇಳಿದ್ದೀನಿ. ಏನಂದುಕೊಳ್ತೀರೋ ಏನೋ?"

ರಾಯರು ಮೆಲುನಗುತ್ತಾ ಅವನ ಎಡಗೈ ಮೇಲೆ ಮೆಲ್ಲಗೆ ತಟ್ಟುತ್ತಾ,

"ಏನೂ ಯೋಚಿಸಬೇಡ. ನೀನು ಸುಮನ್ನ ಪ್ರೀತಿಸುವುದು ನನಗಿಷ್ಟವೇ. ಈ ಮದುವೆಗೆ ನಿಮ್ಮಮ್ಮನ ಮನಸ್ಸು ಒಪ್ಪುವತನಕ ಸ್ವಲ್ಪ ಕಾಲ ಯಾವುದಕ್ಕೂ ಆತುರಪಡ್ಬೇಡ."

"ಅಣ್ಣ...." ಏನೋ ಹೇಳಲು ಬಾಯಿ ತೆರೆದ

"ಇನ್ನು ನೀನೇನೂ ಹೇಳೋದು ಬೇಡ ಎಲ್ಲಾ ಜವಾಬ್ದಾರಿ ನನ್ನದು ನನ್ನ ಮಗನ ಮದುವೆಯ ಬಾಧ್ಯತೆ ನನ್ನದಲ್ವೇ ವೇಣು . ಗೇಟಿನೊಳಕ್ಕೆ ಬರೋದೇನೂ ಬೇಡ. ಇಲ್ಲೇ ನಿಲ್ಲಿಸ್ಬಿಡು" ಎಂದರು ರಾಯರು. ಅವರು ಇಳಿಯಬೇಕಾದ ಸ್ಥಳ ಬಂದಿತು

ಅವರು ಇಳಿದು ಹೋಗುವುದನ್ನೇ ನೋಡುತ್ತಾ ಸ್ಟಿಯರಿಂಗ್‌ನ ಮೇಲೆ ತಲೆ ಆನಿಸಿ ಕುಳಿತಿದ್ದ ವೇಣು ಕುಳ್ಳಗಿದ್ದರೂ ದಿಟ್ಟವಾಗಿದ್ದ ವ್ಯಕ್ತಿ. ಹಂಸದ ಗರಿಯಷ್ಟು ಬೆಳ್ಳಗಿದ್ದ ಕಚ್ಚೆಪಂಚೆ, ಬೆಳ್ಳಗಿನ ತುಂಬು ತೋಳಿನ ಷರಟು, ಭುಜದ ಮೇಲೆ ಅಷ್ಟೇ ಬಿಳುಪಾದ ಉತ್ತರೀಯ, ಬಲಗೈಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು ಎಡಗೈಯಿಂದ, ತಲೆ ತುಂಬಾ ಇದ್ದ ಕ್ರಾಪು ಕೂದಲನ್ನು ಮೇಲಕ್ಕೆ ಸವರಿಕೊಳ್ಳುತ್ತಾ ನಡೆಯುತ್ತಿದ್ದ ಅವರನ್ನು ಎವೆಯಿಕ್ಕದೆ ನೋಡಿದ. ಎಂತಹ ಉದಾತ್ತ ವ್ಯಕ್ತಿ! ಅವರ ಮಗ ತಾನು ಎಂದು ಹೆಮ್ಮೆಯಾಯಿತು ವೇಣುವಿಗೆ. ಚಿಕ್ಕಂದಿನಲ್ಲಿ ಈತ ತುಂಬಾ ದುಷ್ಟ! ಇದು ಸಾಧ್ಯವೇ? ಯಾವ ಯಾವ ರೀತಿಯಲ್ಲಿ ಕಲ್ಪಿಸಿಕೊಂಡರೂ ಈ ಧೀರ ಗಂಭೀರ ವ್ಯಕ್ತಿತ್ವದಲ್ಲಿ ಆ ಚಿತ್ರಣ ಕಾಣಲೊಲ್ಲದಾದ. ಅವನ ಹೃದಯ ತಂದೆಯೆಡಗಿನ ಗೌರವ, ಪ್ರೀತಿ, ಹೆಮ್ಮೆಗಳಿಂದ ಉಬ್ಬಿ ನಿಂತಿತು. ತಂದೆ ಕಣ್ಮರೆಯಾದ ಕೂಡಲೆ ಕಾರನ್ನು ಹಿಂತಿರುಗಿಸಿದ.

ಅಂದೆಲ್ಲಾ ಅವನು ಇದ್ದಲ್ಲಿ ಇರಲಾರದಾದ. ತಂದೆ ಒಪ್ಪಿಗೆ ಕೊಟ್ಟರೆಂಬ ಶುಭ ಸುದ್ದಿಯನ್ನು ಸುಮಳಿಗೆ ಹೇಳಲು ಸಮಯ ಕಾಯತೊಡಗಿದ. ಒಂದೆರಡು ದಿನಗಳಾದರೂ ಅದು ಒದಗಿ ಬಾರದಾದಾಗ ಮೂರನೆಯ ದಿನ ಮಾತು ಹೇಗಾದರೂ ತಿಳಿಸಿಯೇ ಬಿಡಬೇಕೆಂದು ನಿರ್ಧರಿಸಿದ್ದ.

* * *

ಮೇ ತಿಂಗಳು ಕಡೆಯ ದಿನಗಳು. ಅಂದು ಭಾನುವಾರ. ಮಧ್ಯಾಹ್ನ ಮೂರು ಗಂಟೆ. ಇದ್ದಕ್ಕಿದ್ದಂತೆ

ವಿದ್ಯುಚ್ಛಕ್ತಿ ನಿಂತುಹೋಗಿ ರಾಯರು ಮನೆಯಲ್ಲಿನ ಫ್ಯಾನುಗಳೂ ನಿಶ್ಚಲವಾದವು. ನಾಗಮ್ಮ ಸೆಕೆ ತಾಳಲಾರದೆ, ಒಂದು ದಿಂಬನ್ನೂ, ಬೀಸಣಿಗೆಯನ್ನೂ ಹಿಡಿದು ಬಂದು ಹಾಲಿನಲ್ಲಿ ಹಿತ್ತಲ ಕಡೆಗೆ ಹೋಗುವ ಬಾಗಿಲ ಬಳಿ ನೆಲದ ಮೇಲೆಯೇ ಮಲಗಿದರು. ಅವರ ಚಿಂತನೆಗಳೆಲ್ಲಾ ಮಾಧು, ಸುಮ ಅವರ ಸುತ್ತಲೇ ಸುತ್ತುತ್ತಿದ್ದವು.

ಆ ಘಳಿಗೆಯಲ್ಲಿ ಮಾಧು ಮೆದುವಾಗಿ ಮೆಟ್ಟಲಿಳಿಯುತ್ತಿದ್ದುದು ಕಾಣಿಸಿತು. ತಮ್ಮ ಆಲೋಚನೆಗಳಿಂದ ಎಚ್ಚೆತ್ತುಕೊಳ್ಳಲು ಇಷ್ಟವಿಲ್ಲದೆ ಕಣ್ಣು ಮುಚ್ಚಿ ನಿದ್ರೆ ನಟಿಸಿದರು ನಾಗಮ್ಮ

"ಯಾಕಮ್ಮ ಇಲ್ಲಿ ಮಲಗ್ಬಿಟ್ಟೆ" ಎಂದ ಮಾಧು, ಅವರ ತಲೆಯ ಬಳಿ ಬಂದಾಗ. ಅಮ್ಮ ಎಚ್ಚೆತ್ತಿದ್ದರೆ ಅವನು ಸುಮಳ ಕೋಣೆಗೆ ಹೋಗುವುದು ಕನಸೇ ಸರಿ.

ಅಮ್ಮ ಮಾತನಾಡಲಿಲ್ಲ. ಅವನಿಗೆ ಧೈರ್ಯವೆನಿಸಿ, ಹಿಂದಿನ ನಾಲ್ಕು ಮೆಟ್ಟಲುಗಳನ್ನೂ ಮೆದುವಾಗಿಯೇ ಇಳಿದು ಎಡಕ್ಕೆ ತಿರುಗಿ ತಿರುಗಿ, ಸುಮಳ ಕೋಣೆಯ ಬಾಗಿಲ ಮೇಲೆ ಕಟಕಟ ಎನಿಸಿದ ಪಕ್ಕಕ್ಕೆ ಹೊರಳಿ ನೋಡಿದ ನಾಗಮ್ಮ ದಂಗಾದರು. ಮಾಧು ಸುಮಳ ಕೋಣೆಗೆ! ದಿನವು ಹೀಗೆಯೇ ನಡೆಯಬಹುದೆ? ತಾವಿಬ್ಬರೂ ಒಳಗೆ ಮಲಗಿದಾಗ ಇವರು ಇಲ್ಲಿ ಭೇಟಿಯಾಗುತ್ತಿರಬಹುದೆ ಈ ಮಧ್ಯಾಹ್ನದ ಸಮಯದಲ್ಲಿ? ಎಂದು ಸಂಶಯ ಕಿಡಿಗೆದರಿತು.

ಸುಮಳ ಕೋಣೆಯ ಬಾಗಿಲು ಹಾಕಿದ್ದರಿಂದ, ಮಾಧು ಸದ್ದಿಲ್ಲದೆ ತಳ್ಳಿ ಒಳಹೊಕ್ಕು ಸ್ವಲ್ಪ ಮುಂದಕ್ಕೆ ದೂಡಿದ. ಬಾಗಿಲು ಕೀಲುಗಳ ಬಳಿ ದೊಡ್ಡ ಸೀಳು ಬಿಟ್ಟಿತ್ತು. ಹಳೆ ಕಾಲದ ಬಾಗಿಲು. ನಾಗಮ್ಮ ಮಲಗಿದ್ದಡೆಗೆ ಆ ಸೀಳಿನೊಳಗಿಂದ, ಸುಮ ತನ್ನ ಹಾಸಿಗೆ, ಪೆಟ್ಟಿಗೆಗೆ ಒರಗಿ, ಪುಸ್ತಕ ಹಿಡಿದು ಅರ್ಧಮರ್ಧವಾಗಿ ಕಾಣಸುತ್ತಿತ್ತು. ಮಾಧು ಒಳ ಹೊಕ್ಕ ಕೂಡಲೆ ನಾಗಮ್ಮ ಎದ್ದು ಇನ್ನೂ ಸರಿಯಾಗಿ ಕಾಣುವಂತೆ ಗೋಡೆಗೆ ಒರಗಿ ಕುಳಿತರು. ಕಿವಿಗಳನ್ನು ಅಗಲಿಸಿದರು. ನಡೆಯ ಬಾರದ್ದೇನೋ ಈಗ ನಡೆದು ಹೋಗುವಂತೆ, ತಾವದನ್ನು ತಡೆಯಲು ಅಸಮರ್ಥ ರಾದಂತೆ ಅವರಿಗನಿಸಿತು. ಮಾಧು ಮಾತನಾಡಿದ- "ಸುಮಾ," ದನಿ ಬಹಳ ಮೆಲುವಾಗಿತ್ತು. ಅನುರಾಗಪೂರಿತವಾಗಿತ್ತು ಎಂದು ಅನಿಸಿತು ನಾಗಮ್ಮನವರಿಗೆ. ಸುಮ ತಲೆಯೆತ್ತಿ ಬೆಚ್ಚಿಬಿದ್ದಳು. ಕಣ್ಣು ತುಂಬಾ ನೀರು ತುಂಬಿ ಬಂದು ಕಪೋಲಗಳ ಮೇಲೆ ಹರಿದಿತ್ತು.

"ಏನು ಕಾದಂಬರಿ ಅದು ಇಷ್ಟೊಂದು ಗೋಳುಗುಟ್ಟಸುವಂಥಾದ್ದು?ಅಷ್ಟಕ್ಕೂ ಅಂಥ ಕಾದಂಬರಿ ಯಾಕೆ ಓದಬೇಕೂಂತ" ಎಂದ ಮಾಧು ಪುಸ್ತಕ ಕಿತ್ತುಕೊಳ್ಳಲು ಬಾಗಿದ. ಅವಳು ನೋಡುತ್ತಿದ್ದ ಫೋಟೋವನ್ನು ಸರ್‍ರೆಂದು ಪುಸ್ತಕದಲ್ಲಿ ತುರುಕಿ ಮುಚ್ಚಿಹಿಡಿದಳು. ಬಲವಾಗಿ ಅವನು ಕಿತ್ತುಕೊಂಡು ನೋಡಿದಾಗ ಅದು ಕಾದಂಬರಿಯಾಗಿರಲಿಲ್ಲ. ಹಾಗಾದರೆ ಅವಳು ಅಳಲು ಕಾರಣ?

ಕೈಗೆ ಬಂದ ಕೆಮಿಸ್ಟ್ರಿಯ ಪಠ್ಯಪುಸ್ತಕ ಬಿಚ್ಚಿದ ಕೂಡಲೇ ಅದರೊಳಗಿನಿಂದ ಎರಡು ಫೋಟೋಗಳು ಜಾರಿ ಬಿದ್ದವು. ಒಂದನ್ನು ಸರ್ರನೆ ಕೈಗೆತ್ತಿಕೊಂಡ. ಇನ್ನೊಂದನ್ನು ತೆಗೆದುಕೊಳ್ಳುವಷ್ಟರಲ್ಲಿ ಸುಮ ಅದರ ಮೇಲೆ ಕಾಲೊತ್ತಿ ನಿಂತು ಬಿಟ್ಟಳು.

"ಆ ಫೋಟೋ ನೋಡ್ಬೇಡಿ, ಪ್ಲೀಸ್ ಕೊಟ್ಬಿಡಿ" ಎಂದು ಅವಳು ಅಂಗಲಾಚಿ ಕಿತ್ತುಕೊಳ್ಳಲು ಹೋದಾಗ ನೋಡಿಯೇ ತೀರಬೇಕೆಂಬ ಹಟ ಅವನದಾಯಿತು. ಒಂದು ಕೈಯಿಂದ ಸುಮಳನ್ನು ದೂರವಾಗಿ ಹಿಡಿದು ಇನ್ನೊಂದು ಕೈಯಿಂದ ಫೋಟೋವನ್ನು ತಲೆಯ ಮೇಲೆ ಎತ್ತಿ ಹಿಡಿದ.

ಅದರಲ್ಲಿರುವುದು ತನ್ನ ಗತಿಸಿದ ಪತಿಯ ಚಿತ್ರ. ಅದನ್ನು ನೋಡಿ ಅಳುತ್ತಿದ್ದೆನೆಂದು ವೇಣು ತಿಳಿದರೆ, ತಪ್ಪು ತಿಳಿಯಬಹುದು. ಹಳೆಯದನ್ನು ಮರೆಯದ ಇವಳು ತನ್ನೊಂದಿಗೆ ಬಾಳುತ್ತಾಳೆಯೇ ಎಂದು ಬೇಸರಿಸಬಹುದು. ಆದುದರಿಂದ ಅವನು ಅದನ್ನು ನೋಡಬಾರದೆಂದು ಮತ್ತೆ ಮತ್ತೆ "ಪ್ಲೀಸ್, ಪ್ಲೀಸ್" ಎನ್ನುತ್ತಾ ಕೈ ಚಾಚಿದಳು.

ಆ ಫೋಟೋವನ್ನು ಅವನು ನೋಡಿಯೇ ನೋಡಿದ. ಅವಳು ತನ್ನ ಕೃತ್ಯಕ್ಕೆ ತಲೆ ತಗ್ಗಿಸಿ ನಿಂತಳು. ಅವನು ಒಮ್ಮೆಲೇ ಗಹಗಹಿಸಿ ನಕ್ಕ. ಅವಳಿಗೆ ಅವಮಾನ ವಾದಂತಾಯಿತು. ತನ್ನ ಪತಿಯನ್ನು ನೋಡಿ ಕೇಕೆ ಹಾಕಿ ನಗುವ ಅಗತ್ಯವಿಲ್ಲ. ಏನು ಸಂಸ್ಕಾರ - ಈತನದು ಎಂದುಕೊಂಡಳು.

ಮಾಧು ನಗುವಿನ ಮಧ್ಯೆ "ಅಲ್ಲಾ ಸುಮ. ಈ ಫೋಟೋ ನಿನಗೆಲ್ಲಿ ಸಿಕ್ತು? ಯಾವಾಗಲೋ ನಾನು ತುಂಬಾ ಕಾಯಿಲೆ ಬಿದ್ದಾಗ, ಇನ್ನು ಉಳೀತೀನೋ ಇಲ್ವೋ ಅಂತ ತೆಗೆಸಿದ್ದು. ನಿನಗೆ ನನ್ನ ಫೋಟೋ ಬೇಕು ಅಂದಿದ್ರೆ, ಫಸ್ಟ್‌ಕ್ಲಾಸ್ ಫೋಟೋ ಒಂದು ನಿನಗೆ ಕೊಡ್ತಿದ್ದೆ. ಅದನ್ನು ಬಿಟ್ಟು ಈ ನನ್ನ ರೋಗದ ಫೋಟೋ ಇಟ್ಕೊಂಡು ಅಳ್ತಿದೀಯಲ್ಲಾ?" ಎಂದ.

ಸುಮಳಿಗೆ ಪಕ್ಕದಲ್ಲೇ ಮಿಂಚು ಹೊಡೆದಂತಾಯಿತು.ಕೋಣೆಗೆ ಕೋಣೆಯೇ ಗಿರಗಿರ ತಿರುಗಿದಂತಾಯ್ತು. ಸಾವರಿಸಿಕೊಳ್ಳುತ್ತಾ-"ಏನು-ಏನಂದ್ರಿ?ಅದರಲ್ಲಿರೋದು ನೀವಾ?ಆ ಫೋಟೋ ನಿಮ್ಮದು ಅಂದ್ರಾ? ...... ಅಲ್ಲ..ಅಲ್ಲ-ಅದು .....ನನ್ನ ಗಂಡನದು,ಚಿಕ್ಕಂದಿನಲ್ಲೇ ಹೋಗಿಬಿಟ್ಟರು......." ತಡೆತಡೆದು ಏದುಸಿರು ಬಿಟ್ಟು ಹೇಳಿದಳು. ಅದೇ ಸಮಯದಲ್ಲಿ ತಾನು ತುಳಿದು ನಿಂತಿದ್ದ ಫೋಟೋನ ಗಮನವಿಲ್ಲದೆ ಪಕ್ಕಕ್ಕೆ ಸರಿದಿದ್ದಳು.ಮಾಧು ಬಾಗಿ ಅದನ್ನೂ ಕೈಗೆತ್ತಿಕೊಂಡು ನೋಡಿದ, ದಿಗ್ಭ್ರಮೆ ಗೊಂಡ. ಆ ಭಾವಚಿತ್ರದೊಳಗಿಂದ ವಿಶಾಲ ಕಣ್ಣುಗಳಿಂದ ಪುಟ್ಟ ತನ್ನ ಕಡೆಗೆ ನೋಡುತ್ತಿದ್ದಳು. ಫೋಟೋದಿಂದ ದೃಷ್ಟಿ ಬದಲಿಸಿ ಸುಮಳ ಕಡೆಗೆ ನೋಡಿದ. ಅದೇ ಅಗಲ ಕಣ್ಣುಗಳಿಂದ ತನ್ನ ಕಡೆಗೆ ನೋಡುತ್ತಿದ್ದಳು ಸುಮ. ಅವಳಾಡಿದ ಒಂದೊಂದು ಮಾತೂ ಅವನ ಕಿವಿಗಳಿಂದ ಹಾಯ್ದು ಹೃದಯದಲ್ಲಿ ಕೆಲಸ ಆರಂಭಿಸಿದವು.

"ಪುಟ್ಟೀ!"ಎಂದು ಕೈಚಾಚಿದ.

"ನಿಮಗೆ.........ನಿಮಗೆ ನಂಜನಗೂಡಿನ ಪುಟ್ಟಿ........ನಾನು........ಪುಟ್ಟಿ!" ಎಂದು ಮುಖ ಮುಚ್ಚಿಕೊಂಡಳು.

"ಪುಟ್ಟೀ ನನ್ನ ಪುಟ್ಟೀ!"ಎಂದು ಬಾಚಿ ತಬ್ಬಿಕೊಂಡ.

ಅವಳು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ನಡು ನಡುವೆ-"ಹೀಗ್ಯಾಕೆ ಮಾಡಿದ್ರಿ? ನೀವು ಬದುಕಿಯೇ ಇದ್ರೂ ಸತ್ತ ಹಾಗೆ ಕಾಗದ ಯಾಕೆ ಬರೆಸಿದ್ರಿ? ನನ್ನನ್ನು ಎಷ್ಟು ಕಷ್ಟಕ್ಕೆ ಗುರಿಮಾಡ್ಬಿಟ್ರಿ? ಯಾಕೆ ನನ್ನನ್ನು ಅಷ್ಟು ತಿರಸ್ಕಾರ ಮಾಡಿದ್ರಿ? ನಾನ್ಯಾಕೆ ನಿಮಗೆ ಬೇಕಾಗ್ಲಿಲ್ಲ? ನಿಜ, ನಾವು ಬಡವರಾಗಿದ್ವಿ. ಆದ್ರೂ ನಿಮಗೆ ಒಳ್ಳೆಯದು ಮಾಡಲಿಲ್ವಾ?"ಮಾತಿನ ನಡುವೆ ಸುಮ ಅಳುತ್ತಿದ್ದಳು.

ಮಾಧುವಿಗೆ ಆ ಅಮೃತ ಘಳಿಗೆಯಲ್ಲಿ ಆಗುತ್ತಿದ್ದ ಅನುಭೂತಿ ಏನೆಂಬುದೇ ತಿಳಿಯದು. ಅವಳ ಯಾವ ಪ್ರಶ್ನೆಗೂ ಉತ್ತರ ಕೊಡಲು ಅವನಿಂದ ಆಗಲಿಲ್ಲ. ಕಣ್ಣಿನಿಂದ ನೀರು ಸುರಿದು ಹೋಗುತ್ತಿತ್ತು. ನಾಲಗೆ ಹೊರಳುವುದಕ್ಕೂ ಮಿಗಿಲಾದ ಆನಂದೋದ್ವೇಗ ಅವನಿಗೆ.ಅವನ ಭಾಗ್ಯದೇವತೆ ಜೀವಂತವಾಗಿ ತೋಳಿನಲ್ಲಿ ಸೆರೆಸಿಕ್ಕಿದಳು.

ಒಬ್ಬರ ತೆಕ್ಕೆಯಲ್ಲೊಬ್ಬರು ಮೂಕವಾಗಿ ಎಷ್ಟೋ ಹೊತ್ತು ನಿಂತಿದ್ದರು.

ನಾಗಮ್ಮ ತಾವು ಕೇಳಿದ ಮಾತುಗಳ ಸ್ವಪ್ನವೋ ದಿಟವೋ ಎಂದು ಸುತ್ತ ನೋಡಿದರು, ಕಣ್ಣು ಹೊಸಕಿಕೊಂಡು. ಎಲ್ಲವೂ ನಿಜವೇ. ಇದ್ದಕ್ಕಿದ್ದಂತೆ ಅವರ ಹೃದಯವೀಣೆ ಮೀಟಿತು. ದೇಹವೆಲ್ಲಾ ಉಲ್ಲಾಸಮಯವಾಯಿತು.ಎದ್ದು ರಾಯರ ಕೋಣೆಗೆ ಓಡಿಹೋದರು.

"ನಮ್ಮ ಸುಮ ಪುಟ್ಟಿ, ನಮ್ಮ ಪುಟ್ಟೀಂದ್ರೆ ಸುಮ!"ಎಂದು ಏನೋ ಗಡಬಡಿಸಿ ನಡೆದುಬಿಟ್ಟರು. ಆಗತಾನೇ ನಿದ್ರೆಯಿಂದ ಏಳುತ್ತಿದ್ದ ರಾಯರಿಗೆ ಆಕೆ ಏನು ಹೇಳಿದಳೆಂದು ತಿಳಿಯಲಿಲ್ಲ. ಕೇಳೋಣವೆಂದರೆ ಆಕೆ ಅಲ್ಲಿದ್ದರಲ್ಲವೆ? ಮೆಲ್ಲಗೆ ತನ್ನ ಸುಮಧುರ ದಿಗ್ಭ್ರಮೆಯಿಂದ ಎಚ್ಚರಗೊಂಡ. ಹರಿದು ಬಂದಿದ್ದ ಕಣ್ಣೀರನ್ನು ಒರಸಿ ಕೊಂಡು-"ಪುಟ್ಟಿ, ನಿಮ್ಮ ಮನೆ ಬಿದ್ದು ನೀನು ಉಳೀಲಿಲ್ಲ ಅಂತ ನಮಗೆ ಸುದ್ದಿ ಬಂದಿತ್ತು. ನಾವೆಲ್ಲಾ ಎಷ್ಟು ಚಡಪಡಿಸಿದೆವು,ಅದೆಲ್ಲಾ ನಿಧಾನವಾಗಿ ಮಾತಾಡೋಣ. ಎಲ್ಲಿ, ಕಣ್ಣೊರಸಿಕೋ ಅಮ್ಮಂಗೆ, ಅಣ್ಣಂಗೆ ಈ ವಿಷಯ ತಿಳಿಸಿಬಿಡಬೇಕು ಮುಖ್ಯವಾಗಿ"ಎಂದು ತಾನೇ ಅವಳ ಕೆನ್ನೆಯ ಮೇಲೆ ಹರಿದಿದ್ದ ನೀರು ಒರೆಸಿ, ಭುಜ ಬಳಸಿ ಅವಳನ್ನು ಹಿಡಿದು, ಮತ್ತೊಂದು ಕೈಯಿಂದ ಬಾಗಿಲು ತೆರೆದಾಗ, ಎದುರಿಗೆ ನಿಂತಿದ್ದರು ಅಮ್ಮ, ಅಣ್ಣ.

ಅಮ್ಮನ ಕೈಯಲ್ಲಿ ಆರತಿಯ ತಟ್ಟೆ.

"ಅಮ್ಮಾ......."ಎಂದು ಮಾಧು ಬಾಯಿ ತೆಗೆಯುವುದರೊಳಗೆ, ಅಮ್ಮ ಒಬ್ಬರೇ ಆರತಿ

ಎತ್ತುತ್ತಿದ್ದವರು, "ನಾನೆಲ್ಲಾ ಕೇಳಿಸ್ಕೊಂಡೆ, ನೀ ಏನೂ ಹೇಳ್ಬೇಡ" ಎಂದರು. ಆರತಿಯ ತಟ್ಟೆಯನ್ನು ರಾಯರ ಕೈಯಲ್ಲಿ ತುರುಕಿ, ಸುಮಳನ್ನು ಎಳೆದು ತಬ್ಬಿಕೊಂಡು, "ನೂರು ವರ್ಷ ಬಾಳು ನನ್ನಮ್ಮ. ನೀನು ನಮ್ಮ ಭಾಗ್ಯದೇವತೆ" ಎಂದರು

"ಅಮ್ಮಾ, ಅಮ್ಮಾ , ನಾನೂ ಒಬ್ಬ ಬಡಪಾಯಿ ಇಲ್ಲಿದ್ದೀನಿ" ಎಂದ ಮಾಧು ಹಾಸ್ಯವಾಗಿ.

ರಾಯರು ಮಾತ್ರ ಒಂದು ಕ್ಷಣ ಅಪ್ರತಿಭರಾದರು. ಅವರಿಗೆ ಏನೂ ಅರ್ಥವಾದಂತೆಯೇ ಕಾಣಲಿಲ್ಲ. ಯಾವ ಪವಾಡ ತಮ್ಮ ನಾಗುವಿನಲ್ಲಿ ಈ ಬದಲಾವಣೆ ತಂದಿತು ಎಂದು ತಲೆ ತುರಿಸಿಕೊಳ್ಳುತ್ತಿದ್ದಾಗಲೇ ಮಾಧು"ಅಣ್ಣಾ, ನಮ್ಮ ಪುಟ್ಟಿ ಸತ್ತಿಲ್ಲ, ಸುಮಾನೆ ಪುಟ್ಟೀ! ಯಾರೋ ನಡುವೆ ನಮಗೆ ಮೋಸ ಮಾಡಿದ್ದಾರೆ, ಅಣ್ಣಾ" ಎಂದ ಉದ್ವೇಗದಿಂದ ಅಮ್ಮನಿಂದ ದೂರ ಸರಿದಿದ್ದ ಸುಮಳನ್ನು ಹತ್ತಿರ ಕರೆದುಕೊಂಡರು ಅವಳ ತಲೆ ನೇವರಿಸಿದರು. ಉತ್ತರೀಯದಿಂದ ಕಣ್ಣೊರಸಿಕೊಂಡರು ರಾಯರು.

ಆ ಹಿತ್ತಲ ನಾಲ್ಕು ಮೆಟ್ಟಿಲ ಮೇಲೆ ನಡೆದಿತ್ತು ಸಮಾಗಮ, ಪುನರ್ಮಿಲನ. ಮಾಧು ಒಳಗೋಡಿ ಹೋಗಿ, ತಕ್ಷಣ ಬಂದು ತಂದೆ-ತಾಯಿಯರ ಕೈಯಲ್ಲಿ ಅಕ್ಷತೆ ಕೊಟ್ಟು, ಸುಮಳನ್ನು ಕೈಹಿಡಿದೆಳೆದು ಪಕ್ಕದಲ್ಲಿ ನಿಲ್ಲಿಸಿ ಕೊಂಡು , ಪತ್ನೀಸಮೇತನಾಗಿ ಕಾಲಿಗೆರಗಿದ

* * *

ಆ ಉದ್ವೇಗದ ಉನ್ಮತ್ತ ಘಳಿಗೆ ಕಳೆದ ನಂತರ, ಸುಮಳ ಮನಸ್ಸು ಚಿಂತನೆಗೆ ತೊಡಗಿತು. ಇಷ್ಟು ದಿವಸ ತನ್ನನ್ನು ಬೇಕೆಂದೇ ದೂರವಿಟ್ಟವರು ಈಗ ಮಾತ್ರ ತನ್ನನ್ನು ಸೊಸೆಯೆಂದು ಆದರಿಸುವರೆ? ತನ್ನಿಂದಾಗಬೇಕಾದ ಕೆಲಸ ಎಂದೋ ಮುಗಿದಿದೆ. ಯಾವುದೋ ಒಂದು ದಿಗ್ಭ್ರಮೆಯಲ್ಲಿ ತನ್ನನ್ನು ತೆಕ್ಕೆಸಿಕೊಂಡಿದ್ದಾರೆ, ಒಂದೆರಡು ದಿನ ಕಳೆಯುವ ವೇಳೆಗೆ ಆ ಭ್ರಾಂತಿಯಿಂದ ಎಚ್ಚೆತ್ತು ತನ್ನನ್ನು ಹೊರದೂಡಬಹುದು ಇದುವರೆಗೂ ದಿಕ್ಕಿಲ್ಲದ ಒಬ್ಬಳೆಂದಾದರೂ ತನಗೆ ಆಶ್ರಯವಿತ್ತು. ಆದರೀಗ ತಾನೇ ಆ ಮಗನ ಪತ್ನಿಯೆಂದರೆ ಅವರು ಗೌರವಿಸಲಾರರು . ಅವರ ಅಂತಸ್ತಿನ ಯಾವ ಮೆಟ್ಟಿಲಲ್ಲಿ ತನಗಿದೆ ಸ್ಥಳ?ಎಂದು ನೊಂದಿತು ಸುಮಳ ಮನಸ್ಸು. ತಾನು ಮನಸಾರೆ ಪ್ರೀತಿಸುವ ವೇಣು ತನ್ನ ಪತಿಯೇ ಎಂಬ ಆನಂದ ಇದ್ದಕ್ಕಿದ್ದಂತೆ ಬತ್ತಿ ಹೋದಂತಾಯಿತು. ತಾನು ವಿಧವೆಯಲ್ಲವೆಂಬ ಹರ್ಷ ಹಾಗೆಯೇ ಮುದುರಿಹೋಯಿತು. ತಾನು ಕೇಳಿದ ಪ್ರಶ್ನೆಗಳಿಗೆ ಯಾರೂ ಉತ್ತರ ಕೊಡಲಿಲ್ಲ ಮಾಧವ ಸತ್ತನೆಂದು ಸುದ್ದಿ ಕಳಿಸಿ, ತನ್ನನ್ನು ಇವರು ದೂರ ಮಾಡಿದ್ದೇಕೆ ಎಂಬ ಬೃಹತ್ ಪ್ರಶ್ನೆ, ಶೇಷಪ್ರಶ್ನೆಯಾಗಿಯೇ ಉಳಿಯಿತು. ಅವರು ಏನು ಹೊಸ ವಿಷಯ ಕಂಡು ತನ್ನನ್ನು ತಮ್ಮವಳನ್ನಾಗಿ ಮಾಡಿಕೊಳ್ಳಬಹುದು?ಹತ್ತಿರ ಸೇರಿಸಿಕೊಳ್ಳಬಹುದು?

ಛೆ!ಏನು ಯೋಚನೆ ತನ್ನದು!ರಾಯರೇ ಆಗಲಿ, ಅಮ್ಮನೇ ಆಗಲಿ, ವೇಣುವೇ ಆಗಲಿ ಅಂಥ

ಧೂರ್ತಮಸ್ಕರಂತೆ ಕಾಣಲಿಲ್ಲ. ಮಧ್ಯೆ ಯಾರೋ ಮೋಸ ಮಾಡಿದ್ದಾರೆ ಎಂದು ವೇಣುವೆಂದುದು ನಿಜ. ತಾನು ಸತ್ತಳೆಂದು ಯಾರೋ ತಿಳಿಸಿದರಂತೆ, ಯಾರಿರಬಹುದು?ತಮ್ಮ ಬದುಕಿನೊಂದಿಗೆ ಇಂತಹ ಘೋರ ಆಟವಾಡಿರುವ ಕೇಡಿಗರು ಯಾರಿದ್ದಿರಬಹುದು? ಧನಿಕ ರಾಯರ ಮಗನಿಗೆ ಮಗಳನ್ನು ಧಾರೆ ಯೆರೆಯಲು ಬಯಸಿದ್ದ ಯಾರೋ ಇರಬಹುದು. ಬಡವರ ಬಲಿಯ ಮೇಲೆ ಸೌಧ ಕಟ್ಟುವವರಿಗೇನು ಕಡಿಮೆ?

ಅವರು ಮೂವರೂ ಸುಖದ ತೆಪ್ಪದಲ್ಲಿ ತೇಲುತ್ತಿದ್ದರೆ, ಸುಮಳ ಮನ ಒಳ ಸರಿದು ಚಡಪಡಿಸುತ್ತಿತ್ತು. ಹೆಚ್ಚು ಮಾತೇ ಇಲ್ಲದ ಮೂಕಳಂತೆ ವರ್ತಿಸುತ್ತಿದ್ದಳು. ಅವಳ ಈ ಮೌನ ವೇಣುವಿಗೆ ಅರ್ಥವೇ ಆಗಲಿಲ್ಲ. ಅತಿಯಾದ ಆನಂದ ಮೂಕ ಳನ್ನಾಗಿಸಿದೆ ಎಂದುಕೊಂಡ. ರಾಯರು ಮಾತ್ರ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ರಾತ್ರಿ ಊಟದ ಸಮಯದಲ್ಲೂ ಸುಮ ಸಂತೋಷದಿಂದಿದ್ದಂತೆ ಅವಳಿಗೆ ಕಾಣಲಿಲ್ಲ. ಅವಳ ನಗು ತೋರಿಕೆಯದು ಎಂದು ಅವರಿಗೆ ತಿಳಿಯುವುದು ತಡವಾಗಲಿಲ್ಲ. ಊಟ ಮುಗಿಸಿ, ತಟ್ಟೇಯಲ್ಲೇ ಕೈತೊಳೆದು ತಮ್ಮ ಕೋಣೆಗೆ ನಡೆಯುತ್ತಾ ರಾಯರು-"ಕೆಲಸ ಎಲ್ಲಾ ಆದ್ಮೇಲೆ ನನ್ನ ಕೋಣೆಗೆ ಸ್ವಲ್ಪ ಬಂದು ಹೋಗಮ್ಮ, ಸುಮ"ಎಂದರು.

ವೇಣು ಚೇಷ್ಟೆಯಾಗಿ"ಅಣ್ಣಾ ನಾನು?"ಎಂದ.

"ಮಲಗೋ ಮುಂಚೆ, ನೀನು ಅಲ್ಲಿ ಬಂದೇ ಬರ್ತ್ತೀಯಲ್ಲಾ" ಎಂದವರು "ವೇಣು, ಹಾಗೇ ಬೆಳಿಗ್ಗೆ ಸುಮಾನ್ನ ಆ ಕೋಣೆಯಿಂದ ಈ ಕೋಣೆಗೆ ಬದಲಾಯಿಸು, ನಿಮ್ಮಮ್ಮನ ಜೊತೆಗೆ ನಾನು ಮುಂದಿನ ಕೋಣೆಗೆ ವರ್ಗಾಯಿಸ್ಕೋತೀನಿ"ಎಂದರು.

"ಅವಳಿಗೆ ನನ್ನ ರೂಂನಲ್ಲಿ ಜಾಗ ಇದೆ ಅಣ್ಣ" ಎಂದ ವೇಣು, ತಲೆ ಕೆರೆಯುತ್ತಾ ಸಂಕೋಚದಿಂದ.

"ಅಲ್ಲಿಗೆ ಅವಳು ಬರೋಕೆ ಇನ್ನು ತುಂಬಾ ದಿನ ಇದೆ ಮಾಧು. ಮದುವೆ, ಮತ್ತೊಂದು ಶಾಸ್ತ್ರ ಯಾವುದೂ ಆಗದೆ ಅವಳು ನಿನ್ನ ಕೋಣೆಯಲ್ಲಿ ಇರೋ ಹಾಗಿಲ್ಲಪ್ಪ" ಎಂದರು ತಾಯಿ ನಡುವೆ.

"ಅಂದರೆ ನನಗೆ ಮತ್ತೆ ಮದುವೆಯೆ?" ಮಾಧು ಅರ್ಧ ಅಚ್ಚರಿ, ಅರ್ಧ ಸಂತೋಷದಿಂದ ಕೇಳಿದ.

"ಬೇಡವೇನಪ್ಪ ವೇಣು? ಪ್ರಪಂಚಕ್ಕೆ ಪುಟ್ಟಿ-ಮಾಧವರ ವಿವಾಹ ತಿಳಿಯದು. ಈಗ ಅದನ್ನು ತಿಳಿಸೋ ಅಗತ್ಯಾನೂ ಇಲ್ಲ. ಈಗ ಅನಂತ ರಾಯರ ಮಗ ಡಾ|| ವೇಣುಮಾಧವ್ ಮತ್ತು ಸುಮ ಅವರ ವಿವಾಹ, ಜನಜನಿತವಾಗಬೇಕು"ಎಂದು ನಗುತ್ತಾ ನುಡಿದು ರಾಯರು ಕೋಣೆ ಸೇರಿ ಕೊಂಡರು.

ವೇಣು ಅಲ್ಲೇ ಸೋಫಾದಲ್ಲಿ ಸಣ್ಣಗೆ ಸಿಳ್ಳು ಹಾಕುತ್ತಾ, ಕಾಲು ಜಾರಿಸಿ ಕುಳಿತ. ತಂದೆಗೆ ಕೇಳಿಸದಷ್ಟು ಮೆಲುವಾಗಿತ್ತು ಆ ಸಿಳ್ಳಿನ ದನಿ. ಆದರೂ ಹತ್ತಿರ ಕೇಳುವವರಿಗೆ ಅದರಲ್ಲಿ ಆನಂದದ ಅನುಭವ ಅರಿವಾಗುತ್ತಿತ್ತು.

ಹೆಂಗಸರಿಬ್ಬರೂ ಕೆಲಸ ಮುಗಿಸಿ, ಕೋಣೆಗೆ ಬಂದಾಗ-"ಕೂತ್ಕೋಮ್ಮ" ಎಂದರು ರಾಯರು, ಸುಮಳನ್ನುದ್ದೇಶಿಸಿ, ಸುಮ ಅಮ್ಮನ ಮಂಚದ ಮೇಲಿನ ಹಾಸಿಗೆ ಸರಿಪಡಿಸಿ, ಅದರ ಮೇಲೆ ಕುಳಿತಳು. ಅಮ್ಮ ಬಂದು ಪಕ್ಕದಲ್ಲಿ ಮಲಗಿದರು.

ಅಣ್ಣ ಏನು ಹೇಳುತ್ತಾರೋ ಎಂದು ಮೈಯೆಲ್ಲಾ ಕಿವಿಯಾಗಿ ಕುಳಿತಳು ಸುಮ. ವೇಣುವೂ ಎದ್ದು ಬಂದು ಬಾಗಿಲಲ್ಲಿ ನಿಂತ. ಅಣ್ಣ ಅವಳಿಗೆ ಹೇಳುವುದನ್ನು ಕೇಳುವ ಕುತೂಹಲ ಅವನಿಗೆ. "ನಿನ್ನನ್ನ ನಾವು ತಾತ್ಸಾರ ಮಾಡಿ ಇಷ್ಟು ಕಷ್ಟಕ್ಕೆ ಗುರಿಮಾಡಿದ್ದು ಯಾಕೇಂತ ನೀನು ವೇಣೂನ ಕೇಳಿದ್ಯಂತೆ. ಅದಕ್ಕೆ ಉತ್ತರ ಇಲ್ಲಿದೆ ನೋಡಮ್ಮ" ಎಂದು ತಾವು ತೆಗೆದಿರಿಸಿದ್ದ, ಹಿಂದಿನ ಆ ಕಾಗದವನ್ನು ಕೊಟ್ಟರು.

ಅದನ್ನು ಓದುತ್ತಿದ್ದಂತೆ ಸುಮಳ ಕೈ ನಡುಗಿತು. ಅದರ ಒಕ್ಕಣೆಗಿಂತ ಆ ಬರಹ. ಅದರಡಿಯ ರುಜು ಅವಳನ್ನು ಕೆರಳುವಂತೆ ಮಾಡಿತು. "ಸೋಮಶೇಖರ ! ನಯವಂಚಕ ! ಶೇಖರಮಾಮ !" ಎಂದು ಆ ಕಾಗದವನ್ನು ಬಲವಾಗಿ ಮುದುರಿದಳು. ಅವಳ ಮನಃಪಟಲದ ಮೇಲೆ ನಗುನಗುತ್ತಾ ಎದುರಿಗೆ ಬಂದು ನಿಂತ ಅವಳ ನೆಚ್ಚಿನ ಶೇಖರಮಾಮ.

"ಅದು ಯಾರು ನಿನಗೆ ಗೊತ್ತಾ? ಈ ಬರಹ ರುಜು ಹಾಕಿರುವಾತನದೇನಾ?" ಎಂದರು ರಾಯರು.

"ಹೂಂ" ಎಂದಳು. ದನಿ ಎಲ್ಲಿಯೋ ಪಾತಾಳದಲ್ಲಿತ್ತು. ಮತ್ತೆ ಸ್ವಲ್ಪ ಚೇತರಿಸಿಕೊಂಡು, "ಗೊತ್ತು ಅಣ್ಣ , ಈ ಗೋಮುಖವ್ಯಾಘ್ರಗಳು ನಮ್ಮಂತಹ ಬಡವರನ್ನು ಹೇಗೆ ನಾಶಮಾಡ್ತಾರೆ" ಎಂದು ಮುಖಮುಚ್ಚಿ ಅಳತೊಡಗಿದಳು.

ಅಣ್ಣ ಈ ಪತ್ರ ಕೊಡದಿದ್ದರೂ ಚೆನ್ನಾಗಿತ್ತು ಎನಿಸಿ ವೇಣು-"ಅಣ್ಣ ನೀವ್ಯಾಕೆ ಆ ಕಾಗದ ಇನ್ನೂ ಇಟ್ಟಿದ್ರಿ? ಅವತ್ತೆ ಸುಟ್ಟುಬಿಡಬೇಕಾಗಿತ್ತು" ಎಂದ.

"ಹೌದು,ಆದರೆ ನಿನಗೆ ತೋರಿಸಬೇಕೂಂತ ಒಂದು ವರ್ಷ ಕಾಲ ತಡೆದಾಗ ಎತ್ತಿಟ್ಟಿದ್ದು. ನೀನು ನೋಡಿದ ಮೇಲೂ ಯಾಕೋ ಏನೋ ಹಾಗೇ ನನ್ನ ಪೆಟ್ಟಿಗೆಗೆ ಸೇರಿಸ್ಬಿಟ್ಟೆ. ಅದೊಂದೇ ಕಾಗದ ಏನು, ಲಲಿತಮ್ಮ ಬರೆದ ಕಾಗದಗಳೆಲ್ಲಾ ಇನ್ನೂ ನನ್ನ ಹತ್ತಿರ ಇವೆ" ಎಂದರು ಅತ.

ಸುಮ ಇನ್ನೂ ಅಳುತ್ತಲೇ ಇದ್ದಳು. ವೇಣು ಹತ್ತಿರ ಬಂದು "ಕಳೆದು ಹೋದ ವಿಷಯಗಳಿಗೆ ಇಷ್ಟೊಂದು ಅಳಬಾರದು ಸುಮ. ಸಮಾಧಾನ ಮಾಡ್ಕೋ. ಹೋಗ್ಲಿ, ನಡೆದದ್ದಾದರೂ ಏನು?" ಎಂದ. ದುಃಖಿಸುತ್ತಿದ್ದಾಗ ದುಃಖದ ಕಾರಣ ಹೊರಗೆಡ ವಿದರೆ, ಹೃದಯದ ಭಾರ ಕಡಿಮೆಯಾಗಬಹುದೆಂದು ಹಾಗೆ ಸೂಚಿಸಿದ.

"ಸೋಮಶೇಖರ ನಮ್ಮಣ್ಣಂಗೆ ಸ್ನೇಹಿತ. ನಂಜನಗೂಡಿನಲ್ಲೇ ಪೋಸ್ಟ್ ಮಾಸ್ಟರ್. ನಾವು ಬಡವರೂಂತ ಬಹಳ ಸಹಾಯ ಮಾಡ್ತಿದ್ರು. ನಮ್ಮಣ್ಣ ಸತ್ತಾಗ ನನಗೆ ಐದು ವರ್ಷ. ಆಗೆಲ್ಲಾ ತುಂಬಾ

ಸಹಾಯ ಮಾಡಿದ್ರಂತೆ. ಅಮ್ಮ ಎಸ್. ಎಸ್. ಎಲ್. ಸಿ. ಮಾಡಿದ್ರಿಂದ ಅವರ ಕೈಲಿ ಅಪ್ಲಿಕೇಷನ್ ಹಾಕ್ಸಿ ಮೇಡಂ ಕೆಲ್ಸಾನೂ ಕೊಡ್ಸಿದ್ರಂತೆ. ನಮ್ಮನೇಗೆ ಬಂದು ನನಗೆ ಪಾಠ ಹೇಳಿಕೊಡ್ತಿದ್ರು. ನನಗೆ ಶೇಖರಮಾವ ಅಂದ್ರೆ ಪ್ರಾಣ. ಚಾಕಲೇಟು, ಹಣ್ಣು, ಪುಸ್ತಕ ಎಲ್ಲಾ ತಂದ್ಕೊಡ್ತಿದ್ರು.ಅಮ್ಮಂಗೆ ಬರುಬರ್ತಾ ಅವನ ತಲೆ ಕಂಡ್ರೆ ಆಗ್ತಿರ್ಲಿಲ್ಲ. ಅವರು ತಂದ್ಕೊಟ್ಟದ್ದೆಲ್ಲಾ ಎತ್ತಿ ಬಿಸಾಕಿಬಿಡ್ತಿದ್ಲು. 'ಆತನ ಜೊತೆ ನಿನಗೇನೇ ಸ್ನೇಹ?' ಅಂತ ನನ್ನ ಚೆನ್ನಾಗಿ ಹೊಡೀತಿದ್ಲು. ನಂಗೆ ಅಮ್ಮನ ಮೇಲೆ ಸಿಟ್ಟು ಬರ್ತಿತ್ತು. 'ಎಷ್ಟು ಒಳ್ಳೇವ್ರು ಶೇಖರಮಾಮ ಅಮ್ಮ ಯಾಕೆ ಹೀಗೆ?'ಅಂತ ನಾನು ಕದ್ದು ಮುಚ್ಚಿ ಅವರ ಪೋಸ್ಟ್ ಆಫೀಸ್ ಹತ್ತರಾನೆ ಹೋಗ್ಬಿಡ್ತಿದ್ದೆ. ಒಂದೆರಡು ಸಲ ಏನೋ ಚೀಟಿ ಬರೆದು ಮಾವ ನನ್ನ ಹತ್ರ ಅಮ್ಮಂಗೆ ಕಳಿಸಿದ್ರು. ಅಮ್ಮ ಅದನ್ನು ಹರಿದೆಸೆದು 'ಪೆದ್ದು ಮುಂಡೇದೇ ಆತನ ಹತ್ರ ಹೋಗ್ಬೇಡ್ವೆ, ನೀನು ನನ್ನ ಪ್ರಾಣಕ್ಕೆ ತರ್ತಿ' ಅಂತ ಬೈದ್ಲು. ನನಗೆ ಅಮ್ಮನಮೇಲೆ ಅಸಹ್ಯ ಅನ್ನಿಸ್ತು. 'ಸಹಾಯ ಬೇಕಾದಾಗೆಲ್ಲಾ ತೊಗೊಂಡೆ, ಈಗಮಾವನ್ನ ಬೈತೀಯಾ?' ಅಂದ್ಬಿಟ್ಟೆ. ಅಮ್ಮ ತುಂಬಾ ಅತ್ಬಿಟ್ಲು. ಏನೇನೋ ಹೇಳಿದ್ಲು. ಈಗನ್ನಿಸುತ್ತೆ, ಅವನು ನನ್ನ ಮೂಲಕ ಅಮ್ಮನ್ನ ಹಾಳು ಮಾಡೋಕೆ ನೋಡ್ತಿದ್ದಾಂತ

"ನೀವು ನನ್ನ ಮದ್ವೆ ಮಾಡಿದಾಗ ಆತ ಊರಿನಲ್ಲಿರಲಿಲ್ಲ. ಬಂದ್ಮೇಲೆ ಸಿಕ್ಕಾಪಟ್ಟೆ ಅಮ್ಮನ ಮೇಲೆ ಹಾರಾಡ್ದ.'ನನ್ನ ಮಗಳ ಮದ್ವೆ ನನಗಿಷ್ಟ ಬಂದ ಹಾಗೆ ಮಾಡ್ದೆ. ನೀವ್ಯಾಕೆ ಇದ್ರಲ್ಲಿ ತಲೆ ಹಾಕ್ಬೇಕು?' ಅಂದುಬಿಟ್ಟು ಅಮ್ಮ. ಆತಂಗೆ ಏನು ರೇಗಿತೋ, ಏನೇನೋ ಕೆಟ್ಟ ಮಾತೆಲ್ಲಾ ಆಡಿಬಿಟ್ಟ. ಆದ್ರೂ ಅಮ್ಮ ಅಳದೆ 'ಮುಂಚೆ ಹೊರಗ್ಹೋಗಿ"ಅಂತ ಕೋಪವಾಗಿ, ಆತನ್ನ ತಳ್ಳಿಕೊಂಡು ಹೋಗಿ ಹೊರಗೆ ತಳ್ಳಿ ಬಾಗಿಲು ಹಾಕಿಬಿಟ್ಳು. ಮೊದಲೇ ಅಮ್ಮ ಅಷ್ಟು ಆರೋಗ್ಯವಂತಳಲ್ಲ. ಅದಕ್ಕೇಂತ್ಲೇ ನನ್ನ ಬಾಲ್ಯ ಮದುವೇಗೆ ಒಪ್ಪಿದ್ದಂತೆ. ಆಗ ಅಮ್ಮಂಗೆ ಅಷ್ಟೊಂದು ಶಕ್ತಿ ಹೇಗ್ಬಂತೋ, ಗಟ್ಟಿಮುಟ್ಟಾಗಿದ್ದ ಮಾವನ್ನ ಅನಾಮತ್ತು ತಳ್ಳಿಬಿಟ್ಟದ್ಲು. ಮಾವ ಬಾಗಿಲಲ್ಲೇ ನಿಂತು ಕೂಗ್ತಿದ್ದ. 'ದೊಡ್ಡ ಮನುಷ್ಯರು ಬೇಗರಾಗಿಬಿಟ್ರೂಂತ ಹೆಚ್ಕೊಂಡಿದ್ದಿ. ಈ ಸೊಕ್ಕೆಲ್ಲಾ ಎಷ್ಟು ದಿನ ಅಂತ ನಾನೂ ನೋಡ್ತೀನಿ. ಆ ನಿನ್ನ 'ಅಳಿಯ'ಗೊಟಕ್ ಅಂದ್ರೆ ಈ ನಿನ್ನ ರಾಯ ಬಂದು ಕಾಣ್ತಾನೆ ನಿನ್ನ. ಬೇಡ್ಕೊಂಡು ನನ್ನ ಬಾಗಿಲ್ಗೇ ಬರ್ತೀಯ'ಅಂತ ಕೂಗಿ ಹೋಗ್ಬಿಟ್ಟ.

ಆಗಲೂ ನನಗ್ಯಾಕೋ ಅಮ್ಮನ ಮೇಲೆ ಕೋಪ, ವೃಥಾ ಆತನ್ನ ಬೈತಿದಾಳೇಂತ. 'ಇದೆಲ್ಲಾ ಏನಮ್ಮ?' ಅಂತ ಜೋರಾಗಿ ಅತ್ಬಿಟ್ಟೆ. ಅಮ್ಮಂಗೆ ಸದಾ ಹೊಟ್ಟೆನೋವು ಬರ್ತಿತ್ತು. ಹೊಟ್ಟೆನೋವು ಬಂದು ಮಲಗ್ಬಿಟ್ಲು. ಅವತ್ತೆಲ್ಲಾ ನಾವು ಏನೂ ತಿನ್ನಲಿಲ್ಲ. ಮಾರನೆ ದಿನ ನಾನೇ ಅಡಿಗೆ ಮಾಡ್ದೆ. ನನ್ನನ್ನ ಹತ್ರ ಕೂರಿಸ್ಕೊಂಡು 'ಜೋಪಾನ ವಾಗಿರು ಪುಟ್ಟ. ಅವನು ಒಳ್ಳೆ ಮನುಷ್ಯ ಅಲ್ಲ. ಸಹಾಯ ಮಾಡಿದ ನೆವದಲ್ಲಿ ಮೇಲೆ ಬೀಳ್ತಾನೆ. ನಿಮ್ಮಪ್ಪಂಗೆ ಆತ ಇಂಥಾವ್ನು ಅಂತ ಗೊತ್ತಿರಲಿಲ್ಲಾಂತ ಕಾಣುತ್ತೆ.

ಪರಿಚಯ ಮಾಡಿಸ್ಬಿಟ್ರು'ಅಂತ ಹೇಳಿದ್ಲು.

"ಅಮ್ಮಂಗೆ ಸ್ವಲ್ಪ ವಾಸಿಯಾಗಿ ಸ್ಕೂಲಿಗೆ ಹೋಗೋಕೆ ಪ್ರಾರಂಭ ಮಾಡಿದಳು. ಇನ್ನೂ ಒಂದು ತಿಂಗಳು ಕಳೆದಿರಲಿಲ್ಲ. ಅವತ್ತು ಅಮ್ಮನ ಹೆಸರಿಗೊಂದು ಕಾಗ್ದ ಬಂತು . ಅದನ್ನ ಓದಿ ಅಮ್ಮ ತತ್ತರಿಸಿಬಿಟ್ಟಳು-ನನ್ನ ಹತ್ತಿರ ಬಂದು ಹುಚ್ಚು ಹುಚ್ಚಾಗಿ 'ಆಗ್ಹೋಯ್ತು ಪುಟ್ಟಿ. ನಿನ್ನ ತಲೇ ಮೇಲೆ ನಾನೇ ಚಪ್ಪಡಿ ಎಳ್ದೆ. ಇನ್ಮೇಲೆ ನೀನು ಕುಂಕುಮ, ಹೂವು ಎಲ್ಲಾ ಬಿಟ್ಬಿಡು'ಅಂತ ನನ್ನನ್ನು ತಬ್ಬಿಕೊಂಡು ಅಳ್ತಾ ಇದ್ಲು. ಬೆಂಗಳೂರಿನಿಂದ ಬಂದ ಮಾಧವ್ ಸತ್ತು ಹೋಗಿದ್ದಾನೇಂತ ಆಗ ನನಗನ್ನಿಸಿತ್ತು. ನನಗವನು ಗಂಡ ಅಂತ ಎಲ್ಲಾರೂ ಹೇಳಿದ್ದರು. ಗಂಡ ಸತ್ತರೆ ವಿಧವೆ. ಅಂದರೆ ನಾನು ವಿಧವೆ ಎಂಬ ತಿಳಿವು, ಪುಸ್ತಕಜ್ಞಾನದಿಂದ ನನಗೆ ತಿಳಿಯಿತು"ಎಂದು ಮಾತು ನಿಲ್ಲಿಸಿದಳು ಸುಮ. ಅವಳ ಮನ ಅಂದು ತಮಗೆ ಬಂದ ಕಾಗದವನ್ನು ಜ್ಞಾಪಿಸಿಕೊಳ್ಳ ತೊಡಗಿತು. ಸ್ವಲ್ಪ ಗಟ್ಟಿಯಾಗೇ ಗೊಣಗಿಕೊಂಡಳು-ಇದೇ ಬರಹ ಅದು. ಶೇಖರ ಮಾಮನೇ ಬರೆದದ್ದೂಂತ ಅಮ್ಮನಿಗೇಕೆ ತಿಳೀಲಿಲ್ಲ?ಅದರಲ್ಲಿ ಮೋಸ ಇದೆ ಅಂತ ಅಮ್ಮಂಗೆ ಯಾಕೆ ಸಂಶಯ ಬರಲಿಲ್ಲ?ಎಲ್ಲಾ ನಮ್ಮ ದೌರ್ಭಾಗ್ಯ ಇದರಲ್ಲಿರುವ ತಾರೀಖಿನಲ್ಲೇ ಅದೂ ಬಂದಿತ್ತು. ನನಗೆ ಚೆನ್ನಾಗಿ ನೆನಪಿದೆ. ಹೌದು ಇದೇ ಬರಹ, ಇದೇ ತಾರೀಖು. ಆದರೆ ರುಜುವಿದಲ್ಲ"ಎಂದು ತುಟಿ ಬಿಗಿದುಕೊಂಡಳು.

ರಾಯರು ಮೌನವಾಗಿ ತಲೆತಗ್ಗಿಸಿ ಕುಳಿತಿದ್ದರು. ವೇಣು ಬಾಗಿಲಲ್ಲೇ ಕೈಕಟ್ಟಿ ಒರಗಿ ನಿಂತು ತದೆಕಚಿತ್ತನಾಗಿ ಕೇಳುತ್ತಿದ್ದ. ಅಮ್ಮ "ಆಮೇಲೇನಾಯ್ತು?"ಎಂದು ಎಚ್ಚರಿಸಿದರು.

"ಅಮ್ಮ ಆಮೇಲೆ ನಿಮಗೆ ಐದಾರು ಕಾಗದ ಬರೆದಳು. ಪುಟ್ಟಿ, ಆ ರಾಯರು ತುಂಬಾ ಒಳ್ಳೆಯವ್ರಿದ್ದ ಹಾಗೆ ಕಾಣುತ್ತೆ. ಅವರು ಬಂದು ಕರ್ಕೊಂಡು ಹೋದ್ರೆ ನೀ ಹೋಗ್ಬಿಡು. ನಾನಿನ್ನೆಷ್ಟು ದಿನಾನೋ! ನೀನಾದ್ರೂ ಚೆನ್ನಾಗಿರು. ನಿನಗೊಂದು ದಾರಿ ಅವರು ಮಾಡೇ ಮಾಡ್ತಾರೆ"ಅಂತ ದಿನವೂ ಟಪಾಲಿಗೆ ಕಾದಳು. ಏನೂ ಉತ್ತರ ಬರಲಿಲ್ಲ. ಅಮ್ಮಂಗೆ ನಿರಾಶೆಯಾಯ್ತು. ಮೊದಲೆ ಖಾಯಿಲೆ, ಸ್ವಲ್ಪ ದಿನದಲ್ಲಿ ನನ್ನನ್ನ ಒಬ್ಬಳನ್ನೇ ಬಿಟ್ಟು ಸತ್ತೇ ಹೋಗ್ಬಿಟ್ಳು"ಬಿಕ್ಕಿ ಬಿಕ್ಕಿ ಅತ್ತಳು ಸುಮ ಯಾರೂ ಏನೂ ಮಾತಾಡಲಿಲ್ಲ. ಅವಳ ದುಃಖ ಪೂರ ಇಂದು ಹರಿದು ಬರಬೇಕು. ಮತ್ತೆ ಸ್ವಲ್ಪ ಸಮಾಧಾನದಿಂದ-

"ಪುನಃ ಶೇಖರಮಾಮನೇ ಬಂದು ನನ್ನನ್ನು ಅವರ ಮನೇಗೆ ಕರಕೊಂಡು ಹೋದ್ರು. ಅವರಿಗೆ ಹೆಂಡತಿ ಮಕ್ಕಳಿರಲಿಲ್ಲ. ಮನೆಯಲ್ಲಿ ಯಾರೂ ಇರಲಿಲ್ಲ. ದಿನ ಬೆಳಗಾದ್ರೆ ಮಾಮ'ರಾಯರು ನಿಮ್ಮಮ್ಮಂಗೆ ಕೊಟ್ಟ ದುಡ್ಡು ಎಲ್ಲಿ?' ಅಂತ ಕೇಳೋಕೆ ಶುರು ಮಾಡಿದರು. ನನಗೆ ವಿಷಯವೇ ಗೊತ್ತಿರಲಿಲ್ಲ. 'ಗೊತ್ತಿಲ್ಲ'ಅಂದ್ರೆ ಹೊಡೀತಿದ್ರು. ಉಪವಾಸ ಹಾಕ್ತಿದ್ರು. ಒಂದಿನ ನಮ್ಮನೆ ಖಾಲಿ ಮಾಡಿ, ಎಲ್ಲಾ ಸಾಮಾನು ತಮ್ಮ ಮನೇಗೆ ಮಾಡ್ಕೊಂಡ್ರು. ನನ್ನ ಪ್ರತಿಭಟನೆ ಪ್ರಯೋಜನ ಆಗ್ಲಿಲ್ಲ. ಅವರೇ

ಅಡಿಗೆ ಮಾಡ್ಕೋತಾ ಇದ್ದವ್ರು ಆಮೇಲೆ ನನ್ನ ಕೈಲಿ ಎಲ್ಲಾ ಮಾಡಿಸ್ತಿದ್ರು. ಗತಿಯಿಲ್ಲದ ಕಾರಣ ಮಾಡ್ತಿದ್ದೆ. ಆದ್ರೆ ಆತ ಎಷ್ಟೇ ಹೊಡೀಲಿ ಬಡೀಲಿ ಸ್ಕೂಲಿಗೆ ಹೋಗೋದು ಮಾತ್ರ ತಪ್ಪಿಸ್ಕೋತಾ ಇರ್ಲಿಲ್ಲ.

"ಅಮ್ಮನ ಕಾಗದ ಪತ್ರ ಎಲ್ಲಾ ಹುಡುಕಿ ತಮ್ಮ ಹತ್ರ ಸೇರಿಸ್ಕೊಳ್ತಾ ಇದ್ದಾಗ ಮಾತ್ರ ನಾನು ತುಂಬಾ ಕಚ್ಚಾಡಿದೆ. 'ಎಲ್ಲಾ ನನ್ನ ಹತ್ರಾನೆಕೊಡಿ. ಈಗಲ್ದೇ ಮುಂದೆ ನನಗೆ ಗೊತ್ತಾಗುತ್ತೆ' ಅಂದೆ. ಮಾಮ ಕೊಡಲಿಲ್ಲ. ಆಗಲೂ ನನಗೆ ಮಾಮ ಯಾಕೆ ಹೀಗೆ ಮಾಡ್ತಾರೇ ಅನ್ನಿಸ್ತೇ ವಿನಾ ಅವರು ಕೆಟ್ಟವರೂಂತ ಅನ್ನಿಸಲೇ ಇಲ್ಲ. ಆದರೆ ಕ್ರಮೇಣ ಏನೋ ಆತನ ಏಟು ಬೈಗುಳ ಬೇಸರವಾಯ್ತು. ನನ್ನ ಮದುವೆ ಮುಗಿಸಿ ಮಗಳ ಮನೆಗೆ ಹೋಗಿದ್ದ ಅಜ್ಜ ಹಿಂತಿರುಗಿ ಬಂದಿದ್ದಾರೇಂತ ತಿಳಿದು ಹಿಂದಿನ ಅವರ ಮನೆಗೆ ಹೋಗಿ ಎಲ್ಲಾ ಹೇಳ್ಕೊಂಡು ಅತ್ಬಿಟ್ಟೆ. ಅಜ್ಜನಿಗೆ ಆಶ್ಚರ್ಯವಾಯಿತು. ಅಪನಂಬಿಕೆಯಾಯಿತು-"ಇದು ಸಾಧ್ಯಾನೇ ಇಲ್ಲ. ನೀನು ವಿಧವೆ ಆಗೋದು ಅಸಾಧ್ಯ. ಅಂಥ ಒಳ್ಳೆ ಜಾತಕ ನಿನ್ನದು, ನೀನು ಒಂದು ಒಳ್ಳೇ ಉತ್ತಮ ವಂಶಕ್ಕೆ ತಾಯಿ ಆಗ್ತೀಯಾ. ನನ್ನ ಲೆಕ್ಕಾಚಾರವೇ ತಪ್ಪಿತೇ ಹಾಗಾದ್ರೆ?"-ಅಂತ ಕಸಿವಿಸಿಕೊಂಡರು. ಅಜ್ಜನ್ನ ತಂಪು ಹೊತ್ತಿನಲ್ಲಿ ನೆನೆಯಬೇಕು. ಶೇಖರನ ಮನೆಗೆ ಹೋಗೋಕೆ ನನಗೆ ಭಯ ಅಂತ ಅಂದಾಗ 'ಇಲ್ಲೇ ಇದ್ಬಿಡು ಮಗೂ' ಅಂತ ತಮ್ಮ ಮನೆಯಲ್ಲೇ ಇಟ್ಕೊಂಡ್ರು. ಅಲ್ಲೂ ನನ್ನ ಹಣೆಯಬರಹ. ಕೆಲಸವೆಲ್ಲಾ ನನ್ನ ತಲೆಯ ಯಾರೂ ಇಲ್ಲದ ಮನೆ ಅಜ್ಜಂದು. ಒಬ್ಬರೇ ಬೇಯಿಸ್ಕೊಂಡು ತಿನ್ತಾ ಇದ್ರು. ಈಗ ನಾನು ಮನೆಯ ಗೃಹಿಣಿ, ಸೇವಕಳಾದೆ. ಆದರೆ ಅಜ್ಜನ ಮನೆಯಲ್ಲಿ ನನಗೆ ತುಂಬಾ ಚೆನ್ನಾಗಿತ್ತು. ಅವರು ಬಹಳ ಪ್ರೀತಿಯಿಂದ ನೋಡಿಕೊಂಡ್ರು.

"ಒಂದು ದಿನ ಅಲ್ಲಿಗೂ ಬಂದ ಮಾಮ. ಅಜ್ಜನಿಗೂ ಅವನಿಗೂ ಏನೋ ಬಹಳ ಹೊತ್ತು ವಾಗ್ವಾದ ನಡೀತು.ಕಡೇಗೆ ಅಜ್ಜ ಕಡ್ಡಿ ತುಂಡು ಮಾಡಿದಹಾಗೆ ಮಗೂದು ಏನೇನು ಸಾಮಾನಿದ್ಯೋ ಎಲ್ಲಾ ಇಲ್ಲಿ ತಂದಿಟ್ಬಿಡು ಶೇಖರ. ಇದು ಚೆನ್ನಾಗಿಲ್ಲ'ಅಂದ್ರು. ಒಂದೆರಡು ಪೆಟ್ಟಿಗೆ ಅಜ್ಜನ ಮನೇಗ್ಬಂತು. ಕೈಚೀಲದಲ್ಲಿ ಮಾಮನ ಕಣ್ಣು ತಪ್ಪಿಸಿ ತಂದಿದ್ದ ಪುಸ್ತಕಗಳನ್ನು ಬಿಟ್ರೆ ಮತ್ತೇನೂ ತರದೆ ಹಾಕಿದ ಬಟ್ಟೆಯಲ್ಲೇ ಒದ್ದಾಡ್ತಿದ್ದ ನನಗೆ,ನನ್ನ ಬಟ್ಟೆಬರೆ ತರಿಸಿಕೊಟ್ಟ ಅಜ್ಜ ದೇವರಂತೆ ಕಂಡರು. ಅಮ್ಮ ನನಗೆ ಯಾವುದರಲ್ಲೂ ಕಡಿಮೆ ಮಾಡಿರಲಿಲ್ಲ. ಅಜ್ಜ ನಮ್ಮ ಸಾಮಾನೆಲ್ಲ ತಡಕಾಡಿ ಬಿಟ್ರು. ಎಲ್ಲಾದ್ರೂ ನಿಮ್ಮ ವಿಳಾಸ ಸಿಗುತ್ತೇನೋ ಅಂತ, ಸಿಗಲಿಲ್ಲ. ನನಗೂ ಗೊತ್ತಿರಲಿಲ್ಲ. ಬಹಳ ಪೇಚಾಡಿದರು-'ಎಂತ ಅವಿವೇಕವಾಯ್ತು!'ಬೆಂಗಳೂರು ರಾಯರು' ಅಂತ ಅಂದ್ಕೊಂಡೆವೇ ವಿನಾ ಹೆಸರೇ ತಿಳ್ಕೊಳ್ಳಿಲ್ಲ. ನಿಮ್ಮಮ್ಮಂಗೆ ಗೊತ್ತಿತ್ತು. ಆದ್ರೆ ಏನೂ ಸಿಗ್ತಾ ಇಲ್ವಲ್ಲ ಪುಣ್ಯಾತ್ಗಿತ್ತಿ ಎಲ್ಲಿ ಇಟ್ಟಿದ್ಳೋ........ನಿನ್ನ ದೌರ್ಭಾಗ್ಯ ಮಗೂ. ಇಲ್ದಿದ್ರೆ ನನಗಿಂಥ ಮೌಢ್ಯ ಬರಬೇಕಿತ್ತೆ?'ಅಜ್ಜ ಕಣ್ಣೀರುಸುರಿಸಿದರು. ನಾನೇ ಸಮಾಧಾನಮಾಡಿದೆ."

"ಆ ಸಾಮಾನಿನಲ್ಲಿ ಸಿಕ್ಕಿದ್ದು ನಿಮ್ಮ ಈ ಫೋಟೋ. ಅದನ್ನು ನಾನು ಬಹಳ ಆಸಕ್ತಿಯಿಂದ ಎತ್ತಿಟ್ಟುಕೊಂಡೆ. ನನ್ನ ಅದೃಷ್ಟವೋ ಏನೋ ಅದೇ ಸಮಯದಲ್ಲಿ ಶೇಖರಮಾವನಿಗೆ ಅಲ್ಲಿಂದ ವರ್ಗವಾಯ್ತು, ಆಮೇಲೆ ಆತನ ಪತ್ತೆಯೇ ಇಲ್ಲ. ಇದುವರೆಗೆ ನಾನು ಮತ್ತೆ ಆತನನ್ನು ಕಾಣಲೇ ಇಲ್ಲ. ಅಜ್ಜನ ಮನೆಯಲ್ಲಿ ಒಂದುವರ್ಷ ಸುಖವಾಗಿ ಕಳೆದೆ. ಅಜ್ಜ ಒಂದು ದಿನ 'ಹೆಣ್ಣು ಹುಡುಗಿ ಈವತ್ತೋ ನಾಳೆಯೋ ದೊಡ್ಡವಳಾಗ್ತಾಳೆ. ನನ್ನಹತ್ರ ಇದ್ರೆ ಕಷ್ಟ. ನೀನು ಕರ್ಕೊಂಡುಹೋಗು ಅಂತ ಅವರ ಮಗಳ ಹತ್ತಿರಕ್ಕೆ ನನ್ನ ಕಳ್ಸಿದ್ರು. ಆಕೆ ಒಂಥರಾ ಹೆಂಗಸು.ತನ್ನ ಮಕ್ಕಳ ಚಾಕರೀಗೆ ನನ್ನ ಆಳು ಅಂದ್ಕೊಂಡ್ಳು.ನಾನೇನು ತಾನೇ ಮಾಡ್ಲಿ?ನನಗ್ಯಾರೂ ದಿಕ್ಕಿಲ್ಲ. ವಯಸ್ಸಿಗೆ ಮೀರಿದ ತಿಳುವಳಿಕೆ ಬಂದಿತ್ತು ಎಲ್ಲಿಂದ ಎಲ್ಲಿಗೇ ಹೋಗಲಿ ಶಾಲೇಗೆ ಹೋಗೋದು ಮಾತ್ರ ತಪ್ಪಿಹೋಗದ ಹಾಗೆ ನೋಡ್ಕೊಂಡೆ.

"ಅವರ ಮನೆಯಲ್ಲಿ ನಾನು ದೊಡ್ಡವಳಾದೆ ಆಗ ಮಾತ್ರ ನನ್ನನ್ನು ಮದುವೆಯಾದ ಹುಡುಗನ ನೆನಪಾಯ್ತು 'ದೊಡ್ಡವಳಾದ ಮೇಲೆ ನಿಮ್ಮ ಮನೇಗೆ ಬರ್ತೀನಿ, ಸೇವೆ ಮಾಡ್ತೀನಿ'ಅಂದಿದ್ದನಲ್ಲಾ ನನ್ನ ಕೈಲಿ ಸೇವೆ ಮಾಡಿಸ್ಕಳ್ಳೋ ಮೊದಲೇ ಸತ್ತುಹೋಗ್ಬಿಟ್ರಲ್ಲಾಂತ ದುಃಖ ಆಯ್ತು. ಅವರ ಮನೆಯಲ್ಲಿ ಪಡಬಾರದ ಕಷ್ಟ ಪಡ್ತಿದ್ದನ್ನು ನೋಡಿ ಅಜ್ಜ ಒಂದ್ಸಲ ಬಂದಾಗ, ತಿರುಗ ತಮ್ಮ ಹತ್ರಾನೇ ಕರ್ಕೊಂಡು ಹೋದ್ರು. ನಮ್ಮಮ್ಮನ ಹೆಸರಲ್ಲಿ ಇದ್ದ ಹಣದ ಪಾಸ್ ಬುಕ್, ಮತ್ತೆ ಸ್ವಲ್ಪ ಹಣ ನನ್ನ ಹತ್ರ ಕೊಟ್ಟು "ಜೋಪಾನವಾಗಿಟ್ಕೊ, ಮುಂದೆ ಬೇಕಾಗುತ್ತೆ. ನೀನು ಜಾಣ ಹುಡುಗಿ, ದೇವರು ಖಂಡಿತ ನಿನಗೆ ಮುಂದೆ ಒಳ್ಳೇದು ಮಾಡ್ತಾನೆ" ಅಂತ ಆಶೀರ್ವಾದ ಮಾಡಿ, ನಮ್ಮ ತಂದೆಯ ತಂದೆ ಮನೆಗೆ ಕಳಿಸಿಕೊಟ್ರು. ಅಜ್ಜ ಆಗ಼್ಲೂ ಒಂದುಪದೇಶ ಹೇಳಿದ್ರು- ಎಲ್ಲಯೂ ನಂಗೆ ಮದುವೆ ಆಗಿತ್ತು. ಗಂಡ ಇಲ್ಲ ಅಂತ ಹೇಳ್ಕೋಬೇಡ. ನಿನ್ನಮದುವೆ ಆಗಿದ್ದು ಒಂದು ಒಳ್ಳೆಯ ಕೆಲ್ಸಕ್ಕಾಗಿ.ದೈವ ಅದನ್ನು ಯಾಕೋ ಒಪ್ಪಲಿಲ್ಲ ಅದ್ರಿಂದ ನಿಂಗೆ ಮದುವೆಯೇ ಆಗ್ಲಿಲ್ಲ ಅಂದ್ಕೋ ವಿಧವೆ ಅಂದ್ರೆ ಸಮಾಜ ತನ್ನ ಕಟ್ಟುಕಟ್ಟಳೆಯಿಂದ ನಿನ್ನನ್ನು ಕೊಂದ್ಬಿಡತ್ತೆ ಮಗೂ"ಎಂದಿದ್ರು.ಈಗ ಆ ಅಜ್ಜ ಇದ್ದಿದ್ರೆ, ತಮ್ಮ ಜಾತಕ ಫಲ ನಿಜ ಆಯ್ತೂಂತ ಎಷ್ಟು ಸಂತೋಷ ಪಡ್ತಿದ್ರೋ!" ನಿಟ್ಟುಸಿರು ಬಿಟ್ಟು ತುಸು ತಡೆದು ಪುನಃ ಪ್ರಾರಂಭಿಸಿದಳು.

"ನಮ್ಮ ತಾತಂಗೆ-ನಮ್ಮಮ್ಮ ಅಂದ್ರೆ ಅಷ್ಟಕ್ಕಷ್ಟೆ. ನಮ್ಮ ತಂದೆ ಸತ್ತಾಗ ಅಮ್ಮ ಕೆಲಸಕ್ಕೆ ಸೇರಿದ್ದೇ ಅವರ ದೃಷ್ಟಿಯಲ್ಲಿ ಮಹಾಪರಾಧವಾಯಿತು. ನನ್ನ, ನಮ್ಮಮ್ಮನ್ನ ಆಮೇಲೆ ನೋಡಲೇ ಇಲ್ಲ. ಆದ್ರೂ ನನಗೆ ಬೇರೆ ವಿಧಿಯಿಲ್ಲದೆ ಅಜ್ಜ ಹೇಳಿದ ಹಾಗೆ ನನ್ನ ಒಳ್ಳೆಯದಕ್ಕೇಂತ ಅಂಗೈಯಲ್ಲಿ ಜೀವ ಹಿಡಿದು ತಾತನ ಮನೆಯಲ್ಲಿ ಹೆಜ್ಜೆಯಿಟ್ಟೆ. ಅಲ್ಲಿ ಯಾವ ದುಃಖಕ್ಕೂ ಕಾರಣವಿರಲಿಲ್ಲ ಆದ್ರೆ ತಿನ್ನೋಕೇ ಇಲ್ಲದ ಸಂಸಾರ. ನನ್ನ ಮೇಲಿನ ಕೋಪ, ಅಮ್ಮನ ಸಾವಿನಿಂದ ಕಡಿಮೆ ಯಾಗಿದ್ದರೂ ತಿನ್ನಲೇ ಇಲ್ಲದಾಗ, ನಾನೂ ಬಂದು ಸೇರಿದ್ದು ಅವರಿಗೆಲ್ಲಾ ದುಗುಡ, ಅಸಹ್ಯ. ಕಷ್ಟಗಳ ಮತ್ತೊಂದು ಅಧ್ಯಾಯ ಅಲ್ಲಿ

ಪ್ರಾರಂಭವಾಯ್ತು

"ಇಷ್ಟೆಲ್ಲಾ ಕಷ್ಟದ ಮಧ್ಯದಲ್ಲೂ ನನಗಿದ್ದುದು ಒಂದೇ ಒಂದು ಆಸರೆ, ನನ್ನ ಓದು. ಆ ಓದಿನ ಉತ್ಸಾಹದಲ್ಲಿ ಯಾವುದೂ ನನಗೆ ತಾಕುತ್ತಿರಲೇ ಇಲ್ಲ. ದೈವದ ಕೃಪೆಯಿಂದ ಶಾಲೆಯಲ್ಲಿ ಯಾವಾಗ್ಲೂ ನಾನೇ ಮುಂದು. ಟೀಚರುಗಳಿಗೆಲ್ಲಾ ನನ್ನ ಕಂಡ್ರೆ ಪ್ರಾಣ. ಹಸಿದು ಸ್ಕೂಲಿಗೆ ಹೋದ ದಿನ ಯಾರಾದ್ರೂ ಕರೆದು ಒಂದು ತುತ್ತು ಇಡ್ತಿದ್ರು.ನಾಚಿಕೆ ಬಿಟ್ಟು ಹಸಿವೂಂತ ಹೇಳಿಯೇ ಬಿಡ್ತಿದ್ದೆ.

"ಎಸ್. ಎಸ್. ಎಲ್, ಸಿ ಯಲ್ಲಿ ರ್‍ಯಾಂಕ್ ಬಂದಾಗ ನನಗೆ ಮುಂದಕ್ಕೆ ಓದ ಬೇಕು ಅನ್ನೋ ಆಸೆ ಪ್ರಬಲವಾಯ್ತು.ಎಷ್ಟೋ ಸಲ ಇದ್ದ ಬದ್ದ ಹಣ ಎಲ್ಲಾ ತಾತಂಗೆ ಕೊಟ್ಬಿಡೋಣ ಅಂದ್ಕೊಂಡವ್ಳು ಹಾಗೇ ಸುಮ್ಮನಿದ್ದೆ. ಈಗ ಓದಿನ ನೆವದಲ್ಲಿ ಮನೆ ಬಿಟ್ಟು ಮೈಸೂರಿಗೆ ಓಡ್ಬಿಟ್ಟೆ. ತಾತನ ಮನೆಯವ್ರಿಗೆ ಪೀಡೆಯೇ ಕಳೀತು ಅನ್ನಿಸ್ತೋ ಏನೋ. ನನ್ನನ್ನೇನೂ ಹುಡುಕಿದ ಹಾಗೆ ಕಾಣಲಿಲ್ಲ. ಅವರಿಗೆ ಗೊತ್ತಿದ್ರೂ, ನನ್ನ ಮದುವೆಯ ವಿಷಯ ತಿಳಿದಿತಲಿಲ್ಲ. ಮೈಸೂರಿಗೆ ಬರುವವರೆಗೆ ನಾನು ಎಲ್ಲರಿಗೂ 'ಪುಟ್ಟಿ'ಯಾಗಿದ್ದವಳು ಮೈಸೂರಿನಲ್ಲಿ ' ಸುಮ'ಆದೆ. ಅಲ್ಲಿಯವರೆಗೆ ರಿಜಿಸ್ಟರುಗಳಲ್ಲಿ ನಾನು ಸುಮ ಆಗಿದ್ದರೂ, ಯಾರೂ ನನ್ನನ್ನು ಆ ಹೆಸರಿನಿಂದ ಕರೀತಿರಲಿಲ್ಲ.

"ಮೈಸೂರಿಗೇನೋ ಬಂದಾಯ್ತು. ಆದ್ರೆ ಇರೋದೆಲ್ಲಿ? ಹಿಂದೆ ನನಗೆ ಮೇಡಂ ಆಗಿದ್ದ ನರಸಮ್ಮ ಬಸ್‌ಸ್ಟಾಂಡಿನಲ್ಲೇ ಸಿಕ್ಕಿದರು.ನನ್ನ ಓದಿನ ಗೀಳು ಹೇಳಿ ಓಡಿ ಬಂದದ್ದನ್ನು ಹೇಳ್ಬಿಟ್ಟೆ.ಆಕೆ 'ಎಲ್ಲಾ ಒಳ್ಳೇದಕ್ಕೆ ಬಿಡು. ಸದ್ಯದಲ್ಲಿ ನಮ್ಮ ಮನೇಲಿರು ನೋಡೋಣ' ಅಂತ ತಮ್ಮ ಮನೇಗೆ ಕರ್ಕೊಂಡು ಹೋದ್ರು. ಯಾಕೋ ಏನೋ ಒಂದಾರು ತಿಂಗಳಾದ್ರೂ ಆಕೆ ನನ್ನ ಬೇರೆ ಎಲ್ಲಿಗೂ ಕಳಿಸೋ ಯೋಚ್ನೇನೆ ಮಾಡ್ಲಿಲ್ಲ. ನಂಗೆ ಅನುಮಾನ ಆಯ್ತು.ಆದ್ರೂ ಕಳೆಯುವಷ್ಟು ದಿನಕಳೀಲಿ. ಪಿ. ಯು. ಸಿ ನಾದ್ರೂ ಮುಗಿಸೋಣ ಎಂದು ಹಲ್ಲು ಕಚ್ಚಿ ಇದ್ದ ಕಾರಣ ಆಮೇಲೆ ತಿಳಿತು.ಆಕೆಯ ತಮ್ಮ ಒಬ್ಬ ಕಮಂಗಿ ಇದಾನೆ. ಗತಿಯಿಲ್ಲದ ನನ್ನನ್ನು ಅವನಿಗೆ ಕಟ್ಟಹುದು ಅನ್ನೋದು ಆಕೆಯ ಉಪಾಯ. ಆ ಕಮಂಗೀನ್ನ ನೋಡಿದ್ಮೇಲೆ, ವೈಧವ್ಯವಾದ್ರೂ ವಾಸಿ ಅನ್ನಿಸಿಬಿಡ್ತು. ಕೃತಘ್ನಳು ಅಂದ್ಕೊಂಡ್ರೂ ಚಿಂತಿಲ್ಲ ಅಂತ ಪರೀಕ್ಷೆ ಮುಗಿದ ಮಾರನೇ ದಿನವೇ ಹೇಳದೆ ಕೇಳದೆ ಈ ಊರಿಗೆ ಬಂದ್ಬಿಟ್ಟೆ. ಧೈರ್ಯವಾಗಿ ನನ್ನ ಹತ್ತಿರ ಇರೋ ಹಣ ಖರ್ಚು ಮಾಡಿ ಒಂದು ಹೆಣ್ಣು ಹುಡುಗಿಯರ ಹಾಸ್ಟೆಲ್ ಸೇರಿದೆ. ಆದ್ರೆ ಆ ಹಣ ಎಷ್ಟು ದಿನ ಬಂದೀತು? ಆಮೇಲೆ ಗತಿಯೇನು? ಅಂತ ತಲೆ ಮೇಲೆ ಕೈ ಹೊತ್ತು ಕುಳಿತಾಗ, ನಿಮ್ಮ ವಿಷಯ ಯಾರೋ ಹೇಳಿದ್ರು, ಅಳುಕುತ್ತಲೇ ನಿಮ್ಮಲ್ಲಿಗೆ ಬಂದೆ. ನಿಮ್ಮ ಉಡಿಗೆ ಬಿದ್ದ ಘಳಿಗೆ, ನನಗೆ ಶುಕ್ರದೆಶೆ ಆರಂಭವಾಯ್ತು" ಎಂದು ನಿಟ್ಟುಸಿರು ಬಿಟ್ಟಳು.

ಕುಳಿತಿದ್ದ ರಾಯರು, ಆಗ ಅಂಗಾತ ಮಲಗಿದ್ದವರು, ಪಕ್ಕಕ್ಕೆ ಹೊರಳಿ-"ಅಂತೂ, ದೇವರು

ನಿನ್ನನ್ನ, ಎಲ್ಲಿ ಸೇರಬೇಕಿತ್ತೋ ಅಲ್ಲೇ ತಂದುಹಾಕಿದಾನೆ. ಅವನ ಸಂಕಲ್ಪ ದೊಡ್ಡದು. ಅವನೇ ಮುರಿದಿದ್ದ ಬಾಳತಂತಿಗೆ ಅವನೇ ಬೆಸುಗೆ ಹಾಕಿದ" ಎಂದರು, ತೃಪ್ತಿಯಿಂದ. ಮತ್ತೂ ಅಂದರು"ಒಂದು ಸಲವಾದ್ರೂ ನಾನೇ ಆಗ್ಲಿ ನಾಗೂನೇ ಆಗ್ಲಿ ನಿನ್ನ ಪೂರ್ವದ ವಿಷಯ ಕೇಳದೇ ಹೋಗಿದ್ದು ನಮ್ಮದೇ ಮೌಢ್ಯ"

"ಹಾಸ್ಟೆಲ್‌ಗೆ ಸೇರಿಸ್ಕೊಳ್ಳೊವಾಗ ನಾವು ಯಾರನ್ನ ತಾನೇ ಆ ವಿಷಯ ಕೇಳ್ತೀವಿ, ಹೇಳಿ"ಎಂದರು ನಾಮ್ಮ. ನಿಂತು ಕತೆ ಕೇಳುತ್ತಿದ್ದ ವೇಣು, ಹೊಸ್ತಿಲ ಮೇಲೆ ಕುಳಿತುಬಿಟ್ಟಿದ್ದ.ಅವನ ಮುಖ ಕಮಲವೂ ಒಂದು ವಿಧವಾದ ಸಮಾಧಾನ, ಸಂತೋಷ, ತೃಪ್ತಿಗಳಿಂದ ತುಂಬಿತ್ತು 'ಇನ್ನೇನು ಬಿಡು, ಎಲ್ಲಾ ಸರಿಹೋತು'ಎಂಬ ಭಾವನೆಯಿಂದ ಸುಮಳ ಕಡೆಗೆ ನೋಡಿದ ಅವನಿಗೂ ಅದೇ ಅಚ್ಚರಿ, ಸುಮ ಸ್ವಲ್ಪ ವಾದರೂ ಬಾಲ್ಯದ ಪುಟ್ಟಿಯನ್ನು ಹೋಲುತ್ತಿಲ್ಲವಲ್ಲಾ ಎಂದು.

ಹಠಾತ್ತನೆ ಸುಮ, ಕುಳಿತಿದ್ದಂತೆಯೇ ಹಿಂದೆ ತಿರುಗಿ, ಮಲಗಿದ್ದ ನಾಗಮ್ಮನವರ ಎದೆಯಲ್ಲಿ ಮುಖ ಹುದುಗಿಸಿ ಹುಚ್ಚಳಂತೆ-"ಅಮ್ಮಾ, ಹೀಗೆಲ್ಲಾ ಯಾಕಾಯ್ತಮ್ಮ? ಏನೇ ಆಗ್ಲಿ ಇನ್ನು ನನ್ನನ್ನು ಎಲ್ಲಿಗೂ ಕಳಿಸ್ಬೇಡಿ ಒಂದ್ವೇಳೆ ನಾನು ನಿಮ್ಮಸೊಸೆ ಆಗೋದು ಬೇಡ ಅನಿಸಿದ್ರೆ, ನಿಮ್ಮ ಮನೆಯಲ್ಲಿ ಇಷ್ಟು ದಿನ ಇದ್ದ ಹಾಗೆ ನಿಮಗೆ ಸಹಾಯ ಮಾಡಿಕೊಂಡಾದ್ರೂ ಇದ್ದುಬಿಡ್ತೀನಿ. ನನ್ನನ್ನು ಅನಾಥಳಾಗಿರೋ ಹಾಗೆ ಮಾಡ್ಬೇಡೀಮ್ಮ"ಎಂದು ಅಳತೊಡಗಿದಾಗ,

ರಾಯರು, ವೇಣು ತಕ್ಷಣವೇ ಎದ್ದರು. ಎದ್ದು ಹತ್ತಿರ ಬಂದರು.

"ಸುಮಾ ಇದೇನಿದು?ನಿನಗೆ ಯಾಕೆ ಹಾಗನ್ನಿಸ್ತು?"ಎಂದ ವೇಣು ಗಾಬರಿಯಾಗಿ

ರಾಯರು,-" ನೀನು ಸೊಸೆ ಆಗೋದು ಬೇಡ ಅಂತ ಅನ್ನೋಕೆ ನಾವ್ಯಾರಮ್ಮ? ಈ ಮನೇಗೆ ನೀನು ಸೊಸೇಂತ ದೈವ ಎಂದೋ ನಿರ್ಧರಿಸಿದೆ. ಏಳು, ಏಳು. ಹಾಗೆಲ್ಲಾ ಅಳಬಾರ್ದು"ಎಂದರು

ಆದರೂ ಸುಮಳ ಅಳು ನಿಲ್ಲಲಿಲ್ಲ. ಗಂಡಸರಿಬ್ಬರಿಗೂ ದಿಕ್ಕೇ ತೋಚಲಿಲ್ಲ. ನಾಗಮ್ಮ ಅವಳನ್ನು ಕೈಗಳಿಂದ ಬಳಸಿ ಹಿಡಿದವರು-"ನೀವಿಬ್ರೂ ಒಂದ್ನಿಮಿಷ ಹೊರಗಡೆ ಹೋಗಿ" ಎಂದು ಅವರನ್ನು ಹೊರಗಡೆ ಕಳಿಸಿದರು. ಅವರು ತಟಪಟಾಯಿಸುತ್ತಾ ಬಾಗಿಲಲ್ಲೇ ನಿಂತರು

"ಅತ್ತುಬಿಡು ಪುಟ್ಟಿ, ಈ ಹನ್ನೆರಡು ವರ್ಷದ ದುಃಖವನ್ನೂ ಈವತ್ತು ಮುಗಿಸ್ಬಿಡು, ನಾಳೆಯಿಂದ ಈ ಮನೆ ಸೊಸೆ ನಗ್ತಾನಗ್ತಾ ಇರ್ಬೇಕು" ಎಂದು ತಲೆ ಸವರಿದರು,ಬೆನ್ನು ನೇವರಿಸಿದರು.

ಅವಳು ಅತ್ತು ಸ್ವಲ್ಪ ಸಮಾಧಾನವಾದ ಮೇಲೆ-"ನೀನೆಂಥ ಅನಾಥಳು ಸುಮ ಇನ್ಮೇಲೆ? ಪ್ರಸಿದ್ಧ ಅನಂತರಾಯರ ಮಗ ಡಾ||ವೇಣುಮಾಧವನ ಹೆಂಡತಿ"ಎಂದರು ಮೆಲುನಗುತ್ತಾ.

"ನಾಗಮ್ಮನವರಿಗೆ . . .........?"ಎಂದಳು ಪಿಸುಮಾತಿನಲ್ಲಿ.

"ನೆಚ್ಚಿನ ಸೊಸೆ"ಎಂದು ಇನ್ನೂ ಹತ್ತಿರವಾಗಿ ತಬ್ಬಿಕೊಂಡರು

ಅವರ ಮಾತುಗಳನ್ನು ಕೇಳುತ್ತಿದ್ದ ತಂದೆ-ಮಗ ಮುಖ ಮುಖ ನೋಡಿ ಕೊಂಡರು. ಸುಮಳ ದುಃಖದ ಅರ್ಥವಾಗಿತ್ತು ಅವರಿಗೆ. ತಮ್ಮಿಬ್ಬರ ಒಪ್ಪಿಗೆಯಲ್ಲಿ ಸ್ವೀಕಾರದಲ್ಲಿ, ಅವಳಿಗೆ ಸಂಶಯವಿರಲಿಲ್ಲ. ಅಮ್ಮನ ಮನಗೆಲ್ಲಬೇಕಿತ್ತು. ಆಕೆಯ ಆಶೀರ್ವಾದ ಬೇಕಿತ್ತು. ಈಗ ಅದು ಯಥೇಚ್ಛ ದೊರಕಿತ್ತು.

ನಾಗಮ್ಮನವರು ತಾವು ಎದ್ದು ಹೊರಗೆ ಬರುತ್ತಾ, ಬಾಗಿಲಲ್ಲಿ ನಿಂತಿದ್ದ ಮಾಧುವನ್ನು ಉದ್ದೇಶಿಸಿ, "ಇನ್ನು ನೀನುಂಟು, ನಿನ್ನ ಹೆಂಡತಿ ಉಂಟು"ಎಂದು ಚೇಷ್ಟೆಯಾಗಿ ಹೇಳಿ ರಾಯರೊಂದಿಗೆ ಹೊರಗಡೆ ಬಂದರು. ಆ ವೃದ್ಧ ದಂಪತಿಗಳಲ್ಲಿದ್ದ ಸಂತೃಪ್ತಿ ವರ್ಣನಾತೀತ. ವೇಣು ಮಂಚದ ಬಳಿ ಬಂದಾಗ, ಸುಮ ಜೋರಲು ಮಲಗಿ ಕೈಗಳಿಂದ ಮುಖ ಮುಚ್ಚಿದಳು. ಅವನಿಗೆ ಏನು ಮಾಡಲೂ ತೋಚಲಿಲ್ಲ. ಹ್ಗುರವಾಗಿ ಮಾತನಾಡಿ ವಾತಾವರಣ ಹಗುರಗೊಳಿಸುವುದೇ ಸರಿಯೆಂದು ತರ್ಕಿಸಿದ ವೇಣು, ಸ್ವಲ್ಪ ಗಟ್ಟಿಯಾಗಿಯೇ ತನಗೇ ಹೇಳಿಕೊಳ್ಳುವಂತೆ-

"ಅಮ್ಮ ಏನೋ ಅಳು ಮುಗೀತು ಅಂದಹಾಗಿತ್ತು. ಇನ್ನೂ ಮುಗಿದಿಲ್ಲ" ಎಂದುಕೊಂಡ

"ನಾನೇನೂ ಅಳ್ತಿಲ್ಲ" ಎಂದು ಕುಳಿತಳು ಸುಮ.

"ನಾನಳ್ತಾ ಇದೀನಿ ಹಾಗಾದ್ರೆ" ಎನ್ನುತ್ತಾ "ನನ್ನನ್ನ ಹೊರಗಡೆ ಕಳಿಸಿ ಅಮ್ಮನ ಹತ್ರ ಏನು ಗುಟ್ಟು ಮಾತಾಡ್ದೆ? ಎಂದು ಮಂಚದ ಅಂಚಿನಲ್ಲಿ ಕುಳಿತ.

"ನಿಮ್ಮ ಮಗ ತುಂಬಾ ಕೆಟ್ಟವರು,ನನಗೆ ಬೇಡ"-ಅಂದೆ.

"ಓಹೋ, ಅಮ್ಮ ಏನೂಂದ್ರೋ ಅದಕ್ಕೆ?"

"ಎಲ್ಲಾದ್ರೂ ಉಂಟೆ? ಅವನು ಬೇಕಿರಲಿ, ಬೇಡದಿರಲಿ, ನೀನು ನನ್ನ ಸೊಸೆ ಅಂದ್ರು."

"ಅಂತೂ ತೃಪ್ತಿ ಆಯ್ತಲ್ಲಪ್ಪಾ ಅಮ್ಮ ಒಪ್ಪಬೇಕು, ನನ್ನನ್ನು ಸೊಸೆ ಅನ್ಬೇಕು ಅಂತ ಒಂದೇ ಹಾಡು ಹಾಡ್ತಿದ್ಯಲ್ಲಾ, 'ಸೊಸೆ' ಅಂತ ಅಂದ್ರಾ ಅಮ್ಮ?"

"ನನಗೀಗ ಎಷ್ಟು ಸಂತೋಷ ಆಗ್ತಿದೆ ಗೊತ್ತಾ?"

"ಗೊತ್ತಿಲ್ಲ. ಎಷ್ಟು?"ಎಂದ, ಕುತೋದ್ಯವಾಗಿ. ಅವನ ಕಣ್ಣಲ್ಲಿ ನಗೆ ಮಿಂಚಿತ್ತು.

ಅವನಿಗೆ ಅಂಟದಂತೆ ಹಿಂದುಗಡೆ ಕುಳಿತಿದ್ದ ಅವಳು ಎರಡೂ ಕೈ ಚಾಚಿ ಅವನನ್ನು ಕಟ್ಟಿ ಹತ್ತಿರವಾಗಿ ಒತ್ತಿಕೊಳ್ಳುತ್ತಾ, "ಇಷ್ಟು" ಎಂದಳು. ಅವನುಹಾಗೆಯೇ ಹಿಂದಕ್ಕೆ ಬಾಗಿ, ಅವಳನ್ನು ತನ್ನ ಮಡಿಲೊಳಕ್ಕೆಳೆದುಕೊಂಡು ಬಲವಾಗಿ ಆಲಂಗಿಸಿ ಕೊಳ್ಳುತ್ತಾ, "ನಿನಗಾಗ್ತಿರೋ ಸಂತೋಷದ ಹತ್ತರಷ್ಟು ನೂರರಷ್ಟು ಆನಂದ ನನಗಾಗ್ತಿದೆ ಸುಮ. ನನ್ನಲ್ಲಿ ಉಳಿವತ್ತಿರೋ ಈ ಉಸಿರು, ಈ ಜೀವ ನಿನ್ನದು"ಎಂದು ಪಿಸುಗುಟ್ಟಿ ಅವಳು ಮುಂದೆ ಮಾತಾಡದಂತೆ ತುಟಿಯೊತ್ತಿದ.



ಯಾವ ಹೆಣ್ಣನ್ನು ನೋಡಿದರೂ ಸ್ಪಂದಿಸದ ವೇಣುಮಾಧವ್
ಮದುವೆ ಎಂಬ ಶಬ್ದಕ್ಕೇ ಬೆಚ್ಚಿ ಬೀಳುವ ಸುಮ
ಇವರಿಬ್ಬರ ನಡುವೆ ಪ್ರೇಮದೇವತೆಗಳ ಹುಡುಗಾಟದಿಂದ
ಪ್ರೀತಿ ಉತ್ಪನ್ನವಾಯಿತು.
ಆದರೆ ವಿಧಾತನ ಲಿಖಿತ ಬೇರೇನೋ ಇತ್ತು.
ಅವರಿಬ್ಬರ ದಾಳತಂತಿಗೆ ಬೆಸುಗೆ ಹಾಕಲ್ಪಟ್ಟಿತೆ?
ಸುರಮ್ಯ ಶೈಲಿ ಸರಸ ಸಂಭಾಷಣೆ ಕುತೂಹಲ ಜನಕ ಕಥನದೊಂದಿಗೆ ಓದುಗರಲ್ಲಿ
ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಖ್ಯಾತ ಲೇಖಕಿ

**ಅಶ್ವಿನಿ**

**ಅವರ ಸುಂದರ ಕಾದಂಬರಿ**

# ಬೆಸುಗೆ


**ಸುರಭಿ ಪ್ರಕಾಶನ**

53, ಮೊದಲ ಮಹಡಿ, ನವೀನ್ ನಿಲಯ, 25ನೇ ಅಡ್ಡರಸ್ತೆ, 6ನೇ ಬ್ಲಾಕ್
ಜಯನಗರ, ಬೆಂಗಳೂರು - 560 082

ಆರ್ಥಿಕ ಸಹಕಾರ ಸಿಂಡಿಕೇಟ್ ಬ್ಯಾಂಕ್, ಜಯನಗರ, ಬೆಂಗಳೂರು - 11